ತದನಂತರ—ಭಾರತದ ರಾಷ್ಟ್ರ ಸಂಸ್ಥೆಯನ್ನು ನಿರ್ಮಿಸಿದ ಕಾಂಗ್ರೆಸ್ಸನ್ನು ಅದ್ಯತನವಾದ ರಾಜಕೀಯ ಸಂಸ್ಥೆಯನ್ನು ಸ್ಥಾಪಿಸಿಕೊಂಡಿರುವುದೆಂದೂ, ಭಾರತದಲ್ಲಿ ಕಾಂಗ್ರೆಸ್ಸು ಹೊಂದಿರುವ ದಕ್ಷತೆಯಿಂದ ಕೆಲಸಮಾಡುವ ಸಂಸ್ಥೆಯೆಂದೂ, ಅವರು ಹೆಮ್ಮೆಪಡುವುದು ಸ್ವಾಭಾವಿಕವೆಂದೂ, ಅವರಲ್ಲಿ ಯ ಭಾವನೆಯುಂಟಾಗಿ ಅಖಿಲ ಭಾರತವೆಲ್ಲ ಒಗ್ಗುವುದಕ್ಕೆ ಅದು ಪ್ರಯತ್ನಪಟ್ಟಿದೆಯೆಂದೂ, ಕಾಂಗ್ರೆಸ್ಸು ಈ ಪ್ರಯತ್ನದಲ್ಲಿ ಜಯಗಳಿಸಿ, ಭಾರತದ ಪ್ರಮುಖ ಪ್ರಶ್ನೆಗಳೆಲ್ಲವುಗಳ ಪರವಾಗಿ ಮಾತ ನಡೆಸುವ ಶಕ್ತಿಯನ್ನು ಸಂಪಾದಿಸಿಕೊಂಡಿದ್ದರೆ, ಅವರ ಮಾತುಗಳು ಎಷ್ಟು ದೂರ ಮುಂದುವರಿದಿದ್ದರೂ ಸಮಸ್ಯೆಯೇ ಬೇರೆಯಾಗಿರುತ್ತಿತ್ತೆಂದೂ, ವಿಚಾರಗಳಲ್ಲಿ ಆ ಸಮಸ್ಯೆಯು ಬಹಳ ಸುಲಭ ರೀತಿಗೆ ಹರಿಯುತ್ತಿತ್ತೆಂದೂ, ಭಾರತದ ಪರವಾಗಿ ಮಾತನಾಡುವುದಕ್ಕೆ ಹಕ್ಕಿಲ್ಲವೆಂದು ಭಾರತೀಯ ಜೀವನದ ಇತರ ಪ್ರತಿನಿಧಿಗಳು ಪ್ರತಿಪಾದಿಸುವುದಾಗಿ ಹೆಮ್ಮೆಯೆಂದೂ, ತಾವು ಸಂಖ್ಯೆಯಲ್ಲಿ ಮಾತ್ರ ಅಲ್ಪ ಸಂಖ್ಯಾತರೆಂದು ಹೇಳಿಕೊಳ್ಳದೆ ರಾಜ್ಯಾಂಗ ನೃವಸ್ಥೆಯನ್ನು ರೂಪುಗೊಳಿಸುವ ಹಕ್ಕುಳ್ಳವರೆಂದು ಸಹ ಈ ಗುಂಪಿನವರು ಹೇಳಿಕೊಳ್ಳುತ್ತಿದ್ದಾರೆಂದೂ, ಇವರಲ್ಲಿ ಪ್ರಮುಖರೆನಿಸಿದವರು ಮುಸಲ್ಮಾನರೆಂದೂ, ಭಾರತದ ವಾಯುವ್ಯದಿಕ್ಕಿನಲ್ಲಿಯೂ ಈಶಾನ್ಯದಿಕ್ಕಿನಲ್ಲಿಯೂ ಇವರು ಬಹಳವಾಗಿದ್ದಾರೆಂದೂ, ಭೌಗೋಳಿಕವಾದ ಇತರ ಭಾಗಗಳಲ್ಲಿಯೂ ಸಹ ವಿಶೇಷವಾಗಿದ್ದಾರೆಂದೂ, ಇನ್ನು ಕೆಲವು ವರ್ಗದವರೂ ಕೂಡ ಕಾಂಗ್ರೆಸ್ ಪ್ರಾತಿನಿಧ್ಯವನ್ನು ವಿರುವ ಹಿಂದುಗಳು ಗುಂಪಿಗೆ ಸೇರಿಕೊಳ್ಳದೆ ದೂರ ವಾಗಿದ್ದೇ ಇದ್ದಾರೆಂದೂ, ದೇಶೀಯ ಸಂಸ್ಥಾನಗಳ ನರೇಂದ್ರರು ಕೂಡ ಪ್ರತ್ಯೇಕವಾಗಿದ್ದಾರೆಂದೂ, ಅವರೆ ಒಂದು ವಿಚಾರದಲ್ಲಿ ಏಕಮತ್ಯವಿದೆಯೆಂದೂ ಹೇಳಿದರು. ಸಂಗ್ರಾಮವು ಆರಂಭವಾದ ಮೇಲೆ ಒಂದು ವಿಚಾರದಲ್ಲಿ ಎಲ್ಲ ಪಕ್ಷಗಳವರೂ ಕೋಮಿನವರೂ ಏಕ ಮತ್ಯದಿಂದ ಕೂಡಿದವರಾಗಿದ್ದಾರೆ ಈ ಸಂದರ್ಭವನ್ನು ನೋಡಿಕೊಂಡೇ ನೈ ಸರಾಯರು ಮುಂದೆ ಬಂದು, ಭಾರತದ ಸಂಗಾಮ ಪ್ರಯತ್ನದಲ್ಲಿ ಎಲ್ಲ ಪಕ್ಷಗಳವರ ಬೆಂಬಲವನ್ನು ಪಡೆಯಲು ಯತ್ನಿಸಿದರು. ಬ್ರಿಟಿಷ್ ಸರಕಾರವು, ಪಾರ್ಲಿಮೆಂಟ್ ಸಭೆಯು ಭಾರತದ ರಾಜಕೀಯ ಧ್ಯೇಯದ ವಿಚಾರದಲ್ಲಿ ಯಾವುದನ್ನು ಅಂಗೀಕರಿಸಲಾಗಿದೆಯೆಂದು ವೈಸರಾಯರು ಹೇಳಿರುವರೋ ಆ ಧ್ಯೇಯ ವನ್ನಿಸಿದ " ಬ್ರಿಟಿಷ್ ಕಾಮನ್ವೆಲ್ತ್‌ನಲ್ಲಿ ಸ್ವತಂತ್ರವೂ ಸಮಾನವೂ ಆದ ' ಪಾರ್ಟ್‌ನರ್ ಷಿಪ್ ' ಶೀಘ್ರ ವಾಗಿ ಲಭಿಸಿಕೊಡುವ ಉದ್ದೇಶದಿಂದ ಈಗಿರುವ ಬಿಕ್ಕಟ್ಟಿನ ಪರಿಸ್ಥಿತಿಯನ್ನು ಹೋಗಲಾಡಿಸಲು ವೈಸರಾಯರು ಪ್ರಯತ್ನಿಸಿದರು. " ಎಂಬುದಾಗಿ ಸೂಚಿಸಿದರು.

ತಮ್ಮ ಭಾಷಣವನ್ನು ಮುಂದುವರಿಸುತ್ತ ' ಈ ಉದ್ದೇಶದಿಂದ ವೈಸರಾಯರು ಹಲವು ಸಲಹೆಗಳನ್ನು ಮುಂದಿಟ್ಟರು. ತಮ್ಮ ಮಂತ್ರಾಲೋಚನಾ ಸಭೆಯನ್ನು ವಿಸ್ತರಿಸುವುದಾಗಿಯೂ ಭಾರತದ ಪ್ರಮುಖ ರಾಜಕೀಯ ಪಕ್ಷಗಳ ನಾಯಕರುಗಳಿಗೆ ಆ ಮಂತ್ರಾಲೋಚನಾ ಸಭೆಯಲ್ಲಿ ಸ್ಥಳ ಕೊಡುವುದಾಗಿಯೂ. ಭಾರತದ ಜೀವನದ ನಾನಾಮತದವರಲ್ಲೂ ಒಳಗೊಂಡ ಒಂದು ಸಂಗ್ರಾಮ ಸಮಿತಿಯನ್ನು ರಚಿಸುವುದಾಗಿಯೂ ವೈಸರಾಯರು ಸಲಹೆ ಮಾಡಿದರು ಈ ಸಲಹೆಗಳನ್ನು ಭಾರತದ ನಾಯಕರು ಅಂಗೀಕರಿಸಿದರೆ, ತಮ್ಮ ತಮ್ಮ ರಾಜಕೀಯ ಪಕ್ಷಗಳ ಧ್ಯೇಯಗಳಿಗೆ ಚ್ಯುತಿ ಬರದಂತೆ ಪರಿಸಿ ಸಂಗ್ರಾಮ ಪ್ರಯತ್ನಗಳಲ್ಲಿ ಅವರು ಭಾಗವಹಿಸುವುದಕ್ಕೆ ಅನುಕೂಲವಾದಂತಾಗುವುದಲ್ಲದೆ, ಇಂಡಿಯಾ ಸರ್ಕಾರದ ಆಡಳಿತದಲ್ಲಿ ಭಾಗವಹಿಸಿದಂತಾಗುವುದು. ಇಂದಿನ ಪರಿಸ್ಥಿತಿಯಲ್ಲಿ ಭಾರತಕ್ಕೆ ಹಿತವಾದ ರೀತಿಯಲ್ಲಿ ಒಟ್ಟಿಗೆ ಕೆಲಸ ಮಾಡುವುದಕ್ಕೆ ಒಂದು ಸಮಿತಿ ಇದ್ದ ಹಾಗಾಗುವುದು. ಕಾಂಗ್ರೆಸ್ಸು ಅಶ್ಯಪ್ತಿಯನ್ನು ವ್ಯಕ್ತಪಡಿಸಿದರೂ ಈ ಸಲಹೆಯನ್ನು ಅಂಗೀಕರಿಸಿ ಕೆಲಸ ಮಾಡಲಾಗುವುದೆಂದು ನಂಬಿಸ್ವೆನೆ ಒಂದುವೇಳೆ ಕಾಂಗ್ರೆಸ್ಸು ಸಹಕರಿಸಲು ನಿರಾಕರಿಸದರೆ, ಲಾರ್ಡ್ ಲಿನ್‌ಲಿತ್‌ಗೋರನು ಮುಂದೆ ಹೋಗಿ, ತಮ್ಮೊಡನೆ ಸಹಕರಿಸುವ ವರನ್ನು ಸೇರಿಸಿಕೊಂಡು ಕೆಲಸ ನಡೆಯಿಸುವುದಕ್ಕೆ ಸಿದ್ಧರಾಗಿದ್ದಾರು " ಎಂಬುದಾಗಿ ಸೂಚಿಸಿದರು

" ವೈಸರಾಯರ ಸಲಹೆಯಂತೆ ಭಾರತವು ಡೊಮಿನಿಯನ್ ಸ್ಟೇಟ್ಸ್ ಸ್ಥಾನವನ್ನು ಬೇಗನೆ ಪಡೆಯುವುದಕ್ಕೆ ಅನುಕೂಲವಾಗಿದೆ ಈಗ ಆಸೇಕಸ್ಯತಕ್ರಕ್ರಾಪ್ಯಗಳಿಗೆ ತಮಗಿಷ್ಟ ಬಂದ ರೀತಿಯಲ್ಲಿ ಜೀವಿಸುವುದಕ್ಕೆ ಅವಕಾಶವಿಲ್ಲದಂತಾಗಿದೆ. ಅವುಗಳ ಆಕ್ರಮಕ್ಕೆ ಬಲಯುತ ರಾಜ್ಯಗಳ ಭೀತಿ ಅವುಗಳಿಗಿದೆ ಆದರೆ ಬ್ರಿಟಿಷ್ ಕಾಮನ್‌ವೆಲ್ತ್‌ನ ಅಧ್ಯಯವಲ್ಲಿರುವ ನಾವು, ಭದ್ರತೆಯನ್ನೂ, ಅಭಿವೃದ್ಧಿಯನ್ನೂ, ಸ್ನೇಹ ಬಾಂಧವ್ಯವನ್ನೂ ಪಡೆದವರಾಗಿರುತ್ತೇವೆ ಪರಸ್ಪರವಾಗಿ ಸಮಾನತೆಯಿಂದ ವರ್ತಿಸಿ ಜಗತ್ತಿನ ದೇಶಗಳಲ್ಲಿ ಗಣ್ಯಸ್ಥಾನವನ್ನೂ ಗೌರವವನ್ನೂ ಪಡೆದವರಾಗಿರುತ್ತೇವೆ. ಭಾರತಕ್ಕೆ ನಾವು ಕೊಡ ಬೇಕೆಂದಿರುವ ' ಸ್ಟೇಟ್ಸ್ ' ಗಿಂತ ಉತ್ತಮವಾದ ಸ್ಟೇಟ್ಸ್ ಇನ್ನೊಂದಿಲ್ಲ. ಪ್ರತಿಯೊಂದು ಡೊಮಿನಿಯನ್ ರಾಜ್ಯಾಂಗ ವ್ಯವಸ್ಥೆಗಿಂತಲೂ ಭಾರತದ ಡೊಮಿನಿಯನ್ ರಾಜ್ಯಾಂಗ ವ್ಯವಸ್ಥೆಯು ಭಿನ್ನವಾಗಿಲ್ಲ. ಪ್ರತಿಯೊಂದು ' ಡೊಮಿನಿಯನ್ ' ದೇಶದಲ್ಲಿಯೂ ಮೊದಲು ಅಲ್ಲಿರುವ ನಾನಾ ಜನಾಂಗಗಳವರಿಗೆ ಒಪ್ಪಂದವಾಗಿರುವುದು. ಉದಾಹರಣೆಗೆ ಕೆನಡಾದಲ್ಲಿ ಬ್ರಿಟಿಷರಿಗೂ ಫ್ರೆಂಚರಿಗೂ ಒಪ್ಪಂದವಾಗಿತ್ತು. ದಕ್ಷಿಣ ಆಫ್ರಿಕೆಯಲ್ಲಿ ಬ್ರಿಟಿಷರಿಗೂ ಬೋಯರ್‌ರವರಿಗೂ ಒಪ್ಪಂದವಾಗಿತ್ತು. ಸಹೋದರ ಭಾವದಿಂದ ಕೂಡಿದ ಪ್ರಜೆಗಳನ್ನು ಬ್ರಿಟಿಷ್ ಕಾಮನ್‌ವೆಲ್ತ್‌ನಲ್ಲಿ ಭಾರತವು ಸ್ವತಂತ್ರವೂ ಸಮಾನವೂ ಆದ ಭಿನ್ನತೆ ಗೌರವಗಳನ್ನು ಪಡೆದು ಸೇರಿಕೊಳ್ಳುವ ದಿನವೇ ಬ್ರಿಟನ್ನಿನ ತಿಹಾಸದಲ್ಲಿ ಬಹಳ ಹೆಮ್ಮೆಪಡುವ ದಿನ" ಎಂಬುದಾಗಿ ನುಡಿದರು.

೩೫೦ ಮಿಲ್ಲೆಗಳಿಗೆ ೧೪,೦೦೦ ಆರ್ಜಿ

— —

ಭಾರತೀಯ ನೈಮಾನಿಕ ದಳವನ್ನು ಹೆಚ್ಚಿಸಬೇಕೆಂಬ ಆಲೋಚನೆಯೆದೆಯಷ್ಟೆ. ಅದಕ್ಕಾಗಿ ಬೇಕಾಗಿರುವ 350 ಸ್ಕ್ವಾನಗಳಿಗೆ ಸುಮಾರು 18,000 ಭಾರತೀಯ ಉಮೇದುವಾರರು ಆರ್ಜಿಹಾಕಿಕೊಂಡಿದ್ದಾರಂತೆ! ಇದರಿಂದ ಭಾರತೀಯರಲ್ಲಿ ಯುದ್ಧೋತ್ಸಾಹವ್ಯಕ್ತವಾಗಿದೆ.

ಗೃಹಸ್ಥನ ಬ್ರಹ್ಮಚರ್ಯ.

ಅನುವಾದಕರು—ಶ್ರೀ ಗಂಗಾಧರತಿರ್ಥಾಚಾರ್ಯರು,
ಮಹಾಂತನಮಠ, ಬೆಂಗಳೂರುಸಿಟಿ.

ಹಿಂದೂ ಮತವು ಧರ್ಮಪ್ರಧಾನವಾದ ಮತವಾಗಿದೆ. ಇದರ ಪ್ರತ್ಯೇಕ ಕೃತ್ಯಗಳಲ್ಲಿಯೂ ಧರ್ಮವು ಸಂಬದ್ಧವಾಗಿದೆ ಹಿಂದೂಪರಿವಾರ, ಹುಟ್ಟಿದಂದಿನಿಂದ ಸಾಯುವವರೆಗೆ ತನ್ನ ಎಲ್ಲ ಕರ್ಮಗಳನ್ನೂ ಧರ್ಮದ ದೃಷ್ಟಿಯಿಂದಲೇ ಮಾಡುತ್ತಿರುವುದು ದಯಾ, ಕ್ಷಮಾ ಮೊದಲಾದ ಧರ್ಮಗಳು ಸರ್ವರಿಗೂ ಸಮಾನಗೆಗಳಾಗಿದ್ದರೂ ವಿಶೇಷ ಅಧಿಕಾರಿಗಳಿಗೆ ವರ್ಣಾಶ್ರಮ ವ್ಯವಸ್ಥೆಯು ಬೇರೆ ಬೇರೆಯಾಗಿಯೇ ಇರುವದು ಸರ್ವರೂ ಒಂದೇ ಬಗೆಯ ಕರ್ಮವನ್ನು ಮಾಡಲಾರದು ಮತ್ತು ಎಲ್ಲರಿಗೂ ಒಂದೇಬಗೆಯ ನಿಯಮವು ಉಪಯುಕ್ತವೂ ಆಗಲಾರದು. ಈ ಕಾರಣದ ದೆಸೆಯಿಂದಲೇ ವರ್ಣಾಶ್ರಮಗಳ ವ್ಯವಸ್ಥೆಯು ಮಾಡಲ್ಪಟ್ಟಿರುವುದು ಸ್ವಕೈಕ ಸೃಷ್ಟಿಯೂ ತನಗೆ ಯೋಗ್ಯವಾದ ಆಶ್ರಯದಲ್ಲಿದ್ದು ತನ್ನ ಅಧಿಕಾರಾನುಸಾರವಾಗಿ ಧರ್ಮವನ್ನು ಆಚರಿಸಲೇ ಬೇಕು ತನ್ನ ಅಧಿಕಾರಕ್ಕೆ ಪ್ರತಿಕೂಲವಾದ ಧರ್ಮವನ್ನು ಆಚರಿಸುವ ವನು ಪತಿತನಾಗುವನು ಏಕೆಂದರೆ—ಯಾವ ವ್ಯಕ್ತಿಗೆ ಯಾವ ಕರ್ತವ್ಯವು ವರ್ಣರೂಪವಾಗಿ ವಿಧಿಸಲ್ಪಟ್ಟಿದೆಯೋ ಅದು ಇನ್ನೊಬ್ಬನಿಗೆ ಅವರ್ಮವಾಗಿ ಪರಿಣಮಿಸಿ ಹಾಗೂ ಒಬ್ಬನ ಅಧರ್ಮವು ಮತ್ತೊಬ್ಬನಿಗೆ ಧರ್ಮವೂ ಆಗಬಹುದು. ಶಾಸ್ತ್ರಗಳಲ್ಲಿ ಇನ್ನೆಲ್ಲವುಗಳ ಸ್ವಭಾವದ ವಿವರಣವುಂಟು. ಪರಸ್ಪರ ವಿರುದ್ಧವಾಗಿ ತೋರಿದ ಶಾಸ್ತ್ರಗಳೆಲ್ಲವೂ ಅಧಿಕಾರಭೇದದಿಂದ ವಿಕಲ್ಪವಾಕ್ಯತೆಯನ್ನು ಹೊಂದುವವು. ಅಧಿಕಾರ ತಾರತಮ್ಯವನ್ನು ಬಿಟ್ಟರೆ ಶಾಸ್ತ್ರವಾಕ್ಯಗಳ ಸಾಮಂಜಸ್ಯವಾಗುವದು ಕಠಿನ ಸಾಧ್ಯವಾಗುವುದು ಈ ಬಗ್ಗೆ ಬ್ರಹ್ಮಚರ್ಯದ ಉದಾಹರಣವನ್ನು ತೆಗೆದುಕೊಳ್ಳುವಾ—

ಪ್ರತ್ಯೇಕ ಆಶ್ರಮದಲ್ಲಿಯೂ ಬ್ರಹ್ಮಚರ್ಯದ ಸ್ವರೂಪ ನಿರ್ಣಯವು ಬೇರೆ ಬೇರೆಯಾಗಿ ತೋರಿಬರುತ್ತಿದೆ. ಬ್ರಹ್ಮಚಾರಿ, ಗೃಹಸ್ಥರಿಬ್ಬರೂ ಬ್ರಹ್ಮಚರ್ಯವನ್ನು ಪಾಲಿಸಲರ್ಹರಾಗಿದ್ದಾರೆಂದು. ಆದರೆ ತಪಸಿಬ್ಬರ ಬ್ರಹ್ಮಚರ್ಯದಲ್ಲಿಯೂ ಭೇದವುಂಟು ಗೃಹಸ್ಥನು ಬ್ರಹ್ಮಚಾರಿಯಂತೆ ಗುರುಕುಲವಾಸವನ್ನು ಮಾಡುವನೆಂಬ ಮಾತು ಅಸಂಭವನೀಯವಾಗಿಯೇ ತೋರುತ್ತದೆ. ಆದರೆ ಶಾಸ್ತ್ರದಲ್ಲಿ ಗೃಹಸ್ಥಾಶ್ರಮಿಯು ಬ್ರಹ್ಮಚಾರಿಗಿಂತಲೂ ಮುಂದಿನವನೆಂಬ ವಿಷಯಪ್ರತಿಪಾದನೆ ವುಟು. ಸ್ಮಾಂದಪುರಾಣಾಂತರ್ಗತ ಕಾಶೀಖಂಡದ ೧೦ ನೆಯ ಅಧ್ಯಾಯದಲ್ಲಿ—

ಬ್ರಹ್ಮಚರ್ಯಮಂ ಹಿ ಗಾರ್ಹಸ್ಥ್ಯೇ ಯಾವತ್ಕಲ್ಪಸಮೋಜ್ಜಿತಂ ।
ಸ್ವಧಾಹಪಿತರೇ ಚಕ್ತೇ ಶ್ವ ತಾದ್ಧಸ್ಯ ಹ್ಮಚಾರಿಣ ॥

ಪಕಾಶ್ಚಾ ಲೋಕಥಾಸ್ಯಾ ವಾ ಸ್ವರ್ಗಾವಾ ಬ್ರಹ್ಮಚರ್ಯಿಣಾ ।
ಸಂಕಲ್ಪಯತಿ ಚಿತ್ತೇ ಚೇತ್ ತೃತಮಸ್ಯಕ್ಷಯಂ ಪದಾ ॥

ಪರಪಾರಪರಿಶ್ಯಾಗಾತ್ ಸ್ವದಾರಪರಿತುಷ್ಟಿತಃ ।
ಋತುಕಾಲಾಭಿಗಾಮಿತ್ವಾತ್ ಬ್ರಹ್ಮಚಾರೀ ಗೃಹೀನತಃ ॥

ವೈಣಾಸ್ಯಾದ್ಪ್ಯಶಮುಪ್ಪಸ್ಯ ಗೃಹಧರ್ಮಾನ್ ಶ್ರಿತೋ ಸ್ಮರೇತ್ ।
ಸ ಭವೇದಿಷುಯುಕ್ತೋಕ್ತೋ ವಾನಪ್ರಸ್ಥೋ ಪಥಾ ಗೃಹೇ ॥

"ಗೃಹಸ್ಥಾಶ್ರಮದಲ್ಲಿ ಎಷ್ಟು ಸುಂದರವಾದ ಮತ್ತು ಶಕ್ತಿಶಾಲಿಯಾದ ಸ್ವಾಧಾವಿಕ ಬ್ರಹ್ಮಚರ್ಯಪಾಲನ ವಾಗುವುದೋ ಅದು ಸ್ವಧಾವಚಿಪಲಚಿತ್ತರಾದ ಬ್ರಹ್ಮ ಚಾರಿಗಳಲ್ಲಿ ವಿರಳವಾಗಿಯೇ ಕಂಡುಬರುತ್ತದೆ. ಬಲಾ ತ್ಕಾರವಾಗಿ ಅಥವಾ ಲೋಕಲಜ್ಜೆಯ ದೆಸೆಯಿಂದ ಇಲ್ಲಾಗೆ ಸ್ವಾಧರ್ಯಕ್ಕಾಗಿ ಬ್ರಹ್ಮಚಾರಿಯಾಗಿ ಅಂತರಂಗದಲ್ಲಿ ಸ್ತ್ರೀ ಸಂಗವನ್ನು ಬಯಸುತ್ತಿರುವವನ ಬ್ರಹ್ಮಚರ್ಯವು ವೈಫಲವಾದುದಿಷ್ಟೇ ಅಲ್ಲ, ಪಾಪಹೇತುವೂ ಆಗಿದೆ. ಪರಸ್ತ್ರೀಯರಪಕ್ಷ ಸ್ಮೃತ್ಯದಲ್ಲಿ ಸಹ ಸ್ಮರಿಸದೆ ಋತುಕಾಲದಲ್ಲಿ ಮಾತ್ರ ಸ್ವಕಳತ್ರೀಸಂಯೋಗಕರಯಾಚಿಸಿರುವ ಗೃಹಸ್ಥನೂ ಬ್ರಹ್ಮಚಾರಿಯೇ ಆಗುವನು. ಯಾವುದೋ ಒಂದು ಕಾರಣವಿಂದ ಆಕೆಯಿಂದ ವೈರಾಗ್ಯವನ್ನು ತಾಳಿ ಮನ ಸ್ಸಿನಲ್ಲಿ ಸ್ತ್ರೀಚಿಂತನೆಯನ್ನು ಮಾಡುವವನು ಉಭಯ ಭ್ರಷ್ಟನಾಗುವನು ಆರ್ಥಾತ್ ವಾನಪ್ರಸ್ಥನೂ ಅಲ್ಲ, ಗೃಹಸ್ಥನೂ ಅಲ್ಲ ಶಾಸ್ತ್ರೀಯವಾಗಿ ಗೃಹಸ್ಥಾಶ್ರಮವನ್ನು ಸಾಗಿಸುವವನಿಗೆ ಇಂತಹ ಪ್ರಸಂಗವು ಬರುವುದಿಲ್ಲ" ಎಂದು ಹೇಳಲ್ಪಟ್ಟಿದೆ ಇಲ್ಲಿ ನೋಡಿರಿ! ಬ್ರಹ್ಮಚಾರಿಗೆ ಸ್ತ್ರೀಸ್ಮರಣ, ಸಂಭಾಷಣಾದಿಗಳು ನಿಷಿದ್ಧಗಳಾದುದರಿಂದ ಆಥವಗಳಾಗಿ ವಿಧಿಸಲ್ಪಟ್ಟಿದ್ದರೂ ಗೃಹಸ್ಥಾಶ್ರಮದಲ್ಲಿ ಧರ್ಮಾನುಕೂಲ ಮರ್ಯಾದಿತನಾದ, ನಿಯಮಿತ ಸ್ತ್ರೀಸಹವಾಸವು ಬ್ರಹ್ಮಚರ್ಯವೆಂದೇ ಸ್ವೀಕರಿಸಲ್ಪಟ್ಟಿದೆ ಸಮಸ್ತ ಶಾಸ್ತ್ರಗಳೂ ಬ್ರಹ್ಮಚರ್ಯದ ಮಹಿಮೆಯನ್ನು ಮುಕ್ತಕಂಠದಿಂದ ಉದ್ಘೋಷಿಸಿರುವ ವಿಷಯ ದಲ್ಲಿ ಆಣ ಮಾತ್ರವೂ ಸಂಶಯವಿರುವುದಿಲ್ಲ ಶಾಸ್ತ್ರಗಳಿಲ್ಲವೂ ಅಧಿಕಾರಾನುಸಾರವಾಗಿ ಬ್ರಹ್ಮಚರ್ಯವನ್ನು ಪಾಲಿಸಲು ವಿಶೇಷವಾಗಿ ಪ್ರೇರಿಸುತ್ತಿವೆ. ಅತ್ಯಂತ ಕಾಮುಕನಿಗೂ ಈ ಜೀವನದಲ್ಲಿ ವಿಶೇಷ ವಿಧಾನಗಳಿಂದ ಉಂಟು. ಈ ಲೋಕದಲ್ಲಿ ಬ್ರಹ್ಮಚರ್ಯವನ್ನು ಪಾಲಿಸುವು ದರಿಂದ ಪರಲೋಕದಲ್ಲಿ ಸಂದಬಿಯರಿಂದ ಆಶ್ಲರೆಯರು ದೊರೆಯುವರೆಂಬುವಕ್ಕೆ (ಕಲ್ಪಾಂತ ಅಂಕೆ ೯) ಅಪ್ಸರೆಯರ ಪಾಪ್ತಿಗಾಗಿಯೇ ಬ್ರಹ್ಮಚರ್ಯವನ್ನು ಕಾಪಾಡ ಬೇಕೆಂಬುದೇ ಅರ್ಥವಲ್ಲ ಅತ್ಯಂತ ಕಾಮುಕರಾದವರು ಪಾರಲೌಕಿಕಕಾಮನಾಪ್ತಿಕಾಂಕ್ಷಿಗಳಲ್ಲಿ (ಅಪ್ಸರೆಯರ ಪ್ರಾಪ್ತಿ ಯಲ್ಲಿ) ನಿಶ್ಚಾಸವನ್ನಿಟ್ಟು ಬ್ರಹ್ಮಚರ್ಯವನ್ನು ಪಾಲಿಸು ವುದರಿಂದ ಅನಂಗೆ ಬ್ರಹ್ಮಚರ್ಯದ ಫಲವಾದ ಮಹಿ ಮೆಯು ತಿಳಿಯಬೇಕೆಂಬುದೇ ಆದರೆ ಶಾಸ್ತ್ರೀಯವಾದ ಅರ್ಥವು ಯಾವನಿಗೆ ಈ ಲೋಕದಲ್ಲಿ ಬ್ರಹ್ಮಚರ್ಯ ಪಾಲನದಿಂದಾಗುವ ಲಾಭವು ಎಂತಹುದೆಂದು ತಿಳಿದಿರು ವುದೋ ಅವನು ಪರಲೋಕದಲ್ಲಿಯೂ ಬ್ರಹ್ಮಚರ್ಯ ವನ್ನು ಹಾಳುಮಾಡಿಕೊಳ್ಳಲು ಬಯಸುವದೂ ಇಲ್ಲ, ಸಾಧನಮಾಡಿಕೊಳ್ಳುವದೂ ಇಲ್ಲ ಪರಲೋಕದಲ್ಲಿ ಸುಂದರಿಯರಾದ ಅಪ್ಸರೆಯರನ್ನು ಪಡೆಯುವುದೇ ಬ್ರಹ್ಮಚರ್ಯ ವಾಲನದ ಉದ್ದೇಶವೆಂದು ಶಾಸ್ತ್ರದ ಅಭಿಪ್ರಾಯವಲ್ಲ. ಇಲ್ಲಿ ಬ್ರಹ್ಮಚರ್ಯವನ್ನು ಪಾಲಿಸಿ ಪರಲೋಕದಲ್ಲಿಯ ಅಪ್ಸರೆಯರ ಸಹವಾಸ ಸಂಜಪಿತವಾದ ಕ್ಷಣಿಕಸುಖಕ್ಕಾಗಿ ಅದನ್ನು ಸೂರೆಮಾಡಬೇಕೆನ್ನುವುದೂ ಅಲ್ಲ. ಇದೇ ಲೋಕದಲ್ಲಿಯೇ ನಿಷ್ಕಲ್ಮಷವಾದ ಬ್ರಹ್ಮಚರ್ಯವನ್ನು ರಕ್ಷಿಸಿ ಸಮಸ್ತ ವಾಸನೆಗಳನ್ನು ನಿರ್ಮೂಲಗೊಳಿಸಬೇಕೆಂಬುದೇ ಅದರ ತಾತ್ಪರ್ಯವಾಗಿದೆ. "ಕರ್ಮಕ್ಕೆ ಫಲಾಧಿಕ್ಯವನ್ನು ಹೇಳುವದರ ತಾತ್ಪರ್ಯವು ವಿಧಿಕರ ಪುಷ್ಟಿಗಾಗಿಯಲ್ಲದೆ ಫಲಕ್ಕಲ್ಲ" ಎಂದು ಮೀಮಾಂಸಾ ಶಾಸ್ತ್ರವು ಹೇಳುತ್ತದೆ. (ಅಂದರೆ ಕರ್ಮಕ್ಕೆ ಫಲವಿಲ್ಲ ನೆಂದು ಯಾರೂ ತಿಳಿಯಬಾರದು) ಮತ್ತೇನೆಂದರೆ—ಶಾಸ್ತ್ರೀಯವಿಧಾನದಲ್ಲಿ ಸ್ವರ್ಗಸುಖವನ್ನೇ ಪರಂಧಾಮ (ಮೋಕ್ಷ) ವನ್ನಾಗಿ ತಿಳಿಯುವದೂ ಅಪ್ಸರಸ್ತ್ರೀವಿಹಾರ ವನ್ನೇ ಸುಖವನ್ನಾಗಿ ತಿಳಿಯುವದೂ ಆದ ಒಂಬು ಕರ್ಮಕಾಂಡಿಗರ ಗುಟ್ಟಿದ್ದಿತು. ಅಂತಹವರ ದೃಷ್ಟಿಯನ್ನು ಅನುಕರಿಸುವ ಪ್ರಸಂಗದಲ್ಲಿ ಇಂತಹ ಮಾತುಗಳು ಬರು ವದುಂಟು. ಇದು ಸಾಧಕರಿಗೆ ಬಾಧಕವಾದುದರಿಂದ ಇದನ್ನು ಶಾಸ್ತ್ರವು ಸಿದ್ಧಾಂತರೂಪವಾಗಿ ಸ್ವೀಕರಿಸಿಲ್ಲ.

ಈ ಪ್ರಕಾರವಾದ ಅಧಿಕಾರಿಭೇದವನ್ನು ತಿಳಿಯದಿರು ವುದರಿಂದ ಶಾಸ್ತ್ರಗಳ ಅರ್ಥವನ್ನು ತಿಳಿಯುವುದರಲ್ಲಿ ಕೆಲವು ಅಜ್ಞರು ಭ್ರಮೆಗೊಳ್ಳುವರು. ಪ್ರಾಚೀನಕಾಲ ದಲ್ಲಿ ಶಾಸ್ತ್ರಾಧ್ಯಯನವು ಗುರುಕುಲದಲ್ಲಿಯೇ ಸಶಮ ವಾಗಿ ಸಾಗುತ್ತಿದ್ದಿತು. ಅಧಿಕಾರಾನುಗುಣವಾಗಿಯೇ ಶಾಸ್ತ್ರಾಧ್ಯಯನವನ್ನು ಮಾಡಿಸುತ್ತಲಿದ್ದರು. ಈಗೀಗ ಲೋಹಯಂತ್ರಗಳ (ಮುದ್ರಣಾಲಯಗೆಳ) ಮಹಾ ಕೃಪೆಯಿಂದ ಸರ್ವಜನಿಯ ಶಾಸ್ತ್ರಗಳು ಸರ್ವರಿಗೂ ಸುಲಭಗಳಾಗಿಹೋಗಿವೆ. ಇದು ದೇಶದ ಪೌಭಾಗ್ಯವೋ ದೌರ್ಭಾಗ್ಯವೋ ದೇವರೇ ಬಲ್ಲ! ಯಾರಾದರೂ ಸರಿಯೇ, ತಮ್ಮ ಅಧಿಕಾರಕ್ಕೆ ಸಲ್ಲದ ಕಾರ್ಯಗಳನ್ನು ಮಾಡುವದು ಉಚಿತವಲ್ಲವೆಂಬುದನ್ನು ಎಲ್ಲರೂ ಗಮನಿಸ ದಲ್ಲಿಡಬೇಕು. ಸರ್ವಶಾಸ್ತ್ರಗಳ ತಾತ್ಪರ್ಯವೇನಿರುವ ದೆಂಬುದನ್ನು ನಿರ್ಣಯಿಸುವುದರಲ್ಲಿ ಮಹಾಮಹಾ ವಿದ್ವಾಂ ಸರೂ ಅಸಮರ್ಥರಾಗಿ ಅಲ್ಪಾತ್ಮತ್ತಿರುವಾಗ ಶಾಸ್ತ್ರವ ಒಂದೂವರ್ಷಾನ್ನಗಳೀಗೆ ಒಂದೆರಡು ಶಾಸ್ತ್ರೀಯ ವಾಕ್ಯಗಳ ನ್ನಾಗಲೀ ಕಲಿತೋ ಕಲಿಯದೆಯೋ ತಿಳಿದೋ ತಿಳಿಯ ದೆಯೋ ಸಮಸ್ತ ಶಾಸ್ತ್ರಗಳ ವಿಕವಾಕ್ಯತೆಯನ್ನು ಮಾಡ ಹೆನಡಿಸುವವರು ಯಾವ ತಾತ್ಪರ್ಯವನ್ನು ನಿಶ್ಚಯಿಸ ಬಲ್ಲರು? ಉದಾಹರಣಾರ್ಥವಾಗಿ ಕಲ್ಯಾಣದ ಹಿಂದಿ (೯ನೆಯ) ಅಂಕೆದಲ್ಲಿ—"ಒಂದಾವರ್ತ ಗರ್ಭಧಾರಣ ವಾದದ್ದೇ ಹೆಂಡತಿಯು ತಾಯಿಯಾಗುವಳು" ಎಂಬ ಬರೆಯಲ್ಪಟ್ಟಿದೆ. ಇದು ಸತ್ಯವಾದ ವಿಷಯವೇ ಆಹುದು ಸಾಧಾರಣ ಬುದ್ಧಿಯ ಜನರು ಇದಕ್ಕೆ ಏನರ್ಥವನ್ನು ಮಾಡಬಹುದು? ವಿಪರೀತವಾಗಿಯೇ ಭಾವಿಸಬಹುದು ಇಷ್ಟೇ ಅಲ್ಲ! "ಯಾವುದೇ ಒಂದು ಕಾರಣದಿಂ ಒಂದು ಹೆಣ ವೀರ್ಯವು ಸ್ಖಲಿತವಾದರೆ ಬ್ರಹ್ಮಚರ್ಯ ನಷ್ಟವಾಗುವದು. ಅವನು ಊರ್ಧ್ವ ಬ್ರಹ್ಮಚಾರಿಯೂ ವುದಿಲ್ಲ" ಎಂದಿದೆ. ಈ ಮಾತುಗಳಿಗೆ ಸರಳವಾ ಒಂದರ್ಥವಿದೆ.

ಶ್ರೀ ಪರಮಾತ್ಮನು ಜೀವನಿಗೆ ಪರಮಾರಾಧ್ಯನ ಪರಮಧ್ಯೇಯನೂ ಆಗಿರುವನು. ಯಾವಾಗಲೂ ಪರ ಮಾತ್ಮನಲ್ಲಿರುವುದೇ ಜೀವನ ವಿಕಮಾತ್ರಧರ್ಮವಾಗಿ ವುದು. ಹೀಗೆ ಮಾಡುವುದಾಗದಿದ್ದರೆ ಪರಮಾತ್ಮ ಗೋಸ್ಕರ ತತ್ಪ್ರೀಯಗಳಾದ ಕರ್ಮಗಳನ್ನು ಮಾ ತ್ರಿರಬೇಕು. ನಿರಂತರದಲ್ಲಿ ಶ್ರೀ ಪರಮಾತ್ಮ ಧ್ಯಾ ನವನ್ನು ಮಾಡುವುದು ಸಾಧ್ಯವಾಗದಿದ್ದರೆ ಆ ಧ್ಯಾನ ಸಹಾಯಕಗಳಾದ ಕರ್ಮಗಳನ್ನು ಮಾಡುವುದೂ ಮಾತ್ರ ಮರೆಯಬಾರದು. ಇದೂ ಅಸಾಧ್ಯವಾ ದುಷ್ಕರ್ಮಗಳನ್ನು ಬಿಟ್ಟು ಸತ್ಕರ್ಮಗಳನ್ನಾದ ಮಾಡುತ್ತಿರಬೇಕು. ದುಷ್ಕರ್ಮಕ್ಕಿಂತಲೂ ಸತ್ಕರ್ಮ ಸಾಧುವಾದುದೆ. ಸತ್ಕರ್ಮಕ್ಕಿಂತಲೂ ಧ್ಯಾನಕ್ಕೆ ಪ್ರ ಕೂಲವಾದ ಕರ್ಮವು ಸಮಿಚೀನವಾದುದು. ಧ್ಯಾ ಕ್ಕಿಂತ ಸಮಾಧಿಯು ಶ್ರೇಷ್ಠವಾದುದಾಗಿದೆ. ಎಲ್ಲ ತಲೂ ಸಮಾಧಿಯೇ ಶ್ರೀಯಸ್ಕರವಾದುದೆಂದು ದರೂ ನಾವು ಕರ್ಮವನ್ನು ಮಾಡುವುದನ್ನು ಬಿಡಲಿ ಗುವುದಿಲ್ಲ. ದೃಢವಾದ ಸಮಾಧಿಯು ಸಾಕ್ಷಾತ್ಕಾ ರಾನ್ಯಕರ್ಮಗಳು ತಾವಾಗಿಯೇ ಕಳಚುವವು. ಅಂ ಸಮಾಧಿಯು ನಮಗೊಮ್ಮೆಲೇ ದೊರೆಯಲಾರದು.

ಮನುಷ್ಯ ಜೀವನಕ್ಕೆ ಗುರಿಯು ಸರ್ವಪ್ರಾಣಿ ಸ ರಣಾದ ಭೋಗವಲ್ಲ, ಮೋಕ್ಷವು. ವಿವಾಹದ ಉ ಶವಾದರೂ, ಸಾತ್ವಿ ನಮ್ಮಿಕಾಮವಾಸನೆಗಳನ್ನು ಒ ಸೀಮೆ (ಎಲ್ಲೆ) ಯಲ್ಲಿಟ್ಟುತೊಂಡು ಅವುಗಳ ದೆಸೆಯ ಮೇಲಕ್ಕೇರುವುದೇ (ಉದ್ಧ್ವತವಾಗುವುದೇ) ಆ ವುದು. ವಿವಾಹದಲ್ಲಿದೆ ಅಂದರೆ ಸ್ತ್ರೀ ಸಂಬಂಧವ ನೀವು ನಿಮ್ಮ ಮನಸ್ಸನ್ನು ಪವಿತ್ರವಾಗಿಟ್ಟುಕೊ ನಿರಂತರವಲ್ಲಿಯೂ ಶ್ರೀ ಪರಮಾತ್ಮನ ಧ್ಯಾನದಲ್ಲಿ ಅಸಕ್ತರಾಗಿದ್ದರೆ ಅಥವಾ ಅದು ಶಕ್ಯವಿದ್ದರೆ ವಿ ವನ್ನು ಮಾಡಿಕೊಳ್ಳಲೇಬೇಕೆಂದು ಯಾರೂ ನಿಬ ಸಲಾರರು. ಪರಂತು ನಿಮ್ಮಲ್ಲಿ ಈ ಬಗೆಯ ವೈಕ್ಲ ಳ್ಯವು ವಿರಳವೇ ಹೇಳಬೇಕಾಗಿದೆ. "ಸಾವು ಹನವನ್ನು ಮಾಡಿಕೊಳ್ಳದಿರುವುದರಿಂದ ನಮ್ಮ ನವು ಉಚ್ಛೃಂಖಲವೂ ಪಾಪಮಯವೂ ಆಗಲು ದುದರಿಂದ ವಿವಾಹವನ್ನು ಮಾಡಿಕೊಳ್ಳಬೇಕೆಂಬ ಪರಿಪಾಟ್ಯಾವಿಧಿಯು. ವಿವಾಹೆಗಾದಲೂ ದಂಪ ಪ್ರಸ್ಪಷ್ಟತೆಯಿಂದಲೂ, ಸಂಯಮದಿಂದಲೂ ಪದ ದಿಂದಲೂ ಪರಸ್ಪರ ಸಹಾಪೂರೋತ್ಸಾಹಿಯಿಂದಲೂ ಚರ್ಯಯುಳ್ಳವರಾಗಿ ಪುಣ್ಯಮಯ ಬ್ರಹ್ಮಚರ್ಯ ವನ್ನು ಸಾಗಿಸುತ್ತಿದ್ದರೆ ಅವರ ಮೇಲ್ಗೆ

ಂಕಗಳೂ ಸೊಂಕಳಾರವು. ಹೀಗಿರುವುದು ಅಶಕ್ಯವಾ ಒಂದು ಸಂತಾನವನ್ನು ಪಡೆಯುವದುಕ್ತವುವು. ಪತ್ಯ ಶಕ್ತಿಯಾಗದಿದ್ದರೆ ಮತ್ತೊಂದು ಸಂತಾನ ನ್ನು ಪಡೆಯಬೇಕು. ಇಂತಹ ವೃತ್ತಿಯಿಂದ ಪಾಪವು ಭವಿಸದು. ಪಾಪದ ಕಡೆಗೆ ಮನಸ್ಸೂ ಸರಿಯದು. ಪುರುಷನಲ್ಲಿ ಯಾವಾತನಿಗೆ ಯಾವ ಅಧಿಕಾರವುಂಟೋ ವನು ತನ್ನ ಅಧಿಕಾರಕ್ಕನುಗುಣವಾಗಿ ವರ್ತಿಸುವುದು ುಕ್ತವೆಂದು ಶಾಸ್ತ್ರಸಮ್ಮತಿಯುಂಟು. ಈ ಬಗ್ಗೆ ನುಮಹಾರಾಜನು ಹೇಳುವುದೇನೆಂದರೆ :—"ಇದು ಪ್ರಾಣಿಗಳ ಪ್ರವೃತ್ತಿಯು. ಇದರಿಂದ ನಿವೃತ್ತರಾಗುವುದೇ ುಕ್ತತ್ವಮತಾದ ಮಾರ್ಗವಾಗಿದೆ. ಒಂದು ಸಂತಾನ ಪ್ತಿಯೇ ಕೃಪ್ತಿಯಾದರೆ ಬಹುಸಂತಾನವನ್ನು ಪಡೆಯ ುವುದೇ ಶ್ರೇಷ್ಠವಾದುದೆಂದು ಎಲ್ಲರೂ ಒಪ್ಪಬೇಕಾದ ಾತು." "ಬಹುಪ್ರಜಾಃ ಕಷ್ಟಮಾಪದ್ಯಂತೇ" ಬಹು ತಾನವನ್ನು ಪಡೆಯುವವರು ದುಃಖಿತರಾಗುವರು ದು ಶ್ರುತಿಯು ಸಾರುತ್ತಲಿದೆ. ಇಂತಹ ಸಂಯಮ ುಕ್ತವಾದ ಅಧಿಕಾರವು ನಮಗಿದ್ದರೆ ಈ ಪ್ರಕಾರ ದ ವೈರಾಗ್ಯ ವೀವೇಕಗಳು ನಮ್ಮಲ್ಲಿ ಉತ್ಪನ್ನವಾಗ ದ್ದರೆ ಹೆಚ್ಚು ಸಂತಾನವನ್ನು ಪಡೆಯುವುದು ಾಪ ೀತವಲ್ಲ. ಮನಸ್ಸಿನಲ್ಲಿ ಪರಸ್ತ್ರೀಚಿಂತನವಿದ್ದು ಶರೀ ದಲ್ಲಿ ಪರಸ್ತ್ರೀಸ್ಪರ್ಶನವಾಗುವ ಸಂಭವವಾಗಿ ಘೋರ ಾಪಭಾಜನರಾಗುವುದಕ್ಕಿಂತಲೂ ವಿವಾಹಿತಳಾದ ಸ್ತ್ರೀಯಲ್ಲಿಯೇ ಬಹುಸಂತಾನವನ್ನು ಪಡೆಯುವದು ಧರ್ಮವೇನೂ ಆಗಲಾರದು. ಮನಸ್ಮೃತಿಯಲ್ಲಿ :—

ಪಿಪ್ಪಿತ್ವಾಚಾರ್ಮಣಃ ಪುತ್ರಾಂಶ್ಚೋತ್ಪಾದ್ಯ ಧರ್ಮತಃ ।
ಇಷ್ಟ್ವಾ ಚ ಶಕ್ತಿತೋ ಯಜ್ಞೈರ್ ಮನೋ ಮೋಕ್ಷೇ ನಿವೇಶಯೇತ್ ॥

ವಿಧಿಪೂರ್ವಕವಾಗಿ ವೇದಗಳನ್ನೋದಿ, ಮಕ್ಕಳನ್ನು ಪಡೆದು, ಶ್ರೀ ಪರಮಾತ್ಮನನ್ನಾರಾಧಿಸಿ ಮನಸ್ಸನ್ನು ಮೋಕ್ಷಲ್ಲಿರಿಸಬೇಕು" ಎಂದು ಉಕ್ತವಾಗಿದೆ. ಈ ್ಲೋಕದಲ್ಲಿ "ಪುತ್ರಾನ್" ಅಂದರೆ ಬಹಳ ಮಕ್ಕಳನ್ನು ಂದು ಸ್ಪಷ್ಟವಾಗಿ ಹೇಳಲ್ಪಟ್ಟಿದೆ ಒಂದುಸಾರಿ ಗರ್ಭಾ ಾನವಾದಮೇಲೆ ಸ್ತ್ರೀಸಹವಾಸವೂ ಯಾವಾಗಲೂ ನಿಷಿ ದ್ಧವಾಗಿದ್ದರೆ "ಪುತ್ರಾನುತ್ಪಾದ್ಯ" ಅಂದರೆ ಬಹುಮಂದಿ ಕ್ಕಳನ್ನು ಹುಟ್ಟಿಸಿ" ಎಂದು ಹೇಳುವದಕ್ಕೆ ಯಾವ ೃಯೋಜನ-ಪ್ರಮಾಣಗಳೂ ಇರುತ್ತಿರಲಿಲ್ಲ. ಪ್ರವೃತ್ತಿ ಮಾರ್ಗದಲ್ಲಿರುವ ಅನೇಕ ಋಷಿ ರಾಜರ್ಷಿಗಳ ಚರಿತ್ರೆ ುಲ್ಲಿ, ವಿವಾಹಿತ ಸ್ತ್ರೀಯಲ್ಲಿ ಬಹು ಸಂತಾನವನ್ನು ಪಡೆದಂತೆ ವರ್ಣನೆಯು ಕಂಡುಬರುವದು. ಈ ಕಾರಣ ದ ಮೇಲಿಂದ ಪರಾಮರ್ಶಿಸಿದರೆ ಕಾಮವಿಕಾರ ೀವಗವನ್ನು ತಡೆಯಲಸಮರ್ಥರಾದವರು ವಿವಾಹಿತರಾಗಿ ಂದಕ್ಕಿಂತ ಹೆಚ್ಚು ಸಂತಾನವನ್ನು ಪಡೆಯುವದು ಾರವಿರುದ್ಧವಾಗದೆ ಧರ್ಮಾನುಕೂಲವೆಂದೇ ಸಿದ್ಧ ಾಗುವದು.

ಇನ್ನು "ಒಂದುಸಾರಿ ಗರ್ಭಾಧಾನವಾದಮೇಲೆ ತನ್ನ ಂಡತಿಯು ತನಗೇ ಹೇಗೆ ತಾಯಿಯಾಗುವಳು?" ಂಬ ಮಾತು ಉಳಿಯಿತು. ಈ ಪ್ರಶ್ನೆವ ಅವಶ್ಯವಾಗಿ ಾರಶತಕ್ಕುದಾಗಿದೆ.—ಒಬ್ಬ ಮುಮುಕ್ಷುವ ಕೆಲವು ವರ್ಷಗಳವರೆಗೆ ಗೃಹಾಶ್ರಮಿಯಾಗಿದ್ದು ಸನ್ಯಾಸ (ವೈರಾಗ್ಯ) ವನ್ನು ಸ್ವೀಕರಿಸಲು ಇಚ್ಛಿಸುತ್ತಾನೆಂದು ಟ್ಟುಕೊಳುವ! ಈಗ ಮನಸ್ಸಿನಲ್ಲಿ ಸಾಂಸಾರಿಕ ವಾಸನೆ ುಲ್ಲ ಇಲ್ಲ, ಭೋಗಾಪೇಕ್ಷೆಯು ನಿರ್ಮೂಲವಾಗಿದೆ ಂದೇ ತಿಯಿಸುವಾ! ಅವನು ಸಂಸಾರವು ದುಃಖಮಯ ಂದು ಭಾವಿಸಹತ್ತಿರುವನು. ಮತ್ತು ಅವನ ಮನಸ್ಸಿ ುಲ್ಲಿ ಸಾನಾ ಬಗೆಯ ಯುಕ್ತಿಪ್ರಯುಕ್ತಿಗಳು ಅಂಕುರಿಸ ುತ್ತಿರಬಹುದಾಗಿದೆ. "ಸಂಸಾರವು ಹೇಯವಾದುದು, ಕುಚ್ಛವಾ ುದು, ಕ್ಷಾಸ್ಪದವಾದುದು" ಎಂದು ಅವನ ಬುದ್ಧಿಯು ಂಸಾರಿಕ ದೋಷಗಳನ್ನು ಎಣಿಸಹತ್ತಿದೆ. ಹೀಗಿರುವಾಗ "ಆತ್ಮಾ ವೈ ಪುತ್ರನಾಮಾಸಿ" "ನೀನೇ ಮಗನೆಂಬ ುವನ್ನು ತಳೆದಿರುವಿ" ಎಂಬ ಶ್ರುತಿವಾಕ್ಯವು ಒಮ್ಮೆ ಲೇ ಅವನ ಸ್ಮರಣಕ್ಕೆ ಬಂದಿತು. "ಮಗನೆಂದರೆ ಮನುಷಿಯ ನುದ್ದೆ. ನನ್ನ ಮಗನೇ ನನ್ನ ಜೀವನ (ಆತ್ಮನು)" ಎಂದು ಗೃಹಸ್ಥರಲ್ಲಿರೂ ಭಾವಿಸುವದಿಕ್ಕೇ ಲ್ಲ ಬಹಿರಂಗವಾಗಿ ನುಡಿಯುಕ್ತಲೂ ಇರುವರು. "ಆತ್ಮಾನ್ವೈ ಪುತ್ರನಾಮಾಸಿ" ಎಂಬ ಶ್ರುತಿಯು ಸ್ಮರಣ ದಲ್ಲಿ ಬಂದೊಡನೆಯೇ ನೈರಾಗ್ಯಸಂಪನ್ನನಾದ ಮುಮು ಕ್ಷುವು "ಯಾವಳ ಗರ್ಭದಲ್ಲಿ ನಾನೇ ಪುತ್ರನಾಗಿ ುದ್ಭವಿಸಿದೆನೋ ಆ ನನ್ನ ಹೆಂಡತಿಯೇ ನನಗೆ ತಾಯಿಯಾ ದಳು. ಆಯ್ತಾ! ಆಯ್ತಾ!! ಮಹಾನರ್ಥವಾಯಿತಾ" ಎಂದು ನಿಶ್ಚಯಿಸಿಕೊಳ್ಳುವನು. ಇದು ನಿಜವಾಗಿ ಅಧಿಕಾರಯಾದವನ ಮಾತು. ಯಾವುದರ ದೆಶೆಯಿಂದ ಭೋಗಿಯು ಮೋಸಗೊಳ್ಳುವನೋ ಅದರ ದೆಶೆಯಿಂ ದಲೇ ಯೋಗಿಯು ಮುಕ್ತನಾಗುವನು. ಶ್ರುತಿಯು ವಾಸ್ತಾವಿಕಾರ್ಥವನ್ನು ದೂರದಲ್ಲಿರಿಸಿ ಯೋಗಿಭೋಗಿ ಗಳೀರ್ವರೂ ತಮ್ಮ ತಮ್ಮ ಅಭಿರುಚಿ —ಆಸಕ್ತಿಗಳಗ ನುಸಾರವಾಗಿ ಎರಡರ್ಥಗಳನ್ನು ಕಲ್ಪಿಸಿಕೊಂಡರು. ಅವೆ ರಡು ಭಾವನೆಗಳೂ ಅವರವರ ಅಧಿಕಾರಾನುಗುಣವಾಗಿ ಅವರಬ್ಬರಿಗೂ ತಕ್ಕವುಗಳಾಗಿಯೇ ಇರುವುವು. ಅವರಿ ಬ್ಬರೂ ಪರಸ್ಪರವಾಗಿ ತಮ್ಮ ಪ್ರಿಯತರವಾದ ಯೋಗ-ಭೋಗಗಳನ್ನು ನೋಡಿ ಅಶ್ಲಕ್ಯಿಸಹುದು. ಸಾಲದು ಪರಸ್ಪರವೂ ಅವರಬ್ಬರೂ ಪರಸ್ಪರ ಯೋಗ ಭೋಗಾವಸ್ಥೆಗಳ ಫಲಪಕ್ವವೆನ್ನು ತಿಳಿಯದೆ "ನನ್ನ ದೇ ಸರ್ವೋತ್ಕೃಷ್ಟವೆಂದು" ಎಂದು ಅಭಿಮಾನಿಸಿ ಮದಾತಿ ರೇಕದಿಂದ ಕಠೋರಕಲಹವನ್ನು ಮಾಡಬಹುದು. ಇದು ಕೇವಲ ದುರಾಗ್ರಹವು. ತತ್ವವನ್ನು ತಿಳಿದವರು ಈ ಎರಡು ಅಗ್ರಹಗಳನ್ನೂ ಕೇವಲ ಬಾಲಜೀಪ್ಸೆಗ ಳೆಂದು ಭಾವಿಸುವರು. ವಾಸ್ತವಿಕವಾದ ವಿಚಾರವನ್ನು ಮಾಡಿದರೆ ಅವರವರ ಅಧಿಕಾರ ತಾರತಮ್ಯಾನುಗುಣ ವಾಗಿ ಯೋಗ-ಭೋಗಗಳೆರಡೂ ಮಾನ್ಯಗಳಾಗಿವೆ. ಇದ ರಿಂದ ತಿಳಿದುಬರುವುದೇನೆಂದರೆ— ಶ್ರುತಿಯು ಹೇಳಿದ "ಆತ್ಮಾ ವೈ ಪುತ್ರನಾಮಾಸಿ" ಎಂಬುದರ ತಾತ್ಪರ್ಯವು ತಾನೇ ಮಗನೆಂದಾಗಲೀ, ಹೆಂಡತಿಯು ತಾಯಿಯೆಂದಾ ಗಲೀ ಸರ್ವಥಾ ಸಿದ್ಧಾಂತಗೊಳಿಸಬೇಕೆಂಬುದಲ್ಲ ಪುತ್ರ ನಲ್ಲಿ ಅನುರಾಗವೆಳ್ಳ ಸಂಸಾರಿಯು ಪುತ್ರನಲ್ಲಿ ಮಮತ್ವ ವನ್ನಿಟ್ಟಿರುವನು. ಸಂಸಾರವಿಮುಖನಾದ ವೈರಾಗ್ಯಶಾ ಲಿಯು ಹೆಂಡತಿಯನ್ನು ಜ್ಞಾನಾತೀಕವಕಾಶಾ ಶಾಸ್ತ್ರಕ ದೃಷ್ಟಿಯಿಂದ ಮಾತೃರೂಪನಾಗಿ ನಿರ್ದಯಿಸುವನು. ತತ್ವ ಜ್ಞಾನಿಯಾದವನು ಆತ್ಮಾತಿರಿಕ್ತನಾದ ವಸ್ತುವೇ ಇಲ್ಲ ವೆಂದು ತಿಳಿಯುವನು. ಆದುದರಿಂದ ಅವನಿಗೆ ಎಲ್ಲವೂ ಆತ್ಮವೇ ಆಗಿದೆ. ಪುತ್ರನು ಅಸ್ಮಿಮಾಂಗಗಳ ಜೊಂದೆ ಯಲ್ಲ, ಆತ್ಮನು. ಉಪಾಸಕನಕ್ಷಲ್ಲಿಯೂ ಈ ಮಾತು ಸಫ ಲವಾಗುವುದು. ಅವನು ಪುತ್ರನನ್ನು ಪುತ್ರರೂಪದಲ್ಲಿ ನೋಡದೆ ಪರಮಾತ್ಮನ ರೂಪದಲ್ಲಿಯೇ ನೋಡುವನು. "ಅನ್ನಂ ಬ್ರಹ್ಮ" "ಪ್ರಾಣೋ ಬ್ರಹ್ಮ" ಮೊದಲಾ ದವುಗಳಂತೆ ಪುತ್ರನಲ್ಲಿ ಆತ್ಮಭಾವನೆಯನ್ನಿಡುವುದಿಕ್ಕೇ ಲ್ಲ ಇದಕ್ಕೂ ಮುಂದೆ ಹೋಗಿ ಶ್ರೀ ಪರಮಾತ್ಮಭಾ ವನೆಯೂ ಪ್ರಾದುರ್ಭವಿಸುವದು. ಸಂಸ್ಕಾರ ಕಾಲದಲ್ಲಿ ತಂದೆಯು ಮಗನಲ್ಲಿ ಮುಟ್ಟಿ ಸಾನೂ ನೀನೂ ಬೇರೆ ಯಲ್ಲ ಒಂದೇಯಾಗಿರುವೆವು. ನಮ್ಮಿಬ್ಬರ ಜೀವನದ ಧ್ಯೇಯವು ಒಂದೇ ಆಗಿದೆ." ಎಂದು ಹೇಳುವ ಮಾತು ಗಳು ಶ್ರುತ್ಯುಕ್ತ ಕರ್ಮಕಾಂಡದಲ್ಲಿ ಪ್ರಯೋಗಿಸಲ್ಪಟ್ಟಿವೆ. 'ಕಲ್ಯಾಣಾದ ಹಿಂದಿನ (ರ್ವೇ) ಅಂಕದಲ್ಲಿ ಹೇಳಿದ "ಕಾನೇ ಮಗನು" ಎಂಬಮಾತು, ಅಧಿಕಾರಸಂಪನ್ನನಾಗಿ ಸಂಸಾ ರವನ್ನು ಗರಿಕ್ಕಿಸಿ ಸನ್ಯಾಸಿಸ್ಥೀಕಾರಕೋಸ್ಕರ ಕುತೂಹ ಲಿತನಾದವನಿಗೆ ಹೇಳಿದ್ದಾಗಿದೆ. ಅದನ್ನೋದಿದ ಮಹಾಧಿಕಾರಿಗಳಾದ ಗೃಹಸ್ಥಾಶ್ರಮಿಗಳು ಭ್ರಮೆಗೊಳ್ಳ ಬಾರದು.

ವರ್ಜ್ಯತಿಥಿಗಳನ್ನು ಬಿಟ್ಟು ಶುಭಕಾಲದಲ್ಲಿಯೇ ಧರ್ಮಾನುಕೂಲವಾಗಿ ಸ್ವಪತ್ನಿಯ ಸಹವಾಸವನ್ನು ಮಾಡಿದರೆ ಗೃಹಸ್ಥನ ಬ್ರಹ್ಮಚರ್ಯವು ಕೆಡುವುದಿಲ್ಲ. ಸುಕ್ಷತ್ರತವಾಗಿಯೇ ಇರುವದು. ಸ್ತ್ರೀ ಪುರುಷರೀರ್ವರೂ ಪರಸ್ಪರವಾಗಿ ರಕ್ಷಕವಾದ ಕವಚದಂತಿರುವರು. ಇಬ್ಬರೂ ಪವಿತ್ರ ಹೃದಯದಿಂದ ಧರ್ಮಮಯ ಜೀವನವನ್ನು ಸಾಗಿ ಸುತ್ತಿದ್ದರೆ ಇಬ್ಬರೂ ಶ್ರೀ ಪರಮಾತ್ಮನ ಅನುಗ್ರಹಕ್ಕೆ ಪಾತ್ರರಾಗುವರು. ಪರಮಾತ್ಮನ ಅನುಗ್ರಹವು ಸ್ಥಾಲ್ಪ ಮೋಷತಧರ್ಮಾನುಷ್ಠಾನಧುರಂಧರರಾದವರೆಲ್ಲರಿಗೂ ಆಗು ವುದರಲ್ಲಿ ಸಂದೇಹವಿಲ್ಲ ಎಲ್ಲಿಯೋ ಓದಿಕೊಂಡೋ ಎಲ್ಲಿಯೋ ಕೇಳಿಯೋ ತನ್ನ ಅಧಿಕಾರಕ್ಕೆ ಸಲ್ಲದ ಕಾರ್ಯ ಗಳನ್ನು ಯಾರೂ ಸ್ವೀಕರಿಸಬಾರದು. ಮತ್ತು ತಮ್ಮ ಯೋಗ್ಯತಾನುಸಾರವಾಗಿ ಬ್ರಹ್ಮತರ್ಯಪಾಲನವನ್ನು ಸರ್ವರೂ ಮಾಡಬೇಕು.

"ಕಲ್ಯಾಣ" ಗೋರಮಪುರ.

॥ ಶ್ರೀಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು ॥

ಮುಖವಾರ್ತೆಯ ಸಭೆ, ಬೆಳಗಾವ.

ಬೆಳಗಾವಿಯ ಶ್ರೀ ವೀರಭದ್ರದೇವರ ಗುಡಿಯಲ್ಲಿ ಶಾ॥ ೧೦-೮ ೧೯೪೦ ಶನಿವಾರದಿವಸ ಸಾಯಂಕಾಲ ಶ್ರೀ ಜಗದ್ಗುರು ನಾಗಲೂಟಿ ಭಿಕ್ಷಾವರ್ತಿ ಶಿವಾಚಾರ್ಯ ಮಹಾಸ್ವಾಮಿಗಳವರ ಮತ್ತು ನೈ॥ ಸೂರು ಶ್ರೀಮನ್ಮಹಾ ರಾಜಗುರವರ ನಿಧನದ ಬಗ್ಗೆ ವೀರಶೈವರ ವತಿಯಿಂದ ಶ್ರೀ॥ ಷ॥ ಬ್ರ॥ ಪಟ್ಟಾಧ್ಯಕ್ಷೆ ಗುರುವರ್ಯ ಶಿವಾಚಾರ್ಯರು ಹಿರೇಮಠ ಸುತ್ತಗಟ್ಟೆ ಇವರ ಅಧ್ಯಕ್ಷತೆಯಲ್ಲಿ ಸಭೆ ಸೇರಿತು. ನಿಜಲಿಂಗಕರ್ಮಾ ದ್ಯಾಂಳರು, ಶ್ರೀ॥ ಷ॥ ಬ್ರ॥ ಪಟ್ಟಾಧ್ಯಕ್ಷರು ಹಿರೇಮಠ ಹುಣಸಿಕಟ್ಟೆ ಮತ್ತು ಮಲ್ಲಿಕಾರ್ಜುನ ಶರ್ಮಾ ಹಡಗಲಿ ಇವರು ಶ್ರೀಗಳವರ ಮತ್ತು ಮಹಾಂಜರವರ ಗುಣವರ್ಣನೆ ಮಾಡಿ ಇಂತಹ ವ್ಯಕ್ತಿಗಳು ನಮ್ಮನ್ನು ಅಗಲಿ ಹೋದುದಕ್ಕೆ ನಾವು ಅತ್ಯಂತ ಭಾಗ್ಯಹೀನರೆಂದೂ, ನಮ್ಮ ಕರ್ನಾಟಕದೇಶವು ಭಾಗ್ಯಹೀನವೆಂದೂ, ಸ್ವರ್ಗವಾಸಿಗಳಾದ ದೇವರ್ಷಿ ಮತ್ತು ರಾಜರ್ಷಿಗಳಿಗೆ ಈಶನು ಆತ್ಮಶಾಂತಿಯನ್ನುಂಟು ಮಾಡಲೆಂದೂ ಭಾಷಣಮಾಡಿದರು. ಆಮೇಲೆ ಅಧ್ಯಕ್ಷರ ಭಾಷಣವಾಗಿ ಶಿವಾಧೀನರಾದ ವ್ಯಕ್ತಿಗಳಿಗೆ ಈಶನು ಆತ್ಮಶಾಂತಿಯನ್ನುಂಟುಮಾಡಲೆಂದು ಸರ್ವರೂ ಈಶನನ್ನು ಪ್ರಾರ್ಥಿಸಿದರು. ಬಳಿಕ ಸಭೆಯು ಮುಗಿಸಲ್ಪಟ್ಟಿತು. ಸಭೆಗೆ ಸಕಲ ವೀರಶೈವ ಸ್ತ್ರೀ ಪುರುಷರು ಆಗಮಿಸಿದ್ದರು.

ಒರ್ವ ಸಭಿಕ.

ಪುರಾಣ ಸ್ಥಾರಂಭ, ಬನಹಟ್ಟಿ.

ವೇ॥ ಶಂಕರಯ್ಯಸ್ವಾಮಿಗಳವರ ಮಕ್ಕಳಲ್ಲಿ ಪುರಾ ಣವು ಪ್ರಾರಂಭವಾಗಿ ವೇ॥ ಶಂಕರಯ್ಯಸ್ವಾಮಿಗಳು ಪುರಾಣವನ್ನು ಜನರ ಮನಸ್ಸಿನಮೇಲೆ ಪರಿಣಾಮವಾಗು ವಂತೆ ಹೇಳುತ್ತಿರುವರು. ಮಧ್ಯದಲ್ಲಿ ಶ್ರೀ ಜಗದ್ಗುರು ಪಂಚಾಚಾರ್ಯರ ಲೀಲೆಗಳನ್ನು ಹೇಳಿ ಜನರನ್ನು ಆನಂದಸಾಗರದಲ್ಲಿ ಲೀನಮಾಡುತ್ತಿರುವರು. ಪ್ರತಿದಿವಸ ಪ್ರಾರಂಭದಲ್ಲಿ ಪಂಚಾಚಾರ್ಯರ ಪದಗಳು, ಮಧ್ಯದಲ್ಲಿ ಪಂಚಾಚಾರ್ಯರ ಕೃತಿಗಳು, ಸ್ತೋತ್ರಗಳು, ಅಂತ್ಯ ದಲ್ಲಿ ಮಂಗಳಾರತಿ ಪಂಚಾಚಾರ್ಯರ ಜಯಘೋಷಗಳು ನಡೆಯುತ್ತಿರುವವು. ಬನಹಟ್ಟಿ ಸೋಮವಾರಪೇಟೆ ದೈವ ದವರು, ಮಂಗಳವಾರಪೇಟೆ ಹಳೆಪೇಟೆ ರೈತರು ಊರೊಳಗಿನ ಪ್ರಮುಖ ಪಾಟೀಲ ಶೆಟ್ಟಿ ಮಹಾಜನ ಮುಂತಾದವರು ಬರುತ್ತಿರುವರು. ಪುರಾಣವು ಹೀಗೆ ಎಂದೂ ನಡೆದಿಲ್ಲವೆಂದು ಜನರು ಹೇಳುತ್ತಿರುವರು. ಇದಕ್ಕೆ ಶ್ರೀ॥ ಷ॥ ಬ್ರ॥ ಮದರಖಂಡಿ ಹಿರೇಮಠದ ಶ್ರೀಗಳೇ ಕಾರಣರು. ಶ್ರೀಗಳಿಗೆ ಪಂಚಾಚಾರ್ಯರು ವಿಶ್ವಮಂಗಲವನ್ನೀಯಲೆಂದು ಪ್ರಾರ್ಥನೆ.

ಎಸ್. ವಿ. ಭಾಂಗಿ.

ಪಂಚಾಚಾರ್ಯಪ್ರಭಾ.

ಜೂನ್ — ೧೯೪೦
೧೯೪೦ ನೆಯ ಆಗಸ್ಟ್ ತಿಂ ನೇಯ ಸೋಮವಾರ

5

ಶ್ರೀದೂರ್ವಾಸಮಹರ್ಷಿ.

ಈ ಮಹರ್ಷಿಯು ಜಗದ್ವಿಖ್ಯಾತಮಹರ್ಷಿಯು ಈ ಮಹರ್ಷಿಯು ಹೆಸರನ್ನು ಕೇಳದ ಜನರಾರಿಹರು ಇರುವುದಿಲ್ಲ ಈ ಮಹರ್ಷಿಯು ಎಲ್ಲರ ಗೌರವಗಳಲ್ಲಿರುವಿ ಇದ್ದಂತೆ ಮ್ಯಾಕೋಕ್ತಪುರುಷಾಗಿ ತಿಳಿದಿರುವಂತ ಇಂದ್ರನು ಒಂದು ಸಾರಿ, ಇವರ ಪ್ರೀತಿಯನ್ನು ನಿರಾತಕವೆಂಬ ಅಸಿಮಾನ ಕಲ್ಪಿಸಿಕೊಂಡು ಪ್ರಯತ್ನ ಜನಮಾತ್ರದಲ್ಲಿ, ಅವರ ಪ್ರೀತಿಯನ್ನು ಈ ಮಹರ್ಷಿಯು ಅಗಸ್ಯ ತಿಳಿದ ದೇವತೆಗಳಲ್ಲಿ ಒಂದೆ ನಾದ ಇಂದ್ರನಿಗೆ ಅತಿಸಾರವನ್ನು ಮಾಡಬೇಕೆಂಬ ಅಸಂಬದ್ಧತಿರಯದಿಂದ ಈ ಪ್ರಕಾರವಾಗಿ ಇಂದ್ರನಿಗೆ ತನ್ನಲ್ಲಿದ್ದ ದಿವ್ಯಮಾಲೆಯನ್ನು ಅನಗ್ರಹಿಸಿದನು ಆದರೆ ಅಹಂಕಾರಾಂಧನಾಗಿದ್ದ ಇಂದ್ರನು ಈ ಮಾಲೆಯ ಮಹತ್ವವನ್ನು ತಿಳಿಯದೆ ಅದನ್ನು ಐರಾವತದ ಮೇಲೆ ಇಟ್ಟನು ಆಗ್ಗೆ ಐರಾವತವು ತನ್ನ ಸೊಂಡಿಲಿನಿಂದ ಆ ಮಾಲೆಯನ್ನು ತೆಗೆದುಕೊಂಡು ಕುಲಿಸಿಂದ ತಿಂದು ಬೇಸಾಡಿಬಿಟ್ಟಿತು ತನ್ನಿಂದ ಅನಗ್ರಹಿಸಲ್ಪಟ್ಟ ಮಾಲೆಯನ್ನು ಕೆಗುಂಟುವ ಈ ವಿಧವಾದ ತಿರಸ್ಕಾರಭಾವನವನ್ನು ಕಂಡು ಈ ಮಹರ್ಷಿಗೆ ಅಪಾರವಾದ ಕೋಪವು ಬಂದಿತು. ಆಗ್ಗೆ ಈ ಮಹರ್ಷಿಯು ಕೋಪೋದ್ರಿಕ್ತನಾಗಿ ಅಪಾರವಾದ ಸುತ್ತ—"ಎಲ್ಲೆ ಇಂದ್ರನೇ' ನನ್ನಿಂದ ತಿರಸ್ಕರಿಸಲ್ಪಟ್ಟ ಪುಷ್ಪಮಾಲೆಯನ್ನು ಭಕ್ತಿಯಿಂದ ಸ್ವೀಕರಿಸದೆ, ಆದರ ಬಗ್ಗೆ ಈ ರೀತಿಯಾದ ತಿರಸ್ಕಾರವನ್ನು ತೋರಿಸಿದೆಯಾ ? ಈ ವಿಧವಾದ ತಿರಸ್ಕಾರಕ್ಕೆ ನಿನ್ನಲ್ಲಿರುವ ಚತುರ್ದಶಲಂಡಿನ ಮದವೇ ಕಾರಣವಲ್ಲವೆ ? ಆ ಕಾರಣವು ಇರುವುದಿಲ್ಲ ಆದಿಂದಲೆ ನಿನ್ನ ಮದಕ್ಕೆ ಮೂಲಕಾರಣೀಭೂತವಾಗಿರುವ ಈ ಚತುರ್ದಶಸಂಪತ್ತಿಲ್ಲವೂ ತತ್ಕ್ಷಣದಲ್ಲಿಯೇ ಸಮುದ್ರನ ಪಾಲಾಗಲಿ" ಎಂದು ಕಠೋರವಾದ ಶಾಪವನ್ನು ಕೊಟ್ಟನು ಈ ಮಹರ್ಷಿಯು ಶಾಪಪ್ರಭಾವದಿಂದ ಇಂದ್ರನ ಸಂಕಷ್ಟಲ್ಲವೂ ಆ ಕ್ಷಣದಲ್ಲಿಯೇ ಸಮುದ್ರದ ಪಾಲಾಯಿತು ಆಗ್ಗೆ ಮದಾಂಧನಾದ ಇಂದ್ರನು ಮದದಿಂದ ದೂರವಾಗಿ ಈ ಮಹರ್ಷಿಯುಗಳನ್ನು ನಾನಾವಿಧವಾಗಿ ಪ್ರಾರ್ಥಿಸಿದನು ಆದರೂ ಸಾರ್ಥಕನಾಗಲಿಲ್ಲ ಇಂದ್ರನಿಗುಂಟಾದ ಈ ದುರವಸ್ಥೆಯಿಂದ ದೇವತೆಗಳಲ್ಲರೂ ವಿಶೇಷವಾಗಿ ಮಃಖಾಕ್ರಾಂತರಾದರು. ಆಗ್ಗೆ ದೇವತೆಗಳೂ ದೈತ್ಯರೂ ಎಲ್ಲರೂ ಒಂಡಿಯಲ್ಲಿ ಕೆರಿ ಯೋಚಿಸಿ, ಸಮುದ್ರದ ಪಾಲಾಗಿದ್ದ ಆ ಚತುರ್ದಶಸಂಪತ್ತುಗಳನ್ನು ಹೊರಗೆ ತೆಗೆಯುವುದಕ್ಕೋಸ್ಕರ ಮೇರುಪರ್ವತವನ್ನೇ ಮಂಥನದಂಡವನ್ನಾಗಿಯೂ, ಆದಿಶೇಷನನ್ನೇ ರಜ್ಜುವನ್ನಾಗಿಯೂ ಮಾಡಿ, ಸಮುದ್ರವನ್ನು ಕಡೆಯಲಿಕ್ಕೆ ಪ್ರಾರಂಭಿಸಿದರು. ಆದರೆ ಈ ಘರ್ಷಣದ ಬಾಧೆಯಿಂದ ಆದಿಶೇಷನ ಮುಖದಿಂದ ವಿಷವು ಸಮುದ್ರದಲ್ಲಿ ಬೀಳಲು, ಕೂಡಲೆ ಆ ಸಮುದ್ರದಲ್ಲಿ ಸಮಸ್ತಲೋಕಗಳನ್ನು ಸುಡತಕ್ಕ ಭಯಂಕರವಾದ ಜ್ವಾಲೆಯೆದ್ದಿತು ಇದರಿಂದ ಸುರಾಸುರರೆಲ್ಲರೂ ಭಯಗೊಂಡು ದಿಗ್ಭ್ರಾಂತರಾಗಿ ಪರಮೇಶ್ವರನನ್ನು ಮರೆಹೊಕ್ಕರು ಆಗ್ಗೆ ಪರಮಾತ್ಮನು ಸಮಸ್ತ ಲೋಕಗಳನ್ನು ರಕ್ಷಿಸುವದಕ್ಕಾಗಿ, ಭಯಂಕರವಾದ ಆ ವಿಷಜ್ವಾಲೆಯನ್ನೆಲ್ಲ ಸಂಗ್ರಹಿಸಿ ತನ್ನ ಕಂಠದಲ್ಲಿರಿಸಿಕೊಂಡನು ಇದರಿಂದ ಪರಮೇಶ್ವರನ ಕಂಠವು ಕಪ್ಪಾಯಿತು. ಈ ಕಾರಣದಿಂದಲೇ ಶಿವನಿಗೆ ನೀಲಕಂಠನೆಂಬ ನಾಮವು ಪ್ರಾಪ್ತವಾಯಿತು ಈ ಚರಿತ್ರವು ಪುರಾಣಾದಿಗಳಲ್ಲಿ ಬಹುವಿಧವಾಗಿ ಬರೆಯಲ್ಪಟ್ಟಿದೆ ಶ್ರೀಪರಮೇಶ್ವರನಿಗೆ 'ನೀಲಕಂಠ" ಎಂಬ ನಾಮವು ಬರಲಿಕ್ಕೆ ಈ ಮಹರ್ಷಿಯೇ ಪ್ರಧಾನಕಾರಣನಾದನು ಇದರಿಂದ ಈ ಮಹರ್ಷಿಯು ಪ್ರಭಾವವು ಎಷ್ಟು ಮಹತ್ತ್ವವಾದುದು ಎಂಬುದು ಸ್ಪಷ್ಟವಾಗಿ ಗೋಚರವಾಗುವದು ಇದಲ್ಲದೆ ಜಗದ್ವಿಖ್ಯಾತಕಾವ ಶಕುಂತಲೆಯು ಈ ಮಹಾತ್ಮನ ತಿರಸ್ಕಾರಭಾವನಿಂದಲೇ ತನ್ನ ಪತಿಯಾದ ದುಷ್ಯಂತನ ಸಾನ್ನಿಧ್ಯವನ್ನು ಕಳೆದುಕೊಂಡ ಬಹಿವಿಧವಾಗಿ ಕಷ್ಟಪಟ್ಟಳು ಇದೇ ರೀತಿಯಾಗಿ ಈ ಮಹಾತ್ಮನು ಭಾರತ ಭೂವಿಯಲ್ಲಿ ಅನಂತಾನಂತಲೀಲೆಗಳನ್ನು ಮಾಡಿ ಲೋಕೈಕಪೂಜ್ಯನಾಗಿರುವನು ಈ ರೀತಿಯಾಗಿ ಜಗದ್ವಿಖ್ಯಾತನಾಗಿರುವ ಈ ಮಹರ್ಷಿಯು ವೀರಶೈವಮಹರ್ಷಿಯು ಈ ಮಹರ್ಷಿಯು ಕಾಶೀಕ್ಷೇತ್ರದ ಆನಂದ ಕಾನನದಲ್ಲಿ ಬಹಕಾಲ ವಾಸನಾಗಿದ್ದು, ಶ್ರೀಜಗದ್ಗುರು ವಿಶ್ವಾರಾಧ್ಯರಿಂದ ಅನುಗ್ರಹೀತನಾದನು ಈತನು ವೀರಶೈವಪರಮೋಪದೇಶಕರಾಗಿ ವರ್ತಿಸಿ ವಿಶಿಷ್ಟವಾದನು ಈತನು ಅನೇಕಗ್ರಂಥಗಳು, ಪತಿವ್ರತಾಧರ್ಮವನ್ನು ಬೋಧಿಸುವ ಶ್ರೀಲಕಂಠ ಶಿವಾಚಾರ್ಯರಿಂದ ವಿರಚಿತವಾಗಿರುವ ನೀಲಕಂಠವಿಜಯವೆಂಬ ಚಂಪೂಗ್ರಂಥದಲ್ಲಿ—

ಶಂಭೋಸ್ತ್ರಿಜಗತೋ ಭೃತ್ಯಾಸ್ತಾವಕಾ ಭುವನತ್ರಯೇ ।
ಯತ್ಪಾದಾಬ್ಜಸ್ತವೇ ತ್ರೈಲೋಕ್ಯಂ ಪವಿತ್ರಯತಿ ಸೋಽಸ್ಮ್ಯಹಂ ॥೧೫೪॥

ಎಂದು ಉಲ್ಲೇಖಿಸಲ್ಪಟ್ಟಿದ ಇಂದ್ರನಿಗೆ ಶಿವಪಸನ್ನನಾಗಿರುವಂತೆ ಈ ವೀರಶೈವಮಹರ್ಷಿಯು ವೀರಶೈವಪ್ರಭಾವದಿಂದ ಯುಕ್ತನಾಗಿದ್ದನೆಂದು ಹೇಳಲಾಗಿದೆ ಸ್ವಪಶಕ್ತಿಯಿಂದಾ ಶಿವಾಗಮಗಳಲ್ಲಿ ಪರಿಣತಿಯಿದ್ದಾದೆ ಸ್ವಪಶಕ್ತಿಯಿಂದಾ ಶಿವಾಗಮಗಳಲ್ಲಿ ಪರಿಣತಿಯಿದ್ದಾದೆ ಶ್ರೀಪಾರ್ವತೀಯ ಭಾಷ್ಯದ ಆರಂಭದಲ್ಲಿ—

ನಮಃಶ್ಯಾಮಲ ಸಂತ್ರಾಣ ದೂರ್ವಾಸಾಯ ಮೃತ್ತಿಕಾತಕೇ ।
ಭಾಷ್ಯಕೃತ್ಕಾರ್ಯಸಿದ್ಧಯೇ ಶ್ರದ್ಧಯೇ ಪಾಷಣುತ್ತಯೇ ॥

ಎಂದು ವಂಗಲವನ್ನುಚ್ಚರಿಸಿದ್ದಾರೆ ಇದರಿಂದ ಈ ಮಹರ್ಷಿಯು ಬ್ರಹ್ಮಸೂತ್ರಗಳಿಗೆ ವೀರಶೈವಮತ್ಪಾಖಾಂತಾ ಸಗುಣವಾಗಿ ವೃತ್ತಿಯನ್ನು ರಚಿಸಿರುವನೆಂದು ಸ್ಪಷ್ಟವಾಗುತ್ತದೆ ಶ್ರೀಪಪಂಡಿತರು ತಮ್ಮ ಶ್ರೀಕಂಠಭಾಷ್ಯದಲ್ಲಿ ಈ ಮಹರ್ಷಿಯಿಂದ ವಿರಚಿತವಾಗಿರುವ "ದೂರ್ವಾಸೀಯ 'ವೃತ್ತಿಯ ಹೆಸರನ್ನು ಉಲ್ಲೇಖಿಸಿದ್ದಾರೆ ಇವೆ ದೃಢತಮವಾಗಿ ಈ ವೀರಶೈವಮಹರ್ಷಿಯು ವೀರಶೈವರಿಗೆ ಪ್ರಾತಃಸ್ಮರಣೀಯನಾಗಿದ್ದಾನೆ

ಯುದ್ಧವಾರ್ತೆ

ಹಿಟ್ಲರನ ಆರ್ಭಟವೆಲ್ಲಿ ಮಾಯವಾಯಿತು ?

ಹಿಟ್ಲರನು ಇದೇ ತಿಂಗಳು ೧೫ ನೆಯ ತಾರೀಖಿಗೆ ಯುದ್ಧವನ್ನು ಮುಗಿಸಬಿಡುವೆನೆಂದೂ, ಅಪ್ಪರಲ್ಲಿ ಇಂಗ್ಲೆಂಡನ್ನು ನುಂಗಿಬಿಡುವೆನೆಂದೂ, ಪ್ರತಾಪವನ್ನು ಕೊಚ್ಚಿಕೊಂಡಿದ್ದನಲ್ಲ ! ಆ ಪ್ರತಾಪವೆಲ್ಲಿ ಅಡಗಿತು ? ಹಿಟ್ಲರನು ಬೆಲ್ಜಿಯಂ, ಹಾಲೆಂಡ್, ನಾರ್ವೆಯಂತಹ ಸಣ್ಣ ಸಣ್ಣ ದೇಶಗಳನ್ನು ನುಂಗಿಬಿಟ್ಟನು ಆದರೆ ಬ್ರಿಟನ್ನಿನ ಮೇಲೆ ಬೀಳಲು ಧೈರ್ಯವಿಲ್ಲದೆ ಹೋದನು ಇದಕ್ಕೆ ಕಾರಣವೇನು ? ಬ್ರಿಟನ್ನಿನ ಸೈನ್ಯವು ಅಷ್ಟು ಬಲಿಷ್ಠವಾಗಿದೆಯೆ ? ಅಲ್ಲ ಬ್ರಿಟನ್ನಿನ ಸೈನ್ಯವು ಜರ್ಮನಿಯ ಸೈನ್ಯಕ್ಕಿಂತ ಬಲಿಷ್ಠವಾಗಿಲ್ಲ ಆದರೆ ಬ್ರಿಟನ್ನಿನ ಬಳಿ ಜರ್ಮನಿಯ ಸೈನ್ಯವನ್ನು ಸಾಗಿಸಲು ಸಾಕಷ್ಟು ಹಡಗುಗಳಿಲ್ಲ ಜರ್ಮನಿಯ ಬಳಿ ಇಂಗ್ಲೆಂಡಿಗೆ ಸೈನ್ಯವನ್ನು ಸಾಗಿಸಲು ಸಾಕಷ್ಟು ಹಡಗುಗಳಿವೆ ಆದರೆ ಜರ್ಮನಿಯ ಬಳಿ ಸೈನ್ಯವನ್ನು ಸಾಗಿಸಲು ಸಾಕಷ್ಟು ಹಡಗುಗಳಿಲ್ಲ ಜರ್ಮನಿಯ ಬಳಿ ಸೈನ್ಯವನ್ನು ಸಾಗಿಸಲು ಸಾಕಷ್ಟು ಹಡಗುಗಳಿಲ್ಲದಿರಲು ಕಾರಣವೇನು ? ಜರ್ಮನಿಯ ಬಳಿ

ಜರ್ಮನ್ ಪ್ಯಾರಾಚೂಟ್‌ಗಳ ವೈಚಿತ್ರ್ಯ!

ಇಂಗ್ಲೆಂಡಿನಲ್ಲಿ ೧೧ ಜರ್ಮನ್ ಪ್ಯಾರಾಚೂಟ್‌ಗಳು ಕಾಣಬಂದವೆಂದೂ, ಅದರೆ ಅವುಗಳಲ್ಲಿ ಬಂದ ಜರ್ಮನರು ಸೂತ್ರ ಕಾಣಬರಲಿಲ್ಲವೆಂದೂ, ಈ ಪ್ಯಾರಾಚೂಟ್‌ಗಳು ಹಿಂದೆ ಉಪಯೋಗಿಸಲ್ಪಟ್ಟ ಮಾದರಿಯಲ್ಲವೆಂದೂ ಯಾವ ಉದ್ದೇಶದಿಂದ ಉಪಯೋಗಿಸಲಾಯಿತೆಂಬುದನ್ನು ನಿಘೆಣರು ಪರೀಕ್ಷೆಮಾಡುತ್ತಿದ್ದಾರೆಂದೂ ತಿಳಿದು ಬರುತ್ತದೆ.

ಇಟಲಿಯ ಆಕ್ರಮಣ

೧೪ನೇ ತಾರೀಖಿನ ದಿನ ಬ್ರಿಟಿಷ್ ಸೋಮಾಲಿಲ್ಯಾಂಡಿನಲ್ಲಿ ಇಟಾಲಿಯನ್ನರು ಹೆಚ್ಚಿನ ಸೇನೆಯನ್ನು ತಂದು ಉಗ್ರಕದನಕ್ಕೆ ಆರಂಭಿಸಿದ್ದಾರೆ. ಬ್ರಿಟಿಷ್ ಸೈನಿಕರು ಮುಂಗಾವಲು ಸ್ಥಾನಗಳಲ್ಲಿ ಹಲವು ಘಂಟೆಗಳ ಕಾಲ ಘೋರವಾಗಿ ಹೊಡೆದಾಡಿ ಶತ್ರುಗಳಿಗೆ ಅಪಾರ ನಷ್ಟವನ್ನುಂಟುಮಾಡಿದರು. ಇಟಲಿಯ ಎರಡು ವಿಭಾಗಗಳನ್ನು ಸೈನಿಕರಲ್ಲಿ ಈಗ ಬಹುಮಂದಿ ರಣರಂಗಕ್ಕೆ ಇಳಿದಿದ್ದಾರೆ ಇದಲ್ಲದೆ ಫ್ರೆಂಚ್ ಸೋಮಾಲಿಲ್ಯಾಂಡಿನಲ್ಲಿ ಫ್ರೆಂಚರನ್ನು ಮುತ್ತಲೋಸುಗ ಮೊದಲು ಇಟಾಲಿಯನ್ನರು ಸಿದ್ಧಮಾಡಿಕೊಂಡಿದ್ದ ಫಿರಂಗಿಗಳನ್ನೂ ಶಸ್ತ್ರಬಂಡಿಗಳನ್ನೂ ಈಗ ಬ್ರಿಟಿಷರ ಮೇಲೆ ತಿರುಗಿಸಿದ್ದಾರೆ

೨೦೦ ಇಟಲಿ ವಿಮಾನಗಳ ನಾಶ

೧೯೬-೨೦೮ ವೀಜಿಗೆ ಆಫ್ರಿಕೆಯಲ್ಲಿ ಬ್ರಿಟಿಷ್ ವಿಮಾನಗಳಾ ಇಟಾಲಿಯನ್ನರ ಮೇಲೆ ಕೈಗೊಂಡಿರುವ ಕಾರ್ಯಕ್ರಮವನ್ನು ವಿಮರ್ಶಿಸಿ ನೋಡಿದರೆ, ರಣರಂಗದ ಇತರ ಕ್ಷೇತ್ರಗಳಲ್ಲಿ ಬ್ರಿಟಿಷ್ ವೈಮಾನಿಕರೂ ಮತ್ತು ವಿಮಾನಗಳೂ ತಮ್ಮ ಮೇಲ್ಮರದ ಯೋಗ್ಯತೆಯನ್ನು ಸ್ಥಾಪಿಸಿರುವಂತೆಯೇ ಆಫ್ರಿಕಾದಲ್ಲಿಯೂ ಸ್ಥಾಪಿಸಿರುವುದು ವ್ಯಕ್ತಪಡುತ್ತದೆ. ಬ್ರಿಟಿಷ್ ವೈಮಾನಿಕರು ಶತ್ರುಗಳನ್ನೆದುರಿಸಿದಾಗಲೆಲ್ಲ ಅವರನ್ನು ನೋಲಿಸಿದ್ದಾರೆಂದೂ, ಜೂನ್ ಮಧ್ಯಭಾಗದಿಂದೀಚೆಗೆ ಸುಮಾರು ೨೦೦ ಇಟಲಿ ವಿಮಾನಗಳು ಹಾಶಮಾಡಲ್ಪಟ್ಟಿವೆಯೆಂದೂ ಗೊತ್ತಾಗುತ್ತದೆ.

ಕ್ರಾಯ್ಡರ್ಡ್ ವಿಮಾನ ನಿಲ್ದಾಣದಮೇಲೆ ದಾಳಿ.

ಕ್ರಾಯ್ಡರ್ಡ್ ವಿಮಾನ ನಿಲ್ದಾಣದಮೇಲೆ ಈದಿನ ಜರ್ಮನರು ನಡೆಯಿಸಿದ ವಾಯುಮುತ್ತಿಗೆಯನ್ನು ದೂರದಲ್ಲಿದ್ದವರು ನೋಡಿದರು. ಈ ಜಿಲ್ಲೆಯಲ್ಲಿ ವಿಮಾನ ಮುತ್ತಿಗೆಯು ನಡೆದಿರುವುದು ಇದೇ ಮೊದಲು. ಬಸ್ಸಿನಲ್ಲಿ ಪ್ರಯಾಣಮಾಡುತ್ತಿದ್ದ ರಾಯಿಟರ್ ಸುದ್ದಿಗಾರರು ಕೆಲವು ಬಸ್ಸಿನಲ್ಲಿ ಹೋಗುತ್ತಿದ್ದಾಗ, ಎರಡು ಆಘನಾಕಾರ ಡಜನ್ ವಿಮಾನಗಳು ಮೇಲಕ್ಕೆ ಹಾರಿರುವುದನ್ನು ನೋಡಿದೆವೆಂದೂ, ಮಿಷನ್‌ಗನ್‌ಗಳ ಶಬ್ದವನ್ನು ಕೇಳಿದೆವೆಂದೂ, ಜರ್ಮನಿಯ ವಿಮಾನಗಳು ಕೆಳಕ್ಕೆ ಬೀಳುವುದನ್ನು ನೋಡಿದೆವೆಂದೂ, ಜರ್ಮನಿಯ ಒಂದೂ ವಿಮಾನವು ಕೆಳಕ್ಕೆ ಬೀಳುತ್ತಲೇ ಕೆಳಗೆ ನಿಂತಿದ್ದವರು ಜಯಜಯಕಾರ ಮಾಡುತ್ತಿದ್ದರೆಂದೂ ಹೇಳಿದ್ದಾರೆ. ಜರ್ಮನಿಯ ಸುಮಾರು ೨೦-೩೦ ವಿಮಾನಗಳು ಬ್ರಿಟನ್ನಿನ ಪೂರ್ವಭಾಗದಲ್ಲಿದ್ದವು. ಬಹಳ ಎತ್ತರದಲ್ಲಿದ್ದ ವಿಮಾನಗಳು ೫೦೦ ಅಡಿಗಳ ಮಟ್ಟಕ್ಕೆ ಬಂದು ಬಾಂಬುಗಳನ್ನು ಸುರಿಸಿದವು. ಒಂದು ಬಾಂಬು 'ಗ್ಯಾಸ್ ವರ್ಕ್ಸ್' ಹತ್ತಿರವೇ ಬಿದ್ದಿತು. ಆದರೆ ಆಕಳ್ಕೆಗೂ ಅವಕಾಶವಾಗಲಿಲ್ಲ. ಹಕ್ಕದ ರಸ್ತೆಯ ಮೇಲೆ ಬಿದ್ದ ಪ್ರಯುಕ್ತ ರಸ್ತೆಗೆ ಅಡಚಣೆಯಷ್ಟೆತು. ಕ್ಷಣಮಾತ್ರದಲ್ಲಿ ವಿಮಾನ ಧ್ವಂಸಕ ಫಿರಂಗಿಗಳು ಕೆಲಸಮಾಡಲಾರಂಭಿಸಿದುವು. ಬ್ರಿಟನ್ನಿನ ಫೈಟರುಗಳು ಹೋರಾಟನಡೆಸಲು ಮೇಲೆ ಹಾರಿದ ಕೂಡಲೆ ಜರ್ಮನ್ ವಿಮಾನಗಳು ಹಿಮ್ಮೆಟ್ಟಿದವು. ಆದರೆ ಬ್ರಿಟಿಷ್ಕಿನ ಫೈಟರುಗಳು ಅವುಗಳನ್ನು ಹಡೆದು ನಿಲ್ಲಿಸಿ ಮೂರು ವಿಮಾನಗಳನ್ನು ಕೆಳಕ್ಕೆ ಕೆಡವಿದವು.

ವಿಮಾನ ಮುತ್ತಿಗೆಗಳು

ಕಳೆದ 12 ನೆಯ ತಾರೀಖಿನ ದಿವಸ ಇಂಗ್ಲೆಂಡಿನ ಮೇಲೆ ಸುಮಾರು 500 ಜರ್ಮನ್ ವಿಮಾನಗಳು ಮುತ್ತಿಗೆ ನಡೆಸಿದವೆಂದೂ, ರಾತ್ರಿಯೂಕೂಡ ಬ್ರಿಟಿಷ್ ಮತ್ತು ವೆಲ್ಸ್ ದೇಶಗಳಮೇಲೂ, ಇಂಗ್ಲೆಂಡಿನ ಆಗ್ನೇಯ, ನೈರುತ್ಯ ಮತ್ತು ವಾಯುವ್ಯ ದಿಕ್ಕಿಗಳಲ್ಲಿರುವ ಪ್ರದೇಶಗಳ ಮೇಲೂ ಶತ್ರು ವಿಮಾನಗಳು ಬಾಂಬುಗಳನ್ನು ಸುರಿದವೆಂದೂ, ಬ್ರಿಟನ್ನಿನ ಫೈಟರ್ ವಿಮಾನಗಳು ಬಂದ ಕೂಡಲೆ ಹಿಂದಕ್ಕೋಡಿದವೆಂದೂ, ಆ ದಿವಸ ಎಲ್ಲ ಕಡೆಗಳಲ್ಲೂ ಸಡಿಲ ವಾಯುಮುತ್ತಿಗೆಗಳಲ್ಲಿ ಜರ್ಮನಿಯ 49 ವಿಮಾನಗಳನ್ನು ಕೆಡವಲಾಯಿತೆಂದೂ, ಬ್ರಿಟನ್ನಿನಕಡೆ 9 ವಿಮಾನಗಳು ನಷ್ಟವಾದವೆಂದೂ ವಿಮಾನ ಶಾಖೆಯವರು ಪ್ರಕಟಿಸಿದ್ದಾರೆ.

ಶ್ರೀಹೋರ್‌ಬೆಲಿಷಾರವರ ಭಾಷಣ

ಕಳೆದ 12 ನೆಯ ತಾರೀಖಿನ ದಿವಸ ಶ್ರೀ ಹೋರ್ ಬೆಲಿಷಾರವರು ಡೇವನ್‌ಪೋರ್ಟಿನಲ್ಲಿ ಭಾಷಣ ಮಾಡುತ್ತ "ನಾವು ಹಲವು ಕೋಟಿ ಸೈನಿಕರುಳ್ಳ ಸೇನೆಯನ್ನು ಸಿದ್ಧನಾಡಬೇಕೆಂದೂ, ಶತ್ರುಗಳು ಅಕ್ರಮಿಸಿರುವ ದೇಶಗಳಲ್ಲೇ ಅವರನ್ನು ನಾಶಮಾಡಲು ಪ್ರಯತ್ನಮಾಡಬೇಕೆಂದೂ, ಹಾಗೆ ಮಾಡಿದರೇನೇ ಸಂಗ್ರಾಮವನ್ನು ಫಲಪ್ರದವಾಗಿ ಮುಕ್ತಾಯಗೊಳಿಸಬಹುದೆಂದೂ, ಕಿಸ್ಯಸಕ್ತ 100 ದಿವಸಜ್ಜಿಗಳನ್ನು ಸೇನೆಯನ್ನಾದರೂ ಸಿದ್ಧಮಾಡಬೇಕೆಂದೂ, ಇದುವರೆಗಿನ ಅನುಭವಗಳನ್ನೆಲ್ಲಾ ಗನಿಸಿದಲ್ಲಿಟ್ಟುಕೊಂಡು ಅತ್ಯತ್ತಮವಾದ ಶಸ್ತ್ರಾಸ್ತ್ರಗಳನ್ನು ಅವಕ್ಕೆ ಒದಗಿಸಬೇಕೆಂದೂ, ಒಂದೊಂದು ಸೈನ್ಯಕ್ಕೂ ಸ್ವಂತ ವಿಮಾನಬಲವಿರುವಂತೆ ಮಾಡಬೇಕೆಂದೂ" ಹೇಳಿದರು.

ಅಮಾನ್‌ರವರ ಭಾಷಣ.

ಕಾಮನ್ಸ್ ಸಭೆಯಲ್ಲಿ ಕೂಲಿಗಾರ ಪಕ್ಷದ ಸದಸ್ಯರಾದ ಶ್ರೀ ಅಮಾನ್‌ರವರು ಮಾತಾಡುತ್ತ "ವೈಸರಾಯರ ಎಗ್ಸಿಕ್ಯೂಟಿವ್ ಕೌನ್ಸಿಲ್ಲಿಗೆ ನಿಯಮಿಸಿಕೊಳ್ಳಲ್ಪಟ್ಟಿರುವ ನಾಯಕರು ಕೌನ್ಸಿಲ್ಲಿನ ಇತರ ಸಚಿವರಂತೆ ಸಮಾನ ಅಧಿಕಾರವನ್ನು ಪಡೆಯುವರೆಂಬುದು ವ್ಯಕ್ತಪಟ್ಟಿಸಿದೆಂದೂ, ಸಮಾನಸ್ಥಂಧರಂತೆ ವರ್ತಿಸುವ ಅವಕಾಶವು ಈಗ ಭಾರತೀಯರಿಗೆ ಲಭ್ಯವಾಗಿರುವುದೆಂದೂ, ಅವರು ಈಗ ಅವಕಾಶವನ್ನು ಕಳೆದುಕೊಂಡರೆ ಮುಂದೆ ದೊರೆಯಲಾರದೆಂದೂ, ಈ ಅವಕಾಶವನ್ನು ಸದುಪಯೋಗಪಡಿಸಿಕೊಳ್ಳುವ ಜವಾಬ್ದಾರಿಯು ಭಾರತೀಯರದ್ದೇ ಆವಲಂಬಿಸಿರುವುದೆಂದೂ, ಸಂಗ್ರಾಮದಲ್ಲಿ ಬ್ರಿಟನ್ನಿಗೆ ಸೋಲಾದರೆ ಭಾರತಮುಂತಕ್ಕೆ ಇರುವ ಸ್ವಾತಂತ್ರ್ಯವು ಆರೆಯು ಮಣ್ಣುಗೂಡುವುದೆಂದೂ, ಭಾರತವು ಕನ್ನ ಜವಾಬ್ದಾರಿಯನ್ನು ಹೊತ್ತು ಕೊಳ್ಳಬೇಕೆಂದು ಕೇಳುವ ಹಕ್ಕು ಬ್ರಿಟಿಷರಿಗೆ ಇರುವುದೆಂದೂ" ಸೂಚಿಸಿದರು.

ಜರ್ಮನಿಗೆ ಭಯಂಕರ ನಷ್ಟ

ಬ್ರಿಟನ್ನಿನ ಆರ್. ಎ. ಎಫ್. ವಿಮಾನಗಳು ಬುಧವಾರ ರಾತ್ರಿ ಜೊರ್ಡೋ ಹತ್ತಿರ ರಾಂಡಿ ಎಂಬ ಊರಿನಲ್ಲಿರುವ ಎಣ್ಣೆಯನ್ನು ಶುದ್ಧ ಮಾಡುವ ಯಂತ್ರಗಳ ಮೇಲೂ, ಎಣ್ಣೆಯನ್ನು ಶೇಖರಿಸಿಟ್ಟಿರುವ ಉಗ್ರಾಣಗಳ ಮೇಲೂ ವಾಯುಮುತ್ತಿಗೆಗಳನ್ನು ನಡೆಸಿದುದರಿಂದ ಜರ್ಮನರಿಗೆ ಅಪಾರ ನಷ್ಟಸಂಭವಿಸಿತೆಂದು ತಿಳಿದು ಬಂದಿದೆ ಜರ್ಮನಿಗೆ ಈ ಪ್ರದೇಶವು ಇಂಧನವಂದಿನಿಂದ ಇದರಿಂದ ಮಹಾ ಪ್ರಯೋಜನಗಳನ್ನು ಪಡೆಯುತ್ತಿತ್ತೆಂದೂ, ಈ ಮುತ್ತಿಗೆಯಿಂದ ಯಂತ್ರಾಗಾರಗಳಲ್ಲಿಯೂ ಇಂಧನಾಗಾರಗಳಲ್ಲಿ ಅಪಾರ ನಷ್ಟವಾಗಿರುವುದೆಂದೂ ತಿಳಿಸಲಾಗಿದೆ. ಬಾಂಬುಗಳನ್ನು ಸುರಿಸಿದ ಪ್ರಯುಕ್ತ ಬೆಂಕಿಯು ಹತ್ತಿಕೊಂಡು ಎಣ್ಣೆಯು ಮೇಲಕ್ಕೆ ಚಿಮ್ಮುತ್ತಿದ್ದನ್ನು ಬಹಳ ದೂರದವರೆಗೆ ಕಾಣಬರುತ್ತಿತ್ತು.

ಇಂಗ್ಲೆಂಡಿಗೆ ದಿಗ್ಬಂಧನ ಮಾಡಲು ಸಾಧ್ಯವಿಲ್ಲ.

ಯುದ್ಧಾರಂಭವಾಗಿ 11 ತಿಂಗಳುಗಳಾದವು ಅಂದಿನಿಂದ ಇಲ್ಲಿಯವರೆಗೆ ಜರ್ಮನಿಯು ತನ್ನ ಸರ್ವಶಕ್ತಿಯನ್ನೂ ಉಪಯೋಗಿಸಿ ಬ್ರಿಟನ್ನಿಗೆ ಒಂದು ಎಲ್ಲ ಹಡಗುಗಳನ್ನು ತಡೆದು ಮುಳುಗಿಸುವ ಪ್ರಯತ್ನಮಾಡಿದರೂ ಯುದ್ಧಕ್ಕೆ ಮುಂಚೆ ಬ್ರಿಟಿಷ್‌ಬಂದರುಗಳಿಗೆ ಯಾವ ರೀತಿ ಹಡಗುಗಳು ಬರುತ್ತಿದ್ದವೋ ಇಂದಿನವರೆಗೂ ಹಾಗೆಯೇ ಬರುತ್ತವೆ. ಒಂದು ದಿನವಾದರೂ ಹಡಗುಗಳು ಲಂಡನ್ ಬಂದರಿಗೆ ಬಾರದೆ ನಿಂತಿಲ್ಲ ವಿಶ್ವದ ಎಲ್ಲ ಕಡೆಗಳಿಂದಲೂ ಹಡಗುಗಳು ಆಹಾರಪದಾರ್ಥ ಮತ್ತು ಇತರ ಅನಿವಾರ್ಯ ವಸ್ತುಗಳನ್ನು ಹೊತ್ತು ಬ್ರಿಟಿಷ್ ರಕ್ಷಣಾಪಡೆಗಳ ಸಹಾಯದಿಂದ ಲಂಡನ್‌ಬಂದರಿಗೆ ಬರುತ್ತವೆ ಮತ್ತು ಹೊರಗಿನಿಂದ ತಂದ ಸಾಮಾನು ಗಳೆನ್ನೆಲ್ಲ ಅಲ್ಲಿ ಇಳಿಸಿ ಲಂಡನ್ನಿನಿಂದ ಹೊರಗೆ ಹೋಗ ಬೇಕಾದ ವಸ್ತುಗಳನ್ನು ಹೊತ್ತುಕೊಂಡು ಹೋಗುತ್ತವೆ ಈ ಚಟುವಟಿಕೆಯನ್ನು ತಡೆಯಲು ಶತ್ರುಗಳು ಮಾಡುತ್ತಿರುವ ಪ್ರಯತ್ನಗಳೆಲ್ಲಾದೂ ಫಲಕಾರಿಯಾಗಿಲ್ಲ.

ಜಪಾನಿನಲ್ಲಿ ಬ್ರಿಟಿಷ್ ವಿರುದ್ಧ ಪ್ರದರ್ಶನ

ಕಳೆದ 12 ನೆಯ ತಾರೀಖಿನದಿವಸ ಸುಮಾರು 1 ಲಕ್ಷ ಜಪಾನರು ಟೋಕಿಯೋನಗರದಲ್ಲಿ ಸಭೆ ಸೇರಿದ್ದರು. ಬ್ರಿಟಿಷ್ ವಿರುದ್ಧಘೋಷಣ ಮಾಡುತ್ತ ಬಾವುಟಗಳನ್ನು ಎಲ್ಲ ಕಡೆಯೂ ಪ್ರದರ್ಶಿಸಿದರು. ಜಪಾನ್ ಧ್ವಜದ ಎರಡು ಕಡೆಗಳಲ್ಲೂ ಇಟಲಿ ಮತ್ತು ಜರ್ಮನಿ ಧ್ವಜಗಳನ್ನು ಹಾಯಿಸಿದರು. ಪಾರ್ಕಿನ ಸುತ್ತ ಪೋಲೀಸ್ ಪಡೆಯು ಹಾಜರಿದ್ದು ಸಿದ್ಧವಿತ್ತು. ಕಾಪಾಡಿತು. ಸಭೆಯಲ್ಲಿ ಬ್ರಿಟಿಷ್ ವಿರುದ್ಧವಾದ 3 ನಿರ್ಣಯಗಳಾದವು. ಬ್ರಿಟಿಷ್ ರಾಯಭಾರಿ ಕಚೇರಿ ಬಳಿಗೆ ಬರುವ ಮಾರ್ಗದಲ್ಲೆಲ್ಲಾ ವಿಶೇಷ ಕಾವಲುಪಡೆಗಳನ್ನು ನಿಲ್ಲಿಸಲಾಗಿತ್ತು. ಈ ಕೂಟವಲ್ಲಿ ಸೇರಿದ್ದವರೆಲ್ಲ ಬ್ರಿಟಿಷ್ ರಾಯಭಾರಿ ಕಚೇರಿಯ ಕಡೆ ಹೊರಡುವ ಪ್ರಯತ್ನಮಾಡದೆ ಕಾಂತರೀತಿಯಲ್ಲಿ ಚದುರಿದರು. ಅಲ್ಲಿರುವ ಬ್ರಿಟಿಷ್ ರಾಯಭಾರ ಕಚೇರಿಯಲ್ಲಿ ಕೆಲಸಮಾಡುತ್ತಿರುವ ಜಪಾನ್ ನೌಕರರೆಲ್ಲ ಕೆಲಸಕ್ಕೆ ರಾಜೀನಾಮೆ ಕೊಡಬೇಕೆಂದು ವೇಕ ಭಕ್ತರ ಸಂಸ್ಥೆಗಳು ಒತ್ತಾಯಪಡಿಸುತ್ತವೆ. ಅಲ್ಲಿಯ ಬ್ರಿಟಿಷ್ ನಿವಾಸಿಗಳ ಗೃಹಗಳಲ್ಲಿ ಆಕರಮಾಡುತ್ತಿರುವ ಜಪಾನರೆಲ್ಲರೂ ಕೆಲಸವನ್ನು ಬಿಟ್ಟುಬಿಡಬೇಕೆಂದೂ ಇಲ್ಲ ವಿದ್ದಕ್ಕೆ ಮರಣವು ಸಿದ್ಧವೆಂದೂ ಹೇಳಿಬರಲಾಗಿದೆ.

ಎಚ್ಚರಿಕೆ!

ಸನಿಹದೋಳ್ ಮೈತ್ಯುವಿರ್ಪುದು।
ದಿನಗಳನೆಣಿಸುತ್ತಮಿರ್ಪವಿರುಃಂ ಸಗಲ॥
ತನುವಳದು ಪೋಗದಿರದೆಲೆ
ಮನುಜನೆ! ಮುಕ್ತಿಯನೆ ಬಯಸಿ ಜಾಗೃತನಾಗೈ ॥೧॥

ಸ್ಥಿರಮಲ್ಲದಿಕಾರಬಲಂ।
ಸ್ಥಿರಮೆನಿಸದು ಹರಯ ಮರ್ತ್ಯಮಸ್ಥಿರವೆ ಂದುಂ॥
ಸ್ಥಿರಮೆಂ ದಾತ್ಮಪುತ್ರರ್
ಧರೆಯೊಳ್ ಸನ್ಮಾರ್ಗ ಕೀರ್ತಿಗಳೆ ಸ್ಥಿರಮೆತ್ತೆ ॥೩॥

ನಚ್ಚದಿರೀ ಸಂಸಾರವ
ನಚ್ಚದಿರೈ ತನುವ ಧನಮುಮಂ ಧಾನ್ಯಮುಮಂ॥
ನಚ್ಚದೆ ಸೌಖ್ಯಂಗಳ ನೀ
ಸಚ್ಚಿತ್ಸುಖಗುರುನ ಭಜಿಸಿ ಸಖದಿಂ ಬಾಳ್ವೈ ॥೩॥

ಜರೆಯುಂ ಸುಕ್ಕಿವ ಮೈಯ್ಯ
ನೆರೆಯೆ ಬಲ್ಪ್ರಾಣ ಕೂದಲಿಂ ದುರ್ಬಲದಿಂ
ಕರಕರಗಿ ಪೈ ಪ ತನವ
ಸ್ಥಿರಮೆನಕ ನಂಬಿಸದೆ ಜಾಗೃತನಾಗ್ಯ

ಪುಟ್ಟಿದವಳ್ಗಳ ವೆ ಸಿಲ್ಲರ್
ಕಟ್ಟಿಚ್ಚರಿಮಿನಿಸಿ ನ ವರ್ಸ ದವರೆಲ್ಲರ್
ಬಟ್ಟಿಲಯಲೆಸಿಪ್ಪವೆಲ್ಲ
ಎಟ್ಟತನಂ ಬಿಟ್ಟು ನಂಬು ಗುರುವರ್ಣ ಕನ ॥೫

ಆರ್ ಎಂ ಮಲ್ಲಿಕಾರ್ಜುನಾರಾಧ್ಯ ಶಿಷ್ಯರೂರು

ಶ್ರೀಜಗದ್ಗುರು ವಿಶ್ವಾರಾಧ್ಯ ಫ್ರೀ ಬೋರ್ಡಿಂಗ್
ಕೊಂದಗೂಳ
ವಾರ್ಷಿಕ ಸಭೆ

ಕೊಂಧಗ್ಯಾ ನವರಲ್ಲಿ ಶ್ರೀ ವಿಶ್ವ ವ ಪ್ರಭೆತಿಯಂತೆ ತಾ|| ೧೬ ೧೮ ಶುಕ್ರವಾಂ ಸಾಯಂಕಾಲ ಸಭೆಯು ಸರಿಸಿತ ವಾದಲ ವ ಗಳಸೂಚಕವಾದ ಪಂಚಾಚಾರ್ಯರ ಭಜನಾಯಿ ಮಿತು ಆವೇಲೆ ವೇಯು ಯೀ ದರ್ಗಾರ್ಥ ಆಸ್ಥಾನ ವಿದ್ವಾನ್ ಶಂಕರ ಶಾಸ್ತ್ರಿಗಳವರು ಸಭೆಯು ಅಭ್ಯುಕ್ಷಸ್ಥಾನವನ್ನು ಸ್ವೀಕರಿಸ ಬೇಕಾಗಿ ಸಂತ್ಯಯ ಚೀರ್‌ಮನ್ನರಾದ ಶ್ರೀಯುತ ವಕೀರ ರಪ್ಪ ರಾಮಪ್ಪರಂಯರ ಇವರು ಸೂಚನೆಯನ್ನು ಕೆಲರು ಅವಕ್ಕೆ ಶ್ರೀಯುತ ರಾಮಪ್ಪ ಪೂಜೇರ ಮತ್ತು ಲಕ್ಷ್ಮೀಶ್ವರದ ವೇಗೆ ಗುರುಸಿದ್ಧಯ್ಯನವರೆ ಅಲೀಸುರು ಬಿ ಎ ಎಲ್ ಎಲ್ ಬಿ ವಕೀಲರು ಅನುಮೋದಿಸಿದರು ಆ ಮೇಲೆ ವೇಗೆ ಸಂಡಿತರು ಅಭ್ಯಕ್ಷಸ್ಥಾನವನ್ನು ಅಲಂಕರಿಸಿದರು ಒಲಿಕ ಲಕ್ಷ್ಮೇಶ್ವರದ ವಕೀಲರು ಶ್ರೀ ಕುಂದಗೋಳ ಪಂಚಗ್ರಹ ಹಿರೇಮಠದ ಶ್ರೀ ಗುರುಪಾದಶಿವಾಚಾರ್ಯಸ್ವಾಮಿಗಳಿಂದ ಸ್ಥಾಪಿಸಲ್ಪಟ್ಟ ಈ ಬೋರ್ಡಿಂಗು ಉತ್ತರೋತ್ತರ ಆಭಿವೃದ್ಧಿಯಾಗುವದಕ್ಕೆ ಕೆಲವು ಉಪಾಯಗಳನ್ನು ಹೇಳಿ ಸಭಿಕರನ್ನು ಆನಂದಗೊಳಿಸಿದರು

ಆನಂತರ ಶ್ರೀಯುತ ಶಿವನಗೌಡರು ಪಾಟೀಲರು, ಸುಪ್ರವಾಯಿ ಝುರ ತಾಲೂಕ್ ಕುಂದಗೋಳ ಇವರು ಮನುಷ್ಯನ ಜನ್ಮವು ಎಲ್ಲ ಜೀವರಾಶಿಗಳಲ್ಲಿ ಶ್ರೇಷ್ಠವಾದುದೆಂದೂ ಈ ಮನುಷ್ಯ ಜನ್ಮಕ್ಕೆ ಶ್ರೀಷ್ಠತೆಯು ಜ್ಞಾನಾಧಿಕ್ಯದಿಂದ ಬಂದುದಾಗಿದೆಯೆಂದೂ ಈ ಜ್ಞಾನದಾನವು ಈ ಸಂಸ್ಥೆಯಲ್ಲಿ ನಿರಿಷ್ಪಪಾಗಿ ನಡೆಯುವದಕ್ಕೆ ಎಲ್ಲರೂ ತನುಮನೋಧನಗಳಿಂದ ಸಹಾಯಮಾಡಬೇಕೆಂದೂ ಭಾಷಣಮಾಡಿದರು ತರುವಾಯ ವೇಗೆ ಪಿ ಆಯ್ ಹಿರೇಮಠ ವಕೀಲರು ವಿದ್ಯಾರ್ಥಿಗಳು ದೊಡ್ಡವರಲ್ಲಿ ನೆಯವಿನಯಾದಿ ಸಮ್ಮಣಗಳನ್ನು ಪುಣ್ಯಲ್ಲಿ ಭಯ ಭಕ್ತಿಯಿಂದಲೂ ಮರ್ತಾಚಾರ ಗುರುಭಕ್ತಿ ಸೌಶಾಲ್ಯಾದಿ ಗುಣಗಳಿಂದಲೂ ವರ್ತಿಸಬೇಕೆಂದು ಬೋಧಿಸಿದ್ದಲ್ಲದೆ ಈ ಸಂಸ್ಥೆಯವರ ಏಳಿಗೆಯ್ಯದಿಂದಿದ್ದು ಸಂಸ್ಥೆಯ ಚಿರಕಾಲ ಸ್ಥಾಯಿಯಾಗಿರುವಂತೆ ಮಾಡುವದು ಆವರ ಕರ್ತವ್ಯವೆಂದು ಬೋಧಿಸಿದರು ಆವೇಲೆ ಸಂಸ್ಥೆಯ ಸೆಕ್ರೆಟರಿಯವರಾದ ನಂ। ಶಿವಯೋಗಯ್ಯ ಹಿರೇಮಠರು ಇವರು ಸಂಸ್ಥೆಯ ಜಮಾಖರ್ಚಿನ ಸನೇ ವರ್ಷದ ರಿಪೋರ್ಟನ್ನು ಒದಿ ಹೇಳಿದರು ಅನಂತರ ಅಧ್ಯಕ್ಷರು ವಿದ್ಯಾರ್ಥಿಗಳನ್ನುದ್ದೇಶಿಸಿ ಸ್ವದರ್ಮವನ್ನು ಬಿಡದೆ ವಿದ್ಯಾಜ್ಞಾನೆಯನ್ನು ಮಾಡಬೇಕೆಂದು ಬೋಧಿಸಿ ತಮ್ಮ ಭಾಷಣವನ್ನು ಸಮಾಪ್ತಿಗೊಳಿಸಿದರು ತರುವಾಯ ಶ್ರೀ ಜ್ಞಾನ್ಯರು ಪಂಚಾಚಾರ್ಯರ ಜಯಘೋಷಮೊಡನೆ ಸಭೆಯು ವಿಸರ್ಜಿಸಲ್ಪಟ್ಟಿತು

ಓರ್ವ ಪ್ರತ್ಯಕ್ಷದರ್ಶಿ

ನುಹಾತ್ಮರ ನಿಧನ

ಕುಂದಗೋಳ ಪಂಚಗ್ರಹ ಹಿರೇಮಠದ ಶ್ರೀಷಟ್ಟಾ ದ್ಯಕ್ಷಸ್ವಾಮಿಗಳವರು ಈ ತಿಂಗಳ ೧೫ನೆಯ ತಾರೀಖಿನ ದಿವಸ ಶಿವ ದೀನರಾದರೆಂಬ ವಿಷಯವನ್ನು ಬರಯಲೂ ವಿಷಾದವೆನಿಸುತ್ತದೆ ಇವರು ಮಹಾ ಸಾತ್ವಿಕ ಸ್ವಭಾವದವರೂ, ಜಿತೇಂದ್ರಿಯರೂ, ಪೂಜಾಲೋಲರೂ, ದಯಾಳುಗಳೂ ನಿರ್ಮಲಾತ್ಮಕರೂ ಆಗಿದ್ದರೆ ಬೆಳಿಗ್ಗೆ ೧೧ ಘಂಟೆಯಿಂದ ಸಾಯಂಕಾಲ ೬ ಘಂಟೆಯವರೆಗೆ ಶಿವಪೂಜೆಯನ್ನು ಬಹಳ ಶ್ರದ್ಧೆಯಿಂದ ಮಾಡುತ್ತಿದ್ದರು ದೇಹವಿರುವವರೆಗೂ ಒಂದೇಹೊತ್ತು ಪ್ರಸಾದವನ್ನು ಸ್ವೀಕರಿಸುತ್ತಿದ್ದರ ಅಂತ್ಯಸಮಯದಲ್ಲಿ ಈ ಮಹಾತ್ಮರಿಗೆ ೨೫ ವರ್ಷಗಳಾಗಿದ್ದವು ಇಂತಹ ವ್ರತನಿಷ್ಠರು ಈ ಕಾಲದಲ್ಲಿ ದೊರಯುವುದೇ ದುರ್ಲಭವೆಂದು ಹೇಳದರೆ ಅತಿಶಯೋಕ್ತಿಯೆನಿಸದು ಇವರ ಕಾಲದಲ್ಲಿ ಕುಂದಗೋಳವರಿಗೆ ಬಹು ಪ್ರಸಿದ್ಧಿಗೆ ಬಂದಿತು ಇಂತಹ ಮಹಾತ್ಮರನ್ನು ಅಕಸ್ಮಿಕಾಂಡುದು ಆ ಮರದ ಶಿಷ್ಯ ಮಂಡಳಿಯ ದುರ್ದೈವವೆಂದೇ ಹೇಳಬೇಕಾಗಿದೆ ಶ್ರೀ ಜಗದೀಶ್ವರನು ಶ್ರೀಗಳವರ ಆತ್ಮಕ್ಕೆ ಶಾಂತಿಯನ್ನೀಯಲೆಂದು ಪ್ರಾರ್ಥಿಸುವ

ಮರದ ಶಿಷ್ಯ

ಶ್ರೀಜಗದ್ಗುರು ಪಂಚಾಚಾರ್ಯೇಭ್ಯೋ ನಮಃ

ಶ್ರೀ ಕಾಶೀಜಗದ್ಗುರು ವಿಶ್ವಾರಾಧ್ಯಗುರುಕುಲದಲ್ಲಿ ದುಃಖಪ್ರದರ್ಶನ

ಶ್ರೀಶೈಲಜಗದ್ಗುರು ನಾಗಲೂಟಿ ಬಿಕ್ಷಾವರ್ತಿ ಶಿವಾಚಾರ್ಯ ಮಹಾಸ್ವಾಮಿಗಳವರು ಕಳೆದ ಆಷಾಢ ಬಹುಳ ೧೩ ಬುಧವಾರ ಶಿವೈಕ್ಯರಾದ ವಿಷಯವು ವೀರಶೈವ ರೆಲ್ಲರಿಗೂ ವಿಷಾದಾಸ್ಪದವಾಗಿರುವದು ಸದರಿ ಜಗದ್ಗುರುಗಳವರು ಶಿವಪೂಜಾಧುರೀಣರೂ, ಜಿತೇಂದ್ರಿಯರೂ, ಶಾಂತ್ಯಾದಿಗುಣಾಭರಣಭೂಷಿತರೂ, ಪರಮದಯಾಳುಗಳೂ ಆಗಿದ್ದರ

ಶ್ರೀ ಜಗದ್ಗುರುಗಳವರು ತಮ್ಮ ಜೀವಿತಕಾಲದಲ್ಲಿಯೇ ತಮ್ಮ ಪೀಠಕ್ಕೆ ಪಂಡಿತರಾವ ಮುದೇನೂರು ಬೃಹದ್ವಿದ್ವಾಧ್ಯಕ್ಷ ಶ್ರೀ ವಾಗೀಶಶಿವಾಚಾರ್ಯರನ್ನು ಉತ್ತರಾಧಿಕಾರಿಗಳನ್ನಾಗಿ ಮಾಡಿ ವೀರಶೈವಮತಕ್ಕೆ ಮಹೋಪಕಾರವನ್ನು ಮಾಡಿದರು ಇಂತಹ ಮಹೋಪಕಾರಿಗಳಾದ ಶ್ರೀ ಜಗದ್ಗುರು ನಾಗಲೂಟಿ ಬಿಕ್ಷಾವರ್ತಿ ಶಿವಾಚಾರ್ಯ ಮಹಾಸ್ವಾಮಿಗಳವರ ವಿಯೋಗದಿಂದುಂಟಾದ ತಮ್ಮ ಸಂತಾಪವನ್ನು ಶ್ರೀ ಕಾಶೀಜಗದ್ಗುರು ವಿಶ್ವಾರಾಧ್ಯ ಗುರುಕುಲ ನಿವಾಸಿಗಳು ತಾ|| ೨೮ ೪೦ ನೇ ಶುಕ್ರವಾರ ದುಃಖಸಭೆಯನ್ನು ಮಾಡಿ ಪ್ರಕಟಿಸಿದರು

ಪ್ರಥಮತಃ ಸಭೆಯಲ್ಲಿ ಆಹಂಮದಪುರದ ಪಬ್ಲಿಕ್ ಧ್ಯಕ್ಷರು ಶ್ರೀ ಜಗದ್ಗುರುಗಳಲ್ಲಿದ್ದ ಸೌಮ್ಯಸ್ವಭಾವವನ್ನೂ ಮತ್ತು ಪರಮ ದಯಾಳುತ್ವವನ್ನೂ ಕುರಿತು ಭಾಷಣ ಮಾಡಿದರು ತರುವಾಯ ರಾವಬಹದ್ದೂರ ವೇಗೆ ಸದಾಶಿವಶಾಸ್ತ್ರಿ ಕಾವ್ಯತೀರ್ಥ ಇವರು ಶ್ರೀ ಜಗದ್ಗುರುಗಳಲ್ಲಿದ್ದ ಆತ್ಮಸಂಯಮನ, ಕಾಂತಿ, ಪರೋಪಕಾರಗಳನ್ನು ಕುರಿತು ಭಾಷಣ ಮಾಡಿದರು ಬಳಿಕ ಆಯರೂಡಿ ಬೃಹನ್ಮಠಾಧ್ಯಕ್ಷ ಶ್ರೀಶಿವಾನಂದಶಿವಾಚಾರ್ಯರ ವೇಗೆ ಸಿದ್ಧಲಿಂಗಶರ್ಮಾ ಬಂಕಾಪುರ, ವೇಗೆ ವೀರಭದ್ರ ಶರ್ಮಾ ಬಿಚಕುಂದಿ ಇವರೇ ಮೊದಲಾದವರು ಶ್ರೀ ಜಗದ್ಗುರುಗಳ ಗುಣಾನುವಾದವನ್ನು ಮಾಡಿದರು ತದನಂತರ ಶ್ರೀ ಜಗದ್ಗುರುಗಳವರ ಆತ್ಮಕ್ಕೆ ಶಾಶ್ವತಶಾಂತಿ ಸಮಾಧಾನವುಂಟಾಗಬೇಲೆಂದು ಶ್ರೀ ಜಗದ್ಗುರು ಪಂಡಿತ ರಾಧ್ಯ ಶಿವಾಚಾರ್ಯರನ್ನೂ ಜಗದ್ಗುರುಗಳ ಶ್ರೀ ನಿ ಮಲ್ಲಿಕಾರ್ಜುನಮಹಾದೇವರನ್ನೂ ಪ್ರಾರ್ಥಿಸಿ ಸಭೆಯ ಮುಕ್ತಾಯವಾಯಿತು

ಓರ್ವ ಗುರುಕುಲನಿವಾಸಿ

ಶ್ರೀ ಸಿದ್ಧರಾಮಯ್ಯನವರ ಸಮಾಜಸೇವೆ
ಹುಮನಾಬಾದ

ನಿಜಾಂ ಸ್ಟೇಟ್ ಹುಮನಾಬಾದದಲ್ಲಿರುವ ಶ್ರೀ ಸಿದ್ಧರಾಮಯ್ಯನವರು ಸದಾ ಧರ್ಮಸುಧಾರಣೆಗಾ ತಮ್ಮ ಶರೀರವನ್ನು ಸವಿಸುತ್ತಿರುವ ವಿಷಯವು ಆ ವ್ಯಾಪಾರವರಿಗೆಲ್ಲಾ ತಿಳಿದೆ ಆದೆ ಆಚಾರ್ಯರ ತ ವನ್ನಂತೂ ಇವರು ವಿಶೇಷವಾಗಿ ಪ್ರಚಾರ ಮಾಡುತ್ತ ದ್ದಾರೆ ಪ್ರತಿವರ್ಷವೂ ಜಗದ್ಗುರುಗಳವರ ಜಯಂತಿ ಳನ್ನು ವೈಭವದಿಂದ ನೆರವೇರಿಸುತ್ತಲಿದ್ದಾರೆ ಇಂತ ಆಚಾರ್ಯ ಭಕ್ತರು ದೊರೆಯುವುದೇ ದುರ್ಲಭವೆಂ ಹೇಳಬಹುದಾಗಿದೆ ಈ ವರ್ಷ ವೈಶಾಖ ಶುಗಿ ದಿವ ತಮ್ಮ ಪುತ್ರನಿಗೆ ೫ ಜನ ಪಬ್ಲಾಧಿಕಾರಿಗಳ ಸುಮಕ್ಷ ವಿವಾಹವನ್ನು ವಿಧ್ಯುಕ್ತವಾಗಿ ನೆರವೇರಿಸಿದರು ಆ ಲಕ್ಕೆ ಸಭೆಯನ್ನು ಕೂಡಿಸಿದರು ವಕೀಲರ ಮತ್ತ ಸುಂಡಿತರ ಭಾಷಣಗಳಾದವು ಜ್ಯೇಷ್ಠಮಾಸದಲ್ಲಿ ಕೇ ರಸಂಸ್ಕಾರದ ಸರ್ವಾದಿಕಾರಿಗಳು ಇಲ್ಲಿಗೆ ಬಂದಾ ಇವರ ಸೀತಾಭಿಮಾನವನ್ನ ಕಂಡು ಹೊಗಳುವನ್ನು ದಂ ಹಾಲಿಸಿದರು ಈ ವ್ಯಾಂತದಲ್ಲಿ ಆಚಾರ್ಯ ಸೀತಾ ಮಾನವು ಇವರ ಮೂಲಕ ಹಬ್ಬುತ್ತಲಿರುವುದು ಸಂತೆ ಪಕರನಾಗಿದೆ ಜಗದ್ಗುರುಗಳು ಇವರಿಗೆ ಉತ್ತರೋ ತ್ತರ ಯಶಸ್ಸನ್ನು ಅನುಗ್ರಹಿಸಲೆಂದು ಪ್ರಾರ್ಥಿಸುವ,

ಸೆಕ್ರೆಟರಿ ವಿ

ಶಿಷ್ಯರ ಮನೆಗಳ ರಿಜಿಸ್ಟರ್ ಬುಕ್

ಮಂತಪರ್ಯಂತವು ಶಕ್ತಿಯೊಂದು ಗುರುವರ್ಗದ ಮತ್ತೆಕ್ಕೆ ಶಿಷ್ಯರ ಮನೆಗಳಿರುತ್ತಿದ್ದು, ಆ ಮಹಾಧಿಕಾರಿಗಳು ಕ್ಕೂ ಹತ್ತು ವರ್ಷಕ್ಕೊಂ ಒಂದಾವರೆ ಹೋಗಿ ಶಿಷ್ಯರಿಂದ ಕಾಣಿಕೆಯನ್ನು ತೆಗೆದುಕೊಂಡು ಬರುತ್ತಿರುವರು ಆದರೆ ಇವರು ತಮ್ಮ ಗುರವರ್ಯಸಮಸರಿಸಿ ಶಿಷ್ಯರ ಯಾವತ್ತು ವಿಷಯಗಳನ್ನು ಬರೆದುಕೊಳ್ಳದೆ ಕಾಣಿಕೆಯನ್ನು ಮಾತ್ರ ತೆಗೆದುಕೊಂಡು ಹೋಗಿಬಿಡುವರು ಈ ಅವ್ಯವಸ್ಥೆಯಿಂದ ಅನೇಕ ಮಹಪುರುಷರಿಗೆ ತಮ್ಮ ಶಿಷ್ಯರ ಮನೆಗಳೇ ಗೊತ್ತಿಲ್ಲದ ಹಾಗಿದೆ ಇದನ್ನು ದೂರಮಾಡುವುದಕ್ಕೋಸ್ಕರ ಮೇಲ್ಕಂಡ ಪುಸ್ತಕವನ್ನು ಹೊಸತಾಗಿ ಮುದ್ರಿಸಲಾಗಿದ್ದಲ್ಲಿ ಇದರಲ್ಲಿ ಬರೆಯುವ ವಿಷಯಗಳ ನಿಬರವಣೆ ಹೇಗೆಂಬ ಸೂಚನೆಯನ್ನು ಪಡೆಗೆಗಿಸಿರುವುದಲ್ಲದೆ ಸುಂದರವಾದ ಮತ್ತು ಭದ್ರವಾದ ಬೈಂಡನ್ನು ಕೂಡಿಸಿದೆ.

ಬೆಲೆ ೧ ರೂಪಾಯಿ

ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಶಾಸ್ತ್ರೋಕ್ತ ದಿವ್ಯೌಷಧಗಳು.

ಶ್ರೀ ಜಗದ್ಗುರು ಕೇದಾರಪಂಡಿತಾರಾಧ್ಯರ ರಸಾಯನ ಶಾಲೆಯಲ್ಲಿ ತಯಾರಾಗಿರತಕ್ಕ ರಸಾಯನ ಔಷಧಿಗಳು ಕಡಿ ಸುಲಭಕ್ರಯದಲ್ಲಿ ದೊರೆಯುವುವು

ಔಷಧಿ ಹೆಸರು	ತೊಲಿ	ಮೂಲ್ಯ
ಶಭ್ರಭಸ್ಮ	೧	೩—೦—೦
ಮುಕ್ತಾಭಸ್ಮ	೧	೪೦—೦—೦
ಪ್ರವಾಲಭಸ್ಮ	೧	೦—೮—೦
ವೈಣಾಮಕರಧ್ವಜ	೧	೩೦—೦—೦
ವೈಣಾಚಂದ್ರೋದಯ	೧	೧೦—೦—೦
,, ೨ ನೇ ನಂಬರ್	೧	೪—೦—೦
ಸಿಸಿಂಧೂರ	೧	೨—೦—೦
ಮಲ್ಲಸಿಂಧೂರ	೧	೪—೦—೦
ಸಾಲಸಿಂಧೂರ	೧	೪—೦—೦
ಲಾಸಿಂಧೂರ	೧	೪—೦—೦
ವೈಣಾವಂಗ	೧	೩—೦—೦
ಶ್ರಿವಂಗ	೧	೧—೦—೦

ಭಸ್ಮಗಳು

ವೈಣಾಭಸ್ಮ	೧	೪೦—೦—೦
ಜಿತಭಸ್ಮ	೧	೪—೦—೦
ಸಾಮ್ರಭಸ್ಮ	೧	೦—೮—೦
ಮೋಹಭಸ್ಮ	೧	೦—೧೩—೦
ಸಂಗಭಸ್ಮ	೧	೦—೮—೦
ನಾಗಭಸ್ಮ	೧	೦—೮—೦
ತ್ಯಾಭಸ್ಮ	೧	೦—೮—೦
ಂಜಿಭಸ್ಮ	೧	೦—೮—೦
ಪ್ರಭಸ್ಮ	೧	೦—೮—೦
ುಂಡೂರಭಸ್ಮ	೧	೦—೮—೦
ವೈಣಾಮೃತಿಕಾಭಸ್ಮ	೧	೦—೧೩—೦

ನೋಟ್—ಈ ಔಷಧಾಲಯದಲ್ಲಿ ಸರ್ವಪ್ರಕಾರದ ೀಜ, ಚೂರ್ಣ, ಗುಟಿಕಾ, ತೈಲ, ಘೃತ, ಗುಗ್ಗುಳಾದಿ ಔಷಧಿಗಳು ಸರ್ವದೋಗಗಳಿಗೆ ದೊರೆಯುವುವು.

ವಿಳಾಸ—ಮ್ಯಾನೇಜರ,

ಆಯುರ್ವೇದ ರಸಾಯನಶಾಲಾ,

ಸೋಸ್ವ ಪಿಒಮಳ, ಜಿಲ್ಲಾ, ಗಢವಾಲ್ ಯು.ಪಿ.

ವೈದಿಕ ಶಿವಪೂಜಾವಿಧಿ.

ವೀರಶೈವರಿಗೆ ಮುಖ್ಯವಾಗಿ ಬೇಕಾಗಿರುವ ಈ ಮೇಲ್ಕಂಡ ಗ್ರಂಥವು ನೇಪಾಳ ಪೂಜ್ಯ ಶ್ರೀಕಾಶೀನಾಥಶಾಸ್ತ್ರಿಗಳವರಿಂದ ವೈದಿಕಸಂಪ್ರದಾಯಾನುಸಾರವಾಗಿ ವಿರಚಿತವಾಗಿದ್ದು, ಶ್ರೀ ಪಂಚಾಚಾರ್ಯ ವಿದ್ಯುನ್ಮುದ್ರಣಾಲಯದಲ್ಲಿ ಬಹು ಮುದ್ದಾಗಿ ಮುದ್ರಿತವಾಗಿದೆ ಇಲ್ಲಿಯವರೆಗೆ ಅನೇಕ ಕಡೆಗೆ ಶಿವಪೂಜಾವಿಧಿಗಳು ಮುದ್ರಿಸಲ್ಪಟ್ಟಿವೆ ಆದರೆ ಮುದ್ರಾಪಕರಿಗೆ ವೈದಿಕಸಂಪ್ರದಾಯವು ಗೊತ್ತಿಲ್ಲದಿರುವುದರಿಂದ ಅನೇಕ ಕಡೆಗೆ ಮಂತ್ರಗಳು ಅಶುದ್ಧವಾಗಿ ಬಿದ್ದಿವೆ! ಅನೇಕರು ಆ ಅಶುದ್ಧಮಂತ್ರಗಳನ್ನೇ ಪಠಿಸುತ್ತಿರುವರು. ಇದು ಅತ್ಯಂತ ವ್ಯಸನಕರವಾದ ವಿಷಯವಾಗಿದೆ ಅಲ್ಲದೆ ವೇದಮಂತ್ರಗಳನ್ನು ವೈದಿಕ ಸ್ವರಸಹಿತವಾಗಿ ಉಚ್ಚರಿಸಬೇಕಲ್ಲದೆ ಸ್ವರಶೂನ್ಯವಾಗಿ ಉಚ್ಚರಿಸಬಾರದಷ್ಟೆ! ಇಲ್ಲಿಯವರೆಗೆ ಮುದ್ರಿತಗಳಾಗಿರುವ ಯಾವ ಶಿವಪೂಜಾವಿಧಿಯಲ್ಲಿಯೂ ವೇದಮಂತ್ರಗಳಿಗಾಗಲಿ, ಶ್ರೀರುದ್ರಾಧ್ಯಾಯ-ಚಮಕಾಧ್ಯಾಯ ಪುರುಷಸೂಕ್ತಗಳಿಗಾಗಲಿ ವೈದಿಕಸ್ವರಗಳು ಹಾಕಲ್ಪಟ್ಟಿಲ್ಲ ಮತ್ತು ಪದವಿಭಾಗವೂ ಮಾಡಲ್ಪಟ್ಟಿಲ್ಲ-ಈ ಶಿವಪೂಜಾವಿಧಿಯಲ್ಲಿ ಈ ಕೊರತೆಯು ದೂರಮಾಡಲ್ಪಟ್ಟಿದೆ ಇದಕ್ಕಾಗಿ ಪಂಡಿತರು ಬಹು ಶ್ರಮವನ್ನು ವಹಿಸಿ ಋಗ್ವೇದ ಯಜುರ್ವೇದಗಳನ್ನೆಲ್ಲ ಕೂಲಂಕಷವಾಗಿ ಪರಿಶೀಲಿಸಿ ವೀರಶೈವಪ್ರಪಂಚಕ್ಕೆ ಮಹೋಪಕಾರವನ್ನು ಮಾಡಿದ್ದಾರೆ ಈ ಪೂಜಾವಿಧಿಯಲ್ಲಿರುವ ವೈದಿಕಮಂತ್ರಗಳು ಯಾವ ವೇದದ ಯಾವ ಭಾಗದಲ್ಲಿರುವುದೆಂಬುದನ್ನು ಪಂಡಿತರು ವಿವರವಾಗಿ ತೋರಿಸಿದ್ದಾರೆ ಪ್ರತ್ಯಕ್ಷವಾಗಿ ನೋಡಿದ ಮೇಲೆ ಈ ಗ್ರಂಥದ ಮಹತ್ವವು ಕಂಡುಬರುವುದು ಅಲ್ಲದೆ ಈ ಪೂಜಾವಿಧಿಯ ಅಂತ್ಯದಲ್ಲಿ—ಶಿವಸಹಸ್ರನಾಮಾವಳಿ, ಶಿವಾಷ್ಟೋತ್ತರ ಶತನಾಮಾವಳಿ, ಶಿವಕವಚ, ಪಾರ್ವತೀನೀವೀನಾಮಾವಳಿ, ವೀರಭದ್ರನಾಮಾವಳಿ, ಭದ್ರಕಾಲೀದೇವೀನಾಮಾವಳಿ, ಪಞ್ಚಬ್ರಹ್ಮಾವಿ ನಾಮಾವಳಿ, ಶ್ರೀ ಪಂಚಾಚಾರ್ಯರ ನಾಮಾವಳಿಗಳು, ನಾನಾವಿಧ ಶಿವಸ್ತೋತ್ರಗಳು, ನಾನಾವಿಧ ದೇವೀಸ್ತೋತ್ರಗಳು, ನಾನಾವಿಧ ಗುರುಸ್ತೋತ್ರಗಳು ಮುದ್ರಿಸಲ್ಪಟ್ಟಿವೆ ಒಟ್ಟಿಗೆ ಈ ಶಿವಪೂಜಾವಿಧಿಯು ಸರ್ವಾಂಗಸುಂದರವಾಗಿದ್ದು ಸರ್ವತೋಮುಖವಾಗಿ ಸ್ತುತ್ಯವಾಗಿದೆ ಆದುದರಿಂದ ಪ್ರತಿಯೊಬ್ಬ ವೀರಶೈವರೂ ಈ ಪೂಜಾವಿಧಿಯನ್ನು ತರಿಸಿಕೊಂಡು ಇದರಲ್ಲುಕ್ತವಾಗಿರುವಂತೆ ಶಿವಪೂಜೆಯನ್ನು ಮಾಡಿ ಧನ್ಯರಾಗಬೇಕೆಂದು ಕೋರಿಕೆ **ಬೆಲೆ ೧೩ ಆಣೆ** ವಿ ಪಿ ಚಾರ್ಜು ಪ್ರತ್ಯೇಕ

ಮ್ಯಾನೇಜರ್,

ಪಂಚಾಚಾರ್ಯಪ್ರಭಾ ಆಫೀಸ್, ಮೈಸೂರು

ಶಿವಾದ್ವೈತಮಂಜರಿ.

ಈ ಗ್ರಂಥವು ವೀರಶೈವಮತಗ್ರಂಥಗಳಲ್ಲೆಲ್ಲ ಶಿಖಾರಶ್ನ ದಂತೆಯೊಪ್ಪುತ್ತಿರುವುದು ಎಲ್ಲರಿಗೂ ತಿಳಿದ ವಿಷಯವಾಗಿದೆ ಈ ಗ್ರಂಥವನ್ನು ಕಾಶ್ಮೀರದೇಶದ ಸ್ವಪ್ರಭಾನಂದ ಶಿವಾಚಾರ್ಯರೆಂಬ ಪ್ರಾಚೀನಾಚಾರ್ಯರು ರಚಿಸಿದ್ದಾರೆ ಈ ಗ್ರಂಥದಲ್ಲಿ ಶಕ್ತಿವಿಶಿಷ್ಟಾದ್ವೈತಸಿದ್ಧಾಂತದ ರಹಸ್ಯವು ಬಹು ಹೃದಯಂಗಮವಾಗಿ ಪ್ರತಿಪಾದಿಸಲ್ಪಟ್ಟಿದೆ ಈ ಗ್ರಂಥನ ಸರಣಿಯು ಬಹುಕಠಿನವಿದ್ದುದರಿಂದ ಇದರ ರಹಸ್ಯವನ್ನು ತಿಳಿಯಲು ಪಂಡಿತಜನ ಗಳಿಗೂ ಕೂಡ ಅಸಾಧ್ಯವಾಗಿತ್ತು ಈ ಕೊರತೆಯನ್ನು ದೂರಮಾಡಿ ಇದರ ರಹಸ್ಯವು ಪ್ರತಿಯೊಬ್ಬರಿಗೂ ತಿಳಿಯಲೆಂಬ ಸದುದ್ದೇಶದಿಂದ ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರು ಈ ಗ್ರಂಥಕ್ಕೆ ಬಹು ವಿಶಾಲವಾಗಿ ಕನ್ನಡ ಟೀಕೆಯನ್ನು ಬರೆಯಿಸಿದ್ದಾರೆ ಈ ಮೂಲ ಗ್ರಂಥವು ಕೇವಲ ೩೮ ಪುಟಗಳಿಂದ ಕೂಡಿದ್ದರೂ ಇದಕ್ಕೆ ಕನ್ನಡ ಟೀಕೆಯು ೧೩೨೩ ಪುಟಗಳಷ್ಟಾಗಿದೆ ಈ ಮಹಾಗ್ರಂಥಮುದ್ರಣಕ್ಕಾಗಿ ಪಂಡಿತರು ವಿಶೇಷ ಪ್ರಯತ್ನವನ್ನು ವ್ಯಯಮಾಡಿದ್ದಾರೆ ಇಂಥ ದೊಡ್ಡ ಸಿದ್ಧಾಂತಗ್ರಂಥವು ಇಂದಿನವರೆಗೆ ಕನ್ನಡಭಾಷೆಯಲ್ಲಿ ಎಲ್ಲಿಯೂ ಮುದ್ರಿತವಾಗಿಲ್ಲವೆಂದು ಘಂಟಾಘೋಷವಾಗಿ ಹೇಳಬಹುದಾಗಿದೆ ನಮ್ಮನ್ನಾಳುವ **ಶ್ರೀಮನ್ಮಹಾರಾಜಾಧಿರಾಜ ಶ್ರೀ ಕೃಷ್ಣರಾಜ ಒಡೆಯರ್ ಬಹದ್ದೂರ್ ಮಹಾಪ್ರಭುಗಳವರು** ಈ ಗ್ರಂಥದ ಯೋಗ್ಯತೆಯನ್ನು ಕಂಡು ದೆಹಿಕೇಷ್ಟಾಗೆ ಅಪ್ಪಣೆಯನ್ನಿತ್ತಿರುವರಲ್ಲದೆ, ಈ ಗ್ರಂಥದಲ್ಲಿ ನಿರೋಧಿಸುವುದಕ್ಕೋಸ್ಕರ ತಮ್ಮ ಧನ್ಯವಾದ ಭಾವಚಿತ್ರವನ್ನು ಸಹ ದಯಮಾಡಿಸಿರುವರು. ಇದರಿಂದ ಈ ಗ್ರಂಥದ ಯೋಗ್ಯತೆಯು ಎಷ್ಟರಮಟ್ಟಿಗಿರಬೇಕೆಂಬ ವಿಷಯವನ್ನು ಬೇರೆ ಹೇಳಬೇಕಾಗಿಲ್ಲ. ಇಂಥ ಅಮೂಲ್ಯವಾದ ವೀರಶೈವಸಿದ್ಧಾಂತಗ್ರಂಥವನ್ನು ಪ್ರತಿಯೊಬ್ಬ ವೀರಶೈವರೂ ಅವಶ್ಯವಾಗಿ ತರಿಸಿಕೊಂಡು ಇದರಲ್ಲಿರುವ ಸಿದ್ಧಾಂತ ವಿಷಯಗಳನ್ನು ತಿಳಿದುಕೊಂಡು ಧನ್ಯರಾಗ ಬೇಕೆಂದು ಕೋರಿಕೆ. ಒಟ್ಟು ಈ ಮಹಾಗ್ರಂಥವು ೧೩೪೪ ಪುಟಗಳಿಂದ ಕೂಡಿದ್ದು ಒಳ್ಳೆ ಬೆಲೆಯುಳ್ಳ ಕಾಗದದಲ್ಲಿ ಮುದ್ರಿಸಲ್ಪಟ್ಟಿರುವದಲ್ಲದೆ ಬಹುಸುಂದರವಾದ ಬೈಂಡಿನಿಂದೊಡಗೂಡಿದೆ. ಪವಿತ್ರವಾದ ವೀರಶೈವ ಸಿದ್ಧಾಂತದಲ್ಲಿ ವಿಶ್ವಾಸವುಳ್ಳ ಪ್ರತಿಯೊಬ್ಬರೂ ದುಡ್ಡಿನೆಡೆಗೆ ದೃಷ್ಟಿಯನ್ನಿಡದೆ ಈ ಗ್ರಂಥರತ್ನವನ್ನು ತರಿಸಿ ಕೊಂಡೇ ತೀರಬೇಕು. ಈ ಮಹಾಗ್ರಂಥದ ಬೆಲೆ ೮ ರೂಪಾಯಿ. ಒಂದುವಾಪಾಯಿಗೆ ಪ್ರಾಣ್ಯಾಣೆಯಂತೆ ಕಮಿಷನ್ ವಹಿಸಿ ಹೋಗಲಾಗಿ ೬ ರೂ ಗೆ ದೊರೆಯುವುದು. ವಿ ಪಿ. ಚಾರ್ಜು ೧ ರೂ. ೫ ಆಣೆ ಪ್ರತ್ಯೇಕ.

ವ್ಯವಸ್ಥೆಗಾರ್—**ಪಂಚಾಚಾರ್ಯಪ್ರಭಾ ಆಫೀಸ್, ಮೈಸೂರು.**

ಮನೋಹರವಾದ ಫೋಟೋಗಳು.

ಶ್ರೀ ರೇಣುಕಾಚಾರ್ಯರ ಒಂಭತ್ತು ಆಯ್ದುತಲೆಗಳೊಂದಿಗೆ ಕೂಡಿದ ಫೋಟೋ ಸೈಜು ೩೦×೨೪ ಬೆಲೆ ೧೫೯ ೦—೬—೦

ಶ್ರೀ ರೇಣುಕಾದಿ ಪಂಚಾಚಾರ್ಯರು ಲೋಕಹಿತ್ಯಾರ್ಥವಾಗಿ ಆಗಸ್ತ್ಯ, ಧರ್ಮದತ್ತ, ವ್ಯಾಸ, ಸಾಸಂದ್ರ, ಮೂರ್ನಾಡ ಮಹರ್ಷಿಗಳಿಗೆ ಶಿವಸಿದ್ಧಾಂತವನ್ನು ಪದೇಶಿಸುವ ಫೋಟೋ ಸೈಜು ೧೦×೧೪ ಬೆಲೆ ೦—೧೫—೦

ಪಡ್ಡಿ ಪೀಠಾರೋಹಣಮಾಡಿರುವ ಸಮಯದಲ್ಲಿ ಇವರಿಗೆ ಆಶಾರ್ಯರು ಒಂಬತ್ತಮ್ಮಂದಿರೊಡನೆ ಇರುವ ಫೋಟೋ ಸೈಜು ೧೪×೧೦ ಬೆಲೆ ೦—೧೦—೦

ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೪×೧೦ ಬೆಲೆ ೧೪ ೦—೧೦—೦

ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೦×೮ ಬೆಲೆ ೧೪ ೦—೦—೮

ಶ್ರೀ ಜಗದ್ಗುರು ರುದ್ರಮುನೀಶ್ವರ ಶಿವಾಚಾರ್ಯರು ಭೂಗರ್ಭದಿಂದ ಆವತರಿಸಿರುವ ಫೋಟೋ ೦—೦—೮

ಶ್ರೀ ರೇಣುಕಾಚಾರ್ಯರು ರುದ್ರಮುನೀಶ್ವರ ಶಿವಾಚಾರ್ಯರಿಗೆ ಪಟ್ಟಾಭಿಷೇಕ ಮಾಡುವ ಫೋಟೋ ೦—೦—೮

ಶ್ರೀ ರೇಣುಕಾಚಾರ್ಯರು ಖಭೀಷಣನ ಪ್ರಾರ್ಥನಾನುಸಾರವಾಗಿ ಏಕಕಾಲದಲ್ಲಿಯೇ ಮೂವತ್ತೊಂಟು ರುದ್ರೂಪವನ್ನು ಧಾರಣಮಾಡಿ ಸೂರುಕೋಟೆ ಶಿವರಿಗೆಗಳನ್ನು ಪ್ರತಿಷ್ಠಿಸುವ ಫೋಟೋ ೧೪ ೦—೦—೮

ಶ್ರೀ ರೇಣುಕಾಚಾರ್ಯರು ಶ್ರೀ ಕಲಕಾಚಾರ್ಯರಿಗೆ ಜೆಂಗ್ಲಮಠಾಲಿಕ್ಕರ ಲಿಂಗವನ್ನು ಅನುಗ್ರಹಿಸುವ ಫೋಟೋ ೦—೦—೮

ಶ್ರೀಕಾಶೀಕ್ಷೇತ್ರ ವಿರಾಜಮಾನ ಶ್ರೀ ಜಗದ್ಗುರು ವಿಶ್ವಾರಾಧ್ಯರ ಮೂಲಧರ್ಮಪೀಠದ ಫೋಟೋ ೦—೦—೮

ಶ್ರೀ ಕಾಶೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಪಂಚಾಕ್ಷರ ಶಿವಾಚಾರ್ಯರ ಫೋಟೋ ೦—೦—೮

ಶ್ರೀಮದುಜ್ಜಯಿನೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯರ ಫೋಟೋ ೦—೦—೮

ಶ್ರೀಮದ್ರಂಭಾಪುರೀ ಜಗದ್ಗುರು ಶಿವಾನಂದಶಿವಾಚಾರ್ಯ ಮಹಾಸ್ವಾಮಿಗಳವರ ಫೋಟೋ ೦—೦—೮

ಶ್ರೀಮದುಜ್ಜಯಿನೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀ ಕಾಶೀನಾಥಶಾಸ್ತ್ರಿಗಳವರು ಕುಳಿತುಕೊಂಡಿರುವ ಫೋಟೋ ೦—೦—೮

ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಫೋಟೋ ದೊಡ್ಡ ೦—೦—೮

ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಮಹದ್ಗಾರದ ಅತ್ಯಂತ ಸುಂದರವಾದ ಫೋಟೋ ೧೪ ೦—೦—೮

ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಅತ್ಯಂತ ಪ್ರಾಚೀನ ಕಟ್ಟಡದ ಸುಂದರ ಫೋಟೋ ೧೪ ೦—೦—೮

ಶ್ರೀ ಜಗದ್ಗುರು ಕೇದಾರೆಸಿಂಹಾಸನದ ಅತ್ಯಂತ ಸುಂದರವಾದ ಗೋಪುರದ ಫೋಟೋ ೦—೦—೮

ಹಿಮುವತ್ಪರ್ವತದ ಮಧ್ಯಭಾಗದಲ್ಲಿ ಶೋಭಿಸುವ ಶ್ರೀ ಕೇದಾರನಾಥಸ್ವಾಮಿಯ ಮಂದಿರದ ಸಂದರ ಫೋಟೋ ೦—೦—೮

ಶ್ರೀಉಜ್ಜಯಿನೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀಮನ್ಮಹಾರಾಜರವರು ವಿರಾಜಿಸುತ್ತಿರುವ ಫೋಟೋ ೦—೦—೮

ಬೆಂಗಳೂರು ಕಂಬೊಕ್ಕೆ ಬಸವೇಶ್ವರ ನೆಲೆವೀಡಿನ ರಂಭಾಪುರೀ ಜಗದ್ಗುರುಗಳ ಅತ್ಯಪ್ಪಟ್ಟಿಕ್ಕ ವಿಶೇಷವಾದ ಫೋಟೋ ೦—೦—೮

ಈ ರೂಪಾಯಿಗಳ ಮೇಲೆ ತಮಗೆಕೊಳ್ಳುವವರಿಗೆ ೧ ರೂ. ಗೆ ೪ ಆಣೆಯಂತೆ ಕಮಿಶನ್ ಕೊಡಲಾಗುವುದು

ವ್ಯವಸ್ಥೇಜರ್—ಶ್ರೀ ಹೆಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು. [15]

ಡಾಕ್ಟರ್ ಜೆ. ಬಿ. ಯವರ

ಸುಗಂಧ ನಶ್ಯದಪುಡಿ

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದಪುಡಿಯು ಕಂಡುಹಿಡಿಯಲ್ಪಟ್ಟು, ಸಾರ್ವಜನಿಕರಿಗೆ ಇದನ್ನು ಉಪಯೋಗಿಸಿ ಸಾರ್ವಜನಿಕರುಗಳಿಗಾಗಿ, ಯೋಗ್ಯತಾಪತ್ರಗಳನ್ನು ಕೊಟ್ಟಿರುವ ರು. ಪ್ರಸಿದ್ಧವಾದ ಈ ನಶ್ಯವು ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವುವೆಂದರೆ:—ಪೀನಸಿ, ಒಂಟಿ ತಲೆನೋವು, ತಲೆಯ ಲ್ಲಿಯ ದೋಗಗಳು, ಕಣ್ಣು ಗಳಲ್ಲಿ ಉಂಟಾ

ಗತಕ್ಕ ಸರ್ವವ್ಯಾಧಿಗಳು, ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವವಲ್ಲದೆ ಕಂಠಕ್ಕೆ ಮೇಲ್ಪಟ್ಟ ೯೬ ವ್ಯಾಧಿಗಳನ್ನು ಸ್ವಸ್ಥಪಡಿಸಿ ಜ್ಞಾಪಕಶಕ್ತಿಯನ್ನೂ ಸಹ ಹೆಚ್ಚುಮಾಡುತ್ತದೆ. ಮೂರುಬೆಟ್ಟಿನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯವಪುಡಿಯಲ್ಲಿ ಒಂದು ಚಟಿಕೆಯನ್ನು ಮಿತ್ರನೊಡಿದರೆ ಎಲ್ಲವೂ ಕರುಳಾಗುವುದು. ಇದನ್ನು ಅನೇಕಪ್ರಭುಗಳು ಉಪಯೋಗಿಸುತ್ತಾರೆ ಮಾನವಿ ಸೀಸೆ ಶ್ರೀ. ಬುಡ್ಡಿ ಒಂದಕ್ಕೆ ೪ ಆಣೆ ಡಜನ್ ಒಂದಕ್ಕೆ ಕ್ರಯ ರೂ. ೨-೮-೦. ವಿ.ಪಿ. ೪ ಆಣೆ.

ನಿಮ್ಮ ಅಡ್ರೆಸ್ಸನ್ನು ತಿಳಿಯುವಂತೆ ಬರೆಯಿರಿ.

ಗುರುಬಸವ ಅಂಡ್ ಕಂಪೆನಿ ಲಿಮಿಟೆಡ್.

ಪೋ. ಬಾ. ೫೧೦, ಮದರಾಸು

ಸರ್ವೋತ್ತಮವಾದ ಮತಗ್ರಂಥಗಳು

ಗೋತ್ರಸೂತ್ರಸಹಿತ (೩ನೆಯ ಆವೃತ್ತಿ)	..	....	೧ ಆಣೆ
ಸಚ್ಯಾಶಾಸ್ತ್ರಮವಿಮರ್ಶ (೩ನೆಯ ಆವೃತ್ತಿ ಸಂಸ್ಕೃತ)			೧ ಆಣೆ
ಪಂಚಪಿಂಚತ ಪ್ರಶ್ನೋತ್ತರಕಾತ (೩ನೆಯ ಆವೃತ್ತಿ)	..	....	೧ ಆಣೆ
ಶ್ರೀಪಂಚಾಚಾರ್ಯ ಮಂಗಲಸ್ತೋತ್ರಾವಳಿ (೯ನೆಯ ಆವೃತ್ತಿ)	...	....	೧ ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ (೩ನೆಯ ಆವೃತ್ತಿ)			೧ ಆಣೆ
ಜಗವಾದಿನಿಜತತ್ವದರ್ಪಣ (೪ನೆಯ ಆವೃತ್ತಿ)	....	....	೨ ಆಣೆ
ಶ್ರೀರೇಣುಕಾಚಾರ್ಯಶತಕ (೩ನೆಯ ಆವೃತ್ತಿ)	....	....	೨ ಆಣೆ
ಪಂಚಾಚಾರ್ಯಸ್ತ್ರಧಾಕರ	....	....	೨ ಆಣೆ
ಶ್ರೀಗುರುತತ್ತ್ವಪದಗಳು	....	....	೨ ಆಣೆ
ಶ್ರೀರುದ್ರಮುನಿಶಿವಾಚಾರ್ಯಶತಕ	..	....	೨ ಆಣೆ
ವೀರಶೈವಮತಮಿಮಾಮಂಸಾ	....	....	೩ ಆಣೆ
ವೀರಶೈವಾಚಾರವಿಧಿ (೩ನೆಯ ಆವೃತ್ತಿ)	....	....	೩ ಆಣೆ
ಲಿಂಗಧಾರಣವಿಧಿ	....	....	೪ ಆಣೆ
ವಿವಾಹವಿಧಿ (೩ನೆಯ ಆವೃತ್ತಿ)	....	..	೪ ಆಣೆ
ಶ್ರೀಪತಿಪಂಡಿತಾರಾಧ್ಯರ ಕಾಲನಿರ್ಣಯ	....	....	೪ ಆಣೆ
ಸಚ್ಯಾಶಾಸ್ತ್ರಮವಿಮರ್ಶತತ್ತ್ವ ಪ್ರಸ್ಫೋರೀಕರಣ (೩ನೆಯ ಆವೃತ್ತಿ)		....	೬ ಆಣೆ
ಸಿದ್ಧಾಂತ ಶಿಖಾಮಣಿ (ಮೂಲಮಾತ್ರ, ಚಕ್ಕಸೈಜು)		....	೬ ಆಣೆ
ವೀರಶೈವಮಹಾತ್ಮರು	....	....	೮ ಆಣೆ
ಋಸವಧ್ಯಾಂತವಿವಾಕರ (೩ನೆಯ ಆವೃತ್ತಿ)	....	....	೮ ಆಣೆ
ಶಿವಾದ್ವೈತಪರಿಭಾಷಾ (ಸಂಸ್ಕೃತ)	....	....	೮ ಆಣೆ
ಪಂಡಿತ ಶ್ರೀಕಾಶೀನಾಥಶಾಸ್ತ್ರುಲವಾರಿ ಭಾಷಣಮು (ತೆಲಗು)			೮ ಆಣೆ
ಸದ್ಯೋಧರತ್ನಾವಳಿ	..	....	೮ ಆಣೆ
ವೈದಿಕಶಿವಪೂಜಾವಿಧಿ (ವೈದಿಕಸ್ವರಯುಕ್ತವಾದ ಅತ್ಯಂತ ಸುಂದರಮುದ್ರಣ)			೧೨ ಆಣೆ
ಸಿದ್ಧಾಂತಸಾರಾವಳಿ (ತ್ರಿಲೋಚನಶಿವಾಚಾರ್ಯಕೃತ)			೧೨ ಆಣೆ
ಶ್ರೀಪಡಗದ್ದೂರು ಪಂಚಾಚಾರ್ಯ ಸ್ತೋತ್ರರತ್ನಾಕರ		...	೧೨ ಆಣೆ
ಮೂಹೇಶ್ವರ ದೀಕ್ಷಾವಿಧಿ (೩ನೆಯ ಆವೃತ್ತಿ)	....	....	೧೨ ಆಣೆ
ಶಿವಾಸೂರ್ಯಸಿದ್ಧಾಂತದರ್ಪಣ	....	....	೧೨ ಆಣೆ
ಶ್ರೀಕರಧಾನ್ಯಂ (ಚಕ್ಕಸೈಜು)	....	....	೧ ರೂ.
ಸಚಿತ್ರ ರೇಣುಕವಿಜಯ (೩ನೆಯ ಆವೃತ್ತಿ)	....	....	೧ ರೂ.
ವೀರಶೈವಮತ್ರ (೩ನೆಯ ಆವೃತ್ತಿ, ೩೦ಮಹತ್ವದ ಫೋಟೋಗಳಿಂದ ಅಲಂಕೃತ)		....	೧೫ ರೂ.
ಸಿದ್ಧಾಂತಶಿಖಾಮಣಿ (ಕನ್ನಡ ಟೀಕಾಸಹಿತ)		..	೧ ರೂ.
ಕೇನೋಪನಿಷತ್ (ಕನ್ನಡ ಟೀಕಾಸಹಿತ)	....	....	೧ ರೂ.
ರೇಣುಕವಿಜಯ ಮಹಾಪುರಾಣ (ಕನ್ನಡ ಭಾಮಿನೀಷಟ್ಪದಿ)		....	೧ ರೂ.
ಸಿದ್ಧಾಂತಶಿಖಾಮಣಿ (ಕನ್ನಡ ಟೀಕಾಸಹಿತ)	....	....	೨ ರೂ.
ವೀರಶೈವಸಿದ್ಧಾಂತಸುಧಾಕರ	....	....	೨ ರೂ.
ಶಿವಾದ್ವೈತನವಂಜವಿ (ಕನ್ನಡವ್ಯಾಖ್ಯಾನ ೧೩೨೬ ಪುಟ)	....	....	೮ ರೂ.
A brief life sketch of Pandit Sri Kashinatha Shastriji (*English*)			**4 As.**
The Philosophical Aspect of Virasaivism (*English*)	..		**8 As.**
Speeches by Pandit Shri Kashinatha Shastriji *English*)			**12 As.**
ಶೀರಶೈವರತ್ನ (ಮರಾಠಿ)	...	...	೧ ರೂ.
ಸಹಜನಾರಾಯಣೀಯನಿಘಂಟು (ಶೀರಶೈವಭಾಷಾ-ಸಂಸ್ಕೃತ)		...	೧ ರೂ.
ಶೀರಶೈವೆದ್ಗುರುಸ್ತವ (ಸಂಸ್ಕೃತ)	..	...	೧ ರೂ.
ನೇತ್ರಿಕೇಶ್ವರಕಾರಿಕಾ (ಸಂಸ್ಕೃತ)	.	...	೨ ಆಣೆ.
ಲಿಂಗಧಾರಣಚಂದ್ರಿಕಾ (ಸಂಸ್ಕೃತ)		...	೩ ರೂ.

೧ ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವುದಿಲ್ಲ.

೫ ರೂ. ಗಳಿಗೆ ಮೇಲ್ಪಟ್ಟು ಪುಸ್ತಕಗಳನ್ನು ತರಿಸಿಕೊಳ್ಳುವವರಿಗೂ ಪುಸ್ತಕ ವ್ಯಾಪಾರಿಗಳಿಗೂ ೧ ರೂ. ಗೆ ೪ ಆಣೆಯಂತೆ ಕಮಿಶಾರ್ ಕೊಡಲಾಗುವುದು

ವ್ಯವಸ್ಥೇಜರ್—ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಮೈಸೂರು ಸಂಸ್ಕೃತ ಕಾಲೇಜಿನಲ್ಲಿರುವ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಸಂಪಾದಕರಾದ ನೇಗಿ ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರಿಂದ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED No. M. 2266 || ಶ್ರೀಜಗದ್ಗುರು ಪಂಚಾಚಾರ್ಯಾಯ ಪ್ರಸೀದಂತು || REGISTERED No. M. 2266

ಪಂಚಾಚಾರ್ಯ ಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿತರ್ ಪಂಚಾಸ್ಯಪೀಠಾಧಿಪರ್ । ಪಂಚಕ್ಲೇಶವಿನಾಶಕರ್ ಪರತರಶ್ರೀಪಂಚಲಿಂಗೇಶ್ವರರ್ ॥
ಪಂಚಾಚಾರಧುರಂಧರಾಮಕರ್ ಪರಿಪತ್ಸಚ್ಚಾಸ್ತ್ರಧೀಮೋದ್ಧರರ್ । ಪಂಚಾಚಾರ್ಯಜಗದ್ಗುರೂತ್ತಮವರ್ಷಾಲಿಪ್ರಪೀಠೋಕ್ತಮಂ ॥

ಒಳದವರಿಗೆ ೧ ರೂ. ೧೧ ಆಣೆ. ಬಿಡಿ ಪ್ರತಿ ೧೯ಕ್ಕೆ ೬ ಪೈ. ಪರಸ್ಥಳದವರಿಗೆ ೨ ರೂ. ೮ ಆಣೆ. ವಿ ಪಿ. ಚಾರ್ಜು ಪ್ರತ್ಯೇಕ.

ಸಂಪುಟ ೧೪.] ಪಂಚಾಚಾರ್ಯಪ್ರಭಾ, ಸೋಮವಾರ ತಾ॥ ೨೬ ನೇ ಆಗಸ್ಟ್ ೧೯೪೦ [ಸಂಚಿಕೆ ೧೬

ಬ್ರಿಟಿಷ್ ಮಹಾಪ್ರಧಾನರ ಭಾಷಣ

ಎಂತಹ ಕಷ್ಟ ಬಂದರೂ ಪ್ರತಿಭಟಿಸಲು ಸಿದ್ಧರಾಗಿದ್ದೇವೆ

ಬ್ರಿಟಿಷ್ ಮಹಾ ಮಂತ್ರಿಗಳಾದ ಶ್ರೀ ವಿನ್ಸ್ಟನ್ ಚರ್ಚಿಲ್‌ರವರು ೩೦ನೇ ತಾರೀಖಿನ ದಿವಸ ಕಾಮನ್ಸ್ ಸಭೆಯಲ್ಲಿ ಕೆಳಗೆ ಕಂಡಂತೆ ಭಾಷಣಮಾಡಿದರು.

"ನೊವಲಿಗಿ-ಲಂ ತೆಗ ಬ್ರಿಟನ್ನು ಬಹಳ ಬಲಯುತವಾಗಿರುವುದೆಂದೂ, ಎಂತಹ ಪರಿಸ್ಥಿತಿ ಬಂದೊದಗಿದರೂ ಬ್ರಿಟನ್ನು ಅದನ್ನು ಪ್ರತಿಭಟಿಸುವುದಕ್ಕೆ ಸಿದ್ಧವಾಗಿರುವುದೆಂದೂ, ಬ್ರಿಟನ್ನಿನ ಸೈನ್ಯಬಲವೆಲ್ಲವೂ ಇಂದು ಬ್ರಿಟನ್ನಿನಲ್ಲಿರುವುದೆಂದೂ, ಸಂಗ್ರಾಮವು ಆರಂಭವಾಗಿ ಇದ್ದ ನೌಕಾ ಬಲಕ್ಕಿಂತ ಇಂದು ನೌಕಾಬಲವು ಬಲಯುತವಾಗಿರುವುದೆಂದೂ, ನ್ಯೂಗ್ಲೆಟ್‌ಲ್ಯಾಂಡ್ ವೈಮಾನಗಳನ್ನು ಜಯಿಸಲಾಗಿದೆಯೆಂದೂ, ವೈಮಾನ ಬಲದಲ್ಲಿ ಶತ್ರುಗಳು ಇನ್ನೂ ಬಲಯುತವಾಗಿಯೇ ಇದ್ದಾರೆಂದೂ, ಆದರೆ ವಿಮಾನಗಳ ನಿರ್ಮಾಣದಲ್ಲಿ ನಾವು ಶತ್ರುಗಳನ್ನು ಮೀರಿಸಿದ್ದೇವೆಂದೂ, ಶತ್ರುಗಳು ಹೋರಾಡುವವರೆಗೆ ಬ್ರಿಟನ್ನು ಯುದ್ಧ ಮಾಡಲು ಸಿದ್ಧವಾಗಿರುವುದೆಂದೂ, ತಿಳಿದರು."

"ಸಂಪ್ಯಾಬಲದಲ್ಲಿ ಜರ್ಮನಿಯ ವಾಯುಬಲವು ಇದುವರೆಗೂ ಬ್ರಿಟನ್ನಿನ ಬಲವನ್ನು ವಿಗಾಸಿಸಿತ್ತು. ಯಾವ ಲಕ್ಷ್ಯಾಗಿ ನಾವು ಹೆದರುತ್ತಿದ್ದೆವೋ ಜರ್ಮನಿಯ ಆ ವಾಯುಬಲವು ನಮ್ಮ ದ್ವೀಪದ ಮೇಲೆ ಇಂದು ಎಡೆಬಿಡದೆ ಮುತ್ತಿಗೆ ನಡೆಸುತ್ತಿದೆ. ಕೆಲವು ಸಿಮಿಷಗಳಲ್ಲಿ ವಿಮಾನಗಳು ನಮ್ಮ ದ್ವೀಪದ ಎಲ್ಲ ಕಡೆಗಳಲ್ಲಿಯೂ ಬಾರಿ ಮುತ್ತಿಗೆಯನ್ನು ನಡೆಸುತ್ತಿವೆ. ಆದರೆ ಇದು ನಮಗೆ ಹೆದರುವಂತಿಲ್ಲ. ಮೇ ತಿಂಗಳಲ್ಲಿ ಜರ್ಮನಿಯ ವಿಮಾನ ಬಲವು ಈ ರೀತಿ ಮುತ್ತಿಗೆ ಹಾಕಿದ್ದರೆ ಬಹಳ ಸಂಭೀರವಾದ ಸಂದರ್ಭವಿತ್ತು. ಆದರೆ ಇಂದು ಆ ವಿಷಯಕ್ಕೆ ಹೆದರದೆ ಅದನ್ನು ಪ್ರತಿಭಟಿಸುತ್ತಿರುವುದು ನಮ್ಮ ಸೈನ್ಯವೇ ಸರಿ! ಬ್ರಿಟಿಷ್ ದೇಶವೂ ಬ್ರಿಟಿಷ್ ಸಾಮ್ರಾಜ್ಯವೂ ಇಂದು ಘೋರ ವಿಪತ್ತಿಗೆ ಹೆದರದೆ ಪ್ರತಿ ಹಿಂಸೆ ನೀಡುತ್ತಿವೆ. ಮುಂದೇನು ಸಂಭವಿಸುವುದೋ ಅದನ್ನೇ ಹೇಳಲು ಸಾಧ್ಯವಿಲ್ಲ ಏನು ಬಂದರೂ ಅದನ್ನು ಪ್ರತಿಭಟಿಸುವುದಕ್ಕೆ ನಾವು ಸಿದ್ಧರಾಗಿದ್ದೇವೆ."

"ಇಂದು ಬ್ರಿಟನ್ನಿನಲ್ಲಿ ೨೦ ಲಕ್ಷಕ್ಕಿಂತಲೂ ಹೆಚ್ಚಾಗಿ ಶಸ್ತ್ರ ಕೈಯಲ್ಲಿ ಬಂದೂಕಗಳನ್ನು ಹಿಡಿದುಕೊಂಡು ಹೊಡೆದಾಡಲು ಸಿದ್ಧರಾಗಿದ್ದಾರೆ. ಇವರಲ್ಲಿ ಮುಕ್ಕಾಲು ಪಾಲು ಜನರು ಯೋಧರು; ಸೈನ್ಯಪಡೆಗಳಲ್ಲಿರುವವರು ಸಂಗ್ರಾಮ ಸಮಯದಲ್ಲಿ ಹಿಂದೆ ಯಾವಾಗಲೂ ಇಷ್ಟು ಮಂದಿ ಸೈನಿಕರು ಬ್ರಿಟನ್ನಿನಲ್ಲಿ ಇರಲಿಲ್ಲ. ೧೯೩೯ ನೇ ವರ್ಷದ ಶಾಂತಿಸಮಯದ ಸೈನ್ಯಪಡೆಗಳಿಗೂ ಈಗಿರುವ ದಕ್ಕೂ ಇರುವ ಅಂತರವನ್ನು ಭರ್ತಿಮಾಡಲು, ಸಮುದ್ರ ದಾಟಿ ಇರುವ ದೇಶಗಳು ಸಹಾಯವನ್ನು ಒದಗಿಸುವುದಾಗಿ ಬ್ರಿಟನ್ನಿಗೆ ತಿಳಿಸಿದೆ. ಸಮುದ್ರಗಳಲ್ಲಿ 'ಯು ಬೋಟ್' ಗಳನ್ನೆ 'ಮ್ಯಾಗ್ನೆಟ್ ಮೈನು'ಗಳನ್ನೆ, ಈ ಮ್ಯಾಗ್ನೆಟ್ ಮೈನುಗಳನ್ನು ಜಯಿಸಿಬಿಡಲಾಗಿದೆ.

ಕೆಲವು ವಾರಗಳಿಂದ ವಾಯುಮುತ್ತಿಗೆಯು ತೀಕ್ಷ್ಣತೆಯ ಪರಮಾವಧಿಯನ್ನು ಮುಟ್ಟಿದೆ. ಆದರೆ ಈ ತೀಕ್ಷ್ಣತೆಯ ಮಿತಿಯು ಇಷ್ಟೇನೋ ಇಲ್ಲವೇ ಇನ್ನೂ ಹೆಚ್ಚುವೆದೋ ಎಂಬ ನಿರ್ಣಾರವಾಗಿ ಈಗಲೇ ಏನನ್ನೂ ಹೇಳುವುದಕ್ಕಾಗುವುದಿಲ್ಲ. ಇದುವರೆಗೂ ಮಾಡಿರುವ ಪ್ರಯತ್ನಗಳಿಗಿಂತ ಹೆಚ್ಚಾಗಿಯೇ ಶತ್ರುವು ಇನ್ನು ಮುಂದೆ ಪ್ರಯತ್ನವನ್ನು ನಡೆಯಿಸುವ ನಿರೀಕ್ಷಣೆಯನ್ನು ನಾವಿಟ್ಟುಕೊಂಡಿರಬೇಕು. ಇದುವರೆಗೂ ನಡೆದಿರುವ ಹೋರಾಟವು ನಮಗೆ ಅನುಕೂಲವಾದ ರೀತಿಯಲ್ಲಿಯೇ ಆಗಿದೆ. ಬ್ರಿಟನ್ನಿನ ವಿಮಾನಗಳ ನಿರ್ಮಾಣವು ಅಸಾಧ್ಯ ರೀತಿಯಲ್ಲಿ ಹೆಚ್ಚುತ್ತಿರುವದಲ್ಲದೆ ಬ್ರಿಟನ್ನಿನ ವಿಮಾನಗಳ ರಿಪೇರಿಯು ಬಹಳ ಬೇಗ ಬೇಗ ಹಾಗುತ್ತಿರುವುದು.

ನ್ಯೂಫೌಂಡ್‌ಲೆಂಡ್ ಮೆಸ್ಸಾಇಡೀಸ್ ಮತ್ತು ಇತರ ಕಡೆಗಳಲ್ಲಿ ಅಮೇರಿಕವು ರಕ್ಷಣ ಪ್ರಯತ್ನಗಳನ್ನು ಇಟ್ಟುಕೊಳ್ಳಲು ಕ್ಷೇತ್ರಗಳನ್ನು ಬಿಟ್ಟುಕೊಡಲಾಗುವುದು ಈ ರೀತಿ ಬಿಟ್ಟುಕೊಡುವುದರಿಂದ ಆ ಪ್ರದೇಶಗಳ ಮೇಲಿರುವ 'ರಾಜಕ್ಕ' ನ್ನು ಬಿಟ್ಟುಕೊಡಲಾಗುವುದೆಂದು ಎಂದಿಗೂ ಭಾವಿಸಬಾರದು. ರಕ್ಷಣ ಕಾರ್ಯ ಪ್ರಮಗಳನ್ನು ಕೈಗೊಳ್ಳುವುದಕ್ಕಾಗಿ ೯೯ ವರ್ಷಗಳ ಕಾಲ ಕೆಲವು ಪ್ರದೇಶಗಳನ್ನು "ಲೀಸ್" ಮಾಡಲಾಗುವುದು. ಈ ರೀತಿ ಮಾಡುವುದರಿಂದ ಇನ್ನೊಷ್ಟು ಮಾತ್ರ ನಿಷ್ಠಾವಂತ ದೇಶಗಳವರೂ ಅಮೇರಿಕಾ ಪ್ರಜೆಗಳೂ ಹತ್ತಿರ ಹತ್ತಿರ ಕಲೆತು ಪರಸ್ಪರರಾಗಿ ಅನುಕೂಲವಾಗುವ ಪ್ರಸಂಗಗಳು ಸ್ವಾಭಾವಿಕವಾಗಿ ಉಂಟಾಗುವವು ಈ ರೀತಿ ಆಗುವುದರಿಂದ ತೊಂದರೆಯಾಗುವುದೆಂದು ಯಾರೂ ಭಾವಿಸಬಾರದು.

ಇಂಗ್ಲೆಂಡಿನಲ್ಲಿ ಈ ಹೊಸ ಪ್ರಭುತ್ವವು ಸ್ಥಾಪಿತವಾಗಿ ೩ ತಿಂಗಳಾಯಿತು ಈ ಅವಧಿಯಲ್ಲಿ ಮಹಾ ವಿಪತ್ಪರಂಪರೆಗಳು ಸಂಭವಿಸಿದವು. ಹಾಲೆಂಡ್ ಸಂಪೂರ್ಣವಾಗಿ ಶತ್ರುಗಳ ವಶವಾಯಿತು. ಅವರ ಪ್ರತಿಪಾತ್ರ ಮಹಾರಾಣಿಯವರು ಪದಚ್ಯುತರಾಗಬೇಕಾಯಿತು. ರಾಟರ್ ಡಾಂ ನಗರದಲ್ಲಿ ಭೀಕರ ಕೊಲೆಗಳು ನಡೆದವು. ಬೆಲ್ಜಿಯಂ ದೇಶವು ಪರಾಕಾಷ್ಠವಾಯಿತು ತಮ್ಮ ಸಹಾಯಕ್ಕೆ ಬೆಲ್ಜಿಯಂ ದೊರೆಗಳಿಂದ ಬರಮಾಡಿಕೊಳ್ಳಲ್ಪಟ್ಟಿದ್ದ ಬ್ರಿಟಿಷ್ ಸೈನ್ಯವು ಸಂಪೂರ್ಣವಾಗಿ ಶತ್ರುಗಳ ವಶವಾಗುವುದರಲ್ಲಿತ್ತು. ಆದರೆ ದೈವ ಕೃಪೆಯಿಂದ ವಿಪತ್ತಿನಿಂದ ಪಾರಾಯಿತು ಆದರೆ ಆ ಸೈನ್ಯ ಬಲದ ಸಲಕರಣೆಗಳೆಲ್ಲವೂ ಶತ್ರುಗಳ ಪಾಲಾದವು. ನಮ್ಮ ಮಿತ್ರ ದೇಶವೆನಿಸಿದ್ದ ಫ್ರಾನ್ಸ್ ಶರಣಾಗತವಾಯಿತು. ಇಟಲಿಯು ಇಂದು ನಮ್ಮ ವಿರುದ್ಧವಾಗಿ ನಿಂತಿದೆ. ಫ್ರಾನ್ಸ್ ದೇಶವೆಲ್ಲವೂ ಇಂದು ಶತ್ರುಗಳ ವಶವಾಗಿದೆ. ಆವರ ಸಂಗ್ರಾಮ ಪಡ್ಡು ನಿರ್ಮಾಣ ಕಾರ್ಖಾನೆಗಳೂ ಸಂಗ್ರಾಮ ವಸ್ತುಗಳೂ ಶತ್ರುಗಳ ಪಾಲಾಗಿವೆ ವಿಚಿಯಲ್ಲಿ ಕೈಗೊಂಬೆ ಸರ್ಕಾರವೊಂದು ಸ್ಥಾಪಿತವಾಗಿದೆ. ಯಾವ ಕ್ಷಣದಲ್ಲಿ ಬೇಕಾದರೂ ಆ ಪ್ರಭುತ್ವವು ನಮ್ಮ ಶತ್ರುವಾಗಿ ಪರಿಣಮಿಸಬಹುದು. ಪಶ್ಚಿಮ ಸಮುದ್ರ ಪ್ರದೇಶ ನೆಲ್ಲವೂ 'ನಾರ್ವೆಕೇಸ್' ನಿಂದ ಸ್ಪೇನಿನ ಗಡಿಯವರೆಗೆ ಶತ್ರುಗಳ ಹೆಸ್ತ್ರಗತವಾಗಿವೆ ಈ ವಿಕಾಲವಾದ ರಣರಂಗದಲ್ಲಿರುವ ಎಲ್ಲ ಬಂದರುಗಳೂ, ವಿಮಾನ ನಿಲ್ದಾಣಗಳೂ, ನಮ್ಮ ದ್ವೀಪದ ಮುತ್ತಿಗೆಗಾಗಿ ಉಪಯೋಗಿಸಲ್ಪಡುತ್ತಿವೆ

ಆರ್. ಎ. ಎಫ್. ವಿಮಾನಗಳೂ ಬಾಂಬರ್ ವಿಮಾನಗಳೂ ನಡೆಸುತ್ತಿರುವ ಕಾರ್ಯಗಳು ಸ್ತೋತ್ರಾರ್ಹವಾಗಿವೆ. ಜರ್ಮನಿಯಲ್ಲಿಯೂ ಇರ್ಮನಿಯವಶದಲ್ಲಿರುವ ಪ್ರದೇಶಗಳಲ್ಲಿಯೂ, ಇರುವ ಮುಖ್ಯ ಮುಖ್ಯ ಕೈಗಾರಿಕೆ ಕೇಂದ್ರಗಳ ಮೇಲೆಯೂ ಸೈನ್ಯ ಕ್ಷೇತ್ರಗಳ ಮೇಲೆಯೂ ಬ್ರಿಟನ್ನಿನ ವಿಮಾನಗಳು ವಾಯುಮಿತ್ತಿಗೆ ನಡೆಸುತ್ತಿರುವುದಲ್ಲದೆ ಮುಂದೆಯೂ ಮುತ್ತಿಗೆಗಳನ್ನು ನಡೆಸುವುವು. 'ಒಂದು ವೇಳೆ ಹಿಟ್ಲರನು ಕಪ್ಪು ಸಮುದ್ರದಲ್ಲಿಯೂ ಕ್ಯಾಸ್ಪಿಯನ್ ಸಮುದ್ರದಲ್ಲಿಯೂ ಜಯ ಶೀಲನಾಗಬಹುದು ಭಾಸಕರ ದ್ವಾರದ ಒಳ ವಿಜಯ ಸತಾಕೆಯನ್ನೆತ್ತಿ ಹಿಡಿಯಬಹುದು. ಜರ್ಮನಿಯ ಒಳ ನಾಡಿನ ಅಧಿಕ ಬಲವು ನುಚ್ಚುನೂರಾಗಿ ಹೋಗುವುದಾದರೆ ಆ ವಿಷಯಗಳಿಂದ ಪ್ರಯೋಜನವೇನೂ ಆಗುವುದಿಲ್ಲ.

ಫ್ರಾನ್ಸ್ ಬ್ರಿಟನ್ನನ್ನು ಕೈಬಿಟ್ಟಿದ್ದರಿಂದ ಬ್ರಿಟನ್ನಿಗೆ ಅಪಾರ ನಷ್ಟವಾಗಿರುವುದು ಮಧ್ಯ ಪೂರ್ವದಲ್ಲಿ ಇದರಿಂದ ಬ್ರಿಟನ್ನಿನ ಸ್ಥಿತಿಗೆ ಧಕ್ಕೆ ತಗುಲಿರುವುದು. "ಸೋಮಾಲಿಲ್ಯಾಂಡ್ ರಕ್ಷಣೆಯ ವಿಚಾರದಲ್ಲಿ ಬ್ರಿಟನ್ನು ಫ್ರಾನ್ಸಿನ ಬಲವನ್ನು ನಂಬಿಕೊಂಡಿರಲಾಗಿತ್ತು. ಜಿಬೂತಿಯಲ್ಲಿರುವ ಫ್ರೆಂಚ್ ಸೈನ್ಯಪಡೆಗಳು ಇಟಲಿಸೈನಿಕರನ್ನು ಮುತ್ತುವುದಾಗಿ ನಂಬಿಕೊಂಡಿರಲಾಗಿತ್ತು. ಮಡಿಟರೇನಿಯನ್ ಸಮುದ್ರದಲ್ಲಿರುವ ಫ್ರಾನ್ಸ್ ಪ್ರದೇಶಗಳನ್ನು ಬ್ರಿಟನ್ನಿನ ನೌಕಾಬಲದವರೂ ವಿಮಾನ ಬಲದವರೂ ಉಪಯೋಗಿಸಿಕೊಳ್ಳುವ ಸೌಲಭ್ಯವನ್ನಿಟ್ಟುಕೊಂಡಿರಲಾಗಿತ್ತು. ಆದರೆ ಫ್ರಾನ್ಸ್ ಬ್ರಿಟನ್ನಿನ ಕೈಬಿಟ್ಟಿದ್ದರಿಂದ ಇವೆಲ್ಲಾ ಒಂದೂ ಸಾಧ್ಯವಾಗುವಂತಿಲ್ಲ

ಮಧ್ಯಪೂರ್ವದಲ್ಲಿ ಇನ್ನು ಬಹಿರಂಗವಾದ ಕದನಗಳು ನಡೆಯುವ ಸಾಧ್ಯತೆ ಇದೆ. ಆಲ್ಲಿ ಬ್ರಿಟನ್ನಿನ ಚಾರಾದ ಸೈನ್ಯಪಡೆಗಳಿವೆ. ಇನ್ನೂ ಆಲ್ಲಿಗೆ ಸೈನ್ಯಪಡೆಗಳು ಕಳುಹಿಸುತ್ತಿರಲಾಗಿದೆ. ಮಾರ್ಚಿನಲ್ಲಿ ಡಿಟರೇನಿಯನ್ ಸಮುದ್ರದಲ್ಲಿ ಬ್ರಿಟನ್ನಿನ ನೌಕಾ ಬಲದ ಶ್ರೇಷ್ಠತೆಯನ್ನು ಕಾಪಾಡಿಕೊಳ್ಳುವುದು ಆಲ್ಲಿ ನಮ್ಮ ರಕ್ಷಣೆಯ ಕ್ರಮವಾಗಿ ಮಾಡಿದ್ದೇನೆ ಜಗತ್ತಿನ ಎಲ್ಲಾ ಭಾಗಗಳಲ್ಲಿಯೂ ನಾವು ಹೊತ್ತಿರುವ ನಮ್ಮ ಅಸಂಖ್ಯಾತ ಜವಾಬ್ದಾರಿಯನ್ನು ನಾವು ನಡೆಸಿಕೊಂಡು ಬರಲು ಸಿದ್ಧರಿದ್ದೇವೆ

ಸಖ್ಯದ ಜೂಭಾಗಸ್ಥಿತಿ ನಕಲಿಗಳ ಹಾವಳಿ ಇರದಂತೆ ನೋಡಿಕೊಳ್ಳುವುದಕ್ಕೆ ತಕ್ಕ ಸಹಾಯ ಕೊಡುವುದು. ಅವಶ್ಯಕವಾದಷ್ಟೆಡೆಯಿರತಕ್ಕ ಬ್ರಿಟನ್ನು ೨ ಭೂಭಾಗದಲ್ಲಿ ಬ್ರಿಟನ್ನಿಗೆ ಇರಿಸುವ ಕೆಲವು ಪ್ರದೇಶಗಳಲ್ಲಿ ನೌಕಾ ಮತ್ತ ವಿಮಾನ ಬಲಗಳನ್ನು ಇಟ್ಟುಕೊಳ್ಳುವುದಕ್ಕೆ ಕೆಲವು ಕ್ಷೇತ್ರಗಳಲ್ಲಿ ಬಿಟ್ಟುಕೊಡುವುದಾಗಿ ಅಮೇರಿಕ ಕೆ ತಿಳಿಸಿರುವುದು ಎಂದು ಹೇಳಿರು.

ಸ್ವತಂತ್ರ ನೇಪಾಳ

—

ಲೇಖಕರ —ಶ್ರೀ ಆರ್ ರಂಗಸ್ವಾಮಿ ಬಿ ಎ,

ದೇಶದ ಲಕ್ಷಣ-ಇತಿಹಾಸ

ಸ್ವತಂತ್ರ ಹಿಂದೂರಾಷ್ಟ್ರವಾದ ನೇಪಾಳ ದೇಶದ ವಿಚಾರವನ್ನು ಈ ವೇಳೆಯಲ್ಲಿ ತಿಳಿಸುವ ಪ್ರಯತ್ನ ಮಾಡಿದೆ ಶ್ರುಕ್ಲತಿಪೌದರ್ಯದಿಂದಲೂ, ಧೀರಗೂರ್ಖಾರಿಂದಲೂ ಆಲಂಕೃತವಾದ ಪರದೆಯಿದ ಪೂರ್ವಪ್ಪಿಮ ಉದ್ದ ೧೦೦ ಮೈಲಿ, ದಕ್ಷಿಣೋತ್ತರ ಅಗಲ ೯೦ ಮೈಲಿ ಒಟ್ಟು ವಿಸ್ತೀರ್ಣ ೫೮,೦೦೦ ಚದರ ಮೈಲಿಗಳು ಜನಸಂಖ್ಯೆ ೫೭ ಲಕ್ಷ

ಈ ನರ್ವತದ ಪ್ರಾಂತಗಳಲ್ಲಿ ದಟ್ಟವಾದ ಕಾಡುಗಳೂ, ಸ್ವಚ್ಛವಾದ ಹಿಮಜಲ ನದಿಗಳೂ, ದೇಹದಾರ್ಢ್ಯಗಳೂ, ಶ್ರಮಸಹಿಷ್ಣುಗಳಾದ ಜನರೂ, ಸೌಂದರ್ಯದಿಂದ ಮುಗ್ಧರನ್ನಾಗಿಮಾಡುವಳಉನ್ನತ ಗಿರಿಶಿಖರಗಳೂ, ನಾನಾ ವಿಧವಾದ ಸಸ್ಯ ಸಮೃದ್ಧಿಯೂ ಇವೆ ಇಲ್ಲಿ ಅಸ್ಥಿರ ಶೀಯರಿಗೆ ಶ್ರವೇಶವಿಲ್ಲ. ಬ್ರಿಟಿಷರು ಇವರ ಮಿತ್ರರು ಮತ್ತು ಸಂಬಸಾನರು. ಗೂರ್ಖರ ಸ್ನೇಹವನ್ನು ಇವರು ಸದಾ ಬಯಸುವರು. ದೊರೆಯನ್ನು "ರಾಜಾಧಿರಾಜ"—ಹಿಸ್ ಮೆಜೆಸ್ಟಿ ಎಂದು ಕರೆಯುವರು. ಹಿಜಸ್ಟಿ ರಾಜವ್ಯ ಪೌಲ್ಯುಲ ನೇಪಾಳತಾರ ಅತಿ ಪುನಾಗೂರ್ಖಾ ದಕ್ಷಿಣ ಬಾಹು ವೃಥುಲಾಧೀಶ—ಹಿಳ್ ಹೈನೆಸ್ ದಿ ಮಹಾರಾಜ ಯೋಧ್ ಪಂಸೀರ ಜಂಗ್ ಬಹದ್ದೂರ ರಾಣಾಜೀ ಜಿ ಸಿ ಎಲ್ ಹೆಚ್ ಬಿರುದಾಂಕಿತರು ಮುಖ್ಯ ಮಂತ್ರಿ ಮತ್ತು ಕಮಾಂಡರ್ ಇ—ಚೀಫ್ ಆಗಿರುವರು. ಸುಮಾರು ಶ್ರೀ ಪೂ ೫೫೦ ರಲ್ಲಿ ಹಿಂದೂ ಮತವು ಇಲ್ಲಿ ಬೇರೂರಿದ್ದಿತ. ಆಕೋಕ ಚಕ್ರವರ್ತಿಯು ಶ್ರೀ. ಪೂ. ೨೫೦ ರಲ್ಲಿ ಇಲ್ಲಿಯ ವ್ಯಾಪಿತನೆಲ ಊರನ್ನೂ, ಅದರಲ್ಲಿ ಏನು ಸ್ತೂಪಗಳನ್ನೂ ಅನೇಕ ದೇವಾಲಯಗಳನ್ನೂ ಕಟ್ಟಿಸಿದನು. ಶ್ರಿ. ಶ ೧೮೮ ನೇ ಶತಮಾನದಲ್ಲಿ ಗೂರ್ಖಾ ಹಿಂದೂರಾಜ ಪೃಥ್ವಿನಾರಾಯಣ ಸಹ—ಎಬ್ಬುತನು ನೆ ಸಾಳ ಕಣಿವೆಯ ಪಾಳೆಯಗಾರರನ್ನು ಸೋಲಿಸಿ ಏಕ ರಾಷ್ಟ್ರವನ್ನು ಸ್ಥಾಪಿಸಿನನು ೧೮೯೦ ರಲ್ಲಿ ಅಲ್ಲಿ ಐಂಡೂ ಮತವು ನುತ್ತಿಷ್ಟಪ್ಪ ಚಿನ್ಹಾಗಿ ಬೇರೂರಿತ್ತು. ಅಲ್ಲಿಂದು ಆಚೆಗೆ ಗೋಚಕ್ಕೆ, ಗೋಭಕ್ಷಣಾದಿಗಳು ರಾಜ ಶಾಸನದ ಮೂಲಕ ನಿಲ್ಲಿಸಲ್ಪಟ್ಟವು ಹೌನ್ನತವು ಸ್ಥೀಣವಾಯಿತು

ಈಗ ಇಲ್ಲಿ ವಿಲಿಟರಿ ರಾಜ್ಯ ಸಸ್ಥತಿಯಿದೆ ಒಬ್ಬರು ಕಾನೂನು ಮಂತ್ರಿಸ್ಥಾಪಿಯನ್ನೂ ಸರಿಯಿದೆ ಹಣದ ಬಳಕೆ ಕಡಮೆ ವಿಶಿಷ ಬಿಡಿದ ಬಳುವಣಿಗೆಯ ವ್ಯಾಪಾರವೆಲ್ಲಿ ನಡೆಯುತ್ತಿದೆ ಜೂತಸಿಖಾಚೆಗಳ ಮತ್ತು ವಣಾಯಾ ಮಂತ್ರಗಳ ಭೀತಿಯು ಅಲ್ಲಿ ಏನೇನೂ ಇಲ್ಲ

೧೫೪೫ ರಲ್ಲಿ ಇಂಪ್ಲಾಂಡಿನ ಸರ್ ಜೋಸಾಫ್ ಹುಕರ್ ಅವರೂ, ೧೮೫೧ ರಲ್ಲಿ ಶ್ರೀ ರಜರ್ಡ್ ಡಾಸರೂ, ಬಾಲಿಂಜನ್ ವತ್ತು ಯೋಗಮ ಕಣಿವೆಗಳನ್ನು ಕಂಡು ಹಿಡಿದರು. ಇಂಗ ಬ್ರಿಟಿಷ್ ಹೋಗ ದಾರಿ ಅಷ್ಟೆ ಉತ್ತರ ಪ್ರದೇಶದಲ್ಲಿ ರಣಿಯ ಹೆಚ್ಚು ಅಸಾಧ್ಯ ಚಳಿ ಉಸಿರಾಡಲು ಗಾಳಿಯ ಸಾಲದು ಆ ಜೀವನವು ನೃತ್ಯವಿನ ದವಡೆಯಲ್ಲಿದ್ದಂತಿರುವುದು.

ಆಲ್ಲಿ ಒಂದೇ ಒಂದು ಸಣ್ಣ ಕೈಲುದಾರಿಯನ್ನು ಎರಡು ರಕ್ಷಣೆಗಳನ್ನು ಬಿಟ್ಟರೆ ಉಳಿದಲ್ಲೆಲ್ಲ ಕಲುಸಾರಿಗಳೆ! ಅಂತಹ ಬಿಟ್ಟಪ್ಪ ಸೀಮೆಯಲ್ಲಿ ರಸ್ತೆ ಮಾಡುವುದು ಬಹು ಕಷ್ಟ ಕಣಿವೆಯಿಂದಾಚೆಗೆ ಬೇಕ್ರಾ ಎಂಬ ಊರಿನವರೆಲ್ಲಿ ೧೦,೦೦೦ ಜನರಿರುವರು ಕಣಿವೆಯೊಳಗೆ ಖಟ್ಮಂಡು, ಪಾಟನ ಮತ್ತು ಭಾತ್ಗಾಂವ ಎಂಬ ಮುಖ್ಯ ನಗರಗಳಿವೆ ಸೋಕ್ರಾದಲ್ಲಿ ಸಂಚರಸಾದ ಸರೋವರಗಳಿವೆ ಬೇಸಗೆ ಮಳೆಗಾಲದಲ್ಲಿ ಹಸಯ ಹಿತವಾಗಿರುವುದಿಲ್ಲ

ರಾಜ್ಯ ಸ್ಥಾಪನೆ

ಸೊಲ್ಲಾಪುರಜಿಲ್ಲೆಗೆ ಸೇರಿದ ಬೋರಾಮಜ್ಜಿ ಗ್ರಾಮ ದಲ್ಲಿ ಶ್ರಾವಣ ಶು|| ೧ ರವಿವಾರದಿಂದ ಶ್ರೀ ಜಗದ್ಗುರು ರೇಣುಕಾಚಾರ್ಯ ಮಹಾಪುರಾಣವನ್ನು ಶಿವಭಕ್ತ ಶ್ರೇಷ್ಠರು, ಗುರುಭಕ್ತಿಯುತರೂ ಆದ ಶ್ರೀಮಂತ್ ಭೀಮರಾವ ಹುಕ್ಕೇರಿ ಮತ್ತು ವೀರಪ್ಪಹೇಡೆ ಇವರು ಶ್ರೀಮದ್ವೀರಶೈವ ವಾರದ ಪಾಶಕಾರಿಯಲ್ಲಿ ಶಿಕ್ಷಣವನ್ನು ಪಡೆಯುತ್ತಿರುವ ವೇ|| ಗಂಗಾಧರಶಾಸ್ತ್ರಿ ಹೊನ್ನೂರ ಇವರನ್ನು ಕರೆತಂದು ಪ್ರಾರಂಭಿಸಿದರು. ನಿತ್ಯದಲ್ಲೂ ಸಂಜೆ ೫ ರಿಂದ ೬ ರವರೆಗೂ ಇಲ್ಲಿಯ ಮಲ್ಲಿಕಾರ್ಜು ನದೇವಾಲಯದಲ್ಲಿ ನಡೆಯುತ್ತಿತ್ತು. ಇದೇ ಭಾದ್ರಪದ ಶು|| ೪ ಗುರುವಾರ ದಿವಸ ಸಮಾಪ್ತಿಗೊಳಿಸಲ್ಪ ಟ್ಟಿತು. ಅದೇ ಸಮಯದಲ್ಲಿ ಸಶ್ರೀ ಶ್ರೀಮಂತ

ಭೀಮರಾವ ಜೆ.ಕೈರೆ, ಶಂಕರರಾವ ಹುಕ್ಕೇರಿ, ಅಪ್ಪಾರಾವ ಅವಟಿ, ಶಿವಲಿಂಗಪ್ಪ ಮೊದಲಾದ ಪದ್ಮಶ್ರೀ ತಿರೋಮಣಿಗಳು ಮಲ್ಲಿಕಾರ್ಜುನ ಮಹಾಲಿಂಗಕ್ಕೆ ವಿಶೇಷ ರುದ್ರಾಭಿಷೇಕವನ್ನು ಗಂಗಾಧರಶಾಸ್ತ್ರಿಗಳ ವೈದಿಕತ್ವದಲ್ಲಿ ನೆರವೇರಿಸಿದರು. ಶ್ರೀ ಮಲ್ಲಿಕಾರ್ಜುನ ಲಿಂಗಕ್ಕೆ ಪ್ರಾತಃಕಾಲದಿಂದ ೧೧ ಘಂಟೆಯವರೆಗೂ ರುದ್ರಾಭಿಷೇಕವು ನಡೆಯಿತು. ಅನಂತರ ಗುರುಪಾದ ಪೂಜೆಯೂ ಗಣಸಂತರ್ಪಣೆಯೂ ನೆರವೇರಿದವು. ಗುರು ಸಾರ್ವಭೌಮರ ಪವಿತ್ರ ಚರಿತ್ರ ಶ್ರವಣದಿಂದಲೂ, ಶ್ರೀ ಮಲ್ಲಿಕಾರ್ಜುನ ದೇವರ ರುದ್ರಾಭಿಷೇಕದಿಂದಲೂ ಆ ಗ್ರಾಮಕ್ಕೆ ಪ್ರಾಪ್ತವಾದ ಪ್ಲೇಗರೋಗವು ದೂರವಾಯಿತು. ತೊಗೆಯ ದಿವಸ ಪುರಾಣವು ಸಮಾಪ್ತಿಗೊಂಡು ಧರ್ಮದಬಗ್ಗೆ ವ್ಯಾಖ್ಯಾನಗಳಾದವು. ಆಮೇಲೆ ಶ್ರೀ ಜಗದ್ಗುರು ಪಂಚಾಚಾರ್ಯರ ಜಯಘೋಷದೊಡನೆ ಕಾರ್ಯವು ಸಮಾಪ್ತಿಗೊಳಿಸಲ್ಪಟ್ಟಿತು.

ಶ್ರೀಜಗದ್ಗುರು ರೇಣುಕ ಟೈಪ್ರಿಂ ಸೆಕ್ರೆಟ್ರಿ.

ಶ್ರೀ ರೇವಣಸಿದ್ಧೇಶ್ವರ ಜಾತ್ರೆ ರೇವಣಿ.

ನಿಜಾಮರಿಯ್ಯದಲ್ಲಿ ಸುಪ್ರಸಿದ್ಧ ಕ್ಷೇತ್ರವೆನಿಸಿರುವ ಭೂಕೈಲಾಸ ರೇವಣಿ ಗುಡ್ಡದಲ್ಲಿ ಕಳೆದ ೧೯ ನೆಯ ಶತಾಬ್ದಿಯಿಂ ದಿವಸ ಶ್ರೀ ರೇವಣಸಿದ್ಧೇಶ್ವರನ ಜಾತ್ರೆಯು ಬಹು ವೈಭವದಿಂದ ನೆರವೇರಿತು ರಟ್ಟೆಗಲ್ಲ ಗ್ರಾಮದ ವೀರಶೈವ ಸಮಾಜದವರು ಭಜನಾಸಂಘದವರೊಡನೆಯೂ ವಾದ್ಯವೈಭವದೊಡನೆಯೂ ಆಗಮಿಸಿ ಶ್ರೀಗುರು ಸಾರ್ವಭೌಮ ರೇವಣಸಿದ್ಧೇಶ್ವರನ ಸೇವೆಯನ್ನು ಬಹು ಭಕ್ತಿಯಿಂದ ಆಚರಿಸಿದರು. ಶ್ರೀ ರೇವಣಸಿದ್ಧೇಶ್ವರನ ಮೂರ್ತಿಯನ್ನು ರಜತಪಲ್ಲಕ್ಕಿಯಲ್ಲಿ ಮೊರ್ತಗೊಳಿಸಿ ಸಕಲ ಬಿರುದಾವಳಿಗಳೊಡನೆ ನೆರೆದಿದ್ದ ೨೦-೩೦ ಸಾವಿರ ಭಕ್ತರು ಪರಮ ಭಕ್ತಿಯೊಡನೆ ಸಾಂಗಗೊಳಿಸಿದರು. ಈ ಮಹೋತ್ಸವಕ್ಕಾಗಿ ಸುಪ್ರ ಇನಸ್ಪೆಕ್ಟರ್ ಸಾಹೇಬರೂ ಜಮಾದಾರ ಸಾಹೇಬರೂ ಪೋಲೀಸ ಸಿಬ್ಬಂದಿಯೊಡನೆ ಆಗಮಿಸಿ ಉತ್ಸವದೆ ವ್ಯವಸ್ಥೆಯನ್ನು ಸಮರ್ಪಕವಾಗಿ ವಿಶದಪಿಸಿದ್ದರು. ಉತ್ಸವದಲ್ಲಿ ಜಗದ್ಗುರು ಪಂಚಾಚಾರ್ಯರ ಜಯಘೋಷವು ನಭೋಮಂಡಲವನ್ನು ವ್ಯಾಪಿಸಿತ್ತು. ಶ್ರಾವಣಮಾಸದಲ್ಲಿ ಶ್ರೀರೇಣುಕ ವಿಜಯಪುರಾಣಶ್ರವಣವು ಬಹುವೈಭವದಿಂದ ಜರಿಗಿತು ಈ ಕಾರ್ಯದಲ್ಲಿ ಶಿರಕರಾದ ಸಮಸ್ತ ಸದ್ಭಕ್ತಮಂಡಲಿಗೂ ಶ್ರೀಜಗದ್ಗುರು ಆಯುರಾರೋಗ್ಯಭಾಗ್ಯಾದಿ ಸಕಲಸಂಪತ್ಸಾಗಲನ್ನನುಗ್ರಹಿಸಿ ರಕ್ಷಿಸಲೆಂದು ಪ್ರಾರ್ಥಿಸುವ,

ಪಿ ಯಂ. ಕೊಟ್ರಯ್ಯಶಾಸ್ತ್ರೀ.

ಶಿವ್ಯರ ಮನೆಗಳ ರಿಜಿಸ್ಟರ್ ಬುಕ್

ಭರತಖಂಡದಲ್ಲಿರುವ ಪಕ್ಷ ಯೋಮು ಗುರುವರ್ಗದ ಹುಕ್ಕೆ ಸಾಮಿರಾಯ ಶಿಷ್ಯರ ಮನೆಗಳಿಸಂಖ್ಯೆಯನ್ನು, ಆ ಮಹಾಘಕಾರಗಳು ಅದುವರ್ಷಕ್ಕೊಮ್ಮೆ ಹತ್ತುವರ್ಷಕ್ಕೊಮ್ಮೆ ಸಂಚಾರಕ್ಕೆ ಹೋಗಿ ಶಿಷ್ಯರಿಂದ ಕಾಣಿಕೆಯನ್ನು ತೆಗೆದುಕೊಂಡು ಬರುತ್ತಿರುವರು. ಆದರೆ ಇವರು ತಮ್ಮ ಕರ್ತವ್ಯಕ್ಕನುಸರಿಸಿ ಶಿಷ್ಯರ ಯೋಗಕ್ಷ ವಿಷಯಗಳನ್ನು ಬರೆದಿಕೊಳ್ಳಲಿ ಕಾಣಿಕೆಯನ್ನು ಮಾತ್ರ ತೆಗೆದುಕೊಂಡು ಹೋಗಿಬರುವರು. ಈ ಅವ್ಯವಸ್ಥೆ ದುಂದ ಅನೇಕ ಮಹಿತವರಿಗೆ ತಮ್ಮ ಶಿಷ್ಯರ ಮನೆಗೇ ಗೊತ್ತಿಲ್ಲದೆ ಹೋಗಿದೆ ಇದನ್ನು ದೂರಮಾಡುವುದಕ್ಕಾಗಿ ಗುರುವರ್ಯರ ಮೇಲ್ವಂಶ ಪುಸ್ತಕವನ್ನು ಹೊಸ ದಾಗಿ ಮುದ್ರಿಸಲಾಗಿರುವುದೆ ಇದರಲ್ಲಿ ಬರೆಯುವ ವಿಷಯಗಳ ವಿವರವು ಚೆನ್ನಾಗಿ ತೋರಿಸಲ್ಪಟ್ಟಿದೆ ಅದುದರಿಂದ ಸದರಿ ಪುಸ್ತಕ ವನ್ನು ಶಿಷ್ಯರುಳ್ಳ ಪ್ರತಿಯೊಬ್ಬ ಗುರುವರ್ಗದವರೂ ಕರಾಸಿಕೊಂಡು ಅವರೆಲ್ಲರ್ಷ್ಟಿಂತೆ ವಿವರವನ್ನೆಲ್ಲಾ ಬರೆದು ಪಂಕಜಾರಂಭಕ್ಕೆವಾಗಿ ಬಂದ ಕಟ್ಟು ಶಿಷ್ಯರನ್ನು ಕಾಣಿಕೆಕೊಳ್ಳಬೇಕು. ಇವಕ್ಕಾಗಿ ಎಂಟೂ ಆಡಿದಂತೆ ಕಾಗದಗಳನ್ನು ಹಲವೋಗಿಸಿರುವದಲ್ಲದೆ ಸುಂದರವಾದ ಮತ್ತು ಭದ್ರವಾದ ಬೈಂಡನ್ನು ಮಾಡಿಸಿದೆ.

ಬೆಲೆ ೧ ರೂಪಾಯಿ

ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ವೈದಿಕ ಶಿವಪೂಜಾವಿಧಿ.

ವೀರಶೈವರಿಗೆ ಮುಖ್ಯವಾಗಿ ಬೇಕಾಗಿರುವ ಈ ಮೇಲ್ಮಂತ ಗ್ರಂಥವು ವೇದ ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರಿಂದ ವೈದಿಕಸಂಪ್ರದಾಯಾನುಸಾರವಾಗಿ ವಿರಚಿತವಾಗಿದ್ದು, ಶ್ರೀ ಪಂಚಾಚಾರ್ಯ ವಿದ್ಯುಕ್ಷುಪ್ರಕಾಲಯದಲ್ಲಿ ಬಹು ಮುದ್ದಾಗಿ ಮುದ್ರಿತವಾಗಿದೆ. ಇಲ್ಲಿಯವರೆಗೆ ಅನೇಕ ಕಡೆಗೆ ಶಿವಪೂಜಾವಿಧಿಗಳು ಮುದ್ರಿಸಲ್ಪಟ್ಟಿವೆ. ಆದರೆ ಮುದ್ರಾಪಕರಿಗೆ ವೈದಿಕಸಂಪ್ರದಾಯವು ಗೊತ್ತಿಲ್ಲದಿರುವುದರಿಂದ ಅನೇಕ ಕಡೆಗೆ ಮಂತ್ರಗಳು ಆಶುದ್ಧವಾಗಿ ಬಿದ್ದಿವೆ! ಅನೇಕರು ಆ ಆಶುದ್ಧಮಂತ್ರಗಳನ್ನೇ ಪಠಿಸುತ್ತಿರುವರು. ಇದು ಅತ್ಯಂತ ವ್ಯಸನಕರವಾದ ವಿಷಯವಾಗಿದೆ ಅಲ್ಲದೆ ವೇದಮಂತ್ರಗಳನ್ನು ವೈದಿಕ ಸ್ವರಸಹಿತವಾಗಿ ಉಚ್ಚರಿಸಬೇಕಲ್ಲದೆ ಸ್ವರಕೂನ್ಯವಾಗಿ ಉಚ್ಚರಿಸಬಾರದಷ್ಟೆ, ಇಲ್ಲಿಯವರೆಗೆ ಮುದ್ರಿತಗಳಾಗಿರುವ ಯಾವ ಶಿವಪೂಜಾವಿಧಿಯಲ್ಲಿಯೂ ವೇದಮಂತ್ರಗಳಿಗಾಗಲಿ, ಶ್ರೀರುದ್ರಾಧ್ಯಾಯ-ಚಮಕಾಧ್ಯಾಯ-ಪುರುಷಸೂಕ್ತಗಳಿಗಾಗಲಿ ವೈದಿಕಸ್ವರಗಳು ಹಾಳಲ್ಪಟ್ಟಿಲ್ಲ ಮತ್ತು ಪದವಿಭಾಗವೂ ಮಾಡಲ್ಪಟ್ಟಿಲ್ಲ-ಈ ಶಿವಪೂಜಾವಿಧಿಯಲ್ಲಿ ಈ ಕೊರತೆಯು ದೂರಮಾಡಲ್ಪಟ್ಟಿದೆ ಇವಕ್ಕಾಗಿ ಪಂಡಿತರು ಬಹು ಶ್ರಮವನ್ನು ವಹಿಸಿ ಋಗ್ವೇದ-ಯಜುರ್ವೇದಗಳನ್ನೆಲ್ಲ ಕೂಲಂಕಷವಾಗಿ ಪರಿಶೀಲಿಸಿ ವೀರಶೈವಪ್ರಪಂಚಕ್ಕೆ ಮಹೋಪಕಾರವನ್ನು ಮಾಡಿದ್ದಾರೆ ಈ ಪೂಜಾವಿಧಿಯಲ್ಲಿರುವ ವೈದಿಕಮಂತ್ರಗಳು ಯಾವ ವೇದದ ಯಾವ ಭಾಗದಲ್ಲಿರುವುದೆಂಬುದನ್ನು ಪಂಡಿತರು ವಿವರವಾಗಿ ತೋರಿಸಿದ್ದಾರೆ. ಪ್ರತ್ಯಕ್ಷವಾಗಿ ನೋಡಿದ ಮೇಲೆ ಈ ಗ್ರಂಥದ ಮಹತ್ವವು ಕೆಂಬರುವುದು. ಅಲ್ಲದೆ ಈ ಪೂಜಾವಿಧಿಯ ಅಂತ್ಯದಲ್ಲಿ—ಶಿವಸಹಸ್ರನಾಮಾವಳಿ, ಶಿವಾಷ್ಟೋತ್ತರ ಶತನಾಮಾವಳಿ, ಶಿವಕವಚ, ಪಾರ್ವತೀದೇವೀನಾಮಾವಳಿ, ವೀರಭದ್ರನಾಮಾವಳಿ, ಭದ್ರಕಾಳೀದೇವೀನಾಮಾವಳಿ, ಷಣ್ಮುಖಸ್ವಾಮಿನಾಮಾವಳಿ, ಶ್ರೀ ಪಂಚಾಚಾರ್ಯರ ನಾಮಾವಳಿಗಳು, ನಾನಾವಿಧ ಶಿವಸ್ತೋತ್ರಗಳು, ನಾನಾವಿಧ ದೇವೀಸ್ತೋತ್ರಗಳು, ನಾನಾವಿಧ ಗುರುಸ್ತೋತ್ರಗಳು ಮುದ್ರಿಸಲ್ಪಟ್ಟಿವೆ. ಒಟ್ಟಿಗೆ ಈ ಶಿವಪೂಜಾವಿಧಿಯು ಸರ್ವಾಂಗಸುಂದರವಾಗಿದ್ದು ಸರ್ವತೋಮುಖವಾಗಿ ಸ್ತುತ್ಯವಾಗಿದೆ. ಆದುದರಿಂದ ಪ್ರತಿಯೊಬ್ಬ ವೀರಶೈವರೂ ಈ ಪೂಜಾವಿಧಿಯನ್ನು ತಪ್ಪಿಸಿಕೊಂಡು ಇದರಲ್ಲುಕ್ತವಾಗಿರುವಂತೆ ಶಿವಪೂಜೆಯನ್ನು ಮಾಡಿ ಧನ್ಯರಾಗಬೇಕೆಂದು ಕೋರಿಕೆ. **ಬೆಲೆ ರೂ ೨ ಆಣೆ** ವಿ. ಪಿ. ಖರ್ಚು ಪ್ರತ್ಯೇಕ

ಮ್ಯಾನೇಜರ್,
ಪಂಚಾಚಾರ್ಯಪ್ರಭಾ ಆಫೀಸ್, ಮೈಸೂರು.

ಶಿವಾದ್ವೈತಮಂಜರಿ.

ಈ ಗ್ರಂಥವು ವೀರಶೈವಮತಗ್ರಂಥಗಳಲ್ಲೆಲ್ಲ ಶಿಖರಕ್ಕ ದಂತೊಪ್ಪುತ್ತಿರುವುದು ಎಲ್ಲರಿಗೂ ತಿಳಿದ ವಿಷಯವಾಗಿದೆ ಈ ಗ್ರಂಥವನ್ನು ಕಾಶ್ಮೀರದೇಶದ ಸ್ವಪ್ರಭಾವಂದ ಶಿವಾಚಾರ್ಯರೆಂಬ ಪ್ರಾಚೀನಾಚಾರ್ಯರು ರಚಿಸಿದ್ದಾರೆ ಈ ಗ್ರಂಥದಲ್ಲಿ ಶಕ್ತಿವಿಶಿಷ್ಟಾದ್ವೈತಸಿದ್ಧಾಂತವ ರಹಸ್ಯವು ಬಹು ಹೃದಯಂಗವಾಗಿ ಪ್ರತಿಪಾದಿಸಲ್ಪಟ್ಟಿದೆ ಈ ಗ್ರಂಥದ ಪಠಣೆಯು ಬಹುಕರಿನಿವಿದ್ಯದಂತೆ ಇದರ ರಹಸ್ಯವನ್ನು ತಿಳಿಯಲು ಪಂಡಿತಜನ ಗಳಿಗೂ ಕೂಡ ಆಸಾಧ್ಯವಾಗಿತ್ತು ಈ ಕೊರತೆಯನ್ನು ದೂರಮಾಡಿ ಇದರ ರಹಸ್ಯವ ಪ್ರತಿಯೊಬ್ಬರಿಗೂ ತಿಳಿಯಲೆಂಬ ಸದುದ್ದೇಶದಿಂದ ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರು ಈ ಗ್ರಂಥಕ್ಕೆ ಬಹು ವಿಶಾಲವಾಗಿ ಕನ್ನಡ ಟೀಕೆಯನ್ನು ಬರೆಯಿಸಿದ್ದಾರೆ. ಈ ಮೂಲ ಗ್ರಂಥವು ಕೇವಲ ೩೮ ಪುಟಗಳಿಂದ ಕೂಡಿದ್ದರೂ ಇದಕ್ಕೆ ಕನ್ನಡ ಟೀಕೆಯು ೧೩೨೩ ಪುಟಗಳಷ್ಟಾಗಿದೆ. ಈ ಮಹಾಗ್ರಂಥಮುದ್ರಣಕ್ಕಾಗಿ ಪಂಡಿತರು ವಿಶೇಷ ದ್ರವ್ಯವನ್ನು ವ್ಯಯಮಾಡಿದ್ದಾರೆ ಇಂಥ ದೊಡ್ಡ ಸಿದ್ಧಾಂತಗ್ರಂಥವು ಇಂದಿನವರೆಗೆ ಕನ್ನಡಭಾಷೆಯಲ್ಲಿ ಎಲ್ಲಿಯೂ ಮುದ್ರಿತವಾಗಿಲ್ಲವೆಂಬ ಘೋಷಣೆಯಾಗಿದೆ ಹೇಳಬಹುದಾಗಿದೆ ನಮ್ಮನ್ನಾಳುವ **ಶ್ರೀಮನ್ಮಹಾರಾಜಾಧಿರಾಜ ಶ್ರೀ ಕೃಷ್ಣರಾಜ ಒಡಿಯರ್ ಬಹದ್ದೂರ್ ಮಹಾಪ್ರಭುಗಳವರು** ಈ ಗ್ರಂಥದ ಯೋಗ್ಯತೆಯನ್ನು ಕಂಡು ಡೆತೀಕೆಪನ್ನಿಗೆ ಅಪ್ಪಣೆಯನ್ನಿತ್ತಿರುವರಲ್ಲದೆ, ಈ ಗ್ರಂಥದಲ್ಲಿ ವಿಮೋಚಿಸುವುದಕ್ಕೋಸ್ಕರ ತಮ್ಮ ಭವ್ಯವಾದ ಭಾವಚಿತ್ರವನ್ನು ಸಹಿ ದಯಪಾಲಿಸಿರುವರು. ಇದರಿಂದ ಈ ಗ್ರಂಥದ ಯೋಗ್ಯತೆಯು ಎಷ್ಟರಮಟ್ಟಿಗಿರಬೇಕೆಂಬ ವಿಷಯವನ್ನು ಬೇರೆ ಹೇಳಬೇಕಾಗಿಲ್ಲ. ಇಂಥ ಅಮೂಲ್ಯವಾದ ವೀರಶೈವಸಿದ್ಧಾಂತಗ್ರಂಥವನ್ನು ಪ್ರತಿಯೊಬ್ಬ ವೀರಶೈವರೂ ಅವಶ್ಯವಾಗಿ ತರಿಸಿಕೊಂಡು ಅವಲೋಕಿಸಿ ಸಿದ್ಧಾಂತ ವಿಷಯಗಳನ್ನು ತಿಳಿದುಕೊಂಡು ಧನ್ಯರಾಗ ಬೇಕೆಂದು ಕೋರಿಕೆ. ಒಟ್ಟು ಈ ಮಹಾಗ್ರಂಥವು ೧೩೪೮ ಪುಟಗಳಿಂದ ಕೂಡಿದ್ದು ಒಳ್ಳೆ ಬೆಲೆಯುಳ್ಳ ಕಾಗದದಲ್ಲಿ ಮುದ್ರಿಸಲ್ಪಟ್ಟಿರುವದಲ್ಲದೆ ಬಹುಸುಂದರವಾದ ಬೈಂಡಿಸಿಂಡೊಡಗೂಡಿದೆ. ಪವಿತ್ರವಾದ ವೀರಶೈವ ಸಿದ್ಧಾಂತದಲ್ಲಿ ವಿಶ್ವಾಸವುಳ್ಳ ಪ್ರತಿಯೊಬ್ಬರೂ ದುಡ್ಡಿನಕಡೆಗೆ ದೃಷ್ಟಿಯನ್ನಿಡದೆ ಈ ಗ್ರಂಥರತ್ನವನ್ನು ತರಿಸಿ ಕೊಂಡೇ ತೀರಬೇಕು. ಈ ಮಹಾಗ್ರಂಥದ ಬೆಲೆ ೪ ರೂಪಾಯಿ. ಒಂದುರೂಪಾಯಿಗೆ ಕಾಲ್ಭಾಗದಂತೆ ಕಮೀಷನ್ ವಹಿಸಿ ಜೋಗಳಾಗಿ ೬ ಕೊ. ಗೆ ಮೊರೆಯುವುದು. ವಿ. ಪಿ. ಖರ್ಚು ೧ ರೂ. ೫ ಆಣೆ ಪ್ರತ್ಯೇಕ.

ಮ್ಯಾನೇಜರ್—
ಪಂಚಾಚಾರ್ಯಪ್ರಭಾ ಆಫೀಸ್, ಮೈಸೂರು.

[೨ನೇ ಪುಟದ ಇನ್ನು ಮುಂದುವರಿದ]

ನ್ಯವನ್ನು ಅವರು ಮಾನಾಯರ ಕಛೇರಿಗೂ ಹಾಗು ಬೇಗ ಊರು ಬಿಟ್ಟು ನೆಪ ಒಪ್ಪಿಸುವ ಸಲುವಾಗಿ ಉದ್ಯೋಗಿಕ ಟೆಲಿಫೋನ್ಸ್ ಇಲಾಖೆಗೂ ಹೋಗಿ ಬಂದ ಪ್ರಯತ್ನ ಮಾಡಿದೆ. ಆದರೆ ಅವರಿಗೆ ಈ ಸಾಮಾನ್ಯ ಕೆಲಸವನ್ನು ಸಹಾ ಮಾಡಿದೆ ಒಂದೇ ಒಪ್ಪಂದಕ್ಕೆ ಬೇರೆ ಸ್ಥಾನದ ಬಿಲ್ಲರು ಲಸ ಮಾಡಿರುವ ಆ ಪೀಠದ ಕೆಲಸ ಪರಿಣಾಮವನ್ನು ಬದಲು ಸಾಮಾನ್ಯ ಪರಿಣತಿಯನ್ನು ಗಿತ್ತ ಒಬ್ಬನ ಕೆಲಸಕ್ಕೆ ಕೊಡುವಂತೆ ಆತನ ಪರಿವಾರವನ್ನು ಪೋಷಿಸುವ ಪರಿಸ್ಥಿತಿಯನ್ನು ನಿರ್ಮಾಣ ಮಾಡಿದೆ ಎಂದು ಅವರಿಗೆ ಗೊತ್ತಿಲ್ಲದೇ ಇದ್ದ ಕಾರಣ ಅವರು ಸಾಮಾನ್ಯ ಅನಾವಶ್ಯಕ ಪರಿಣಾಮವನ್ನು ಬದಲು ಅಧಿಕ ಪರಿಣಾಮವನ್ನು ಕೊಡುವ ಪ್ರಯತ್ನ ಮಾಡಿದ್ದರು. ಆದರೆ ಅವರ ಪ್ರಯತ್ನ ಫಲಿಸಲಿಲ್ಲ. ಆದರೆ ಅವರು ಮಾಡಿದ ಪ್ರಯತ್ನ ಅವರ

REGISTERED No. M. 2266 || ಮೈಸೂರು ಪಂಚಾಚಾರ್ಯಾಃ ಪ್ರಸೀದಂತು || REGISTERED No. M. 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿತರ್ ಪಂಚಾಸ್ಯವಿಸ್ತಾರಿಧಿಸರ್ | ಪಂಚಕ್ಲೇಶವಿನಾಶಕರ್ ಪರತರಶ್ರೀಪಂಚಲಿಂಗೋದ್ಭವರ್ ||
ಪಂಚಾಚಾರ್ಯನಿಯಾಮಕರ್ ಪರಿಲಸತ್ಪಂಚಾಕ್ಷರೀಮೋಪಕರ್ | ಪಂಚಾಚಾರ್ಯಜಗದ್ಗುರೂತ್ತಮವರರ್ ಪಾಲಿಪ್ಪುದಿರ್ಲೋಕಮಂ ||

ಸ್ಥಳದವರಿಗೆ ೧ ರೂ ೧೯ ಆಣೆ ಯಿಂದ ಪ್ರತಿ ೧೪ಕ್ಕೆ ೬ ಪೈ ದೂರ ಸ್ಥಳದವರಿಗೆ ೨ ರೂ ೮ ಆಣೆ ವಿ ಪಿ ಚಾರ್ಜು ಪ್ರತ್ಯೇಕ

ಸಂಪುಟ ೧೪.] ಪಂಚಾಚಾರ್ಯಪ್ರಭಾ, ಸೋಮವಾರ ತಾ|| ೨೩ ನೇ ಸೆಪ್ಟೆಂಬರ್ ೧೯೪೦ [ಸಂಚಿಕೆ ೨೦

ಗಾಂಧಿಯವರ ಭಾಷಣ.

ಅಖಿಲಭಾರತ ಕಾಂಗ್ರೆಸ್ ಸಭೆಯು ಅದಿನೇನವು ೧೫ ನೆಯ ತಾರೀಖಿನ ದಿವಸ ಜೋ-ಬಾಯಿಯಲ್ಲಿ ನೆರೆ ನೇರಿತು ಕಾಂಗ್ರೆಸ್ ಸದಸ್ಯರು ಗಾಂಧಿಯವ್ಗಳಿಗೆ ಕಾಂಗ್ರೆಸ್ಸಿನ ನಾಯಕತ್ವವನ್ನು ವಹಿಸಿದರು ಆಗ್ಗೆ ಅವರು ಈ ಕೆಳಗೆ ಕಂಡಂತೆ ಭಾಷಣಮಾಡಿದರು

"ತಾವು ನನ್ನ ಮೇಲೆ ಉಗ್ರವಾದ ಜವಬ್ದಾರಿಯನ್ನು ಹೊರಿಸಿದ್ದೀರಿ ನಾನೇನು ಮಾಡುವೆಂಬುದನ್ನು ಹೇಳಲಾರೆ ಆದರೆ ನೀನೇನೂ ಮಾಡಲ್ಲಗದೆಂಬುದನ್ನೂ ನಾನು ಹೇಳಬಲ್ಲೆ, ಅಖಂಡ ಸತ್ಯಾಗ್ರಹದ ಮಾತೇ ಇಲ್ಲ ವ್ಯಕ್ತಿಗಳ ಸತ್ಯಾಗ್ರಹವು ಸಲಿಯಬಹುದು ಅದೂ ಕೂಡ ಖಂಡಿತವಿಲ್ಲ ನಾನು ಈಗಲೂ ಏನನ್ನೋ ಹುಡುಕುತ್ತಿದ್ದೇನೆ ಆದರೆ ಇನ್ನೂ ಸಿಕ್ಕಿಲ್ಲ ನಾನೀವಿಚಾರವಾಗಿ ಒಂದು ತೀರ್ಮಾನಕ್ಕೆ ಬಂದೊಡನೆಯೇ ನಿಮಗೆ ತಿಳಿಸುತ್ತೇನೆ ಈ ಮಧ್ಯೆ ನೀವು ದೇವರನ್ನು ಕುರಿತು ಪ್ರಾರ್ಥನೆಮಾಡುತ್ತ, ಕಾಂಗ್ರೆಸ್ ನಾಯಕತ್ವದ ಜವಾಬ್ದಾರಿ ವಹಿಸಲು ನನಗೆ ದೇವರು ತಕ್ಕ ಯೋಗ್ಯತೆಯನ್ನೂ ಧೈರ್ಯವನ್ನೂ ಕೊಡಲೆಂದು ಬೇಡಬೇಕು ಕಾಂಗ್ರೆಸ್ಸಿಗೆ ಸರಿಯಾದ ಮಾರ್ಗ ತೋರಿಸಲು ನನಗೆ ಅಸಾಧ್ಯವಾದರೆ ನಾನು ನಿಮ್ಮಿಂದ ದೂರ ಬಂದು, ನನ್ನ ಸೇರಿಳ್ಳ ಒಪ್ಪಿಕೊಂಡು, ನೀವು ಕೊಟ್ಟಿರುವ ನಾಯಕತ್ವವನ್ನು ಹಿಂದಕ್ಕೆ ತೆಗೆದು ಕೊಳ್ಳುವಂತೆ ಬೇಡುವೆನು ನಾನು ಬ್ರಿಟಿಷ್ ಸರ್ಕಾರ ದೊಡನೆ ಒಪ್ಪಂದಕ್ಕೆ ಬರಿಬಹುದೆಂದು ಕಂತಿನವ ಹಲವು ಮಿತ್ರರಿದ್ದಾರೆ ಈ ನಿರ್ಣಯಗಳಲ್ಲಿ ಸಂಧಾನಕ್ಕೆ, ಒಪ್ಪಂದಕ್ಕೆ ಬೇಕಾದಷ್ಟು ಅವಕಾಶವಿದೆಯೆಂಬ ವನ್ನು ನಾನು ಆ ಮಿತ್ರರಿಗೆ ಸ್ಪಷ್ಟಪಡಿಸುತ್ತೇನೆ ಈಗ ಕಾಂಗ್ರೆಸ್ಸು ನಾಶವಾಗಿಸಿ ಪರಿಸ್ಥಿತಿಯುಂಟಾಗಿಲ್ಲವೇ? ಎಂದು ಕೇಳಲು ನೈಸರಾಯರ ಬಳಿ ತೆರಳಲು ನನಗೆ ಭಯವೇನೂ ಇಲ್ಲ" ಎಂಬುದಾಗಿ ನುಡಿದರು

"ಈ ನಿರ್ಣಯವಮೇಲೆ ಚರ್ಚೆ ನಡೆಯುವ ಮುನ್ನ ನನ್ನ ಅಭಿಪ್ರಾಯ ತಿಳಿಸಲು ಅವಕಾಶ ಕೊಡಬೇಕೆಂದು ನಾನು ಅಧ್ಯಕ್ಷರನ್ನು ಕೇಳಿದೆ ಕಳೆದ ೨೦ ವರ್ಷಗಳಲ್ಲಿ ನಾನು ಉಗ್ರ ಜವಾಬ್ದಾರಿ ಹೊತ್ತಿದ್ದೇನೆ ಆದರೆ ನೀವಿಂದು ಹೊರಿಸಿರುವುದು ಅತ್ಯಾಸ್ಚಾದ ಜವ ಬ್ದಾರಿ ನಾನು ಸ್ವಲ್ಪ ಹಿಂದುಮುಂದು ನೋಡಿ, ಆಲೋಚಿಸಿ ಮಾಡುವುದು ಸ್ವಾಭಾವಿಕವಾಗಿಯೇ ಇದೆ ನಾನು ನಿಮ್ಮನ್ನು ಎಷ್ಟು ದೂರ ಒಯ್ಯಬಲ್ಲೆ, ನಿಮ್ಮನ್ನೆಲ್ಲವೆ ನನ್ನನ್ನು ನಾನು ಎಷ್ಟು ಮಾತ್ರ ಕ್ರೈಸ್ತಿಸಿಡಿಸಬಲ್ಲೆ, ಎಂಬುದನ್ನು ನೋಡಬೇಕಾಗಿದೆ ಫಲಿತಾಂಶವೇನಾಗುವುದೋ ನನಗೆ ಗೊತ್ತಿಲ್ಲ ನನ್ನ ಗುರಿಯನ್ನು ಮುಟ್ಟುವೆನೋ ಇಲ್ಲವೋ ಗೊತ್ತಿಲ್ಲ ನಾವಾವ ಕೆಲಸ ಹಿಡಿದರೂ ಅಹಾರ ನಂಬಿಕೆಯಿಂದ ದುಡಿದಿದ್ದೇನೆ ಒಂದು ಜವಾಬ್ದಾರಿ ಹೊತ್ತಿನೆಂದರೆ ಯಾವ ಭಯವೂ ನನ್ನನ್ನು ನಿಲ್ಲಿಸುವುದಿಲ್ಲ ಕಾರ್ಯವನ್ನಾರಂಭಿಸಿದರೆ ಏನೇ ವಿಪತ್ತು ಒರಲಿ ಕಾರ್ಯಸಾಧಿಸಿಯೇ ತೀರಬೇಕ ಆದರೆ ನನಗಿರುವ ಮಿತಿಯನ್ನು ಕೂಡ ನಿಮಗೆ ತಿಳಿಸಬೇಕಾಗಿದೆ ನಾನು ೨೦ ವರ್ಷಗಳ ಹಿಂದೆ ಇದ್ದಂತೆ ಈಗಿಲ್ಲ ಹಿಂದೆ ಮಾಡಿದಂತೆ ದೇಶಪರ್ಯಟನಗೆ ಬೇಕಾಗುವ ಶಕ್ತಿ ನನ್ನಲ್ಲಿ ಇಲ್ಲ ಕಾಂಗ್ರೆಸ್ ಕೂಡ ಈ ೨೦ ವರ್ಷಗಳಲ್ಲಿ ಬದಲಾಯಿಸಿದೆ ಕಾಂಗ್ರೆಸ್ಸಿನಲ್ಲಿ ಹೊಸ ಶಕ್ತಿ ಪ್ರವಹಿಸುತ್ತಿದೆ ನಾನು ನಿಮ್ಮ ಹೃದಯವನ್ನು ಸಂಪೂರ್ಣವಾಗಿ ಆಕರ್ಷಿಸದೆ ಇದ್ದರೆ ತಾವು ಈ ನಿರ್ಣಯವನ್ನು ತಿರಸ್ಕರಿಸಬಹುದು ಅದಕ್ಕಾಗಿ ನಾನಾಗಲಿ ವರ್ಕಿಂಗ್ ಕಮಿಟಿಯವರಾಗಲಿ ವ್ಯಸನಪಡುವುದಿಲ್ಲ ಎಂದರು

ಅನಂತರ ಕಾಂಗ್ರೆಸ್ ಸಂಸ್ಥೆಯ ವಿಜಾರವೆತ್ತಿದರು "ಕಾಂಗ್ರೆಸ್ಸಿನ ಸದಸ್ಯರ ಪಟ್ಟಿಯಿಂದ ಆದರ ಶಕ್ತಿಯನ್ನು ಅಳೆಯುವುದು ತಪ್ಪು ಆ ಸದಸ್ಯರ ಪಟ್ಟಿಯ ಹಿಂದೆ ಕೋಟ್ಯಂತರ ಜನರಿದ್ದಾರೆ ಕಾಂಗ್ರೆಸ್ಸು ಹಿಂದೂ ಸಂಸ್ಥೆಯಲ್ಲ ಪಂಜಾಬು, ಬರ್ಮಾ, ಸಿಂಧ್‌ಗಳಲ್ಲಿ ಮುಸಲ್ಮಾನರು ಕಾಂಗ್ರೆಸ್ಸಿನಲ್ಲಿ ಪ್ರಬಲರಾಗಲು ಅಡ್ಡಿಯಿಲ್ಲ ಅಲ್ಪಸಂಖ್ಯಾತ ಪ್ರಾಂತಗಳಲ್ಲಿಯೂ ಆದಕ್ಕೆ ಮಾಡಬಹುದು ಭಾರತದ ಸ್ವಾತಂತ್ರ್ಯವ ಆದರ್ಶಕ್ಕೆ ಒಪ್ಪಿ, ಅದಕ್ಕಾಗಿ ದುಡಿಯುವ ಪ್ರತಿಭಾರತೀಯನಿಗೂ ಕಾಂಗ್ರೆಸ್ ದಾರವು ತೆರೆದಿದೆ ಆದಕ್ಕೆ ಸೇರಬೇಕಾದರು ಪ್ರತಿಭಾರತೀಯನ ಹಕ್ಕು ಆಜಾದರೂ, ಖಾನ ಸಹೋದರರೂ ೮೯ ಕೋಟಿ ಮುಸ್ಲಿಮರಲ್ಲದೆ ಕೋಟ್ಯಂತರ ಮಂದಿ ಇತರ ಪ್ರಜೆಗಳನ್ನು ಗುಲಾಮಗಿರಿಯಿಂದ ಮುಕ್ತರನ್ನಾಗಿಮಾಡಲು ಕಾಂಗ್ರೆಸ್ಸಿಗೆ ಸೇರಿಲ್ಲವೇನು! ಮುಸಲ್ಮಾನರಂತೆ ಪಾರ್ಸಿಗಳಿಗೂ ಕಾಂಗ್ರೆಸ್ಸು ಸೇರಿದ್ದು ಅವರ ಸಂಖ್ಯೆ ಕೇವಲ ೧ ಲಕ್ಷ ಕಾಂಗ್ರೆಸ್ಸು ಹಿಂದೂಸಂಸ್ಥೆಯೆಂಬ ಭಾವನೆ ಯಾವ ಹಿಂದುವಿಗಾದರೂ ಇದ್ದರೆ ಆತನು ತಕ್ಷಣ ಕಾಂಗ್ರೆಸ್ಸು ನಿಂದ ಹೊರಗಾಗಬೇಕೆಂದು ನಾನು ಸೂಚಿಸುತ್ತೇನೆ

'ಕಾಂಗ್ರೆಸ್ಸು ಸಾಂಕುಶ ಸಂಸ್ಥ ನಿರಂಕುಶಸಂಸ್ಥ ಯೆಂದು ಕರೆಯುವುದು ಶುದ್ಧ ತಪ್ಪು ಅಹಿಂಸಯನ್ನಲ್ಲಿ ಕಾಂಗ್ರೆಸ್ಸಿಗೆ ನಂಬಿಕ ಇರವದರಿಂದ 'ಫಾಸಿಜಂ' "ಇಂಪೀರಿಯ ಲಿಜಂ" "ನಾಜಿಜಂ" ಗಳಿಗೆ ಆದರಲ್ಲಿ ಸ್ಥಾನವಿಲ್ಲ ನಿಮ್ಮ ಮುಂದಿನ ಕೆಲಸವನ್ನು ನ ಧಿಸ ಬೇಕಾದರೆ ನಿಮ್ಮ ಪೇರದಲ್ಲರುವ ಅತ್ಯಂತ ಸ್ಪಲ್ಪ ಅಲ್ಪ ಸಂಖ್ಯಾತರ ಗುಂಪನ್ನು ಸಹ ನಿಮ್ಮ ಕಡೆಗೆ ಎಳೆದು ಕೊಳ್ಳಬೇಕೆಂದು ನಾವು ನಂಬಿದ್ದೇವೆ ಇಲ್ಲದಿದ್ದರೆ ಆ ಗುಂಪು ತೊಂದರೆ ಕೊಡುವುದು ತಪ್ಪ ಬಹು ಬಲದಿಂದ ಆಳವ ಇಷ್ಟ ಕಾಂಗ್ರೆಸ್ಸಿಗಿಲ್ಲ ಇಡೀದೇಶಕ್ಕೆ ಸೇನೆ ಮಾಡುವುದೊಂದೇ ಆದರೆ ಗುರಿ ಆದರ ಸದಸ್ಯರ ಸಂಖ್ಯ ವಿಕಸ್ಸಾರವಾಗಿ ಹೆಚ್ಚುತ್ತಿದೆ, ಅದರಂತೆಯೇ ಅದರ ಒಲವೂ ನೈರ್ಮಲ್ಯವಾಗುತ್ತಿದೆ ಅದು ಸತ್ಯ ಮತ್ತು ಅಹಿಂಸಾ ಮಾರ್ಗವನ್ನು ಸ್ಪಷ್ಟವಾಗಿ ಹಿಡಿದಿರುವುದೇ ಕಾರಣ" ಎಂದರು

"ನಿಮ್ಮಮೇಲೆ ಉಗ್ರವಾದ ಜವಾಬ್ದಾರಿ ಬಿದ್ದಿದೆ ಯೆಂದು ತಿಳಿದು ಅದನ್ನು ನೀವು ವಿಮರ್ಶಿಸಬೇಕು ನಾನು ಹಡಗಿನ ಕ್ಯಾಪ್ಟನ್‌ನಂತೆ ಇದ್ದೇನೆ ನನ್ನಲ್ಲೂ ಪ್ರತಿನಾವಿಕನಲ್ಲೂ ಸಂಪೂರ್ಣ ನಂಬಿಕೆಯಿರಬೇಕ ಇಲ್ಲವಾದರೆ ಹಡಗು ನ ಶವಾಗಬಹುದು ಇದರಿಂದ ಹಡಗಿನ ನೋಗಿರುವವರು ಮುಳುಗುವುದಲ್ಲದೆ ದೇಶದವರೆಲ್ಲ ತೊಂದರೆಗಾಡಾಗುವರು ನಾವು ಸರಿಯೆನಿಸಿ ಹೋಗಲು ಶಕ್ತರಾಗಿಲ್ಲ ಇಷ್ಟಬಂದಾಗ ನನ್ನನ್ನ ಸರಿಯೆನಿಸಿ ದೂಡಿ ಬೇಗಜಾಕುವ ಶಕ್ತಿ ಸರ್ಕಾರಕ್ಕಿದ್ದೇಇದೆ ಸದ್ಯ ಕ್ಕಂತೂ, ಅವನ ವ್ಯವಾದರೆ ಜೊತೆ ವಿಧಿನಿಯಮಗಳನ್ನು ಒಪ್ಪಿದರೆ ನಾವು ಸಂವಿಧಾನ ನಿಮ್ಮ ಮುಂದಿರುವ ನಿರ್ಣಯವನ್ನು ಬರೆವವನು ನಾನೇ ಸಂಪಿತ ನೆಹರುರವರು ಅದಕ್ಕೆ ಒಣ್ಣ ಕೊಟ್ಟಿದ್ದಾರೆ ಅಹಿಂಸಾತ್ಮಕತೆಯನ್ನ ಒತ್ತಿ ಹೇಳುವ ಕಡೆ ಕೋಡ ಭಾಗ ತೆಗೆದುಹಾಕಬೇಕೆಂದು ನಾನು ಇಷ್ಟಪಟ್ಟಿ ಪಂಡಿತ ನೆಹೆರುರವರೂ ಒಪ್ಪಿದರು ಆದರೆ ಆದು ಇರಲೇಬೇಕೆಂಬ ಆಜಾದರು ನುಡಿದರು. ಸ್ವಾತಂತ್ರ್ಯ ಸಂಪಾದನೆಗೆ ಮಾತ್ರವಲ್ಲ ಅನಂತರವೂ ಕೂಡ ಆಡಳಿತವನ್ನು ಅದಪ್ಯಮಟ್ಟಿಗೆ ಅಹಿಂಸ ರೀತಿಯಲ್ಲಿಯೇ ಸಡೆಸಿಕೊಂಡು ಬರಲೂಗ ವಡೆಂಮ ನಿರ್ಣಯವನ್ನು ಸೂಚಿಸುತ್ತದೆ

ತಮ್ಮ ಭಾಷಣವನ್ನ ಮುಂದುವರಿಸುತ್ತ "ಕಾಂಗ್ರೆಸ್ ಅಧಿಕಾರ ಸ್ವೀಕಾರ ಮಾಡಿದಾಗ ಅವರ ಮನಸ್ಸೊಂದೇ ಕೆಲಸ ಮಾಡುವುದಿಲ್ಲವೆಂಬುದನ್ನೂ ಇತರ ಪಕ್ಷಗಳ ಮನಸ್ಸು ಕೆಲಸ ಮಾಡುವುದೆಂಬುದನ್ನೂ ತಿಳಿದಿರಬೇಕು ನಾವು ಅಲೋಚಿಸಿದಾಗ ಧಾರಶಪ ಪಾಶ್ಚಿಮೇಟಿನಲ್ಲಿ ಎಲ್ಲ ಪಕ್ಷಗಳವೂ ಇರುವರು ಪ್ರಾಶ್ಚವ ಯುಸ್ಸಾರ್ಲ್ಯರೂ ಓಟುಮಾಡಬೇಕೆಂದು ನಾನಾಗಲೇ ಹೇಳಿದ್ದೇನೆ ಹಿಂಸೆಯ ಲ್ಲಿ ನಾವು ನಂಬಿಕೆಯನ್ನು ಇಟ್ಟಿರವೆ ಹೋಗಿರುವುದರಿಂದ ಯಾವ ಸರ್ಕಾರಮೊಡನೆಯೂ ಕಾಂಗ್ರೆ ಸಹಕರಿಸುವುದಿಲ್ಲವೆಂದು ನಿರ್ಣಯವು ವಿವರಿಸಿದೆ ಬ್ರಿಟನ್ನಿಗೆ ಕೆಟ್ಟದ್ದಾಗಬೇಕೆಂದು ನಾವು ಎಂದಿಗೂ ಬಯಸುವುದಿಲ್ಲ ಆದರೆ ಇಂದು ಆದು ನಡೆಯುತ್ತಿರುವ ಹೋರಾಟದಲ್ಲಿ ಕಾಂಗ್ರೆಸ್ ಭಾಗವಹಿಸಿ ಸಹಾಯನೀಡುವುದಿಲ್ಲ ಬ್ರಿಟಿ ತನ್ನ ಇರುವಿಕೆಗಾಗಿ ಹೋರಾಟನಡೆಸುತ್ತಿರುವ ಈ ಸಮಯದಲ್ಲಿ ನಾವು ಸತ್ಯಾಗ್ರಹವನ್ನು ಹೂಡ ವುದಕ್ಕಾಗುವುದಿಲ್ಲ ತನ್ನ ಪ್ರತಿಸ್ಪರ್ಧಿಯ ದೌರ್ಬಲ್ಯವನ್ನ ತನಗೆ ಅನುಕೂಲವಾಗುವ ರೀತಿಯಲ್ಲಿ ಉಪಯೋಗಿಸಿಕೊಳ್ಳುವುದು ಸತ್ಯಾಗ್ರಹದ ಲಕ್ಷಣವಲ್ಲ ಆರೀತಿ ಉಪಯೋಗಿಸಿಕೊಳ್ಳುವುದರಲ್ಲಿ ಸತ್ಯಾಗ್ರಹಿಯು ನಂಬಿಕೆಯನ್ನು ಇಡುವುದಿಲ್ಲ ನಾವು ಳಿಸಬೇಕಾದವ್ಯನ್ನೆಲ್ಲಾ ನಮ್ಮ ಶಕ್ತಿಯ ಮೂಲ ಕವೇ ಗಳಿಸಿಕೊಳ್ಳಬೇಕು ಆಮದಂದೆಂದೇ ಬ್ರಿಟ ನ್ನನ್ನು ತೊಂದರೆಗೆ ಸಿಕ್ಕಿಸಬಾರದೆಂದು ನಾವು ಹೇಳುತ್ತಿರುವುದು" ಎಂದರು

"ಪ್ರಜೆಗಳ ಸಿವಿಲ್‌ಹಕ್ಕುಬಾಧ್ಯತೆಗಳ ರಕ್ಷಣೆಯ ಜವಾಬ್ದಾರಿಯನ್ನು ತಾನು ಹೊತ್ತಿರುವುದಾಗಿ ಕಾಂಗ್ರೆಸ್ ಹೇಳುತ್ತಿದೆ ಸಂಗ್ರಾಮದ ವಿಷಯವಾಗಿ ನನ್ನ ಅಭಿಪ್ರಾಯವೇನೆಂಬುದನ್ನು ಸ್ಪಷ್ಟವಾಗಿ ತಿಳಿಸಲ ನವಗೆ

[೫ ನೆಯ ಪುಟವನ್ನು ನೋಡಿ]

ಶ್ರೀ ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು

ಶ್ರೀ ರೇಣುಕವಿಜಯ ಪುರಾಣಸಮಾಪ್ತಿ ಹೂಲಿ

ಸವದತ್ತಿ ತಾಲೂಕು ಹೂಲಿ ಶ್ರೀ ಸಾಂಬಯ್ಯ ಸ್ವಾಮಿ ವರದಲ್ಲಿ ಪ್ರತಿವರ್ಷ ಪದ್ಧತಿಯಂತೆ ಈ ವರ್ಷವೂ ಶ್ರಾವಣ ಶುದ್ಧ ೧೦ ಭಾನುವಾರದಿಂದ ಶ್ರೀ ಕೆಳೈಗದ್ದು ಗೌಗೂ, ಹಾಗೂ ಸಂಧಾಕಾಪನ್ನು ಹೊಂದಿದ ಮಹಿಮಾ ಶಾಲಿಗಳಾದ ಶ್ರೀ ಬಾಲಲೀಲಾಸೋಮೇಶ್ವರಸ್ವಾಮಿಗಳ ವರ ಗದ್ದುಗೆಗೂ, ಶ್ರೀ ಗಿದ್ರಾಬಿಸೇವರ ವಿದ್ಯುಕ್ತವಾಗಿ ವೇ॥ ಪಂ॥ ಹರಿಪ್ರಸಾದ ಶಾಸ್ತ್ರಿಗಳವರ ವೈದಿಕತ್ವದಲ್ಲಿ ಅಕ್ಯಂತ ವೈಭವದಿಂದ ನೆರವೇರಿಸಿ ಗಂಗಳಿಕ್ಕೆ ಪರಾಯಣರಾದ ಭಕ್ತಮಂಡಲಿಯವರ ತನ್ಮಯ ತೆಮ್ಮನ್ನು ಇಷ್ಟಾರ್ಥವನ್ನು ಪಡೆದು ಕೃತಾರ್ಥರಾಗ ಬೆದಕ್ಕಾಗಿ ಒಂಬಾಯಿ ದಿವರ ತಮ್ಮತಮ್ಮ ಜೆಸರಿಂದ ಶ್ರೀ ರುದ್ರಾಭಿಷೇಕವನ್ನೂ ಅನ್ನಸಂತರ್ಪಣೆಯನ್ನೂ ನಡೆಯಿಸಿದುದು ಅತ್ಯಂತ ಸ್ತುತ್ಯವಾದ ಸಂಗತಿಯು

ಸಾಂಬಯ್ಯಸ್ವಾಮಿ ಮರವರ ಈಗಿನ ಶ್ರೀ ಚರಮೂರ್ತಿ ಸ್ವಾಮಿಗಳವರು, ಸಣ್ಣವರಾಗಿದ್ದಾಗ್ಯೂ ಸುಚಿಲುಮ ಚಿತ್ತೀಂದ್ರಿಯ ರೂ ಶಿವಪೂಜಾದುರೀಣರೂ ಆಗಿದ್ದಾರೆ

ಇವರು ಪ್ರತಿದಿನವೆ ತಪ್ಪ ವ ರವಲ್ಲಿ ಸಾಯ ಕಾಲ ೫ ಘಂಟೆಯಿಂದ ೭ ಘಂಟೆಯವರೆಗೆ ಶ್ರೀ ಜಗದ್ಗುರು ರೇಣುಕವಿಜಯ ಪುರಾಣವನ್ನು ಪ್ರಾರಂಭಮಾಡಿ ಸರ್ವರಿಗೂ ಆಚಾರ್ಯಪದವತ್ತುದರವರು ಮಾಡಿರುವ ಆನಂತಾನಂತ ಲೀಲೆಗಳನ್ನು ವಿವರಿಸಿ ಪ ನಸಮಾಡಿಕೊಟ್ಟು ಸಕಲ ಭಕ್ತಮಂಡಲಿಯ ಪ್ರತಿಯಿಷ್ಟಾಸಗಳಿಗ ಪಾತ್ರರಾದರು.

ಸ್ವಸಚನ ಕಾರಂದ ವೇ॥ ಪಂ॥ ಧರ್ಮ ಭೂಷಣ ಹರಿಶ್ಚಂದ್ರಶಾಸ್ತ್ರಿಗಳು ಧರ್ಮ, ನೀತಿ, ಸತ್ಯ, ಅಹಿಂಸಾ, ಬ್ರಹ್ಮಚರ್ಯ, ಸಾಪೇಕ್ಷ ಇತ್ಯಾದಿ ವಿಷಯಗಳನ್ನು ಬೋಧಿಸಿ ಶ್ರೋತೃವೃಂದಕ್ಕೆ ಆನಂದವನ್ನುಂಟುಮಾಡಿದರು.

ಈ ರೀತಿಯಾಗಿ ಉಭಯ ಕಾರ್ಯಗಳೂ ಬಂದು ತಿಂಗಳ ವರೆಗೂ ನಡೆದು. ತಾ॥ ೩೧ ೪೦ ನೆಯ ದಿವಸ ಸಮಾಪ್ತಿಯನ್ನು ಹೊಂದಿಸುವ ಆ ದಿನ ವಧ್ಯಾಹ್ನ ಆರಾಧನೆಯು ನೆರವೇರಿತು ಸಾಯಂಕ ಲಕ್ಷ್ಮಿ ಕೃಂಗರಿಸಿದ ಪಲ್ಲಕ್ಕಿಯಲ್ಲಿ ಶ್ರೀ ರೇಣುಕವಿಜಯ ಪುರಾಣವನ್ನೂ ಶ್ರೀ ಬಾಲಲೀಲಾ ಸಂಗನೇಶ್ವರ ಸ್ವಾಮಿಗಳವರ ಭಾವಪಟವನ್ನೂ ಇಟ್ಟು ವಾದ್ಯಸಮೃದ್ಧವಾದೊಡನೆ ಉತ್ಸವವು ಗ್ರಾಮದ ಎಲ್ಲಾ ಬೀದಿಗಳಲ್ಲಿಯೂ ಅಕ್ಯಂತ ವೈಭವ ದಿಂದ ನೆರವೇರಿಸಲ್ಪಟ್ಟಿತು ದೇಶೀಯ ವಾದ್ಯಗಳಿಂದಲೂ, ಇಂಗ್ಲೀಷಿನಲ್ಲಿರುವ ಮಂಜುಳವಾಗಿ ಗಾವ ನಾಡುವ ಭಜನಾ ಸಂಘದವರಿಂದಲೂ, ಶ್ರೀ ಕ್ಷೇತ್ರ ಗೊಡಚಿ ಗುರುಕುಲಾಶ್ರಮದ ವಿದ್ಯಾರ್ಥಿಗಳ ವೇದ ಘೋಷದಿಂದಲೂ, ಪಥ್ಯಮಧ್ಯದಲ್ಲಿ ಉಜ್ಜಯಿನಿಪೀಠದ ಜಗದ್ಗುರುಪಾರ್ಯರ ಜಯಘೋಷಗಳಿಂದಲೂ ಭಕ್ತರ ಉತ್ಸಾಹವು ಇಮ್ಮಡಿಯಾಗಿತ್ತು

ಈ ರೀತಿಯಾಗಿ ಉತ್ಸವವು ಎಲ್ಲ ಬೀದಿಗಳಲ್ಲಿಯೂ ವೈಭವದಿಂದ ಸಾಗಿ ಶ್ರೀ ಸಾಂಬಸ್ವಾಮಿಮರಕ್ಕೆ ತಲ್ಪಿ ದನಂತರ ಶ್ರೀಪುರಾಣಕ್ಕೆ ಮಹಾಮಂಗಳಾರತಿಯನ್ನು ಮಾಡಿ ಸರ್ವರೂ ಪ್ರಸಾದವನ್ನು ಸ್ವೀಕರಿಸಿದರು

ಈ ಮಂಗಳ ಕಾರ್ಯಕ್ಕಾಗಿ ಹುಬ್ಬಳ್ಳಿ ಹೆನ್ನೆರಡು ಮರ, ಕಟ್ಟಿತೋಳ, ಸತ್ತಿಗೇರಿ ಮೊದಲಾದ ಪಟ್ಟಾ ಧ್ಯಕ್ಷ ಸ್ವಾಮಿಗಳವರು ಹಾಗೂ, ಅಜೂಬಾಜು ಗ್ರಾಮದ ಮಾಧಿಕಾರಿಗಳು ಮತ್ತು ಭಕ್ತಮಂಡಳಿಯವರು ಆಗ ಮಿಸಿದ್ದರು. ಶ್ರಾವಣ ಒಂದು ತಿಂಗಳವರೆಗೂ ಪ್ರಾತಃ ಕಾಲ ಶ್ರೀರುದ್ರಾಭಿಷೇಕವಿಂದಲೂ ಸಾಯಂಕಾಲ ಪ್ರವ ಚನದಿಂದಲೂ ದಕ್ಷಿಣಕಾಶಿಯೆಂದು ಹೆಸರುವಾಸಿಯಾದ ಶ್ರೀಪುರವ್ಲಿ (ಹೂಲಿ) ಸಟ್ಟಿಯವ ಪ್ರತ್ಯಕ್ಷ ಕೈಲಾಸ ದಂತೆ ತೋರುತ್ತಿತ್ತು.

ಇದೇ ರೀತಿ ಪ್ರತಿವರ್ಷವೂ ಶ್ರಾವಣಮಾಸದಲ್ಲಿ ಮಂಗಳಕಾರ್ಯವು ನಡೆದು ಸರ್ವ ಅಷ್ಟಿಕ ಭಕ್ತಮಂಡಳಿಗೆ ಸಂತೋಷವನ್ನುಂಟುಮಾಡಲೆಂದೂ ದಯಾಳಿನ ನಾದ ಶ್ರೀ ಪರಶಿವನು ಸರ್ವರಿಗೂ ಅಂತಹ ಸದ್ಬುದ್ಧಿ ಯನ್ನು ಪ್ರಸಾದಿಸಲೆಂದೂ ಹಾರೈಸುವ,

ಒವರ ಗುರುಭಕ್ತ

ಶ್ರೀ ರೇಣುಕವಿಜಯ ಮಹಾಪುರಾಣ ಸಮಾಪ್ತಿ, ಸೂಡಿ.

ಧಾರವಾಡ ಡಿ॥ ರೋಣ ತಾ॥ ಸೂಡಿಜುಕ್ತಿ ಹಿರೇ ಮರದಲ್ಲಿ ಪ್ರತಿವರ್ಷ ಪದ್ಧತಿ ಪ್ರಕಾರ ಶ್ರಾವಣಮಾಸ ದಲ್ಲಿ ಚುರ್ಚಿಹಾಳಹರ್ತಿಮರದ ಗವಾಯಿ ಬಸವಯ್ಯ ನವರ ಸಂಗೀತಸಾಹಿತ್ಯದೊಡನೆ ಹಿರೇಹರಕುಣಿ ಹಿರೇ ಮರದ ಪ್ರವಚನಪಟು ಸಿದ್ಧಲಿಂಗೇರವರಿಂದ ಪ್ರಾರಂ ಭಿಸಲ್ಪಟ್ಟ ಶ್ರೀ ರೇಣುಕವಿಜಯ ಮಹಾಪುರಾಣವು ಸರ್ವ ಮತೀಯರಿಗೂ ಸಮ್ಮತವಾಗುವಂತೆ ಬೋಧಿಸಲ್ಪ ಟ್ಟಿತು ನಾನಸೂರು ಬೃಹನ್ಮಠಾಧ್ಯಕ್ಷರಾದ ವೇ॥ ಪಂಡಿತ ಶ್ರೀ ಕಾಶೀನಾಥರುದ್ರಶಾಸ್ತ್ರಿಗಳವರು ಗುರುವರ್ಗದ ಜಾಗೃತಿ ಗಾಗಿ ವೀರಶೈವಧರ್ಮ ಗ್ರಂಥಗಳನ್ನು ಅಹೋರಾತ್ರಿ ಕೋಧರ್ಮಾಡಿ ಪ್ರಿಂಟಿಸಿನಾಡಿಸಿ ಸಮಾಜಕ್ಕೆ ಮಹೋಪ ಕಾರವನ್ನು ಮಾಡಿದ ವಿಷಯವನ್ನು ಮೇಲಿಂದಮೇಲೆ ಬೋಧಿಸುತ್ತಿದ್ದರು ಮಹಾಪುರಾಣ ಶ್ರವಣಕ್ಕೋಸ್ಕರ ಸ್ವಗ್ರಾಮದವರೊ ಪರಗ್ರಾಮದವರೊ ಭಜನಾ ಸಂಘದೊಡನೆ ೫ ೬ ಮೈಲಿಗಳ ದೂರದಿಂದ ತಂಡೋಪ ತಂಡವಾಗಿ ಬಂದು ಕೂಡುತ್ತಿದ್ದರು ಪರಸ್ಪರವಿದಿಂದ ಬಂದ ಅತಿಥಿಗಳ ಸತ್ಕಾರವನ್ನು ಪುರಾಣ ಸಂಘದವರು ಬಹುದಕ್ಷತೆಯಿಂದ ನಡೆಯಿಸುತ್ತಿದ್ದರು ಪುರಾಣಶ್ರವ ಣದಿಂದಲೇ ನೂರಾರು ಹೆಣ್ಣುಮಕ್ಕಳು ಗಂಡುಮಕ್ಕಳು ವಿಧ್ಯುಕ್ತವಾಗಿ ವೀ॥ ಬ್ರ॥ ಶ್ರೀ ಉಮಾಪತಿ ತಿವಾಚಾರ್ಯ ರಿಂದ ಶಿವದೀಕ್ಷೆಯನ್ನು ಹೊಂದಿದರು ಇದೇ ಮರದಲ್ಲಿ ಸ್ಥಾಪಿಸಲ್ಪಟ್ಟ ವೈದಿಕ ಮತ್ತು ಜ್ಯೋತಿಷ ಪಾಠಶಾಲೆಗೆ ಅನೇಕ ಜನರು ಭಕ್ತಿಪೂರ್ವಕ ವರ್ಷಾಶನ ರೂಪವಾಗಿ ಧನವನ್ನರ್ಪಿಸುತ್ತಿರುವರು ಸದರಿ ಸ್ವಾಮಿಗಳಿಗೆ ಇದೇ ಗ್ರಾಮದ ಗುರುಭಕ್ತರಿಂದಲಾದ ವ ಲಿಂಗೂರು ವೀರಮ್ಮ ನವರು ಸುಂದರವಾದ ನಕ್ಷೆಗಳಿಂದ ತಯಾರಿಸಲ್ಪಟ್ಟ ಬಹುಜಿಲೆಯುಳ್ಳ ಪಲ್ಲಕ್ಕಿಯನ್ನು ಉತ್ಸವದ ಬಗ್ಗೆ ಕಾಣಿ ಕಾರೂಪವಾಗಿ ಅರ್ಪಿಸಿದರು ಪಲ್ಲಕ್ಕಿಯ ಉಪಕರಣ ಗಳಾದ ರಾಜಗೊಂಡೆಗೋಸ್ಕರ ಸಂಗನಬಸಪ್ಪ ಜಾಲಿ ಹಾಳ ಇವರು ಒಂದು ನೂರು ರೂಪಾಯಿಗಳನ್ನೂ ನೆಗಳ ಮುಖದಬಗ್ಗೆ ಪರವ್ವ ಮುಧೋಳ ಇವರು ಒಂದು ನೂರು ರುಪಾಯಿಗಳನ್ನೂ ಮತ್ತು ಸಿಂಹಮುಖದಬಗ್ಗೆ ರುದ್ರವ್ವ ಗಂಗೂರ ಇವರು ಎಪತ್ತು ರೂಪಾಯಿಗ ಳನ್ನೂ ಬಹು ಭಕ್ತಿಪೂರ್ವಕ ಅರ್ಪಿಸಿದರು ಇದೆಲ್ಲವೂ ಪೂಜ್ಯವಾದ ಶ್ರೀ ರೇಣುಕಾಚಾರ್ಯರ ಪುರಾಣಶ್ರವಣದ ಮಹಿಮೆ ಎಂದೇ ಹೇಳಬೇಕಾಗಿದೆ ಭಾದ್ರಪದ ಶು॥ ಅ ಸೋಮವಾರ ಈ ಮಹಾಪುರಾಣ ಸವಾಪ್ತಿಯಾ ಯಿತು ಆ ಕಾಲಕ್ಕೆ ಕುಂದಗೋಳ ಪಂಚಗೃಹಿ ಹಿರೇ ಮರಾಧ್ಯಕ್ಷ ಚರಚಕ್ರವರ್ತಿಗಳಾಗಿ ಗುರುಪಾದ ತಿವಾ ಚಾರ್ಯರು, ಚಿಕ್ಕಮಂಡಾರ ಹಿರೇಮಠಾಧ್ಯಕ್ಷ ಶ್ರೀ ರೇಣಪ್ಪಸಿದ್ಧತಿವಾಚಾರ್ಯರು, ಹಂಚಿನಾಳ ತಿತಿಕಂಠಶಾ ಸ್ತ್ರಿಗಳು, ತಾಳಿಕೋಟೆಯ ಬಸವರಾಜಶಾಸ್ತ್ರಿಗಳೇ ಮೊದ ಲಾದವರು ಆಗಮಿಸಿ ಶೋಭೆಯನ್ನುಂಟುಮಾಡಿದರು ಅಲಂಕರಿಸಿದ ಪಲ್ಲಕ್ಕಿಯಲ್ಲಿ ಕುಂದುಗೋಳ ಶ್ರೀ ಸ್ವಾಮಿ ಗಳನ್ನೂ ಮೂರ್ತಮಾಡಿದರು ಪಾಠಶಾಲೆಯ ವಿದ್ಯಾರ್ಥಿ ಗಳ ವೇದಘೋಷದಿಂದಲೂ ಭಜನಾಸಂಘದಿಮೇಳಗ ಳಿಂದಲೂ ದೇಶೀಯ ವಿದೇಶೀಯ ವಾದ್ಯಗಳಿಂದಲೂ ಮಹೋತ್ಸವವು ರಂಭಾಸ್ತ್ರಂಭಾದಿಗಳಿಂದ ಅಲಂಕ ರಿಸಲ್ಪಟ್ಟ ರಾಜಬೀದಿಗಳಲ್ಲಿ ಹೊರಟು ಗುರುಮರಕ್ಕೆ ೧ ಘಂಟೆಗೆ ತಲ್ಪಿತು ಪದ್ಧತಿಪ್ರಕಾರ ಮಹಾಪುರಾಣವು ಸಮಾಪ್ತಿ ಮಾಡಲ್ಪಟ್ಟಿತು ಬಳಿಕ ಚಿಕ್ಕಮಂಡಾರ ಸ್ವಾಮಿಗಳು ಪಂಡಿತಾಮಾಮರಿಗೆ ಬೋಧಪಮಾಗುವಂತೆ ಗುರುಭಕ್ತಿಯನ್ನು ಬೋಧಿಸಿದರು. ಹಂಚಿನಾಳ ಶಾಸ್ತ್ರಿ ಗಳೂ ತಾಳಿಕೋಟೆಶಾಸ್ತ್ರಿಗಳೂ ಸಮಾಜಜಬುಗೆ ಬಹು ಸ್ಫಾರಸ್ಯವಾಗಿ ಉಪದೇಶಿಸಿದರು ಇದೇ ಸಮಯದಲ್ಲಿ ಗೌರವ್ಯಾರ್ಹ ಹೆಡ್ಡಮಾಸ್ತರ ಸ್ವಾಮಿರಾವ ಬಿಜಾಪುರ ಇವರ ಅಧ್ಯಕ್ಷತೆಯಲ್ಲಿ ಸ್ಥಾಪಿಸಲ್ಪಟ್ಟ ಕುಮಾರಿಸಿಂಧೆದ ಬಾಲಿಕೆಯರು ಸಿದ್ಧಲಿಂಗದೇವರಿಗೆ "ಪುರಾಣಪಟು" ಎಂಬ ಪ್ರಶಸ್ತ ಪತ್ರಿಕೆಯೊಡನೆ ರಜತಪದಕವನ್ನು ತರ್ಪಿ ಸಿದರು. ಅಮೇಲೆ ಪುರಾಣಿಕ ಮಾಸ್ತರರು ಸರ್ವರ ಅಭಾರವನ್ನು ಮನ್ನಿಸಿದರು ಬಳಿಕ ಶ್ರೀ ಪಂಚಾಚಾ ರ್ಯರ ಜಯಘೋಷದೊಡನೆ ಸಭೆಯು ವಿಸರ್ಜಸಲ್ಪ ಟ್ಟಿತು ಅನಂತರ ಅನ್ನಸಂತರ್ಪಣೆಯು ನಡೆಯಿತು

R P ಹೀರೇಮಠ

ಶ್ರೀರುದ್ರಾಭಿಷೇಕ ಮತ್ತು ಪುರಾಣ ಸಮಾಪ್ತಿ ತಿರಕಪುರ ಸಂಸ್ಥಾನಮಠ

ತಿರಕಪ್ಪಟ್ಟ ಶ್ರೀಗುರುಷಡೇರೇಶ್ವರ ಮೂಲಕರ್ತೃ ಗ ದ್ದುಗೆಗೆ ಪ್ರತಿವರ್ಷ ಪದ್ಧತಿಯಂತೆ ಈ ವರ್ಷ ಶ್ರಾವಣ ಶು॥ ೫ ರಿಂದ ಪ್ರತಿದಿವಸ ವೇ॥ ವಿದ್ಯಾಚಿಗೇಗಾಧರ ಶಾಸ್ತ್ರಿಗಳು ಮಾಗಳ ಪ್ರಸನ್ನದೇವರಮಠ ಇವರ ವೈದಿಕ ತ್ವದಲ್ಲಿ ವಿಕಾದಕರುದ್ರಾಭಿಷೇಕ ಸಹಸ್ರಬಿಲ್ವಾರ್ಚನೆ ಮೊ ದಲಾದುವುಗಳು ಬಹು ವಿಜೃಂಭಣೆಯಿಂದ ನೆರವೇರಿದವು. ಮೂಲಕರ್ತೃವಿನ ಲೀಲಾತ್ಮಕವಾದ ಪುರಾಣವನ್ನು ವೇ॥ ಶಂಕರಯ್ಯನವರು ಗಾನಾಮೃತವಾಹಿಯಿಂದ ಓದು ತ್ತಿದ್ದರು. ವೇ॥ ವೀರೇಶಪ್ಪಯ್ಯ ಪೌ॥ ಮಾಸ್ತರ ಇವರು ಮನೋಹರವಾಗಿ ಹೇಳುತ್ತಿದ್ದರು. ಭಾದ್ರಪದ ಶು॥ ೪ ರವರೆಗೆ ಗಾಯನೆ ಪಾದಪೂಜೆಯು ಜರುಗಿತು ಆರಾಧನೆಗೆ ೨-೩ ಸಹಸ್ರ ಜನಗಳು ಸೇರಿ ದ್ದರು ಶ್ರೀಸದೇರೇಶ ಪರಂಪರಾಗತ ೯ನೇ ಪಟ್ಟಾಧಿಕಾರಿಗಳಾದ ಶ್ರೀ ಚನ್ನವೀರಸ್ವಾಮಿಗಳು ಈ ಕಾರ್ಯವನ್ನು ನೆರವೇರಿಸಿ ಸರ್ವರಿಗೂ ಸಂತೋಷವನ್ನುಂಟುಮಾ ಡಿದರು.

ತಿರಹಟ್ಟಿ ಸಲ॥ಮರದ ಮಕ್ತೆದಾರ
ಗುರುಭಕ್ತ
ಫಕೀರಪ್ಪ ಶಿವಜೋಗಪ್ಪ ಜೋರಲಿಟ್ಟಿ.

॥ ಶ್ರೀಜಗದ್ಗುರು ಪಂಚಾಚಾರ್ಯೇಭ್ಯೋನಮಃ ॥

ಶ್ರಾವಣಮಾಸ ಪೂಜಾ ಸಮಾರಂಭ

ಬಳ್ಳಾರಿ ಡಿ॥ ಕೂಡ್ಲಿಗಿ ತಾ॥ ಕೊಟ್ಟೂರು ಗ್ರಾಮ ದಲ್ಲಿರುವ ಕಟ್ಟಿಮನೆ ಮಃ॥ ರಾ॥ ಶ್ರೀ ಕರೇಕೊಟ್ಟಗೌಡರ ಬಸವಲಿಂಗನಗೌಡರು ಶ್ರಾವಣಮಾಸದಲ್ಲಿ ತೌಡೂರು ಶ್ರೀ ಚರಮೂರ್ತಿಸ್ವಾಮಿಗಳವರ ಪಾದಪೂಜೆಯನ್ನು ವೇ॥ ಚಿಗಟೇರಿ ಉಜ್ಜಯಿನಿ ಮರದ ಮೆರುಬಸಿವ್ವ ಶಾಸ್ತ್ರಿ ಗಳ ವೈದಿಕತ್ವದಿಂದಲೂ, ಮತ್ತು ಸದರಿ ಬಸವಲಿಂಗನ ಗೌಡರ ಅನುಜಾತರ ಮಃ॥ ರಾ॥ ಸಿದ್ಧನಗೌಡರು ತಮ್ಮ ಮನೆಗೆರುಗಳಾದ ಕೊಟ್ಟೂರು ಕಟ್ಟಿಮನೆ ಬೃಹನ್ಮಠಾ ಧ್ಯಕ್ಷ ಶ್ರೀ ಭೂತಭುಜಂಗ ಸ್ವಾಮಿಗಳವರ ಪಾದಪೂಜೆ ಯನ್ನು ಸದರಿ ಸ್ವಾಮಿಗಳವರಿಂದ ಸ್ಥಾಪಿತವಾದ ಶ್ರೀ ಜಗದ್ಗುರು ರೇಣುಕಾಚಾರ್ಯ ಸಂಸ್ಕೃತ ವಾರಣಾಲಾಧ್ಯಾ ಪಕ ವೇ॥ ಪಿ. ಎಂ. ಶಿವಪ್ರಸಾದಶಾಸ್ತ್ರಿಗಳ ವೈದಿಕತ್ವ ದಿಂದಲೂ, ಬಹು ಭಕ್ತಿಯಿಂದ ನೆರವೇರಿಸಿದರು. ಸುಮಾರು ೧೪-೧೫ ವರುಷಗಳಿಂದಲೂ, ನಡೆದು ಬಂದಂತೆ ಶಿವಸಹಸ್ರನಾಮ ಲಕ್ಷಬಿಲ್ವಾರ್ಚನ ಸಹಿತ ಏಕಾದಶರುದ್ರಾಭಿಷೇಕವು ಶ್ರಾವಣಶುದ್ಧ ಪಾಡ್ಯಮಿ ಯಿಂದ ಭಾದ್ರಪದ ಶುದ್ಧ ೪ ವರೆಗೆ ನೆರೆವೇರಿತು. ಆ ದಿವಸ ಭಕ್ತಮಾಹೇಶ್ವರ ಸಂತರ್ಪಣವೂ ನೆರವೇರಿತು. ಅದೇ ದಿನ ಸಾಯಂಕಾಲಕ್ಕೆ ಸಂಸ್ಕೃತ ಪಾಠಶಾಲಾ ವಿದ್ಯಾರ್ಥಿಗಳ ಭಜನಾ ಸಂಘದೊಡನೆಯೂ, ಮಂಗಳ ವಾದ್ಯದೊಡನೆಯೂ ಉತ್ಸವಪೂರ್ವಕವಾಗಿ, ಶ್ರೀಗುರು ವೃಷಭೇಂದ್ರ ವೀರಭದ್ರಾದಿ ಮುಖ್ಯ ಮುಖ್ಯ ದೇವಾ ಲಯಗಳಿಗೆ ಸರ್ವರೂ ಹೋಗಿ ಭಕ್ತಿಪೂರ್ವಕ ಫಲ ಸಮರ್ಪಣ ಕರ್ಪೂರನೀರಾಜನಾದಿಗಳಿಂದ ಸೈದು ಸ್ವಗೃ ನಗಳಿಗೆ ಆಗಮಿಸಿದನಂತರ ನೆರೆದ ಮಹಾಜನರಿಗೆ ತಾಂಬೂಲಾದಿಗಳು ಕೊಡಲ್ಪಟ್ಟು ಶ್ರೀ ಜಗದ್ಗುರುಗಳ ವರೆ ಜಯಘೋಷದೊಡನೆ ಸಮಾಪ್ತಿಗೊಳಿಸಲ್ಪಟ್ಟಿತು. ಶ್ರೀಗುರುಭೂತಭುಜಂಗ ಸ್ವಾಮಿಗಳವರ ಪ್ರೌತ್ಸಾಹ ದಿಂದ ಈ ಗ್ರಾಮದಲ್ಲಿ ಶ್ರೀಜಗದ್ಗುರು ಉಜ್ಜಯಿನಿ ಗುರುಸಿದ್ಧತಿವಾಚಾರ್ಯ ಮಹಾಸ್ವಾಮಿಗಳವರ ಗದ್ದುಗೆ, ಗುರುವ್ಯಕ್ತಭೇಶ ದೇವಾಲಯ ಮುಂತಾದ ಮುಖ್ಯ ಮುಖ್ಯ ದೇವಾಲಯಗಳಲ್ಲಿಲ್ಲಾ ರುದ್ರಾಭಿಷೇಕ ಕಾರ್ಯವು ನೆರವೇರಿಸಲ್ಪಟ್ಟಿತು ಶ್ರಾವಣಮಾಸದ ಪ್ರತಿದಿನ ಸಾಯಂಕಾಲ ಸದರಿ ಯಜಮಾನರ ಗೃಹದಲ್ಲಿ ವೇ॥ ಪಂ॥ ಮರುಬಸಿದ್ಧಶಾಸ್ತ್ರಿಗಳವರು ರುದ್ರಾಮಾತಾಗಳಲ್ಲಿ ಅರ್ಥವನ್ನು ಹೇಳುತ್ತಿದ್ದರು. ಮೇಲ್ಕಂಡ ಉಭಯರಿಗೂ ಶ್ರೀಜಗದ್ಗುರು ಪಾಚಾರ್ಯರು ಯುಯುರಾರೋಗ್ಯ-ಭಾಗ್ಯಾದಿಗಳನ್ನ್ರಿಯಲೆಂದು ಪ್ರಾರೈಸುವ

ಓಪ್ಪ ಪ್ರತ್ಯಕ್ಷವೀರಿ.

ಮೈಸೂರು ರಾಜ್ಯ ಸಿಂಹಾಸನಾರೂಢರಾಗಿ ಪಟ್ಟಾಭಿಷಿಕ್ತರಾದ ಶ್ರೀಜಯಚಾಮರಾಜ ಒಡೆಯರ್ ಬಹದ್ದೂರವರ ಶ್ರೀಯಃಜ್ಞಾರ್ಥಪಾಪದೃಕ್ಷಮಾಲಾ

(ಶ್ರೀ ಶಕರು ಅಷ್ಟಾ ಸವಿರ್ವಾ ಅಸಪಟ್ಟ ರಾಮಯಾಯರಿಂದ)

ಭಾ॥ ಜೀವಿಗಳು ನಿಜಗುಣದೆ ವರ್ತಿಸೆ ।
ಜೀವರಂ ಪೈರಿಸುತೆ ಧಾತ್ರಿ ।
ಭಾವಕನುಗುಣವಾಗಿ ಫಲಗಳ ಸಲಿಪ ಮಾಧವನು ॥
ಭೂವಿದಿತ ಜಯಚಾಮರಾಜರ ।
ಭಾವದಾ ಜಂಥಂಗಳೊಡಿಸಿ ।
ಕಾವುದೆನ್ನುತೆ ಬೇಳ್ದ ನಾನೀ ಮಂಗಳೋತ್ಸವದೆ ॥೧॥

ಮೆರೆಯುವೀ ಜಯವಿಭವದೆ ಸರಸೆ ।
ಹರಿಯ ವಿನಯೆದೆ ನುತಿಸಿ ಧಾನತೆ ।
ಗುರುವಿನೊಳು ಚಾರುಭಕ್ತಿಯರಿಸಿ ವಿದ್ಯೆಯಾರ್ಜಿಸುತೆ ॥
ನೆರೆಪ್ರೇಮದೆಮೆನ್ನಿಸುತೆ ರಾ ।
ಜಧರ್ಮಗುಣಧಾತ್ರಿಯಿಂದೆ ಭೂಜೆ ।
ತರೊಳ್ ಮಾಜದೆ ಮಾನ್ಯಮೊಂದುತೆ ಸತತ ವಿರಾಜಿಸು॥

ಕರಪೊಳಾಂತೀ ರಾಜ್ಯರಥವಂ ।
ಪರಮಾಗಾರದೆ ಪೊಸೆ ಸಚಿವರ ।
ಮಿರುಪ ಸಾಹ್ಯಗಳೆಂಬ ಚಕ್ರಗಳೊಡರಿಸುತೆ ಧೈರ್ಯ ॥
ಅರಮೆ ವೃಷಭಂಗಳನು ಕಟ್ಟುತೆ ।
ಪರಮಸಾಧ್ಯವನು ತಾಳುತೆ ।
ನಿರುತ ಧರ್ಮದ ಪಥದೆ ನಡೆಸುತ ಕೀರ್ತಿಯಾಂತಿಹುದು॥

ಮಿರಿಪ ಮಾತೆಯ ಚಿತ್ತನಾರ್ಥಿಯ ।
ಭರದೊಳುತ್ಸಿಸಿ ಪ್ರಜೆಯೊಮುಖನೇ ।
ಬುರೆಮೆರೆಯುವಾಕುಂದವರಳಿಸಿ ಬಂಧುಸದ್ಬೃಂದ ॥
ವರಚಕೋರಕೆ ಕಲೆಯ ಬೆಳಸಿ ।
ಧರೆಗೆ ಸೌಖ್ಯಸುಧೆಯಂ ತೀವಿಸು ।
ಮೆರೆಯುವೀಯಯಶ್ಸಮಸುಜಂದೊಮ್ಮಿದಯದೆ ಭೂಮಿಪನೆ॥

ಪರಮರಾಜ್ಯವ ಪೊರೆವೆನೆಂಬಾ ।
ಬಿರುದನಾನುತೆ ಕೀರ್ತಿಸಾಗ್ರದೆ ।
ಮೆರೆಯುತಿರ್ಪಾ ಗಂಡಭೇರುಂಡದೆರಡು ಶಿರಂಗಳ ॥
ತಿರವ ಯೋಚಿಸೆ ಪಬುಧಕುಲವಂ ।
ಪರಮಗೊಯುಂ ಬಡಿದೆ ಪೊರೆಯುತ ।
ಲಿರುವೆನೆಂಬಾಸತ್ಯಸಂಕಲ್ಪವಂಗೈಯುತಿರು ॥೫॥

ಧರ್ಮದಿಂದೀ ಜಗವು ನಿಂತಿದೆ ।
ಧರ್ಮವೊಂದೇ ಜೀವರೇಳ್ಗೆಯು ।
ಧರ್ಮಮರ್ಮವನರಿತು ನಡೆದವ ಧರ್ಮರಾಜನಲ ॥
ಧರ್ಮದಾಸೆಯರಿತು ನಡೆದೊಡೆ ।
ಧರ್ಮರಾಜನು ಮೆರೆದಪಾಂಗಿ ।
ಧರ್ಮವಂ ಗೈಯುತಲಿ ರಾಜ್ಯವ ಸಲಹು ಸಂತತವು ॥೬॥

ಮಾತೆಯಾಶಿಷವಾಂತು ನಿತ್ಯವು ।
ಪೂತಗುರುವಿನ ಬೋಧೆಯಾನುತೆ ।
ಪ್ರೀತಿಗಾಕರವಾದ ಬಾಂಧವರೊಲವನಾರ್ಜಿಸುತೆ ॥
ನೀತಿಶಾಸ್ತ್ರದ ಮರ್ಮವರಿತು ।
ಖ್ಯಾತಿಯಾಂತಿರು ದೈವಕೃಪೆಯಿಂ ।
ದಾಂತೆ ನೂತನಪಟ್ಟವಿದು ರಾಜಿಸುಗೆ ಸಂತತವು ॥೭॥

ಜಯವು ನೀಡುಗೆ ನಿನಗೆ ದೇವ ।
ಜಯವು ಲಭಿಸುಗೆ ಸರ್ವಕಾರ್ಯದೆ ।
ಜಯವು ಜಯವೆಂದೆಂಬ ಶಬ್ದವು ತುಂಬಿ ಭೋರ್ಗರೆವ ॥
ಜಯಮಹೋತ್ಸವನವೀಳೆಯೊಳು ನೀ ।
ಜಯಿಪ ಧಾನ್ಯಸಮಾಂತು ನಿತ್ಯವು ।
ಜಯಿಸು ಜಯಚಾಮರಾಜನೆ! ನೀ ಧರ್ಮವಿಜಿಪೆಯೊಳು ॥

ವರ್ಧಿಸುಗೆ ತವ ರಾಜ್ಯಲಕ್ಷ್ಮಿಯು ।
ವರ್ಧಿಸುಗೆ ಜನವರದ ಸೌಖ್ಯವು ।
ವರ್ಧಿಸುಗೆ ತವ ಗುರುವಿನುಪದೇಶದಾ ಜ್ಞಾನವಮ ॥
ವರ್ಧಿಸುಗೆ ಯಾರೋಗ್ಯಭಾಗ್ಯವು ।
ವರ್ಧಿಸುಗೆ ತವ ಪುಣ್ಯಫಲಗೋ ।
ವರ್ಧಸಧರನ ಕೃಪೆಗೆ ಪಿಂತ್ರಸುನುಗಾ ಜಾಲುತಿರು ॥೯॥

ಪರವ ತಾವೇಕಲಿಲಾಸದೆ ।
ಹೆರಡರಾಮಧ್ಯಪ್ರದೇಶದೆ ।
ಮಿರುಪ ಮಹಿಷಾಪುರನಾಮಕಪುರದ ಮಧ್ಯದೊಳು ॥
ದುರುಳಮಹಿಷಾಸುರನ ತಾ ಸಂ ।
ಹರಿಸಿಯುವಿಖ್ಯಾತಿಯೆಯಿ ತಾ ।
ಗಿರಿಯ ಮೇಲ್ಗಡೆ ಮೆರೆವ ಗಿರಿಜೆಯು ನಿತ್ಯ ಪಾಲಿಸುಗೆ ॥

॥ ಶ್ರೀಜಗದ್ಗುರು ವಿಶ್ವಾರಾಧ್ಯೋವಿಜಯತೇ ॥

ವಿವೇಚನಾ ಸಮಾರಂಭ ಸಂತಿಪ್ಪಿಗ್ಲಿ

ಲಕ್ಷ್ಮೀಶ್ವರ ತಾಲೂಕು ಪೈಕಿ ಸಂಪೆಸಿಪ್ಪಿಗೆ ಶ್ರೀ ಶೈಲ ಸಿಂಹಾಸನದ ಪ್ರತಿನಿಧಿಗಳಾದ ಶ್ರೀಗುರುದೇವ ಶಿವಾಚಾರ್ಯಸ್ವಾಮಿಗಳವರು ಚಿಕ್ಕಮಣ್ಣೂರು ಹಿರೇಮಠ, ಇವರು ತಾ॥ ೨೨ ೮-೪೦ ನೇ ದಿವಸ ತಮ್ಮ ಸಕಲ ಸಿಬ್ಬಂದಿಯೊಡನೆ ಆಗಮಿಸಿದರು ಗಜ ದಿವಸ ಗಳವರೆಗೂ ಪ್ರವಚನವು ಜರುಗಿತು ತಾ॥ ೧೧-೮ ೪೦ ನೇ ದಿವಸ ಶ್ರೀಮಂತ ಸಿದ್ಧವೀರಪ್ಪನವರು ಜೊಗಣ್ಣ ನವರ ವನೆಯಲ್ಲಿ ಭವ್ಯವಾಗಿ ರಚಿಸಿದ್ದ ದೀಕ್ಷಾ ಮಂಟಪದಲ್ಲಿ ಸದರಿ ಶ್ರೀಗಳವರ ನೇತೃತ್ವದಲ್ಲಿ ೨೫ ಜನರಿಗೆ ಶಿವದೀಕ್ಷೆಯು ಕಾಸ್ಯೋತ್ಸವಾಗಿ ಜರುಗಿತು ಶ್ರೀ ಸಿದ್ಧ ವೀರಪ್ಪನವರೂ ಇವರ ಸಹೋದರರಾದ ಶ್ರೀ ಫಕೀರಪ್ಪ ನವರೂ ತಮ್ಮ ಸಮಸ್ತರೊಡನೆ ಶಿವದೀಕ್ಷೆಯನ್ನು ಹೊಂದಿದರು ಈ ಶುಭಕಾರ್ಯಕ್ಕಾಗಿ ಧನಸಹಾಯ ವನ್ನೂ, ವಿಶೇಷವಾಗಿ ಅನ್ನಸಂತರ್ಪಣೆಯನ್ನೂ ಮಾಡಿ ಘನವಾದ ಕೀರ್ತಿಯನ್ನೂ ಪಡೆದ ಸದರಿ ಶ್ರೀಮಂತ ರಿಗೂ ಮತ್ತು ಈ ಕಾರ್ಯದಲ್ಲಿ ತತ್ಪರರಾಗಿದ್ದ ಶ್ರೀಯುತ ಗುರಪ್ಪಶೆಟ್ಟರಿಗೂ ಜಗದಾಚಾರ್ಯರು ಆಯುರಾರೋಗ್ಯಭಾಗ್ಯಾದಿಗಳಿಗಾಗಿ ದಯಪಾಲಿಸಲೆಂದು ಹಾರೈಸುತ್ತೇನೆ

ಓರ್ವ ಸ್ನೇಹಿತರಿಂದ, ಸಿಪ್ಪಿ.

॥ ಶ್ರೀ ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು ॥

ಅನುಷ್ಠಾನ ಸಮಾಪ್ತಿ ಮಹೋತ್ಸವ.

ನಿಜಾಮ ಇಲಾಖಾ ಯಲಬುರ್ಗಿ ಧರಮರಡಿ ಹಿರೇ ಮಠದ ಶ್ರೀ ಪಟ್ಟಾಧ್ಯಕ್ಷ ವೃಷಭಲಿಂಗಚಿತಾಚಾರ್ಯ ಸ್ವಾಮಿಗಳವರು ಇದೇ ವಿಶ್ವಮ ಸಂ॥ ಶ್ರಾವಣ ಶು॥ ೧ ರಿಂದ ಒಪ್ಪತ್ತೇ ಸ್ಥೈರ್ಯಾಹಾರಿಗಳಾಗಿ ಒಂದು ತಿಂಗಳ ವರೆಗೂ ಅನುಷ್ಠಾನವನ್ನು ಮಾಡಿ ಭಾದ್ರಪದ ಶು॥ ೧೦ ಬುಧವಾರ ಸಮಾಪ್ತಿಗೊಳಿಸಿದರು ಆ ದಿವಸ ವಿಶೇಷ ಪೂಜೋತ್ಸವಗಳಿಂದ ೪ ೬ ಸಾವಿರ ಜನಗಳಿಗೆ ಅನ್ನ ಸಂತರ್ಪಣೆಯಾಯಿತು ಪೂಜಾನಿರತರಾದ ಸ್ವಾಮಿ ಗಳವರ ಪೂಜಾನುಷ್ಠಾನವು ಇದೇ ರೀತಿಯಾಗಿ ಪ್ರತಿ ವರ್ಷ ಶ್ರಾವಣಮಾಸದಲ್ಲಿ ನಡೆದು ಸಕಲ ಜನಗಳಿಗೂ ಅನ್ನಸಂತರ್ಪಣೆಯಾಗುತ್ತಿರುವುದು

ಈ ವರ್ಷದ ಸಮಾರಾಧನೆಯ ಸಮಯಕ್ಕೆ ಸುಣ ಕಲ್ಲು ಬಿದರಿ ಅರಿಭ್ಯಮರದ ವೇ॥ ಹಂ॥ ಧರ್ಮಭೂಷಣ ಹರೀಶ್ವರಶಾಸ್ತ್ರಿಗಳವರು ಅಕಸ್ಮಾತ್ ಆಗಮಿಸಿದ್ದು ದರಿಂದ ಪಂಡಿತರ ಮಧುರ ವಾಣಿಯಿಂದ ಪ್ರವಚನ ವನ್ನು ಕೇಳಬೇಕೆಂದು ಸರ್ವರೂ ಅಪೇಕ್ಷಿಸಿದ ಮೇರೆಗೆ ಪಂಡಿತರು, ಶ್ರೀಜಗದ್ಗುರು ರೇಣುಕ ಶಿವಾಚಾರ್ಯರು ಗೋರಕ್ಷನಾದನ ಗರ್ವವನ್ನು ಶಾತಮಾಡಿದ ಕಥೆ ಯನ್ನು ಎರಡು ದಿವಸಗಳವರೆಗೆ ಬಹು ಸ್ವಾರಸ್ಯವಾಗಿ ಹೇಳಿ ಸಕಲ ಜನಗಳಿಗೆ ಆನಂದವನ್ನುಂಟುಮಾಡಿದರು

ಶ್ರೀ ಸ್ವಾಮಿಗಳವರು ನಿಷ್ಠಾಮಬುದ್ಧಿಯಿಂದ ತಾವು ಮಾಡಿದ ಒಂದು ತಿಂಗಳ ಅನುಷ್ಠಾನ ಫಲವನ್ನು ಜಗ ತ್ಕಿನ ಕಲ್ಯಾಣಕ್ಕಾಗಿ ಧಾರೆಯೆರೆದರು. ಯದ್ದೆಯ ತೊಡೆ ಕ್ಕೆನೊಳಗೆ ಶಿಕ್ಷೆ ಪಾರುಗಾಸ್ಯತಿಯೊಳಗಿರುವ ಜಗತ್ತು ಕ್ಷೇಪ್ರದಲ್ಲಿಯೇ ಶಾಂತಿಮಯವಾಗಲೆಂದು ಕೋರಿದರು ಶ್ರೀ ಸ್ವಾಮಿಗಳವರಿಗೆ ಪರಮಾತ್ಮನು ಉದ್ದಂಡವಾದ ಆಯುಸ್ಸುನ್ನು ದಯಪಾಲಿಸಲೆಂದು ಪ್ರಾರ್ಥಿಸುವ,

ಓರ್ವ ಸ್ನೇಹಿತ, ಯಲಬು ರ್ಗಿ

ಸಂತಿಪ್ಪಿಗ್ಲಿಯಲ್ಲಿ ಸಂಕರರಿಗೆ ಸರಿಯಾದ ತಾಸಿನ.

ಲಕ್ಷ್ಮೇಶ್ವರ ಸಂಸ್ಥಾನ ಪೈಕಿ ಸಂತಿಪ್ಪಿಗ್ಲಿ ಗ್ರಾಮದಲ್ಲಿ ಕೆಲವು ಸಂಕರವರ್ಣಿಗಳು ಮಾಹೇಶ್ವರರ ನಿಂದಾಯುಕ್ತರಾಗಿ ಅವರ ಪದಗಳನ್ನು ಹಾಡುತ್ತ ಸೂರ್ಯೋದಯ ಸಮಯ ದಲ್ಲಿ ಮಜ್ಜಿಗೆ ಮುಖ್ಯ ಭೀದಿಗಳಲ್ಲಿ ಕೆಲವುಕಾಲದಿಂದ ಸಂಚರಿಸುತ್ತಿದ್ದರು ಆಗ ಕೆಲವು ಗುರುಭಕ್ತರು ಇದು ಆರ್ಯೋಕ್ತಿಯೆಂದು ಒಬ್ಬಿ ಹೇಳಿದರೂ ಸಂಕರರು ಕೇಳದೆ ತಮ್ಮ ಪಂಥವನ್ನು ಸಾಧಿಸುವುದಕ್ಕೋಸ್ಕರ ಕೆಲವು ಕಲ್ಪಿತ ವಚನಗಳನ್ನು ಹೇಳ ಜಾಯಬಿಡಿಯುತ್ತಿದ್ದರು. ಸಾಮಾನ್ಯ ಜನರನ್ನು ಮಬ್ಬುಗೊಳಿಸಿ ತಮ್ಮ ಪಂಗಡಕ್ಕೆ ಸೇರಿಸಿ ಕೊಳ್ಳುವುದೇ ಇವರ ಮುಖ್ಯೋದ್ದೇಶವಾಗಿತ್ತು. ಊರ ಲ್ಲಿ ಇದು ಒಂದು ಪಂಗಡವೇ ಆಯಿತು. ನೆಡಿ ಯು ಬಸವನದು ನಡೆಯು ಮಸುವನದು. ಜಂಗಮ ರಿಗೆ ನಮಸ್ಕಾರ ಮಾಡಬಾರದು, ಬೇಕಾದವರು ತಮ್ಮ ತಮ್ಮ ಕುಲಗಳಲ್ಲಿ ಗುರುಗಳನ್ನು ಮಾಡಿಕೊಳ್ಳಬಹುದು. ಬೇಕಾದವರು ತಾವೇ ಲಿಂಗಧಾರಣ ಮೆದಲಾದುವುಗ ಳನ್ನು ಮಾಡಿಕೊಳ್ಳಬಹುದು ಇತ್ಯಾದಿ ಅರ್ಥಗರ್ಭಿತ ವಾದ ಪದ್ಯಗಳನ್ನು ತಾವೇ ಕಲ್ಪಿಸಿಕೊಂಡು ಕೋಡಗ ನಂತೆ ಕುಣಿಯುತ್ತಾ ಪ್ರಭಾತಕಾಲದಲ್ಲಿ ಬೀದಿಗಳಲ್ಲಿ ತಿರುಗತ್ತಿದ್ದರು. ಇವರನ್ನು ಕೆಲವು ಗುರುಭಕ್ತರು ತಾ॥ ೯-೯-೪೦ನೇ ಸೋಮವಾರ ದಿವಸ ತಡೆದು ಅವರ ಕೈಯಲ್ಲಿನ್ನ ನಿಶಾನಿ ಮೊದಲಾದವುಗಳನ್ನು ಕಸಿದು ಕೊಂಡು ಆನಂತರ ಪ್ರಭಾತಕಾಲದಲ್ಲಿ ಅಡ್ಡಿಮಾಡಿ ದರು ಆಗ ಸಂಕರರು ನನ್ನ ಪಂಥವನ್ನು ನಿದ್ದ ಮಾಡಿ ಕೆಡುತ್ತೀನೆ! ಬೇಕಾದವರು ಮಾದಕ್ಕೆ ಬರಬೇಕೆಂದು ಕೂಗಷತ್ತಿದರು ಆಗ ಆಜೇ ಗ್ರಾಮದಲ್ಲಿದ್ದ ಶ್ರೀಶೈಲ ಸಿಂಹಾಸನದ ಪ್ರತಿನಿಧಿಗಳಾದ ಶ್ರೀ॥ ಪಂ॥ ಬ್ರ॥ ಗುರು ದೇವ ಶಿವಾಚಾರ್ಯಸ್ವಾಮಿಗಳು ಚಿಕ್ಕಮಣ್ಣೂರು ಹಿರೇ ಮಠ ಇವರ ಸನ್ನಿಧಿಗೆ ಕೆಲವು ಗುರುಭಕ್ತರು ಆ ಸಂಕರರನ್ನು ಕರೆದುಕೊಂಡುಬಂದರು. ಸಂಕರ ಪಂಥದ ಜನರು ಮುಂಜಾನೆ ೬ ಘಂಟೆಯಿಂದ ಮಧ್ಯಾಹ್ನ ೨ ಘಂಟೆಯವರೆಗೂ ಶ್ರೀಗಳವರೊಡನೆ ಚರ್ಚೆಮಾಡಿ ಸಾವಿರಾರು ಜನರ ಸಮ್ಮುಖದಲ್ಲಿ ತಮ್ಮ ತಪ್ಪನ್ನು ಒಪ್ಪು ಕೊಂಡು ತಮ್ಮ ಕೈಯಲ್ಲಿದ್ದ ನಿಶಾನಿಗಳನ್ನು ಗುರು ಪೀ ಠಕ್ಕೆ ಒಪ್ಪಿಸಿ ಅಕರಾಪ ಪತ್ರವನ್ನು ಬರೆದುಕೊಟ್ಟು ಶ್ರೀಗಳವರಿಂದ ಫಲಾಕ್ಷತಾದಿಗಳನ್ನು ತೆಗೆದುಕೊಂಡು ಹೋದರು ಸಂತಿಪ್ಪಿಗೆ ಸದ್ಭಕ್ತರಿಗೆ ಮಹೇಶ್ವರನು ಸನ್ಮಂಗಲಗಳನ್ನು ದಯಪಾಲಿಸಲೆಂದು ಪ್ರಾರ್ಥಿಸುವ,

ಓರ್ವ ವೀರಶೈವ

ಮಲಬದ್ಧತೆಯನ್ನು ನಿವಾರಿಸುವ ಮಾರ್ಗಗಳು

ಸಾಮಾನ್ಯವಾಗಿ ದೇಹದ ಆಸ್ವಸ್ಥಗೆ ಮುಖ್ಯಕಾ ರಣವೇನೆಂದರೆ, ದೇಹಾವಯವಗಳಲ್ಲಿ ಆಕ್ಷಯಪಕ್ವಧಾನ ಗಳಿಸಿಕೊಂಡ, ಜರರ ಮತ್ತು ಕರುಳುಗಳು ಸರಿಯಾಗಿ ಕೆಲಸಮಾಡಲಾರದೆ ಕೆಟ್ಟುಹೋಗುವುದು. ತಮಗೆ ರೋಗಸಂಬಂಧವೇ ಇರಬಾರದೆಂಬ ಆಶೆಯುಳ್ಳ ಪ್ರತಿ ಯೊಬ್ಬರೂ ಮೇಲ್ಕಂಡ ಎರಡು ಅವಯವಗಳ ರಕ್ಷಣೆ ಯಲ್ಲಿ ಬಹಳ ಎಚ್ಚರಿರಬೇಕು ಆ ಅವಯವಗ ಕೊಂದೂ ಯಾವಾಗಲೂ ಶ್ರಮತಪ್ಪಿ ಹೋಗದಂತೆ ಇಡುತ್ತಿರಬೇಕು ಅವುಗಳಿಗೆ ಯಾವ ಸಂದರ್ಭದ ಲ್ಲಿಯೂ ಹೆಚ್ಚು ಶ್ರಮವನ್ನಾಗಲಿ, ಧಾಸಿಯನ್ನಾಗಲಿ ಉಂಟುಮಾಡಬಾರದು ಅವುಗಳಿಗೆ ಹೆಚ್ಚು ಹೊರೆಯ ನ್ನೇರಿಸುವುದರಿಂದ, ಹೆಚ್ಚುಕೆಲಸ ಕೊಡುವುದರಿಂ ದಲೂ ಅವು ಕೆಟ್ಟುಹೋಗುವುವು

ಮೇಲ್ಕಂಡ ಅವಯವಗಳನ್ನು ದುರ್ಬಲವಾಗಿ ಮಾಡುವ ರೋಗಗಳಲ್ಲಿ ಮಲಬದ್ಧತೆಯು ಬಹಳ ಕೆಟ್ಟದ್ದು. ಮಲಬದ್ಧತೆಯುಳ್ಳ ಮನುಷ್ಯನ ಜಠರೋಕ್ತ ಜೀವ ನವೇ ಸುಖಪ್ರದವಾಗಲಾರದು. ಇವನು ಯಾವಾಗಲೂ ಮಂಕುಹಿಡಿದಂತೆ ಕೂಕಡಿಸುತ್ತಿರುವನು ತಲೆಶೂಲೆ, ಹೊಟ್ಟೆಶೂಲೆ ಮುಂತಾದ ರೋಗಗಳಿಂದ ಬಾಧೆ ಪಡುತ್ತಲೇ ಇರುವನು. ಅವನಿಗೆ ಪ್ರಕೃತಿಯಿಂದಲಭ್ಯವಾದ ಸುಖಾನಿದ್ರೆಯ ಭಾಗ್ಯವು ಲಭಿಸದು ಅವನಿಗೆ ಎಂತಹ ಆಹಾರವಾದರೂ ಅತ್ಯಲ್ಪ ರುಚಿಕರವಾಗಿ ತೋರುವುದಿಲ್ಲ.

[೬ನೆಯ ಪುಟವನ್ನು ನೋಡಿ]

ಪಂಚಾಚಾರ್ಯಪ್ರಭಾ

೧೯೬೦ನೆಯ ಸೆಪ್ಟೆಂಬರ್ ತಾ॥ ೨೩ನೆಯ ಸೋಮವಾರ

ವಿಭೀಷಣನ ಉದ್ಧಾರ.

ಶ್ರೀರೇಣುಕಾಚಾರ್ಯರು ಲಿಂಗಾಯತ ಪೆಸರಿಗೆ ವೀರಶೈವಸಿದ್ಧಾಂತಕ್ಕೆ ಸ್ವರೂಪವನ್ನೆಲ್ಲ ಕೊಟ್ಟು ಸಿದ್ಧಾಂತವನ್ನು ಲಂಕಾದಿಪತಿಯಾದ ವಿಭೀಷಣನನ್ನು ಸ್ವೀಕರಿಸಿ ಗರ್ವದಿಂದ ಮೆರೆಯುತ್ತಿದ್ದ ಲಂಕಾ ಪಟ್ಟಣವನ್ನು ಮಾಡಿದರು ವಿಭೀಷಣನು ತನ್ನ ಸಚಿವರ್ಗಕ್ಕೆ ಮತ್ತು ಶ್ರೀರೇಣುಕಾಚಾರ್ಯರನ್ನು ತನ್ನ ಅರಮನೆಗೆ ಕರೆಸಿ ಸತ್ಕರಿಸಿ ಸಿಂಹಾಸನದಲ್ಲಿ ಪೂರ್ವಾಭಿಮುಖವಾಗಿ ಕುಳ್ಳಿರಿಸಿ ತಾನು ಪಶ್ಚಿಮಾಭಿಮುಖನಾಗಿ ಅವರಿಗೆ ಎದುರಾಗಿ ಕುಳಿತು ತನ್ನ ಪೂರ್ವಜನ್ಮ ವೃತ್ತಾಂತವನ್ನು ಈ ರೀತಿಯಾಗಿ ವಿಜ್ಞಾಪಿಸಿಕೊಂಡನು

"ಎಲೈ ಗುರುಸಾರ್ವಭೌಮನೇ ನಾನು ಹಿಂದೆ ರಾವಣನು ತನ್ನ ಪ್ರತಿಕೃತಿಯನ್ನು ಬ್ರಹ್ಮನ ಪ್ರಸಾದ ಬಾಣವನ್ನು ಉಪಯೋಗಿಸಿ ಲಂಕಾಲಕ್ಷ್ಮಿಯನ್ನು ಕಳಿಸಿ ಸವಂದಪಟ್ಟಿರುವ ಸಾಲದು ಯಶಸ್ಸಿಗಾಗಿ ಪರಿವಾರಸಹಿತನಾದ ನನ್ನನ್ನು ಸಾಕ್ಷಿಯಾಗಿ ಇಟ್ಟಿಕೊಂಡೆನು ನನ್ನ ಚಿಕ್ಕಪ್ಪನಾದ ವಿಶ್ವಪ್ರಾಣವನ್ನು ಬಿಡುವಲಕ್ಕೆ ಗೆಯ್ದನಾತಂ—

ನಪಶಂ ಲಿಂಗೋಚಿತಾನಾಂ ಪ್ರಕಾಶ್ಯಂ ಸಕಲ
ಇತಿ ಸಂಶ್ರಾವಿಪಾಯಂ ಸಮಸ್ತಾನಿತಿ ತಪಸಿ
ಕೋಟಿಸ್ಥಾಂ ತಲಿಂಗಾಂ ವಜಯಸಿ ಕಲಯಂ ಕಿಂಚಿತಂ
ಕೋಟಿಶ್ವರಂ ಲಂಕಾಪುರಂ ಪಾಲಯಿಷ್ಯಸ್ಯಹಂ

(೩ ಪಶ ೨೧)

ಎಲೈ ವಿಭೀಷಣನೇ! ನೀನು ಈ ಲಂಕಾ ಪಟ್ಟಣದಲ್ಲಿ ಒಂಭತ್ತಕೋಟಿ ಶಿವಲಿಂಗಗಳನ್ನು ಸ್ಥಾಪಿಸಬೇಕೆಂಬ ಸಂಕಲ್ಪವನ್ನು ಮಾಡಿದ್ದೀಯೆ ಇಲ್ಲಿಯವರೆಗೆ ಆರುಕೋಟಿ ಶಿವಲಿಂಗಗಳನ್ನು ಸ್ಥಾಪಿಸಿ ಪೂಜಿಸಿದೆ ಇನ್ನೂ ಮೂರುಕೋಟಿ ಶಿವಲಿಂಗಗಳನ್ನು ಸ್ಥಾಪಿಸುವುದು ಹಾಗಯೇ ಸುಲಿಬರುವ ಅವಧಿಯಲ್ಲಿ ನೀನು ಮಿಕ್ಕ ಮೂರುಕೋಟಿ ಶಿವಲಿಂಗಗಳನ್ನು ಸ್ಥಾಪಿಸಲು ಆಗದೆ ಹೋದಲ್ಲಿ ನೀನು ಸಕಲೈಶ್ವರ್ಯಗಳನ್ನು ಎಂದು ನಡಿದು, ಸಮಸ್ತ ವರ್ಷಗಳನ್ನು ತೆಗದುಕೊಂಡು ಪ್ರಾಣವನ್ನು ಬಿಟ್ಟೆಸು ಆ ಪ್ರತಿಜ್ಞಾನ ಕ್ರಮವೂ ಕೋಟಿ ಶಿವಲಿಂಗಗಳನ್ನು ಒಂದೇ ಮಹೂರ್ತದಲ್ಲಿಯೇ ಸ್ಥಾಪಿಸಬೇಕೆಂದೆ ನಿಶ್ಚಯಿಸಿಕೊಂಡಿರುವುದರಿಂದ ಆದರೆ ಮೂರು ಕೋಟಿ ಇಷ್ಟ ಆಚಾರ್ಯರು ದೊರಯುವದು ಮಲಭವನಾಯಿತು ಎಷ್ಟು ಪ್ರಯತ್ನಿಸಿದರೂ ಈ ಕಾರ್ಯವು ನೆರವೇರಲಿಲ್ಲ ಒಹುಕಾಲದಿಂದ ನನ್ನೀ ಪ್ರತಿಜ್ಞೆಯು ನೆರವೇರದೆ ಹಾಗೆಯೇ ಉಳಿದುಬಿಟ್ಟರೆ ಎಂಬುದು ವಿಷಯವಾಗಿ, ಯಾವಾಗಲೂ ಈ ಯೋಚನೆಯು ನನ್ನನ್ನು ಬಲವಾಗಿ ಬಾಧಿಸುತ್ತಿರುವುದು ಹೀಗೆ ಮನಸಾಸಂಕಲ್ಪವನ್ನು ಪೂರೈಸಲು ಇಂದಿನವರೆಗೆ ಈ ಪ್ರಪಂಚದಲ್ಲಿ ಯಾರೂ ಸಮರ್ಥರಾಗಲಿಲ್ಲ ನನ್ನೆ ವೀನ ಪ್ರಾರ್ಥನೆಯನ್ನು ಪರಮೇಶ್ವರನೇ ಚಿತ್ತದಲ್ಲಿ ತಂದುಕೊಂಡು ನನ್ನ ಉದ್ಧಾರಕ್ಕಾಗಿಯೇ ನಿಶ್ಚಸ್ಸನ್ನು ಇಟ್ಟಿಗೆ ಕಳುಹಿಸಿರುವನೆಂದು ಭಾವಿಸಿದ್ದೇನೆ ಆದುದರಿಂದ ಎಲೈ ಗುರುಸಾರ್ವಭೌಮನೇ! ನನ್ನೀ ಪಾಪಾಂಕಲ್ಪವನ್ನು ಪೂರೈಗೊಳಿಸಿ ನನ್ನನ್ನು ಧನ್ಯನನ್ನಾಗಿ ಮಾಡಬೇಕು" ಎಂದು ಅಸಾಧಾರಣ ಭಕ್ತಿವಿನೀತನಾದ ಬೇರಿಕೊಂಡನು

ಕೃತ್ವೇತಿ ವಚನಂ ಪ್ರಾಜ್ಞ ರಾಕ್ಷಸೇಂದ್ರಸ್ಯ ಧೀಮತ ॥
ತಥೇತಿ ಪ್ರತಿಜಜ್ಞಾವ ಸರ್ವಜ್ಞೋ ಗುರುಸಾಯಕಃ ॥೨೦॥

ತತ್ರ ಸಂತಿಷ್ಟ ತೀತ್ಯೇಕ ಪಾಪಸ್ಯ ನೈಕ್ಯಸಿದ್ಧಯೇ ।
ಕೋಟಿತ್ರಯಂ ತು ಲಿಂಗಾನಾಂ ಯದಪಾಸ್ಯಂ ಯತ್ನವಾಪಿ ॥
ತ್ರಿಕೋಟೀ ಲಿಂಗಾರ್ಚಾರೂಪೇಣ ಸಪ್ತಸಂ ತೇನ ತತ್ಕಾಲೇ ॥೨೧॥

ಉದ್ಭವಿಂ ಹಸ್ತ ಪಾಸಾತ್ಕೃಂ ಸಪ್ತಲಿಂಗೇಷ್ಟ ನಿಭೀಷಣಃ ।
ಪ್ರಯಜನಾಯ ಮುಹೂರ್ತಾತ್ಕೃಂ ಪಾಪಲೋಷ್ಟೇಷ್ಟ ನಿಸ್ಪೃಹಃ ॥೨೩॥

ಶ್ರುತಂ ತಾನಯೋಚೀರಂ ಪ್ರಶ್ನೆಸ್ಯೇಂ ರಾಕ್ಷಸೇಶ್ವರಂ ।
ಅನುಗೃಹ್ಯ ಸ್ವಮಹಾತ್ಮಾನ್ಯೋಗಾರ್ಹೋಽಯಂ ಭವಿಷ್ಯತಿ ॥
ನಿಭೀಷಣೋಽಪಿ ಹೃಷ್ಟಾತ್ಮಾ ವೀಂ ಕೃತ್ವಾ ಪ್ರಣಾಮಕಂ ।
ಶಿಷ್ಯತ್ವೇರಸ ಸಕ್ತಾತ್ಮಾ ಪ್ರಾಂ ಬಿಮ್ಮಿತ ಸಾಲಿಯತ್ ॥೨೪॥

(೩ ಪಶ ೨೦)

ಆಚಮೋಪಸ್ಪರ್ಶನಸಿದ್ಧಿಗಳಿಂದೊಪ್ಪುತ್ತಿರುವ ಶ್ರೀರೇಣುಕಾಚಾರ್ಯರು ನಿಭೀಷಣನ ಪ್ರಾರ್ಥನೆಯನ್ನು ಚಿತ್ತದಲ್ಲಿ ತಂದುಕೊಂಡು, ಅವನ ಮಹಾಸಂಕಲ್ಪವನ್ನು ನೆರವೇರಿಸುವುದಕ್ಕಾಗಿ, ವಿಕಕಾಲದಲ್ಲಿಯೇ ಮೂರುಕೋಟಿ ಶಿವಲಿಂಗಗಳನ್ನು ತಾವು ಮೂರುಕೋಟಿ ಶಿವಲಿಂಗಗಳನ್ನು ಸ್ಥಾಪಿಸಿದರು ವಿಭೀಷಣನು ಗುರುಚಕ್ರವರ್ತಿಯಾದ ಈ ಆಚಾರ್ಯತ್ರಯರಿಗೆಯನ್ನು ನೋಡಿ ವಿಸ್ಮಿತನಾಗಿ ಸಾಷ್ಟಾಂಗನಮಸ್ಕಾರವನ್ನು ಮಾಡಿ, ಸಾನಾವಿಧಿಗಳಿಂದ ಸ್ನಾನವಾಗಿ ಸ್ವಗೃಹಕ್ಕೆ ಬಿಜಯಂಗೈದು ತನಗೆ ಶಿವತತ್ತ್ವೋಪದೇಶವನ್ನು ಮಾಡಬೇಕೆಂದು ಬೇಡಿಕೊಂಡನು ಆಗ್ಗೆ ಶ್ರೀರೇಣುಕಾಚಾರ್ಯರು ನಿಭೀಷಣನಿಗೆ ಶಿವತತ್ತ್ವವನ್ನು ಅನುಗ್ರಹಿಸಿ ತತ್ಸಿದ್ಧಾಂತದಲ್ಲಿಯೇ ವರಯಿಸಿದರು ಇತ್ತ ವಿಭೀಷಣನು ಶ್ರೀರೇಣುಕಾಚಾರ್ಯರ ಅನುಗ್ರಹದಿಂದ ಮಹಾಚಕ್ರವರ್ತಿಯಾಗಿ ರಾಜ್ಯವನ್ನು ಬಿಗಕಾಲ ಆಳಿದನು

ಈ ಸತ್ಯವನ್ನು ವಿಭೀಷಣನದ್ದೆಂದಿನಿದ ಎರಡು ಚಾರಿತ್ರಗಳು ಶ್ರೀತಾಯುಗಕ್ಕೆ ಸಂಬಂಧಪಟ್ಟವುಗಳಾಗಿವೆ ಸಿದ್ಧಾಂತವಿಚಾರಗಳನ್ನೆಲ್ಲ ವರ್ಣಿಸಲ್ಪಟ್ಟಿರುವ ಪವ್ವ ಅವು ಈ ಪತ್ರಿಕೆಯಲ್ಲಿ ಕಲಿಯುಗದಲ್ಲಿ ಅವತರಿಸಿಗಳಿಂದ ಸರ್ವಗುರುವರೆಗೆ ಮೂಮಂಡಲದಲ್ಲಿಲ್ಲ ಅಲ್ಲಿ ತೋರ್ಪಡಿಸಿದ ಅನೇಕಲೀಲೆಗಳು ರೇಣುಕ ನಿಜಜಗದ್ಗುರುಗಳಲ್ಲಿ ವರ್ತಿಸಲ್ಪಟ್ಟಿರುವವು

ಯುದ್ಧವಾರ್ತೆ.

ಶತ್ರುಬಂದರುಗಳಲ್ಲಿ ಮೈನ್‌ಗಳು

ಬ್ರಿಟಿಷ್ ವಿಮಾನಸೈನ್ಯಕ್ಕೆ ಹವಮಾನವನ್ನು ಲಕ್ಷ್ಯಕ್ಕೆ ತಾರದೆ ಜರ್ಮನರು ಆಕ್ರಮಿಸಿರುವ ಬಂದರು ಮತ್ತು ಸಮುದ್ರ ತೀರಗಳಲ್ಲಿ ಪ್ರತಿದಿವಸವೂ ಮೈನ್‌ಗಳನ್ನು ಹಾಕಿಸ್ತಿರುವ ನೌಕೆಗಳು ಮೊಟ್ಟಮೊದಲು ಮೈನ್‌ಗಳಲ್ಲಿ ಸ್ಫೋಟಿಸಲು ಪ್ರಾರಂಭಿಸಿದ್ದಿನಿಂದ ಬ್ರಿಟಿಷ್ ವಿಮಾನಸೈನ್ಯವು ಸಾಧಾರಣವಲ್ಲದ ಪ್ರೋತ್ಸಾಹವನ್ನು ಪಡಕೊಂಡಿದೆ ಪ್ರತ್ಯೇಕವಾಗಿ ಕಡೆ ವಾರ್ತೆ ತಿಳಿಸಲಾಗಿದೆ ಇದರಲ್ಲಿ ಜರ್ಮನ್ ಕಡಲ ರಕ್ಷಣಸೈನ್ಯಕ್ಕೆ ಸೇರಿದ ನಾಶವಾಗಿರುವ ಕೆಲವು ಕಡೆಗಳಲ್ಲಾದರೂ ಬಂದರಿನ ಸಮೀಪದಲ್ಲಿಯೇ ಸೈನ್ಯ ಹಾಕಲಾಗಿದೆ

ಬ್ರಿಟನ್ನಿಗೆ ಅಮೆರಿಕೆಯ ಬಲಯುತ ಬಾಂಬರುಗಳು!

ಎಲ್ಲಿಯೂ ನಿಲ್ಲದೆ ೩೦೦೦ ನೈಲು ದೂರ ಹಾರುವ ಶಕ್ತಿಯುಳ್ಳ ೫೦ ದೊಡ್ಡ ಬಾಂಬು ವಿಮಾನಗಳನ್ನು ಬ್ರಿಟನ್ನಿಗೆ ಒಯಿಸಲು ಅಮೆರಿಕೆಯ ಅದಿಕಾರಿಗಳು ಯೋಚನೆಮಾಡುತ್ತಿರುವರೆಂದು ತಿಳಿದುಬರುತ್ತದೆ ಈ ಹೊಸ ಬಾಂಬರುಗಳು ಬ್ರಿಟನ್ನಿಗೆ ದೊರಕಿದರೆ ಬ್ರಿಟನ್ನು ಬಹು ದೂರದಲ್ಲಿರುವ ಶತ್ರುಸ್ಥಾನಗಳಿಗೆ ಸೇಲೆ ಮುತ್ತಿಗೆ ನಡೆಯಿಸಬಹುದಾಗಿದೆ

ಬ್ರಿಟಿಷ್ ವಿಮಾನಗಳ ಸಾಹಸ

ಬ್ರಿಟಿಷ್ ವಿಮಾನಗಳು ಕಳೆದ 18ನಯ ತಾರೀಖಿನ ದಿವಸ ಜರ್ಮನರ ವಶವಾಗಿರುವ ಬಂದರುಗಳ ಸೇಲೆ ಮುತ್ತಿಗೆ ನಡೆಸಿದವು ಬ್ರಿಟಿಷ್ ಬಾಂಬುಗಳಿಂದ ಸುಟ್ಟಿದ ಅಗ್ನಿಜ್ವಾಲೆಯಿಂದ ಕೆಂಬಣ್ಣ ತೀರವೆಲ್ಲವೂ ಹೀಲೆ ನಂಕಿ ಕಾಣುತ್ತಿತ್ತು ಆರ್ ಎ ಎಸ್ ವಿಮಾನಗಳು ಬೋಲೋನ್ ಮೇಲೆ ಇಪ್ಪತ್ತು ಉಗ್ರವಾದ ಮುತ್ತಿಗೆಯನ್ನು ಯಾಮಾಗಲೂ ನಡೆಸಿರಲಿಲ್ಲ ಮಂತ್ರಿಗೆಯು ರಾತ್ರಿ ಎಟು ಗಂಟೆಗೆ ಆರಂಭವಾಗಿ ಬಹಳ ಹೊತ್ತು ನಡೆಯಿತು ಬ್ರಿಟಿಷ್ ವಿಮಾನಿಗಳು ಅಲೆಗಳಂತೆ ಬಂದು ಕೆಲೆಯ ಮೆರೆಗೆ ವ್ಯಾಪಿಸಿದವು. ಕೆಲೆಯಲ್ಲಿ ಆಗಾಧವಾದ ಬೆಂಕಿಯು ಆರಂಭವಾಯಿತು ಅನೇಕ ಮೈಲುಗಳ ದೂರ ಫ್ರೆಂಚ್ ತೀರವು ಹತ್ತಿ ಉರಿಯುವಂತೆ ಕಾಣುತ್ತಿತ್ತು ಬ್ರಿಟಿಷ್ ವಿಮಾನಗಳು ಶತ್ರುಗಳ ಎರಡು ಸಾಮಾನುಗಳನ್ನು ಮುಳುಗಿಸಿ ಅನೇಕ ಹಡ ಬೆಂಕಿ ಹತ್ತಿ ಕೊಳ್ಳುವಂತೆ ಮಾಡಿದವು ಜರ್ಮನರು ಆಕ್ರಮಿಸಿರುವ ಇತರ ಪ್ರದೇಶಗಳ ಮೇಲೂ ಮುತ್ತಿಗೆ ನಡೆಯಿಸಿ ಹಡಗುಗಳಿಗೂ ಸೈನ್ಯಕೇಂದ್ರಗಳಿಗೂ ಬಹಳ ನಷ್ಟವನ್ನುಟುಮಾಡಿಸುತ್ತವೆ

ದೀರ್ಘಕಾಲ ವಿಮಾನಮುತ್ತಿಗೆ

ಕಳೆದ 16ನೆಯ ತಾರೀಖಿನ ರಾತ್ರಿ ಲಂಡನ್ನಿನ ವಿಮಾನಧ್ವಂಸಕಶಿರೋಗಿಗಳು ಎಡಬಿಡದೆ 6 ಘಂಟೆಗಳ ಕಾಲ ಗುಂಡುಹಾರಿಸಿದವು ಇಷ್ಟು ದೀರ್ಘಕಾಲ ಹಿಂದೆಂದೂ ಹಾರಿಸಿರಲಿಲ್ಲ. ಜರ್ಮನ್ ವಿಮಾನಗಳು ಧೈರ್ಯವಾಗಿ ಒಂದರಹಿಂದೊಂದರಂತೆ ಮುಂದೆ ನುಗ್ಗಿ ಬಾಂಬುಗಳನ್ನು ಹಾಕುತ್ತಿದ್ದವು ಒಂದು ಆಸ್ಪತ್ರೆ, ಒಂದು ದೊಡ್ಡ ಮನೆ, ಒಂದು ಅಂಗಡಿಬೀದಿ, ಒಂದು ಚೌಕ ಇವುಗಳಗೆಲ್ಲಾ ಏಟು ಬಿತ್ತು. ಬೆಂಕಿಯನ್ನು ಆರಿಸುವ ಸಿದ್ಧತೆಯಲ್ಲಿದ್ದ ಅಗ್ನಿನಿವಾರಕ ಪಡೆಯಲ್ಲಿ ಹಲವರು ಬಾಂಬಿನೇಟಿನಿಂದ ಮೃತರಾದರು.

ಬ್ರಿಟ್ಟಾಳಿಗೆ ದೈವಿಕ ಅದಚಣಕಿ.

ಕಳೆದ ಪೂರ್ಣಿಮೆಯದಿವಸ ರಾತ್ರಿ ಜರ್ಮನರು ಬ್ರಿಟನ್ನಿನಮೇಲೆ ಭಯಂಕರವಾದ ದಾಳಿಯನ್ನು ನಡೆಯಿಸಲು ಸರ್ವಸಿದ್ಧತೆಗಳನ್ನೂ ಮಾಡಿಕೊಂಡಿದ್ದರು ಆ ದಿವಸ ಹಂದ್ರಸ ಪ್ರಕಾಶವು ಸ್ವಲ್ಪವಾಗಿರುವದರಿಂದಲೂ, ಸಮುದ್ರದ ವಿಶಿಷ್ಟಗಳು ಅನುಕೂಲವಾಗಿರುವದರಿಂದಲೂ, ರಾತ್ರಿ ಅನುಕೂಲವೆಂದು ಜರ್ಮನ್ ಅಧಿಕಾರಿಗಳು ಆ ಸಮಯವನ್ನು ಕಾಯುತ್ತಿದ್ದರು ಆದರೆ ಆ ದಿನ ರಾತ್ರಿ ವೃಷಲೀಲೆಯಿಂದ ಮುಳಿ, ಬಿರುಗಾಳಿ, ಮಂಜು ಆರಂಭವಾದವು ರಾತ್ರಿಯೆಲ್ಲ ಡೋವರ್ ಜಲಸಂಧಿಯ ಪತ್ರರ ಭಯಂಕರ ಬಿರುಗಾಳಿಯು ಬೀಸಿಸಾರಂಭಿಸಿತು ಅಲೆಗಳು ಕ್ರೂರರೀತಿಯಲ್ಲಿ ತೀರಕ್ಕೆ ಬಂದು ಅಪ್ಪಳಿಸಿ ಶಿಥಿಲವಾಗಿ ತೀರದ ಹಟ್ಟಿಣ ಪ್ರದೇಶದ ಮನೆಗಳ ಬಾಗಿಲು ಕಿಟಕಿಗಳು ಗಾಳಿಯ ದೆಸೆಯಿಂದ ಪಟಪಟನೆ ಬಡಿಯಲು ಶಿಥಿಲವಾಗಿ ಸಮುದ್ರದ ಮೇಲೆ ಮಂಜು ಹಾಸಿಗೆಯನ್ನು ಹಾಸಿದಂತೆ ಪಟ್ಟಿವಾಗಿ ಕವಿಯಿತು ೩೦ ಮೈಲು ದೂರದಿಂದಲೆ ಇರುವ ಯಾವ ಪದಾರ್ಥವೂ ಕಾಣದಂತಾಯಿತು ಮೋಡಗಳು ಕವಿದು ಮಳೆಯು ಬಿಳಲುರೂಪ ಬವಾಯಿತು ಬಳಗಾಗುವವರೆಗೂ ಹಾಗೇ ಇತ್ತು ಈಸಾರಿ ಜರ್ಮನರದ ಸಿದ್ಧತೆಗಳನ್ನು ತಲೆಕೆಳಗುಮಾಡಿದ್ದು ಬ್ರಿಟಿಷ್ ವಿಮಾನಗಳಲ್ಲ, ದೈವಲೀಲೆ!

ಕಾಮನ್ಸ್‌ಸಭೆಯಲ್ಲಿ ಬ್ರಿಟಿಷ್ ಮಹಾ ಪ್ರಧಾನರ ಭಾಷಣ

ಕಳೆದ 17ನೆಯ ಶುಕ್ರವಾರದ ದಿವಸ ಕಾಮನ್ಸ್‌ಸಭೆಯಲ್ಲಿ ಬ್ರಿಟಿಷ್ ಮಹಾಪ್ರಧಾನರಾದ ವಿನ್‌ಸ್ಟನ್ ಚರ್ಚಿಲ್ಲರು ಬ್ರಿಟನ್ನಿನ ಮತ್ತಲ್ಲು ಜರ್ಮನರು ನಡೆಯುತ್ತಿರುವ ಸಿದ್ಧತೆಗಳ ವಿಚಾರದಲ್ಲಿಯೂ, ಲಿಬ್ಯಾದಿಂದ ಇಟಲಿಯವರೆಗೂ ನುಂದುವರಿಯುತ್ತಿರುವವಿಚಾರದಲ್ಲಿಯೂ ಭಾಷಣ ಮಾಡಿದ್ದು ಈ ರೀತಿ ಎಚ್ಚರಿಸಿದರು "ಯಾವಕ್ಷಿ ನಿಮ್ಮನ್ನವನು ಅನುಕೂಲವೆಂದು ತೋರುವದೋ ಆಕ್ಷಿ ಶತ್ರುಗಳು ನಿಮ್ಮನ್ನವೆಂದು ನಾವು ಭಾವಿಸಬೇಕು, ನಮ್ಮ ಸಿದ್ಧತೆಗಳನ್ನಲ್ಲಾ ಎಚ್ಚರದಿಂದ ನೋಡಿಕೊಳ್ಳುತ್ತಿರಬೇಕು ಇದಕ್ಕೆ ಸಂಬಂಧಪಟ್ಟವರಿಗೆ ಕ್ಷಣವೂ ವಿರಾಮವಿರಬಾರದು ಏನಾದರೂ ಕಪ್ಪವಾಗುವುದೇನೋ ನಿಶ್ಚಯ. ಜನರಿಗೆ ಹಿಂಸಕೊಟ್ಟು ಅವರು ಜಯಗ್ರಸ್ತರಾಗುವಂತೆಮಾಡಿ ಆವರಲ್ಲಿ ಅವ್ಯವಸ್ಥೆಯನ್ನುಂಟುಮಾಡಲು ಶತ್ರುಗಳು ಬ್ರಿಟನ್ನಿನ ಪ್ರಜೆಗಳ ಸೇಲೆ ಬಾಂಬುಗಳನ್ನು ಹಾಕುತ್ತಿ ನ್ನಾರೆ ಬಕೆಂಗಾಹ್ಯಾಂ ಅರಮನೆಯ ಸೇಲೆ ಬಾಂಬು ಹಾಕುವವರ ಮೂಲಕ ತಮ್ಮ ರಾಜ್ಞೀಸೇವಾಭಾವನೆಯನ್ನು ವ್ಯಕ್ತಪಡಿಸಿರುರು ಇದರಿಂದ ದೊರೆಗಳೂ ರಾಣಿಯರೂ ಪ್ರಜೆಗಳೂ ರತ್ಯವನ್ನೆ ರಂಬಿಸುವ ಕಾರ್ಯದಲ್ಲಿ ಮತ್ತಷ್ಟು ಸಾಹಮನ್ಯವನ್ನು ಹೊಂದಿದವರಾಯಿತು ಲಿಬಿಯಾದಲ್ಲಿ ಇಟಲಿಯವರು ಮುಂದ ಬರುತ್ತಿದ್ದಾರೆ ಸೋಲಿಂ ನೆರವನ್ನು ರಕ್ಷಿಸುತ್ತಿದ್ದ ಎರಡು ಬ್ರಿಟಿಷ್ ಪಡೆಗಳನ್ನೂ ಹಿಂದಕ್ಕೆ ಕರೆಸಿಕೊಳ್ಳಬೇಯಾಯಿತು ವಾಯು ಮುತ್ತಿಗೆಗೆ ಸೆಪ್ಟೆಂಬರ್ ತಿಂಗಳಿನ ಪ್ರಥಮಭಾಗದಲ್ಲಿ 2000 ಶ್ರೇತ ಹೆಚ್ಚು ಸಿವಿಲ್ಯನ್ನರು ಸತ್ತಿಬ್ಬರು ಆವರಲ್ಲಿ ಬಹಳ ವಂದಿ ಹೆಂಗಸರು ಮಕ್ಕಳು ಸ್ತ್ರೀನಾ ಬಿಬ್ಬರು 8000 ಜನರು ಗಾಯಗೊಂಡರು ಅನೇಕ

ಆಸ್ಪತ್ರೆಗಳೂ, ಚಹರ್ಗಾಗಳೂ, ಸಾರ್ವಜನಿಕ ಸ್ಮಾರಕಭವನಗಳೂ ನಾಶಹೊಂದಿವು. ಆದರೆ ಬ್ರಿಟನ್ನಿನ ಸಂಗ್ರಾಮಕತ್ತಿಗೆ ನಕ್ಷತ್ರವೇನೂ ಆಗಲ್ಲ" ಎಂದು ಹೇಳಿದರು. ಸಮುದ್ರತೀರಗಳಲ್ಲಿ ಒಟ್ಟುಗೂಡಿರುವ ಜರ್ಮನಿ ಸೈನಿಕರೂಗೂ, ಹಡಗುಗಳಗೂ ಬ್ರಿಟಿಷ್ ವಿಮಾನಗಳು ಉಂಟುಮಾಡಿರುವ ಘೋರಹಾನಿಯನ್ನು ವಿವರಿಸಿದರು ಆರ್ ಎ.ಎಫ್. ಪಡೆಯನ್ನು ಅದರ ಸಾಹಸಕಾರ್ಯಕ್ಕಾಗಿ ಅಭಿನಂದಿಸಿದರು

ಅನುಷ್ಠಾನಸಮಾಪ್ತಿ.

ಬೆಂಗಳೂರು ಮಹಾಂತಿನ ಮರಾಧ್ಯಕ್ಷರಾದ ಶ್ರೀಗಳು ಶ್ರೀ ಗೆಂಗಾಧರಶಿವಾಚಾರ್ಯಸ್ವಾಮಿಗಳವರು ತಮ್ಮ ವಿಭೂತಿಪುರ ಮಠದ ಬಿಲ್ವಸನದಲ್ಲಿ ಶಿವಾಣ ರುದ್ರ ಪ್ರತಿ ಪಡೆಯಿಂದ ಆಲ ದಿವಸಗಳವರೆಗೆ ಕಿವಪೂಜಾನುಷ್ಠಾನವನ್ನು ನೆರವೇರಿಸಿದರು ಶ್ರೀಸ್ವಾಮಿಗಳವರು ಅನುಷ್ಠಾನವು ಸಮಾಪ್ತಿಯಾಗುವವರೆಗೆ ಕೇವಲ ಕ್ಷೀರಾಹಾರಿಗಳಾಗಿದ್ದು ಮೌನವ್ರತಿಗಳಾಗಿದ್ದರು ಈ ಕಾಲದಲ್ಲಿ ಈ ವಿಧನಾದ ಶಾಸ್ತ್ರೀಯಾನುಷ್ಠಾನವನ್ನು ಆಚರಿಸುವವರು ದೊರೆಯುವದು ದುರ್ಲಭವೆಂದು ಹೇಳಿದರೆ ಅತಿಶಯೋಕ್ತಿಯಾಗದು ಶ್ರೀಸ್ವಾಮಿಗಳವರ ಅನುಷ್ಠಾನವು ನಿನ್ನೆ ೨೨ನೆಯ ತಾರೀಖಿನ ದಿವಸ ಸಮಾಪ್ತಿಗೊಂಡಿತು ಆ ಸಮಯಕ್ಕೆ ಬೆಂಗಳೂರು ಸಿಟಿಯ ಅನೇಕ ಜನ ಪ್ರಮುಖರೂ, ವಿಭೂತಿಪುರಮಠದ ಅನೇಕ ಜನ ಶಿಷ್ಯರೂ ಆಗಮಿಸಿದ್ದರೆಂದೂ, ಕಾರ್ಯಕ್ರಮಗಳು ಬಹು ಸಮರ್ಪಕವಾಗಿ ನೆರವೇರಿದವೆಂದೂ, ಇನ್ನು ದಾನವಾಗಿ ವಿಶೇಷವಾಗಿ ನೆರವೇರಿಸಿದೂ ವಿಭೂತಿಬುರ ತ್ರಪೆ ಜಗತ್ಕಲ್ಯಾಣಕ್ಕಾಗಿ ತಪ ವನ್ನಾಚರಿಸುತ್ತಿರುವ ಶ್ರೀ ಸ್ವಾಮಿಗಳವರಿಗೆ ಶ್ರೀ ಜಗದ್ಗುರ್ಯರು ಪೂರ್ಣಾಯುಷ್ಯವನ್ನು ಅನುಗ್ರಹಿಸಲೆಂದು ಪ್ರಾರ್ಥಿಸುತ್ತೇವೆ

ಶ್ರೀ ಹರಾಂಡಕರ್ ಸ್ವಾಮಿಗಳವರ ಷಷ್ಟ್ಯಬ್ದಶಾಂತಿಸಮಾರಂಭ.

ಈ ಮೊದಲು ಪ್ರಕಟವಾದಂತೆ ಬಾಸೆಲಿನಗರದಲ್ಲಿರುವ ಶ್ರೀ ಪಟ್ಟಾಧ್ಯಕ್ಷ ಹರಾಂಡಕರ್ ಸ್ವಾಮಿಗಳವರ ಷಷ್ಟ್ಯಬ್ದಶಾಂತಿ ಸಮಾರಂಭವು ಭಾದ್ರಪದ ಶು|| ೪ ದಿವಸ ವಿಶೇಷ ವೈಭವದಿಂದ ನೆರವೇರಿತು ಈ ಸಮಾರಂಭ ಕ್ಕಾಗಿ ಬಹುಜನರು ಆಗಮಿಸಿದ್ದರು ಮಾರುತಿ ವೇದಾಲಯದಲ್ಲಿ ಸಭೆಗೂಡಿತು ಮತಾಭಿಮಾನಿಗಳಿಂದ ಮಾನಪತ್ರಗಳು ಸನುರ್ಪಿಸಲ್ಪಟ್ಟವು ಬಹುಜನರು ಶ್ರೀ ಸ್ವಾಮಿಗಳವರ ಕಾರ್ಯದಕ್ಷತೆಯನ್ನು ಕುರಿತು ಸೂತನಾಡಿ ಅವರ ಗುಣಗಾನಮಾಡಿದರು ಅನೇಕರು ಪ್ರಬಂಧವನ್ನು ಸಮರ್ಪಿಸಿದರು. ಲಾತೂರು ಮೊದಲಾದ ನಗರಗಳಲ್ಲಿಯೂ ಈ ಸಮಾರಂಭಗಳು ವೈಭವದಿಂದ ನೆರವೇರಿದವು ಮಹಾರಾಷ್ಟ್ರದೇಶದ ವೀರಶೈವರಲ್ಲಿಯೂ, ಗುರು ವರ್ಗದ ನರಲ್ಲಿಯೂ ನವಚೈತನ್ಯವನ್ನುಂಟುಮಾಡಿ ಹಿಗಲಿರುಳು ಸಮಾಜೋದ್ಧಾರ ರತನಾಗಿ ೧ ದೇಶಸನ್ನು ಸಮರ್ಪಿಸುತಿರುವ ಶ್ರೀ ಪರಾಂಡಕರ್ ಸ್ವಾಮಿಗಳವರಿಗೆ ಜಗದ್ಗುರ್ಯರು ಪೂರ್ಣಾಯುಷ್ಯವನ್ನೂ, ಇನ್ನೂ ಹೆಚ್ಚಾದ ಉತ್ಸಾಹ ಶಕ್ತಿಯನ್ನೂ ಅನುಗ್ರಹಿಸಲೆಂದು ಕೋರುತ್ತೇವೆ

ಸ್ವೀಕಾರ.

ಬಳ್ಳಾರಿ ಡಿ|| ಕೊಟ್ಟೂರು ಗ್ರಾಮವಬ್ಬರಿಯವ ಮಿ|| ರಾ|| ಕರ್ಕಿಹಿಬ್ಬಾರರು ಬಸವಲಿಂಗಸ್ವಾಮಿಯವರು ಮತ್ತು ಮಿ|| ರಾ|| ಸಿದ್ಧನಗೌಡರು ತಮ್ಮ ಗೃಹದಲ್ಲಿ ಪ್ರಾಣ ಪ್ರತಿಷ್ಠ ಪಾದಪೂಜೆಯನ್ನು ನೆರವೇರಿಸಿ ಸಮಾಪ್ತಿಗೊಳಿಸಿದ ಸಮಯದಲ್ಲಿ ಪ್ರಭಾಪೋಷಣಕ್ಕೋಸ್ಕರ ಶುರ ತಿಗೆಯಾಗಿ ೩ ರೂ ಗಳು ಹಿರೇಮಠದ ಶ್ರೀ ಶಿ|| ಬ್ಬಿ|| ಭೂತಭುಜಂಗಸ್ವಾಮಿಗಳವರ ದ್ವಾರಾ ತಲ್ಪಿರುತ್ತವೆ

ಈ ನೇಲ್ಲಂಡ ಮಹಾರಾಷ್ಟ್ರ ಶ್ರೀಜಗದ್ಗುರು ಪಂಚಾಚಾರ್ಯರ ನಿತ್ಯಸುಮಂಗಲಸಿಸ್ಸಿಂಗ್ ಲೆಂದು ಹಾರೈಕೆ ತ್ತೇನೆ

[೧ ನೇ ಪುಟದಿಂದ ಮುಂದುವರೆದಿದ್ದು]

ಹೆಚ್ಚಿರಬೇಕು. ಈ ಸಂಗ್ರಾಮದಲ್ಲಿ ಬ್ರಿಟನ್ನಿನ ಹಿಂದೆ ಭಾರತವು ಇರುವುದೆಂದು ಹೇಗೆಹಾನೇ ಸರ್ಕಾರವು ಹೇಳುವುದು? ಸ್ವತಂತ್ರ ಪ್ರಾಂತಗಳ ಅಭಿಪ್ರಾಯವನ್ನು ಕೂಡ ಪಡೆಯದೆ ಭಾರತವು ಬ್ರಿಟಿಷ್ ಸರ್ಕಾರದ ಬೆನ್ನ ಹಿಂದೆ ಇರುವುದೆಂದು ಬ್ರಿಟಿಷ್ ಸರ್ಕಾರವು ಘೋಷಿಸಿ ಬಹು ದೊಡ್ಡ ತಪ್ಪನ್ನು ಮಾಡಿದೆ. ಅವರು ಆ ರೀತಿ ಮಾಡಿದಾಗ ಪ್ರಾಂತಿಕ ಸ್ವಾತಂತ್ರ್ಯದಲ್ಲಿ ಎಳ್ಳಷ್ಟಾದರೂ ಹೆಚ್ಚುಕಡಿಮೆಯಾಬುದನ್ನು ವ್ಯಕ್ತಪಡಿಸಿದರು ಅದಕ್ಕಾಗಿಯೇ ಕಾಂಗ್ರೆಸ್ ಮಂತ್ರಿಗಳು ರಾಜೀನಾಮೆ ಇತ್ತರು ಒಂದು ಸರ್ಕಾರ ನಾವು ತಾಳ್ಮೆಯಿಂದ ಸಮ್ಮತಿದ್ದೆವು ಆದರಿಂದ ನಮ್ಮ ಶಕ್ತಿಯೂ ಹೆಚ್ಚಿತೆಂದು ನಾನು ಭಾವಿಸಿದ್ದೇನೆ ಕಳೆದಸಾರಿ ನಾವು ಇತ್ತಿದ್ದ ಸಲಹೆಗಿತ ಇನ್ನೂ ಮುಂದೆಹೋಗಿ ರಿಯಾಯತಿಗಳನ್ನು ತೋರಿಸಲು ಸಾಧ್ಯವಿಲ್ಲ ಕಾಂಗ್ರೆಸ್ಸಿಗೆ ಅಧಿಕಾರ ಬೇಕೆಂದು ನಾವು ಬಯಸಲಿಲ್ಲ ಭಾರತಕ್ಕೆ ಸ್ವಾತಂತ್ರ್ಯಬೇಕೆಂದು ನಾವು ಬಯಸಿದೆವು ಇದಕ್ಕೆ ಬದಲಾಗಿ ಬ್ರಿಟಿಷ್ ಸರ್ಕಾರವು ವೈಸರಾಯನನ್ನು ೩೫ ಕೋಟಿ ಪ್ರಜೆಗಳ ಒಡೆಯರನ್ನಾಗಿಮಾಡಿದ್ದಾರೆ ಅಂತಹ ಸ್ಥಿತಿಯ ನ್ನು ಯಾರು ತಾನೇ ಸಹಿಸಲು ಸಾಧ್ಯವಾಗುವುದು? ಒಬ್ಬ ಮನುಷ್ಯನಿಗೆ ಇಷ್ಟು ನಿರಂಕುಶಾಧಿಕಾರವನ್ನು ಕೊಡಿಬಹುದೇ? ನೈಸರಾಯರ ವಿಚಾರವಾಗಿ ನಾನೇನೂ ಹೇಳುವುದಿಲ್ಲ ಅವರೂ ನನ್ನ ಸ್ನೇಹಿತರು. ಸಂಗ್ರಾಮದ ವಿಚಾರವಾಗಿ ನಾವು ನಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸುವುದಕ್ಕೆ ನಮಗೆ ಸಂಪೂರ್ಣ ಅಧಿಕಾರವಿರಬೇಕು ನಮ್ಮ ಇರುವಿಕೆಯನ್ನು ಸ್ಥಿರಗೊಳಿಸಬೇಕಾದ ಸಂದರ್ಭಗಳಲ್ಲೆಲ್ಲಾ ನಾವು ನಮ್ಮ ಅಭಿಪ್ರಾಯಗಳನ್ನು ಸ್ಪಷ್ಟವಾಗಿ ವ್ಯಕ್ತಪಡಿಸುವುದಕ್ಕೆ ಅವಕಾಶವಿರಬೇಕು. ನಾವು ನಮ್ಮ ಸ್ವಾತಂತ್ರ್ಯಕ್ಕಾಗಿ ಹೇಳುತ್ತಿಲ್ಲ. ಯಾರಿಂದ ನಾವು ಸ್ವಾತಂತ್ರ್ಯವನ್ನು ಪಡೆಯಬೇಕಾಗಿದೆಯೋ ಅವರ ಸ್ವಾತಂತ್ರ್ಯಕ್ಕೇ ಲೋಪಬರುವಾಗ, ನಾವು ಹೇಗೆ ಸ್ವಾತಂತ್ರ್ಯವನ್ನು ಕೇಳುವುದು? ಅವರು ನಮಗೆ ನೀವು ನಮ್ಮ ಸಂಗಡ ಸೇರಿ' ಎಂದುದಾಗಿ ಕೇಳಬಹುದು ಆದರೆ ಆರೀತಿ ಸೇರುವುದಕ್ಕೆ ನಮ್ಮಿಂದ ಸಾಧ್ಯವಿಲ್ಲ ಎಂದು ತಿಳಿಸಲು ವಿಷಾದವಾಗುತ್ತದೆ

"ಜರ್ಮನಿ, ಇಟಲಿ, ಜಪಾನುಗಳಿಂದ ನನಗೇನೂ ಭೀತಿ ಇಲ್ಲವೆಂದು ನಾನು ಹೇಳಬಯಸುತ್ತೇನೆ ಸತ್ಯಾಗ್ರಹಿಗೆ ಭೀತಿ ಎಂಬುದು ಇಲ್ಲ ಬ್ರಿಟನ್ನಿಗೆ ಸೋಲಾಗಬೇಕೆಂದು ನಾನು ಬಯಸುವುದಿಲ್ಲ ಅವರಿಗೆ ಒಳ್ಳೆಯದಾಗಲೆಂದು ಬಯಸುತ್ತೇನೆ ಒವರ ಧೈರ್ಯವನ್ನು ಕೊಂಡಾಡುತ್ತೇನೆ ಆದರೆ ಅವರು ನಮ್ಮ ದೇಶವನ್ನು ಬಿಟ್ಟುಹೊರಟ ಕೂಡಲೆ ನಾವು ನಮ್ಮನ್ನು ರಕ್ಷಿಸಿಕೊಳ್ಳುವುದಕ್ಕೆ ಕೈಲಾಗದೆ ಹೋಗುವುದಾದರೆ, ಸ್ವತಂತ್ರ್ಯವನ್ನು ಬಯಸುವ ಅರಿಕಾರವು ನಮಗಿಲ್ಲವೆಂದು ನಾನು ಅವರಿಗೆ ತಿಳಿಸಲು ಇಚ್ಛಿಸುತ್ತೇನೆ" ಎಂದರು

'ಯೂರೋಪಿನಲ್ಲಿ ನಡೆಯುತ್ತಿರುವ ಘೋರಯುದ್ಧ ಅತಿ ಕ್ರೂರವಾದುದು ಅದರಲ್ಲಿ ನಾವು ಬಾಗವಹಿಸ ಬೇಕೆಂದು ಅವರು ಪ್ರೇರಿಸುತ್ತಿರುವುದು ವರೋಪ್ಯ ಪ್ರಜೆಗಳಿಗೆಲ್ಲ ಒಳ್ಳೆಯದಾಗಲೆಂಬುದೇ ನನ್ನ ಆಶೆ. ನನ್ನ ಧ್ವನಿಯು ಅವರಿಗೆ ಕೇಳಿಸುವಂತಿದ್ದರೆ, ಅವರು ಏತಕ್ಕೆ ಒಬ್ಬರೊಡನೊಬ್ಬರು ಹಣಕಲಿಸಿ ಶಾಂತಿಯಿಂದ ಜೀವಿಸಲು ಸಾಧ್ಯವಾಗಲ್ಲವೆಂಬುದನ್ನು ತಿಳಿಸುತ್ತಿದ್ದೆ ಅವರೆಲ್ಲಾ ಜಪಾನಿಗರ ಹಿಂದುಗುಂಪಿಗೆ ಸೇರಿದವರು ಭಾರತವನ್ನು ಗೆಲ್ಲುವುದಕ್ಕಾಗಿ ನಡೆಸುತ್ತಿರುವ ಘೋರಾಟ ವಿವಲ್ಲ ಭಾರತದಲ್ಲಿ ನಿಜವಾದ ಒಬ್ಬ ಕಾಂಗ್ರೆಸ್ ಸದಸ್ಯನು ಇರುವವರೆಗೂ, ಭಾರತವು ಭಾರತೀಯರಿಗೆ ಸೇರಿದ್ದು ಅದು ಯಾವಾಗಲೂ ಭಾರತೀಯರಿಗೆ ಸೇರಿದ್ದು ' ಎಂಬುದಾಗಿ ಹೇಳುತ್ತಲೇ ಇರುವನು ಭಾರತಕ್ಕೆ ಯಾವ ಅಕ್ರಮಣಕಾರಿ ಬರಲಿ, ನಾನು ಧೈರ್ಯದಾಗಿ ಅವರನ್ನು ಪ್ರತಿಭಟಿಸುತ್ತೇನೆ. ಸಂತೋಷದಿಂದ ನಾನು ಪ್ರತಿಭಟಿಸಿ ಪ್ರಾಣವನ್ನು ಕೊಡಲು ಸಿದ್ಧನಾಗಿರುವೆನು ಯಾವ ಅಕ್ರಮಣಕಾರನ ಮೇಲೂ ನನಗೆ ದ್ವೇಷವಿರುವುದಿಲ್ಲ ಸಹಿಷ್ಣುತ್ವ ಕೆಂಪಕ್ರಿಸ್ತನ ಮೇಲೆ ಮತ್ತಿಗೆಯನ್ನು ನಡೆಸಿದ ವರ್ತಮಾನವು ನನ್ನ ಮನಸ್ಸಿಗೆ ಯಾತನೆಯನ್ನುಂಟುಮಾಡಿತು. ಅದನ್ನು ನಾಶಮಾಡಲು ಹೊರಟಿರುವ ಜರ್ಮನರ ಹುಚ್ಚುತನವು ನನಗೆ ಅರ್ಥವಾಗುವುದಿಲ್ಲ."

ಲಂಡನ್ ಬಿದ್ದರೂ ಅಥವಾ ಇಂಗ್ಲೆಂಡ್ ದೇಶ ನೆಲ್ಲವೂ ಶತ್ರುಗಳ ಹಸ್ತಗತವಾದರೂ ಬ್ರಿಟಿಷರ ನೋಬಾಯತೆಯ ಭಾವಿಸಲಾಗದೆಯೂ, ಬ್ರಿಟಿಷರಿಗೆ ದೊಡ್ಡ ಸಾಮ್ರಾಜ್ಯವಿದೆಯೆಂಬುದೂ ಕೆನಡ, ಆಸ್ಟ್ರೇಲಿಯ, ನ್ಯೂಜೀಲೆಂಡ್ ಮುಂತಾದ ಕಡೆಗಳಲ್ಲಿ ನೆಲೆಸಿ ಹೋರಾಡು ಕಿರಿಯರು, ಆದರೆ ಬ್ರಿಟನ್ನಿಗೆ ಇರುವ ತೊಡಕೆಯ ದೆತಿಯಿಂದ ಭಾರತವು ತಪ್ಪಿ ಮಗ್ಗಾವನ್ನು ಬಿಟ್ಟು ಬೇರೆ ದಾರಿಯಲ್ಲಿ ಹೋಗುವುದಕ್ಕೆ ಸಾಧ್ಯವಿಲ್ಲವೆಂದೂ, ಭಾರತವು ಜಗತ್ತಿಗೆ ಯೋಧಸಬೇಕಾದುದಿರುವುದೆಂದು ತಾವು ಭಾವಿಸುವೆವೆಂದೂ ನುಡಿದರು.

"ಕಾಂಗ್ರೆಸ್ಸಿನ ನಾಯಕತ್ವ ವಹಿಸುವುದಕ್ಕೆ ಮತ್ತೆ ನೀವು ನನಗೆ ಆಹ್ವಾನವಿತ್ತು ಜವಾಬ್ದಾರಿ ಹೊರಿಸಿದ್ದೀರಿ. ಶಾಸನಭಂಗ ಚಳುವಳಿಯಾರಂಭವಾದದೂ ಆಗುಹುದು. ಆದರೆ ನಾನೇನು ಮಾಡುವೆನೆಂಬುದನ್ನು ಸಂಘ ನಾನು ತಿಳಿಯಲಾರೆ ನನಗೆ ಸಂಬಾಗಿ ಗೊತ್ತಿಲ್ಲ ಕಕ್ಷಲೆಯಲ್ಲಿ ತಡಕಾಡಿ ತ್ತಿರುವ ಒಬ್ಬಮನುಷ್ಯನ ನಾಯಕತ್ವವನ್ನು ನೀವು ಜ್ಞಾಪಕದಲ್ಲಿಟ್ಟುಕೊಂಡಿರಬೇಕು ಈ ನಿರ್ಣಯದಲ್ಲಿ ರಾಜಿಮಾಡಿಕೊಳ್ಳುವುದಕ್ಕೆ ಅವಕಾಶ ವಿದೆಯೇನು ಭಾವಿಸುವ ಸ್ನೇಹಿತರು ಅನೇಕರಿದ್ದಾರೆ ರಾಜಿಮಾಡಿಕೊಳ್ಳುವುದಕ್ಕೆ ಬೇಕಾದಷ್ಟು ಅವಕಾಶವು ಈ ನಿರ್ಣಯದಲ್ಲಿ ಇರುವುದೆಂಬುದನ್ನು ನಾನು ಒತ್ತಿ ಹೇಳುತ್ತೇನೆ ನಾನು ಈ ನಿರ್ಣಯಿಂದ ವೈಸರಾಯರ ಒಳಗೆ ಹೋಗಿ ' ಇಂದಿನ ಪರಿಸ್ಥಿತಿಯ ದೆಶೆಯಿಂದ ಕಾಂಗ್ರೆಸ್ ನಾಶವಾಗುವುದಿಲ್ಲವೆ ?' ಎಂಬುದಾಗಿ ಕೇಳುತ್ತೇನೆ ಅಹಿಂಸಾನ್ಮತವನ್ನು ನಾವು ಪಾಲಿಸಿಕೊಂಡು ಒಬುವರೆಗೂ ಸಂಘ್ರಾಮದ ವಿಷಯವಾಗಿ ನಾವು ನಮ್ಮ ಮನಸ್ಸಿನಲ್ಲಿರುವುದನ್ನು ಹೇಳುವುದಕ್ಕೆ ನಮಗೆ ಸ್ವಾತಂತ್ರ್ಯವಿರಬೇಕು ಹಿಂಸೆಯನ್ನು ಬೋಧಿಸು ವವರನ್ನು ಸರ್ಕಾರವದು ಬಂಧಿಸಲಿ ರಾಜಕೀಯ ಆತ್ಮಹತ್ಯೆಯಾಗುವಂತಹ ಸಂದರ್ಭದಲ್ಲಿ ನಾವು ಮೌನ ವಾಗಿರಲು ಸಾಧ್ಯವಿಲ್ಲ ಭಾರತವು ಸಕ್ಕ ರಾಷ್ಟ್ರವಲ್ಲ. ಅಹಿಂಸಾತ್ಮಕ ಮೂಲಕ ಭಾರತವು ತನ್ನ ಸ್ವಾತಂತ್ರ್ಯವನ್ನು ಪಡೆಯುವುದಾದರೆ, ಜಗತ್ತಿಗೆ ಸಂದೇಶವನ್ನು ಸಾರಿದಂತಾಗುವುದು. ಇಂಬು ಕ್ರೂರಯುದ್ಧ ನಡೆಯುತ್ತಿರುವ ದರೋಪ್ಯ ದೇಶಗಳು ಇದರಿಂದ ಪಾಠಕಲಿತಂತಾಗುವುದು ಹಿಟ್ಲರ್, ಮುಸೊಲಿನಿ, ಸ್ಟಾಲಿನ್ ಮತ್ತು ಚರ್ಚಿಲ್‌ರವರಿಗೆ " ನಾನು ಘೋರಯುದ್ಧದಲ್ಲಿ ಭಾಗವಹಿಸಿ ನಾಶವಾಗುವುದು ಸರಿಯಾದ ಮಾರ್ಗವಲ್ಲ ನನ್ನಲ್ಲಿರುವ ನಿರ್ಭೀತಿಯನ್ನು ಜ್ಞಾನವನ್ನು ಮಾನವನ ಪ್ರಗತಿಗಾಗಿಯೂ ಸಂತೋಷಕ್ಕಾಗಿಯೂ ವಿನಿಯೋಗಿಸ ಬೇಕು " ಎಂಬುದಾಗಿ ಹೇಳುತ್ತೇನೆ

ತಮ್ಮ ಭಾಷಣವನ್ನು ಮುಕ್ತಾಯಗೊಳಿಸುತ್ತ "ನೀವು ಮಾಡಬೇಕಾಗಿರುವದೇನೆಂಬುದನ್ನು ನಾನು ಈಗ ಹೇಳಲಾರೆ ಆವರೆ ನೀನೇನೂ ಮಾಡಕೂಡದೆಂಬು ದನ್ನೂ ನಾನು ತಿಳಿಸಬಯಸುತ್ತೇನೆ ಮೊದಲನೆಯ ದಾಗಿ ಸಾಮೂಹಿಕ ಸ್ಯಾಗ್ರಹದ ಮಾತೇ ಇಲ್ಲ. ಪೈಯಕ್ತಿಕ ಸತ್ಯಾಗ್ರಹವನ್ನು ಹೂಡಬಹುದು. ಅದನ್ನೂ ಕೂಡ ನಾನು ಖಂಡಿತವಾಗಿ ಹೇಳಲಾರೆ. ಇನ್ನೂ ನಾನು ಆಲೋಚನೆಮಾಡುತ್ತಿದ್ದೇನೆ ಆದರೆ ಸ್ಪಷ್ಟವಾಗಿ ಏನೂ ನನಗೆ ಹೊಳಿದಿಲ್ಲ ನನಗೆ ಹೊಳೆದರೆ, ಅವನ್ನು ಖಂಡಿತವಾಗಿಯೂ ನಿಮ್ಮಮುಂದೆ ಇಡುತ್ತೇನೆ ಏನೂ ತೋಳೆಯದೆ ಹೋದರೆ, ಮೌಲಾನ ಸಾಹೇಬರ ಬಳಿಗೆ ಹೋಗಿ-ಅವರಿನ್ನೂ ಜೈಲಿನ ಹೊರಗಡೆ ಇದ್ದರೆ ನನ್ನ ವಿಫಲತೆಯನ್ನು ಒಪ್ಪಿಕೊಳ್ಳುತ್ತೇನೆ. ಅವರು ಜೈಲಿನಲ್ಲಿದ್ದರೆ ನಾನು ಅವರನ್ನು ಎಲ್ಲಿಯೇ ಭೇಟಿಮಾಡುತ್ತೇನೆ ಖಂಡಿತವಾಗಿಯೂ ನಾನು ಮಾಡುವ ಕೆಲಸಗಳ ವಿವರಿಯನ್ನು ನಿಮ್ಮ ಮುಂದೆ ಇಡುತ್ತೇನೆ ನನಗೆ ಸಾಕಾವಷ್ಟು ಶಕ್ತಿಯನ್ನೂ ಸಾಹಸವನ್ನೂ ದೇವರು ಕೊಡಲೆಂದು ನೀವುಗಳೆಲ್ಲರೂ ಪ್ರಾರ್ಥಿಸಬೇಕು" ಎಂದು ನುಡಿದರು

[೩ ನೇ ಪುಟದಿಂದ ಮುಂದುವರಿಯಲು]

ಅವನಿಗೆ ತನ್ನ ಜೀವನವೇ ತನಗೊಂದು ಭಾರವಾಗಿ ತೋರುವುದು ಆವನು ಈ ಪ್ರಪಂಚದಲ್ಲಿ ತಾನು ಬಹಳ ದುಃಖಜೀವಿಯಂತೆ ತಿಳಿದು ಬೇಸರಪಟ್ಟಕಾರುವುದು

ಈ ವ್ಯಾಧಿಯಿಂದ ತಪ್ಪಿಸಿಕೊಳ್ಳುವ ಮಾರ್ಗಗಳೇನು? ಸಾಮಾನ್ಯವಾಗಿ ನೂರಕ್ಕೆ ೨೦ ಜನರು ಈ ಭಯಂಕರ ವ್ಯಾಧಿಯಿಂದ ಬಾಧೆಪಡುತ್ತಿರುವರು ಈ ರೋಗದ ಆರಂಭದಶೆಯಲ್ಲಿಯೇ ಸ್ವಲ್ಪ ಜಾಗರೂಕರಾಗಿದ್ದರೆ, ಆಕಾರಣಿಯಮಗಳಿಂದಲೂ, ಸುಲಭವಾದ ಕಲವು ವ್ಯಾಯಾಮಸಾಧನೆಗಳಿಂದಲೂ ಅವನ್ನು ನಿವಾರಿಸಲು ಸಾಧ್ಯವು ಈ ರೋಗಸೂಚನೆಯಿದ್ದವರು ತಮ್ಮ ಆಹಾರದಲ್ಲಿ ಹೆಚ್ಚಾಗಿ ಫಲಜಾತಿಗಳನ್ನೂ ಕೋಸಗಡ್ಡೆ ಕಿಲಿಪ್ಸವರ್, ಟ್ಯೂಷಾ ಮುಂತಾದ ಫಲ್ಯಗಳನ್ನೂ ಸಂರಿಸ್ಕ್ಯೂಲ್ಯೇಕು ಮತ್ತು ಕ್ಲೋರ್ಡ್ ಹೆಚ್ಚಾಗಿರುವ ತೆ ಗಿನಕಾಯಿ, ಟೀಬಲ್ ಸ್ಪೂಲ್, ನೌತೆಕಾಯಿ ಪಂಜಾದವುಗಳನ್ನೂ ಹೆಚ್ಚಾಗಿ ಸೇವಿಸಬೇಕು ಇ ವೆಲ್ಲಂತಪದಾರ್ಥಗಳಲ್ಲಿ ಜರುರ ಪೋಷಿಸಿ ಕಬ್ಬಿಣ ಪದಾರ್ಥಗಳನ್ನೆಲ್ಲಿ ಹೊರಬೀಳಿಸಿ, ಜರಠರಾಂಗವನ್ನು ಶುದ್ಧಿಗೊಳಿಸಿ ಅದಕ್ಕೆ ಕಾರ್ಯಸಾಮರ್ಥ್ಯವನ್ನು ಕೊಡುವುವು ಸಕ್ಕರೆ ನಿಷ್ಪಪದಾರ್ಥಗಳ ವೈದ್ಯಸಹಾಯದಿಂದ ಇವನ್ನೆಲ್ಲಾ ಹೆಚ್ಚಾಗಿ ಸೇವಿಸಿದಾರದು ಹೆಗಲು ಮೊತ್ತ ಧಾರಾಳವಾಗಿ ನೀರನ್ನು ಕುಡಿಯುತ್ತ ರಾತ್ರಿ ೪ ಗಂಟೆಯವರೆಗೆ ಹೋಗುವ ಮೊದಲು ಒಂದು ಒಬ್ಬಲು ಬಿಸಿನೀರನ್ನೂ ನಿಂಬೆಯ ಹಣ್ಣಿನ ರಸವನ್ನೂ ತೆಗೆದುಕೊಳ್ಳಬೇಕು

ಪ್ರತಿದಿನವೂ ತಪ್ಪದ ಒಂದು ಕ್ಲೃಪ್ತಕಾಲವನ್ನು ನಿರ್ಣಯಿಸಿಕೊಂಡ ಮಲ ಶುದ್ಧಿಯಾಗುವಂತೆ ಪ್ರಯತ್ನಿಸಬೇಕು ಮಲವಿಸರ್ಜನೆ ಮಾಡಬೇಕಾದ ಅವಶ್ಯಕತೆ ತೋರಿದರೂ, ಇಲ್ಲದಿದ್ದರೂ, ಆ ಕ್ಲೃಪ್ತಕಾಲಕ್ಕೆ ಒಂದಾವರ್ತಿ ಪಾಯಿಖಾನೆಗೆ ಹೋಗಿ ಅಲ್ಲಿ ಕುಳಿತು ಬರುವ ಅಭ್ಯಾಸವನ್ನು ಮಾಡಬೇಕು ಹೀಗೆ ಮಾಡುತ್ತ ಬರುವುದರಿಂದ ಕಾಲಕ್ರಮದಲ್ಲಿ ಮಲಕೋಸವು ಕ್ರಮವಾಗಿ ಕೆಲಸಮಾಡುವ ಸ್ಥಿತಿಗೆ ಬರುವುದು

ಪ್ರತಿದಿನವೂ ಕಾಲಕ್ರಮದಿಂದ ಸುಲಭವಾದ ಶರೀರ ವ್ಯಾಯಾಮವನ್ನು ತೆಗೆದುಕೊಳ್ಳುತ್ತ ಬರಬೇಕು ಈ ಕೆಳಗೆ ಕಾಡಿಸಿರುವ ಕೆಲವು ಸುಲಭ ವ್ಯಾಯಾಮಗಳನ್ನು ವೈದ್ಯಾನದಲ್ಲಿ ತಪ್ಪದೆ ನಡೆಸುತ್ತಬಂದರೆ, ಅದರಿಂದ ಮಲಬದ್ಧತೆಯು ಶೀಗುವುದಲ್ಲದೆ ದೇಹಾವಯವಗಳಿಗೆ ಕಾರ್ಯಸಾಮರ್ಥ್ಯವೂ ಹೆಚ್ಚುವುದು

ವ್ಯಾಯಾಮ ಕ್ರಮಗಳು

(೧) ನೆಟ್ಟಗೆ ನಿಂತು ತೋಳುಗಳೆರಡನ್ನೂ ತಲೆಯ ಮೇಲಕ್ಕೆ ನೆಟ್ಟಗೆ ಸೀಡಿ ಅಮೇಲೆ ಆ ತೋಳುಗಳನ್ನು ಕೆಳಕ್ಕೆಳಸಿ, ಕೈಯಿಂದ ಕಾಲಿನ ಬೆರಳುಗಳನ್ನು ಮುಟ್ಟಬೇಕು ಹೀಗೆ ಮಾಡುವಾಗಲೆಲ್ಲ ತಲೆಯು ತೋಳುಗಳ ನಡುವೆ ಸಮರೇಪಟ್ಟಿರಬೇಕು ಮತ್ತು ಮಂಡಿಗಳನ್ನು ಮಡಿಸಬಾರದು ತೋಳುಗಳನ್ನು ಕೆಳಕ್ಕೆ ತಗ್ಗಿಸುವಾಗಲೂ ಮೇಲಕ್ಕೆತ್ತುವಾಗಲೂ ಶ್ವಾಸವನ್ನು ಬಿಡಬೇಕು

(೨) ನಡುವೆ ಎರಡಡಿಗಳ ಅವಕಾಶ ಬಿಡುವಂತೆ ಕಾಲುಗಳನ್ನಗಲಿಸಿಕೊಂಡು ನೆಟ್ಟಗೆ ನಿಲ್ಲಬೇಕು ತೋಳ ಗಳಿರಡನ್ನೂ ತಲೆಯ ಮೇಲುಗಡೆ ಪೋಣಿಸಿದಂತೆ ಜೋಡಿಸಿಟ್ಟುಕೊಂಡು ಮೊದಲು ಎಡದ ಪಾರ್ಶ್ವಕ್ಕೆ ವೈಯನ್ನು ಬಾಗಿಸಿ ಎಡದ ಪಾದವನ್ನು ಮುಟ್ಟಿಬೇಕು ಆಮೇಲೆ ಹಾಗೆಯೇ ಮುಂಭಾಗಕ್ಕೆ ಬಾಗಬೇಕು ಆಮೇಲೆ ನೆಟ್ಟಗೆ ನಿಂತು ಸಾಧ್ಯವಾದಷ್ಟರ ವರೆಗೆ ಹಿಂಭಾಗಕ್ಕೆ ಬಾಗಬೇಕು ಈ ವ್ಯಾಯಾಮ ದಲ್ಲಿಯೂ ಮಂಡಿಗಳನ್ನು ಬಗ್ಗಿಸುಬಾರದು ತಲೆಯನ್ನು ತೋಳ್ಗಳ ಸಮರೇಪಟ್ಟಿರಬೇಕು ಇಂಸಬೇಕು ಈ ವ್ಯಾಯಾಮದಲ್ಲಿಯೂ ಶ್ವಾಸವನ್ನು ಕ್ರಮವಾಗಿ ಬಿಡ ಬೇಕು

(೩) ಹಿಂದೆ ಹೇಳಿದಂತೆ ನಡುವೆ ಎರಡು ಅಡಿಗಳ ಅವಕಾಶವಿರುವಂತೆ ಕಾಲುಗಳನ್ನಗಲಿಸಿ ನೆಟ್ಟಗೆ ನಿಂತು ತೋಳುಗಳನ್ನು ಪಾರ್ಶ್ವಗಳಿಗೆ ನೆಟ್ಟಗೆ ಅಂಸೆ ಮೇಲಾ ಗಿರುವಂತೆ ನೀಡಬೇಕು ಅಮೇಲೆ ಮೈಯನ್ನು ಬಾಗಿಸಿ, ಬಲಗೈಯಿಂದ ಎಡಗಾಲಿನ ಹೆಬ್ಬೆರಳನ್ನೂ, ಎಡಗೈಯಿಂದ ಬಲಗಾಲಿನ ಹೆಬ್ಬೆರಳನ್ನೂ ಮಾಸಿಸುವಾಗಿಸಿ ಸ್ಪರ್ಶಿಸಬೇಕು ಬಾಗಿ-ವಾಗ ಉಸಿರನ್ನೆಳೆಯಬೇಕು. ಮಂಡಿಗಳನ್ನು ಬಾಗಿಸದೆ ನೆಟ್ಟಗೆ ಇರಿಸಬೇಕು

(೪) 'ಡಿಲ್ ಮಾಡುವಾಗ 'ಅಟೆಸ್ಷ' ನೆಲೆಯಲ್ಲಿ ನಿಲ್ಲ ವಂತೆ, ನೆಟ್ಟಗೆ ನಿಲ್ಲಬೇಕು ಸೊಂಟವು ಬಾಗದಂತೆ ದೃಢವಾಗಿರಬೇಕು ಆಮೇಲೆ ಒಂದು ಕಾಲಾದ ಮೇಲೆ ಮತ್ತೊಂದು ಕಾಲನ್ನು ಮಾಸಿ ಮಾಸಿ ನೆಲಕ್ಕೆ ಸಮಾಂತರವಾಗುವಂತೆ ಮೇಲಕ್ಕೆತ್ತುತ್ತಿರಬೇಕು ಕಾಲಿನ ಹೆಬ್ಬೆರಳನ್ನು ನೀಡಬೇಕು ಒಂದು ಕಾಲನ್ನು ಎತ್ತುವಾಗ ಇನ್ನೊಂದು ಕಾಲು ಬಾಗಬಾರದು ನಡೆದು ಹೋಗುವವರಿಗೆ ಈ ಸಾಧನೆಯನ್ನು ಸಾಧಿಸುತ್ತಿರಬೇಕು.

(೫) ಕೈಗಳನ್ನು ಸೊಂಟದ ಮೇಲಿಟ್ಟು ನೆಟ್ಟಗೆ ನಿಲ್ಲಿರಿ ಆಮೇಲೆ ಒಂದು ಕಾಲಾದ ಮೇಲೆ ಮತ್ತೊಂದು ಕಾಲಿನಂತೆ ಮಾಸಿ ಮಾಸಿ ಮೇಲಕ್ಕೆತ್ತುತ್ತ ಮಂಡಿಯನ್ನು ಎಸೆಗೆ ತಗುಲಿಸಬೇಕು ಕಾಲಿನ ಹೆಬ್ಬೆರಳುನೀಡಿದಂತಿರಬೇಕು ಶರೀರದ ಮೇಲಿನ ಭಾಗವನ್ನು ಬಗ್ಗಿಸ ಬಾರದು

(೬) ಐಂದೆ ಹೇಳಿದ ನೆಲೆಯಲ್ಲಿಯೇ ನೆಟ್ಟಗೆ ನಿಂತ, ಕಾಲುಗಳನ್ನು ಹಿಂಭಾಗಕ್ಕೆ ಸಾಧ್ಯವಾದಷ್ಟು ನೆ ಲಕ್ಕೆತ್ತಬೇಕು ಎತ್ತುವಾಗ ಕಾಲುಗಳು ಬಾಗ ಬಾರದು ಒಂದು ಕಾಲಾದಮೇಲೆ ಮತ್ತೊಂದನ್ನು ಮಾಸಿ ಮಾಸಿ ಎತ್ತಬೇಕು ದೇಹದ ಮೇಲಿನ ಭಾಗವು ಮುಂದಕ್ಕೆ ಬಗ್ಗಬಾರದು ಕ್ರಮವಾಗಿ ಉಸಿರಾಡಿಸುತ್ತಿರಬೇಕು

(೭) ಕಾಲುಗಳನ್ನು ಮುಂದಕ್ಕೆ ಸೀಡಿ, ಕಳಿತು ಕೊಳ್ಳಬೇಕು ಕಾಲಿನ ಹೆಬ್ಬೆರಳು ನೆಟ್ಟಗೆ ನೀಡಿದಂತಿರಬೇಕು ಕೈಗಳೆರಡನ್ನೂ ಪೃಷ್ಠಭಾಗದ ಕೆಳಗಿಟ್ಟುಕೊಂಡು, ಮೆಲ್ಲಗೆ ಹಿಂಭಾಗಕ್ಕೆ ಬಾಗುತ್ತ, ಮೊಳಕೈಗಳು ನೆಲಕ್ಕೆ ತಗಲುವಂತೆ ಮಾಡಬೇಕು ಕಾಲುಗಳನ್ನು ಕೆಲದಿಂದ ಮೇಲಕ್ಕೆ ಒಂದಾದಮೇಲೆ ಒಂದರಂತೆ ಮಾಸಿಮಾಸಿ ಎತ್ತುತ್ತ, ಆ ಕಾಲುಗಳನ್ನು ಬಗ್ಗಿಸಿ ಮೊಳಕಾಲನ್ನೆ ಎದೆಗೆ ತಾಗಿಸಬೇಕು ಆಯಾಸವು ತೋರುವವರೆಗೆ ಈ ಸಾಧನೆಯನ್ನು ಮಾಡಬೇಕು.

(೮) ನೆಲದ ಮೇಲೆ ಅಂಗತ್ತಾಗಿ, ಕೈಗಳನ್ನು ತಲೆಯ ಕೆಳಕ್ಕೆ ಆಧಾರ ಮಾಡಬೇಕು ಆಮೇಲೆ ಮೆಲ್ಲಗೆ ಕಾಲುಗಳನ್ನೆತ್ತಿ ಅವು ನೆಟ್ಟಗೆ ನಿಲ್ಲುವಂತೆ ಮಾಡಬೇಕು ಅದೇ ನೆಲೆಯಲ್ಲಿ ಸ್ವಲ್ಪ ಹೊತ್ತು ಇರಿಸಿದ್ದು, ಆಮೇಲೆ ಮೆಲ್ಲಗೆ ಈ ಸಾಧನೆ ಮಾಡಬೇಕು ಕಾಲುಗಳನ್ನೆತ್ತುವಾಗ ತಲೆಯನ್ನೆತ್ತಬಾರದು

ಬರ್ಮಾ ರಸ್ತೆಯನ್ನು ತೆರೆಯು ಲಾಗುವುದೇ?

ಸುಪ್ರಸಿದ್ಧ ಲೇಖಕರಾದ ಶ್ರೀ ವರ್ನಾಲ್ ಬಾರ್ಟ್ಸ್ ಲೆಟ್‌ರವರು 'ನ್ಯೂಸ್ ಕ್ರಾನಿಕಲ್' ಪತ್ರಿಕೆಯಲ್ಲಿ ಈ ಕೆಳಗೆ ಕಂಡಂತೆ ಲೇಖನವನ್ನು ಬರೆದಿದ್ದಾರೆ

"ಮುಂದಿನ ತಾಲ್ಕ ವಾರಗಳಲ್ಲಿ ಬ್ರಿಟಿಸ್ಸಿನ ಸಿವಿಲ್ ಪ್ರಜೆಗಳು ವ್ಯಕ್ತಪಡಿಸುವ ಧೈರ್ಯ ಸಾಹಸ ಗಳು ಆತ್ಯಂತ ಮಹತ್ವ ಪೂರ್ಣವಾದುವೆಲ್ಲುದರಲ್ಲಿ ಸಂದೇಹವಿಲ್ಲ ಈಗ ನಡೆಯುತ್ತಿರುವ ಯಾಯುಮುತ್ತಿಗೆಗಳಿಗೆ ಮೂಲ ಕಾರಣಗಳಲ್ಲಬಹುದು ಬ್ರಿಟಿಸ್ಸಿನ ಆಕ್ರಮಣವು ಒಂದು ಕಾರಣವಿರಬಹುದು ಹಿಟ್ಲರರು ಮುಂದಡಿಇಡಬಹುದಾದ ಶಾಂತಿ ಪರತ್ವುಗಳು ಇನ್ನೊಂದು ಕಾರಣವಿರಬಹುದು ಸಂಗ್ರಾಮವನ್ನು ಮುಂದುವರಿಸುವ ಕಾರಣವೂ ಒಂದಾಗಿರಬಹುದು ಈ ರೀತಿ ಸಂಗ್ರಾಮವನ್ನು ಮುಂದುವರಿಸದೆ ತಮಗೆ ಸೋಲಾಗುವುದೆಂಬುದು ಹಿಟ್ಲರರಿಗೆ ಖಂಡಿತವಾಗಿಯೂ ಗೊತ್ತಾಗಿದೆ

ಮೊದಲೆರಡು ಅಂಕಗಳನ್ನು ಪ್ರಯತ್ನಿಸಿ ಆತ್ಮಗು ವಿಫಲವಾದರೆ, ಹಿಟ್ಲರರಿಗೆ ಬಹಳ ಅರ್ಥ ಸಂಭವಿಸು ವುದರಲ್ಲಿ ಸಂದೇಹವಿಲ್ಲ ಬ್ರಿಟಿಸ್ಸಿನ ಮಿಲಿಟರಿ ನಿಪುಣರು, ಜರ್ಮನಿಯು ಆಕ್ರಮಣದ ಫಲಿತಾಂಶವೇನಾಗುವುದೆಂಬ ವಿಚಾರದಲ್ಲಿ ಸಂದೇಹವನ್ನೇನೂ ಇಟ್ಟುಕೊಂಡಿಲ್ಲ- ತಾವು ಮುಂದಿಟ್ಟಿರುವ ಕಾಂತ ಸಲಹೆಗಳ ಗತಿ ಏನಾಗುವುದೆಂಬುದನ್ನೂ ಕೂಡ ಹಿಟ್ಲರರು ಅರಿತವರಾಗಿದ್ದಾರೆ.

ಜರ್ಮನಿಗೆ ಸೋಲಾಗಬೇಕಾದರೆ ಎಷ್ಟು ಕಾಲ ಬೇಕಾಗುವುದೆಂಬುದನ್ನು ಬ್ರಿಟಿಸ್ಸಿನ ಸಿವಿಲ್ ಪ್ರಜೆಗಳು ಲೆಕ್ಕಹಾಕಿ ಆಷ್ಟುಕಾಲವೂ ತಾಳ್ಮೆಯಿಂದ ಸಹಿಸುವುದಕ್ಕೆ ಸಿದ್ಧರಾಗಿರುವರು ಪಶ್ಚಿಮ ಯೂರೋಪಿನಾಗಿ ನಡೆಯುತ್ತಿರುವ ಹೋರಾಟದಲ್ಲಿ ಅಮೇರಿಕದ ಸಹಾಯವು ಬ್ರಿಟಿಸ್ಸಿಗೆ ಲಭ್ಯವಾಗಿದೆ. ಬ್ರಿಟಿಸ್ಸಿನ ಭವಿಷ್ಯವೂ ತಮ್ಮ ಭವಿಷ್ಯವೂ ಎಷ್ಟರಮಟ್ಟಿಗೆ ಹೊಂದಿಕೊಂಡು ಹೋಗಿರುವುದೆಂಬುದು ಅಮೇರಿಕದ ಪ್ರಜೆಗಳಲ್ಲಿರೂಢಿಗೊತ್ತು ಪಶ್ಚಿಮ ಯೂರೋಪಿನ ಮೇಲೆ ಇನ್ನುಳಿದ ಎರಡು-ಮೂರು ಪ್ರದೇಶಗಳೆಂದರೆ, ಮೆಡಿಟರೇನಿಯನ್ ಮತ್ತು ದೂರದ ಪೂರ್ವ ಇಲ್ಲಿಂದಲ್ಲಿರುವ ಫ್ರೆಂಚ್ ಕಾಲೋನಿಗಳು ಟೋಕಿಯೋವಲ್ಲಿರುವ ಜರ್ಮನ್ ಸರ್ಕಾರವು ಲಂಡನ್ನಿನಿಂದ ಬರುವ ವರ್ತಮಾನಗಳನ್ನು ಹಿಂದಿಗಿಂತಲೂ ಈಗ ಬಹಳ ಎಚ್ಚರಿಕೆಯಿಂದ ಪರಿಶೀಲಿಸುತ್ತಿದೆ ವಿಚಿ ಸರ್ಕಾರದವರು ಜನರಲ್ ವೇಗಾಂಡ್ ರವರನ್ನು ಆಫ್ರಿಕದೇಶಕ್ಕೆ ಕಳುಹಿಸಿದರೂ ಅಲ್ಲಿರುವ ಫ್ರೆಂಚ್ ಜನರು ಪೆಟೆ ಸರ್ಕಾರದ ಮೇಲೆ ವಿಶ್ವಾಸವಾಗಿ ದೆಗೆ ಏಳುವುದೇನೂ ತಪ್ಪುವುದಿಲ್ಲ ಮುಂದೆ ಕೆಲವು ದಿನಗಳಲ್ಲಿ ಫ್ರೆಂಚ್ ಕಾಲೋನಿಗಳಲ್ಲಿ ಬಹಳ ಮುಖ್ಯವಾದ ಘಟನೆಗಳು ನಡೆಯುವ ಸಂಭವವಿದೆ

ಆರ್ ಎ ಎಫ್ ವಿಮಾನಗಳಿಗೆ ಉಂಟಾಗಿರುವ ಜಯ ಬ್ರಿಟಿಷ್ ಸಿವಿಲಿಯ ಪ್ರಜೆಗಳು, ವೃತ್ತಪತ್ರಿಕೆಯ ಧೈರ್ಯ ಸಾಹಸಗಳು, ಇವುಗಳೇ ಇಂಗ್ಲೆಂಡ್-ಅಮೇರಿಕ ಒಪ್ಪಂದಕ್ಕೆ ಕಾರಣವಾಗಿ ಅಮೇರಿಕಾ ದೇಶವು ಜಂಡಿಸ್ಟ್ರಿಯುರುಗಳನ್ನು ಬ್ರಿಟಿಸ್ಸಿಗೆ ಕೊಟ್ಟಿರುವುದು ಇದೇ ಕಾರಣದಿಂದಲೇ ಈ ಅಂಕಗಳ ಪಬ್ಲಿಮಾರ್ಧಗೋಳವಲ್ಲರುವ ಬ್ರಿಟಿಸ್ಸಿನ ಪ್ರದೇಶಗಳಲ್ಲಿ ಅಮೇರಿಕವು ನೌಕಾ ಮತ್ತು ವಿಮಾನ ಸ್ಥೈರ್ಯಗಳನ್ನು ವಿಪರೀತವಾಗಿ ಸೌಕರ್ಯವೂ, ದೂರದ ಪೂರ್ವದೇಶದ ಮೇಲೆ ಮಹತ್ತರವಾದ ಪರಿಣಾಮವನ್ನುಂಟುಮಾಡಿದೆ ಬ್ರಿಟಿಸ್ಸಿನ ಪ್ರಜೆಗಳು ಬೇರೆ ಕಡೆ ಗಮನ ಕೊಡಲು ಅವಕಾಶ ಕೊಡದಂತೆ ಜರ್ಮನಿಯು ಮಾಡಿರುವುದರಿಂದ ದೂರದ ಪೂರ್ವದಲ್ಲಿ ಜಪಾನು ಕೆಂಪಳ್ಳೆ ಹೊಡೆಯುವುದಕ್ಕೆ ತನ್ನ ಮನಬಂದಂತೆ ಮಾಡುವುದಕ್ಕೂ ಅವಕಾಶವಿದೆ ಆದರೆ ಆ ರೀತಿ ವರ್ತಿಸುವುದಕ್ಕೆ ಜರ್ಮನಿಯು ಜಪಾನಿಗೆ ಅವಕಾಶ ಕೊಟ್ಟಿಲ್ಲ ಇದರಿಂದ ಜಪಾನಿಗೆ ನಿರುತ್ಸಾಹವುಂಟಾಗಿದೆ. ಆಲ್ಲದೆ ಸಿಂಗಪುರದ ವಿಚಾರವಾಗಿ ಅಮೇರಿಕಾಕ್ಕೂ ಬ್ರಿಟಿಸ್ಸಿಗೂ ಒಪ್ಪಂದವಾಗಿದ್ದುದು ಬೇರೆ ಜಪಾನಿಗೆ ಕಳವಳವನ್ನುಂಟುಮಾಡಿದೆ ಚೀನಾ ಸ್ವಾತಂತ್ರ್ಯವನ್ನು ರಕ್ಷಿಸುವ ವಿಚಾರವಾಗಿ ಅಮೇರಿಕಾದೊಡನೆ ಸಂಧಾನ ನಡೆಸುತ್ತಿರುವುದೂ ಜಪಾನಿಗೆ ಬಹಳ ಆಪಾಯಪೆಸಿವ ಕಾರ್ಯವಾಗಿದೆ

ಸಂಗ್ರಾಮವು ಆರಂಭವಾದಾಗ, ಸ್ಟಾಲಿನ್‌ರವರ ನೀತಿಯೇ ಬೇರೆಯಾಗಿತ್ತು ಯಾವದೇಕಕ್ಕೆ ಸೋಲಾಗುವೆಂದು ಕಂಡುಬರುವುದೋ ಆ ದೇಕಕ್ಕೆ ಬೆಂಬಲ ಕೊಡಬೇಕೆಂಬುದೇ ರಷ್ಯದ ನೀತಿಯಾಗಿತ್ತೆಂಬುದಾಗಿ ಭಾವಿಸಬಹುದಾಗಿತ್ತು ಏಕೆಂದರೆ ನಾಜಿಗಳಿಗೆ ಸಂಪೂರ್ಣ ವಾದ ಜಯ ವಾಗುವುದೂ ರಷ್ಯಕ್ಕೆ ಇಷ್ಟವಿರಲಿಲ್ಲ. ಇಲ್ಲವೇ ಇಂಗ್ಲೆಂಡ್—ಫ್ರಾನ್ಸ್ ದೇಕಗಳ 'ಇಂಪೀರಿಯಲಿಸಂ, ಫ್ಯೂಯೆಕ್ಕೆ ಸಂಪೂರ್ಣವಾಗಿ ಜಯವಾಗುವುದೂ ಸ್ಟಾಲಿನ್‌ರವರಿಗೆ ಇಷ್ಟವಿರಲಿಲ್ಲ

ಆದರೆ ಫ್ರಾನ್ಸಿನವಶತನವಾದಮೇಲೆ ಸ್ಟಾಲಿನ್‌ರವರು ಹರ್ ಹಿಟ್ಲರ್‌ರವರಿಗೆ ಅವರ ಯೂರೋಪ್ ದಿಗ್ವಿಜಯ ಪ್ರಯತ್ನಗಳಲ್ಲಿ ಬೆಂಬಲನೀಡುವ ಮನೋಭಾವವು ಲೃವರಾಗಿರುತ್ತಾರೆಂಬುದರಲ್ಲಿ ಸಂದೇಹವಿಲ್ಲ ಆದರೆ ಅವರು ಹಿಟ್ಲರರ ಸ್ನೇಹಿತರಿನಿವ ಜಪಾನಿನವರ ಅಕ್ರಮಣ ಪ್ರಯತ್ನವನ್ನು ಮೊದಲಿನಿಂದಲೂ ಪ್ರತಿಭಟಿಸುತ್ತಿದ್ದಾರೆ

ಆದುದರಿಂದ ಬ್ರಿಟಿಸ್ ಜಯಗಳಿಸುವುದೆಂಬ ದೃಢವಿಸ್ವಾಸವಿಂದ ಕೂಡಿರುವುದೆಂಬ ಅಂಶವನ್ನು ರಷ್ಯಕ್ಕೆ ನ್ಪಷ್ಟಗೊಳಿಸಬೇಕಾದರೆ, ಜಪಾನಿನ ವಿಷಯದಲ್ಲಿ ಬಿಗಿಯಾದನೀತಿಯನ್ನು ಅನುಸರಿಸಬೇಕಾಗಿದೆಯೆಂಬುದು

ತುಗ ಲಂಡನ್ನಿನಲ್ಲಿ ಧೃಡಪಟ್ಟಿದೆ. ಆದುದರಿಂದ ಬ್ರಿಟನ್ನಿನ ನೀತಿಯಲ್ಲಿ ಕೆಲಂಚ ಬದಲಾವಣೆಯಾಗುವ ನೀರೀಕ್ಷೆಯಿದೆ ಇನ್ನೊಂದು ತಿಂಗಳೆಕೆಳಗಾಗಿ ಬರ್ಮಾ ರಸ್ತೆಯ ವಿಚಾರವು ಮತ್ತೆ ಪ್ರಸ್ತಾಪಿಸಲ್ಪಡಬೇಕಾಗಿದೆ. ಆಗ ಬರ್ಮಾ ರಸ್ತೆಯನ್ನು ಮುಚ್ಚುವ ವಿಚಾರದಲ್ಲಿ ಈಗ ಬ್ರಿಟನ್ ತೋರುವ ನೀತಿಯಲ್ಲಿ ಬದಲಾವಣೆ ಗಳಾಗುವ ಸಂಭವವಿದೆ.

ಚೀನಾದಲ್ಲಿ ೧೦ ಲಕ್ಷಮಂದಿಯೋಧರು ಸಿದ್ಧರಾಗಿರುವಾಗ, ಜಪಾನು, ಚೀನಾದಲ್ಲಿ ತನ್ನ 'ಮಿಲಿಟರಿ' ನೀತಿಯನ್ನು ಆಚರಣೆಗೆ ತರಲು ಸಾಧ್ಯವಿಲ್ಲವೆಂಬುದೂ ಬರ್ಮಾ ರಸ್ತೆಯನ್ನು ಮುಚ್ಚಿದುವುದರಿಂದ ಯಾವ ಪ್ರಯೋಜನವೂ ಆಗುವುದಿಲ್ಲವೆಂಬುದೂ, ಅಮೆರಿಕಾ ಕ್ಷೇತ್ರಗಳ ಅಭಿಪ್ರಾಯವಾಗಿದೆ.

ಶಿಷ್ಯರ ಮನೆಗಳ ರಿಜಿಸ್ಟರ್ ಬುಕ್

ಧರಕಖಾಂಡವಿಲ್ಲದಿರುವ ಪತ್ರಿಯೊಂದು ಗುರುವರ್ಯದ ಮನೆಗೆ ಬಾರದು. ಶಿಷ್ಯರ ಮನೆಗಳೆಯತ್ತಿದ್ದು, ಆ ಮಹಾಧಿಕಾರಿಗಳು ಬಮವರ್ಷಕ್ಕೊಂದೇ ಸಲ್ಲ ವರ್ಷಕ್ಕೂ ಹಿಂದುಸಾರಿ ಹೋಗಿ ಶಿಷ್ಯರ ಮನೆಗಳನ್ನು ತಿಳಿದುಕೊಂಡು ಬರುತ್ತಿರುವರು ಆದರೆ ಇದರು ತಮ್ಮ ಕರ್ತವ್ಯಕ್ಕನುಸರಿಸಿ ಶಿಷ್ಯರ ಯಾವತ್ತು ವಿಳಾಸಗಳನ್ನು ಬರೆದುಕೊಳ್ಳಲಿಕೆ ಆಗಲಿಲ್ಲವೆನ್ನುವ ಮಾತ್ರ ತೆಗೆದುಕೊಂಡು ಹೋಗಿಬಿಡುವರು. ಈ ಅನ್ಯಾಸಕ್ತಿ ಮುಂದೆ ಅಲೇಕ ಮಠಪತಿಗಳಿಗೆ ತಮ್ಮ ಶಿಷ್ಯರ ಮನೆಗಳಿಗೆ ಗೊತ್ತಿಲ್ಲದೆ ಹೋಗಿಸಿ ಇದನ್ನು ನೋಡಿಮಾಡುವುದಕ್ಕೊಸ್ಕರ ಮೇಲ್ಕಂಡ ಪುಸ್ತಕವನ್ನು ಜೊತೆ ಜಾಗಿ ಮುದ್ರಿಸಲಾಗಿರುವುದೆ ಇದರಲ್ಲಿ ಬರೆಯುವ ವಿಷಯಗಳ ವಿವರವ ಚೆನ್ನಾಗಿ ತೋರಿಸಲ್ಪಟ್ಟಿದೆ ಆದುದರಿಂದ ಸದರಿ ಪುಸ್ತಕವನ್ನು ಶಿಷ್ಯರ ಪ್ರತಿಯೊಬ್ಬ ಗುರುವರ್ಯರೂ ತರಿಸಿಕೊಂಡು ಇದರಲ್ಲಿರುವಂತೆ ವಿವರವನ್ನೆಲ್ಲಾ ಬರೆದು ಸಂಶಕಾರಂಂಭವಾಗಿ ಒಂದು ತಮ್ಮ ಶಿಷ್ಯರನ್ನು ಕಾಣಾವಿಕೊಳ್ಳಬೇಕು. ಇದಕ್ಕಾಗಿ ಎಂದೂ ಕೆಡದಂಥ ಕಾಗದ-ಳನ್ನು ಹಲೋಗಿಸಿರುವುದಲ್ಲದೆ ಸುಂದರವಾದ ಮತ್ತು ಭದ್ರವಾದ ಬೈಂಡನ್ನು ಮಾಡಿಸಿದೆ

ಬೆಲೆ ೧ ರೂಪಾಯಿ

ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್,
ಮೈಸೂರು.

ಶಾಸ್ತ್ರೋಕ್ತ ದಿವ್ಯೌಷಧಗಳು.

ಶ್ರೀ ಜಗದ್ಗುರು ಕೇದಾರಪಂಡ್ಯಾನಂದ ರಸಾಯನ ಶಾಲೆಯಲ್ಲಿ ತಯಾರಾಗತಕ್ಕ ರಸಾಯನ ಔಷಧಿಗಳು ಆಲ ಸೆಲಭಕ್ಕಯದಲ್ಲಿ ದೊರೆಯುವವು

ಹೆಸರು ಕೆಸರು	ತೊಲ	ಮೂಲ್ಯ
ಸ್ವರ್ಣಮಕರಧ್ವಜ	೧	೩೦—೦—೦
ಸ್ವರ್ಣಚಂದ್ರೋದಯ	೧	೧೦—೦—೦
ಶಿ ನೇ ನಂಬರ್	೧	೮—೦—೦
ರಸಸಿಂಧೂರ	೧	೫—೦—೦
ಸುಲ್ಲಸಿಂಧೂರ	೧	೪—೦—೦
ಶಾಲಸಿಂಧೂರ	೧	೪—೦—೦
ನೆಲ ಸಿಂಧೂರ	೧	೪—೦—೦
ಸ್ವರ್ಣವಂಗ	೧	೩—೦—೦
ತ್ರಿವಂಗ	೧	೧—೦—೦

ಭಸ್ಮಗಳು

ಶ್ವಾರ್ಭಸ್ಮ	೧	೪೦—೦—೦
ಸಜತಭಸ್ಮ	೧	೪—೦—೦
ಸಿಪ್ರಭಸ್ಮ	೧	೦—೮—೦
ಸೋಡಭಸ್ಮ	೧	೦—೧೫—೦
ವಂಗಭಸ್ಮ	೧	೦—೮—೦
ಲಾಗಭಸ್ಮ	೧	೦—೮—೦

ನೋಟ್—ಈ ಔಷಧಾಲಯದಲ್ಲಿ ಸರ್ವಪ್ರಕಾರದ ಶೀಹ, ಜೂರ್ಣ, ಗುಟಿಕಾ, ತೈಲ, ಘೃತ, ಗುಗ್ಗುಳಾದಿ ಔಷಧಿಗಳು ಸರ್ವದೋಗಗಳಿಗೆ ದೊರೆಯುವುವು

ನಿಲಾಸ—ಮ್ಯಾನೇಜರು,
ಆಯುರ್ವೇದ ರಸಾಯನಶಾಲಾ,
ಸೋಸ್ಯ ಒವಿಮರ, ಜಿಲ್ಲಾ ಗಧನಾಲ್ ಯುಪಿ.

ವೈದಿಕ ಶಿವಪೂಜಾವಿಧಿ.

ವೀರಶೈವರಿಗೆ ಮುಖ್ಯವಾಗಿ ಬೇಕಾಗಿರುವ ಈ ಮೇಲ್ಕಂಡ ಗ್ರಂಥವು ವೇ॥ ಪಂ॥ ಶ್ರೀಕಾಶೀನಾಥಶಾಸ್ತ್ರಿಗಳವಂದ ವೈದಿಕಸಂಪ್ರದಾಯಾನುಸಾರವಾಗಿ ವಿರಚಿತವಾಗಿದ್ದು, ಶ್ರೀ ಪಂಚಾಚಾರ್ಯ ವಿಶ್ವೇಶ್ವರ್ಯಗ್ರಂಥಾಲಯದಲ್ಲಿ ಬಹು ಮುದ್ದಾಗಿ ಮುದ್ರಿತವಾಗಿದೆ ತಿಲ್ಲಿಯವರೆಗೆ ಅನೇಕ ಕಡೆಗೆ ಶಿವಪೂಜಾವಿಧಿಗಳು ಮುದ್ರಿಸಲ್ಪಟ್ಟಿವೆ. ಆದರೆ ಮುದ್ರಾಪಕರಿಂಗೆ ವೈದಿಕಸಂಪ್ರದಾಯವು ಗೊತ್ತಿಲ್ಲದಿರುವುದರಿಂದ ಅನೇಕ ಕಡೆಗೆ ಮಂತ್ರಗಳು ಆಶುದ್ಧವಾಗಿ ಬಿದ್ದಿವೆ! ಅನೇಕರು ಆ ಆಶುದ್ಧಮಂತ್ರಗಳನ್ನೇ ಪಠಿಸುತ್ತಿರುವರು ಇದು ಅತ್ಯಂತ ವ್ಯಸನಕರವಾದ ವಿಷಯವಾಗಿದೆ. ಅಲ್ಲದೆ ವೇದಮಂತ್ರಗಳನ್ನು ವೈದಿಕ ಸ್ವರಸಹಿತವಾಗಿ ಉಚ್ಚರಿಸದೇಕಳ್ಳದೆ ಸ್ವರಕೊನ್ಯವಾಗಿ ಉಚ್ಚರಿಸುವುದಕ್ಕೆ, ಇಲ್ಲಿಯವರೆಗೆ ಮುದ್ರಿತಗಳಾಗಿರುವ ಯಾವ ಶಿವಪೂಜಾವಿಧಿಯಲ್ಲಿಯೂ ವೇದಮಂತ್ರಗಳಿಗಾಗಲಿ, ಶ್ರೀರುದ್ರಾಧ್ಯಾಯ-ಚಮಕಾಧ್ಯಾಯ ಪುರುಷಸೂಕ್ತಗಳಿಗಾಗಲಿ ವೈದಿಕಸ್ವರಗಳು ಹಾಕಲ್ಪಟ್ಟಿಲ್ಲ ಮತ್ತು ಪದವಿಭಾಗವೂ ಮಾಡಲ್ಪಟ್ಟಿಲ್ಲ. ಈ ಶಿವಪೂಜಾವಿಧಿಯಲ್ಲಿ ಈ ಕೊರತೆಯು ದೂರಮಾಡಲ್ಪಟ್ಟಿದೆ ಇದಕ್ಕಾಗಿ ಪಂಡಿತರು ಬಹು ಶ್ರಮವಸಿ, ವಹಿಸಿ ಋಗ್ವೇದ-ಯಜುರ್ವೇದಗಳನ್ನೆಲ್ಲ ಕೂಲಂಕಷವಾಗಿ ಪರಿಶೀಲಿಸಿ ವೀರಶೈವಸ್ವರಸಂಜ್ಞೆಕ್ಕೆ ಮಹೋಪಕಾರವನ್ನು ಮಾಡಿದ್ದಾರೆ ಈ ಪೂಜಾವಿಧಿಯಲ್ಲಿರುವ ವೈದಿಕಮಂತ್ರಗಳು ಯಾವ ವೇದದ ಯಾವ ಭಾಗದಲ್ಲಿರುವುದೆಂಬುದನ್ನು ಪಂಡಿತರು ವಿವರವಾಗಿ ತೋರಿಸಿದ್ದಾರೆ ಪ್ರತ್ಯಕ್ಷವಾಗಿ ನೋಡಿದ ಮೇಲೆ ಈ ಗ್ರಂಥದ ಮಹತ್ವವು ಕಂಡುಬರುವುದು ಅಲ್ಲದೆ ಈ ಪೂಜಾವಿಧಿಯ ಅಂತ್ಯದಲ್ಲಿ—ಶಿವಸಹಸ್ರನಾಮಾವಳಿ, ಶಿವಾಷ್ಟೋತ್ತರ ಶತನಾಮಾವಳಿ, ಶಿವಕವಚ, ಪಾರ್ವತೀದೇವೀನಾಮಾವಳಿ, ವೀರಭದ್ರನಾಮಾವಳಿ, ಭದ್ರಕಾಳೀದೇವೀನಾಮಾವಳಿ, ಷಣ್ಮುಖಸ್ತವಿನಾಮಾವಳಿ, ಶ್ರೀ ಪಂಚಾಚಾರ್ಯರ ನಾಮಾವಳಿಗಳು, ನಾನಾವಿಧ ಶಿವಸ್ತೋತ್ರಗಳು, ನಾನಾವಿಧ ದೇವೀಸ್ತೋತ್ರಗಳು, ನಾನಾವಿಧ ಗುರುಸ್ತೋತ್ರಗಳು ಮುದ್ರಿಸಲ್ಪಟ್ಟಿವೆ ಒಟ್ಟಿಗೆ ಈ ಶಿವಪೂಜಾವಿಧಿಯು ಸರ್ವಾಂಗಸುಂದರವಾಗಿದ್ದು ಸರ್ವತೋಮುಖವಾಗಿ ಸ್ತುತ್ಯವಾಗಿದೆ ಆದುದರಿಂದ ಪ್ರತಿಯೊಬ್ಬ ವೀರಶೈವರೂ ಈ ಪೂಜಾವಿಧಿಯನ್ನು ತರಿಸಿಕೊಂಡು ಇದರಲ್ಲುಕ್ತವಾಗಿರ ವಂತೆ ಶಿವಪೂಜೆಯನ್ನು ಮಾಡಿ ಧನ್ಯರಾಗಬೇಕೆಂದು ಕೋರಿಕೆ **ಬೆಲೆ ೧೨ ಆಣೆ** ವಿ ಪಿ ಚಾರ್ಜು ಪ್ರತ್ಯೇಕ

ಮ್ಯಾನೇಜರ್,
ಪಂಚಾಚಾರ್ಯಪ್ರಭಾ ಆಫೀಸ್, ಮೈಸೂರು.

ಶಿವಾದ್ವೈತಮಂಜರಿ.

The Philosophical Aspect of Virasaivism (*English*)	....		8 As.
Speeches by Pandit Shri Kashinatha Shastriji *Englsh*)			12 As.
ವೀರಶೈವರತ್ನ (ಮರಾಠಿ)	...	..	೧ ರೂ.
ಮಹಾನಾರಾಯಣೋಪನಿಷತ್ (ವೀರಶೈವಭಾಷ್ಯ-ಸಂಸ್ಕೃತ)		...	೧ ರೂ.
ವೀರಶೈವಪ್ರಶ್ನೋತ್ತರ (ಸಂಸ್ಕೃತ)		..	೧ ರೂ.
ಲಿಂಗಧಾರಣಚಂದ್ರಿಕಾ (ಸಂಸ್ಕೃತ)		...	೩ ರೂ.

೧ ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಳಿಸುವುದಿಲ್ಲ. ೫ ರೂ. ಗಳಿಗೆ ಮೇಲ್ಪಟ್ಟು ಪುಸ್ತಕಗಳನ್ನು ತರಿಸಿಕೊಳ್ಳುವವರಿಗೂ ಪುಸ್ತಕ ವ್ಯಾಪಾರಿಗಳಿಗೂ ೧ ರೂ. ಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವುದು.

ಮ್ಯಾನೇಜರ್—ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಮೈಸೂರು ಸಯ್ಯಾಜಿರಾವ್ ರೋಡಿನಲ್ಲಿರುವ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಸಂಪಾದಕರಾದ ವೀ ಪಂಡಿತ ಶ್ರೀ ಇಷ್ಟಲಿಂಗಶಾಸ್ತ್ರಿಗಳವರಿಂದ ಮುದ್ರಿಸಿ ಪ್ರಕಟಿಸಲ್ಪಟ್ಟಿತು

REGISTERED No. M. 2266 ॥ श्रीजगद्गुरु पंचाचार्याः प्रसीदंतु ॥ REGISTERED No. M. 2266

ಪಂಚಾಚಾರ್ಯ ಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನಿನಪಂಕಜಾತಜನಿತರ ಪಂಚಾಸ್ಯಪೀಠಾಧಿಪರ್ । ಪಂಚಕ್ಲೇಶವಿನಾಶಕರ ಪರತರಶ್ರೀಪಂಚಲಿಂಗೋದ್ಭವರ್ ॥
ಪಂಚಾಚಾರಧುರೀಣಮಾರ್ಗ ಪರಿಲಸತ್ಪಂಚಾಕ್ಷರೀದೋಧಕರ್ । ಪಂಚಾಚಾರ್ಯಜಗದ್ಗುರೂತ್ತಮವರರ್ ಪಾಲಿಪ್ಪುದೀಲೋಕಮಂ ॥

ಸ್ವಳದವರಿಗೆ ೧ ರೂ ೧೧ ಆಣೆ. ಬಿಡಿ ಪ್ರತಿ ೧ಕ್ಕೆ ೬ ಪೈ. ಪರಸ್ಥಳದವರಿಗೆ ೨ ರೂ ೮ ಆಣೆ ವಿ ಪಿ ಚಾರ್ಜು ಪ್ರತ್ಯೇಕ.

ಸಂಪುಟ ೧೪.] ಪಂಚಾಚಾರ್ಯಪ್ರಭಾ, ಸೋಮವಾರ ತಾ॥ ೧೧ ನೇ ನವಂಬರ್ ೧೯೪೦ [ಸಂಚಿಕೆ ೨೭

॥ ಶ್ರೀಜಗದ್ಗುರುಪಂಚಾಚಾರ್ಯಾಃ ಪ್ರಸೀದಂತು ॥

ಶ್ರೀಕಾಶೀನಾಥಪಂಡಿತಸ್ತೋತ್ರಂ

(ಲೇಖಕಃ—ಚನ್ನಕವಿ ಬೃಕನ್ನಕ ಸೂರಕೋಡ.)

ಶ್ರೀಶೈಲೇಶನ ಬಿಂಬಮೋ ಶಿವಮತತ್ತ್ವಾನಾದಿಮಸ್ತಂಭಮೋ ।
ಶ್ರೀಶೈವಾಗಮಮೂರ್ತಿಯೋ ಗುರುಕುಲಪ್ರಾಚೀನಸತ್ಕೀರ್ತಿಯೋ ॥
ಶ್ರೀಶೈವಾಂಬುಧಿಚಂದ್ರನೋ ಎನೆ ಜಗನ್ಮಾನ್ಯಸ್ಫುದಿಂ ಶೋಭಿಪಾ ।
ಶಾಶೀನಾಥಬುಧಂ ಸುಖಾತಿಶಯದಿಂದಾರೋಗ್ಯದಿಂ ಬಾಳುಗೆ ॥ ೧ ॥

ಶಾತಾಂ ನಿಜವಿರಕ್ತಿವಚನಕಂ ಸುಜ್ಞಾನಮಂ ಹೇಳ್ವನೋ ।
ಶಾತಾಂ ಗುರುವರ್ಗದಧ್ವರಣಕಂ ಕಕ್ಷ್ಯಂಗಳಂ ತಾಳ್ವನೋ ॥
ಶಾತಾಂ ಕಡುಬ್ಯತ್ಯಡರ್ಯಬಲದಿಂ ಸತ್ಕೀರ್ತಿಯಿಂ ಬಾಳ್ವನೋ ।
ಶಾಶೀನಾಥಸಮಪ್ರಭಂ ಜಯಿಕೆ ಕಾಶೀನಾಥನೀಥಾತ್ಮಿಯೊಳ್ ॥ ೨ ॥

ನ್ನಂ ಧ್ಯಾನಿಪನಾವನೋ ಶಿವಗವಂ ಸಂಪ್ರೀತನೆ ಪ್ರಾಜ್ಞನೇ ।
ನ್ನಂ ಪೆತ್ತಿಹ ತಂದೆತಾಯಿಗಳು ತಾವ್ ಸಾಮಾನ್ಯರೇ ? ಪೂಜ್ಯರೆ ॥
ನ್ನಿಂ ಭಾರತಮಾತೆಯುಂ ಪುತವತೀ ತಾನಾದಳೇ ಭಾಗ್ಯಮೋ ।
ನ್ನಿಂ ಕಾಜಿಪ ವೀರಶೈವಸಮಯಂ ಧನ್ಯಂ ಧರಾಮಧ್ಯದೊಳ್ ॥ ೩ ॥

ುರುವರ್ಗೋನ್ನತಿಸಂಭವಂ ನೆಲಸಿ ನೀನೆಲ್ಲಿಯುಂ ಮತ್ತಮಾ ।
ುರುವರ್ಗಳ್ಕುಪಯುಕ್ತಪುತ್ರಕಗಳಂ ಮುದ್ರಾಕ್ಷರಾಗಾರದೊಳ್ ॥
ರದಿಂ ಮುದ್ರಿಸಿ ವೃತ್ತಪತ್ರಿಕೆಯನುಂ ರಕ್ಷಿಪ್ಪೆ ನಿಃಸ್ವಾರ್ಥದಿಂ ।
ುರುವರ್ಗೋತ್ರಮಮಾರ್ಗದರ್ಶಕನೆನಿಲ್ ನಿನ್ನಂ ಬುಧರ್ ಪಾಡುವರ್ ॥ ೪ ॥

ಪೆಣ್ಣೇ ಲೋಕದ ಕಣ್ಣದೆಂಬಲಿವರು ಪೆಣ್ಣೇ ಭವದ್ಭೃಷ್ಟಿಯಿಂ ।
ಮಣ್ಣಂ ಮಾಡಿದ ದೊಂದೆಯಂತಿರುತಿರಲ್ ಸನ್ಯಾಸಿಗಳ್ ಸಂತತಂ ॥
ಕಣ್ಣಿಂ ಕಾಣದೆ ಭೀತಿವಟ್ಟಿಪವಿಯಂ ಪೊಂದಿರ್ದರೆಂದೆನ್ನಲುಂ ।
ನಿನ್ನಿಂದಾ ಯತಿಗುಳ್ ಸುಮಾನ್ಯರಿಹರೇ ಸದ್ಭಕ್ತಿವಿಶ್ವಾಗ್ರಣೀ ॥ ೫ ॥

ಗುರುನಿಂದಾಚಲವಜ್ರನೇ ಗುರುಜನಾನಂದಾಬ್ಧಿಪೂರ್ಣೇಂದ್ರನೇ ।
ಗುರುಕಾರುಣ್ಯದ ಮೂರ್ತಿಯೇ ಗುರುಮತಾಚಾರಾಧ್ವಸಂಚಾರಿಯೇ ॥
ಗುರುತತ್ತ್ವಾಮೃತಸಿಂಧುವೇ ಸ್ವಮತಮದ್ಯಾರಾಧ್ಯಮಾ ಸ್ವರ್ಗದಿಂ ।
ಧರೆಗೈತಂದಿಹ ಪುಣ್ಯರಾಶಿಯೆನೆ ನೀಂ ಸುಜ್ಞಾನದಿಂ ಶೋಭಿಪೈ ॥ ೬ ॥

ಉರುಧೀರತ್ವವಸಾಂತ ಶಾಂತಮಹ ನಿನ್ನಂ ಕ್ರೂರಕರ್ಮಾತ್ಮರುಂ ।
ಜರೆದರ್ ವಿಘ್ನವನೊಡ್ಡಿದರ್ ನಿನಗವರ್ ಕಕ್ಷ್ಯಗಳಂ ಕೊಟ್ಟೆಯೈ ॥
ತರಿಯಲ್ವಾಣಗಳಂ ವೃಥಾ ಕುಮತಿಗಳ್ ದುರ್ಯತ್ನಮಂ ಮಾಡಿದರ್ ।
ಒರೆದರ್ ದುರ್ಮಹವಾದೊಡೇಂ ಜಗದಿ ನೀಂ ಪಡ್ಕೈರ್ಯದಿಂ ವರ್ತಿಪೈ ॥ ೭ ॥

ಪರಮತ್ರೀಗುರುಭಕ್ತಿಜಾಪಕಕೆ ಭವತ್ಸಾಂತಿಪ್ರಮಿಂತೆಂಬುವಾ ।
ಶರಮಂ ಪೂಡುತೆ ವೀರನಾಗುತೆ ಸದಾ ಪಂಚಾರ್ಯರಂ ನಿಂದಿಸಿ ॥
ಚರಿಸುತ್ತಿರ್ಪ ಮರಾತ್ಮದುರ್ಮಗಗಳಂ ವಿಧ್ವಂಸನಂ ಗೆಯ್ದು ನೀಂ ।
ಗುರುಸಾಮ್ರಾಜ್ಯವ ಪಾಲಿಸುತ್ತ ಮರೆಯೈ ವೀರಾಗ್ರಣೀ ಧೀಮಣೀ ॥ ೮ ॥

ಮನೆಮಾಡುಂ ತೊರೆದಾವಗಂ ಸ್ವಗುರುಪೀಠೋದ್ಧಾರಕಂ ನಿನ್ನಿಬಾ ।
ತನುಮಂ ಮಾನಸವಂ ಸಮರ್ಪಿಸಿ ವಲಂ ನಿಸ್ಸ್ವಾರ್ಥಭಾವಂಗಳಂ ॥
ಜೊಣಗುತ್ತಿರ್ಪೆ ಬುಧೇಂದ್ರನೇ ಸ್ವಮತಮೆಂಬೆಂದುಂ ಭವತ್ಕಾರ್ಯದಿಂ ।
ಋಣಿಯಾಗಿರ್ಪುದು ವೀರಶೈವಜನಕಂ ಕ್ಷತ್ಸೇವೆಯೇ ಸಾರ್ಥಕಂ ॥ ೯ ॥

ಧೃತಿಯಂ ಪರ್ವತಮಂ ಪ್ರತಾಪಗುಣದಿಂದಾದಿತ್ಯನಂ ಯತ್ನದಿಂ ।
ಕ್ಷಿತಿಪತ್ವಾತಭಗೀರಥಕ್ಷಿತಿಪನಂ ಶ್ರೀ ನಾಭಿಭವಾನಿತ್ಯದಿಂ ॥
ಕ್ರುತದೇವರ್ಷಿಪದಭೀಚಿಯಂ ಭಕುತಿಯಿಂದುದ್ಯಾಲಕಾಚಾರ್ಯನಂ ।
ಸತತಂ ಮಿಂಚಿಸಿ ಸರ್ವಸದ್ಗುಣಗಳಂ ರಾಜಾಜಕುತ್ತಿರ್ಪೆ ನೀಂ ॥ ೧೦ ॥

ಇಟಲಿಯ ಪ್ರಕಟನೆ

ಎರಿಸ್ಸಿನಲ್ಲಿ ಗ್ರೀಕ್ ಸೈನಿಕರು ಬಹಳ ಉತ್ಸಾಹದ ಇಟಲಿ ಸೈನಿಕರನ್ನು ಪ್ರತಿಭಟಿಸಿದರೂ ಸಹ ಆ ತಿಭಟನೆಯನ್ನು ನಿವಾರಿಸಿಕೊಂಡು ಇಟಲಿ ಸೈನಿಕರು ಂದುವರಿದು ವೆಲೊಸ್ ನದಿ ದಡವನ್ನು ಮುಟ್ಟಿದರೂ, ಗ್ರೀಕ್ ಸೈನಿಕರ ಮೇಲೂ ರಕ್ಷಣ ಪ್ರದೇಶಗಳ ಲೂ ! ಇತರ ಸ್ಥಳಗಳ ಮೇಲೂ ಬಾಂಬುಗಳನ್ನು ಿಕಲಾಯಿತೆಂದೂ ಇಟಲಿ ಪ್ರಕಟನೆಯು ತಿಳಿಸಿರು ು.

ಆಫ್ರಿಕದಲ್ಲಿ ಬ್ರಿಟಿಷ್ ಸೈನಿಕರ ಕಾರ್ಯ

ಆಫ್ರಿಕದಲ್ಲಿ ಬ್ರಿಟಿಷ್ ಮತ್ತು ಭಾರತೀಯ ಸೈನಿಕರು ಸೂಡಾನ್-ಅಬ್ಸಿನಿಯಾ ಗಡಿಯಲ್ಲಿರುವ ಗಾಲಬಾಡ್ ಎಂಬ ಊರನ್ನು ವಶಪಡಿಸಿಕೊಂಡಿರುವರು. ಮುಕ್ಯಾಲು ಗಂಟೆ ಕಾಲದಲ್ಲಿ ಆ ಊರನ್ನು ವಶಪಡಿಸಿಕೊಳ್ಳಲಾಯಿತು. ಇಟಲಿಯ ಕಡೆ ವಿಶೇಷ ನಷ್ಟವಾಯಿತು. ಇಟಲಿಯವರು ನಡೆಯಿಸಿದ ಪುನರಾಕ್ರಮಣ ಪ್ರಯತ್ನವನ್ನು ಪ್ರತಿಭಟಿಸಿ ಅವನ್ನು ಹೊಡೆದೋಡಿಸಲಾಯಿತೆಂದು ತಿಳಿದು ಬರುತ್ತದೆ.

ಗ್ರೀಕರಿಗೆ ಜಯವಾಗುತ್ತಿದೆ

ಪಶ್ಚಿಮಮೆಡಿಟೇರಿಯನ್ ಪ್ರದೇಶದಲ್ಲಿ ಕೋಟೆಗಳಿಂದ ರಕ್ಷಿತವಾಗಿರುವ ಉನ್ನತ ಪ್ರದೇಶಗಳು ಗ್ರೀಕರ ಕೈಸೇರಿದವು; ಹಿಮ್ಮೆಟ್ಟುತ್ತಿದ್ದ ಇಟಲಿ ಸೈನಿಕರು ಬಿಟ್ಟುಹೋದ ಟ್ಯಾಂಕುಗಳನ್ನೇ ಅವರುಮೇಲೆ ಉಪಯೋಗಿಸಲಾಯಿತು. ಗ್ರೀಕ್ ವಿಮಾನಗಳು ಕೋರಿಟ್ಜ್ ಮತ್ತು ಆಗಿದೋಕ್ಯಾಸ್ಟ್ರೋ ವಿಮಾನ ನಿಲ್ದಾಣಗಳ ಮೇಲೆ ಮುತ್ತಿಗೆಯನ್ನು ಪಡೆದು ನೆಲದಮೇಲಿದ್ದ ಅನೇಕ ವಿಮಾನಗಳನ್ನು ನಾಶಮಾಡಿದವು.

ಬೆಂಗಳೂರಿನಲ್ಲಿ ಶ್ರೀಮನ್ಮಹಾರಾಜರವರ ಮೆರವಣಿಗೆ

ಮೊದಲೇ ಪ್ರೋಗ್ರಾಂ ನಿಶ್ಚಯವಾದ ಪ್ರಕಾರ ಶ್ರೀ ಮನ್ಮಹಾರಾಜರವರು ೪ ನೇ ತಾರೀ ದಿನ ಸ್ವಾತಂತ್ರಾಲಯ ಛಟಬೆಗೆ ಸ್ಪೆಷಲ್ ಟ್ರೈಲಿನಲ್ಲಿ ಬೆಂಗಳೂರಿಗೆ ದಯಮಾಡಿಸಿದರು ಸ್ವಾಗತಸ್ವೀಕಾರ ಸಚಿವರು, ಡಿವಿಜನಲ್ ಪ್ರಮುಖ ಸಚಿವರು, ಶ್ರೀಮನ್ಮಹಾರಾಜರವರ ಕಾರ್ಯ ದರ್ಶಿಗಳು, ಮದರಾಸ್ ಜಿಲ್ಲೆಯ ಜನರಲ್ ಆಫೀಸರ್ ಕಮ್ಯಾಂಡಿಂಗ್‌ರವರು ಲೆಫ್ಟಿ ಕರ್ನಲ್ ವೈಗರ್ಸ್ ಪ್ರೈವೆಟ್ ನ್ಯಾಯಾಧೀಶರು, ದಿವಾನ್ ಬಹದ್ದೂರ್ ಕೆ ಆರ್ ಶ್ರೀನಿವಾಸಯ್ಯಂಗಾರ್, ದಿವಾನ್ ಬಹದ್ದೂರ್ ಪಿ ಮಾಧವೇನಯ್ಯ, ರಾಜಕಾರ್ಯಪ್ರವೀಣ ಎಸ್ ಎಸ್ ಸುಬ್ಬರಾಮ್, ಲೆಫ್ಟಿ ಕರ್ನಲ್ ಎ ವಿ ಸುಬ್ರಹ್ಮಣ್ಯರಾಜ ಅರಸ್, ಡಾ|| ರಂಗಾ ಮೊದಲಾದ ಹಲವು ಆಪ್ತಾಪ್ತ ಮಹಿಳೆಯರೂ, ಮಹಿಳೆಯೂ ಸೇವೆದಿದ್ದರು. ಶ್ರೀಮನ್ಮಹಾರಾಜರು ಸ್ಪೆಷಲ್ ಟ್ರೈಲಿನಿಂದ ಕೆಳಕ್ಕೆ ಇಳಿದ ಕೂಡಲೆ ೨೧ ಕುಶಾಲತೋಪುಗಳು ಹಾರಿದವು ಆನಂತರ ಶ್ರೀಮನ್ಮಹಾರಾಜರು ರಿಸಿಟೆಂಟಿಗೆ ಹಸ್ತಲಾಘವ ಪನ್ನಿತ್ತು ಕುಶಲಪ್ರಶ್ನೆ ಮಾಡಿದರು

ಶ್ರೀಮನ್ಮಹಾರಾಜರವರು ಕೋಚ್ ಗಾಡಿಯನ್ನೇರಿ ಕುಳಿತುಕೊಂಡ ಕೂಡಲೇ ಸ್ವಯಸ್ಸೂಚನೆಯಲ್ಲಿ ನೆರೆದಿದ್ದ ಸಾವಿರಾರು ಜನರು ಜಯಘೋಷ ಮಾಡಿದರು ನಾಲ್ಕು ಕುದುರೆಗಳನ್ನು ಕಟ್ಟಿದ ದಿವ್ಯವಾದ ಕೋಚ್ ಗಾಡಿಯ ಮುಂದೆ ಮೈಸೂರು ಕುದುರೆ ಬಲದವರೂ, ಕಾಲಾಳು ಬಲದವರೂ ಹೊರಟರು ೪ ರವಣಿಗೆಯು ನಗರದ ಮುಖ್ಯ ಮುಖ್ಯ ಬೀದಿಗಳಲ್ಲಿ ಆಭೂತಪೂರ್ವವಾಗಿ ನೆರವೇರಿತು ಮಹಾಜನರು ಪರಮ ಸಂತೋಷದಿಂದ ನೂರಾರು ಮೆಟಿಪಗಳನ್ನು ರಚಿಸಿದ್ದರು ದಾರಿಯುದ್ದಕ್ಕೂ ಜನರು ಕಿಕ್ಕಿರಿದು ನೆರೆದಿದ್ದರು

ಮಾರ್ಕೆಟ್ ಚೌಕದಲ್ಲಿ ಜನಸಂದಣಿಯು ಅಪಾರವಾಗಿತ್ತು ಒಂದು ಲಕ್ಷಕ್ಕೆ ಮೇಲ್ಪಟ್ಟು ಜನರು ನೆರೆದಿದ್ದರು ಮಾರ್ಕೆಟ್ ಮುಂಭಾಗವಲ್ಲಿದ್ದ ನಂಟಿಪವನ್ನು ಸುಂದರವಾಗಿ ಅಲಂಕರಿಸಲಾಗಿತ್ತು ಶ್ರೀಮನ್ಮಹಾರಾಜರು ಮುಂಬಾಪತ್ತಿಗೆ ದಯಮಾಡಿಸುತ್ತಲೇ ಪೌರಸಭೆಯ ಅಧ್ಯಕ್ಷರಾದ ಡಾ|| ಎಂ ರಾಯನ್‌ರವರೂ ಮುನಿಸಿಪಲ್ ಕಮಿಷನರಾದ ಶ್ರೀ ಎಸ್ ನಾರಾಯಣರಾಯರೂ ಶ್ರೀಮನ್ಮಹಾರಾಜರನ್ನು ಬಕ್ತಿ ಪುರಸ್ಸರವಾಗಿ ಸ್ವಾಗತಿಸಿದರು ಬಳಿಕ ಪ್ರಭುಗಳು ವೇದಿಕೆಯನ್ನೇರಿ ಆಸನ ವನ್ನಲಂಕರಿಸಿದರು

ಆಮೇಲೆ ಪೌರಸಭೆಯ ಅಧ್ಯಕ್ಷರಾದ ಡಾ|| ರಾಯ್ ರವರು ಪೌರಸಭೆಯ ಪರವಾಗಿ ಶ್ರೀಮನ್ಮಹಾರಾಜರವರಿಗೆ ಬಿನ್ನವತ್ತಳಿಯನ್ನು ಅರ್ಪಿಸಿದರು

ಬಿನ್ನವತ್ತಳಿ

ಮಹಾಸ್ವಾಮಿ,

ಶುಭಶ್ರೇಷ್ಠಕಾರದ ತಾವು ಪಟ್ಟಾಭಿಷಿಕ್ತರಾಗಿ ಸಿಂಹಾಸನಾರೋಹಣಾನುಷ್ಠಾನ ಮಹೋತ್ಸವವನ್ನು ನೆರವೇರಿಸಿದ ಮೇಲೆ ಮೊಟ್ಟಮೊದಲು ನಮ್ಮ ನಗರಕ್ಕೆ ಬಿಜಯಮಾಡಿಸಿರುವ ಈ ಶುಭಸಮಾರಂಭದಲ್ಲಿ ಬೆಂಗಳೂರು ಸಿಟಿ ಮುನಿಸಿಪಲ್ ಸಭೆಯ ಅಧ್ಯಕ್ಷರೂ ಮತ್ತು ಆ ಸಭೆಯ ಸದಸ್ಯರೂ ಆದ ನಾವು ನಮ್ಮ ರಾಜಭಕ್ತಿ ಪರಿಪೂರ್ಣವಾದ ಮತ್ತು ಹೃತ್ಪೂರ್ವಕವಾದ ಆಘನೆಂದಸ್ಪೋಗಳನ್ನು ಮಹಾಸ್ವಾಮಿಯವರಿಗೆ ಸಮರ್ಪಿಸಲು ಅನುಮತಿ ಬೇಡುತ್ತೇವೆ. ಮಹಾಸ್ವಾಮಿಯವರು ನಮ್ಮ ನಗರಕ್ಕೆ ದಯಮಾಡಿ ಆಗಮಿಸಿ ನಾವು ರಾಜಭಕ್ತಿಯಿಂದಲೂ ಮತ್ತು ಕರ್ತವ್ಯ ನಿಷ್ಠೆಯಿಂದಲೂ ಆರಿಸುವ ಬಿನ್ನವತ್ತಳಿಯನ್ನು ಸ್ವೀಕರಿಸಬೇಕೆಂಬ ಕಾಪ್ಯರ್ಥನೆಯನ್ನು ಕೃಪೆಯಿಟ್ಟು ಸಲ್ಲಿಸಿದ್ದೀರಿ, ಮತ್ತು ಆ ಮೂಲಕ ಬೆಂಗಳೂರು ನಗರದ ಪ್ರಜೆಗಳು ತಮ್ಮ ಪ್ರೀತಿಪಾತ್ರರಾದ ಮಹಾಪ್ರಭುಗಳಲ್ಲಿ ತಮಗಿರುವ ಗಾಢವಾದ ಪ್ರೇಮವನ್ನೂ ರಾಜಭಕ್ತಿಯನ್ನೂ ವ್ಯಕ್ತಪಡಿಸಲು ಇಷ್ಟು ಶೀಘ್ರಕಾಲದಲ್ಲಿ ಪವಿತ್ರವಾದೊಂದು ಅವಕಾಶವನ್ನು ಕಲ್ಪಿಸಿಕೊಟ್ಟಿದ್ದೀರಿ. ಇದಕ್ಕಾಗಿ ನಾವು ಮಹಾಸ್ವಾಮಿಯವರಿಗೆ ಅತ್ಯಂತ ಕೃತಜ್ಞರಾಗಿದ್ದೇವೆ. ಮಹಾಸ್ವಾಮಿಯವರು ಪಟ್ಟಾಭಿಷಿಕ್ತರಾದ ಶುಭ ಮಹೋತ್ಸವವು ನೆರವೇರಿದನೆಲೆ ಮಹಾಸ್ವಾಮಿಯವರಿಗೆ ಸುಸ್ವಾಗತವಿತ್ತು ಬರಮಾಡಿಕೊಂಡ ಶಾಸನಬದ್ಧವಾದ ಸಂಸ್ಥೆಗಳಲ್ಲಿ ನಮ್ಮ ನಗರ ಸಭೆಯೇ ಮೊದಲನೆಯದು ಎಂಬ ಮಹಾ ಭೈಕ್ಷವನ್ನು ನಾವು ಗಳಿಸಿದೆವೆಂಬುದು ನಮಗೊಂದು ಹೆಮ್ಮೆಯ ಅಂಶವಾಗಿದೆ

ಮಹಾಸ್ವಾಮಿಯವರ ಪೂಜ್ಯ ದೊಡ್ಡ ಸ್ವಯಂರಿಗೂ, ಸದ್ಯವಾ ಸಿಯಾಗಿರುವ ಆದರಿಬಿಂಗಳ ಶ್ರೀ ಕೃಷ್ಣರಾಜೇಂದ್ರ ಬಹದ್ದೂರ್ ಮಹಾರಾಜರವರ ಕೃಪೆಯಿಂದ ಸಂಸ್ಥಾನವು ಲಭಿಸಿದ ಅಗಣಿತವಾದ ಮಹೋಪಕಾರಗಳನ್ನು ನಾವು ಈ ಸಮಾರಂಭದಲ್ಲಿ ಕೃತಜ್ಞತೆಪೂರ್ವಕವಾಗಿ ಸ್ಮರಿಸಿಕೊಳ್ಳದೆ ಕರ್ತವ್ಯಲೋಪವನ್ನೆಸಗಿದಂತಾಗುವುದೆಂದು ನಮ್ಮ ಮನಸ್ಸಿಗೆ ತೋರುತ್ತದೆ ಸಂಸ್ಥಾನದ ಸಮಸ್ತ ಪಂಗಡಗಳ ಪ್ರಜೆಗಳಿಂದ ಪ್ರೀತಿಪೂರ್ವಕವಾಗಿ ಚಿಂತಿಸಲ್ಪಡುತ್ತಿರುವ ಈ ಗುಣಸಂಪನ್ನತೆಯು ಪ್ರತಿ ಫಲವಾಗಿ ಅವರು ಸರಿಯಾದುರು ನೆಲವತ್ತು ವರ್ಷಗಳ ಅವಧಿಯಲ್ಲಿ ನಡೆಸಿರುವ ಕೃಯಾಪೂರ್ಣವಾದ ಆಲ್ಪಕೆಯಲ್ಲಿ ಎಲ್ಲರ ಸ್ವೀಕಾರಾರ್ಹಸಗಳೂ ಪಾತ್ರರಾದರು, ಮತ್ತು ಎರ್ದರ ಸಂಸ್ಥಾನದ ಅರಸರ ಪ್ರಭುಗಳೆಲ್ಲ ಪ್ರಜ್ಞಾಪೂರ್ವಕವಾಗಿ ಮಹಾಸ್ವಾಮಿಯವರಾದ ತಾವು ಪಟ್ಟಕ್ಕೆ ಬರುವುದನ್ನು ಎದುರುನೋಡುತ್ತಿದ್ದರು ಎಂಬ ಸಂಗತಿಯನ್ನು ಸಂತೋಷದಿಂದ ನೆನಪಿಗೆ ತರುತ್ತೇವೆ. ಮತ್ತು ಮುಂದಿನ ದಿನಗಳಲ್ಲಿ ಸಚ್ಚಿದಾನಂದವೂ ಶ್ರೇಯಾಪೂರ್ಣವೂ ಆದ ಆಳ್ವಿಕೆಯು ಸಮಿಯನ್ನು ಕಾಣಬಲ್ಲೆವೆಂದು ನಂಬಿ ಶ್ರದ್ಧಿಸಿದ್ದೇವೆ

ಬೆಂಗಳೂರು ನಗರದ ಸಾರ್ವಜನಿಕ ಕಾರ್ಯವು ಗಣನೀಯ ನೆಯ ಇನಿಯಮಿಷ್ಟ ಹಿ ದೆಯೇ ಆರಂಭವಾಯಿತೆಂದು ನಾವು ಪರಿಗಣಿಸಬಹುದು. ಕೆಂಪೇಗೌಡರು ಈ ನಗರ ವನ್ನು ಸ್ಥಾಪಿಸಿ ಆದರ ಪತ್ತಲ್ಲೂ ಒಂದು ಮಣ್ಣಿನ ಕೋಟೆಯನ್ನು ಕಟ್ಟಿಸಿದರು ತಾನು ನಿರ್ಮಿಸಿದ್ದ ಮೇರೆಗೆ ಈ ನಗರವು ಎಷ್ಟುದೂರ ವ್ಯಾಪಿಸಬಲ್ಲುದೆಬುದನ್ನು ಗುರುತುಮಾಡಿ ತೋರಿಸುವುದಕ್ಕಾಗಿ ಆತನು ನಗರದ ನಾಲ್ಕು ಮುಖ್ಯಸ್ಥಾನಗಳಲ್ಲಿ ನಾಲ್ಕು ಗೋಪುರಗಳನ್ನು ನಿರ್ಮಿಸಿದನು ಈ ಗೋಪುರಗಳು ಈಗಲೂ ಅಚ್ಚುಳಿಯದೆ ದಂಡೆಪೆ ಬೆಂಗಳೂರು ನಗರವು ಸ್ಥಾಪಕನ ಏರೀಕ್ಷಣೆಯನ್ನು ಒಹುವಷ್ಟಿಗೆ ಅತಿಕ್ರಮಿಸಿ ಬೆಳೆದಿದೆಯೆಂಬುದನ್ನು ವನ್ನು ಎತ್ತರೂ ಬಲ್ಲರು ನಗರದ ನಾಲ್ಕು ಗೋಪುರಗಳ ಸೈಕೆ ಮೂರರ ಗಡಿಯನ್ನೂ ದಾಟಿ ಅದು ಮುಂದಕ್ಕೆ ಬಲುದೂರ ಹರಡಿರುತ್ತದೆ

ಬೆಂಗಳೂರು ನಗರದ ವಿಸ್ತೀರ್ಣ ೧೬ ಚದರ ಮೈಲಿಗಳು ಈ ನಗರದ ಜನಸಂಖ್ಯೆ ೧೯೩೧ ನೆಯ ಇಸವಿಯಲ್ಲಿ ೧೧೮೬೫೫ ಆಗಿಯೂ ೧೯೩೫ ನೆಯ ಇಸವಿಯಲ್ಲಿ ೧೨೬೨೦೦ ಆಗಿಯೂ ಇದ್ದುದು ಈಗ ಸುಮಾರು ೨೫೦,೦೦೦ಕ್ಕೆ ಹೆಚ್ಚಿದೆ ಈ ನಗರವು ಸಮುದ್ರ ಮಟ್ಟಕ್ಕೆ ೩,೦೦೦ ಅಡಿಗಳಿಂತ ಹೆಚ್ಚಾಗಿರುವುದರಿಂದ ಇಲ್ಲಿ ಹವಾಗುಣವು ತುಂಬ ಹಿತಕರವಾಗಿದೆ ಇವರ ಪರಿಣಾಮವಾಗಿ ಹೊರವ್ಯಾಂತಗಳಿಂದ ಪ್ರತಿವರ್ಷವೂ ಬಹು ಜನರು ಇಲ್ಲಿಗೆ ವಲಸೆಬಂದು ಮನೆ ಮಠಗಳನ್ನು ನಿರ್ಮಿಸಿಕೊಂಡು ನೆಲಸುತ್ತಿದ್ದಾರೆ ಆದರಲ್ಲೂ ಒಳ್ಳೆಯ ಹವಾಕಾಲಗಳಲ್ಲಿ ಹೆಚ್ಚು ಹೆಚ್ಚಾಗಿ ಇಲ್ಲಿಗೆ ಬಂದು ಕೆಲ ಕಾಲವಿದ್ದು ಹಿಂತಿರುಗುವ ವಪ್ಪಿಯ ಜನರು ಇನ್ನೆಂದು ಹೇಳಬೇಕಾಗಿಲ್ಲ ನಾವು ನಮ್ಮಿಂದ ಸಾಧ್ಯವಿರುವಷ್ಟು ಮಟ್ಟಿಗೂ ನಗರ ಸಂಪೂರ್ಣವಾಗಿ ಪ್ರಯತ್ನಿಸುತ್ತಿದ್ದೇವೆ ಆದರೆ ಜೊತೆಗೆ ಮಹಾಸ್ವಾಮಿಯವರ ಘನಸರ್ಕಾರದವರ ಸಹಾನುಭೂತಿ, ಸಲಹೆ ಮತ್ತು ಸಹಾಯ—ಇವುಗಳಿಂದ ಪ್ರೋತ್ಸಾಹವನ್ನು ಪಡೆದು ಈ ನಗರವಲ್ಲಿ ವಾಸಿಸುವ ಪ್ರಜೆಗಳ ಸೇವೆಯಲ್ಲಿ ತೊಡಗಿರುತ್ತೇವೆ, ಅಧಿಕಾರ ಜೀವಪರ್ಯಮದಲ್ಲಿ ಇರಬೇಕಾದ ಸೌಕರ್ಯಗಳನ್ನು ಹೆಚ್ಚು ಹೆಚ್ಚಾಗಿ ದೊರಕಿಸಿಕೊಡುತ್ತಿದ್ದೇನೆ, ಮತ್ತು "ಸುಂದರ ನಗರ" ವೆನಿಸಿದ ಈ ಊರಿಗೆ ಮತ್ತಷ್ಟು ಹೆಚ್ಚಿನ ಸೌಂದರ್ಯವನ್ನುಂಟುಮಾಡುತ್ತಿದ್ದೇನೆ.

ಈ ನಗರದಲ್ಲಿ ನಿರಂತರವಾಗಿ ಹೆಚ್ಚುತ್ತಿರುವ ಜನರಿಗೂ ಮತ್ತು ಕಾರ್ಖಾನೆಗಳಿಗೂ ಬೇಕಾದ ನೀರನ್ನು ಒದಗಿಸುವುದು ಈಗ ಸಾಧ್ಯವೇಬು ಭರವಸೆ ನಮಗಿದೆ ಒಂದು ದಿನಕ್ಕೆ ಮೂವತ್ತು ಲಕ್ಷ ಗ್ಯಾಲನ್ನುಗಳಿಗಿಂತ ಹೆಚ್ಚಿನ ನೀರು ಈಗ ಸರಬರಾಜಾಯುತ್ತಿದೆ. ಇದಕ್ಕಾಗಿ ವರ್ಷವೊಂದಕ್ಕೆ ಸುಮಾರು ಲಕ್ಷ ರೂಪಾಯಿಗಳಿಂತ ಹೆಚ್ಚಿನ ಮೊಬಲಗು ವೆಚ್ಚವಾಗುತ್ತಿದೆ. ಸಾರ್ವಜನಿಕ ಶೀರಿನ ವೆಲ್ಲಿಗಳು ೭೦೦ ಇವೆ. ಇನ್ನು ೨೫,೦೦೦ ಮನೆಗಳ ಪೈಕಿ ೧೧,೨೬೮ ಮನೆಗಳಿಗೆ ನೀರಿನ ನಲ್ಲಿ ಗಳನ್ನು ಕೊಡಲಾಗಿದೆ. ೮೫,೦೦೦ ರೂಪಾಯಿಗಳನ್ನು ವೆಚ್ಚಮಾಡಿ ಸಾರ್ವಜನಿಕ ರಸ್ತೆಗಳಲ್ಲಿ ಮೇಲಿಂದ ನೇತು ಬಿಟ್ಟು ೨೯೫.೦ ವಿದ್ಯುದ್ದೀಪಗಳನ್ನೂ, ೭೦೯ ಅಂಗಡಿ ಕಾರವಾರ ವಿದ್ಯುದ್ದೀಪಗಳನ್ನೂ ಒದಗಿಸಲಾಗಿದೆ ೧೬೦ ಮೈಲಿಗಳ ಉದ್ದವುಳ್ಳ ರಸ್ತೆಗಳ ಪೈಕಿ ೬೩ ಮೈಲಿಗಳು ಉಳ್ಳ ರಸ್ತೆಗಳಿಗೆ ಕೇಲೆಲ್ಲೆಯನ್ನು ಗೊತ್ತುಮಾಡಲಾಗಿದೆ. ಒಟ್ಟು ನಗರಕ್ಕೆಲ್ಲ ನೆಲಹೊಗಳಿ ಕೆಳಮಟ್ಟದಲ್ಲಿ ಚರಂಡಿ ಗಳನ್ನು ನಿರ್ಮಿಸುವ ಕಾರ್ಯಕ್ಕೆ ನಾವು ತೀವ್ರವಾದ ಆಸಕ್ತಿಯಿಂದ ಗಮನಕೊಡುತ್ತಿದ್ದೇವೆ ಈ ಕಾರ್ಯ ಕ್ಕಾಗಿ ೪೦ ಲಕ್ಷ ರೂಪಾಯಿಗಳು ಬೇಕಾಗುವುದೆಂದು ಅಂದಾಜುಮಾಡಲಾಗಿದೆ. ಒಟ್ಟು ಕಾರ್ಯದಲ್ಲಿ ನಾಲ್ಕು ರಲ್ಲೊಂದು ಭಾಗವು ಈ ವರ್ಷದ ಆಯ್ಕೆಯಲ್ಲಿ ಪೂರ್ತಿಸು ವುದಾಗಿದೆ ಇದರಿಂದ ಒಟ್ಟು ಜಕೆಯ ನಗರ ಭಾಗಕ್ಕೆಲ್ಲ ನೆಲಬೊಳೆಗೆ ಚರಂಡಿಯನ್ನು ಹಾಕಿಸಿದಂತಾಗುವುದು. ಮಹಾಸ್ವಾಮಿಯವರ ಘನಸರ್ಕಾರದವರ ಸಹಾನುಭೂತಿ ಮತ್ತು ಸಲಹೆ ಇವುಗಳಿಂದ ನಾವು ಅತೀಭ್ಯಲ್ಪಕಾಲ ದಲ್ಲಿಯೇ ಈ ಕಾರ್ಯವನ್ನು ಮುಕ್ತಾಯಗೊಳಿಸಬಲ್ಲೆವೆಂದು ನಂಬಿದ್ದೇನೆ

ನಾವು ನಡೆಸುತ್ತಿರುವ ವಾಸ ಗೃಹಗಳ ನಿರ್ಮಾಣದ ವಿಷಾಡು ಕೇವಲ ಮಹದಪೇಕ್ಷೆಯಿಂದ ಕೂಡಿದೆ ಯೆಂದು ಹೇಳಬೇಕಾಗಿದೆ. ವಿಶೇಂದೆ, ಮುಫಿಸಿಪಲ್ ಕಛೇರಿಗಳ ಕಟ್ಟಡಕ್ಕೆ ಸುಮಾರು ಎರಡು ಲಕ್ಷ ರೂಪಾಯಿಗಳೂ, ಸಾರ್ವಜನಿಕ ಮಾರ್ಕೆಟ್ ಕಟ್ಟಡಕ್ಕೆ ಹತ್ತು ಲಕ್ಷ ರೂಪಾಯಿಗಳೂ ವೆಚ್ಚವಾಗಿವೆ. ಮಾರ್ಕೆಟ್ ಕಟ್ಟಡವನ್ನು ಐದು ವರ್ಷಗಳ ವಿಕಾರಾದಿನ ಕ್ರಮದಲ್ಲಿ ಉತ್ತಮಗೊಳಿಸುತ್ತಿದ್ದೇವೆ. ಇದರ ಜೊತೆಗೆ ೫೫,೦೦೦ ರೂಪಾಯಿಗಳ ವೆಚ್ಚದಲ್ಲಿ ಎರಡು ಸ್ಥಳೀಯ ಮಾರ್ಕೆಟ್ ಕಟ್ಟಡಗಳನ್ನು ಕಟ್ಟಿಸಿದ್ದೇವೆ. ೭೫,೦೦೦ ರೂಪಾಯಿ ವೆಚ್ಚದಲ್ಲಿ ಫಲಾಹಾರ ಮಂದಿರ, ವಿಶ್ರಾಂತಿ ಗೃಹಗಳು ಮತ್ತು ಇತರ ಅನುಕೂಲತೆಗಳು-ಇವುಗಳಿಂದ ಕೂಡಿದ ಒಂದು ಹೊಸ ಬಸ್ ನಿಲ್ದಾಣದ ಕೆಲಸವೂ, ೫೫,೦೦೦ ರೂಪಾಯಿಗಳ ವೆಚ್ಚದಲ್ಲಿ ನವೀನ ರೀತಿಯ ಸಾರ್ವಜನಿಕ ಸಜ್ಜುಗೊಳಿಸಿದ ಒಂದು ಈಜುವ ಕೊಳದ ಕೆಲಸವೂ ಪೂರ್ತಿಯಾಗುವುದರಲ್ಲಿದೆ. ಪಾಕಶಾಲೆಗಳ ಹೊಸ ಕಟ್ಟಡಗಳನ್ನು ಕಟ್ಟಿಸುವುದಕ್ಕಾಗಿ ಒಂಬತ್ತು ಲಕ್ಷ ಪ್ರಸ್ತಿತ್ಯೆಯು ಸಾವಿರ ರೂಪಾಯಿಗಳನ್ನು ವೆಚ್ಚಮಾಡಲಾಗಿದೆ. ಒಟ್ಟು ಹತ್ತೊಂಭತ್ತು ಲಕ್ಷ ರೂಪಾಯಿಗಳ ರಿವನ್ಯೂ ಹುಟ್ಟುವ ವಳೆಯ ಪೈಕಿ ೭೫ ಲಕ್ಷ ರೂಪಾಯಿಗಳನ್ನು ಸಾರ್ವಜನಿಕ ಜನಾರೋಗ್ಯ ರಕ್ಷಣೆ ಮತ್ತು ಸೌಕರ್ಯ ಇವುಗಳಿಗಾಗಿ ವಿನಿಯೋಗಿಸುತ್ತಿದ್ದೇವೆ

ನೆಲಬೊಳಗಿನ ಚರಂಡಿಗಳ ಕಾರ್ಯವು ವಿಸ್ತರಿಸಿಂ ತೆಲ್ಲ ಸಾರ್ವಜನಿಕ ಸೌಕರ್ಯಕ್ಕಾಗಿ ಸ್ಥಳಸತಿಗಳನ್ನು ನಿರ್ಮಿಸಿತ್ತಿದ್ದೇವೆ. ಈಗಾಗಲೇ ಸುಮಾರು ಇಂಥ ಇಪ್ಪತ್ತು ಸ್ಥಳಸತಿಗಳು ನಿರ್ಮಾಣಗೊಂಡಿವೆ. ಇವುಗಳ ಪೈಕಿ ಕೆಲವುವಿಶಾಲವಾಗಿವೆ, ಉಡಿಗಿ-ತೊಡಿಗೆಗಳ ಅಲಂಕಾರ ಗೃಹಗಳನ್ನೂ, ಸ್ನಾನಮಾಡುವುದಕ್ಕಾಗಿಯೂ ಬಟ್ಟೆಗಳನ್ನು ಒಗೆಯುವುದಕ್ಕಾಗಿಯೂ ಗಂಡಸರಿಗೂ ಮತ್ತು ಹೆಂಗಸರಿಗೂ ಪ್ರತ್ಯೇಕ ಸ್ನಾನಗೃಹಗಳನ್ನೂ ಒಳಗೊಂಡಿವೆ ಮಹಿಳೆಯರುಗಳ ಧನ ಸಹಾಯದಿಂದ ಇತ್ತೀಚೆಗೆ ಎರಡು ಹೆರಿಗೆ ಚಿಕಿತ್ಸಾಲಯಗಳನ್ನೂ ಪ್ರಿಯರಿಗೂ ಮತ್ತು ಮಕ್ಕಳಿಗೂ ಒಂದು ವಿಶೇಷ ರೀತಿಯ ಚಿಕಿತ್ಸಾಲಯವನ್ನೂ ಕಟ್ಟಿಸಲಾಯಿತು ಪ್ರೀಯರಿಗೂ ಮಕ್ಕಳಿಗೂ ಇನ್ನೊಂದು ಚಿಕಿತ್ಸಾಲಯದ ಕಟ್ಟಡದ ಕೆಲಸವು ಜರಗುತ್ತಿದೆ.

ಶೀಘ್ರಗತಿಯಲ್ಲಿ ಅಭಿವೃದ್ಧಿ ಹೊಂದುತ್ತಿರುವ ಈ ನಗರದಲ್ಲಿ ವಾಸಗೃಹಗಳ ನಿರ್ಮಾಣದ ಸಮಸ್ಯೆಯು ಬಹಳ ಪ್ರಾಮುಖ್ಯವಾದುದಾಗಿ ಪರಿಣಮಿಸಿದೆ ಈ ಸಮಸ್ಯೆಯನ್ನು ಪರಿಹರಿಸುವುದಕ್ಕಾಗಿ ನಾವು ನಮ್ಮಿಂದಾಗುವ ಸರ್ವ ಪ್ರಯತ್ನಗಳನ್ನೂ ನಡೆಸುತ್ತಿದ್ದೇವೆ ಶೇಷಾದ್ರಿಪುರದ ಸಮೀಪವಲ್ಲಿರುವ ಸುಬೇದಾರ ಛತ್ರದ ರಸ್ತೆಯಲ್ಲಿ ೩೫ ಲಕ್ಷ ರೂಪಾಯಿ ವೆಚ್ಚದಲ್ಲಿ ಒಂದು ಹೊಸ ಬಡಾವಣೆಯನ್ನು ರಚಿಸಲಾಗಿದೆ ಈ ಪ್ರದೇಶದಲ್ಲಿ ಬಹಳ ತ್ವರಿತವಾಗಿ ಮನೆಗಳು ನಿರ್ಮಾಣವಾಗುತ್ತಿವೆ. ೬೨ ಸಾವಿರ ರೂಪಾಯಿಗಳ ವೆಚ್ಚದಲ್ಲಿ ಬಡವರಿಗಾಗಿಯೆ

ಬ್ರಿಟಿಷ್ ಮಹಾಪ್ರಧಾನರ ಭಾಷಣ.

ಬ್ರಿಟಿಷ್ ಮಹಾಪ್ರಧಾನರು ಕಾಮನ್ಸ್ ಸಭೆಯಲ್ಲಿ ಮಾತನಾಡುತ್ತ "ಗ್ರೀಸಿಗೆ ಫಲಕಾರಿಯಾದ ಸಹಾಯ ನೀಡುತ್ತಿರಲಾಗಿದೆಯೆಂದೂ, ಕೆಟೆ ದ್ವೀಪದಲ್ಲಿ ಈಗಾಗಲೇ ನೌಕಾ ಮತ್ತು ವಿಮಾನ ಮೂಲಗಳನ್ನು ಸ್ಥಾಪಿಸಲಾಗಿದೆಯೆಂದೂ, ಇದಲ್ಲದೆ ಇತರ ಸೇನೆಗಳು ಸಹ ಸಹಾಯಕ್ಕೆ ತೆರಳುತ್ತಿವೆಯೆಂದೂ, ಜರ್ಮನಿಯ ವಿಮಾನಗಳು ಗ್ರೇಟ್ ಬ್ರಿಟನ್ನಿನ ಮೇಲೆ ಮತ್ತು ಗೆ ನಡೆಸಿದುದರಿಂದ ಇದುವರೆಗೆ ಒಟ್ಟು ೧೪೪೦೦ ಜನ ಸಿವಿಲ್ ಪ್ರಜೆಗಳು ಪ್ರಾಣಬಿಟ್ಟಿರೆಂದೂ ೨೦,೦೦೦ ಜನರಿಗೆ ತೀವ್ರ ಗಾಯಗಳಾಗಿವೆಯೆಂದೂ, ಮುಂದಿನವರ್ಷ ಜರ್ಮನಿಯು ಬೋಟ್‌ಗಳ ಉತ್ಪತ್ತಿಳವು ಇನ್ನೂ ಹೆಚ್ಚುವುದೆಂದೂ ಅದನ್ನೆದುರಿಸಲು ಬ್ರಿಟನ್ನು ಅಸಾಧ್ಯ ಸಿದ್ಧತೆಗಳನ್ನು ಮಾಡಿಕೊಳ್ಳುತ್ತಿದೆಯೆಂದೂ, ದಕ್ಷಿಣ ಇಟಲಿಯಲ್ಲಿ ಬಿರಿ ಬಿರಿ ಸ್ಥಾನಗಳ ಮೇಲೂ ಮತ್ತು ನೌಕಾ ವಿರೋಧಿಗಳ ಮೇಲೂ ಬ್ರಿಟಿಷ್ ವಿಮಾನಗಳು ಬಾಂಬುಗಳನ್ನು ಸುರಿಸುತ್ತಿರುವುದೆಂದೂ ಹೇಳಿದರು

ಆನಂತರ ಶತ್ರುವಿಮಾನಗಳು ಬ್ರಿಟನ್ನಿನಮೇಲೆ ಮುತ್ತಿಗೆ ನಡೆಸಿರುವುದರಿಂದ ಆದ ನಷ್ಟದ ವಿಚಾರವೆತ್ತಿ "ಮುತ್ತಿಗೆಗಳಿಂದ ಆಹಾರ ಆಸ್ತಿ ಪಾಸ್ತಿಗಳು ನಾಶವಾಗಿವೆಯೆಂದೂ, ಆದರೂ ಸಂಗ್ರಾಮಪ್ರಯತ್ನಗಳ ಮತ್ತು ವಿಮಾನಗಳ ನಿರ್ಮಾಣ ಕಾರ್ಯಕ್ಕೆ ಹೆಚ್ಚು ಹಾನಿಯಾಗಿಲ್ಲವೆಂದೂ, ನಮ್ಮ ಮಹಾನಗರಗಳ ಜೀವನಕ್ಕೆ ಅತ್ಯವಶ್ಯಕವಾದ ಸೀಸ, ಗ್ಯಾಸ್, ವಿದ್ಯುಚ್ಛಕ್ತಿ ಇತ್ಯಾದಿ ಸೌಕರ್ಯಗಳಾವುದಕ್ಕೂ ಪೆಟ್ಟು ತಾಕಿಲ್ಲವೆಂದೂ ಈ ಮಧ್ಯೆ ಶತ್ರು ವಿಮಾನಗಳ ನಾಶವು ಹೆಚ್ಚಿದೆಯೆಂದೂ, ಬ್ರಿಟಿಷ್ ಸಾಮ್ರಾಜ್ಯದಲ್ಲಿ ಏಮಾನ ನಿರ್ಮಾಣ ಮತ್ತು ನೌಕಾ ನಿಕರ ಶಿಕ್ಷಣಕಾರ್ಯವು ಕ್ಷುರಿತವಾಗಿ ನಡೆಯುತ್ತಿದೆಯೆಂದೂ, ನಮ್ಮ ವಿಮಾನ ಬಲವು ವಿಜಯಕ್ಕೆ ಅತ್ಯವಶ್ಯಕವಾದಂಥ ಮಟ್ಟವನ್ನು ಮುಟ್ಟಲು ಅಮೇರಿಕೆಯು ಸಹಾಯ ಮಾಡುವುದರಲ್ಲಿ ಸಂಶಯವಿಲ್ಲವೆಂದೂ" ಹೇಳಿದರು

"ವಿಮಾನ ಮುತ್ತಿಗೆಗಳಿಗಿಂತ ಉಗ್ರವಾದ ಇನ್ನೊಂದು ವಿಚಾರವಿದೆ. ಇತ್ತೀಚೆಗೆ ಆಟ್ಲಾಂಟಿಕ್ ಮೂಲಕ ಈ ದ್ವೀಪಕ್ಕೆ ಬರುವ ಮಾಗಗಳಲ್ಲಿ ಜರ್ಮನಿಯ ಯು-ಬೋಟ್‌ಗಳ ಆವಾಂತರವು ಅಧಿಕವಾಗಿದೆ ಶತ್ರು ಮುತ್ತಿಗೆಯ ಭಯದಿಂದ ನಮ್ಮ ನೌಕಾಬಲದಮೇಲೆ ಅಗಾಧವಾದ ಜವಾಬ್ದಾರಿ ಬಿದ್ದಿದೆ. ಮೆಡಿಟರೇನಿಯ ಸಮುದ್ರದಲ್ಲಿ ಬೇರೆ ಬಲಯುತವಾದ ಪಡೆಯನ್ನು ಇಡಬೇಕಾಗಿದೆ. ಸಾಮಾನು ಹೊರುಗುಳಿಗೆ ಬ್ರಿಟಿಷ್ ಸಂಗ್ರಾಮ ನೌಕೆಗಳು ಕಾವಲಿರುವುದಂದ ಯುದ್ಧಕ್ಕೆ ಮುಂಚೆ ನಮ್ಮ ಶತ್ರುರ ಎನ್ನು ಟನ್‌ಗಳ ಸಾಮಾನು ಸಾಗಿಸುವ ಹಡಗುಗಳಿದ್ದವೋ ಈಗಲೂ ಹೆಚ್ಚು ಕಡಿಮೆ ಅಷ್ಟೇ ಇವೆ. ನನ್ನೊಡನೆ ವ್ಯಾಪಾರ ನಡೆಸುತ್ತಿದ್ದ ತಾಟಸ್ಥ್ಯ ರಾಷ್ಟ್ರಗಳ ಅನೇಕ ಹಡಗುಗಳು ಈಗ ನಮ್ಮ ಅಧಿಕಾರಕ್ಕೆ ಒಳಪಟ್ಟಿವೆ. ಮುಂದಿನ ವರ್ಷ ಈ ಯು ಬೋಟ್‌ಗಳ ಆವಾಂತರ ಹೆಚ್ಚುವ ಸಂಭವವಿದೆ ಆದಕ್ಕೆ ಹಾವು ಆಹಾರಕ್ಕೆ ಸಿದ್ಧತೆಗಳನ್ನು ಮಾಡಿಕೊಳ್ಳುತ್ತಿದ್ದೇನೆ

ನಮ್ಮ ಸೈನ್ಯವು ಈಗ ಅಗಾಧವಾಗಿ ಬೆಳೆದಿದೆ ಬ್ರಿಟನ್ನಿಗೆ ಶತ್ರುಗಳ ಮುತ್ತಿಗೆ ಹಾಕಲು ಪ್ರಯತ್ನ ಮಾಡದೇ ಇದ್ದುದೇ ಬ್ರಿಟನ್ನಿಗೆ ಲಭಿಸಿದ ಐತಿಹಾಸಿಕ ವಿಜಯ ಎಲ್ಲ ಒಂದೆಯು ಪರಿಗಣಿಸಬೇಕಾಗಿದೆ ಗ್ರೇಟ್ ಬ್ರಿಟನ್ನಿನ ಮುಂಡೇಟಿಲ್ಲಿ ಇದು ಪರಮಾಶ್ಚರ್ಯವಾದ ಘಟನೆಯೆಂಬುದರಲ್ಲಿ ಸಂಶಯವಿಲ್ಲವೆಂದು ನುಡಿದರು.

ಕೋಲಾರ ಡಿಸ್ಟ್ರಿಕ್ಟಿನ ಸಂಗ್ರಾಮಸಮಿತಿಯವರು ಈಗ ನಡೆದಿರುವ ಮಹಾಯುದ್ಧದ ಸಹಾಯಕ್ಕಾಗಿ "ಸಿವಿಕ್ ಗಾರ್ಡ್ಸ್" ಎಂಬ ಸ್ವಯಂಸೇವಕ ದಳವನ್ನು ರಚಿಸಲು ನಿರ್ಧರಿಸಿ, ಈ ಸೈನ್ಯಕ್ಕೆ ಸೇರಲಿಚ್ಛುವುಳ್ಳವರು ಇದೇ ನವೆಂಬರ್ 30 ನೆಯ ತಾರೀಖಿನೊಳಗಾಗಿ ಕಾರ್ಯದರ್ಶಿಗಳಾದ ಶ್ರೀಮಾನ್ ಜೆ ಬಿ. ನುಲ್ಲಾರಾಧ್ಯರವರಿಗೆ ಅರ್ಜಿ ಹಾಕಿಕೊಳ್ಳಬೇಕೆಂದು ಕೋರಿರುತ್ತಾರೆ ಕೋಲಾರದ ಜಿಲ್ಲಾ ಪ್ರದೇಶದಿಂದ 36 ಜನರನ್ನೂ ಚಿನ್ನಪ್ಪದಗಣಿ ಪ್ರದೇಶದಿಂದ 100 ಜನರನ್ನೂ ಆರಿಸಿಕೊಂಡು ಅವರುಗಳಿಗೆ ಶಿಕ್ಷಣ ಕೊಡಲಾಗುವುದು.

ಲಾರ್ಡ್ ಹ್ಯಾಲಿಫಾಕ್ಸರ ಭಾಷಣ

ಲಾರ್ಡ್ಸ್ ಸಭೆಯಲ್ಲಿ ಲಾರ್ಡ್ ಹ್ಯಾಲಿಫಾಕ್ಸ್‌ರವರು ಭಾಷಣವನಾಡುತ್ತ—"ಮಾರ್ಷಲ್ ಪೆಟೇರವರ ಕಷ್ಟ ನಷ್ಟಗಳನ್ನು ಸಹಾನುಭೂತಿಯಿಂದ ಅರ್ಥಮಾಡಿಕೊಳ್ಳಬೇಕಾಗಿದೆಯೆಂದೂ, ಜರ್ಮನಿಯೊಡನೆ ಸಹಕರಿಸುವುದರಿಂದ ಫ್ರಾನ್ಸಿಗೆ ಯಾವ ಲಾಭವನ್ನು ಗಳಿಸುವುದಾಗಿ ಪೆಟೇರವರು ಭಾವಿಸಿದ್ದರೂ ಹಿಂದೆ ಮಿತ್ರದೇಶರಾದ ಬ್ರಿಟನ್ನಿನ ವೈನ್ಯಗೆ ಪ್ರತಿಕಾರ ಬೇಳುವಂತಹ ಕಾರ್ಯವನ್ನು ಪೆಟೇರವರಂತಹ ಅತ್ಯಗೌರವವ್ಯ ಸರ್ಕಾರವು ನಡೆಸುವುದೆಂದು ತಾವು ನಂಬಲು ಸಾಧ್ಯವಿಲ್ಲವೆಂದೂ, ವಿಮಾನ ಯುದ್ಧದಲ್ಲಿ ಬ್ರಿಟನ್ನು ಅಧ್ಯರ್ಯಗೊಳ್ಳಲು ವಿನೇಕಾರಣವಿಲ್ಲವೆಂದೂ, ಇಟಲಿಯು ಈಗಿನ ಕಾಲ್ಪನಿಂದ ಯುಗೊಸ್ಲಾವಿಯದ ಕವ್ಯವು ಇನ್ನೂ ಅಧಿಕವಾಗಿದೆಯೆಂದೂ, ನಾವು ತುರ್ಕಿಯ ವಿಚಾರದಲ್ಲಿ ಯಾವ ನಂಬಿಕೆಯನ್ನಿಟ್ಟಿದ್ದೆವೆಯೋ ಅದೇ ನಂಬಿಕೆಯನ್ನೇ ತುರ್ಕಿಯು ಬ್ರಿಟನ್ನಿನ ವಿಚಾರದಲ್ಲಿ ಇಟ್ಟಿದೆ ಯೆಂದೂ" ನುಡಿದರು

ಪಂಡಿತ ಜವಾಹರಲಾಲ ನೆಹರೂ ರವರಿಗೆ ೪ ವರ್ಷ ಕಠಿನ ಶಿಕ್ಷೆ.

ಜವಾಹರಲಾಲ ನೆಹರುರವರು ಗೋರಖಪುರ ಮೊದಲಾದ ನಾಲ್ಕು ಗ್ರಾಮಗಳಲ್ಲಿ "ಜನರು ಯುದ್ಧಕ್ಕೆ ಸಹಾಯಮಾಡಕೂಡದು" ಇತ್ಯಾದಿ ವಿಷಯಗಳನ್ನು ಕುರಿತು ಭಾಷಣಮಾಡಿದ್ದಕ್ಕಾಗಿ ಗೋರಖಪುರದ ಡಿ॥ ಮ್ಯಾಜಿಸ್ಟ್ರೇಟರು ನೆಹರೂರವರಿಗೆ ೪ ವರ್ಷಗಳ ಕಠಿನಶಿಕ್ಷೆಯನ್ನು ವಿಧಿಸಿದರು ಈ ಶಿಕ್ಷೆಯು ಮೂರು ಅಪರಾಧಗಳಿಗಾಗಿ ವಿಧಿಸಲ್ಪಟ್ಟಿರುವುದು.

ವಿಚಾರಣೆಯು ಗೋರಖಪುರ ಜೈಲಿನಲ್ಲಿ ನಡೆಯಿತು ಲಾಲಡಿಗ್ಗಿ, ಗೋರಖಪುರ, ಮಹಾರಾಜಗಂಜ, ದಿಯೋರಿಯಾ ಗ್ರಾಮಗಳಲ್ಲಿ ನೆಹರುರವರು ಮಾಡಿದ ಭಾಷಣಗಳನ್ನು ಸ್ಥಿರಪಡಿಸಲು ೩ ಜನರ ಸಾಕ್ಷ್ಯವನ್ನು ತೆಗೆದು ಕೊಳ್ಳಲಾಯಿತು

ಸ್ವಾಸಿಕ್ಯತ್ಸರ ನಾದ

ಸರಕಾರಿ ವಕೀಲರು ವಾದಿಸುತ್ತ, "ಸಂಗ್ರಾಮ ಪ್ರಯತ್ನಕ್ಕೆ ಸಹಾಯಮಾಡಲು. ಜನರಿಗೆ ಸ್ವಾತಂತ್ರ್ಯ ಕಿಂಚಿನೇಕೆಂಬ ಉದ್ದೇಶದಿಂದಲೂ, ತನ್ನ ಇಚ್ಛೆಯಂತೆ ಚಿಂದಾ ಹೊಸವನ್ನು ಕಡಿಸಿಸುವುದಕ್ಕೆ ವಿರುದ್ಧವಾಗಿ ನಡೆಯುವ ಪ್ರಚಾರವನ್ನು ತಡೆಯಲೂ ಮತ್ತು ಸಹಾಯಮಾಡಲು ಮುಂದೆ ಬರುವವರ ಮನಸ್ಸನ್ನು ಬದಲಾಯಿಸುವನೆತ ಜನರು ಪ್ರೇರೇಪಿಸುವುದನ್ನು ತಪ್ಪಿಸುವ ಉದ್ದೇಶದಿಂದಲೂ ಭಾರತ ರಕ್ಷಣಾಶಾಸನವನ್ನು ಆಚರಣೆಗೆ ತರಲಾಗಿದೆ. ಸರಕಾರವ ಸಂಗ್ರಾಮ ಪ್ರಯತ್ನಕ್ಕೆ ಸಹಾಯ ಮಾಡುವುದನ್ನು ವಿರೋಧಿಸುವವರೂ ಇದ್ದಾರೆ ಭಾರತದ ಕ್ಷೇಮವು ಬ್ರಿಟನ್ನಿನ ರಕ್ಷಣೆಯೊಡನೆ ಮಿಳಿತವಾಗಿದೆಯೆಂದು ಭಾವಿಸುವವರೂ ಇದ್ದಾರೆ. ಇಂತಹ ಅಭಿಪ್ರಾಯ ಪಡೆದಿರುವ ಜನರ ಮನಸ್ಸು ಬದಲಾವಣೆಯಾಗದಂತೆ ಮಾಡುವುದಕ್ಕಾಗಿಯೇ ಭಾರತ ರಕ್ಷಣಾಶಾಸನ ವಿದುವುದು

ಭಾರತವನ್ನು ಸಂಗ್ರಾಮರಂಗಕ್ಕೆ ಎಳೆಯಲಾಯಿತು ತೆಂದು ಹೇಳಿದರೆ ಸಂಗ್ರಾಮಕ್ಕೆ ಸಹಾಯಮಾಡುವುದನ್ನು ಭಾರತವು ವಿರೋಧಿಸಿದಂತಾಯಿತು. ಇದು ಭಾರತದ ರಕ್ಷಣಾಶಾಸನ ವಿಧಿಗಳಿಗೆ ಒಳಪಡುವುದು ಹಂಡಿತ ನೆಹೆರೂರವರು ನ್ಯಾಯನಾದ ಅಧಿಕಾರವನ್ನು ಪಡೆಯದೆ ಈ ರೀತಿ ಮಾಡಿದರೂ. ಜನರು ಸಾರ್ವತ್ರಿಕ ಸತ್ಯಾನ್ವೇಷಕ್ಕೆ ಸಿದ್ಧರಾಗಿರಬೇಕೆಂಬುದೇ ಅವರ ಭಾಷಣದ ಉದ್ದೇಶ ವಾಗಿತ್ತು. ಆವರ ಪ್ರವಾಸದ ಮೂಲ ಉದ್ದೇಶವೂ ಇದೇ ಆಗಿತ್ತು ಈ ರೀತಿ ಹೇಳುವುದರಿಂದ ಸಂಗ್ರಾಮವು ಜಯಪ್ರದವಾಗಲು ಪ್ರತಿಕೂಲವಾಗಿಯೇ ಆಗುವುದು. ಪಂಡಿತ ಜವಹರಲಾಲರು ಭಾಷಣದಲ್ಲಿ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿ ಆದರಂತೆ ಜನರು ನಿರ್ಧರಿಸಬೇಕೆಂದು ಪ್ರೇರೇಪಿಸಿದರು. ಇದೇ ಪಂಡಿತರ ಮೇಲಿನ ಆಪಾದನೆ ಪ್ರಾಸಿಕ್ಯೂಷನ್ನಿನವರು ಆಪಾದನೆಯನ್ನು ಸ್ಥಿರಪಡಿಸಿರುವರು" ಎಂದು ಹೇಳಿದರು.

ಭರತಖಂಡದಲ್ಲಿ ಸಂಗ್ರಾಮಸಿದ್ಧತೆ

ದೇಹಲಿ ಕೇಂದ್ರಶಾಸನ ಸಭೆಯಲ್ಲಿ ಹಣಕಾಸಿನ ಮಂತ್ರಿಗಳು ಭರತಖಂಡದಲ್ಲಿ ನಡೆಯುತ್ತಿರುವ ಸಂಗ್ರಾಮ ಪ್ರಯತ್ನಗಳನ್ನು ವರ್ಣಿಸುತ್ತ—"೫ ಲಕ್ಷ ಯೋಧರನ್ನು ಒದಗಿಸಲು ನಾವು ಪ್ರಯತ್ನ ಮಾಡುತ್ತಿದ್ದೇವೆಂದೂ, ಅವರಿಗೆ ಆಧುನಿಕ ಶಸ್ತ್ರಾಸ್ತ್ರಗಳನ್ನು ಒದಗಿಸಬೇಕೆಂದೂ, ಸೈನ್ಯ ಶಿಕ್ಷಣ ಶಾಲೆಗಳನ್ನು ವೃದ್ಧಿಪಡಿಸಲಾಗುವುದೆಂದೂ, ಜನರನ್ನು ಸೈನ್ಯಕ್ಕೆ ಸೇರಿಸುವ ಕಾರ್ಯವು ಚುರುಕಾಗಿ ನಡೆಯುತ್ತಿದೆಯೆಂದೂ, ಇದುವರೆಗೆ ಭರತಖಂಡದಿಂದ ೬೦,೦೦೦ ಕ್ಕೆಂಕ ಹೆಚ್ಚು ಜನ ಸೈನಿಕರು ಹೊಗೆಗೆ ತೆರಳಿದ್ದಾರೆಂದೂ, ೧ ಲಕ್ಷಕ್ಕೆ ಮಿಗಿ ಹೊಸದಾಗಿ ಸೈನ್ಯಕ್ಕೆ ಜನರು ಸೇರಿದ್ದಾರೆಂದೂ. ಅವರಲ್ಲಿ ಬಹುಜನರಿಗೆ ಈಗಾಗಲೇ ಪೂರ್ಣಶಿಕ್ಷಣವನ್ನು ಕೊಡಲಾಗಿದೆಯೆಂದೂ, ಸೈನ್ಯವಲ್ಲಿ ಬಿಡ ನೋಟಾರು ವಾಹನಗಳ ಸಂಖ್ಯೆ ೫೦೦ ರಿಂದ ೩,೦೦೦ ರಕ್ಕೆ ಏರಿದೆಯೆಂದೂ, ಮುಂದಿನ ವರ್ಷ ಎರಡರಷ್ಟಾಗುವುದೆಂದೂ, ಶಸ್ತ್ರಬಂಡಿಗಳನ್ನು ಭರತ ಖಂಡದಲ್ಲಿ ತಯಾರಿಸಲು ಇರುವ ಕಷ್ಟವನ್ನು ಪರಿಹರಿಸಲಾಗುವುದೆಂದೂ, ಶಸ್ತ್ರಬಂಡಿಗಳಿಗೆ ಬೇಕಾದ ನೂರಾರು ಟನ್‌ಗಳಷ್ಟು ಉಕ್ಕಿನ ತಗಡುಗಳು ತೀಳ್ಪಿದಲ್ಲೇ ತಯಾರಾಗುವುದೆಂದೂ, ಮುಂದಿನ ವರ್ಷ ೩೦೦ ಶಸ್ತ್ರಬಂಡಿಗಳು ನಿರ್ಮಿಸಲ್ಪಡುವ ಸಂಭವವಿದೆಯೆಂದೂ, ಭರತಖಂಡವಿಗ ಎಲ್ಲ ಬಗೆಯ ಮದ್ದುಗುಂಡಿಗಳನ್ನು ಅಧಿಕವಾಗಿ ಸಿದ್ಧಮಾಡುತ್ತಿದೆಯೆಂದೂ, ನೌಕಾಬಲವು ಅದ್ಭುತ ರೀತಿಯಲ್ಲಿ ವಿಶಾಲಗೊಳ್ಳುತ್ತಿದೆಯೆಂದೂ, ಭಾರತದ ಬಂದರುಗಳನ್ನೆಲ್ಲ ಸಂರಕ್ಷಿಸಲಾಗುತ್ತಿರೆಯೆಂದೂ, ಬ್ರಿಟನ್ನಿನಿಂದ ಇಪ್ಪರಲ್ಲಿಯೇ ಹೊಸ ಹಡಗುಗಳು ಬರಲಿದೆಯೆಂದೂ, ಅಲ್ಲದೆ ಭರತಖಂಡದಲ್ಲೇ ಹಡಗುಗಳ ನಿರ್ಮಾಣವಾಗುವುದೆಂದೂ, ಭರತಖಂಡದ ವಿಮಾನ ಒಲವು ಸಹ ವೃದ್ಧಿಯಾಗುತ್ತಿದೆಯೆಂದೂ, ಪ್ರತಿ ವರ್ಷ ೩೦೦ ವೈಮಾನಿಕರನ್ನೂ ಮತ್ತು ೪೦೦ ಜನ 'ಮೆಕ್ಯಾನಿಕ್' ಗಳನ್ನೂ ಸಿದ್ಧ ಮಾಡುವ ವ್ಯವಸ್ಥೆ ನಡೆದಿದೆಯೆಂದೂ, ಈಗಿರುವ ವಿಮಾನ ನಿಲ್ದಾಣಗಳನ್ನೂ ವಿಶಾಲಗೊಳಿಸುತ್ತಿರಲಾಗಿದೆಯೆಂದೂ, ಶಿಕ್ಷಣಕ್ಕಾಗಿ ಬ್ರಿಟನ್ನು ಅನೇಕ ವಿಮಾನಗಳನ್ನು ಕಳುಹಿಸುತ್ತಿದೆಯೆಂದೂ, ಯಂತ್ರಗಳು ಸಿಕ್ಕಿದೊಡನೆಯೇ ವಿಮಾನ ನಿರ್ಮಾಣ ಕಾರ್ಯವನ್ನು ತೀಳ್ಪಿ ಮಾಗಿ ಕೈಗೊಳ್ಳಲಾಗುವೆಂದೂ" ಹೇಳಿದರು.

ಸ್ವೀಕಾರ.

ರಾಜಧಾನಿಯ ಗುರುಕಾರ್ ದೇವಣ್ಣನವರ ಬೀದಿಯಲ್ಲಿರುವ ಮಾ॥ ಎ ಕೆ ದೇವಣ್ಣನವರು ತಿವ ನ್ಯಾಯಜ್ಯವನ್ನು ಹೊಂದಿದುದರ ಸಂಬಂಧವಾಗಿ ನೆರೆ ನೇರಿನ ಕೈಲಾಸಸಮಾರಾಧನೆಯಲ್ಲಿ ಪ್ರಭಾಷೋಷಣ ಕ್ಯೋಸ್ತರ ಸಮರ್ಪಿಸಿದ ॥ ರೂ. ಯು ಅವರ ಅಳಿಯಂದಿರಾದ ಆಲೂರು ಡಾಕ್ಟರ್ ಶ್ರೀಮಾನ್ ಎಂ ಸಿ. ನಂಜಪ್ಪನವರ ದ್ವಾರಾ ತಲ್ಪಿರುತ್ತದೆ.

ಧಾರವಾಡ ಡಿ॥ ಗವಗ ತಾ॥ ಚಿಂತಲಿಗ್ಗಾಮದ ಹಿರಿಯಮಠದ ವೇ॥ ಗೂಳಂಯ್ಯನವರ ಧರ್ಮಪತ್ನಿಯವರ ರಾದ ಪೌ॥ ಸೀಲಮ್ಮನವರು ತಿವಾಧೀನರಾದ ಸಂಬಂಧವಾಗಿ ಗಣಾರಾಧನೆಯು ನೆರವೇರಿದ ಸಮಯದಲ್ಲಿ ಪ್ರಭಾಷೋಷಣಕ್ಯೋಸ್ತರ ಸಮರ್ಪಿಸಿದ ॥ ರೂ ಯು ಮುಳಗುಂದ ಹೊಸಮಠದ ವೇ॥ ವೀರಭದ್ರಯ್ಯನವರ ದ್ವಾರಾ ತಲ್ಪಿರುತ್ತದೆ.

ಹುಬ್ಬಳ್ಳಿಕರ ನಿವಾಸಿಗಳಾದ ಶ್ರೀಮಾನ್ ಪರ್ವತಪ್ಪ ಮಲಯ್ಯನವರ ತಾಯಿ ಧರ್ಮಪತ್ನಿಯನರಾದ ಸೌ॥ ದ್ಯಾಮವ್ವನವರು ತಿವಾಧೀನರಾ ಪ್ರ॥ ೩ ದಿವಸ ತಿವಾಧೀನರಾದ ಸಮಯದಲ್ಲಿ ಪ್ರಭಾಷೋಷಣಕ್ಯೋಸ್ತರ ಸಮರ್ಪಿಸಿದ ॥ ರೂ ಯು ವೇ॥ ಈಶ್ವರಸ್ವಾಮಿ ಕೇದಾರಸ್ವಾಮಿ ಹಿರೇಮಠ ನೂಲ್ಲಿ ತಾವರ ದ್ವಾರಾ ತಲ್ಪಿರುತ್ತದೆ

ಈ ಮೇಲ್ಕಂಡ ಮಹಾಸಯರಿಗೆಲ್ಲಾ ಪ್ರೀಜಗನ್ಮುರು ಸಂಜಾಚಾರ್ಯರು ನಿತ್ಯಮಂಗಲವನ್ನೀಯಲೆಂದು ಹಾರೈಸುತ್ತೇವೆ.

[೩ ನೆಯ ಪುಟದಿಂದ ಮುಂದುವರಿಸಿದೆ]

ಸುಗುತ್ತ ಜೀವನಕ್ಕೆ ಬೇಕಾದ ದ್ರವ್ಯಾನುಕೂಲಗಳನ್ನು ಕಲ್ಪಿಸಿ ನಿಮ್ಮೆಲ್ಲರ ಮನಸ್ಸನ್ನು ಆಕ್ರಮಿಸಿರುವ ಚಿಂತೆಯನ್ನು ಹೋಗಲಾಡಿಸಲು ಪ್ರಯತ್ನ ಮಾಡಿದ್ದೇನೆ. ನಿಮ್ಮ ಸಂಸಾರಗಳ ಯೋಗಕ್ಷೇಮವು ಸಂಸ್ಥಾನದ ಪ್ರಥಮ ಕರ್ತವ್ಯವಾಗಿರುತ್ತದೆ

ನಿಮ್ಮೆಲ್ಲರನ್ನೂ ದೇವರು ಕಾಪಾಡಲೆಂದೂ ನಿಮ್ಮ ಪ್ರಯತ್ನದಲ್ಲಿ ನಿಮ್ಮೆಲ್ಲರಿಗೂ ಯಶಸ್ಸನ್ನು ಕೊಡಲೆಂದೂ ನಾವು ದೇವರಲ್ಲಿ ಪ್ರಾರ್ಥಿಸುತ್ತೇವೆ.

॥ ಶ್ರೀ ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು ॥

ವೀರಶೈವ ಮತಗ್ರಂಥಗಳ ಮುದ್ರಣ ಕ್ಕಾಗಿ ೫೦ ಸಾವಿರ ರೂಪಾಯಿಗಳ ದಾನ.

ದಾನಶೂರರೊರೆ—
ದುಬಲಗುಂಡಿ ಶರಣಪ್ಪಣ್ಣ, ಪತ್ತೆದಾರ.

ಈ ವಿಂಚಿಚಿಸ್ರಪಂಚದಲ್ಲಿ ಪ್ರತಿಯೊಬ್ಬ ಮಾನವನು ತನಗೆ ಯಾವಾಗಲೂ ಮಹಾಸುಖವು ದೊರೆಯಬೇಕೆಂದು ಆಸೆಪಟ್ಟಿರುವನು ಅಂತಹ ಅಖಂಡ ಸುಖಪ್ರಾಪ್ತಿಯು ಧರ್ಮಾಚರಣೆಯಿಂದಲೂ ದರ್ಮರಕ್ಷಣೆಯಿಂದಲೂ ಉಂಟಾಗುವುದು ಆದುದರಿಂದ ದರ್ಮವನ್ನು ಜೋಪಾಸಿಸುವ ಧರ್ಮಗ್ರಂಥಗಳ ಆಪೇಕ್ಷೆಯು ಧರ್ಮಾರ್ಥಿಗೆ ಇರುವದು ಸ್ವಾಭಾವಿಕವು

ಕೆಲ ಶತಮಾನಗಳ ಪೂರ್ವದಲ್ಲಿ ಅನೇಕ ದುರ್ಧರ ಕಾರಣಗಳಿಂದ ವೀರಶೈವ ಸಮಾಜದಲ್ಲಿ ಆ ಗ್ರಂಥಗಳು ಲೋಪವನ್ನು ಹೊಂದಿದ ಕಾರಣ ಅಂದಿನಿಂದ ಸಮಾಜದಲ್ಲಿ ಅಜ್ಞಾನಾಂಧಕಾರವು ಎಲ್ಲೆಡೆಯಲ್ಲಿಯೂ ಹಬ್ಬಿ ಸಮಾಜದವರಿಗೆ ಸುಖಸಾಧನವು ಕಾಣ್ಯವಾಗುವ ಪ್ರಸಂಗವು ಪ್ರಾಪ್ತವಾಯಿತು ಇಂತಹ ಕಾಲದಲ್ಲಿ ಯಕ್ಕಶರೀರಿಗೂ ಮಹಾದರ್ಶಿಯಾಗಿಯೂ ಅದ ಶ್ರೀಮಾನ್ ನೈಷಸೂರು ವೈ ವೀರಸಂಗಪ್ಪನವರು ಸ್ವಸುಖಸ್ವರೂಪ ಜ್ಞಾನೆಕ್ಕೆ ಕಣ್ಣಿಡಿಯಂತೆ ಕಂಗೊಳಿಸುವ ಧರ್ಮಗ್ರಂಥಗಳ ಅಭಾವದಿಂದ ಏಷಸುಖವರಿಯದೆ ಬಳಲುವ ಸಮಾಜವನ್ನು ನೋಡಿ ಕಳವಳಗೊಂಡು ಧರ್ಮಗ್ರಂಥಗಳ ಮುದ್ರಣದಲ್ಲಿ ನಿರತರಾಗಿ ತೆಲವು ಗ್ರಂಥರತ್ನಗಳನ್ನು ಆಂಧ್ರಾಕ್ಷರಗಳಲ್ಲಿ ಮುದ್ರಿಸಿ ಪ್ರಕಟಿಸಿದರು ಅವುಗಳಿಂದ ಕೆಲ ಮಟ್ಟಿಗೆ ಕರ್ನಾಟಕ, ಮತ್ತು ಆಂಧ್ರರ ಧರ್ಮಜ್ಞಾನವು ಉದಯ ಗೊಂಡು ಪ್ರಕಾಶಿತವಾತು

ಸಮಾಜದ ದುರ್ದೈವದಿಂದ ಪೈ ವೀರಸಂಗಪ್ಪನವರು ಅಕಾಲದಲ್ಲಿಯೇ ಪರಂಧಾಮವನ್ನೈಯ್ದುವುದರಿಂದ ಅಲ್ಲಿಗೆ ಅದು ನಿಂತುಹೋಯಿತು ಮುಂದೆ ಕೆಲವು ಕಾಲ ಗತಿಸಿದನೇಲೆ ಪ್ರಾತಃಸ್ಮರಣೀಯರೂ ಧರ್ಮೋದ್ಧಾರಕರೂ ಆದ ರಾ॥ ಬಿ॥ ಶ್ರೀಮಂತ ಕೈ॥ ವಾ॥ ಆಪ್ಪಾಸಾಹೇಬ ವಾರವ ಇವರು ಮಹಾರಾಷ್ಟ್ರದೇಶದ ವೀರಶೈವ ಸಮಾಜವು ಧರ್ಮಜ್ಞಾನದ ಅಧಾನದಿಂದ ಕೋಚಚಿನೀಯಸ್ಥಿತಿಯಲ್ಲಿರುವದನ್ನು ತಿಳಿದು, ಸಾಧಾರಣ ಜನವೂ ಕೂಡ ಧರ್ಮದ ತಿರುಳರಿಯಬೇಕೆಂಬ ಸದಿಚ್ಛೆಯಿಂದ ಮಹಾರಾಷ್ಟ್ರಭಾಷಾ ಟೀಕೆಯಿಂದ ಕೂಡಿದ ೪೦ ೫೦ ಧರ್ಮಗ್ರಂಥಗಳನ್ನು ದೇವನಾಗರೀ ಲಿಪಿಯಲ್ಲಿಬಹು ಧನವ್ಯಯದಿಂದ ಮುದ್ರಿಸಿ ಪ್ರಕಟಿಸಿದರು ಇದರಿಂದ ಮಹಾರಾಷ್ಟ್ರದೇಶದ ವೀರಶೈವ ಸಮಾಜದಲ್ಲಿ ಧರ್ಮಜಾಗೃತಿಯಾಯಿತು

ಇತ್ತಿತ್ತಲಿ ಆ ಗ್ರಂಥಗಳು ಖರ್ತಾಗಿ ಪುನಃ ದೊರೆಯದಾಗಿರುವುದನ್ನು ನೋಡಿ, ಪರಮ ಪೂಜ್ಯರಾದರಾದ ಬಾಲತಪಸ್ವಿ ಶ್ರೀ॥ ಷ॥ ಬ॥ ಚನ್ನವೀರತಿರವಾಜಾಯರು ಬೃಹಸ್ಪರ ಕೋಟಿಗಿ ಇವರ ಮಷಿಸ್ಸಿಲಲ್ಲಿ ಧರ್ಮಗ್ರಂಥಗಳನ್ನು ಮುದ್ರಿಸಿ ಆ ಚ್ಯುತಿಯನ್ನು ದೂರಮಾಡಿ ಸಮಾಜದಲ್ಲಿ ಧರ್ಮಜಾಗೃತಿಯನ್ನುಂಟುಮಾಡಬೇಕೆಂಬ ಕುತೂಹಲವುಂಟಾಗಿ ಅದುದಿನೇದಿನೇ ದೇಳೆಯತೊಡಗಿತು. ಇಂತಹ ಕಾರ್ಯವು ಬಹು ಧನಸೂಲವಾದುದರಿಂದ ಸಫಲವಾಗುವದು ದುರ್ಲಭವೆಂತಲೂ ಈ ಜನ್ಮದಲ್ಲಿ ಇದಾಗದಿದ್ದರೆ ಇದಕ್ಕಾಗಿ ಜನ್ಮತೆತ್ತುವದೆಲ್ಲಿ ಬರುವದೋ? ಎಂತಲೂ ಹಗಲಿರಳೂ ಈ ವಿಷಯದಲ್ಲಿ ಶಿವನನ್ನು ಪ್ರಾರ್ಥಿಸುತ್ತಿದ್ದರು.

ಒಂದು ದಿನ ಕಲ್ಯಾಣಪ್ರಾಂತದಲ್ಲಿ ಕೊಡಗೈ ದೊರೆಯೆಂದು ಪ್ರಸಿದ್ಧಿಯನ್ನು ಪಡೆದವರೂ, ಉದಾರಚರಿತರೂ, ಮಹಾಧರ್ಮಾಧಿಪತ್ಯಾನಿಗಳೂ ಆದ ಶರಣಪ್ಪ ಅಣ್ಣಾ ಪತ್ತೆದಾರ ಪೂಜ್ಯ ಇವರು ಪರಮಪೂಜ್ಯರಾದ ಹೊಟಗಿ ಶ್ರೀಗಳವರ ಲ್ಲಿಗೆ ಬಂದು ದರ್ಶನಾರ್ತರಾಗಿ ನಮಸ್ಕರಿಸಿ ಕುಳಿತುಕೊಂಡ ಬಳಿಕ ಪ್ರಸಂಗವಶಾತ್ ಶ್ರೀಗಳು ಪೂರ್ವದಲ್ಲಿ ಉಳಿದು ಪೂಜ್ಯರಾದ ಶ್ರೀಮಂತರ ಧೈರ್ಯದಲ್ಲಿ ಶಿವನು ವಾಸವಾಗಿದ್ದು ಪ್ರೇರಣೆಮಾಡಿದನೆ ಆಗಿರಬೇಕೆಂಬಂತೆ ನೊಬೆಲಾದ ವಿಷಯವನ್ನು ಇವರ ಕಿವಿಯಲ್ಲಿ ತಪ್ಪಲೆಕೊಡಿಸಿದರು ಸದಾ ಸಮಾಜಹಿತಚಿಂತಕರೂ ಉದಾರಹೃದಯರೂ ಆದ ಶರಣಪ್ಪ ಅಣ್ಣ ಸವರು ಶ್ರೀಗಳ ಸಮಾಜ ವಿಷಯಕವಾದ ಕಳಕಳಿಯ ಜೀವನವನ್ನರಿತು ಉಳಕ್ಕೇರಿದ ಪಕ್ಷಿಯಂತೆ ನಿರ್ವಾರವಾಗಿ ಆನಂದಮಾಡಿಕೊಳ್ಳುತ್ತೇನೆಂದು ಹೇಳಿ ಆಶೀರ್ವಾದವನ್ನು ಪಡೆದು ಹೋದರು

ಇದೇ ಪರಮ ಕರುಣಾಮಾಪವಿಲ್ಲಿ ಪ್ರತಿವರ್ಷ ಪಂತೆ ಕಲ್ಯಾಣದ ಸಾಸನವ ಗುಡ್ಡದೆದರಲ್ಲಿರುವ ಅಂಬೀ (ಅಮ್ಮತ) ಗಂತೆಯೆ ಬ ಪ್ರಸಿದ್ಧ ಕ್ಷೇತ್ರವಲ್ಲಿ ಹೊಟ್ಟಿಗೆ ಶ್ರೀಗಳು ಆನೆ ಸ್ಥಾನಕ್ಕೆ ದಯಮಾಡಿಸಿ ಸದರಿ ಶ್ರೀಮಂತ ಶರಣಪ್ಪ ಅಣ್ಣನವರ ಆದರಾತಿಶಯದಿಂ ಆನ ಸ್ಥಾನವನ್ನು ಪೂರೈಸಿದರು ಆ ಸಮಯದಲ್ಲಿ ಶ್ರೀಗಳು ಪ್ರಸಃ ಮತಗ್ರಂಥಗಳು ಮುದ್ರಣ ನಿತಯವನ್ನು ಪ್ರಸ್ತಾಪಿಸಲು ಕ ಶ್ರೀಮಂತರಲ್ಲಿ ಜನಪ್ರಯವಾಗಿ ಮುದ್ರಣಾರಂಭಕ್ಕೆ ಸಹಾಯಹಸ್ತ ತೈನೆಂದು ಶ್ರೀಮಂತರು ವಚನಕೊಟ್ಟರು. ಬಳಿಕ ತಮ್ಮ ಸುನೆಯಲ್ಲಿ ಆಶ್ವಯುಜ ಶುದ್ಧ ವಿಜಯದಶಮಿಯಲ್ಲಿ ಪತ್ತೆತಿಯಂತೆ ಉಳ್ಳವವು ನಡೆದಾಗ್ಗೆ ಶ್ರೀಮಂತ ಶರಣಪ್ಪಣ್ಣನವರು ಮತಗ್ರಂಥಗಳ ಮುದ್ರಣಕ್ಕಾಗಿ ಇಸ್ಸುತ್ತಾಸಾವಿರ (೫೦೦೦) ರೂಪಾಯಿಗಳನ್ನು ಕೊಡುತ್ತೇನೆಂದು ಸ್ಪಷ್ಟೀಕರಿಸಿದರು ಇದಲೇ ಮಾಗ್ಗಾನ ಮಾಡಿದರು "ಉಪಾರ ಚರಿತಾ ನಾಂತು ಪಸುಧೈವ ಕಟು ಒಕ" ಎಂಬ ವೃಷ್ಯೋಕ್ತಿಯು ಇವರಲ್ಲಿ ಜೈನ್ಯಾಗಿ ಒಡೆದುಕಾಣುವದು ಇಂತು ಕುಟುಂಬ ವತ್ಸಲನಾದ ಓರ್ವ ಕುಟುಂಬಿವರುಪನು ತನ್ನ ಕುಟುಂಬದಲ್ಲಿರುವ ಎಲ್ಲಾ ಬಂಧುಗಳ ವಿದ್ಯಾ ಬುದ್ಧಿ ಮೊದಲಾಯವುಗಳಿಂದ ಸುಂದರರಾಗಿ ಲೋಕದಲ್ಲಿ ಹೆಸರಾದ ವರಾಗಬೇಕೆಂಬ ಹೆಮ್ಮೆಯಿಂದ ತಾನು ಗಳಿಸಿದ ಹಣವನ್ನು ಉದಾರಬುದ್ಧಿಯಿಂದ ಖರ್ಚುಮಾಡಿ ಕುಟುಂಬದ ಳಿತಕೆಕವನ್ನು ಹೇಗೆ ಹೆಚ್ಚಿಸುವನೋ ಹಾಗೆಯೇ ಜಗತ್ತು ಟುಂಬಿಯಾದ ಶ್ರೀಮಂತ ಶರಣಪ್ಪ ಅಣ್ಣನವರು ತಮ್ಮ ಸಮಾಜದಲ್ಲಿರುವ ಸರ್ವಬಂದುಗಳು ಸದ್ಗತಿ, ಸದಾಚಾರ, ಸದ್ಯವಗಳಿಂದ ಪುಣ್ಯಿತರಾಗಿ ನಿತ್ಯಸುಖವನ್ನು ಅನೆಭವಿಸಬೇಕೆಂಬ ಸದಿಚ್ಛೆಯಿಂದ ಧರ್ಮಾಚಾರಗಳಿಗೆ ಮುಖ್ಯ ಸಾಧನಗಳಾದ ಮತಗ್ರಂಥಗಳ ಮುದ್ರಣವು ಅಚ್ಯತವಾಗಿ ನಡೆಯುವ ಉದ್ದೇಶದಿಂದ ಉದಾರ ಧನವಿನಿಯೆಯನ್ನು ಕೊಟ್ಟಿರುವರು ಸದರಿ ಶ್ರೀಮಂತರು ತಮ್ಮ ಕರಕಂಜಸಂಜಾತನಾದ ಧನಸಿಧಿಯೆಂಬ ಸುಪುತ್ರ ಸತ್ಪುತ್ರನಿಗೆ ಮುದ್ರಾಂಗನೆಯೊಡನೆ ವಿವಾಹವನ್ನು ಬೆಳ್ಗಿಸಿದರು ಇಂತಹ ಉಭಯ ಸಂಪತ್ತಿಗರ ಯೋಗದಿಂದ ಉದ್ಭವಿಸುವ ಸಾವಿರಾರು ಗ್ರಂಥಗಳೆಲ ಮೊಮ್ಮಕ್ಕಳ ಮಂಪೊಮ್ಮಕ್ಕಳ ಧನತೆಯನ್ನು ಕಾಣುವ ಸುಯೋಗವನ್ನು (ಆಂತಹ ದೀರ್ಘಾಯುಸ್ಸನ್ನು) ಇತೋಸ್ಯಾಕ ಶಯವಾದ ಪವಿತ್ರತಮ ಕೀರ್ತಿಯನ್ನು ಮತ್ತು ಸದ್ಬುದ್ಧಿಯನ್ನು ಕೊಟ್ಟು ಕೊಡಗೈದೊರೆಗಳನ್ನು ಕಾವಾಡಲೆಂದು ದಯಾಘನಸಾದ ಪರಶಿವನನ್ನು ಪ್ರಾರ್ಥಿಸುತ್ತೇನೆ

ತಾ॥ ೬-೧೧-೪೦. ಪಲ್॥ ಜಗದೀಶಶಾಸ್ತ್ರಿಗಳು, ಸೊಲ್ಲಾಪುರ

॥ ಶ್ರೀಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು ॥

ಹು ಬ ವಾ ಶೆ ರ.

ಧಾರವಾಡ ಶಿ॥ ಚಿಂಚ್ಯಾಗ್ರಾಮದ ಹಿರಿಮಠದ ವೀ॥ ಗೂಳಯ್ಯಶಾಸ್ತ್ರಿ ಸೆನ್ಸೆನ್ ಹೆಡ್‌ಮಾಸ್ತರ, ಇವರ ಧರ್ಮಪತ್ನಿಯವರಾದ ಸೌ॥ ನೀಲಮ್ಮನವರು, ಇದೇ ಆಶ್ವಯುಜ ಶು॥ ೧ ನೇ ದಿವಸ ತಿಮಥಿರಸಾದರೆಲು ವಿಷಯವನ್ನು ಬರೆಯಲು ಅತ್ಯಂತ ವಿಷಾದವಾಗುತ್ತಿದೆ. ಇವರು ಸ್ವಧರ್ಮಾಚಾರಸಂಪನ್ನೆಯರಾಗಿಯೂ, ಹರ ಗುರು ಭಕ್ತಿ, ಪರಾಯಣೆಯರಾಗಿಯೂ, ಇದ್ದು ಸರ್ವರ ಪ್ರೀತಿಗೆ ಪಾತ್ರರಾಗಿದ್ದರು. ಇಂಥ ಆದರ್ಶಮಾತೃವಿನ ವಿಯೋಗದಿಂದ ಆಕೂ ಬಾಜು ಗ್ರಾಮಗಳ ಸರ್ವ ಜಳಗಳಿಗೆ ಬಹಳ ವ್ಯಸನವಾಗಿರುತ್ತದೆ.

ಇವರ ಪತಿವರ್ಯರು, ಇದೇ ಆ॥ ಬ॥ ೧೨ ಸೋಮವಾರ ದಿವಸ ಶ್ರೀ ಹ. ಭ. ಬಿಟ್ಟಿಗವಾಡ ಹಿರೇಮಠದ ಶ್ರೀ॥ ಗಂಗಾಧರ ಶಿವಾಚಾರ್ಯರ ಸಮ್ಮುಖದಲ್ಲಿ ಮಾಸಿಕಾರಾಧನೆಯನ್ನು ನೆರವೇರಿಸಿದರು. ಆಗ್ಗೆ ಶ್ರೀಗಳವರ ಅಪ್ಪಣೆಯಮೆರೆಗೆ ' ಪಂಚಾಚಾರ್ಯಪ್ರಭಾ' ಹಾಗೂ ' ವೀರಶೈವ ' ಪತ್ರಿಕೆಗಳಿಗೆ ಒಂದೊಂದು ರೂಪಾಯಿ ತೆಗೆಯಿಸಲ್ಪಟ್ಟಿತು. ಮೃತರ ಆತ್ಮಕ್ಕೆ ಶ್ರೀ ಜಗದ್ಗುರು ಪಂಚಾಚಾರ್ಯರು, ಶಾಂತಿಯನ್ನೀಯಲೆಂದು ಆನನ್ಯ ಭಾವದಿಂದ ಪ್ರಾರ್ಥಿಸುವ,

ದುಃಖಭಾಗಿ—
ವೀರಭದ್ರಯ್ಯ ಹೊಸನ.ಶೆ,
ಅಧ್ಯಕ್ಷೆ,
ಶ್ರೀಜಗದ್ಗುರು ಆಪ್ತನವ ರೇಣುಕಾಚಾರ್ಯ
ವಾಚನಾಲಯ, ಮುಳಗುಂದ.

ಮೆಡಿಟರೇನಿಯರ್ ಸಮುದ್ರದಲ್ಲಿ ನಡೆಯುತ್ತಿರುವ ಕದನ

ಜರ್ಮನಿಯು ರುಮೇನಿಯಾ ದೇಶದೊಳಕ್ಕೆ ತನ್ನ ಸೈನ್ಯವನ್ನು ನುಗ್ಗಿಸಿರುವದನ್ನೂ ಅತ್ತಲಾಗಿ ಅದೇ ಸಮಯದಲ್ಲಿ ಇಟಲಿಯವರು ಗ್ರೀಸ್ ರಾಜ್ಯವನ್ನು ಮುತ್ತಿಗೆ ಹಾಕಿರುವುದನ್ನೂ ನೋಡಿದಲ್ಲಿ ಜರ್ಮನಿ ಮತ್ತು ಇಟಲಿ ಸರ್ಕಾರಗಳವರು ಬ್ರಿಟನ್ನಿನ್ನಲೂ ಈಜಿಪ್ತಿನಲ್ಲೂ ಸಾಧಿಸಲು ಸಾಧ್ಯವಿಲ್ಲದ ವಿಜಯವನ್ನು ಮೆಡಿಟರೇನಿಯರ್ ಸಮುದ್ರದ ನೆರೆಯಲ್ಲಿ ಸಂಪಾದಿಸಲು ಸಂಕಲ್ಪಿಸಿರುವಂತೆ ತೋರುತ್ತದೆ. ಮೆಡಿಟರೇನಿಯರ್ ಸಮುದ್ರವು ತಮ್ಮ ಸಮುದ್ರವೆಂದು ಇಟಲಿಯವರು ಅನೇಕಶತಾರಿ ಜಂಭ ಕೊಚ್ಚಿಕೊಂಡಿರುತ್ತಾರೆ. ಆದರೆ ವಸ್ತುಃ ಇದು ಅವರ ಬರೀ ಆಕಾಕ್ಷೆ ಮಾತ್ರವಾಗಿರುತ್ತೆ ದಿಟವೇ ವಿಷಾನಿಜಾಂಶವಾಗಿರುವುದಿಲ್ಲ. ವಾಸ್ತವಾಂಶವನಾದರೋ ಮೆಡಿಟರೇನಿಯರ್ ಸಮುದ್ರದಲ್ಲಿರುವ ಬ್ರಿಟಿಷರ ಸಮರ ನೌಕೆಗಳ ದೆಸೆಯಿಂದ ಇಟಲಿಯ ನೌಕಾಪಡೆಗಳಿಗೆ ಆ ಸಮುದ್ರದಲ್ಲಿ ನಿರ್ಭಯವಾಗಿ ಯಾನಮಾಡುವುದಕ್ಕೆ ಧೈರ್ಯವೇ ಇರುವುದಿಲ್ಲ ಮೆಡಿಟರೇನಿಯರ್ ಸಮುದ್ರವು ತನ್ನ ದೇಶದ ಪ್ರಾಣವಾಯುವೆಂದು ಮುಸೋರಿನಿಯು ಹೇಳಿರುವುದನ್ನು ಗಮನಿಸಿದಲ್ಲಿ ಇಟಲಿಗೆ ಈ ಸಮುದ್ರದ ಪ್ರಾಮುಖ್ಯವು ಎಷ್ಟೆಂಬುದು ವ್ಯಕ್ತವಾಗುತ್ತದೆ ಮುಸೋಲಿನಿಯ ಈ ಹೇಳಿಕೆಯಲ್ಲಿ ಉತ್ಪ್ರೇಕ್ಷೆಯೇನೂ ಇರುವುದೇ ಇಲ್ಲ ಇಟಲಿಗೆ ಸರದೇಶಗಳಿಂದ ಆಮದಾಗುವ ಶೇಕಡಾ ಎಂಭತ್ತೈದರಷ್ಟು ಸರಕುಗಳು ಸಮುದ್ರದ ಮೂಲಕವೇ ಸರಬರಾಜಾಗುತ್ತವೆ. ಈ ಪೈಕಿ ಶೇಕಡಾ ಹತ್ತರಷ್ಟು ಮಾತ್ರ ಮೆಡಿಟರೇನಿಯರ್ ಸಮುದ್ರದ ಸುತ್ತಮುತ್ತಲಿರುವ ದೇಶಗಳಿಂದ ಬರುಗುತ್ತದೆ ಉಳಗದೆಲ್ಲವೂ ವಿದೇಶಗಳಿಂದ ಅಂದರೆ ಒಂದು ಕಡೆ ಜಬ್ರಾಲ್ಟರ್ ಜಲಸಂಧಿಯ ಮೂಲಕವೇ ಅಥವಾ ಮತ್ತೊಂದು ಕಡೆ ಸೂಯೆಜ್ ಕಾಲುವೆಯ ಮೂಲಕವೇ ಮೆಡಿಟರೇನಿಯರ್ ಸಮುದ್ರದ ಮಾರ್ಗವಾಗಿಯೇ ಇಟಲಿಗೆ ತಲಪಬೇಕಾಗುತ್ತದೆ. ಈಗಿನ ಪರಿಸ್ಥಿತಿಯಲ್ಲಾದರೋ ಇಟಲಿಯ ವ್ಯಾಪಾರದ ಹಡಗುಗಳು ಮೆಡಿಟರೇನಿಯನ್ ಸಮುದ್ರದಲ್ಲಿ ನಿರ್ಭಯವಾಗಿ ಸಂಚರಿಸಲು ಅಸಾಧ್ಯವಾಗಿರುವುದಲ್ಲದೆ, ಜಿಬ್ರಾಲ್ಟರ್ ಸಲಸಂಧಿಯ ಸಮೀಪ ಕಡಲ್ಕಾಲುವೆಯ ಬ್ರಿಟಿಷರ ವಶದಲ್ಲಿರುವುದರಿಂದ ಅವು ಈಗ ಮೆಡಿಟರೇನಿಯನ್ ಸಮುದ್ರವನ್ನು ಪ್ರವೇಶಿಸುವ ದಕ್ಕಾಗಲಿ ಅಥವಾ ಅದನ್ನು ಬಿಟ್ಟು ಹೊಗುವುದಕ್ಕಾಗಲಿ ಸಾಧ್ಯವಿಲ್ಲವಾಗಿರುತ್ತದೆ. ಇಟಲಿಗೆ ಅವಶ್ಯಕವಾಗಿ

ರುವ ಪೆಟ್ರೋಲ್ ಎಣ್ಣೆಯಲ್ಲಿ ಅರ್ಧಭಾಗಕ್ಕಿಂತಲೂ ಹೆಚ್ಚು ಭಾಗದಷ್ಟು ಎಣ್ಣೆಯು ಯುಕ್ರೋಪಿನಲ್ಲಿ ಕಾಂತ ನೆಲಸಿರುವ ಸಮಯದಲ್ಲಿ ಜಿಬ್ರಾಲ್ಟರಿನ ಮೂಲಕವೇ ಇಟಲಿಗೆ ರವಾನೆಯಾಗುತ್ತದೆ. ಈಗಾಗಲೇ ಆ ದೇಶಕ್ಕೆ ಎಣ್ಣೆ ಸರಬರಾಜಾಗದಂತೆ ಕಳ್ಳಿಟ್ಟೋಗುತ್ತದೆ. ಇದರಿಂದ ಇಟಲಿಯ ಎಣ್ಣೆ ಸರಬರಾಜಿನ ಮೇಲೆ ಯಾವ ಪರಿಣಾಮವೂ ಆಗಿದೆಯೆಂಬುದು ಸ್ಪುಟವಾಗಿದೇ ಇದೆ. ಇಂದಿನ ಸಮಯದಲ್ಲಿ ಎಣ್ಣೆಯು ಸರಬರಾಜು ಬಹಳ ಪ್ರಾಮುಖ್ಯವಾದ ಅಂಶವಾಗಿದೆ. ಹೇಗೆಂದರೆ, ಆಧುನಿಕ ಕಾಲದ ಯುದ್ಧವನ್ನು ಸಮರನೌಕೆಗಳಿಗಂತ ಮೋಟಾರ್ ನಾಹನಗಳಿಗೂ ಮತ್ತು ವಿಮಾನಗಳಿಗೂ ಸಾಕಾದಷ್ಟು ಎಣ್ಣೆಯ ದಾಸ್ತಾನನ್ನು ಇಟ್ಟುಕೊಳ್ಳದೆ ನಿರ್ವಹಿಸುವುದು ಸಾಧ್ಯವೇ ಇಲ್ಲ. ಈ ಯುದ್ಧಕಾರ್ಯಗಳಿಗಾಗಿ ಇಟಲಿಯು ನಿಸ್ಸಂದೇಹವಾಗಿಯೂ ಮುಂದಾಗಿಯೇ ಎಣ್ಣೆಯನ್ನು ವಿಶೇಷವಾಗಿ ಲೇವಾದಾರಿಟ್ಟುಕೊಂಡಿರಬಹುದು. ಆದರೆ ಈ ದಾಸ್ತಾನು ಕರಗಿಹೋಗದಂತೆ ಅದರ ವೆಚ್ಚಕ್ಕೆ ತಕ್ಕಷ್ಟು ಹೆಚ್ಚು ಹೆಚ್ಚಾಗಿ ಭರ್ತಿಮಾಡಿಕೊಳ್ಳದೆಹೋದಲ್ಲಿ ಆ ನೇಕರ ಯುದ್ಧಸಾಮರ್ಥ್ಯವು ದಿನದಿನಕ್ಕೂ ಕುಗ್ಗಿಹೋಗುವುದು.

ಇಂತಹ ಸಮಯ ಸ್ಪಿನೇಕಗಳಲ್ಲಿ ಮೆಡಿಟರೇನಿಯನ್ ಸಮುದ್ರವನ್ನು ಸ್ವಾಧೀನಪಡಿಸಿಕೊಳ್ಳುವುದರಲ್ಲಿ ಇಟಲಿಯ ಮತ್ತು ಜರ್ಮನಿಯ ಉದ್ದೇಶಗಳೇನೆಂಬುದು ಎಲ್ಲರಿಗೂ ತಿಳಿದಂತೆಯೇ ಆಗಿರುತ್ತದೆ. ಬ್ರಿಟಿಷರನ್ನು ಒಂದು ಕಡೆ ಜಿಬ್ರಾಲ್ಟರಿನಿಂದಲೂ ಮತ್ತೊಂದು ಕಡೆ ಆವರನ್ನು ಈಜಿಪ್ಟಿನಿಂದಲೂ ಅದರಲ್ಲೂ ಮುಖ್ಯವಾಗಿ ಸೂಯೆಜ್ ಕಾಲುವೆಯಿಂದಲೂ ಓಡಿಸಿಬಿಡಬೇಕೆಂಬುದು ಈ ರಾಷ್ಟ್ರಗಳವರ ಉದ್ದೇಶವಾಗಿರುತ್ತದೆ. ಈರೀತಿ ಮಾಡಿದಲ್ಲಿ ಅಗ್ಗೆ ಮೆಡಿಟರೇನಿಯನ್ ಸಮುದ್ರದಲ್ಲಿರುವ ಬ್ರಿಟಿಷ್ ನೌಕಾದಳಗಳಿಗೆ ಸರಬರಾಜು ನಿಂತುಹೋಗುತ್ತದೆ. ಆಗ್ಗೆ ಆ ನೌಕಾದಳವು ಯುದ್ಧ ಕಾರ್ಯವನ್ನು ಮಾಡಲಾರದೆ ಅಥವಾ ಶತ್ರುಗಳ ಹಿಡಿತದಿಂದ ತಪ್ಪಿಸಿಕೊಂಡು ಹೋಗುವುದಕ್ಕಾಗಲಿ ಸಾಧ್ಯವಾಗುವುದಿಲ್ಲ. ಜರ್ಮನಿಯು ಈ ಜಿಬ್ರಾಲ್ಟರನ್ನು ವಶಪಡಿಸಿಕೊಳ್ಳುವ ವಿಷಯದಲ್ಲಿ ಸ್ಪೆಯಿ ದೇಶದ ಸಹಾಯ ಮತ್ತು ಸಹಕಾರವನ್ನು ಪ್ರಾರ್ಥಿಸಿತು. ಆದರೆ ಸ್ಪೆಯಿ ದೇಶವು ಈಗ ಇವರಿಗೆ ಸಹಾಯಹೀನಲು ಸಿದ್ಧವಾಗಿರುವಂತೆ ಕಂಡುಬರುವುದಿಲ್ಲ. ಉಳಿದ ಅವರ ಮೇಲ್ಕಂಡ ಯೋಚನೆಯ ನಿರ್ವಹಣದ ಛಾಪನ್ನು ಇಟಲಿಗೆ ಸೇರಿದುದಾಗಿರುತ್ತದೆ. ಈ ಸಂದರ್ಭದಲ್ಲಿ ರುಮೇನಿಯದಲ್ಲಿ ಜರ್ಮನಿಯವರ ಸೈನ್ಯಸಡೆಯೊಂದಿದೆಯೆಂಬುದನ್ನೂ ಅವರು ಕಪ್ಪು ಸಮುದ್ರದಲ್ಲಿ ಒಂದು ತೀರಪಟ್ಟಣದ ಹತೋಟಿಯನ್ನು ಪಡೆದಿದ್ದಾರೆಂಬುದನ್ನೂ, ಹಂಗೇರಿಯು ಮತ್ತು ಯುಗೊಸ್ಲಾವಿಯದ ಗಡಿ ಪ್ರದೇಶಗಳಲ್ಲಿ ಜರ್ಮನರ ಭಾರಿ ಸೈನ್ಯಪಡೆಗಳು ಕಾದುನಿಂತಿವೆಯೆಂಬುದನ್ನೂ ಯಾರೂ ಮರೆಯುವಂತಿಲ್ಲ.

ಇಟಲಿಯವರು ಈಗ ಎದುರಸಬೇಕಾಗಿರುವ ಎರಡು ಅಡ್ಡಿಗಳಾವುವೆಂದರೆ—ಒಂದು, ಮೆಡಿಟರೇನಿಯನ್ ಸಮುದ್ರದಲ್ಲಿರುವ ಬ್ರಿಟಿಷರ ನೌಕಾದಳ, ಎರಡನೆಯದು, ಈಜಿಪ್ಟಿನಲ್ಲಾ ಆದರ ನೆರೆಹೊರೆಯಲ್ಲೂ ಇರುವ ಬ್ರಿಟಿಷರ ಸೈನ್ಯಬಲ. ಈ ಎರಡು ಸೈನ್ಯದಳಗಳೂ ಒಂದಕ್ಕೊಂದು ಜೊಂಬಿಕೊಂಡು ಕೆಲಸಮಾಡುತ್ತಲಿವೆ. ಇಲ್ಲಿರುವ ಬ್ರಿಟಿಷ್ ನೌಕಾಬಲವು ಆಹಾರ ಸಾಮಗ್ರಿಗಳನ್ನು, ಯುದ್ಧೋಪಕರಣಗಳನ್ನೂ ಒದಗಿಸಿಕೊಡುವ ತಮ್ಮ ಕಡೆಗುಗಳಿಗೆ ಸಹಾಯವನ್ನೂ ಸಂರಕ್ಷಣೆಯನ್ನೂ ಕೊಡುವುದಲ್ಲದೆ, ಇದು ಉತ್ತರ ಆಫ್ರಿಕದಲ್ಲಿರುವ ಇಟಲಿಯ ಕಾಲ್ಬಲಕ್ಕೆ ಯಾವ ಸರಿನ ಸರಬರಾಜೂ ಆಗದಂತೆ ತಡೆಯುತ್ತದೆ. ಬ್ರಿಟಿಷರ ಈ ನೌಕಾದಳವನ್ನಾಗಲಿ ಸೈನ್ಯವನ್ನಾಗಲಿ ನಾಶಮಾಡುವ ಕಾರ್ಯದಲ್ಲಿ ಇಟಲಿಯವರು ಕೈಹಿತ್ತಾದರೂ ಮುಂದುವರಿದಿಲ್ಲ. ಬ್ರಿಟಿಷರಿಗೆ ಈಜಿಪ್ಟ್ ಸಮುದ್ರದಲ್ಲಿ ಅಂದರೆ ಗ್ರೀಸ್ ಮತ್ತು ತುರ್ಕಿ ರಾಜ್ಯಗಳ ಸಮೀಪದಲ್ಲಿ ಮೂಲಶಾಖೆಗಳಿದ್ದಿದ್ದರೂ ಆವರಿಗೆ ಮೆಡಿಟರೇನಿಯನ್ ಸಮುದ್ರದ ಮಧ್ಯದಲ್ಲೂ ಪೂರ್ವದಿಗ್ಭಾಗದಲ್ಲೂ ಬಹಳ ಉಪಯುಕ್ತವಾದ ಮೂಲ ಮತ್ತು ಸ್ಥೈರ್ಯ ಧೀಜಗಳಲ್ಲಿ ಮೂಲಶಾಖೆಗಳಿರುವುದರಿಂದ ಆವರ ನೌಕಾದಳವು ನಿರ್ಭಯವಾಗಿ ಈ ಸಮುದ್ರದಲ್ಲಿ ಸಂಚರಿಸುವುದು ಸಾಧ್ಯವಾಗಿರುತ್ತದೆ.

ಇಟಲಿಯವರೂ ಜರ್ಮನ್ನರೂ ಎದುರಸಬೇಕಾಗಿರುವ ಮತ್ತೊಂದು ಶತ್ರುವೆಂದರೆ, ಬ್ರಿಟನ್ನಿನೊಡನೆ ನಿಮಿತ್ತಶತ್ರುವೆನ್ನುವ ಹೊಂದಿ ಆದಕ್ಕೆ ಸಹಾಯಕವಾಗಿರುವ ಗ್ರೀಸ್ ಮತ್ತು ತುರ್ಕಿದೇಶಗಳಾಗಿರುತ್ತವೆ.

ಇಟಲಿಯು ಗ್ರೀಸ್‌ರಾಜ್ಯವನ್ನು ಬೆದರಿಸಿ ಅದನ್ನು ತನ್ನ ಆಧೀನ ಮಾಡಿಕೊಳ್ಳಲು ಪ್ರಯತ್ನಿಸಿತ್ತೆ. ಆದರೆ ಈ ಪ್ರಯತ್ನವು ಸಾರ್ಥಕವಾಗಿರುವುದಿಲ್ಲ. ಈಗ ಇಟಲಿಯವರು ಗ್ರೀಕರಮೇಲೆ ಬಲಪ್ರಯೋಗ ಮಾಡುತ್ತಲಿದ್ದಾರೆ. ಮತ್ತು ಗ್ರೀಕರು ಆದನ್ನು ಧೈರ್ಯವಾಗಿ ಪ್ರತಿಭಟಿಸುತ್ತಲಿದ್ದಾರೆ. ತುರ್ಕಿ ದೇಶವನ್ನು ಜರ್ಮನಿಯವರು ಯಾವಾಗ ಮುತ್ತುತ್ತಾರೆಂಬುದು ಯಾರಿಗೂ ಗೊತ್ತಿಲ್ಲ. ಬ್ರಿಟಿಷ್ ಸೈನ್ಯಪಡೆಗಳವರು ಈಗ ಗ್ರೀಕರ ದ್ವೀಪವಾದ ಕ್ರೇಟ್ ಎಂಬಲ್ಲಿ ಇಳಿದಿರುವುದರಿಂದ ಇದು ಈಗ ತುರ್ಕಿಗೆ ಬಹಳ ಸಮೀಪವಲ್ಲೇ ಇದ್ದಂತಾಗಿದೆ. ಮತ್ತು ತುರ್ಕಿಯನ್ನೆ ನಾದರೂ ಶತ್ರುಗಳು ಮುತ್ತಿಗೆ ಹಾಕಿದ್ದಲ್ಲಿ ಆವರಿಗೆ ಸಹಾಯವನ್ನು ನೀಡುವುದಕ್ಕೂ ಇದರಿಂದ ಸಾಧ್ಯವಾಗಿರುತ್ತದೆ

ಇಟಲಿಯವರು ಗ್ರೀಸ್ ರಾಜ್ಯವನ್ನು ಈಗ ಮುತ್ತಿಗೆ ಹಾಕಿರುವುದರಿಂದ ಕೆನೆಯಲ್ಲಿ ಮೆಡಿಟರೇನಿಯನ್ ಸಮುದ್ರದಲ್ಲಿ ಬ್ರಿಟಿಷರ ಸ್ಥಾನವು ಮತ್ತಷ್ಟು ಬಲಗೊಳ್ಳಬಹುದೆಂದೇ ನಿರೀಕ್ಷಿಸಲಾಗಿದೆ.

(ವೃ ಸ.)

ಶಾಸ್ತ್ರೋಕ್ತ ದಿವ್ಯೌಷಧಗಳು.

ಶ್ರೀ ಜಗದ್ಗುರು ಕೇದಾರಸಂಸ್ಥಾನದ ರಸಾಯನ ಶಾಲೆಯಲ್ಲಿ ತಯಾರಾಗತಕ್ಕ ರಸಾಯನ ಔಷಧಿಗಳು ಅತಿ ಸುಲಭಕ್ರಮದಲ್ಲಿ ದೊರೆಯುವವು.

ಡಿಪೊ ಹೆಸರು	ತೊಲಿ	ಮೂಲ್ಯ
ಸ್ವರ್ಣಮಹೇಶ್ವರಧ್ವಜ	೧	೬೦—೦—೦
ಸ್ವರ್ಣಚಂದ್ರೋದಯ	೧	೧೦—೦—೦
,, ತಿನೇ ನಂಬರ್	೧	೮—೦—೦
ರಸಸಿಂಧೂರ	೧	೩—೦—೦
ಮಲ್ಲಸಿಂಧೂರ	೧	೪—೦—೦
ತಾಲಸಿಂಧೂರ	೧	೪—೦—೦
ಶಿಲಾಸಿಂಧೂರ	೧	೪—೦—೦
ಸ್ವರ್ಣವಂಗ	೧	೩—೦—೦
ತ್ರಿವಂಗ	೧	೧—೦—೦
ಭಸ್ಮಗಳು		
ಸ್ವರ್ಣಭಸ್ಮ	೧	೪೦—೦—೦
ರಜತಭಸ್ಮ	೧	೪—೦—೦
ತಾಮ್ರಭಸ್ಮ	೧	೦—೮—೦
ಲೋಹಭಸ್ಮ	೧	೦—೧೫—೦
ವಂಗಭಸ್ಮ	೧	೦—೮—೦
ನಾಗಭಸ್ಮ	೧	೦—೮—೦
ಮುಕ್ತಾಭಸ್ಮ	೧	೪೦—೦—೦
ಶಂಖಭಸ್ಮ	೧	೩—೦—೦
ಜಿತ್ತಾಳಭಸ್ಮ	೧	೦—೮—೦
ಕಂಚಿನಭಸ್ಮ	೧	೦—೮—೦
ಜಸ್ತಭಸ್ಮ	೧	೦—೮—೦
ನುಂಡೂರಭಸ್ಮ	೧	೦—೮—೦

ನೋಟ್—ಈ ಔಷಧಾಲಯದಲ್ಲಿ ಸರ್ವಪ್ರಕಾರದ ಲೇಹ, ಚೂರ್ಣ, ಗುಟಿಕಾ, ತೈಲ, ಘೃತ, ಗುಗ್ಗುಳಾದಿ ಔಷಧಿಗಳು ಸರ್ವರೋಗಗಳಿಗೆ ದೊರೆಯುವುವು.

ವಿಳಾಸ—ಮ್ಯಾನೇಜರರು,
ಆಯುರ್ವೇಚ ರಸಾಯಶಾಲಾ,
ಸೋಸ್ಯ, ಒದಿಮಕೆ, ಜಲ್ಲಾ, ಗಢವಾಲ್ ಯು.ಪಿ.

ಶಿವಾದ್ವೈತಮಂಜರಿ.

ಈ ಗ್ರಂಥವು ವೀರಶೈವಮತಸ್ಥರಿಗಷ್ಟೆಲ್ಲ ತಿಖಾರತ್ನದಂತೊಪ್ಪುತ್ತಿರುವುದು ಎಲ್ಲರಿಗೂ ತಿಳಿದ ವಿಷಯವಾಗಿದೆ ಈ ಗ್ರಂಥವನ್ನು ಕಾಶ್ಮೀರದೇಶದ ಸ್ವಪ್ರಭುವಿನಿಂದ ಶಿವಾಚಾರ್ಯದೇಶ ಪ್ರಾಚೀನಾಚಾರ್ಯರು ರಚಿಸಿದ್ದಾರೆ. ಈ ಗ್ರಂಥದಲ್ಲಿ ಶಕ್ತಿವಿಶಿಷ್ಟಾದ್ವೈತಸಿದ್ಧಾಂತದ ರಹಸ್ಯವು ಬಹು ಶ್ರದ್ಧಾಮಂಗಮವಾಗಿ ಪ್ರತಿಪಾದಿಸಲ್ಪಟ್ಟಿದೆ. ಈ ಗ್ರಂಥದ ಸರಣಿಯು ಬಹುಕಠಿನವಿದ್ದುದರಿಂದ ಇದರ ರಹಸ್ಯವನ್ನು ತಿಳಿಯಲು ಪಂಡಿತಜನಗಳಿಗೂ ಕೂಡ ಅಸಾಧ್ಯವಾಗಿತ್ತು. ಈ ಕೊರತೆಯನ್ನು ದೂರಮಾಡಿ ಇದರ ರಹಸ್ಯವು ಪ್ರತಿಯೊಬ್ಬರಿಗೂ ತಿಳಿಯಲೆಂಬ ಸದುದ್ದೇಶದಿಂದ ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರು ಈ ಗ್ರಂಥಕ್ಕೆ ಬಹು ವಿಶಾಲವಾಗಿ ಕನ್ನಡ ಟೀಕೆಯನ್ನು ಬರೆಯಿಸಿದ್ದಾರೆ ಈ ಮೂಲ ಗ್ರಂಥವು ಕೇವಲ ೩೮ ಪುಟಗಳಿಂದ ಕೂಡಿದ್ದರೂ ಇದಕ್ಕೆ ಕನ್ನಡ ಟೀಕೆಯು ೧೩೨೩ ಪುಟಗಳಷ್ಟಾಗಿದೆ ಈ ಮಹಾಗ್ರಂಥಮುದ್ರಣಕ್ಕಾಗಿ ಪಂಡಿತರು ವಿಶೇಷ ದ್ರವ್ಯವನ್ನು ವ್ಯಯಮಾಡಿದ್ದಾರೆ. ಇಂಥ ದೊಡ್ಡ ಸಿದ್ಧಾಂತಗ್ರಂಥವು ಇಂದಿನವರೆಗೆ ಕನ್ನಡಭಾಷೆಯಲ್ಲಿ ಎಲ್ಲಿಯೂ ಮುದ್ರಿತವಾಗಿಲ್ಲವೆಂದು ಘಂಟಾಘೋಷವಾಗಿ ಹೇಳಬಹುದಾಗಿದೆ ನನ್ಮುನ್ನಾಳಿನ **ಶ್ರೀಮನ್ಮಹಾರಾಜಾಧಿರಾಜ ಶ್ರೀ ಕೃಷ್ಣರಾಜ ಒಡೆಯರ್ ಬಹದ್ದೂರ್ ಮಹಾಪ್ರಭುಗಳವರು** ಈ ಗ್ರಂಥದ ಯೋಗ್ಯತೆಯನ್ನು ಕಂಡು ಜಿತಿಕೇತನ್ನಿಗೆ ಅಪ್ಪಣೆಯನ್ನಿತ್ತಿರುವರಲ್ಲದೆ, ಈ ಗ್ರಂಥದಲ್ಲಿ ನಿಯೋಜಿಸುವುದಕ್ಕೋಸ್ಕರ ತಮ್ಮ ಭವ್ಯವಾದ ಭಾವಚಿತ್ರವನ್ನು ಸಹ ದಯಪಾಲಿಸಿರುವರು. ಇವರಿಂದ ಈ ಗ್ರಂಥದ ಯೋಗ್ಯತೆಯು ಎಷ್ಟರಮಟ್ಟಿಗಿರಬೇಕೆಂಬ ವಿಷಯವನ್ನು ಬೇರೆ ಹೇಳಬೇಕಾಗಿಲ್ಲ. ಇಂಥ ಅಮೂಲ್ಯವಾದ ವೀರಶೈವಸಿದ್ಧಾಂತಗ್ರಂಥವನ್ನು ಪ್ರತಿಯೊಬ್ಬ ವೀರಶೈವರೂ ಅವಶ್ಯವಾಗಿ ತರಿಸಿಕೊಂಡು ಅದರಲ್ಲಿರುವ ಸಿದ್ಧಾಂತ ವಿಷಯಗಳನ್ನು ತಿಳಿಮೆಗೊಂಡು ಧನ್ಯರಾಗಬೇಕೆಂದು ಕೋರಿಕೆ. ಒಟ್ಟು ಈ ಮಹಾಗ್ರಂಥವು ೧೩೪೪ ಪುಟಗಳಿಂದ ಕೂಡಿದ್ದು ಒಳ್ಳೆ ಬೆಲೆಯುಳ್ಳ ಕಾಗದದಲ್ಲಿ ಮುದ್ರಿಸಲ್ಪಟ್ಟಿರುವದಲ್ಲದೆ ಬಹುಸುಂದರವಾದ ಬೈಂಡಿನಿಂದೊಡಗೂಡಿದೆ. ಪವಿತ್ರವಾದ ವೀರಶೈವ ಸಿದ್ಧಾಂತದಲ್ಲಿ ವಿಶ್ವಾಸವುಳ್ಳ ಪ್ರತಿಯೊಬ್ಬರೂ ಮುದ್ದಿನೆಕಡೆಗೆ ದೃಷ್ಟಿಯನ್ನಿಡದೆ ಈ ಗ್ರಂಥರತ್ನವನ್ನು ತರಿಸಿ ಕೊಡೇ ತೀರಬೇಕು. ಈ ಮಹಾಗ್ರಂಥದ ಬೆಲೆ ಳ ರೂಪಾಯಿ. ಒಂದುರೂಪಾಯಿಗೆ ನಾಲ್ಕಾಣೆಯಂತೆ ಕಮಿಷನ್ ವಜಾ ಹೋಗಲಾಗಿ ೬ ರೂ. ಗೆ ದೊರೆಯುವುದು. ವಿ. ಪಿ. ಚಾರ್ಜು ೧ ರೂ. ೪ ಆಣೆ ಪ್ರತ್ಯೇಕ.

ಮ್ಯಾನೇಜರ್—
ಪಂಚಾಚಾರ್ಯಪ್ರಭಾ ಆಫೀಸ್, ಮೈಸೂರು.

ಮನೋಹರವಾದ ಫೋಟೋಗಳು.

ಶ್ರೀ ರೇಣುಕಾಚಾರ್ಯರ ಒಂಭತ್ತು ಆಪ್ಯತಿಕರೀತಿಗಳಿಂದ ಕೂಡಿದ ಫೋಟೋ ಸೈಜು ೨೦×೧೪ ಬೆಲೆ ರೂಪ್ಯ ೦—೩—೦

ಶ್ರೀ ರೇಣುಕಾವಿ ಪಂಚಾಚಾರ್ಯರು ಲೋಕವಿಖ್ಯಾತರಾದ ಆಸ್ಥಾನ ವಿದ್ವಾನ್ ಪಟ್ಟಾಭಿ ಶಾಸ್ತ್ರಿಗಳವರ ಮತ್ತು ಮಹಾಪ್ರಿಗಳಿಗೆ ಶಿವಸಿದ್ಧಾಂತವನ್ನು ಪಡೆದಿರುವ ಫೋಟೋ ಸೈಜು ೧೦×೧೪ ಬೆಲೆ ೦—೧೦—೦

ಸತ್ಯಃ ಪೀಠಾರೋಹಣಮಾಡಿರತಕ್ಕ ಏಪರು ಆಚಾರ್ಯರು ಒಂದರಲ್ಲಿಯೇ ಇರುವ ಫೋಟೊ ಸೈಜು ೧೪×೧೦ ಬೆಲೆ ೦—೧೦—೬

ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾಪತಾರದ ಫೋಟೋ ಸೈಜು ೧೪×೧೦ ಬೆಲೆ ೦—೧೦—೬

ಶ್ರೀ ಜಗದ್ಗುರು ಪಂಚಾಚಾರ್ಯರು ಲಿಂಗಾಚಾರದ ಫೋಟೋ ಸೈಜು ೧೦×೮ ಬೆಲೆ ೦—೮—೦

ಶ್ರೀ ಜಗದ್ಗುರು ರುದ್ರಮುನೀಶ್ವರ ಶಿವಾಚಾರ್ಯರು ಭೂಗರ್ಭದಿಂದ ಅವತರಿಸಿರುವ ಫೋಟೊ. ೦—೧೦—೮

ಶ್ರೀ ರೇಣುಕಾಚಾರ್ಯರು ರುದ್ರಮುನೀಶ್ವರ ಶಿವಾಚಾರ್ಯರಿಗೆ ಕಟ್ಟಾಭಿಷೇಕ ಮಾಡಿರುವ ಫೋಟೊ ೦—೧೦—೮

ಶ್ರೀ ರೇಣುಕಾಚಾರ್ಯರು ವಿಭೀಷಣನ ಪ್ರಾರ್ಥನಾನುಸಾರವಾಗಿ ವಿಕಟ ಮಾಯೆ ಮಂತ್ರೋಪದೇಶವನ್ನು ಧಾರಣಮಾಡಿ ಮೂರುಕೆ ಲಿಂ ಶಿವಲಿಂಗಗಳನ್ನು ಪ್ರತಿಷ್ಠಿಸುವ ಫೋಟೊ ೦—೧೦—೮

ಶ್ರೀ ರೆ ಚಾರ್ಯರು ಶ್ರೀ ಶಂಕರಾಚಾರ್ಯರಿಗೆ ಪಟ್ಟಾಭಿಷೇಕ ಮಾಡಿ ಕಿರುವ ಫೋಟೊ ೦— —೮

ಶ್ರೀಕಾಶೀಕ್ಷೇತ್ರದಲ್ಲಿ ಜಪವಾನ ಶ್ರೀ ಜಗದ್ಗುರು ವಿಶ್ವಾರಾಧ್ಯರು ಮಾ ಪ್ರತಿಷ್ಠೆ ಮಾಡಿರುವ ಫೋಟೊ —೦—೮

ಶ್ರೀ ಕಾಶೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಪ ತಾ ಪ್ರತಿಷ್ಠೆ ಮಾಡಿರುವ ಫೋಟೊ ೦—೦—೮

ಶ್ರೀಮಜ್ಜಯೀ ಸಿಂಹಾಸನಾಧೀಶ್ವರ ಶ್ರೀ ಜಗ ರು ಪ್ರತಿಷ್ಠೆ ಮಾಡಿರುವ ಫೋಟೊ — —೮

ಶ್ರೀಮದ್ರಂಭಾಪುರೀ ಸೀಹಾಸನಾಧೀಶ್ವರ ಜಗದ್ಗುರು ಶ್ರೀ ವೀರ ರುದ್ರ ಮುನೀಶ್ವರ ಶಿವಾಚಾರ್ಯರು ಪ್ರತಿಷ್ಠೆ ಮಾಡಿರುವ ಫೋಟೊ —೦—೮

ಶ್ರೀಮಜ್ಜಯೀ ಜಗದ್ಗುರುಗಳು ಸನ್ಮಾನಿಸಿ ಪ್ರತಿಷ್ಠೆ ಮಾಡಿರುವ ಫೋಟೊ ೦—೦—೮

ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಫೋಟೊ ೦—೦—೮

ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಮಹಾ ಪ್ರತಿಷ್ಠೆ ಮಾಡಿರುವ ಫೋಟೊ ೦—೦—೮

ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಅತ್ಯ ಪ್ರತಿಷ್ಠೆ ಮಾಡಿರುವ ಫೋಟೊ ೦—೦—೮

ಶ್ರೀ ಜಗದ್ಗುರು ಕೇದಾ ಸಿಂಹಾಸನದ ಅತ್ಯಂತ ಪ್ರತಿಷ್ಠೆ ಮಾಡಿರುವ ಫೋಟೊ ೦—೦—೮

ಹಿಮಪರ್ವತಾದಿಯಲ್ಲಿ ಸುಪ್ರಸಿದ್ಧ ಶೋಭಿಸುವ ಶ್ರೀ ಕೇದಾರ ಪ್ರತಿಷ್ಠೆ ಮಾಡಿರುವ ಫೋಟೊ —೦—೮

ಶ್ರೀರಂಭಾಪುರೀ ಜ ಮ್ಮುರುಗಳನ್ನು ಸನ್ನಿಧಿಯಲ್ಲಿ ಶ್ರೀ ಪ್ರತಿಷ್ಠೆ ಮಾಡಿರುವ ಫೋಟೊ — —೮

ಬೆಂಗಳೂರು ಕಂಟೋನ್ಮೆಂಟಿನಲ್ಲಿ ನೆಲೆಸಿರುವ ರಂಭಾ ಪೀಠದ ಜಗದ್ಗುರುಗಳು ಶ್ರೀ ಪ್ರತಿಷ್ಠೆ ಮಾಡಿರುವ ಫೋಟೊ ೦—೦—೮

ಸೂಚನೆ—ಒಂದು ರೂಪಾಯಿಗಿಂತಲೂ ಹೆಚ್ಚಿನ ಬೆಲೆಯ ಫೋಟೋಗಳಿಗೆ ಶೇಕಡಾ ೨೫ ರಿಯಾಯಿತಿ

ಮೇಲೆ ತಿಳಿಸಿರುವ ಫೋಟೋಗಳನ್ನು ಪಾರ್ಸೆಲ್ ಮೂಲಕ ಕಳುಹಿಸಲಾಗುವುದು. ಹಣವನ್ನು ಕಳುಹಿಸಿದ ಮೇಲೆ ಫೋಟೋಗಳನ್ನು ಕಳುಹಿಸಲಾಗುವುದು.

ಮ್ಯಾನೇಜರ್—ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ ಮೈಸೂರು

ಡಾಕ್ಟರ್ ಜಿ ಬಿ ಯವರ

ಸುಗಂಧ ನಶ್ಯದಪುಡಿ

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದಪುಡಿಯು ಕಂಡುಹಿಡಿಯಲ್ಪಟ್ಟು ಸಾವಿರಾರುಮಂದಿಗಳು ಇದನ್ನು ಉಪಯೋಗಿಸಿ ಸಾವಿರಾರುಗಳಲ್ಲಾ, ಯೋಗ್ಯತಾಪತ್ರಗಳನ್ನು ಕೊಟ್ಟಿರುವರು ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವುವೆಂದರೆ —ಪೀನಸಿ ಒಂಟೆ ತಲೆನೋವು, ತಲೆಯಲ್ಲಿಯ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವ ವ್ಯಾಧಿಗಳು, ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವವಲ್ಲದೆ ಕರಕ್ಕೆ ಮೇಲ್ಬಟ್ಟ ವ್ಯಾಧಿಗಳನ್ನು ಸ್ವಸ್ಥಪಡಿಸಿ ಜ್ಞಾಪಕಶಕ್ತಿಯನ್ನೂ ಸಹ ಹೆಚ್ಚುಮಾಡುತ್ತದೆ ಮೂರುಬಿಟ್ಟಿನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದಪುಡಿಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಮಾಡಿದರೆ ಎಲ್ಲವೂ ಪರಿಮಳವಾಗುವುದು ಇವನ್ನು ಅನೇಕಪ್ರಭುಗಳು ಉಪಯೋಗಿಸುತ್ತಿರೆ ಮಾದರಿ ಸೀಸೆ ಫ್ರೀ ಪೊಷ್ಟು ಒಂದಕ್ಕೆ ೪ ಆಣೆ ತಜ್ಞ ಒಂದಕ್ಕೆ ಕ್ರಯ ರೂ ೨ ೮ ೦ ವಿಪಿ ೮ ಆಣೆ ಪ್ರತಿಸ್ಸನ್ನು ತಿಳಿಯಿಸುವಂತೆ ಬರೆಯಿರಿ

ಗುರುಬಸವ ಅಂಡ್ ಕಂಪೆನಿ ಲಿಮಿಟೆಡ್,

[?] ಪೋ ಬಾ ನಂಗಂ ಮದರಾಸು

ಸರ್ವೋತ್ತಮವಾದ ಮತಗ್ರಂಥಗಳು

ಗೋತ್ರಸೂತ್ರಪಟ (೫ನೆಯ ಆವೃತ್ತಿ)	೧ ಆಣೆ
ಷಡ್ಯಾಸಾಶ್ರಮವಿಮರ್ಶ (೩ನೆಯ ಆವೃತ್ತಿ ಸಂಸ್ಕೃತ)	೧ ಆಣೆ
ಪಂಚವಿಂಶತಿ ಪ್ರಶ್ನಪ್ರಕಾಶ (೩ನೆಯ ಆವೃತ್ತಿ)	೧ ಆಣೆ
ಶ್ರೀಪಂಚಾಚಾರ್ಯ ಮಂಗಲಸ್ತೋತ್ರಾವಳಿ (೯ನೆಯ ಆವೃತ್ತಿ)	೧ ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ (೩ನೆಯ ಆವೃತ್ತಿ)	೧ ಆಣೆ
ಶ್ರೀಜಗದ್ಗುರು ಪಂಚಾಚಾರ್ಯರಿಗೆ ನಾಮಾವಳಿ (೩ನೆಯ ಆವೃತ್ತಿ)	— ಆಣೆ
ಉಸವಾದಿಪಿಜಿತತ್ವದರ್ಪಣ (೪ನೆಯ ಆವೃತ್ತಿ)	೨ ಆಣೆ
ಶ್ರೀರೇಣುಕಾಚಾರ್ಯಕಶಕ (೩ನೆಯ ಆವೃತ್ತಿ)	೨ ಆಣೆ
ಪಂಚಾಚಾರ್ಯಪ್ರಭಾಕರ	೨ ಆಣೆ
ಶ್ರೀಗುರುತತ್ತ್ವಪದಗಳು	೨ ಆಣೆ
ಶ್ರೀರುದ್ರಮುನಿಶಿವಾಚಾರ್ಯಕತಕ	೨ ಆಣೆ
ವೀರಶೈವಮತಮಿಮಾಂಸಾ	೩ ಆಣೆ
ವೀರಶೈವಾಚಾರವಿಧಿ (೩ ನೆಯ ಆವೃತ್ತಿ)	೩ ಆಣೆ
ಲಿಂಗಧಾರಣವಿಧಿ	೪ ಆಣೆ
ವಿವಾಹವಿಧಿ (೩ನೆಯ ಆವೃತ್ತಿ)	೪ ಆಣೆ
ಶ್ರೀಪತಿಪಂಡಿತಾರಾಧ್ಯರ ಕಾಲನಿರ್ಣಯ	೪ ಆಣೆ
ಷಡ್ಯಾಸಾಶ್ರಮವಿಮರ್ಶತತ್ತ್ವಸ್ಫೋರಿಕರಣ (೩ನೆಯ ಆವೃತ್ತಿ)	೬ ಆಣೆ
ಸಿದ್ಧಾಂತ ಶಿಖಾಮಣಿ (ಮೂಲಮಾತ್ರ ಚಿಕ್ಕಸೈಜು)	೬ ಆಣೆ
ವೀರಶೈವಮಹಾತ್ಮರು	೮ ಆಣೆ
ಉಸವಧ್ಯಾನತದಿವ ಕರ (೩ನೆಯ. ಆವೃತ್ತಿ)	೮ ಆಣೆ
ಶಿವಾದ್ವೈತಪರಿಭಾಷಾ (ಸಂಸ್ಕೃತ)	೮ ಆಣೆ
ಪಂಡಿತ ಶ್ರೀಕಾಶೀನಾಥಶಾಸ್ತ್ರುಲವಾರಿ ಧಾತಚಯಮು (ತೆಲುಗು)	೮ ಆಣೆ
ಷಡ್ಯೋಧರತ್ನಾವಳಿ	೮ ಆಣೆ
ವೈದಿಕಶಿವಪೂಜಾವಿಧಿ (ಸ್ಪಷ್ಟಿಕಸ್ಥರಯುಕ್ತವಾದ ಅತ್ಯಂತ ಸುಂದರಮುದ್ರಣ)	೧೨ ಆಣೆ
ಸಿದ್ಧಾಂತಸಾರಾವಳಿ (ಶ್ರೀ ಲೋಚನಶಿವಾಚಾರ್ಯರ್ಯರಿತ)	೧೨ ಆಣೆ
ಶ್ರೀಜಗದ್ಗುರು ಪಂಚಾಚಾರ್ಯ ಸ್ತೋತ್ರಶತಕಾವಳಿ	೧೨ ಆಣೆ
ಮಾಹೇಶ್ವರ ದೀಕ್ಷಾವಿಧಿ (೩ನೆಯ ಆವೃತ್ತಿ)	೧೨ ಆಣೆ
ಶಿಕ್ಷಾಸೂತ್ರಸಿದ್ಧಾಂತದರ್ಪಣ	೧೨ ಆಣೆ
ಶ್ರೀಕರಧಾಖ್ಯಂ (ಚಕಸೂತ್ರಿ)	೧ ರೂ
ಸಚಿತ್ರ ರೇಣುಕವಿಜಯ (೩ನೆಯ ಆವೃತ್ತಿ)	೧ ರೂ
ವೀರಶೈವರತ್ನ (೫ನೆಯ ಆವೃತ್ತಿ, ೧೦ಮಹತ್ವದ ಫೋಟೋಗಳಿರುವುವು)	೧। ರೂ
ಸಿದ್ಧಾಂತಶಿಖಾಮಣಿ (ಕನ್ನಡ ಟೀಕಾಸಹಿತ)	೧ ರೂ
ಕಲ್ಯೋಪನಿಷತ್ (ಕನ್ನಡ ಟೀಕಾಸಹಿತ)	೧ ರೂ
ರೇಣುಕವಿಜಯ ಮಹಾಪುರಾಣ (ಕನ್ನಡ ಭಾವಿಸೀಪಸ್ಥರಿ)	೧ ರೂ
ಸಿದ್ಧಾಂತಶಿಖಾಮಣಿ (ಕನ್ನಡ ಟೀಕಾಸಹಿತ)	೨ ರೂ
ವೀರಶೈವಸಿದ್ಧಾಂತಸುಧಾಕರ	೨ ರೂ
ಶಿವಾಪ್ಪಯ್ಯ ದೀಕ್ಷಿತಮಂಜರಿ (ಕನ್ನಡವ್ಯಾಖ್ಯಾನ ೧೩೩೩ ಪುಟ)	೮ ರೂ
A brief life-sketch of Pandit Sri Kashinatha Shastriyu (*English*)	**4 As**
The Philosophical Aspect of Virasaivism (*English*)	**8 As**
Speeches by Pandit Shri Kashinatha Shastriyu *English*)	**12 As**
ವೀರಶೈವರತ್ನ (ಮರಾಠಿ)	೧ ಕ
ಮಹಾನಾರಾಯಣೋಪನಿಷತ್ (ವೀರಶೈವಾಭಾಷ್ಯ ಸಕ್ಕತ)	೧ ಕ
ವೀರಶೈವೇತಿಹಾಸ (ಸಕ್ಕತ)	೧ ಕ
ಸದಿಕೋಪಾಸನಾಸಿದ್ಧಿಕಾ (ಸಕ್ಕತ)	೨ ಆ
ಲಿಂಗಧಾರಣಚಂದ್ರಿಕಾ (ಸಕ್ಕತ)	೩ ಕ

೧ ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ ಪಿ ಕಳುಹಿಸುವುದಿಲ್ಲ ೫ ರೂ ಗಳಿಗೆ ಮೇಲ್ಪಟ್ಟು ಪುಸ್ತಕಗಳನ್ನು ತರಿಸಿಕೊಳ್ಳುವವರಿಗೂ ಪುಸ್ತಕ ವ್ಯಾಪಾರಿಗಳಿಗೂ ೧ ರೂ ಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವುದು

ಮ್ಯಾನೇಜರ್—ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು

ಮೈಸೂರು ಸಯ್ಯಾಜಿರಾವ್ ರೋಡಿನವರಿಂದ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರಿಸ್ಸಿನ ಸಂಪಾದಕರಾದ ವೇ॥ ಪಂಡಿತ ಶ್ರೀ ಇಷ್ಟಾಶಕಶಾಸ್ತ್ರಿಗಳವರಿಂದ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED No M 2266 ॥ ಶ್ರೀಜಗದ್ಗುರು ಪಂಚಾಚಾರ್ಯಾಯ ಪ್ರಸೀದಂತು ॥ REGISTERED No. M 2266

ಪಂಚಾಚಾರ್ಯ ಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿತರ್ ಪಂಚಾಸ್ಯಪೀಠಾಧಿಪರ್ । ಪಂಚಕ್ಲೇಶವಿನಾಶಕರ್ ಪರತರಶ್ರೀಸಂಜಲಿಂಗೇಶ್ವರರ್ ॥
ಪಂಚಾಚಾರವಿಯಾಮಕರ್ ಪರಿಲಸತ್ಪಂಚಾಕ್ಷರೀಮೋಧಕರ್ । ಪಂಚಾಚಾರ್ಯಜಗದ್ಗುರೂತ್ತಮರವರ್ ತ್ಕಾರಿಪ್ಪುದೀಲೋಕಮಂ ॥

ಸ್ಥಳದ... ರೂ ೧೧ ಆಣೆ ಬಿಡಿ ಪ್ರತಿ ೧೯ಕ್ಕೆ ೬ ಪೈ ಪರಸ್ಥಳದವರಿಗೆ ೩ ರೂ ೮ ಆಣೆ ವಿ ಪಿ ಚಾರ್ಜು ಪ್ರತ್ಯೇಕ

ಸಂಪುಟ ೧೪.] ಪಂಚಾಚಾರ್ಯಪ್ರಭಾ, ಸೋಮವಾರ ತಾ॥ ೧೮ ನೇ ನವಂಬರ್ ೧೯೪೦ [ಸಂಚಿಕೆ ೩೮

ಹಿಟ್ಲರ್-ಮಸೂಲಿನಿ ಭಿನ್ನಾಭಿಪ್ರಾಯವೇ?

ಲಂಡನ್ ಟೈಂಸ್ ಪತ್ರಿಕೆಯ ಸುದ್ದಿಗಾರರು ಇಟಲಿಯ ಗಡಿಯಿಂದ ಈ ರೀತಿ ಬರೆಯುತ್ತಾರೆ —

"ಫ್ಲಾರೆನ್ಸ್ ನಗರದಲ್ಲಿ ಹರ್ ಹಿಟ್ಲರ್‌ರವರಿಗೂ ಶ್ರೀ ಮುಸೂಲಿನಿಯವರಿಗೂ ಭೇಟಿಯಾಯಿತಲ್ಲಿ! ಹರ್ ಹಿಟ್ಲರ್‌ರವರೇ ಆ ಭೇಟಿಯನ್ನು ಏರ್ಪಡಿಸಿದ್ದೆಂಬ, ಹಿಟ್ಲರವರಿಗೂ ಮುಸೂಲಿನಿಯವರಿಗೂ ತೀವ್ರವಾದ ಭಿನ್ನಾಭಿಪ್ರಾಯಗಳುಂಟಾದುದೇ ಆ ಭೇಟಿಗೆ ಕಾರಣವಾಯಿತೆಂಬ ರೋಂ ನಗರದ ಡಿಪ್ಲೋಮ್ಯಾಟಿಕ್ ಕ್ಷೇತ್ರಗಳಲ್ಲಿ ಅಭಿಪ್ರಾಯಪಡಲಾಗಿದೆ ಹರ್ ಹಿಟ್ಲರ್‌ರು ಇಟಲಿಗೆ ಸೊನ್ನೆ ಹಾಕಿ ಸ್ಪೇನ್ ಮತ್ತು ಫ್ರಾನ್ಸ್‌ಗಳಿಗೆ ರಿಯಾಯಿತಿಯನ್ನು ತೋರಿಸಕೂಡದೆಂದು ಮಸೂಲಿನಿಯವರು ಅಭಿಪ್ರಾಯಪಟ್ಟಿದ್ದರು ಸ್ಪೇನ್ ಮತ್ತು ಫ್ರಾನ್ಸ್‌ಗಳಿಗೆ ರಿಯಾಯಿತಿಯನ್ನು ತೋರಿಸುವುದರಿಂದ, ಇಟಲಿಯ ಸಂಗ್ರಾವ ವನ್ನು ಸೇರಲು ತೋರಿಸಿದ್ದ ಆಸೆಯು ನೆರವೇರುವುದಿಲ್ಲವೆಂದು ಮಸೂಲಿನಿಯವರು ಭೀತಿಪಟ್ಟಿರಂದು ತಿಳಿಸಬಹುದಿದೆ ಕಾರ್ಸಿಕ ಮತ್ತು ಸವಾಯ್‌ಗಳನ್ನು ಇಟಲಿಗೆ ಕೊಡುವುದಿಲ್ಲವೆಂದೂ, ನೈಸ್ ಪ್ರಾಂತ್ಯವನ್ನೂ ಕೂಡ ಇಟಲಿಗೆ ಬಿಟ್ಟು ಕೊಡಲ್ಲಾಗುವುದಿಲ್ಲವೆಂಬ ದೂ ಈಗ ಪ್ರಸ್ತಾವಾಗಿದೆ

ಹಿಟ್ಲರ್‌ರವರು ಸ್ಪೇನ್ ಮತ್ತು ಫ್ರಾನ್ಸ್‌ಗಳಿಗೆ ತೋರಿಸಬೇಕೆಂದಿದ್ದ ರಿಯಾಯಿತಿಗಳು ಮಸೂಲಿನಿಯವರಿಗೆ ಗೊತ್ತಾದ ಕೂಡಲೇ ಗ್ರಿಸ್‌ನೇಲ್ ಮುತ್ತಿಗೆ ನಡೆಸಬಹುದೆಂದು ನಿರ್ಧರಿಸಿದರು ಯದ್ಧವನ್ನು ಹೊಡುವುದಕ್ಕಿಂತ ಮುಂಚಿತವಾಗಿ ತಮಗೆ ಕೂಡಿಸಿ ಕೊಡುವುದಾಗಿ ಇತ್ತಿದ್ದ ಭರವಸೆಗಳನ್ನು ಅದಷ್ಟು ಬೇಗನ ಪೂರ್ಣ ಮಾಡಿಕೊಳ್ಳುವುದಕ್ಕಾಗಿ ಗ್ರೀಸಿಗೆ ಮುತ್ತಿಗೆ ಹಾಕಿದರು ಫ್ರಾನ್ಸ್‌ನೊಡನೆ ಒಪ್ಪಂದಮಾಡಿಕೊಳ್ಳುವುದಕ್ಕೆ ಕಾಯುವುದು ಅವರಿಗೆ ಇಷ್ಟವಿರಲ್ಲಿಲ್ಲ ಬರ್ಲಿನ್ ೧ ಸೈಗ್ ವಿಚಾರದಲ್ಲಿ ಅನುಸರಿಸಬೇಕಾಗಿದ್ದ ನೀತಿಗೆ ಇದರಿಂದ ವ್ಯತಿರಿಕ್ತವಾಗಿತ್ತು ಗ್ರೀಸ್ ಮುತ್ತಿಗೆಯನ್ನು ನಿಲ್ಲಿಸಿ ಬೇಕೆಂದು ಹಿಟ್ಲರರೂ ರಿಬನ್‌ಟ್ರಾಪರವರೂ ಪಟ್ಟು ಪ್ರಯತ್ನವು ತಡವಾದ ಪ್ರಯುಕ್ತ ನಿರರ್ಥಕವಾಯಿತು

ಹಿಟ್ಲರ್‌ರವರೂ ಮಸೂಲಿನಿಯವರೂ ಪರಸ್ಪರ ಮಾತ್ರಕಾಡಿದಾಗ ಸ್ವಲ್ಪ ಘರ್ಷಣವಾಗಿ ಕೊನೆಗೆ ಇಬ್ಬರಿಗೂ ಸಮಾಧಾನವಾಯಿತೆಂದೂ ಹಿಟ್ಲರ್‌ರವರು ತಾವು ಕೈಗೊಂಡ ಕಾರ್ಯಕ್ರಮಕ್ಕೆ ಕಾರಣಗಳನ್ನು ವಿವರಿಸಿದ ಮೇಲೆ ಆ ಕಾರಣಗಳನ್ನು ಮಸೂಲಿನಿಯವರು ಒಪ್ಪಿಕೊಂಡರೆಂದೂ ತಿಳಿಯಬಂದಿದೆ

ಹಿಟ್ಲರ್‌ರವರಿಗೂ ಮಾರ್ಷಲ್ ಪೆಟೈನ್‌ರವರಿಗೂ ಮಾಡಲಿಕೆಯ ಒಪ್ಪಂದವೂ ಆಗಿಲ್ಲ 'ಆಕ್ಸಿಸ್' ರಾಷ್ಟ್ರಗಳ ಆರೋಚನೆಯಂತೆ ಯುರೋಪಿನಲ್ಲಿ ಹೊಸ ವ್ಯವಸ್ಥೆಯ ನಿರ್ಣಾಣಪಯತ್ನಕ್ಕೂ ಬ್ರಿಟನ್ನಿನೊಡನೆ ಫ್ರಾನ್ಸ್ ಸಂಬಂಧವನ್ನು ಸಂಪೂರ್ಣವಾಗಿ ಕೃಡಿಸಿಬಿಡವ ವಿಚಾರದಲ್ಲಿಯೂ ಒಪ್ಪಂದವಾಗಿದೆಯೇ ಹೊರತು ಇನ್ನಿವ ಬಗೆಯ ಒಪ್ಪಂದವೂ ಆಗಿಲ್ಲ ಸ್ಪೇನಿನಲ್ಲಿ ಆಹಾರಸಾಮಗ್ರಿಗಳಿಗೂ, ಹತ್ತಿ ಬಟ್ಟೆಗಳಿಗೂ ಬಹಳ ಕೊರತೆ ಯುಂಟಾಗಿರುವುದರಿಂದಲೂ, ಜರ್ಮನಿಯು ಆ ವಸ್ತುಗಳನ್ನು ಸರಬರಾಯಿ ಮಾಡುವುದಕ್ಕೆ ಸಾಧ್ಯವಿಲ್ಲದೆ ಇರುವದರಿಂದಲೂ, ಬ್ರಿಟನ್ ಬ್ಲಾಕೇಡ್ ಮಾಡುವದಾದರೆ ಅವುಗಳನ್ನು ಒದಗಿಸುವುದು ಕಷ್ಟವಾಗುವದರಿಂದಲೂ ಸ್ಪೇನ್ ಯುದ್ಧದಲ್ಲಿ ಸೇರುವುದಕ್ಕೆ ಇಷ್ಟಪಡಲಿಲ್ಲವೆಂದು ಮಸೂಲಿನಿಯವರಿಗೆ ಹಿಟ್ಲರ್‌ರವರು ತಿಳಿಸಿದರೆಂದು ಪ್ರತೀತಿ ಫ್ರಾನ್ಸ್‌ದೇಶವು ಜರ್ಮನಿಗೆ ಸಂಪೂರ್ಣ ಸಹಾಯವನ್ನು ಕೊಡುವ ವಿಚಾರದಲ್ಲಿ ತಕ್ಕ ಕಾರ್ಯಕ್ರಮಗಳನ್ನು ಕೈಗೊಳ್ಳಲು ಲವಾಲ್‌ರವರು ಅಸಮರ್ಥರಾಗಿರುವರೆಂಬುದೇ ಹಿಟ್ಲರರ ಅಭಿಪ್ರಾಯ ಬ್ರಿಟನ್ನಿನಿಂದ ಬರುವ ರೇಡಿಯೋ ವರ್ತಮಾನಗಳನ್ನ ಪ್ರೆಂಚ್ ಪ್ರಜೆಗಳು ಕೇಳದಂತೆ ಮಾಡಬೇಕೆಂದು ಜರ್ಮನಿಯು ಸೂಚಿಸಿದ್ದುದನ್ನ ಆಚರಣೆಗೆ ತರಲು ಲವಾಲ್‌ರವರು ಅಸಮರ್ಥರಾಗಿರುವುದು, ಈ ಅಭಿಪ್ರಾಯವನ್ನು ಬಲಪಡಿಸುವುದು ಫ್ರಾನ್ಸಿನಲ್ಲಿ ಕಾರ್ಖಾನೆಗಳಲ್ಲಿ ತಯಾರಾಗುವ ಸಂಗ್ರಾಮ ಸಾಮಗ್ರಿಗಳನ್ನು ಜರ್ಮನಿಗೆ ಕೊಡುವುದಾದರೆ ಆ ಕಾರ್ಖಾನೆಗಳನ್ನ ಪಿತೂರಿಯಿಂದ ನಡೆಸಿ ಕಾರ್ಖಾನೆಗಳೇ ನಾಶವಾಗಬಹುದೆಂಬ ಭೀತಿಯುಂಟಾಗಿದೆ

ಇಟಲಿ ನೌಕಾಬಲಕ್ಕೆ ಬಲವಾದಪೆಟ್ಟು!

ಟೂರಂಟೊ ಕೊಲ್ಲಿಯಲ್ಲಿ ಇಟಲಿಯ ಮುಖ್ಯ ನೌಕಾ ಬಲವು ತರಬೇತ್ಪುಯೋಜನೆಯಂತೆ ನಿಂತಿತ್ತು ನವೆಂಬರ್ ೧೧ ನೆಯ ತಾ॥ ರಾತ್ರಿ ಬ್ರಿಟಿಷ್ ವಿಮಾನಗಳು ಮುತ್ತಿಗೆ ನಡೆಸಿದವು ಅನಂತರ ಪರೀಕ್ಷೆ ನಡೆಸಿ ವ ವಿಮಾನಗಳು ಆ ಕ್ಷೇತ್ರವನೆಲ್ಲಾ ಹಾರಾಡಿ ಎಲ್ಲಿ ಆದ ನಷ್ಟವನ್ನು ಕಂಡುಹಿಡಿಯಲು ಫೋಟೋಗ್ರಫಿಯನ್ನು ತೆಗೆಸುಕೊಂಡವು

ಇಟಲಿಯ ಒಂದು ಸಂಗ್ರಾವ ನೌಕೆಗೆ ಭಾರಿ ಪೆಟ್ಟು ಬಿದ್ದು ಅದರ ಸ್ವಲ್ಪಭಾಗವು ಸ್ಪೀನಿನಲ್ಲಿ ಮುಳುಗಿದ ಇನ್ನೊಂದು ಸಂಗ್ರಾಮನೌಕೆಯನ್ನು ದಡಕ್ಕೆ ತಳ್ಳಲಾಗಿದೆ ೩ನೇ ಸಂಗ್ರಾಮನೌಕೆಯೊಂದಕ್ಕೆ ಬಹಳ ನಷ್ಟವಾಗಿರುವ ಹಾಗೆ ತೋರಿಬರುತ್ತದೆ ಬಂದರಿನ ಒಳಗೆ ಇದ್ದ ಎರಡು ಕ್ರೂಯಿಜರುಗಳು 'ಸ್ಯಾರ್‌ಬೋರ್ಡ್' ವರೆಗೆ ಓರೆಯಾಗಿ ಸ್ಪೀನಿನಲ್ಲಿ ಮುಳುಗಿವೆ. ಸುತ್ತ ಎಣ್ಣೆಯು ತೇಲುತ್ತಿದೆ ಇನ್ನೆರಡು ನೌಕೆಗಳು 'ಸ್ಟರ್ನ್' ವರೆಗೆ ನೀರಿನಲ್ಲಿ ಮುಳುಗಿವೆ ಅಲ್ಲಿ ಒಟ್ಟು ೬ ಇಟಲಿ ಸಂಗ್ರಾಮನೌಕೆಗಳದ್ದವು ೨ ನೌಕೆಗಳು ತೀರಾಹೊಸವು ಬ್ರಿಟಿಷರ ನಡೆಯಿಸಿದ ಈ ಮುತ್ತಿಗೆಯ ಫಲವಾಗಿ ಈಗ ಮೂರು ಇಟಲಿ ನೌಕೆಗಳು ಮಾತ್ರ ಕೆಲಸಮಾಡಲು ಯೋಗ್ಯವಾಗಿರಬಹುದು

ಒಂದು ಸಂಗ್ರಾವ ನೌಕೆಗೆ ಬಹಳ ನಷ್ಟವಾಗಿದೆ ಯೆಂದು 12ನೆಯ ತಾ॥ ದಿನ ಹೊರಟ ಇಟಲಿ ಪ್ರಕಟಣೆಯಲ್ಲಿ ಒಪ್ಪಿಕೊಳ್ಳಲಾಗಿದೆ ಮೆಡಿಟರೇನಿಯನ್‌ನಲ್ಲಿರುವ ಬ್ರಿಟಿಷ್ ನೌಕೆಗಳು ಲಿಬ್ಯಾಕ್ಕೂ ಇಟಲಿಗೂ ಇರುವ ಸಂಬಂಧಕ್ಕೆ ತೊಂದರೆಯನ್ನುಂಟುಮಾಡಿದವು 9 10 ನೆಯ ತಾ॥ ರಾತ್ರಿ ಸಿಬರಾನಿ ವೇಲೆ ಬೆಲ್ಗ್‌ಗಳನ್ನು ಹಾರಿಸಲಾಯಿತು ದಡದಿಂದ ಇದಕ್ಕ್ಯುತ್ತರವಾಗಿ ಶತ್ರುಗಳು ಗುಂಡುಹಾರಿಸಿದರು ಆದರೆ ಬ್ರಿಟಿಷ್ ಹಡಗುಗಳಿಗೆ ನಷ್ಟವೇನೂ ಆಗಿಲ್ಲ ಇತ್ತೀಚೆಗೆ ಬ್ರಿಟಿಷ್ ಬಾಂಬ್ ಮೇರೀನು ಸಾಮಾನು ತುಂಬಿದ ಎರಡು ದೊಡ್ಡ ಶತ್ರು ಹಡಗುಗಳನ್ನು ಮುತ್ತಿತ 3000 ಟನ್ ತೂಕದ ಹಡಗೊಂದನ್ನು ಮುಳುಗಿಸಲಾಯಿತು ಎರಡನೆಯದಕ್ಕೆ ನಷ್ಟವನ್ನುಂಟುಮಾಡಲಾಯಿತು

ಬ್ರಿಟನ್ನಿನಲ್ಲಿ ವಿಮಾನದಾಳಿಗೆ ತುತ್ತಾದವರ ಸಂಖ್ಯೆ

ಕಳೆದ ಆಕ್ಟೋಬರ್ ತಿಂಗಳು ಬ್ರಿಟನ್ನಿನಲ್ಲಿ ವಿಮಾನದಾಳಿಗೆ ತುತ್ತಾಗಿ ಸತ್ತವರು ಒಟ್ಟು ೬೩4 ಜನರು ಅವರಲ್ಲಿ 2900 ಜನ ಹೆಂಗಸರು, 643 ಜನ ಮಕ್ಕಳು, 791 ಜನ ಗಂಡಸರು ಾಯಗೊಂಡವರು—3750 ಜನ ಹೆಂಗಸರು, 1೯ ಜನ ಮಕ್ಕಳು, 4278 ಜನ ಗಂಡಸರು ಎಂದು ಪ್ರಕಟವಾಗಿದೆ

ವಿಮರ್ಶೆ

ಕಣ್ಣು ಮತ್ತು ಅದರ ರಕ್ಷಣೆ ಎಂಬ ಪುಸ್ತಕವು ನ್ಯೂಸೂರು ವಿಶ್ವವಿದ್ಯಾಲಯದ ಪ್ರಜಾರಪುಸ್ತಕಮಾಲೆಯಲ್ಲಿ ೨೦ ನಮ ಪುಸ್ತವು ಈ ಪುಸ್ತಕವನ್ನು ಶ್ರೀಮಾಡಿ ರಾಮಣ್ಣ ಬಿ ಎ ಎಂ ಬಿ ಬಿ ಎಸ್ ಇವರು ಬರೆದಿದ್ದಾರೆ ಈ ಪುಸ್ತಕವಲ್ಲಿ ಕಿಬ್ಬೆರೆಚನೆ, ಕಣ್ಣುನೋವು, ಮೇಹದ ಕಣ್ಣುನ್ನೋವು ಪೈಕಿ, ನೃಷ್ಟಿಯ ನ್ಯೂನತೆಗಳು, ಇತರ ವ್ಯಾದಿಗಳು ಕಣ್ಣಿಗೆ ಆಗಬಹುದಾದ ಅಪಾಯಗಳು ಕಷ್ಟ ನಿಪುಣಗಳು ಬಹು ಜೆನ್ನಾಗಿ ವಿವರಿಸಲ್ಪಟ್ಟಿರುವವು ಈ ಪುಸ್ತಕವು ೬೨ ಪುಟಗಳಿಂದ ಯುಕ್ತವ ಗಿರುವುದು ಕಣ್ಣಿನಪಯವನ್ನ ತಿಳಿಯಲು ಪ್ರತಿಯೊಬ್ಬರೂ ಸಂಗ್ರಹಿಸತಕ್ಕ ಪುಸ್ತಕವಾಗಿದೆ ಸುಂದರವಾದ ಮುದ್ರಣ ಬೆಲೆ ೨ ಆಣೆ ಮಾತ್ರ

ಪುಸ್ತಕ ದೊರೆಯವ ವಿಳಾಸ—

ಸಂಪಾದಕ ಪ್ರಜಾರಪುಸ್ತಕಮಾಲೆ,
ಮಹಾರಾಜಕಾಲೇಜ್ ಮೈಸೂರು

ಈ ಪುಸ್ತಕದಲ್ಲಿ ಪ್ರತಿಪಾದಿತವಾಗಿರುವ ಕೆಲವು ವಿಷಯಗಳನ್ನ ನಮ್ಮ ಪತ್ರಿಕೆಯಲ್ಲಿ ಪ್ರಕಟಿಸುತ್ತೇವೆ ವಾಚಕರು ಅವಲೋಕಿಸಬೇಕು

ಕಣ್ಣು ನುತ್ತು ಅದರ ರಕ್ಷಣೆ

ಪುಸ್ತಕ ಪರಿಷ್ಕರಿಸುವ ಕೆಲವು ವಿಷಯಗಳು

—

ಕಣ್ಣಿನ ರಚನೆ

ಕಣ್ಣುಗಳು ಬಹು ಸೂಕ್ಷ್ಮವಾದ ಅಂಗಗಳು ಆದುದರಿಂದ ಇವು ಸುಲಭವಾಗಿ ಜಖಮಯಕ್ಕೆ ಒಳಗಾಗದಿರತಕ್ಕ ಪ್ರಕೃತಿಸಾಮಾನ್ಯತೆಯು ಇವನ್ನು ಸಾರ್ವತ್ರಿಕವಾದ ಆವರಣದಲ್ಲಿ ಇಟ್ಟಿರುತ್ತಾಳೆ ಕಣ್ಣುಗಳಿರುವುದು ಸ್ಪಷ್ಟವಾಗಿ ಎಲುಬಿನ ಗೂಡುಗಳಲ್ಲಿ ಎರಡೂ ಸನಿವಾಸದಲ್ಲಿ ಏಟು ತಿಂದರೂ ಸಹಿಸುವ ಅಥವಾ ಕಣ್ಣಯ ಎಲಬುಗಳಿಗೆ ಗುರು ತಾಕಿದ್ದರೆ ಕಣ್ಣುಗಳಿಗೆ ನೇರವಾಗಿ ಏಟು ಬಿದ್ದುದು ಎಂಬ ಸಮಾಧಾನ ಬಹಳ ಪಕ್ಷ ಹಗುರವಾದ ಏಟು ಬಿದ್ದರೂ ಎಂಬ ಸಮಾಧಾನವನ್ನು ಕೊಡಿಸಿದ ಮೇಲೆಯೂ ಮತ್ತು ಗಾಲಿತವಾದರೂ ಇನ್ನಷ್ಟು ಅನ್ನು ಜೋರಾಗಿ ಏಟು ಬೀಳದಿರಲಿ ಕಣ್ಣಿನೊಳಕ್ಕೆ ಕಷ್ಟವಾಗಿ ಬೀಳದಂತೆ ತಡೆಯಲು ಸಾಧ್ಯವಾಗಿ ಮಾಡಿತ್ತೆಗೆಯುವ ಬಾಗಿಲುಗಳಂತೆ ರಕ್ಷಣೆಗಾಗಿ ರಕ್ಷಣೆಗಳು ಅಂಚಿನಲ್ಲಿ ಕೂಡಿಗಿರುತ್ತೆ ಬ್ಯಗಲವಾಗಿ ಕೂದಲುಗಳಿವೆ ಇವು ಕೂಡ ರಕ್ಷಣಾಸಾಧನಗಳೇ ಇವು ಕಣ್ಣಿನೊಳಕ್ಕೆ ಧೂಳು ಬೀಳದಂತೆ ಸ್ವಲ್ಪಮಟ್ಟಿಗೆ ರಕ್ಷಿಸುವುದು ಅಕಸ್ಮಿಕವಾಗಿ ಕಣ್ಣಿನೊಳಕ್ಕೆ ಧೂಳು ಬಿದ್ದರೂ ಸಹ ಹೊರಗೆ ಜಿಗುಪ್ಸೆಯನ್ನು ಕಾಪಾಡುವ ಎರಡು ಇನ್ನಾಂಶಿದೆ ಇದೇ ಕಣ್ಣೀರು ಇದು ಗಡ್ಡೆಯ ಸಲದಲ್ಲಿ ಇರುವ ಗ್ರಂಥಿಗಳಲ್ಲಿ ಉತ್ಪತ್ತಿಯಾಗಿ ಗಡ್ಡೆಯನ್ನು ಯಾವಾಗಲೂ ತೇವವಾಗಿಟ್ಟಿರುವುದಲ್ಲದೆ ಕಸಕಡ್ಡಿ ಧೂಳು ಮೊದಲಾದವು ಕಣ್ಣಿನಲ್ಲಿ ಬಿದ್ದಾಗ ಹೆಚ್ಚು ಹೆಚ್ಚಾಗಿ ಉತ್ಪತ್ತಿಯಾಗಿ ಅವನ್ನು ಹೊರಗೊದ್ದುತ್ತದೆ ಕಣ್ಣೀರು ಹಿಂದಾಗಿ ಉತ್ಪತ್ತಿಯಾಗುವ ಅದೆ ಕಣ್ಣಿನ ಒಳಭಾಗದಿಂದ ನೂಗಿನೊಳಗೆ ಇಳಿದು ಹೋಗುವುದೂ ಉಂಟು ಇದಿಷ್ಟು ಕಣ್ಣಿನ ರಕ್ಷಣೆಯಲ್ಲಿರುವ ಸಣ್ಣಸಲದ ವಿಷಯಗಳು

ಇನ್ನು ಕಣ್ಣಿನ ಗಡ್ಡೆಯನ್ನೇ ತೆಗೆದು ನೋಕ್ಕೋಣ ಇದೆ ಗೋಲಿಯಂತೆ ಗಟ್ಟಿಯಾಗಿದೆ ಸ್ವಲ್ಪ ಕವಚವನ್ನು ಹೊಂದಿದೆ ಹೊರಕವಚವು ಮಧ್ಯ ಒಳಭಾಗ ಕರಿಯದು ಗಿಕಾಣತ್ತದೆ ಸುತ್ತಲೂ ಬಿಳಿಗಿದೆ ಬಿಳಿಯ ಭಾಗವನ್ನು ವಿಳಿಯ ಗಡ್ಡೆಯೆಂದೂ, ಕರಿದಾಗಿ ಕಾಣುವ ಪ್ರವಾಶವು ಗಡ್ಡೆಯ ಮಧ್ಯಭಾಗವು ಕರಿಯ ಪಡೆದಾಗಿ ಎದುರು ಕಡೆಯಲ್ಲಿ ಕಂಡಾಗ ಕರಿಯಾಗಿ ಕಾಣುವ ಭಾಗವು ನಿಜವಾಗಿಯೂ ಆ ಒಳಭಾಗವನ್ನು ಹೊಂದಿರುವುದಿಲ್ಲ ಆ ಒಳಭಾಗವು ಹಿಂದೆ ಗಡ್ಡೆಯ ಸಲದಲ್ಲಿ ಇರುವ ಗ್ರಂಥಿಗಳ ಮೂಲಕ ಜಂಕ್ತಿ ತೊರುವುದು. ಆದರೆ ಬಿಳಿಯ ಗಡ್ಡೆಯ ಸಲಾಲಕ್ಕೆ ಹೋಲಿಸಿದರೆ ಈ ಕರಿಯ ಭಾಗವು ಬಹಳ ಸಣ್ಣದು ಎಂದರೆ ಇದು ಸಾಧಾರಣವಲ್ಲ ಕಣ್ಣಿನೊಳಕ್ಕೆ ಬೇಕು ಹೋಗುವುದೇನಿದ್ದರೂ ಕರಿಯಗ್ಡೆಯ ಮೂಲಕವೇ ಇದು ಮುಂಭಾಗದಲ್ಲಿ ಸ್ವಲ್ಪ ಉಬ್ಬಿರುವುದರಿಂದ ಇದರ ಮೂಲಕ ಹೋಗುವ ಬೆಳಕು ಸ್ವಲ್ಪ ಬಾಗುವುದು

ಮಧ್ಯಕವಚವು ರಕ್ತನಾಳಗಳಿಂದ ಕೂಡಿದ ಬಣ್ಣದ ಕವಚ ಇದರ ಮುಂಭಾಗವು ಪಾಪ್ಪೆಗಾವಯವನಾಗಿಯೂ, ಪಾಪೆಯು ವಸಿಯಾಗಿಯೂ ಮಾರ್ಪಟ್ಟಿರುತ್ತದೆ ಪಾಪ್ಪೆಗಾವಯವದ ವರೆಗೂ ಈ ಕವಚವು ಬಿಳಿಯ ಗುಡ್ಡೆಯ ಒಳಭಾಗಕ್ಕೆ ಅಂಟಿಕೊಂಡಿರುತ್ತದೆ ಇದರಿಂದ ಮುಂಭಾಗಕ್ಕೆ ಹರಡಿರುವ ಈ ಕವಚದ ಭಾಗಕ್ಕೆ ವಸಿ ಯೆಂದು ಹೆಸರು ಇದು ವರ್ತುಳಾಕಾರವಾಗಿದೆ ಇದನ್ನು ನಾವು ಕರಿಯಗ್ಡೆಯ ಹಿಂದೆ ನೋಡಬಹುದು. ವಸಿಯ ಮಧ್ಯದಲ್ಲಿ ಗುಂಡಾಗಿರುವ ಸಣ್ಣ ರಂಧ್ರವಿದೆ. ಇದೇ ಪಾಪೆ. ಪಾಪೆಯನ್ನು ಅಗಲವಾಗಿಯೂ ಕಿರಿದಾಗಿಯೂ ಮಾಡುವ ಶಕ್ತಿ ವಸಿಗಿದೆ ಮನ್ನು ನೋಡಲು ಹೆಚ್ಚು ಬೆಳಕು ಬೇಕಾದಾಗ ಅಗಲವಾಗುವುದು ಬೆಳಕು ಕಡಿಮೆಯಾಗಿ ಬೇಕಾದಾಗ ಕಿರಿದಾಗುವುದು ಹೀಗೆ ಸಂತೋಷವಿಕಾಸವಾಗುವುದು ವಸಿಯ ಸ್ನಾಯುಗಳ ಸಹಾಯದಿಂದ. ಮಧ್ಯದ ಕವಚದ ಹಿಂದೆ ಸೂಕ್ಷ್ಮವಾದ ಒಂದು ನೆರಗಳ ಕವಚವಿದೆ ಇದೇ ಜಾಲಪಟಲ. ಕರಿಯ ಗುಡ್ಡೆಯ ಮತ್ತು ಹಾಪೆಯ ಮೂಲಕಣಂದ ಬೆಳಕು ಇದರ ಮೇಲೆ ಬಿದ್ದು ಕಣ್ಣಿನ ನರವನ್ನುತ್ತೇಜಿಸಿ ಗೋಸಿ ಆ ಮೂಲಕ ನಮಗೆ ಮುಟ್ಟಿದಾಗ ನಮಗೆ ಪದಾರ್ಥಗಳ ದರ್ಶನವಾಗುತ್ತದೆ ಜಾಲಪಟಲದ ನೇಲೆ ಬೀಳುವ ಪ್ರತಿಬಿಂಬವು ತಲೆಕೆಳಗಾಗಿರುತ್ತದೆ ಮತ್ತು ನಾವು ನೋಡುವ ವಸ್ತುವಿಗಿಂತ ಬಹಳ ಕಿರಿದಾಗಿರುತ್ತದೆ ಪ್ರತಿಬಿಂಬವು ಹೇಗಿದ್ದರೂ ನಾವು ಪದಾರ್ಥಗಳನ್ನು ನಾವು ಹೆಚ್ಚುಕಡಿಮೆ ಅವುಗಳ ನಿಜಪ್ರಮಾಣದಲ್ಲಿಯೇ ಮತ್ತು ನಿಜರೂಪದಲ್ಲಿಯೇ ನೋಡಿದೆವು ಹೀಗೆ ನೋಡುವುದಕ್ಕೆ ಮನಸ್ಸೇ ಮುಖ್ಯ ಕಾರಣವೆಂದು ಹೇಳಿರಿ

ಗುಡ್ಡೆಯ ಒಳಭಾಗದಲ್ಲಿ ಪಸೆಯ ಎರಡು ಕವೆಯೂ ಉಬ್ಬಿದ ಸಲಕವಿವೆ ಇವಕ್ಕೆ ಕಣ್ಣಲೆಯೆಂದು ಹೆಸರು ಇವುಗಳಿಂದ ಜಲಘಾಸವೂ ಹಿಂದೆ ಕಾಚ ಧಾತುವೂ ಇವೆ ಈ ಧಾತುಗಳೂ ಕಣ್ಣಿಯೂ ಪಾರದರ್ಶಕವಾದ ಮುಖ್ಯ ಕಣ್ಣಿಗೆ ಆಕ್ಸಿಜನ್‌ನಿರುವ ಕೆಟ್ಟುಗಳು ಅವನ್ನು ಒಳ್ಳೆ ನರ್ದಿಷ್ಟವಾದ ಸ್ಥಾನದಲ್ಲಿ ನಿಲ್ಲಿಸುವ ಸಲ್ಲ ಜೀವಕ್ಕೆ ಉಬ್ಬಸುವುದಕ್ಕೂ ಕಗ್ಗಿಸುವುದಕ್ಕೂ ಕಷ್ಟವಿಲ್ಲದ ಸಲಕವಿನಿವೆ ಉಬ್ಬುವುದೂ ಕುಗ್ಗುವುದೂ ವಸ್ತುಗಳನ್ನು ಬಂಗಿ ಬೇಕಿನ ಕಿರಣಗಳನ್ನು ಒಳಿಸಿ ಅವು ಜಾಲಪಟಲದ ಮೇಲೆಯೇ ಸಂಗಮವಿಂದ ಏಗಬರುವಂತೆ ಪಾಡುವುದಕ್ಕೆ ಹೀಗೆ ಸಂಗಮವಿದಿನಿ ಬೇಕಾದ ಕಿರಣಗಳು ಬರವುದರಿಂದ ವಸ್ತುವಿನ ಪ್ರತಿಬಿಂಬವು ಜಾಲಪಟಲದ ನೇಲೆಯೇ ಬಿದ್ದು ವಸ್ತುವು ಜಾಲಪಟಲದ ಕಾಣತ್ತದೆ ಅದರ ಹಿಂದೆ ಒಂದೇ ಸಲ ವಿವರ ವಸ್ತುವು ಸ್ಪಷ್ಟವಾಗಿ ಕಾಣಿಸುವಲ್ಲಿ ಒಂದೇ ಕಾರಣವನ್ನು ಜಾಲಪಟಲದ ಮೇಲೆಯೇ ಸರಿಯಾಗಿ ಪ್ರತಿಬಿಂಬವು ತರಲು ಸಲಕದಲ್ಲಿ ಅಗವಶ್ಯಕ್ತಿಗಳಿಗೆ ವ್ಯತ್ಯಾಸಕ್ಕೆ ಸಂಧಾನಕಾರ್ಯ ಸಂಪಾದಿಸುವ ಇದೇ ಕಣ್ಣಿಗಿರುವ ಸಂಧಾನಸಾಮರ್ಥ್ಯ ಮೂರಪಟ್ಟಿರುವುದನ್ನು ನೋಡುವಾಗ ಈ ಸಂಧಾನ ಕಾರ್ಯದ ಅವಶ್ಯಕತೆ ಇರುವುದಿಲ್ಲ ಅವುಗಳಿಂದ ಒಂದೇ ಕಿರಣಗಳು ಸಮಾನಾಂತರವಾಗಿರುವುದರಿಂದ ವಸ್ತುವಿಂದ ಬರುವ ಜಾಲಪಟಲದ ಮೇಲೆಯೇ ಸರಿಯಾಗಿ ಸಂಗಮ ಬಿದ್ದುವಿನಿ ತರಲು ಸಲಕದಲ್ಲಿ ಅಗವಶ್ಯಕ್ತಿಗಳಿಗೆ ವ್ಯತ್ಯಾಸಕ್ಕೆ ಸಂಧಾನಕಾರ್ಯ ಸಂಪಾದಿಸುವ ಇದೇ ಕಣ್ಣಿಗಿರುವ ಸಂಧಾನಸಾಮರ್ಥ್ಯ ಮೂರಪಟ್ಟಿರುವುದನ್ನು ನೋಡುವಾಗ ಈ ಸಂಧಾನ ಕಾರ್ಯದ ಅವಶ್ಯಕತೆ ಇರುವುದಿಲ್ಲ ಅವುಗಳಿಂದ ಒಂದೇ ಕಿರಣಗಳು ಸಮಾನಾಂತರವಾಗಿರುವುದರಿಂದ ವಸ್ತುವಿಂದ ಬರುವ ಜಾಲಪಟಲದ ಮೇಲೆಯೇ ಸರಿಯಾಗಿ ಸಂಗಮ ಬಿದ್ದುವಿನಿ ತರಲು ಸಲಕದಲ್ಲಿ ಅಗವಶ್ಯಕ್ತಿಗಳಿಗೆ ವ್ಯತ್ಯಾಸಕ್ಕೆ ಸಂಧಾನಕಾರ್ಯ ಸಂಪಾದಿಸುವ ಇದೇ ಕಣ್ಣಿಗಿರುವ ಸಂಧಾನಸಾಮರ್ಥ್ಯ ಮೂರಪಟ್ಟಿರುವುದನ್ನು ನೋಡುವಾಗ ಈ ಸಂಧಾನ ಕಾರ್ಯದ ಅವಶ್ಯಕತೆ ಇರುವುದಿಲ್ಲ ಅವುಗಳಿಂದ ಒಂದೇ ಕಿರಣಗಳು ಸಮಾನಾಂತರವಾಗಿರುವುದರಿಂದ ವಸ್ತುವಿಂದ ಬರುವ ಜಾಲಪಟಲದ ಮೇಲೆಯೇ ಸರಿಯಾಗಿ ಸಂಗಮ ಬಿದ್ದುವಿನಿ ಬರುವುದು ಆದರೆ ಹತ್ತಿರದಲ್ಲಿರುವ ವಸ್ತುಗಳಿಂದ ಬರುವ ಕಿರಣಗಳು ಸಮಾನಾಂತರವಾಗಿರದೆ ಅವು ಮುಂದುವರಿದಂತೆಲ್ಲ ಅವುಗಳ ಅಂತರವು ಹೆಚ್ಚುತ್ತಾ ಹೋಗುವುದರಿಂದ ಅವುಗಳಿಂದುಟಿಗಳ ಪ್ರತಿಬಿಂಬವು ಜಾಲಪಟಲದ ಹಿಂದೆ ಬಿದ್ದ ವಸ್ತುಗಳು ವಿಜಾಗಿ ಕಾಣುವುವು ಇಂದ ಸಂದರ್ಭದಲ್ಲಿ ವಸ್ತುಗಳನ್ನು ವಿವರವಾಗಿ ಕಾಣಿಸಲಿಕೆ ಮಾಡಲು ಸಲಕವು ಹೆಚ್ಚು ಉಬ್ಬುಗಬೇಕಾಗುವುದು ಆದರೂ ಈ ಉಬ್ಬುವ ಶಕ್ತಿಗೂ ಒಂದು ನಿತಿ ಇದೆ ವಸ್ತುಗಳು ಕಣ್ಣಿಗೆ ೨೬ ಅಂಗುಲಕ್ಕೆ ಹತ್ತಿರ ಬರವತನಕ ಫಲಕಕ್ಕೆ ತನ್ನ ಕಾರ್ಯ ನಿರ್ವಹಿಸಲು ಸಾಧ್ಯ ಅದಕ್ಕಿಂತ ಹತ್ತಿರ ವಸ್ತುವಿದ್ದರೆ ಪಲಕವು ಸಂಧಾನದಿಂದ ತನ್ನ ಕಾರ್ಯವನ್ನು ಸಾಧಿಸಲಾರದ ಸಲಕವು ಉಬ್ಬುವುದೂ ತಗ್ಗುವುದೂ ಸ್ವಾಸ್ಥ್ಯಕಾವಯವದ ಸ್ನಾಯುಗಳ ಸಹಾಯದಿಂದ ಮತ್ತು ಸ್ವತಃ ಸ್ಥಿತಿಸ್ಥಾಪಕ ಶಕ್ತಿಯಿಂದ ಒಟ್ಟು ಗುಡ್ಡೆಯ ಜೆಲಪಕ್ಕೆ ಕಾರಣವಾದ ೀರೆವಿಧವಾದ ಸ್ನಾಯುಗಳಿವೆ ಒಂದೊಂದು ಗುಡ್ಡೆಗೂ ಸ್ನಾಯುಗಳು ಆರು ಆರು ಹತ್ತಿಕೊಂಡಿವೆ ಈ ಆರಾರು ಸ್ನಾಯುಗಳೂ ಸಹಕರಿಸಿ ಕೆಲಸಮಾಡುವುದರಿಂದ ನಾವು ಎರಡು ಕಣ್ಣುಗಳಿಂದ ಪದಾರ್ಥವನ್ನು ನೋಡಿದರೂ ನೋಡಿದ ಪದಾರ್ಥವು ಮಾತ್ರ ಒಂದೇ ಆಗಿ ಕಾಣಿಸುವುದು ಯಾವುದಾದರೂ ಒಂದು ಕಣ್ಣಿನ ಸ್ನಾಯುಗಳು ದುರ್ಬಲವಾದಾಗ ಗುಡ್ಡೆಯನ್ನು ಸರಿಯಾಗಿ ತಿರುಗಿಸಲಾಗದಿದ್ದರೆ ಆ ಕಣ್ಣು ಮೆಳ್ಳಗಣ್ಣಾಗುವುದು

ಕಣ್ಣು ಹೋವು

ಮಾನವಿನ ಹನ್ನಾನ್ನು ತಿಂದರೆ ಉಷ್ಣವಾಗಿ ಕಣ್ಣು ನೋವು ಬರುತ್ತದೆಂದು ಜನರಲ್ಲಿ ಸಾಧಾರಣವಾದ ಭಾವನೆಯಿದೆ ಇದು ಮಾನವಿನ ಹನ್ನಿನಿಂದ ಬರತಕ್ಕ ಕಾಯಿಲೆಯಲ್ಲ ಮಾನವ ಹೆಣ್ಣಿನ ಕಾಲವೂ ಕಣ್ಣು ನೋವು ಬರುವ ಕಾಲವೂ ಸಾಮಾನ್ಯವಾಗಿ ಸಂಧಿಸುವುದೇ ಈ ಭಾವನೆಗೆ ಕಾರಣ ಕಣ್ಣು ನೋವಿಗೆ ಕಾರಣ ಬಹು ಸೂಕ್ಷ್ಮವಾದ ಕೆಲವು ಕ್ರಿಮಿಗಳು ಈ ಸೂಕ್ಷ್ಮ ಕ್ರಿಮಿಗಳು ಸಾಮಾನ್ಯವಾಗಿ ಎಲ್ಲರ ಕಣ್ಣಿನ ಆರಿಯಮೇಲೆ ಸ್ವಾಧಾವಿಕವಾಗಿ ನೆಲಸಿರುತ್ತವೆ. ತಮಗೆ ಅನುಕೂಲವಾದ ಸಂದರ್ಭಗಳೊದಗಿದಾಗ—ಅಂದರೆ ಕಾಯಿಲೆ ಕಸಾಲೆಗಳು ಬಂದು ಶಕ್ತಿಗುಂದಿದಾಗ ಅಥವಾ ಆಕ್ಸಿಗೆ ಅವಾಯ ಸಂಭವಿಸಿದಾಗ—ಇವು ಪುಟಲಿಸಿ ರೋಗಕಾರಕ ವಾಗುವುವು. ಕಣ್ಣುನೋವು ಬಂದ ಮಕ್ಕಳ ಕರವಸ್ತ್ರ, ಟವಲು, ಹಾಸಿಕೆ ಹೊದಿಕೆಗಳನ್ನು ಇತರ ಮಕ್ಕಳು ಉಪಯೋಗಿಸಿದಾಗ, ಅಂಥ ಮಕ್ಕಳ ಜೊತೆಯಲ್ಲಿ ರುವಾಗ, ಅಥವಾ ಅಂಥ ಮಕ್ಕಳ ಕಣ್ಣಿನ ಸಿಸರಿನ ಮೇಲೆ ಕುಳಿತ ಗುಂಗಾಡಿಗಳು ಆರೋಗ್ಯವಾದ ಮಕ್ಕಳ ಕಣ್ಣುಗಳನ್ನು ಮುತ್ತಿದಾಗ, ಈ ರೋಗವು ಒಬ್ಬರಿಂದ ಮತ್ತೊಬ್ಬರಿಗೆ ಹರಡುತ್ತದೆ ಒಟ್ಟಿನಲ್ಲಿ ರೋಗ ತಗುಲಿದ ಕಣ್ಣಿನಿಂದ ಸ್ರವಿಸುವ ದ್ರವ ಮತ್ತು ಗಿಣ್ಣು ಮೇಲೆಹೇಳಿದ ಯಾವ ರೀತಿಯಿಂದಾಗಲಿ ಆರೋಗ್ಯವಾದ ಕಣ್ಣಿಗೆ ಸೇರಿದರೆ ಈ ರೋಗ ಅಲ್ಲಿ ವ್ಯಾಪಿಸುತ್ತದೆ.

ಕಣ್ಣು ರೋಗವುದು ಅಥವಾ ಕೆಂಪಾಗುವುದು, ಹೆಚ್ಚಾಗಿ ನೀರು ಸುರಿಯುವುದು, ಬಿಗಿತ, ಚುಚ್ಚುವಿಕೆ ಉರಿ, ಗಿಜುಕಟ್ಟುವುದು, ರೆಪ್ಪೆಗಳ ಊತ, ನಿದ್ರೆಯಾದ ಮೇಲೆ ರೆಪ್ಪೆಗಳು ಅಂಟಿಕೊಳ್ಳುವುದು ಇವೆಲ್ಲವೂ ಕಣ್ಣು ನೋವಿನ ಚಿಹ್ನೆಗಳು

ರೋಗ ಬಂದಮೇಲೆ ವಾಸಿಮಾಡಿಕೊಳ್ಳುವುದಕ್ಕಿಂತ ಅದು ಬಾರದಂತೆ ತಡೆಯುವುದು ಉತ್ತಮ ಸ್ವಲ್ಪ ಜಾಗರೂಕರಾಗಿದ್ದರೆ ಇದನ್ನು ತಡೆಯಬಹುದು ಕಣ್ಣು ನೋವು ಬಂದ ಹುಡುಗರ ಬಟ್ಟೆಬರೆಗಳನ್ನು ಮಿಕ್ಕವರು ಉಪಯೋಗಿಸದಿರುವುದು, ಅಂಥವರ ಜೊತೆಯಲ್ಲಿ ಮಲಗದಿರುವುದು, ಕಣ್ಣಿಗೆ ಚಿಕಿತ್ಸೆ ನಡೆಸಿದ ಕೂಡಲೆ ಕೈಗ ಗಳನ್ನು ಚೆನ್ನಾಗಿ ತೊಳೆದುಕೊಳ್ಳುವುದು ಇವು ಕೆಲವು ಮುಂಜಾಗ್ರತೆಯ ಉಪಾಯಗಳು ಈ ಉಪಾಯಗಳನ್ನು ಹೇಳುವುದು ಬಹಳ ಸುಲಭ, ಆದರೆ ಅವುಗಳನ್ನು ನಮ್ಮ ಮನೆಗಳಲ್ಲಾಚರಿಸುವುದೊಮಾತ್ರ ಸ್ವಲ್ಪ ಕಷ್ಟ

ಚಿಕಿತ್ಸೆ—ಕಣ್ಣು ನೋವಿಗೆ ಕಾರಣವಾದ ಕ್ರಿಮಿಗಳು ಅಂಯ ಮೇಲೆಯೇ ಇರುವುದರಿಂದ ಇದರ ಚಿಕಿತ್ಸೆ ಸುಲಭ ಕಣ್ಣಿನಲ್ಲಿರುವ ಗಿಣ್ಣನ್ನೂ ಕ್ರಿಮಿಗಳನ್ನೂ ಆಗಿಂದಾಗ್ಗೆ ಹೊರಹಾಕುವುದೇ ಚಿಕಿತ್ಸೆಯ ಮುಖ್ಯ ಗುರಿ ದಿನಕ್ಕೆ ೬೦ ಸಾರಿ ಬೋರಿಕ್ ದ್ರಾವಕದಿಂದ (ಒಂದು ಟೀಚಮಚ ಶುದ್ಧ ನೀರಿಗೆ ಒಂದು ಚಹಾ ಚಮಚದಷ್ಟು ಅಥವಾ ಒಂದು ರೂಪಾಯಿನಮೇಲೆ ನಿಲ್ಲುವಷ್ಟು ಬೋರಿಕ್ ಆಸಿಡ್ ಪುಡಿಯನ್ನು ಹಾಕಿದ ದ್ರಾವಕದಿಂದ) ಕಣ್ಣು ಗುಡ್ಡೆಯನ್ನು ರೆಪ್ಪೆಗಳ ಒಳಭಾಗವನ್ನೂ ತೊಳೆಯುವುದು ನಾವು ಮನೆಗಳಲ್ಲಿ ಮಾಡಬಹುದಾದ ಚಿಕಿತ್ಸೆ

ದ್ರಾವಕ ಸ್ವಲ್ಪ ಬೆಚ್ಚಗಿರಬೇಕಾದುದು ಅತ್ಯಾವಶ್ಯಕ ಮಗುವನ್ನೊ ಮಲಗಿಸಿ ರೆಪ್ಪೆಗಳನ್ನು ಹಿಗ್ಗಿಸಿ ಹಿಡಿಯಕೊಂಡು, ಗಡ್ಡೆಯನ್ನೂ ರೆಪ್ಪೆಯ ಒಳಭಾಗವನ್ನೂ ಕಳ್ಳಿಲವ ಪೂರೈಯಾಗಿ ಹೊರಗೆ ಹೋಗುವವರೆಗೂ ಚೆನ್ನಾಗಿ ಬಿಡಿಸಿದ ಮತ್ತು ಶುಚಿಯಾದ ಹತ್ತಿಯಂದ ತೊಳೆಯಬೇಕು ದ್ರಾವಕದಲ್ಲದ್ದಿರುವ ಹತ್ತಿಯನ್ನು ಕಣ್ಣಿನ ಪೇಲೆ ಹಿಂಡುವದರಿಂದ ಕಣ್ಣನ್ನು ಚೆನ್ನಾಗಿ ತೊಳೆಯಬಹುದು ಚಿಕಿತ್ಸೆಗೆ ಸೊದಲೂ ಆಮಾವೆಲೂ ಕೈಯನ್ನು ಚೆನ್ನಾಗಿ ತೊಳೆದುಕೊಳ್ಳಬೇಕು ರಾತ್ರಿ ಮಕ್ಕಳು ಮಲಗುವಾಗ ಕಾದು ಆರಿದ ವ್ಯಾಸೆಲೀನನ್ನು ರೆಪ್ಪೆಗಳ ಅಂಚಿಗೆ ಸವರಬೇಕು. ಹೀಗೆ ಮಾಡಿದಲ್ಲಿ ರೆಪ್ಪೆಗಳು ಅಂಟಿಕೊಳ್ಳುವುದಿಲ್ಲ. ಕಣ್ಣಿನ ದ್ರವಗಳು ಕಣ್ಣಿನ ನಲ್ಲಿ ನಿಲ್ಲದೆ ಸುರಿದುಹೋಗಲು ಅನುಕೂಲವಾಗುವುದು.

ಕಣ್ಣಿಗೆ ಯಾವ ವಿಧವಾದ ಪಟ್ಟಿಯನ್ನೂ ಬಿಗಿತ ಕಟ್ಟಕೂಡದು. ಬೆಳಕಿಗೆ ಕಣ್ಣು ಬಡಲು ಸಾಧ್ಯವಿಲ್ಲದಿದ್ದರೆ ಬೆಳಕಿಗೆ ತಡೆಯಾಗಿ ಹಸುರು ಬಟ್ಟೆಯನ್ನೋ ಗಿಡ್ಡ ಡಳವನ್ನೋ ಉಪಯೋಗಿಸಬಹುದು. ಗುರುವು ಸಾಧ್ಯವಾದಷ್ಟುಕಾಲ ಹೊರಗೆ ಗಾಳಿಯಲ್ಲಿ ಇದ್ದರೆ ಒಳ್ಳೆಯದು.

ಈ ಚಿಕಿತ್ಸೆಯನ್ನು ಕ್ರಮವಾಗಿ ನಡೆಸಿದಲ್ಲಿ ಕೆಲವು ದಿನಗಳಲ್ಲಿಯೇ ಕಣ್ಣುನೋವು ವಾಸಿಯಾಗುವುದು. ಈ ವ್ಯಾಧಿಗೆ ಉರುಳ್ಳಯ ರಸ, ವೈಲುಶುತ್ತ್ವದ ನೀರು. ಕೆಳ್ಳುಳ ಹಾಲು ಇತ್ಯಾದಿಗಳನ್ನುಪಯೋಗಿಸುವ ವಾಡಿಕೆ ನಮ್ಮ ದೇಶದಲ್ಲಿ ಉಂಟು ಇವು ಅನಾವಶ್ಯಕವಾದುವು. ಇವುಗಳಿಂದ ಕೆಲವು ವೇಳೆ ಕಣ್ಣಿಗೆ ಅಪಾಯವಾಗುವುದೂ ಉಂಟು

ಬೇಗ ಗುಣವಾಗದಿದ್ದರೆ ಕಣ್ಣನ್ನು ತೊಳೆದಮೇಲೆ ದಿನಕ್ಕೊಂದುಸಲ ' ಆರ್ಜಿರೋಲ್ ' (Argyrol) ದ್ರಾವಕವನ್ನೋ ಪಟಿಕದ ನೀರನ್ನೋ ೩-೪ ತೊಟ್ಟು ಗಳಷ್ಟು ಕಣ್ಣಿಗೆ ಹಾಕಬೇಕು.

ಆರ್‌ಜೈರಾಲ್ ದ್ರಾವಕವನ್ನು ಪಯೋಗಿಸುವುದರಲ್ಲಿ ಒಂದು ಎಚ್ಚರಿಕೆಯ ಮಾತನ್ನು ಹೇಳಬೇಕಾಗಿದೆ. ಕೆಲವು ಸಂದರ್ಭಗಳಲ್ಲಿ ಇದಕ್ಕೆ ಬದಲು ಟಿಂಚರ್ ಆಯೋಡೀಸ್ (Tr. Iodine) ಅಥವಾ ಅದೇ ಬಣ್ಣವುಳ್ಳ ಇತರ ದ್ರಾವಕವನ್ನು ಅಜಾಗರೂಕತೆಯಿಂದ ಉಪಯೋಗಿಸಿ ಕಣ್ಣು ಕಳೆದುಕೊಂಡಿರುವ ದೃಷ್ಟಾಂತಗಳು ಅನೇಕವಿವೆ. ಕಣ್ಣಿಗೆ ಔಷಧಿ ಹಾಕುವ ವಿಚಾರದಲ್ಲಿ ಇಂಥ ಅಜಾಗರೂಕತೆಗೆ ಸ್ವಲ್ಪವೂ ಅವಕಾಶ ಕೊಡದಂತೆ ನೋಡಿಕೊಳ್ಳಬೇಕು ಇದಕ್ಕಾಗಿ ಕಣ್ಣಿನ ಔಷಧಿಯನ್ನು ಪ್ರತ್ಯೇಕವಾಗಿಡಬೇಕು. ಮತ್ತು ಅಂಥ ಔಷಧಿಯನ್ನು ಉಪಯೋಗಿಸುವುದಕ್ಕೆ ಮುಂಚೆ ಸೀಸೆಯ ಮೇಲಿನ ಚೀಟಿಯನ್ನೊಮ್ಮೆ ಆದು ಖಂಡಿತವಾಗಿ ಆರ್ ಜೈರಾಲ್ ದ್ರಾವಕವೇ ಎಂಬುದನ್ನು ನಿರ್ಧರಮಾಡಿಕೊಳ್ಳಬೇಕು

ಈ ವ್ಯಾಧಿಯ ಜೊತೆಯಲ್ಲಿ ಬಿಳಿಯ ಕರಿಯ ಗುಡ್ಡೆಗಳು ಸಂಧಿಸುವ ಅಂಚಿನಲ್ಲಿ "ಶುಕ್ಲ" ವು (Phlyctenule) ಕೆಲವು ಸಲ ಕಂಡು ಬರುವುದು ಇದರ ದಪ್ಪ ಸುಮಾರು ಸಾಸುವೆಕಾಳಷ್ಟು ಇದರ ಬಣ್ಣ ಬಿಳಪು ಅಥವಾ ಹಳದಿ. ಇದನ್ನು ಜನರು ಕಂಡಾಗ ಬಹಳ ಗಾಬರಿಗೊಳ್ಳುವರು. ಸುಲಭ ಚಿಕಿತ್ಸೆಯಿಂದ ಇದು ಪೂರ್ತಿ ನಿವಾರಣೆಯಾಗಬಹುದಾದುದರಿಂದ ಆಪ್ಥೊಂದು ಭೀತಿಗೆ ಕಾರಣವಿಲ್ಲ ದಿನಕ್ಕೆ ೨ ೩ ಸಾರಿ ಹಳದಿಯ ಮುಲಾಮನ್ನು (Yellow ointment) ಹಚ್ಚುಕಾಳಜಿನಸ್ಸು ಬೇಕಾಕಡ್ಡಾಯ ಹೊನೆಯಲ್ಲಿ ತೆಗೆದುಕೊಂಡು ಕೆಳರೆಪ್ಪೆಯ ಒಳಭಾಗದಲ್ಲಿಟ್ಟು ಕಣ್ಣನ್ನು ಮುಚ್ಚಿ ಮಿತ್ರಗಿ ರೆಪ್ಪೆಗಳನ್ನು ಜ್ಜಿದರೆ ಜಾಗ್ರತೆಯಾಗಿ ಶುಕ್ಲವು ಮಾಯವಾಗುವುದು.

ಮೇಹದ ಕಣ್ಣುನೋವು

ಇದರ ಚಿಕಿತ್ಸೆ ಮನೆಯಲ್ಲಿ ಸಾಧ್ಯವೇ ಇಲ್ಲ ಅಲ್ಲದೆ ಈ ಕಣ್ಣುನೋವು ಕಾಣಿಸಿಕೊಂಡ ತಕ್ಷಣವೇ ಸ್ವಲ್ಪವೂ ಕಾಲವಿಳಂಬವಿಲ್ಲದೆ ನಡೆಯಬೇಕು ಆದುದರಿಂದ ನೋವು ಕಂಡ ತಕ್ಷಣೇ ಇದಕ್ಕೆ ಅಸ್ಪತ್ರೆಗಳಲ್ಲಿ ಚಿಕಿತ್ಸೆ ಮಾಡಿಸಿದಲ್ಲಿ ಬಹಳ ಪ್ರಮಾದವಾಗುವುದೆಂಬುದನ್ನು ಜನರು ಚೆನ್ನಾಗಿ ನೆನಪಿನಲ್ಲಿಟ್ಟುಕೊಳ್ಳಬೇಕು. ಈ ವಿಚಾರದಲ್ಲಿ ಸ್ವಯಂ ಚಿಕಿತ್ಸೆಯೂ ಸಾವಧಾನವಾಗಿ ಚಿಕಿತ್ಸೆಗೆ ರೋಗಿಯನ್ನು ಕರೆದುಕೊಂಡು ಹೋಗುವುದೂ ಅನುಚಿತ ಪ್ರಪಂಚದಲ್ಲಿ ಕುರುಡರ ಸೈಕೆ 30% ಮಂದಿ ಈ ಕಾಯಿಲೆಯಿಂದ ಕಣ್ಣನ್ನು ಕಳೆದುಕೊಂಡಿರುತ್ತಾರೆ. ಇದರಿಂದ ಇದು ಎಷ್ಟು ಕ್ರೂರ ಎನಾದ ಕಾಯಿಲೆ ಎಂಬುದು ವ್ಯಕ್ತವಾಗುತ್ತದೆ ಆದರೂ ಆಸ್ಪತ್ರೆಗಳಲ್ಲಿ ಕ್ರಮವಾದ ಚಿಕಿತ್ಸೆಯಿಂದ ಈ ರೋಗವನ್ನು ಮಾಸಿಮಾಡಿಕೊಳ್ಳಲು ಸಾಧ್ಯ ಈ ರೋಗ ಬಂದ ಹೊಸದರಲ್ಲಿಯೇ ಖಾವಕಾಶಮಾಡದೆ ರೋಗಿ ಆಸ್ಪತ್ರೆಗೆ ಹೋಗಬೇಕಾದುದು ಅತ್ಯಾವಶ್ಯಕ ಹಾಗೆ ಮಾಡದಿದ್ದರೆ ಕಣ್ಣು ಉಳಿಯುವುದು ಕಷ್ಟ.

ಈ ರೋಗ (ಜನನೇಂದ್ರಿಯದಿಂದ ಬಿಳಪು ಹೋಗುವ) ಮೇಹಜಾಡ್ಯ ಪೀಡಿತರಾದವರಿಗೆ ಬಿಡತ್ತದೆ ಇದರ ಕ್ರಿಮಿಗಳ (Gonococci) ಹಾವಳಿಯಿಂದ ಉಪ್ಪತ್ತಿಯಾಗುವ ರೇಸನ್ನು ಬೆಳುಪೆಂದು ಕರೆಯುತ್ತಾರೆ. ಇಂಥ ರೇಸು ಯಾವ ರೀತಿಯಿಂದಾದರೂ ಕಣ್ಣಿಗೆ ಸೋಕಿದರೆ ಈ ವಿಧವ ಕಣ್ಣುನೋವು ಉಂಟಾಗುತ್ತದೆ. ಕೋಗಿಯು ದೆರಳುಗಿಳಿಂದ ಮತ್ತು ಅವನು ಉಪಯೋಗಿಸುವ ಒಬ್ಬಿಬರಿಗಳಿಂದ ಸೋಂಕು ಅವನ ಕಣ್ಣಿಗೆ ಅಥವಾ ತಾತರ ಕಣ್ಣುಗಳಿಗೆ ತಗಲಬಹುದು ಮನೆಯ ನ್ಲಿರುವ ಅಳಿಕಾಲುಗಳು ಮೇಹರೋಗದಿಂದ ಪೀಡಿತರಾಗಿದ್ದರೆ, ತನ್ನ ಕೈಯಿಂದಾಗಲಿ ಕರವಸ್ತ್ರದಿಂದಾಗಲಿ ಉಟ್ಟು ತೊಟ್ಟ ಬಟ್ಟೆಯಿಂದಾಗಲಿ ದ.ಜಮಾನರ ಸುಳ್ಳಳ ಕಣ್ಣುಗಳಲ್ಲಿರುವುದರಿಂದ ಅರಿಯದ ಶಿಕುಗಳಿಗೂ ಈ ಭೀಕರವಾದ ಕಾಯಿಲೆಯನ್ನು ತಂದೊಡ್ಡಬಹುದು ಇಂಥ ರೋಗಿಗಳನ್ನು ಚಿಕಿತ್ಸೆ ಮಾಡುವಾಗ ಕಣ್ಣಿನ ಕೇವು ಅಕಸ್ಮಾತ್ತಾಗಿ ಡಾಕ್ಟರುಗಳ ಕಣ್ಣಿಗೆ ಹಾರಿದರೆ ಡಾಕ್ಟರುಗಳಿಗೂ ವ್ಯಾಧಿ ಅಂಟುವುದು

ಇದರ ಚಿಹ್ನೆಗಳು ಸಾಧಾರಣ ಕಣ್ಣುನೋವಿನ ಚಿಹ್ನೆಗಳನ್ನೇ ಹೋಲುವುದಾದರೂ, ಪ್ರತಿಯೊಂದು ಚಿಹ್ನೆಯೂ ಅತಿ ಉದ್ರೇಕವಾಗಿ ಕಾಣುವುದು ಮೇಲಿನ ರೆಪ್ಪೆ ಊದಿ ಕೆಳಗಿನ ರೆಪ್ಪೆಯನ್ನು ಮುಚ್ಚಿಕೊಂಡಿರುವುದು, ಕಣ್ಣಿನಿಂದ ಕೇವು ಧಾರಾಕಾರವಾಗಿ ಸುರಿಯುವುದು; ನೋವು ವಿಪರೀತವಾಗಿರುವುದು, ದೇಹಸ್ಥಿತಿ ಕೆಟ್ಟು ಜ್ವರವು ತಲೆದೋರುವುದು ಇಂಥ ಅತಿ ತೀವ್ರವಾದ ಚಿಹ್ನೆಗಳಿಂದಲೇ ಇದು ಸಾಮಾನ್ಯವಾದ ಕಣ್ಣು ನೋವಲ್ಲವೆಂದು ಗುರುತಿಸಬಹುದು

ವಿಶಾರಣೋಪಾಯ—ಮೇಲೆ ಹೇಳಿದ ಮೇಹ ರೋಗದಿಂದ(Gonorrhoea)ಬಾಧೆ ಪಡುವವರು ತಮ್ಮ ಜನನೇಂದ್ರಿಯದಿಂದ ಬರುವ ಬಿಳಪು ಯಾವ ರೀತಿಯಿಂದಲೂ ಕಣ್ಣಿಗೆ ಸೋಕದಂತೆ ನೋಡಿಕೊಳ್ಳಬೇಕು ಜನನೇಂದ್ರಿಯವನ್ನಾಗಲಿ ಅದರ ಅಕ್ಕಪಕ್ಕ ವನ್ನಾಲಿ ಮುಟ್ಟಿದವರು ಕೈಗಳನ್ನ ಚೆನ್ನಾಗಿ ಸಾಬೂನು ಹಾಕಿ ತೊಳೆದುಕೊಳ್ಳಬೇಕು ಬಿಳುಪಿನಿಂದ ಮಲಿನವಾದ ಬಟ್ಟೆಗಳನ್ನು ಚೆನ್ನಾಗಿ ಶುಚಿಪಡಿಸಿದಲ್ಲದೆ ಉಪಯೋಗಿಸಬಾರದು, ವೈಯನ್ನೊರಸಿಕೊಂಡ ಬಟ್ಟೆ ಯಿಂದಲೇ ಮುಖವನ್ನೊರಸಿಕೊಳ್ಳಕೂಡದು ಈ ನೆಲಿನ ಸೂಚನೆಗಳಿಂದ ಅಂಥ ರೋಗಿಗಳ ಸಹವಾಸ ದಲ್ಲಿದ್ದಾಗ ಇತರರು ಯಾವುದೇ ಎಚ್ಚರಿಕೆಯಿಂದ ನಡೆದುಕೊಳ್ಳದೇಕೊಂದು ವ್ಯತ್ಯಾಸಾಗುತ್ತದೆ

ಇದೇ ಸಂದರ್ಭದಲ್ಲಿ ಮೇಹಜಾಡ್ಯವಿರುವ ತಾಯಿಯಿಂದ ಹುಟ್ಟಿದ ಮಕ್ಕಳಿಗೆ ಹೊಲೆಮನೆಯಲ್ಲಿಯೇ ಬರಬಹುದಾದ ಕಣ್ಣುನೋವನ್ನು ವಿವರಿಸುವುದು ಯುಕ್ತ ಇದು ಸುಕ್ಕಳಿಗೆ ಹುಟ್ಟಿದ ಮೂರುದಿನದಿಂದ ಆರು ದಿನಗಳೊಳಗಾಗಿ ಕಾಣಿಸಿಕೊಳ್ಳುವುದು, ಮಗುವಿನ ಎರಡು ಕಣ್ಣುಗಳೂ ಕೆಂಪಗಾಗುವುವು, ರೆಪ್ಪೆಗಳು ಖಾತುಕೊಳ್ಳುವುವು ಕಣ್ಣಿನಿಂದ ಗಟ್ಟಿಯಾದ ಹಳದಿ ರೇವು ಸುರಿಯುವುದು, ನುಗು ಕಣ್ಣು ಬಿಡುವುದಕ್ಕಾಗದೆ ನೋವಿನಿಂದ ಅಳುವುದು ಇದು ಕಣ್ಣುಗಳಿಗೆ ಬಹು ಅಪಾಯಕರವಾದ ವ್ಯಾಧಿ ಕಣ್ಣು ಕಳೆದು ಕೊಂಡಿರುವ ಮಕ್ಕಳಲ್ಲಿ ನೇಕಡ ಐವತ್ತು ಮಂದಿಗೆ ಕಣ್ಣು ಹೋಗಿರುವುದು ಈ ಕಾಯಿಲೆಯಿಂದಲೇ ಇದು ಕರಿಯಗುಡ್ಡೆಯ ಮೇಲೆ ಹುಣ್ಣನ್ನು ಉಂಟುಮಾಡುವುದರಿಂದ ಕಣ್ಣಿನ ದೃಷ್ಟಿ ಕೆಡುವುದು ಅಥವಾ ಕಣ್ಣೇ ಶಾಶ್ವತವಾಗುವುದು ಈ ಪರಿಣಾಮಗಳ ಸೂಚನೆಯಿಂದ ಈ ವ್ಯಾಧಿಯು ಎಷ್ಟು ಹಾನಿಕರವೆಂಬುದು. ಮನೆದಟ್ಟಿಸಿ ಗದಿರಲಾರದು ಆದ್ದರಿಂದ ಪ್ರತಿಯೊಬ್ಬ ತಾಯಿಯೂ ಈ ರೋಗ ತನ್ನ ಮಗುವಿಗೆ ಬಾರದಂತೆ ತಡೆಯುವ ಉಪಾಯವನ್ನು ತಿಳಿದಿರಬೇಕು

ಈ ಕಣ್ಣು ವ್ಯಾಧಿಗೆ ತಾಯಿಯರಿಗಿಂತಲೂ ಹೆಚ್ಚಾದ ಮೇಹ ಜಾಡ್ಯವೇ (Gonorrhoea) ಕಾರಣ ಶಿಶುವು ಗರ್ಭಕೋಶವನ್ನು ಬಿಟ್ಟು ಜನನ ಮಾರ್ಗ ದ್ವಾರಾ ಬಂ.ವಾಗ ಅಲ್ಲರಬಹುದಾದ ಬಳುವು ಮಗುವಿನ ಕಣ್ಣಿಗೆ ತಗುಲುವುದರಿಂದ ಮಗುವಿಗೆ ಕಣ್ಣುನೋವು ಬರುವುದು ಹಾಗೆ ಹುಟ್ಟುವಾಗಲೇ ಆದರ ಕಣ್ಣಿಗೆ ಭಿಳುಪಿನ ಸೊಂಕು ತಗುಲದೆ ಇದ್ದರೂ, ಜನನವಾದ ಮೇಲೆ ಶಿಶುವಿಗೆ ಮೈ ತೊಳೆಯುವಾಗ ಅದರ ದೇಹದ ಮೇಲಂಟಿಕೊಂಡಿದ್ದ ಸೊಂಕು ಕಣ್ಣಿಗೆ ಸೇರಬಹುದು

ಮಳಗಳ್ಳು ಪಡೆದ ತಂದೆತಾಯಿಗಳೆಲ್ಲರೂ ತಮ್ಮ ಮಕ್ಕಳು ಆರೋಗ್ಯವಾಗಿರಲಿ, ಅವರ ಕಣ್ಣು ಚೆನ್ನಾಗಿರಲಿ ಎಂದು ಆಶಿಸುವುದು ಸ್ವಾಭಾವಿಕವಾದದ್ದೇ ಆದರೆ ತಮಗೆ ಮೇಹರೋಗವಿದ್ದರೆ ತಮಗಾಗುವ ಮಕ್ಕಳು ಕುರುಡರಾಗಬಹುದೆಂಬ ವಿವೇಕವಿಲ್ಲದೆ ಎಷ್ಟೋ ದಂಪತಿಗಳು ಕೆಟ್ಟುಬಾಳಿ ಬೀಳುತ್ತಾರೆ ಈ ಕಣ್ಣು ನೋವು ಬಾರದಂತೆ ತಡೆಯಲು, ಗರ್ಭಗೆಡೆಗೂ ಹುಟ್ಟಿದ ಶಿಶುಗಳಿಗೂ ಯಾವ ಪ್ರತಿಕ್ರಿಯೆಯನ್ನು ನಡೆಸಬೇಕೆಂಬುದನ್ನು ವಿವರಿಸುವುದು ಯುಕ್ತ.

1 ಮೇಹ ಜಾಡ್ಯಳ್ಳ ಗರ್ಭಿಣಿಯರು ಮರೆವಾಚೆ ಪರೀಕ್ಷೆಮಾಡಿಸಿಕೊಂಡು ಜನನಕಾಲಕ್ಕೆ ಮುಂಚಿತವಾಗಿಯೇ ರೋಗವನ್ನು ಗುಣಪಡಿಸಿಕೊಳ್ಳಬೇಕು

2. ಶಿಶು ಜನಿಸಿದ ಕೂಡಲೆ, ಸಾಧ್ಯವಾದರೆ ಕಣ್ಣು ಬಿಡುವುದಕ್ಕೆ ಮುಂಚೆವಾಗಿಯೇ, ಅದರ ಕಣ್ಣುಗಳನ್ನು ಶುದ್ಧವಾದ ಹತ್ತಿಯಿಂದ ಅಥವಾ ಬಟ್ಟೆಯಿಂದ ಒರಸಬೇಕು ಒಂದೊಂದು ಕಣ್ಣಿಗೂ ಬೇರೆ ಬೇರೆ ಹೂರುಗಳನ್ನು ಪಯೋಗಿಸಬೇಕು

ಶಿಶುವನ್ನು ತೊಳೆಯುವಾಗ ಮೈತೊಳೆದ ಕೊಳೆಯ ನೀರಿನಿಂದ ಮುಖವನ್ನು ತೊಳೆಯಬಾರದು ಮುಖ ತೊಳೆದಕೂಡಲೆ ರೆಪ್ಪೆಗಳನ್ನು ತೆಗವಿಲ್ಲದಂತೆ ಒರಸಿ ಕಣ್ಣುಗಳಲ್ಲಿ ಒಂದೊಂದು ತೊಟ್ಟು ಸಿಲ್ವರ್‌ನೈಟ್ರೇಟ್ ದ್ರಾವಕವನ್ನು (1% Silver nitrate Solution) ಹಾಕಬೇಕು ಈ ವದ್ಧತಿಗೆ "ಕ್ರೀಡೆ" ಯವರ ವದ್ಧತಿ ಎಂದು ಹೆಸರು ಇದನ್ನಾಚರಿಸುವುದರಿಂದ ಎಷ್ಟೋ ಮಳ್ಳಳ ಕಣ್ಣುಗಳನ್ನು ಉಳಿಸಲು ಸಾಧ್ಯವಿದೆ ಪಡಿಪ್ಪಿತ್ತ ರಾದ ದಾದಿಯರು ಸಾಧಾರಣವಾಗಿ ಈ ವದ್ಧತಿಯನ್ನಾ ಚರಿಸುತ್ತಾರೆ

3 ಜನನವಾದ ಆರುದಿನಗಳೊಳಗಾಗಿ ಮಗುವಿಗೆ ಕಣ್ಣುನೋವು ಬಂದಲ್ಲಿ ತಕ್ಷಣ ಡಾಕ್ಟರರ ಸಲಹೆ ಯನ್ನು ಪಡೆಯಬೇಕು

4 ಇಂಗ್ಲೆಂಡಿನಲ್ಲಿ, ಜನನವಾದ ಮಕ್ಕಳಲ್ಲಿ 21 ದಿನಗಳವರೆಗೂ ನೋಡುತ್ತಿದ್ದು ಅಪ್ಪದೊಳಗಾಗಿ ಕಣ್ಣು ನೋವು ಬಂದರೆ ಅವನ್ನು ವರದಿ ಮಾಡುವುದು ಸೂಲ ಗಿತ್ತಿಯ ಕರ್ತವ್ಯ

ಶ್ರೀಜಗದ್ಗುರು ಪಂಚಾಚಾರ್ಯೇಭ್ಯೋ ನಮಃ

ಅಭಿನಂದನ ಸಭೆ ಸೊಲ್ಲಾಪುರ

ತಾ॥ ೩ ೧೧ ೪೦ ನೆಯ ರವಿವಾರ ಸಾಲು ಘಂಟೆಗೆ ಶ್ರೀ ಮಲ್ಲಿಕಾರ್ಜುನ ದೇವಾಲಯದಲ್ಲಿ, ಶ್ರೀಯುತ ದಾನವೀರ, ಧರ್ಮವೀರ ಶರಣಪ್ಪನ್ನು ಶ್ರೇಷ್ಠಿಪುರ ದುಬ ಳಗುಂಡಿ ಇವರು ವೀರಶೈವ ಮತಸ್ಥರಿಗಳ ಮುಸ್ಸಾಣ ಕ್ಕಾಗಿ, ವಿಜಯದಶಮಿ ಮಂಗಲೋತ್ಸವವಲ್ಲಿ ತಮ್ಮ ದೀಕ್ಷಾಗುರುಗಳಾದ, ಶ್ರೀ॥ ಷ॥ ಬ್ರ॥ ಬಾಲತಪಸ್ವಿ ಚನ್ನವೀರ ಶಿವಾಚಾರ್ಯರ ಸನ್ನಿಧಿಗೆ ೩೦೦೦ ಸಾವಿರ ರೂಪಾಯಿಗಳನ್ನು ಕೊಡಲು ಏರ್ಪಾಡಾದ್ದಕ್ಕಾಗಿ, ವೀರಶೈವ ಸದಾಚಾರ ಸ್ಥೀರ ಸಮಾಜದ ವತಿಯಿಂದ ಅಭಿನಂದನಾರ್ಥವಾಗಿ ಸೊಲ್ಲಾಪುರ ಸ್ಕೂಲ ಬೋರ್ಡಿಂಗ್‌ಮನ್, ಕಾಮ್ಯತೀರ್ಥ, ನ್ಯಾಯತೀರ್ಥ ಇತ್ಯಾದಿ ಪರೀಕ್ಷೋತ್ತೀರ್ಣ ವೈನಶ್ಯಾವಕಾಶ್ರಮದ ಸಕ್ರೆಟರಿ, ಶ್ರೀ॥ ಕಃ॥ ಸುಮತೀಜಾಯ ಶಹ ಇವರ ಅಧ್ಯಕ್ಷತೆಯಲ್ಲಿ ಸಭೆಯು ನೆರವೇರಿತು.. ಪ್ರಧಮದಲ್ಲಿ ಸದಾಚಾರ ಸಮಾಜದ ಕುಮಾರಿಯರ ಜಗದ್ಗುರುಸ್ತುತಿಯಾದ ನಂತರ ಸ್ಥಾ॥ ಭಾಗೀರಥೀಬಾಯಿಯವರು ಸದರಿ ದಾನ ವೀರರ ಅಭಿನಂದನ ಠರಾವನ್ನು ಓದಿ ಅಧ್ಯಕ್ಷರ ಪರಿ ಚಯ ಮಾಡಿಕೊಟ್ಟರು ಆಮೇಲೆ ವೇ॥ ಪಂ॥ ಜಗದೀಶಶಾಸ್ತ್ರಿಗಳು, ವೇ॥ ಪಂ॥ ಮಲ್ಲಿಕಾರ್ಜುನಶಾಸ್ತ್ರಿಗಳು, ಶ್ರೀ॥ ಬಂಡಪ್ಪಯ್ಯಂಜೆಕಲೇರು, ಶ್ರೀ॥ ಸಿದ್ಧರಾಮಪ್ಪ ಚಪ್ಪಳಗಿ, ಶ್ರೀ॥ ಗುರುಮೃ ಮಹಸತ್ತಿ ಇವರ ಸಮಯೋ ಚಿತ ಭಾಷಣಗಳಾದವು. ಬಳಿಕ ಶ್ರೀ॥ ಷ॥ ಬ್ರ॥ ಬಾಲ ತಪಸ್ವಿ ಚನ್ನವೀರಶಿವಾಚಾರ್ಯರು ದಾನಿಗಳ ಲಕ್ಷಣ ವನ್ನು ಕುರಿತು ಉಪದೇಶ ಮಾಡಿದರು ತರುವಾಯ ಶ್ರೀ॥ ರೇವಣಸಿದ್ಧಪ್ಪ ವಾಸ್ತರ ದುಲಂಗೆ ಇವರು ದಾನದ ಸದುಪಯೋಗವನ್ನು ಪ್ರತಿಪಾದಿಸಿದರು. ಆಮೇಲೆ ಅಧ್ಯಕ್ಷ ಭಾಯಿಂವರು ಎಲ್ಲಾ ಭಾಷಣಗಳ ಸಾರಾಂಶವನ್ನು ತೆಗೆದುಕೊಂಡು ಶ್ರೀ॥ ಶರಣಪ್ಪನ್ನ ನವರ ಗುಣಗಾನವನ್ನು ಮಾಡಿದರು ಆಮೇಲೆ ಜಗ ದ್ಗುರು ಜಯಘೋಷಮೊಂದಿಗೆ ಸಭೆಯು ವಿಸರ್ಜಿಸಲ್ಪಟ್ಟಿತು

ಓರ್ವ ಸಭಿಕ

ಶ್ರೀಮಜ್ಜಗನ್ಮುರು ಪಂಚಾಚಾರ್ಯಾಃ ಪ್ರಸೀದಂತು

ಉಪದೇಶೋತ್ಸವ ಸೊಲ್ಲಾಪುರ

ಈ ಜಗತ್ತಿನಲ್ಲಿ ಎಲ್ಲಾ ಪ್ರಾಣಿಗಳಿಂಕಲೂ ಮಾನವನೇ ಶ್ರೇಷ್ಠನಾಗಿರುವನು ಆದುದರಿಂದಲೇ "ದುರ್ಲಭಂ ಮಾನುಷಂ ಜನ್ಮ" ಎಂದು ಮಹಾತ್ಮರು ಹೇಳಿದ್ದಾರೆ. ಅದಕಾರಣ ಮಾನವನು ಈ ಜಗತ್ತಿನಲ್ಲಿ ಜನ್ಮ ತಾಳಿ ಕ್ಷೀಣಕವಾದ ಸಂಸಾರ ಸುಖವಲ್ಲಿ ಬಿದ್ದು ತನ್ನ ಜನ್ಮವನ್ನು ಧಿರರ್ಥಕವಾಗಿ ಮಾಡಿಕೊಳ್ಳುವುದಕ್ಕಿಂತಲೂ ನಿತ್ಯಸುಖವನ್ನು ಹೊಂದಲು ಪ್ರಯತ್ನಿಸಬೇಕು ಈ ನಿತ್ಯಸುಖವು ಗುರುವಿನಿಂದಲೇ ಲಭಿಸುವುದಲ್ಲದೆ ಇತರರಿಂದ ಲಭಿಸಲಾರದು. ಅದುದರಿಂದ ವೇದಾಗಮಗಳು "ನ ಗುರೋರಧಿಕಂ" "ನ ಗುರೋರಧಿಕಂ" ಎಂದು

[೬ನೆಯ ಪುಟವನ್ನು ನೋಡಿ.]

ಪಂಚಾಚಾರ್ಯಪ್ರಭಾ.

೧೯೪೦ ನೆಯ ನವೆಂಬರ್ ತಾ॥ ೧೮ನೇ ಸೋಮವಾರ

6

ಶ್ರೀಜಗದ್ಗುರು ಭೂಕುಂಡಲಿಂಗಶಿವಾಚಾರ್ಯರು.

ಈ ಮಹಾತ್ಮರ ಈಗ್ಗೆ ೩೧೦೦ ವರ್ಷಗಳ ಪೂರ್ವದಲ್ಲಿ ಕೇದಾರ ಕ್ಷೇತ್ರದಲ್ಲಿರುವ ಶ್ರೀಜಗದ್ಗುರು ಏಕೋರಾಮಾರಾಧ್ಯರ ಧರ್ಮಸಿಂಹಕ್ಕೆ ಅಧಿಪತಿಗಳಾಗಿದ್ದರು. ಈ ಪವಿತ್ರನಾಮವು ದಕ್ಷಿಣ (ಜೂಲ) ದೇಶದ ವೀರಾಗಾಹೇಶ್ವರಬ್ರಾಹ್ಮಣಜಂಗಮದಲ್ಲಿ ಜನ್ಮವೆತ್ತಿದವರು ಈ ಮಹಾತ್ಮರು ಬಾಲ್ಯದಲ್ಲಿಯೇ ಸಕಲಶಾಸ್ತ್ರಗಳನ್ನೂ ಅಭ್ಯಾಸ ಮಾಡಿ ಪರಿಪಾಕವಿಸಿದ್ದರು. ಸರ್ವತ್ರ ಕೃಪೆ, ವಿಶಿಷ್ಟಾದ್ವೈತಸಿದ್ಧಾಂತವನ್ನು ಸಾರಿಹೇಳುವ ಇವರಲ್ಲಿ ರತಕ್ಕ ಅತ್ಯುತ್ಸವ ಹಿಮಾತಿರೇಯವನ್ನು ಕಂಡು ಆ ಕಾಲದ ಜನರು ಈ ಮಹಾತ್ಮನನ್ನು ವೀರಭದ್ರನ ಅವತಾರವಾಗಿಯೆ ಮತ್ತು ಕರೆಯತೊಡಗಿದರು. ಈ ಮಹಾತ್ಮರು ಬ್ರಹ್ಮಚರ್ಯಾವಸ್ಥೆಯಲ್ಲಿಯೇ ಸ್ವದೇಶವನ್ನು ತ್ಯಜಿಸಿ, ಸರ್ವಸ್ವದೇಶಗಳಲ್ಲಿಯೂ ವಿಸ್ತಾರವಾಗಿ ಪ್ರಚಾರಮಾಡಿ ಶಿವಾದ್ವೈತಸಿದ್ಧಾಂತವನ್ನು ಸ್ಥಾಪಿಸಿ ಪುನರಾಗಮಿಸಿ ವಿಜಯವನ್ನು ಪಡೆಯುತ್ತ, ಆಸೇತುಹಿಮಾಚಲಪರ್ಯಂತ ಅಸ್ಖಲಿತಸಮಾಧಿಯಿಂದ ಸಂಚರಿಸಿ, ಕಾಶೀಕ್ಷೇತ್ರಕ್ಕಾಗಮಿಸಿ, ಶ್ರೀಜಗದ್ಗುರುವಿಶ್ವಾರಾಧ್ಯರ ಕಾಶೀಕ್ಷೇತ್ರಸಿಂಹಾಸನವನ್ನು ಅಲಂಕರಿಸಿ ಸಹಸ್ರಾರು ಮಹಾ ಮಹಾ ಪಂಡಿತರಲ್ಲಿಯೂ ಈ ಮಹಾತ್ಮರ ಅದ್ವಿತೀಯಪಾಂಡಿತ್ಯವನ್ನೂ, ಶಿವಯೋಗಸ್ಫುರಿತವನ್ನೂ ಕಂಡು ಬೆರಗಾಗಿ, ಶಿಷ್ಯವೃತ್ತಿಯನ್ನವಲಂಬಿಸಿ ಶಿವಾದ್ವೈತಸಿದ್ಧಾಂತಸಿಂಹಾಸನವನ್ನು ಪಡೆದುಕೊಂಡು ಧನ್ಯರಾದರು ಹಿಗಿರಿತ್ತಿರಲು ಒಂದು ಸುಮುಹೂರ್ತದಿವಸ ಈ ಮಹಾತ್ಮರಿಗೆ ಶ್ರೀಕೇದಾರಕ್ಷೇತ್ರವನ್ನು ಸಂದರ್ಶಿಸಬೇಕೆಂಬ ಅಪೂರ್ವ ಆಲೋಚನೆಯುಂಟಾಯಿತು. ಆಗ್ಗೆ ಇವರು ತಮ್ಮ ಸಂಗಡ ಒಂದಿನ್ನೂರು ವೀರಾಗಾಹೇಶ್ವರಬ್ರಾಹ್ಮಣಜಂಗಮರನ್ನೂ ಹೆಸರುಹೇಳಿ ಕರೆಯಿಸಿ ಕಾಶೀಕ್ಷೇತ್ರದಲ್ಲಿಯೇ ಬೆಟ್ಟು ಕೇದಾರಕ್ಷೇತ್ರಕ್ಕೆ ಪ್ರಯಾಣಮಾಡಿ, ಶ್ರೀಜಗದ್ಗುರು ಈಶಾನಸಿರವರಲ್ಲಿ ವಾಸಿಸಹಿತರಾದರು. ಶ್ರೀಜಗದ್ಗುರು ಈಶಾನಸಿರವರಲ್ಲಿ ಈ ಪವಿತ್ರಾಗಮಸಿದ್ಧಾಂತವನ್ನು ಸಂಸ್ಥಾಪಿಸಿ ಶಿವಯೋಗಸ್ಫುರಿತವಾದ ಸಕಲಶಾಸ್ತ್ರಪ್ರವಚನವನ್ನು ಕಂಡು ಪ್ರಸನ್ನರಾಗಿ, ಈ ಮಹಾತ್ಮನಿಗೆ ಪವಿತ್ರವಾದ ಲಿಂಗಾಂಗಸಾಮರಸ್ಯವನ್ನು ಅನುಗ್ರಹಿಸಿದರು. ಈ ಮಹಾತ್ಮರಿಗೆ ಶ್ರೀಕೇದಾರಲಿಂಗಭೂಕುಂಡಲಿಂಗವೆಂಬ ಪವಿತ್ರನಾಮವನ್ನು ಅನುಗ್ರಹಿಸಿ ಶಿವಾಚಾರ್ಯಪಟ್ಟವನ್ನು ಕಟ್ಟಿ ಸಂಸ್ಥಾಪಿಸಿ ಇತ್ತ ಶ್ರೀಕಾಶೀಕ್ಷೇತ್ರದ ಪ್ರಸಿದ್ಧ ಪೀಠಾಧಿಪತಿಯಾಗಿದ್ದ ಶ್ರೀಜಗದ್ಗುರು ವಿಶ್ವಾರಾಧ್ಯರು ಈ ಮಹಾತ್ಮರ ಧೈರ್ಯಸ್ಥೈರ್ಯಾದಿಗಳನ್ನು ಪರೀಕ್ಷಿಸಿ ಸಂತೋಷಪಟ್ಟು ಈ ಮಹಾತ್ಮರಿಗೆ ಶಿವಾಗಮಸಿದ್ಧಾಂತ

ಇಟಲಿಗೆ ಸೋಲು

ಗ್ರೀಸಿನ ಮೇಲೆ ದಂಡೆತ್ತಿಹೋಗಿರುವ ಇಟಲಿಗೆ ಜಯವಾಗುವುದಕ್ಕೆ ಪ್ರತಿಯಾಗಿ ಸೋಲುಂಟಾಗತ್ತಿದೆ. ಇಟಲಿಯ ಪತ್ರಿಕೆಗಳು ಮಾತ್ರ ತಮಗೆ ಜಯವಾಗುತ್ತಿದೆಯೆಂದೂ ತಮ್ಮ ಸೈನ್ಯಗಳು ಮುಂದುವರಿಯುತ್ತಿವೆಯೆಂದೂ ಬರೆಯುತ್ತಿವೆ. ಯುದ್ಧಾರಂಭವಾಗಿ ಮೂರು ವಾರಗಳಾದೂ ಇಟಲಿ ಸೈನಿಕರು ಇನ್ನೂ ಗ್ರೀಸಿನ ಗಡಿಯಲ್ಲೇ ಇದ್ದಾರೆ. ಗ್ರೀಕ್ ಸೈನಿಕರು ಮುಂದೆ ನುಗ್ಗಿ ಇಟಲಿಯವರನ್ನು ಸೆರೆಹಿಡಿಯುತ್ತಿದ್ದಾರೆ. ಗ್ರೀಸಿಗೆ ಬ್ರಿಟನ್ನಿನ ಸಹಾಯ ದೊರೆಯಲಿದೆಯೆಂಬುದೂ ಬ್ರಿಟನ್ನಿನ ಸೈನ್ಯಪಡೆಗಳು ಸಹಾಯಕ್ಕೆ ಬರುತ್ತಿರುವುದೆಂಬುದೂ ಇಟಲಿಗೆ ತಿಳಿದಿದ್ದರೂ ಅದನ್ನು ತಡೆಯಲು ಇಟಲಿಯು ಪ್ರಯತ್ನಿಸಲೇನನ್ನೂ ಮಾಡಿಲ್ಲ. ಇಟಲಿಯ ನೌಕಾಬಲವು ಬ್ರಿಟನ್ನಿನ ನೌಕಾಬಲವನ್ನೆದುರಿಸುವಷ್ಟು ಶಕ್ತವಾಗಿಲ್ಲ. ಗ್ರೀಸು ತನ್ನನ್ನು ಪ್ರತಿಭಟಿಸುವುದೆಂದು ಇಟಲಿಯು ನಿರೀಕ್ಷಿಸಿರಲಿಲ್ಲ. ಗ್ರೀಸನ್ನು ದಾಟಿ ಈಜಿಪ್ಟಿನಲ್ಲಿ ಲಾಭ ಹೊಂದಬೇಕೆಂದಿದ್ದ ಇಟಲಿಗೆ ಈಗ ತನ್ನ ಹಕ್ಕ ಗತವಾಗಿದ್ದ ಅಲ್ಬೇನಿಯದೇಶವನ್ನು ಕಳೆದುಕೊಳ್ಳುವ ಪರಿಸ್ಥಿತಿಯುಂಟಾಗಿದೆ

ಈಜಿಪ್ಟಿನ ಫರೂಕ್ ದೊರೆಗಳ ಭಾಷಣ

ಈಜಿಪ್ಟಿನ ಪಾರ್ಲಿಮೆಂಟ್ ಸಭೆಯ ಆರಂಭಭಾಷಣದಲ್ಲಿ ಫರೂಕ್ ದೊರೆಗಳು ಈ ರೀತಿ ತಿಳಿಸಿದರು. "ಈಗಿನ ದ್ವೇಷಪೂರ್ಣವಾದ ಯುದ್ಧದಲ್ಲಿ ಈಜಿಪ್ಟು ವಿನೇಕಯುತವಾದ ಮತ್ತು ತನ್ನ ರಕ್ಷಣೆಯನ್ನು ಸಾಧಿಸಿಕೊಂಡುಬಿಡಲು ಹೊತ್ತಿರುವ ಕರ್ತವ್ಯವನ್ನು ನೆರವೇರಿಸಲು ಸಾಧ್ಯವಾಗುವಂತಹ ನೀತಿಯನ್ನೆ ಅನುಸರಿಸುತ್ತ ಬಂದಿದೆ. ಇಟಲಿಯು ಸಂಗ್ರಾಮ ಪ್ರಸೇರಮಾಡಿದೆಯೇ ಈಜಿಪ್ಟಿನ ಪಾರ್ಲಿಮೆಂಟು ಸಭೆ ಸೇರಿರುವದು ಇದೇ ಮೊದಲು ಬ್ರಿಟನ್ನಿನೊಡನೆ ಮಾಡಿಕೊಂಡಿದ್ದ ಒಪ್ಪಂದವನ್ನು ಈಜಿಪ್ಟು ಅಕ್ಷರಶಃ ಪಾಲಿಸಿದೆ ಯುದ್ಧವು ಎಲ್ಲೆಲ್ಲಿ ವ್ಯಾಪಿಸಿಹ್ಲಪೋ ಆ ದೇಶಗಳೂಡನೆ ಮಿತ್ರಭಾವವನ್ನು ಳಿಸಿಕೊಳ್ಳಲು ಸಹ ಈಜಿಪ್ಟು ಯತ್ನಿಸಿದೆ. ಅದು ನಡೆಯುತ್ತಿರುವ ಘಟನಾವಳಿಗಳನ್ನೆ ಬಹಳ ಎಚ್ಚರಿಕೆಯಿಂದ ಪರಿಶೀಲಿಸುತ್ತಿದೆ. ಅದಕ್ಕೆ ಅತ್ಯನಿಶ್ಚಾಸವುಂಟು ತನ್ನ ವಿಶ್ವರಾಷ್ಟ್ರವಾದ ಬ್ರಿಟನ್ನಿನ ಸಲ್ಲಿ ನಬಹಿಷ್ಕಾರವುಂಟು ತನ್ನ ರಾಜಕೀಯಕ್ಕೂ ಸ್ವಾತಂತ್ರ್ಯಕ್ಕೂ ಈಜಿಪ್ಟು ಅಪಾರ ಬೆಲೆಕೊಡುತ್ತದೆ ತನ್ನ ಪ್ರಭುತೆಯನ್ನೂ ಪ್ರಾಂತಿಕ್ಷೇತ್ರವನ್ನೂ ಸ್ಥಾಪಿಸಲು ಎಂತಹ ಎಪತ್ತು ಬಂದರೂ ಅದನ್ನೆದುರಿಸಲು ಈಜಿಪ್ಟು ಸಿದ್ಧ ವಾಗಿದೆ. ನೀವು ಕಳೆದ ಅಧಿವೇಶನದಲ್ಲಿ ಶಿಫಾರಸು ಮಾಡಿದ ಈ ನೀತಿಗೆ ಈಜಿಪ್ಟಿಯ ಜನಾಂಗದ ಬೆಂಬಲವಿದೆ ಇದು ವಿವೇಕಯುತವಾದ ನೀತಿ ಅದರಿಂದ ಉತ್ತಮ ಫಲಗಳು ಲಭಿಸಿ ಈಜಿಪ್ಟಿನ ಜನೆಯೆಲ್ಲಾ ನೆರೆ ವೀರುವೆಂಬು ನಂಬಿಕೆಯಿಂದ ನಮ್ಮ ಸರ್ಕಾರದವರು ಈ ನೀತಿಯನ್ನು ಅನುಸರಿಸುತ್ತ ಬಂದಿದ್ದಾರ ಈಜಿಪ್ಟಿನ ಮಿತ್ರವರ್ತನದಿಂದ ಅಂತರ್ಜಾತೀಯಪೂರ್ವಕ ಸಹಾಯ ಪ ದೊರೆತಿದೆ ಹತ್ತಿಯನ್ನು ಕೊಳ್ಳಲು ಹೊಸ ಒಪ್ಪಂದವಾಗಿದೆ ಬ್ರಿಟನ್ನಿನ ಸಹಕಾರದಿಂದ ಈಜಿಪ್ಟಿನ ಪೂರ್ಣಾಸಿನ ಮಾರ್ಕೆಟ್ಟುಗಳನ್ನು ಪುನರ್ವ್ಯವಸ್ಥೆಗೊಳಿಸಲಾಗಿದೆ ಹೊರದೇಶಗಳು ಗಲಭೆಗಳು ಈಜಿಪ್ಟಿನಲ್ಲಿ ಇಷ್ಟಾಗಿ ಯಾವ ಪರಿಣಾಮವನ್ನೂ ಉಂಟುಮಾಡಿಲ್ಲ" ಎಂದು ನುಡಿದರು

ಶ್ರೀರೂಜ್‌ವೆಲ್ಟರ ಭಾಷಣ

ಕಳೆದ 11ನೆಯ ತಾರೀಖಿನ ದಿವಸ ಆರ್ಮಿಸ್ಟಿಸ್ ದಿನಾಚರಣೆಯ ಸಂಬಂಧವಾಗಿ ಅಮೆರಿಕೆಯ ಅಧ್ಯಕ್ಷರಾದ ಶ್ರೀ ರೂಜ್‌ವೆಲ್ಟರು ಅರ್ಲಿಂಗ್ಟನ್ ನಿವೇಶ್ಮಿಯಲ್ಲಿಯ ಒಟ್ಟು ಸಾಮಾನ್ಯ ನಿಕಾಯದ ಗೋರಿಯಮುಂದೆ ನಿಂತು ಭಾಷಣಮಾಡುತ್ತ "ಪ್ರಾಚೀನಕಾಲದ ಗುಲಾಮಿಗಿರಿ ಜಗತ್ತು ತಿರಿಗಿ ಇಳಿಯುವವರಿಲ್ಲ ಪಾಳೇಗಾರರ ಪ್ರಭುತ್ವಗಳಾಗಲಿ, ಚಕ್ರವರ್ತಿಗಳ ನಿರಂಕುಶಪ್ರಭುತ್ವಗಳಾಗಲಿ, ಅಧುನಿಕ ಸರ್ವಾಧಿಕಾರಿ ಪ್ರಭುತ್ವಗಳಾಗಲಿ ಉಳಿಯುವವಿಲ್ಲವೆಂದು ಹಾನು ದೃಢವಾಗಿ ನಂಬಿದ್ದೇನೆ. ಸರ್ವಾಧಿಕಾರಗಳ ಪದಾಘಾತಕ್ಕೆ ಸಿಕ್ಕಿ ನರಳುತ್ತಿರುವ ಪ್ರಜೆಗಳು ದಂಗೆಯೇಳುವದು ಖಂಡಿತ ಪ್ರಜಾಪ್ರಭುತ್ವವೇ ಆದ ಕಾಲ ಉಳಿಯುತ್ತದೆ." ಎಂದು ಹೇಳಿದರು. ಸಂಗ್ರಾಮ ಕ್ಕಾಗಿ ಅಮೆರಿಕೆಯು ಮಾಡುತ್ತಿರುವ ತ್ಯಾಗವು ನಿಷ್ಪ್ರಯೋಜನಕರವೆಂದು ಅಮೆರಿಕೆಯ ಕೆಲವು ಪ್ರಜೆಗಳು ನಡೆಯುತ್ತಿರುವ ದೇಶಾಭಿಮಾನರಹಿತಹೇಳಿಕೆಗಳನ್ನು ಖಂಡಿಸಿದರು.

ಅಮೆರಿಕದಿಂದ ಯುದ್ಧಸಾಮಗ್ರಿಗಳು ಬಂದವು

ಅಮೆರಿಕದಿಂದ ಆಯುಧಗಳನ್ನೂ ಮದ್ದುಗುಂಡುಗಳನ್ನೂ ತುಂಬಿಕೊಂಡು ಬಂದ ಮೊದಲನೆಯ ಹಡಗು ಬ್ರಿಟನ್ನಿಗೆ ತಲಪಿತು ಅದರಲ್ಲಿ ರಿವಾಲ್ವರ್‌ಗಳೂ ಸಾವಿರಾರು ತೋಪಾಗಳೂ ಇದ್ದವು. ಅಮೆರಿಕದ ಪ್ರಜೆಗಳು ಬ್ರಿಟನ್ನಿನ ಗೃಹಗಳ ರಕ್ಷಣೆಗಾಗಿ ಅವುಗಳನ್ನು ಪ್ರೀತಿಯಿಂದ ಕಳುಹಿಸಿಕೊಟ್ಟಿದ್ದರು. ಇನ್ನೂ ಅನೇಕ ಹಡಗುಗಳು ಬರುತ್ತಿರುವದಾಗಿ ಹೇಳಲಾಗಿದೆ

ಅಮೆರಿಕೆಯ ಅದ್ಭುತ ವಿಮಾನಗಳು

ಅಮೆರಿಕೆಯು ಬಲಯುತವಾದ ಹಲವು ಬಾಂಬರ್ ವಿಮಾನಗಳನ್ನು ಬ್ರಿಟನ್ನಿಗೆ ಕೊಡುವುದು. ಇವು ವಿಮಾನ ಮೂಲಕದಿಂದ 2000 ಮೈಲಿಗಳ ದೂರದಲ್ಲಿರುವ ಪ್ರದೇಶಗಳ ಮೇಲೆ ಸುಲಭವಾಗಿ ಮುತ್ತಿಗೆ ನಡೆಯಬಲ್ಲವು. ಅಮೆರಿಕೆಯು ನಿರ್ಮಿಸಲಿರುವ ಸಂಗ್ರಾಮ ಸಾಧನಗಳಲ್ಲಿ ಅರ್ಧದಷ್ಟನ್ನು ಗ್ರೇಟ್ ಬ್ರಿಟನ್ನಿಗೆ ಒದಗಿಸಬಹುದೆಂದು ಅಧ್ಯಕ್ಷರು ತೀರ್ಮಾನಿಸಿದ್ದಾರೆಂದ ಈ ಜಾತಿಯ ಬಾಂಬರ ವಿಮಾನಗಳನ್ನು ಬ್ರಿಟನ್ನಿಗೆ ಒದಗಿಸಲು ಸಾಧ್ಯವಾಗಿದೆ ಈ ವಿಮಾನಗಳು ಹೆಚ್ಚುವೇಗದಿಂದ ಚಲಿಸುವವು ಹಿಂಭಾಗದಲ್ಲಿದ್ದರೂ ಫಿರಂಗಿಯವನಿಗೆ ರಕ್ಷಣ ಸೌಕರ್ಯವೊದಗಿಸಲ್ಪಟ್ಟಿದೆ.

ಲೆಬ್ರೈವಿಲ್ಲೆಯು ಸ್ವತಂತ್ರ ಫ್ರೆಂಚ್ ಸೈನಿಕರ ಕೈ ಸೇರಿತು.

ಕಳೆದ 11 ನೆಯ ತಾರೀಖಿನ ದಿವಸ ಸ್ವತಂತ್ರ ಫ್ರೆಂಚ್ ಯೋಧರು ಲೆಬ್ರೈವಿಲ್ಲೆಯನ್ನು ಪ್ರವೇಶಿಸಿದರೆಂದು ಡಿಗಾಲ್‌ರವರ ಮುಖ್ಯ ಕಚೇರಿಯು ಪ್ರಕಟಿಸಿದೆ ಹೊಡೆದಾಟವನ್ನು ನಿಲ್ಲಿಸಿ ಶರಣಾಗತರಾಗಬೇಕೆಂದು ಜನರಲ್ ಟೀಟ್ಸರವರು ತಮ್ಮ ಕಡೆಯವರಿಗೆ ಆಜ್ಞೆ ಮಾಡಿರಂದೂ, ಎರಡು ಕಡೆಯಲ್ಲೂ ಒಟ್ಟು ಸ್ವಲ್ಪ ಸತ್ಯವಾಯಿತೆಂದೂ ತಿಳಿದಾಗಿದೆ ಡಿಗಾಲ್‌ರವರು ಟೀ ಕ್ಷೆ ಮಾರಂಟಿರವರನ್ನು ಗೆಬ್ರಾಸ್ಟನ ಗೌವ್ರರನ್ನಾಗಿ ನೇಮಿಸಿದ್ದಾರೆ

ರಷ್ಯ ಮಹಾಪ್ರಧಾನರಿಗೆ ಜರ್ಮನಿಯಲ್ಲಿ ಮುತ್ತಿಗೆಯ ಬಿಸಿತಟ್ಟಿತು.

ಕಳೆದ 13 ನೆಯ ತಾರೀಖಿನ ರಾತ್ರಿ ರಷ್ಯದ ವಿದೇಶ ಪ್ರಧಾನರಾದ ಎಂ ಮೊಲೋಟೋವರು ನಾಜಿ ಅಧಿಕಾರಿಗಳಿಗೆ ಬರ್ಲಿನ್ ನಗರದಲ್ಲಿ ಸತ್ಕಾರಕೂಟವೇರ್ಪಡಿಸಿದ್ದರು ಅದೇ ಸಮಯದಲ್ಲಿ ಬ್ರಿಟಿಷ್ ವಿಮಾನಗಳು ಬರ್ಲಿನ್ ಮೇಲೆ ಮುತ್ತಿಗೆ ನಡೆಸಿದವು. ಬೆಳಿಗ್ಗೆ ಜಾವದ ವರೆಗೆ ಮುತ್ತಿಗೆ ನಡೆಯು ವಿಮಾನಗಳು ಹಿಂತಿರುಗುವವರೆಗೆ ಮೊಲೋಟೋವ ಅತಿಥಿಗಳೆಲ್ಲರೂ ಅಲ್ಲೇ ಇರಬೇಕಾಯಿತು.. ಈ ಮುತ್ತಿಗೆಯಿಂದ ಬರ್ಲಿನ್ನಿಲ್ಲಿ ಅನೇಕ ಕಡೆ ಬೆಂಕಿ ಹತ್ತಿಕೊಂಡಿತು ಮೊಲೋಟೋವರಿಗೆ ವಿಮಾನ ಮುತ್ತಿಗೆಯ ಪ್ರಥಮ ಅನುಭವವಾಯಿತು

ಬ್ರಿಟಿಷ್ ನೌಕಾಬಲದ ಸಾಹಸ.

ಇಟಲಿಯ ಮಾರಗವಿರುವ ಇಟಲಿ ಅಲ್ಬೇನಿಯಾಗಳ ಮಧ್ಯದಲ್ಲಿರುವ ಆಟ್ರಾಂಟೋ ಜಲಸಂಧಿಯ ಬಳಿ ಬ್ರಿಟನ್ನಿನ ನೌಕಾಬಲವು ಕಳೆದ ಸೋಮವಾರ ರಾತ್ರಿ ಶತ್ರು ಗಳಿಗೆ ಸೇರಿದ 4 ನ್ಯಾಷಾರ ಹಡಗುಗಳ ಮೇಲೂ ಅವು ಗಳ ರಕ್ಷಣಾಕಾರ್ಯದಲ್ಲಿದ್ದ ಡಿಸ್ಟ್ರಾಯರ್ ಯುದ್ಧನೌಕೆಗಳ ಮೇಲೂ ಆಕ್ರಮಣ ನಡೆಸಿತು. ಇದರಿಂದ ಒಂದು ವ್ಯಾಪಾರ ನೌಕೆಯು ಮುಳುಗಿತು. ಎರಡು ಹಡಗುಗಳಿಗೆ ಬೆಂಕಿಬಿದ್ದು ಹೆತ್ತಿಕೊಂಡಿತು. ಬಹುಶಃ ಅವುಗಳೂ ಮುಳುಗಿ ಹೋಗಿರಬಹುದೆಂದು ಊಹಿಸಲಾಗಿದೆ. ಸಾಳ್ವನೆಯ ಹಡಗಿಗೆ ಸ್ವಲ್ಪ ಬಿಟ್ಟಿದ್ದು ತಪ್ಪಿಸಿಕೊಂಡು ಓಡಿತು ರಕ್ಷಣಕಾರ್ಯದಲ್ಲಿದ್ದ ಎರಡು ಡಿಸ್ಟ್ರಾಯರುಗಳೂ ತಪ್ಪಿಸಿಕೊಂಡು ಓಡಿಹೋದವು

ರುಮೇನಿಯದಲ್ಲಿ ಭಯಂಕರ ಭೂಕಂಪ

ರುಮೇನಿಯದಲ್ಲಿ ಭಾರಿ ಭೂಕಂಪವಾಗಿ ಬುಕಾರೆಸ್ಟ್ ನಗರವು ವಿಶೇಷಗೊಳಗಾಯಿತು. ಅದಾನೆ ಪತ್ತ್ಯ ಸೈನ್ಯ ಕಚೇರಿಗಳು ಅಪಾಯಕ್ಕೊಳಗಾಗಿವೆ ಎಂದು ಅಂತಸ್ಸಿನ ಕಾರ್ಲ್ಟನ್ ಭವನವು ನೆಲಸಮವಾಯಿತು! 200 ಜನರಿಗಿಂತ ಹೆಚ್ಚು ಪುಂಡಿ ಅದರಡಿ ಶಿಕ್ಕಿ ಸತ್ತರು. 14 ಅಂತಸ್ಸಿನ ಟೆಲಿಫೋನ್ ಎಕ್ಸ್‌ಚೇಂಜ್ ಕಟ್ಟಡವು ಹಾಳಾಗಿದೆ ನಗರದಲ್ಲಿ ಆಪಾಯಕ್ಕೊಳಗಾಗದ ಒಂದು ಮನೆಯೂ ಇಲ್ಲ. ಉರುಳಿ ಬಿದ್ದ ಕಟ್ಟಡಗಳಿಂದ ರಸ್ತೆ ಗಲ್ಲಿ ಸಂಚಾರವೇ ನಿಂತುಹೋಗಿದೆ ಈಚೆಗೆ ಬಂದ ವರ್ಷ ಮಾನದಂತೆ 10 ಸಾವಿರಕ್ಕಿಂತ ಹೆಚ್ಚು ಜನರು ಭೂಕಂಪದಿಂದ ಮೃತರಾಗಿರುವರೆಂದು ತಿಳಿದು ಬರುತ್ತದೆ

ಮೂಲತೋರವರು ಹಿಂದಿರುಗಿದರು

ಒಟ್ಟುರೊಡನೆ ಮಾತುಕತೆ ನಡೆಸಲು ಬರ್ಲಿನ್ನಿಗೆ ಹೋಗಿದ್ದ ರಷ್ಯದ ಸಚಿವರಾದ ಎಂ ಮೂಲಟೋವ್ ರವರು ಅವರೊಡನೆ ಎರಡುಸಾರಿ ವಿಷಯುಗಳನ್ನು ಚರ್ಚಿಸಿದರು ಪರಸ್ಪರ ನಂಬಿಕೆಯಿಂವ ಕೂಡಿದ ಮಾತುವರಣದಲ್ಲಿ ವಿಚಾರವಿನಿಮಯವಾಗಿ ಎರಡು ದೇಶಗಳ ಹಿತಕ್ಕೆ ಸಂಬಂಧಿಸಿದ ಎಲ್ಲಾಪಶ್ನೆಗಳ ವಿಚಾರದಲ್ಲೂ ಒಪ್ಪಂದಕ್ಕೆ ಬರಲಾಯಿತೆಂದು ಜರ್ಮನ್ ಸುದ್ದಿಯು ತಿಳಿಸುತ್ತದೆ ಎಂ ಮೂಲಟೋವರು ಕಳೆದ 16 ನೆಯ ತಾರೀಖಿನ ಪ್ರಾತಃಕಾಲ ಮಾಸ್ಕೋ ನಗರಕ್ಕೆ ಹಿಂದಿರುಗಿದರು.

ಗ್ರೀಕರು ಜಯಶೀಲರಾಗುತ್ತಿದ್ದಾರೆ

ಗ್ರೀಕರು ಇಟಲಿಯಕಡೆಗೆ ಮುಂದುವರೆಯುತ್ತಿದ್ದಾರೆ. ಮೂರುವಾರೆ ಇಟಲಿ ಸೈನಿಕರು ನಡೆಸಿದ ಆಕ್ರಮಣ ಪ್ರಯತ್ನವು ವಿಫಲವಾಯಿತು ಇಟಲಿಯಕಡೆ 10 ವಿಮಾನಗಳು ನಾಶಮಾಡಲ್ಪಟ್ಟವು ಗ್ರೀಸಿನ ಕಡೆ 3 ವಿಮಾನಗಳು ನಾಶವಾದವು ಗ್ರೀಕ್ ಸೈನಿಕರು ಉತ್ತರದಲ್ಲಿ ಹೆರೋಜ ಎಂಬ ಪ್ರದೇಶದ ಬಳಿ ಮುಂದೆ ನುಗ್ಗಿ ಇಟಲಿ ಸೈನಿಕರನ್ನು ಸುತ್ತುವರಿದಿರುವರೆಂದು ಹೇಳಲಾಗಿದೆ. ದಕ್ಷಿಣವಲ್ಲಿ ಗ್ರೀಕರು ಕಲಾಮಾಸ್ ನದಿಯನ್ನು ದಾಟಿ ಇಟಲಿಯವರನ್ನು ಆಲ್ಬೇನಿಯದ ಕಡೆ ಹಿಮ್ಮೆಟ್ಟಿಸಿದ್ದಾರೆ. ಮಧ್ಯಪ್ರದೇಶದಲ್ಲೂ ಗ್ರೀಕರಿಗೇ ಜಯವಾಗಿದೆ ಸಂಗ್ರಾಮವಾರಂಭವಾದ ದಿನ ಇದ್ದ ಸ್ಥಳದಿಂದ ಗ್ರೀಕರು ಸ್ವಲ್ಪವೂ ಹಿಮ್ಮೆಟ್ಟಿಲ್ಲವೆಂದು ತಿಳಿದುಬರುತ್ತದೆ

ಸ್ವೀಕಾರ.

ಸೊಳ್ಳಾಪುರ ಟವನ್ಷಿನ ಸದ್ಭಕ್ತರು ಹೊಟ್ಟಿಗಿ ಶ್ರೀಗಳ ವರು ಕಾರ್ತಿಕ ಶು॥ ೫ ದಿವಸ ಅಧಿಕಾರವನ್ನು ಸಡೆಮಡ ರಿಂದ ಆ ಸ್ಥಾನಕೆಯಾಗಿ ಆ ದಿವಸ ಆಚಾರ್ಯಪೂಜಾ-ಗಣಾರಾಧನಾದಿಗಳಕ್ಕೆ ನೆರವೇರಿದ ಸಮಯದಲ್ಲಿ ಪ್ರಭಾವೋಪಣಕ್ಕಾಗಿ ಸಮರ್ಪಿಸಿದ 1 ರೂ ಮತ್ತು ಸೊಳ್ಳಾಪುರ ಹಿರಿಯಮೆರೆದ ವೆ॥ ವೀರಂತಯ್ಯಶಾಸ್ತ್ರಿಗಳು ತಮ್ಮ ಮನೆಯಲ್ಲಿ ಉಪದೇಶೋತ್ಸವವನ್ನು ನೆರವೇರಿಸಿದ ಸಮಯದಲ್ಲಿ ಸಮರ್ಪಿಸಿದ 1 ರೂ ಒಟ್ಟು 2 ರೂಪಾಯಿಗಳು ವಿರೂಪಾಕ್ಷಶರ್ಮಾ ದಾವಣಗೆರೆ ಇವರ ದ್ವಾರಾ ತಲ್ಲಿರುತ್ತವೆ

ಈ ಮೇಲ್ಕಂಡ ಮಹಾಶಯರಿಗೆ ಶ್ರೀ ಜಗದ್ಗುರು ಪಂಚಾಚಾರ್ಯರು ನಿಶ್ಚಮಂಗಳವನ್ನೀಯಲೆಂದು ಹಾರೈಸುತ್ತೇವೆ.

[೩ನೆಯ ಪುಟದಿಂದ ಮುಂದುವರಿದುದು.]

ಗುರುವಿನ ಶ್ರೇಷ್ಠತ್ವವನ್ನು ಸಾರಿರುವವು ಇವನ್ನು ತಿಳಿದೇ ವೇ॥ ವಿರಂತಯ್ಯಶಾಸ್ತ್ರಿ ಹಿರೇಮಠ ಮತ್ತು ಇವರ ಧರ್ಮಪತ್ನಿಯವರಾದ ಸೌ॥ ಮಾನಮ್ಮಬಾಯಿ ಇವರು ತಮ್ಮ ಜನ್ಮಸಾಪಲ್ಯಕ್ಕೋಸ್ಕರ ಶ್ರೀ॥ ಪಟ್ಟಾ ಬ್ರ॥ ಬಾಲತಪಸ್ವಿ ಚಿನ್ನವೀರ ಶಿವಾಚಾರ್ಯಸ್ವಾಮಿಗಳವರು ಹೊಟ್ಟಿಗಿ ಇವರಿಂದ ಉಪದೇಶವನ್ನು ಹೊಂದಿದರು ಈ ಪಂಪತಿಗಳು ಸನ್ಮಾರ ವಿಧಿಂದ ಉಪದೇಶವನ್ನು ಹೊಂದಿ ಕಾರ್ತಿಕ ಬಹು ೪ ದಿವಸಕ್ಕೆ ಎಂದರೆ ೪೯೮ ಅಂ ತಾರೀಖಿಗೆ ಒಂದು ವರ್ಷವಾದುದರಿಂದ ಆ ದಿವಸ ತಮ್ಮ ಗೃಹದಲ್ಲಿ ಆದರ ಆನ್ಮಾರ್ಥವನ್ನು ಬಹಳ ವೈಭವ ದಿಂದ ನೆರವೇರಿಸಿದರು ಈ ಪಂಪತಿಗಳು ಆ ದಿವಸ ಲಿಂಗೈ ಭೂಸನೂರು ಶ್ರೀ॥ ಪಟ್ಟಾ ಬ್ರ॥ ಗುರುಸಿದ್ಧ ಶಿವಾಚಾರ್ಯಸ್ವಾಮಿ ಗಳನ್ನು ಕರತಂದು ಬಹು ಭಕ್ತಿ ಯಿಂದ ಪಾದಪೂಜೆಯನ್ನು ಮಾಡಿ ಅನ್ನಸಂತರ್ಪಣೆ ಯನ್ನು ಮಾಡಿದರು ಅದೇ ದಿವಸ ಸಾಯಂಕಾಲ ಅಲ್ಲಿ ಸಭೆ ನೆರೆತು ಆ ಸಭೆಗೆ ವೇ॥ ಗರ್ಜಾಧರಶರ್ಮಾ ಆಮಂ ಗೊಂಡ ಇವರು ಶ್ರೀ॥ ಪಟ್ಟಾ ಬ್ರ॥ ಗುರುಸಿದ್ಧಶಿವಾಚಾರ್ಯ ಭೂಸನೂರು ಇವರು ಆಧ್ಯಕ್ಷರಾಗಬೇಕೆಂದು ಕೋರಿ ದರು ಇವಕ್ಕೆ ವೇ॥ ಲಂಕಾಸಂಪಶರ್ಮಾ ನೇದಲಿಗಿ ಇವರು ಅನುಮೋದನಪ್ಪಿತ್ತರ ಆಪಾಲೆ ಶ್ರೀಗಳ ಆಧ್ಯಕ್ಷತೆಯಲ್ಲಿ ನೇ॥ ರತ್ನಪ ಶಿಕ್ಷಾಶ್ರಿ ಸಾಲೋಟಗಿ ಇವರು 'ಶಿರಿಯಾಳಚಟ್ಟಿ' ಚಕ್ಕತ ಕಥೆಯನ್ನು ಶ್ರೇಷ್ಠ ನರೂಪಿಸಿದಂ ಚಿಕ ಮನೋಹರವಾಗಿ ೩ ಘಂಟೆಗಳ ವರೆಗೆ ಹೇಳಿದರು ಆನಂತರ ಶ್ರೀ॥ ಪಟ್ಟಾ ಬ್ರ॥ ಗುರು ಧರಶಿವಾಚಾರ್ಯರು ನೊಂ॥ ವೇಗಿಶಾ॥ಮಲ್ಲಿಕಾರ್ಜುನ ಶಾಸ್ತ್ರಿಗಳು ಮಣಿರು, ವೇ॥ ಲಂಕಾಸನ್ಯಾದಶರ್ಮಾ ನೇದಲಿಗಿ, ಸೌ॥ ಜಾಗೀರ್ದಾರ್ತೇಜಿ ಕಟುಪ ಇವರೆಲ್ಲರೂ ಕ್ರಮಪ್ರಕಾರವಾಗಿ "ವೀರಶೈವ ಪ್ರಾಶಸ್ತ್ಯ, ಉಸ ಧೇಶ, ಗುರುಗಳ ಅವಶ್ಯಕತೆ, ಗುರುವಿನ ಶ್ರೇಷ್ಠತೆ" ಈ ವಿಷಯಗಳ ಮೇಲೆ ಭಾಷಣ ಮಾಡಿದರು ಆನಂತರ ಅಧ್ಯಕ್ಷರಿ ಸಮಾರೋಪಭಾಷಣದಾನಿ ಂದಿನ ಕಾರ್ಯ ಕ್ರಮವು ಮಂಗಲದೊಡನೆ ಸಮಾಪ್ತಿಗೊಂಡಿತು ವೇ॥ ವೀರಂತಯ್ಯ ಶಾಸ್ತ್ರಿಗಳ ಯಾಜಗಳೂ ಗುರುಪೂಜಾ ಗುರುಶ್ರೇಷ್ಠತೆಸ, ದಿ ಧರ್ಮಕಾರ್ಯ ಇತ್ಯಾದಿ ಸತ್ಕಾರ್ಯ ಗಳಲ್ಲಿ ತೊಡಗಿರುವರು ಇವರು ಸದಾ ಶಿವಪೂಜೆಯ ಲ್ಲಿಯೇ ತಮ್ಮ ಅಮೂಲ್ಯವಾದ ಕಾಲವನ್ನು ಕಳೆಯುತ್ತಿ ರುವರು

ಇದಲ್ಲದೆ ಇವರ ಧರ್ಮಪತ್ನಿಯವರಾದ ಸೌ॥ ದಾನವ್ಮ ಬಾಯಿಯವರಾದರೂ, ಪತಿಶುಶ್ರೂಷೆಯಂತೆ ವರ್ತಿಸುತ್ತ, ಸ್ತ್ರೀಧರ್ಮಕ್ಕೆ ಆವಶ್ಯಕವಾದ ಪಾತಿವ್ರತ್ಯ ವನ್ನು ರಕ್ಷಿಸಿಕೊಂಡು ಸತ್ಕಾರ್ಯಗಳನ್ನು ಮಾಡಲು ಪತಿಗೆ ಸಹಾಯಕರಾಗಿ ಗುರು ಧ್ಯಾನದಲ್ಲಿ ಆಸಕ್ತರಾಗಿರು ವರು. ಈ ಆನಂದೋತ್ಸವ ಸಮಯದಲ್ಲಿ ಶ್ರೀ॥ ಪಟ್ಟಾಬ್ರ॥ ಗುರುಸ್ವಾಮಿ ಜೈನಾಪುರ ಹಿರೇಮಠ ಇವರ ಅಪ್ಪನೆಯಾ ದೇಗಿನೆ ಪ್ರಭುಪ್ರೋಷಣಕ್ಕಾಗಿ ೧೧ ರೂಪಾಯಿಯನ್ನು ಸಮರ್ಪಿಸಿದರು

ನಿರೂಪಾಸ್ಥಿತರ್ಮಾ, ದಾವಣಗೆರೆ
ವಾರವ ಸಂಸ್ಕೃತ ಸಾಂಕಿತಾಲಾ, ಸೊಲ್ಲಾಪುರ

ಶ್ರೀಜಗದ್ಗುರು ಪಂಚಾಚಾರ್ಯೇಭ್ಯೋ ನಮಃ

ಗುರುತ್ವಾಧಿಕಾರಸ್ಮಾರಕೋತ್ಸವ, ಸೊಲ್ಲಾಪುರ.

ತಾ॥ 4 11-40 ನೆಯ ಸೋಮವಾರ ಶ್ರೀ॥ ಪಟ್ಟಾ ಬ್ರ॥ ಬಾಲತಪಸ್ವಿ ಚಿನ್ನವೀರಶಿವಾಚಾರ್ಯರು ಬೃಹನ್ಮಠ ಹೊಟ್ಟಿಗಿ ಇವರು ಕಾರ್ತಿಕ ಶುದ್ಧ ಪಂಚಮಿ ದಿವಸ ಹೊಟ್ಟಿಗಿ ಹಿರೇಮಠಕ್ಕೆ ಅಧಿಕಾರಿಗಳಾಗಿ ನಿಯಮಿಸಲ್ಪ ಟ್ಟಿದ್ದರಿಂದ ಆ ದಿವಸವನ್ನು ಅತ್ಯಂತ ಪವಿತ್ರವಾಗ್ಮಾಗಿ ತಿಳಿದಂಥ ಸೊಲ್ಲಾಪುರದ ಸದ್ಭಕ್ತರು ಒಳ್ಳೆಯ ಭಕ್ತಿ ಯಿಂದ ಫಲಾಕೇಶ್ವರ ಮಠದಲ್ಲಿಯೂ ಶ್ರೀ ಮಾಸ್ಟರ್ ಪಾಟೀಲ ಇವರ ಮನೆಯಲ್ಲಿಯೂ ಶ್ರೀ ಲಿಂಗೇಶ್ವರ ಮೂರ್ತಿಗೆ ರುದ್ರಾಭಿಷೇಕಮಾಡಿ ಗಣಾಶಾರಾಧನೆಯನ್ನು ಮಾಡಿದರು ಆಮೇಲೆ ಸಾಯಂಕಾಲ ಶ್ರಾಲ್ಲ ಘಂಟೆಗೆ ಶ್ರೀಗಳವರ ತಪೋಬಲದ ವಿಷಯವಾಗಿ ವೇ॥ ಶಿವ ಗುಣಾರಿಧ್ಯ ಹೊಸಪೇಟೆ ಇವರು ಕೀರ್ತನಮಾಡಿ ಎಲ್ಲ ರನ್ನೂ ಆನಂದ ಗೊಳಿಸಿದರು ಅವರ ಗಾಯನಕಲೆಗೂ ಶ್ರೀಗಳವರ ಮಹತ್ವಕ್ಕೂ ಹಾಲಿಸಲ್ಲಿ ತಾಪ್ಪುವ ಬೆರೆದಂ ತಾಗಿ ಶ್ರೋತೃಗಳೆಲ್ಲರೂ ಆನಂದದಿಂದ ಜಯಘೋಷ ಮಾಡುತ್ತ ತಲೆದೂಗುತ್ತಿದ್ದರು ತರುವಾಯ ಶ್ರೀ॥ ಪಟ್ಟಾ ಭೂಸನೂರು ಶ್ರೀ॥ ಪಟ್ಟಾ ಬ್ರ॥ ಜೈನಾಪುರ ಗುರುಮೂರ್ತಿಗಳು, ಶ್ರೀ॥ ಪಟ್ಟಾ ಬ್ರ॥ ಗಂಗಾಧರ ಶಿವಾಚಾರ್ಯರು ಮೊರಬ, ಸೌ॥ ಶ್ರೀ॥ ಗುರುಮ್ಮ ಮಠದ ಪತ್ರಿ ಇವರು ಸಮಯೋಚಿತ ಭಾಷಣಮಾಡಿದರು ಆಮೇಲೆ ಸೌ॥ ಭಾಗೀರಥಿಬಾಯಿ ಯವರು ಶ್ರೀ॥ ವೇ॥ ಪಟ್ಟಾ ಶ್ರೀ ಕಾಶೀನಾಥಶಾಸ್ತ್ರಿಜಿಯವರ ಪರಿಶ್ರಮದಿಂದ ಇಂದ ಚಿಚ್ಛೈತನ್ಯಸ್ವರೂಪಿಗಳಾದ ಗುರುಮೂರ್ತಿಗಳು ಉಭಯವಾಗುತ್ತಿರುವೆವೆಂದೂ, ಶ್ರೀಗಳ ಇಂತಹ ಅನಂತ ಆನಂದೋತ್ಸವಗಳು ನೆರೆನೇರಿ ನಮ್ಮಂತಹ ಅಜ್ಞಾನಿಗಳ ಉದ್ಧಾರವಾಗಲೆಂದೂ ಶ್ರೀ ಜಗದ್ಗುರುಗಳ ಚರಣ ಸನ್ನಿಧಾನಕ್ಕೆ ಪ್ರಾರ್ಥಿಸಿದರು ಸಂಚಾಚಾರ್ಯರ ಜಯ ಘೋಷಪೂರ್ವಕವಾಗಿ ಸಭೆಯು ಮುಕ್ತಾಯವಾಯಿತು ಆ ಸಮಯದಲ್ಲಿ ಪ್ರಭುಪ್ರೋಷಣಕ್ಕೋಸ್ಕರ ೧೧ ರೂಪಯ ಸಮರ್ಪಿಸಲ್ಪಟ್ಟಿತ್ತ

ಒರ್ವ ಗುರುಭಕ್ತ

ನಿಷ್ಠೆಯ ಪ್ರಭಾವ.

ಲೇಖಕರು—ಶ್ರೀ ಪಟ್ಟಣಶೆಟ್ಟಿ ವೀರಂಭಿಕಾಚಾರ್ಯ ಕಿಲಾರಿ

ವಿಶ್ವವು ಎಲ್ಲಿಕ್ಕೂ ಶ್ರೇಷ್ಠವಾದುದು ವಿದ್ಯೆಯಿಂದ ರಾಷ್ಟ್ರಗಳಿಗೆ, ಸಮಾಜವಾಗಲಿ, ಉನ್ನತಶ್ರೇಣಿಗೆ ಬರುತ್ತದೆ ಧೃವ ಸಂಪಾದನೆಯಾಗುತ್ತದೆ. ರೋಗವಲ್ಲಿ ನೌರವವು ಬರುತ್ತದೆ ವಿದ್ವಂಸನೆಸ್ಯ ಮನ್ನಣೆಯನ್ನು ರಾಜಾಂಗಿಗಳು, ಶ್ರೀಮಂತರಾಗಲಿ ಹೊಂದಿಲಾರರು ಹೊಂದಿದರೂ ತನ್ನ ದೇಶದಲ್ಲಿಯಾಗಲಿ, ತಮ್ಮ ಪರಿಚಯದ ಜನರಲ್ಲಿಯಾಗಲಿ, ಹೊಂದಿದವರೇ ಹೊರತು ಅನ್ಯದೇಶದಲ್ಲಿಯಾಗಲಿ, ಅಪರಿಚಿತ ಜನರಲ್ಲಾಗಲಿ, ಎಂದೂ ಹೊಂದಲಾರರು ಇವೇ ವಿಷಯವನ್ನು ಒಬ್ಬ ಕವಿಯು—

"ವಿದ್ವತ್ತಂ ಚ ನೃಪತ್ವಂ ಚ ನೈವ ತುಲ್ಯಂ ಕದಾಚನ।
ಸ್ವದೇಶೇ ಪೂಜ್ಯತೇ ರಾಜಾ ವಿದ್ವಾನ್ ಸರ್ವತ್ರ ಪೂಜ್ಯತೇ॥"

ಎಂದು ಸ್ಪಷ್ಟಪಡಿಸಿದ್ದಾನೆ ರಾಜ್ಯವಾಗಲಿ, ಶ್ರೀಮಂತಿಕೆಯಾಗಲಿ, ಇವೆರಡೂ ಸ್ಥಿರವಾದವುಗಳಲ್ಲ ಒಬ್ಬ ರಾಜನನ್ನು ಎರಡನೆಯ ಬಲಿಷ್ಠ ರಾಜನು ದಂಡಿ ಸ್ತಿಜಿಂದು ನೋಲಿಸಿ ತಾನೇ ರಾಜನಾಗಬಹುದು. ಇಲ್ಲ ವೆ ದುರ್ದೈವದಿಂದ ತಾನೇ ನಾಶವಾಗಿಹಬಹುದು ಇದ ರಂತೆ ಮಧ್ಯನ್ನು ಅಣ್ಣ ತಮ್ಮಂದಿರು ವಾಲು ಮಾಡಿಕೊ ಳ್ಳಬಹುದು ಯಾರಾದರೂ ಕಮ್ಮಕೊಂಡು ಹೋಗ ಬಹುದು ಅಥವಾ ಪೂರ್ವಕರ್ಮದಿಂದ ನಾಶವಾಗಿ ಹೋಗಬಹುದು ಆದ್ದರಿಂದ ಇವು ಸ್ಥಿರವಲ್ಲ ವಿದ್ಯೆಯು ಹಾಗಲ್ಲ. ಇವನ್ನೂ ಯಾರೂ ಕಸಿದುಕೊಳ್ಳುವುದಲ್ಲ ಖುಲಿಗೆ ಹಾಕುವದಿಲ್ಲ ಇದೆ ಜನ್ಮನಿರುವವರೆಗೂ ಅವನ ಸಂಗಡ ಇದ್ದು, ಆವನಕೊಡಹ ಹೋಗುತ್ತದೆ ಆದ ಕಾರಣ ವಿದ್ಯೆಗಿಂತ ಶ್ರೇಷ್ಠವಾದುದು ಯಾವುದೂ ಇಲ್ಲ

ಇಂಥ ಶ್ರೇಷ್ಠವಾದ ವಿದ್ಯೆಯು ಬರಬೇಕಾದರೆ ತನ್ನಿಂದ ತಾನೇ ಬರಲಾರದು "ಅಭ್ಯಾಸಾನುಸಾರಿಣೀ ವಿದ್ಯಾ" ಎಂಬ ಆರೋಕ್ತಿಯಂತೆ ಅಭ್ಯಾಸವನ್ನು ಮಾಡುವದರಿಂದ ವಿದ್ಯೆಯು ಬರುತ್ತದಲ್ಲದೆ, ಹಾಗೇ ಎಂದೂ ಬರಲಾರದು.

ವಿದ್ಯೆಗಳಲ್ಲಿ ಶಾಸ್ತ್ರ ವಿದ್ಯೆ, ಲೌಕಿಕವಿದ್ಯೆಯೆಂದು ಎರಡು ಪ್ರಕಾರವುಂಟು ಈ ಉಭಯ ವಿದ್ಯೆಗಳಲ್ಲಿ ಶಾಸ್ತ್ರ ವಿದ್ಯೆಯೇ ಶ್ರೇಷ್ಠವಾಗಿದೆ ಯಾಕಂದರೆ ಲೌಕಿಕ ವಿದ್ಯೆಯನ್ನು ಕಲಿತು ಬೇಕಾದಂಥ ಡಿಗ್ರಿಯನ್ನು ಪಡೆದರೂ ಏಹಿಕ ಸುಖವು ಮಾತ್ರ ದೊರಕುತ್ತದೆಯೇ ಹೊರತು, ಅವುಷ್ಮಿಕ ಸುಖವು ಎಂದೂ ದೊರೆಯಲಾರದು. ಏಹಿಕ ಸುಖವೆ ನಿತ್ಯವಾದುದಲ್ಲ ಲೋಕದಲ್ಲಿ ಪ್ರತಿಯೊಬ್ಬ ಮನುಷ್ಯನಿಗೂ ಧರ್ಮ, ಅರ್ಥ, ಕಾಮ, ಮೋಕ್ಷಗಳೆಂಬ ಚತುರ್ವಿಧ ಪುರುಷಾರ್ಥಗಳು ಬೇಕೇ ಬೇಕು. ಇವು ಶಾಸ್ತ್ರಾಭ್ಯಾಸದಿಂದ ಅನಾಯಾಸವಾಗಿ ದೊರಕುತ್ತವೆ ಲೌಕಿಕ ವಿದ್ಯೆಗಳಿಂದ ಅರ್ಥ, ಕಾಮಗಳೆಂಬೆರಡು ಪುರುಷಾರ್ಥಗಳು ಮಾತ್ರ ದೊರಕುತ್ತವೆ. ತಾಲ್ಕು ಪುರುಷಾರ್ಥಗಳನ್ನೂ ಪಡೆಯಬೇಕೆಂಬುವವರು ಶಾಸ್ತ್ರಜ್ಞರ ಸ್ನೇಹವನ್ನು ಮಾಡಿ ಅವರ ತತ್ವದಂತೆ ನಡೆ ಯಬೇಕು. ಆದ್ದರಿಂದ ಶಾಸ್ತ್ರ ವಿದ್ಯೆಯು ಶ್ರೇಷ್ಠವಾಗಿದೆ.

"ವಿದ್ಯಾವಿನೀತೇ ಪಶುಭಿಸ್ಸಮಾನೇ" ಅಂದರೆ ವಿದ್ಯೆ ಯಿಲ್ಲದವನು ಪಶುವಿಗೆ ಸಮಾನನೆಂಬ ಅರ್ಥೈಸಿಕ್ಕಿಯಲು ವೆದಂರಲ್ಲೂ, ವಿದ್ಯೆಯಿಲ್ಲದವನು ಹದ್ದಿಗಿಂತಲೂ ಕಡೆ ಎಂಬ ನೀತಿವಾಕ್ಯವಿರುವುದರಿಂದಲೂ, ಮನುಷ್ಯನಾದ ಬಳಿಕ ಯಾವದಾದರೊಂದು ವಿದ್ಯೆಯಲ್ಲಿ ಪ್ರವೀಣನಾಗ ಬೇಕು ವಿದ್ಯೆಯನ್ನು ಕಲಿಯುವದು ಹೊಟ್ಟೆಯ ಉಜ್ ಜೀವನಕ್ಕಾಗಿ ಎಂದು ಯಾರೂ ತಿಳಿಯಬಾರದು. ಪಶು ಪಕ್ಷಿಗಳ ಸಹ ತಮ್ಮ ತಮ್ಮ ಹೊಟ್ಟೆಯನ್ನು ತುಂಬಿಸಿ ಕೊಳ್ಳುತ್ತವೆ. ಅಂದಮೇಲೆ ಜ್ಞಾನದಿಂದ ಕೂಡಿದ ಮನುಷ್ಯನು ಹೊಟ್ಟೆಯನ್ನು ತುಂಬಿಕೊಳ್ಳುವದು ದೊಡ್ಡ ಮಾತಲ್ಲ

ವಿದ್ಯೆಯಿಂತಲೂ ನಡತೆಯೇ ಶ್ರೇಷ್ಠವಾದುದೆಂದು ಎಣಿಸಲ್ಪಟ್ಟಿದೆ. ನಮ್ಮ ಮುಂದಿನ ಜನಾಂಗದ ಮೇಲ್ಮೈಗೆ ನಾವು ಬಿಟ್ಟು ಹೋಗಬಹುದಾದ ಕಚ್ಚಿತ ಆದಾಯ ವೆಂದರೆ ಒಳ್ಳೆಯ ನಡತೆಯೆಂದು ತಿಳಿಯಬೇಕು ಈ ವಿಷಯದಲ್ಲಿ ಒಟ್ಟ ಶ್ರೇಷ್ಠ ಗ್ರಂಥಕಾರನು ಈ ರೀತಿ ಹೇಳಿರುತ್ತಾನೆ ಎಲ್ಲ ಸಂದರ್ಭಗಳಲ್ಲಿಯೂ, ಶ್ರೇಷ್ಠ ನಡತೆಯು ಸ್ವಪ್ರಯತ್ನದ ಫಲವಾಗಿದೆ. ಇದು ಹುಟ್ಟು ಗುಣವಾಗಿ ತಾಯಿತಂದೆಗಳಿಂದ ಬರತಕ್ಕದ್ದಲ್ಲ ಇದು ಬಾಹ್ಯದ ಅನುಕೂಲಗಳಿಂದ ಉಟ್ಟಾಗತಕ್ಕದ್ದಲ್ಲ. ಇದು ವಂಶ, ವಿಶ್ವರ್ಯ, ವಿದ್ಯೆ, ಅಥವಾ ಅಧಿಕಾರ ಇವುಗಳಿಂದಿಗೆ ಕೂಡಿ ಬರತಕ್ಕದ್ದಲ್ಲ. ಆದರೆ ಅದು ಸ್ವಪ್ರಯತ್ನದಿಂದ ಬರುವಂಥದು. ಧರ್ಮಯುಕ್ತವಾದ ಸತ್ಕರ್ಮಗಳನ್ನು ಮಾಡುವುದರಿಂದ ಉಂಟಾಗತಕ್ಕ ಸತ್ಕರ್ಮದ ಸಲವಾಗಿರುತ್ತದೆ

ಇದೇ ಅಭಿಪ್ರಾಯವನ್ನು ಕುರಿತು ಮತ್ತೊಬ್ಬ ನೀತಿಕಾರನು

ಗುಣಹೀನಗಥೋಗತಿ ನಿಶ್ಚ।
ಗುಣೀನಂ ಸ್ವಯಮಾಗಾದಿ ಫಲಗಮಕ್ಕುಮೆನಲ್ಕ ॥
ಗುಣಾಹೀನನ ಪಿರಿಮೆಯಂದಂ।
ಗುಣಿಗಳ ಒದಗನಿರೆ ಲೇಸು ಜೂಜಾಣ್ತ್ಮಾ ॥

ಎಂದು ಸ್ಪಷ್ಟಪಡಿಸಿದ್ದಾನೆ. ಲೌಕಿಕ ವಿದ್ಯೆಯನ್ನಾಗಲಿ, ಪಾರಮಾರ್ಥಿಕ ವಿದ್ಯೆಯನ್ನಾಗಲೀ, ಕಲಿತು ಬೇಕಾಪೆಷ್ಟು ಸಾಂಡಿತ್ಯವನ್ನು ಸಂಪಾದಿಸಿದರೂ, ಅವಕ್ಕೆ ಸರಿಯಾಗಿ ನಡತೆ ಒಂದಿರದಿದ್ದರೆ, ಆ ವಿದ್ಯೆಗೆ ಮನ್ನಣೆ ಯು ಬರಲಾರದು. ಮತ್ತು ಪರಮ ಪುರುಷಾರ್ಥವೂ ದೊರೆಯಲಾರದು ಅಂಥವನು ಜ್ಞಾನಿಯೆಸಿಸಲಾರನು ತೋಡಿದ ಬಾವಿಗೆ ಜಲವೇ ಸಾಕ್ಷಿಯಾದಂತೆ ಜ್ಞಾನೋ ದಯಕ್ಕೆ ದುರ್ಮತಿ ದುರಾಚಾರಗಳಿಲ್ಲದಿರುವಿಕೆಯೇ ಕುರುಹು.

ಕೆಲವರು ಸಾವಿರಗಟ್ಟಿಲೆ ರೂಪಾಯಿ ಖರ್ಚುಮಾಡಿ ೧೦-೧೫ವರುಷಗಳ ತನಕ ಕಷ್ಟಪಟ್ಟು ಕಾತಿ, ಕಲಕತ್ತಾ ಮುಂಬೈ ಮೊದಲಾದ ಪಟ್ಟಣಗಳಿಗೆ ಹೋಗಿ ದೊಡ್ಡ ದೊಡ್ಡ ಹರಿಕ್ಷೆಗಳಕ್ಕು ಕೊಟ್ಟು ಉತ್ತೀರ್ಣರಾಗಿ ಊರಿಗೆ ಬರುತ್ತಾರೆ ಬಂದನಂತರ ವಿದ್ಯೆಯನ್ನು ಸ ಯಾದ ಮಾರ್ಗದಲ್ಲಿ ಉಪಯೋಗಿಸಿ ಸಮ್ಮಣಗಳಂದ ಕೂಡಿದ್ದಾದರೆ ಬಂಗಾರಕ್ಕೆ ಸುಗಂಧವನ್ನು ಕೂಡಿಸಿದಂತೆ ಮತ್ತಷ್ಟು ಘನತೆಯನ್ನು ಹೊಂದುವರು. "ವಿಕಾಯಕಃ ಪ್ರಕುರ್ವಾಣೋ ರಚಯಾಮಾಸ ವಾರೆರಂ" ಎಂಬ ಕವಿಯ ಉಕ್ತಿಯಂತೆ ಸ್ಮಿತಿಯನ್ನು ಮಾತ್ರ ಎಂದೂ ತಂದುಕೊಳ್ಳಬಾರದೆಂದು ಆಗ್ರಹದಿಂದ ಸೂಚಿಸುತ್ತೇನೆ

ಬಂಧಿಸಲ್ಪಟ್ಟಿರುವ ಬ್ರಿಟಿಷರು

ಬ್ರಿಟಿಷ್ ಸಂಗ್ರಾಮ ಸಚಿವರಾದ ಶ್ರೀ ಆಂಥೋನಿ ಎಡನ್ನರವರು ಕಾಮನ್ಸ್ ಸಭೆಯಲ್ಲಿ ಹೇಳಿಕೆ ಕೊಡುತ್ತ, ಸಂತ್ರಾಮವಾರಂಭದಾದಂದಿನಿಂದ 4400 ಬ್ರಿಟಿಷ್ ಸೈನಿಕರು ಶತ್ರುಗಳಿಂದ ಸೆರೆಹಿಡಿಯಲ್ಪಟ್ಟಿರುವರೆಂದು ತಿಳಿಸಿದರು

ಶಿಷ್ಯರ ಮನೆಗಳ ರಿಜಿಸ್ಟರ್ ಬುಕ್

ಭರತಖಂಡದಲ್ಲಿರುವ ಶತ್ರುಜೊಮ್ಮ ಗುರುವರ್ಗದ ಮೊತ್ತೆ ಸಾರಾಂಶ ಶಿಷ್ಯರ ಮನೆಗಳಶ್ರೀಮ್ಮ, ಆ ಮಹಾಸಾರಾಗಳು ಮನೆಯಲ್ಲಗಳ್ಳೊ ಹತ್ತು ವರ್ಷಗಳ್ಳೊ ಒಮ್ಮೆಸಾರ್ ಹೋಗಿ ಶಿಷ್ಯರಿಂದ ಕಾಣಿಕೆಯನ್ನು ತೆಗೆದುಕೊಂಡು ಬರುತ್ತಿರುವದು ಆದರೆ ಇವರು ತಮ್ಮ ಕರ್ತವ್ಯಕ್ಕನುಸರಿಸಿ ಶಿಷ್ಯರ ಮಾಹಿತಿ ವಿಷಯಗಳನ್ನು ಬರೆದಿಟ್ಟುಕೊಳ್ಳದೆ ಕಾಣಿಕೆಯನ್ನು ಮಾತ್ರ ತೆಗೆದುಕೊಂಡು ಹೋಗಿಬರುವದು. ಈ ಅವ್ಯವಸ್ಥೆಯಿಂದ ಅನೇಕ ಮಠದವರಿಗೆ ತಮ್ಮ ಶಿಷ್ಯರ ಮನೆಗಳೇ ಗೊತ್ತಿಲ್ಲದೆ ಹೋಗಿದೆ ಇವನ್ನು ದೂರಮಾಡುವುದಕ್ಕೋಸ್ಕರ ಮೇಲ್ಕಂಡ ಪುಸ್ತಕವನ್ನು ಹೊಸ ರೀತಿಯಲ್ಲಿ ಅಣಿಗೊಳಿಸಿದ್ದೇವೆ. ಇದರಲ್ಲಿ ಜಿಲ್ಲೆಯಿಂದ ವಿಷಯಗಳ ಪಟ್ಟಿಯಲ್ಲಿ ಜೆಸ್ಸಾಗಿ ತೋರಿಸಿದ್ದೇವೆ. ಅಮದರಿಂದ ಪದರಿ ಪುಸ್ತಕ ಪನ್ನು ಶಿಷ್ಯನೆಲ್ಲ ಸ್ವಕಿಯೆಪಿಟ್ಟ ಗುರುವರ್ಗದವರೂ ತರಿಸಿಕೊಂಡು ಅವರಿಲ್ಲಿಂದಿಂಕೆ ವಿವರವನ್ನೆಲ್ಲ ಬರೆದು ಪಂಚಾಚಾರ್ಯವರ್ಗವಾಗಿ ಒಂದೆ ತಮ್ಮ ಶಿಷ್ಯರನ್ನು ಕಾಣಾವಿಕೆಗಳ್ಳಬೇಕು. ಇದಕ್ಕಾಗಿ ಸಂಖ್ಯೆ ಕೆಪಂಕ್ಷ ಕಾಗದಗಳನ್ನು ಪಟ್ಟೋಗಿಸಿರುವದಲ್ಲದೆ ಹುಂದ ರಕ್ಷಣೆ ಮತ್ತು ಭದ್ರವಾದ ಬೈಂಡನ್ನು ಮಾಡಿಸಿದೆ.

ಬೆಲೆ ೧ ರೂಪಾಯಿ

ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಶಾಸ್ತ್ರೋಕ್ತ ದಿವ್ಯೌಷಧಗಳು.

ಶ್ರೀ ಜಗದ್ಗುರು ಕೇದಾರಸಂಸ್ಥಾನದ ರಸಾಯನ ಶಾಲೆಯಲ್ಲಿ ತಯಾರಾಗಬಹುದಾದ ಔಷಧಿಗಳು ಅತಿ ಸುಲಭಕ್ರಯದಲ್ಲಿ ದೊರೆಯುವವು

ಔಷಧಿ ಹೆಸರು	ತೂಕ	ಮೂಲ್ಯ
ಸ್ವರ್ಣಮಕರಧ್ವಜ	೧	೩೦—೦—೦
ಸ್ವರ್ಣಚಂದ್ರೋದಯ	೧	೧೦—೦—೦
,, ೨ನೇ ನಂಬರ್	೧	೪—೦—೦
ರಸಸಿಂಧೂರ	೧	೨—೦—೦
ಮುಖ್ಯಸಿಂಧೂರ	೧	೪—೦—೦
ತ್ರಿ ಲಿಸಿಂಧೂರ	೧	೪—೦—೦
ತಿಲಾಸಿಂಧೂರ	೧	೪—೦—೦
ಸ್ವರ್ಣವಂಗ	೧	೩—೦—೦
ತ್ರಿನಂಗ	೧	೧—೦—೦
ಭಸ್ಮಗಳು		
ಸ್ವರ್ಣಭಸ್ಮ	೧	೪೦—೦—೦
ರಜತಭಸ್ಮ	೧	೮—೦—೦
ತಾಮ್ರಭಸ್ಮ	೧	೦—೮—೦
ಲೋಹಭಸ್ಮ	೧	೦—೧೫—೦
ವಂಗಭಸ್ಮ	೧	೦—೮—೦
ನಾಗಭಸ್ಮ	೧	೦—೮—೦
ಮುಕ್ತಾಭಸ್ಮ	೧	೪೦—೦—೦
ಅಭ್ರಕಭಸ್ಮ	೧	೩—೦—೦
ಹಿತ್ತಾಳೆಭಸ್ಮ	೧	೦—೮—೦
ಕಂಚಿನಭಸ್ಮ	೧	೦—೮—೦
ಜಪ್ಪುಭಸ್ಮ	೧	೦—೮—೦
ಮಂಡೂರಭಸ್ಮ	೧	೦—೮—೦
ಸ್ವರ್ಣಮಕ್ಷಿಕಾಭಸ್ಮ	೧	೦—೧೫—೦
ಮುಕ್ತಾಭಸ್ಮ	೧	೪೦—೦—೦
ಪ್ರವಾಲಭಸ್ಮ	೧	೦—೮—೦
ಕಪ್ಪುಚಿಪ್ಪಿನ ಭಸ್ಮ	೧	೦—೮—೦
ನಿಂಬಂಗಿದ ಕೊಡಿನ ಭಸ್ಮ	೧	೦—೮—೦
ಗೋದಂತಿಹರಿತಾಲಭಸ್ಮ	೧	೦—೮—೦
ಕಸ್ತೂರಿ (೧ನೇ ನಂಬರ್)	೧	೫೦—೦—೦
ತಿಲಾಜಿತ ಸೂರ್ಯಪುಟ	೧	೧—೦—೦
ತಿಲಾಜಿತ ಅಗ್ನಿಪುಟ	೧	೨—೮—೦

ನೋಟ್—ಈ ಔಷಧಾಲಯದಲ್ಲಿ ಸರ್ವಪ್ರಕಾರದ ತೈಲ, ಚೂರ್ಣ, ಗುಟಿಕಾ, ತೈಲ, ಘೃತ, ಗುಗ್ಗುಳಾದಿ ಔಷಧಿಗಳು ಸರ್ವರೋಗಗಳಿಗೆ ದೊರೆಯುವುವು.

ವಿಳಾಸ—ಮ್ಯಾನೇಜರ,
ಆಯುರ್ವೇದ ರಸಾಯನಶಾಲಾ,
ಪೋಸ್ಟ್ ಒಮಿಮತ, ಜಿಲ್ಲಾ ಗಢವಾಲ್ ಯು.ಪಿ.

ವೈದಿಕ ಶಿವಪೂಜಾವಿಧಿ.

ವೀರಶೈವರಿಗೆ ಮುಖ್ಯವಾಗಿ ಬೇಕಾಗಿರುವ ಈ ಮೇಲ್ಕಂಡ ಗ್ರಂಥವು ವೇ|| ಬಂ|| ಶ್ರೀಕಾಶೀನಾಥಶಾಸ್ತ್ರಿಗಳವರಿಂದ ವೈದಿಕಸಂಪ್ರದಾಯಾನುಸಾರವಾಗಿ ವಿರಚಿತವಾಗಿದ್ದು, ಶ್ರೀ ಪಂಚಾಚಾರ್ಯ ವಿದ್ಯಾಸ್ಪ್ರವ್ರಕಾಶಾಲಯದಲ್ಲಿ ಬಹು ಮುದ್ದಾಗಿ ಮುದ್ರಿತವಾಗಿದೆ. ಇಲ್ಲಿಯವರೆಗೆ ಅನೇಕ ಕಡೆಗೆ ಶಿವಪೂಜಾವಿಧಿಗಳು ಮುದ್ರಿಸಲ್ಪಟ್ಟಿವೆ. ಆದರೆ ಮುದ್ರಾಪಕರಿಗೆ ವೈದಿಕಸಂಪ್ರದಾಯವು ಗೊತ್ತಿಲ್ಲದಿರುವುದರಿಂದ ಅನೇಕ ಕಡೆಗೆ ಮಂತ್ರಗಳು ಅಶುದ್ಧವಾಗಿ ಬಿದ್ದಿವೆ! ಅನೇಕರು ಆ ಅಶುದ್ಧಮಂತ್ರಗಳನ್ನೇ ಪರಿಸುತ್ತಿರುವರು. ಇದು ಅತ್ಯಂತ ವ್ಯಸನಕರವಾದ ವಿಷಯವಾಗಿದೆ. ಅಲ್ಲದೆ ನೇದಮಂತ್ರಗಳನ್ನು ವೈದಿಕ ಸ್ವರಸಹಿತವಾಗಿ ಉಚ್ಚರಿಸಬೇಕಲ್ಲದೆ ಸ್ವರಶೂನ್ಯವಾಗಿ ಉಚ್ಚರಿಸಬಾರದಷ್ಟೆ, ಇಲ್ಲಿಯವರೆಗೆ ಮುದ್ರಿತಗಳಾಗಿರುವ ಯಾವ ಶಿವಪೂಜಾವಿಧಿಯಲ್ಲಿಯೂ ವೇದಮಂತ್ರಗಳಿಗಾಗಲಿ, ಶ್ರೀರುದ್ರಾಧ್ಯಾಯ-ಚಮಕಾಧ್ಯಾಯ-ಪುರುಷಸೂಕ್ತಗಳಿಗಾಗಲಿ ವೈದಿಕಸ್ವರಗಳು ಹಾಕಲ್ಪಟ್ಟಿಲ್ಲ ಮತ್ತು ಪದವಿಭಾಗವೂ ಮಾಡಲ್ಪಟ್ಟಿಲ್ಲ. ಈ ಶಿವಪೂಜಾವಿಧಿಯಲ್ಲಿ ಈ ಕೊರತೆಯು ದೂರಮಾಡಲ್ಪಟ್ಟಿದೆ ಇದಕ್ಕಾಗಿ ಪಂಡಿತರು ಬಹು ಶ್ರಮವನ್ನು ವಹಿಸಿ ಯಜ್ಞೇದ-ಯಜುರ್ವೇದಗಳನ್ನೆಲ್ಲ ಕೂಲಂಕಷವಾಗಿ ಪರಿಶೀಲಿಸಿ ವೀರಶೈವಪ್ರಪಂಚಕ್ಕೆ ಮಹೋಪಕಾರವನ್ನು ಮಾಡಿದ್ದಾರೆ ಈ ಪೂಜಾವಿಧಿಯಲ್ಲಿರುವ ವೈದಿಕಮಂತ್ರಗಳು ಯಾವ ವೇದದ ಯಾವ ಭಾಗವಲ್ಲಿರುವುದೆಂಬುದನ್ನು ಪಂಡಿತರು ವಿವರವಾಗಿ ತೋರಿಸಿದ್ದಾರೆ. ಪ್ರತ್ಯಕ್ಷವಾಗಿ ನೋಡಿದ ಮೇಲೆ ಈ ಗ್ರಂಥದ ಮಹತ್ವವು ಕಂಡುಬರುವುದು ಅಲ್ಲದೆ ಈ ಪೂಜಾವಿಧಿಯ ಅಂಕ್ಯದಲ್ಲಿ—ಶಿವಸಹಸ್ರನಾಮಾವಳಿ, ಶಿವಾಷ್ಟೋತ್ತರಶತನಾಮಾವಳಿ, ಶಿವಕವಚ, ಪಾರ್ವತೀದೇವೀನಾಮಾವಳಿ, ವೀರಭದ್ರನಾಮಾವಳಿ, ಭದ್ರಕಾಳೀದೇವೀನಾಮಾವಳಿ, ಪಣ್ಣಾಖಸ್ವಾಮಿನಾಮಾವಳಿ, ಶ್ರೀ ಪಂಚಾಚಾರ್ಯರ ನಾಮಾವಳಿಗಳು, ನಾನಾವಿಧ ಶಿವಸ್ತೋತ್ರಗಳು, ನಾನಾವಿಧ ದೇವಿಸ್ತೋತ್ರಗಳು, ನಾನಾವಿಧ ಗುರುಸ್ತೋತ್ರಗಳು ಮುದ್ರಿಸಲ್ಪಟ್ಟಿವೆ. ಒಟ್ಟಿಗೆ ಈ ಶಿವಪೂಜಾವಿಧಿಯು ಸರ್ವಾಂಗಸುಂದರವಾಗಿದ್ದು ಸರ್ವತೋಮುಖವಾಗಿ ಸ್ತುತ್ಯವಾಗಿದೆ. ಆದುದರಿಂದ ಪ್ರತಿಯೊಬ್ಬ ವೀರಶೈವರೂ ಈ ಪೂಜಾವಿಧಿಯನ್ನು ತರಿಸಿಕೊಂಡು ಇದರಲ್ಲುಕ್ತನಾಗಿರುವಂತೆ ಶಿವಪೂಜೆಯನ್ನು ಮಾಡಿ ಧನ್ಯರಾಗಬೇಕೆಂದು ಕೋರಿಕೆ. **ಬೆಲೆ ೧೫ ಆಣೆ.** ವಿ ಪಿ. ಚಾರ್ಜು ಪ್ರತ್ಯೇಕ.

ಮ್ಯಾನೇಜರ್,
ಪಂಚಾಚಾರ್ಯಪ್ರಭಾ ಆಫೀಸ್, ಮೈಸೂರು.

ಶಿವಾದ್ವೈತಮಂಜರಿ.

ಈ ಗ್ರಂಥವು ವೀರಶೈವಮತಶಾಸ್ತ್ರಗ್ರಂಥಗಳೆಲ್ಲೆಲ್ಲ ಶಿಖಾರತ್ನದಂತೆಯೂ ಪ್ರಕಾಶಿಸುತ್ತಿರುವುದು ಎಲ್ಲರಿಗೂ ತಿಳಿದ ವಿಷಯವಾಗಿದೆ ಈ ಗ್ರಂಥವನ್ನು ಕಾಶ್ಮೀರದೇಶದ ಸ್ವಪ್ರಭಾನಂದ ಶಿವಾಚಾರ್ಯರೆಂಬ ಪ್ರಾಚೀನಾಚಾರ್ಯರು ರಚಿಸಿದ್ದಾರೆ ಈ ಗ್ರಂಥದಲ್ಲಿ ಶಕ್ತಿವಿಶಿಷ್ಟಾದ್ವೈತಸಿದ್ಧಾಂತದ ರಹಸ್ಯವು ಬಹು ಹೃದಯಂಗಮವಾಗಿ ಪ್ರತಿಪಾದಿಸಲ್ಪಟ್ಟಿದೆ ಈ ಗ್ರಂಥದ ಸರಣಿಯು ಬಹುಕರಿನವಿದ್ದುದರಿಂದ ಇದರ ರಹಸ್ಯವನ್ನು ತಿಳಿಯಲು ಪಂಡಿತಜನರಿಗೂ ಕೂಡ ಸಾಧ್ಯವಾಗಿತ್ತು. ಈ ಕೊರತೆಯನ್ನು ದೂರಮಾಡಿ ಇದರ ರಹಸ್ಯವು ಪ್ರತಿಯೊಬ್ಬರಿಗೂ ತಿಳಿಯಲೆಂಬ ಸದುದ್ದೇಶದಿಂದ ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರು ಈ ಗ್ರಂಥಕ್ಕೆ ಬಹು ವಿಶಾಲವಾಗಿ ಕನ್ನಡ ಟೀಕೆಯನ್ನು ಬರೆಯಿಸಿದ್ದಾರೆ ಈ ಮೂಲ ಗ್ರಂಥವು ಕೇವಲ ೩೮ ಪುಟಗಳಲ್ಲಿಂದ ಕೂಡಿದ್ದರೂ ಇದಕ್ಕೆ ಕನ್ನಡ ಟೀಕೆಯು ೧೩೨೩ ಪುಟಗಳಷ್ಟಾಗಿದೆ. ಈ ಮಹಾಗ್ರಂಥಮುದ್ರಣಕ್ಕಾಗಿ ಪಂಡಿತರು ವಿಶೇಷ ದ್ರವ್ಯವನ್ನು ವ್ಯಯಮಾಡಿದ್ದಾರೆ. ಇಂಥ ದೊಡ್ಡ ಸಿದ್ಧಾಂತಗ್ರಂಥವು ಇಂದಿನವರೆಗೆ ಕನ್ನಡಭಾಷೆಯಲ್ಲಿ ಎಲ್ಲಿಯೂ ಮುದ್ರಿತವಾಗಿಲ್ಲವೆಂದು ಘೇಟಾಘೋಷವಾಗಿ ಹೇಳಬಹುದಾಗಿದೆ ನಮ್ಮನ್ನಾಳಿದ **ಶ್ರೀಮತ್ಸಾಮ್ರಾಜ್ಯಾಧಿರಾಜ ಶ್ರೀ ಕೃಷ್ಣರಾಜ ಒಡೆಯರ್ ಬಹದ್ದೂರ್ ಮಹಾಪ್ರಭುಗಳವರು** ಈ ಗ್ರಂಥದ ಯೋಗ್ಯತೆಯನ್ನು ಕಂಡು ಡೆತೀಕ್ಷವನ್ನಿಗೆ ಅಪ್ಪಣೆಯನ್ನಿತ್ತಿರುವರಲ್ಲದೆ, ಈ ಗ್ರಂಥವಲ್ಲಿ ನಿಯೋಜಿಸುವುದಕ್ಕೋಸ್ಕರ ತಮ್ಮ ಭವ್ಯವಾದ ಧಾನಶಾಲೆಯನ್ನು ಸಹ ದಯಪಾಲಿಸಿರುವರು. ಇವರಿಂದ ಈ ಗ್ರಂಥದ ಯೋಗ್ಯತೆಯು ಎಷ್ಟರಮಟ್ಟಿಗಿರಬೇಕೆಂಬ ವಿಷಯವನ್ನು ಬೇರೆ ಹೇಳಬೇಕಾಗಿಲ್ಲ. ಇಂಥ ಅಮೂಲ್ಯವಾದ ವೀರಶೈವಸಿದ್ಧಾಂತಗ್ರಂಥವನ್ನು ಪ್ರತಿಯೊಬ್ಬ ವೀರಶೈವರೂ ಅವಶ್ಯವಾಗಿ ತರಿಸಿಕೊಂಡು ಅದರಲ್ಲಿರುವ ಸಿದ್ಧಾಂತ ವಿಷಯಗಳನ್ನು ತಿಳಿದುಕೊಂಡು ಧನ್ಯರಾಗಬೇಕೆಂದು ಕೋರಿಕೆ. ಒಟ್ಟು ಈ ಮಹಾಗ್ರಂಥವು ೧೩೪೪ ಪುಟಗಳಿಂದ ಕೂಡಿದ್ದು ಒಳ್ಳೆ ಬೆಲೆಯುಳ್ಳ ಅಗಾದವಲ್ಲಿ ಮುದ್ರಿಸಲ್ಪಟ್ಟಿರುವದಲ್ಲದೆ ಬಹುಸುಂದರವಾದ ಬೈಂಡಿಸಿಂದೊಡಗೂಡಿದೆ. ಪವಿತ್ರವಾದ ವೀರಶೈವ ಸಿದ್ಧಾಂತದಲ್ಲಿ ವಿಶ್ವಾಸವುಳ್ಳ ಪ್ರತಿಯೊಬ್ಬರೂ ಮತ್ತಿನಕಡೆಗೆ ದೃಷ್ಟಿಯಿಟ್ಟಿಡದೆ ಈ ಗ್ರಂಥರತ್ನವನ್ನು ತರಿಸಿ ಕೊಂಡೇ ತೀರಬೇಕು. ಈ ಮಹಾಗ್ರಂಥದ ಬೆಲೆ ೪ ರೂಪಾಯಿ. ಒಂದುರೂಪಾಯಿಗೆ ನಾಲ್ಕಾಣೆಯಂತೆ ಕಮಿಷನ್ ಸಹಾ ಹೋಗಲಾಗಿ ೬ ರೂ. ಗೆ ದೊರೆಯುವುದು. ವಿ. ಪಿ. ಚಾರ್ಜು ೧ ರೂ. ೫ ಆಣೆ ಪ್ರತ್ಯೇಕ.

ಮ್ಯಾನೇಜರ್—
ಪಂಚಾಚಾರ್ಯಪ್ರಭಾ ಆಫೀಸ್, ಮೈಸೂರು.

ಮನೋಹರವಾದ ಫೋಟೋಗಳು.

ಶ್ರೀ ರೇಣುಕಾಚಾರ್ಯರ ಒಂಭತ್ತು ಅಮೃತಲಿಂಗೇಶ್ವರ ಕೂಡಿದ ಫೋಟೋ ಸೈಜು ೨೦×೧೪ ಬೆಲೆ ೧೯ ೦—೬—೦

ಶ್ರೀ ರೇಣುಕಾದಿ ಪಂಚಾಚಾರ್ಯರು, ಲೋಕಪೂಜ್ಯರಾದ ಆಗಸ್ತ್ಯ, ಧರ್ಮದ, ವ್ಯಾಸ, ಸಾನಂದ, ವಿಶ್ವಾಮಿತ್ರ ಮಹರ್ಷಿಗಳಿಗೆ ಶಿವಸಿದ್ಧಾಂತವನ್ನು ಪರಮೇಶ್ವರನು ಉಪದೇಶಿಸುವ ಫೋಟೋ ಸೈಜು ೧೦×೧೪ ಬೆಲೆ ೦—೧೧—೬

ಸದ್ಗುರು ಶ್ರೀ ಪಂಚಾಚಾರ್ಯರ ಲಿಂಗಾವತಾರದ ಫೋಟೋ ೧೪×೧೮ ಬೆಲೆ ೧೯ ೦—೧೧—೬

ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ೧೪×೧೮ ಬೆಲೆ ೧೯ ೦—೧೧—೬

ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೦×೮ ಬೆಲೆ ೧೯ ೦—೦—೯

ಶ್ರೀ ಜಗದ್ಗುರು ರುದ್ರಮುನೀಶ್ವರ ಶಿವಾಚಾರ್ಯರು ಭೂಗರ್ಭದಿಂದ ಅವತರಿಸಿರುವ ಫೋಟೋ ೦—೦—೯

ಶ್ರೀ ರೇಣುಕಾಚಾರ್ಯರು ರುದ್ರಮುನೀಶ್ವರ ಶಿವಾಚಾರ್ಯರಿಗೆ ಪಟ್ಟಾಭಿಷೇಕ ಮಾಡುವ ಫೋಟೋ ೦—೦—೯

ಶ್ರೀ ರೇಣುಕಾಚಾರ್ಯರು ವಿಭೂತಿಧಾರಣೆ ಪ್ರಾರ್ಥನಾಸಾನುಷ್ಠಾನವಾಗಿ ಏಕಕಾಲದಲ್ಲಿಯೇ ಇಷ್ಟಲಿಂಗೋಪಾಸನೆ ಗುರುಪೂಜೆಗಳನ್ನು ಧಾರಣಮಾಡಿ ಸೂಚಿಸುವ ಶಿವಲಿಂಗಗಳನ್ನು ಪ್ರತಿಷ್ಠಿಸುವ ಫೋಟೋ ೧೯ ೦—೦—೯

ಶ್ರೀ ರೇಣುಕಾಚಾರ್ಯರು ಶ್ರೀ ಶಂಕರಾಚಾರ್ಯರಿಗೆ ಚಿಂದಮ್ಮಾಲೀಶ್ವರ ಲಿಂಗವನ್ನು ಆಕುರ್ವಿಸಿರುವ ಫೋಟೋ ೦—೦—೯

ಶ್ರೀ ಕಾಶೀಕ್ಷೇತ್ರಪಟ್ಟಾಧಿಪತಿಗಳಾದ ಶ್ರೀ ಜಗದ್ಗುರು ವಿಶ್ವಾರಾಧ್ಯರ ಮೂಲಧರ್ಮಪೀಠದ ಫೋಟೋ ೦—೦—೯

ಶ್ರೀ ಕಾಶೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಪಂಚಾಕ್ಷರಿ ಶಿವಾಚಾರ್ಯರ ಫೋಟೋ ೦—೦—೯

ಶ್ರೀಮದ್ಗುರುಪೀಠ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯರ ಫೋಟೋ ೦—೦—೯

ಶ್ರೀಮದ್ರಂಭಾಪುರೀ ಸೀಂಹಾಸನಾಧೀಶ್ವರ ಜಗದ್ಗುರು ಶಿವಾನಂದಶಿವಾಚಾರ್ಯರ ಮಹಾಸ್ವಾಮಿಗಳವರ ಫೋಟೋ ೦—೦—೯

ಶ್ರೀಮಜ್ಜಗದ್ಗುರು ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀ ಕಾಶೀನಾಥಶಾಸ್ತ್ರಿಗಳವರು ಉಂಗುರ ತೊಡಿಸಿಕೊಂಡಿರುವ ಫೋಟೋ ೦—೦—೯

ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಫೋಟೋ ಬೆಲೆ ೧೪ ೦—೦—೯

ಶ್ರೀ ಜಗದ್ಗುರು ಉಜ್ಜಯಿನೀ ಸೀಂಹಾಸನಾಧೀಶ ಮಹಾಸ್ವಾಮಿಗಳವರ ಅತ್ಯಂತ ಸುಂದರವಾದ ಫೋಟೋ ೧೪ ೦—೦—೯

ಶ್ರೀ ಜಗದ್ಗುರು ಉಜ್ಜಯಿನೀ ಸೀಂಹಾಸನದ ಅತ್ಯಂತ ಪ್ರಾಚೀನ ಶೈಲ್ಪಚಿತ ಸುಂದರ ಫೋಟೋ ೧೪ ೦—೦—೯

ಶ್ರೀ ಜಗದ್ಗುರು ಪಂಚಾಚಾರ್ಯಸಭೆಯ ಅತ್ಯಂತ ಸುಂದರವಾದ ಗೋಲ್ಡನ್ ಫೋಟೋ ೦—೦—೯

ಹಿಮವತ್ಕೇದಾರದ ಪವಿತ್ರಸ್ಥಳದ ಶೋಭಿಸುವ ಶ್ರೀ ಕೇದಾರನಾಥಸ್ವಾಮಿಯ ಪುಣ್ಯಪ್ರದ ಸುಂದರ ಫೋಟೋ ೦—೦—೯

ಶ್ರೀಭಾಗ್ಯನಗರೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀಮನ್ಮಹಾಜಂಗಮರು ವಿರಾಜಿಸುತ್ತಿರುವ ಫೋಟೋ ೦—೦—೯

ಲೋಕಪೂಜ್ಯ ರಂಭಾಪುರಿಪೀಠಾಧಿಪತಿ ತತ್ಪೀಠದಿಂದ ಶ್ರೀ ಭಾಗ್ಯನಗರೀ ಜಗದ್ಗುರು ಸಿಂಹಾಸನಕ್ಕೆ ಆಶೀರ್ವಾದ ಪೂರ್ವಕವಾಗಿ ಆಶೀರ್ವಚನವನ್ನು ಪ್ರಸಾದಿಸುವ ಫೋಟೋ ೦—೦—೯

ಸೂಚನೆ—ಮೇಲಿನ ಫೋಟೋಗಳಿಗೆ ಬೆಲೆಯ ಜೊತೆಗೆ ಅರ್ಧರೂಪಾಯಿ ಪೋಸ್ಟೇಜ್ ಖರ್ಚು ಪ್ರತ್ಯೇಕವಾಗಿ ಕೊಡಬೇಕಾಗಿದೆ. ಮೇಲೆ ತಿಳಿಸಿರುವ ಫೋಟೋಗಳಲ್ಲದೆ ಬೇರೆ ಯಾವುದಾದರೂ ಫೋಟೋ ಬೇಕಾದಲ್ಲಿ ಅದರ ಬೆಲೆಯನ್ನು ಕಳುಹಿಸಿಕೊಟ್ಟಲ್ಲಿ ಕಳುಹಿಸಲಾಗುವುದು.

ಮ್ಯಾನೇಜರ್—ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಡಾಕ್ಟರ್ ಜೆ. ಬಿ. ಯವರ

ಸುಗಂಧ ನಶ್ಯದಪುಡಿ

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದಪುಡಿಯು ಕಂಡುಹಿಡಿಯಲ್ಪಟ್ಟು, ಸಾವಿರಾರುಮಂದಿಗಳು ಇದನ್ನು ಉಪಯೋಗಿಸಿ ಸಾವಿರಾರುಗಳಾಗಿ, ಯೋಗ್ಯತಾಪತ್ರಗಳನ್ನು ಕೊಟ್ಟಿದುವರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ :—ಪೀನಸ, ಒಂಟೆ ತಲೆನೋವು, ತಲೆಯಲ್ಲಿಯ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವವ್ಯಾಧಿಗಳು, ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವವಲ್ಲದೆ ಕಂಠಕ್ಕೆ ಮೇಲ್ಪಟ್ಟ ೬೬ ವ್ಯಾಧಿಗಳನ್ನು ಸ್ವಸ್ಥಪಡಿಸಿ ಜ್ಞಾಪಕಶಕ್ತಿಯನ್ನೂ ಸಹ ಹೆಚ್ಚುಮಾಡುತ್ತದೆ. ಮೂರುಬೆಟ್ಟಿನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದಪುಡಿಯಲ್ಲಿ ಐದು ಬಿಟ್ಟಿಸಿಯನ್ನು ಮಿಶ್ರಮಾಡಿದರೆ ಎಲ್ಲವೂ ಪರಿಮಳವಾಗುವುದು. ಇದನ್ನು ಅನೇಕಪ್ರಭುಗಳು ಉಪಯೋಗಿಸುತ್ತಿರುವರೆ. ಮೂವರಿ ಸೀಸೆ ಫ್ಲಿ. ಬುಡ್ಡಿ ಒಂದಕ್ಕೆ ೪ ಆಣೆ. ತಜ್ಞ ಒಂದಕ್ಕೆ ಕ್ರಯ ರೂ. ೨ ೮-೦. ವಿ.ಪಿ. ೮ ಆಣೆ

ನಿಮ್ಮ ಅಪೇಕ್ಷೆಸನ್ನು ತಿಳಿಯುವಂತೆ ಬರೆಯಿರಿ

ಗುರುಬಸವ ಅಂಡ್ ಕಂಪನಿ ಲಿಮಿಟೆಡ್,

[28] ಪೋ. ಬಾ ೫೧೦, ಮದರಾಸು.

ಸರ್ವೋತ್ತಮವಾದ ಮತಗ್ರಂಥಗಳು

ಗೋತ್ರಸೂತ್ರಪಟ (೨ನೇ ಆವೃತ್ತಿ) ...	೧ ಆಣೆ
ಸನ್ಯಾಸಧರ್ಮವಿಧಿ ಪ್ರ (೩ನೇ ಆವೃತ್ತಿ ಸಂಸ್ಕೃತ)	೧ ಆಣೆ
ಪಂಚವಿಂಶತಿ ಪ್ರಶ್ನೋತ್ತರ ಪ (೩ನೇ ಆವೃತ್ತಿ) ...	೧ ಆಣೆ
ಶ್ರೀಪಂಚಾಚಾರ್ಯ ವೈಭವಮಂಗಲಸ್ತ್ರೋತ್ರಾವಳಿ (೯ನೆಯ ಆವೃತ್ತಿ) .	೧ ಆಣೆ
ಸಂಧ್ಯಾಸ್ಥ ಶಿವಪೂಜಾವಿಧಿ (೬ನೇ ಆವೃತ್ತಿ)	೧ ಆಣೆ
ಶ್ರೀಜಗದ್ಗುರು ಪಂಚಾಚಾರ್ಯರ ನಾಮಾವಳಿ (೩ನೆಯ ಆವೃತ್ತಿ) .	೩ ಆಣೆ
ಬಸವಾದಿಶಿವಶರಣ್ಯ ಪರ್ಯಣ (೪ನೆಯ ಆವೃತ್ತಿ)	೩ ಆಣೆ
ಶ್ರೀರೇಣುಕಾಚಾರ್ಯರಿತಕಥೆ (೩ನೆಯ ಆವೃತ್ತಿ) ..	೩ ಆಣೆ
ಪಂಚಾಚಾರ್ಯಸ್ತ್ರಪ್ರಭಾಕರ	೩ ಆಣೆ
ಶ್ರೀಗುರುತತ್ತ್ವಪ್ರಬಂಧಗಳು ...	೩ ಆಣೆ
ಶ್ರೀರುದ್ರಮುನಿಶಿವಾಚಾರ್ಯರಿತ	೩ ಆಣೆ
ವೀರಶೈವಮತವಿಮಾರ್ಶಾಸಂಗ್ರಹ . .	೩ ಆಣೆ
ವೀರಶೈವಾಚಾರವಿಧಿ (೩. ನೆಯ ಆವೃತ್ತಿ)	೩ ಆಣೆ
ಲಿಂಗಧಾರಣವಿಧಿ . .	೪ ಆಣೆ
ವಿವಾಹವಿಧಿ (೩ನೆಯ ಆವೃತ್ತಿ) .	೪ ಆಣೆ
ಶ್ರೀಪತಿಪಂಡಿತಾರಾಧ್ಯರ ಶಾಲಿನೀಕರಣ	೪ ಆಣೆ
ಸನ್ಯಾಸಾಶ್ರಮವಿಮರ್ಶಾತತ್ತ್ವನಿರ್ಣಯ (೩ನೆಯ ಆವೃತ್ತಿ) ..	೬ ಆಣೆ
ಸಿದ್ಧಾಂತ ಶಿಖಾಮಣಿ (ಮೂಲಮಾತ್ರ ಚಿಕ್ಕಸೈಜು) ..	೬ ಆಣೆ
ವೀರಶೈವಮಹಾತ್ಮರು	೮ ಆಣೆ
ಬಸವಪ್ಪಾಂಶವಿವಾರರ (೩ನೆಯ ಆವೃತ್ತಿ)	೮ ಆಣೆ
ಶಿವಾದ್ವೈತಪ್ರಭಾ (ಸಂಸ್ಕೃತ)	೮ ಆಣೆ
ಪಂಡಿತ ಶ್ರೀಕಾಶೀನಾಥಶಾಸ್ತ್ರುಲವಾರಿ ಭಾಷಣಮು (ತೆಲುಗು) ...	೮ ಆಣೆ
ಪದ್ಯೋದ್ಧರಣ್ಯಾನಳಿ	೮ ಆಣೆ
ವೈದಿಕಶಿವಪೂಜಾವಿಧಿ (ವೈದಿಕ್ಸ್ತವಯುತ್ತಸಾದ ಅತ್ಯಂತ ಸುಂದರಮುದ್ರಣ)	೧೩ ಆಣೆ
ಸಿದ್ಧಾಂತಸಾರಾವಳಿ (ತ್ರಿಲೋಚನಶಿವಾಚಾರ್ಯಕೃತ)	೧೨ ಆಣೆ
ಶ್ರೀಜಗದ್ಗುರು ಪಂಚಾಚಾರ್ಯ ಸ್ತೋತ್ರರತ್ನಾಕರ	೧೩ ಆಣೆ
ಮಾದೇಶ್ವರ ದೀಕ್ಷಾವಿಧಿ (೩ನೆಯ ಆವೃತ್ತಿ)	೧೨ ಆಣೆ
ಶಿಖಾಸೂತ್ರಶಿದ್ಧಾಂತದರ್ಪಣ	೧೨ ಆಣೆ
ಶ್ರೀಕರಭಾಷ್ಯಂ (ಚಕ್ರಕೂಟ್ರಿ)	೧ ರೂ
ಸಚಿತ್ರ ರೇಣುಕವಿಜಯ (೩ನೆಯ ಆವೃತ್ತಿ)	೧ ರೂ
ವೀರಶೈವರತ್ನ (೨ನೆಯ ಆವೃತ್ತಿ, ೪೦೦ಮುತ್ತಕ್ಕೂ ಫೋಟೋಗಳಿರುವುದು) .	೧೫ ರೂ
ಸಿದ್ಧಾಂತಶಿಖಾಮಣಿ (ಸಂಸ್ಕೃತ ಟೀಕಾಸಹಿತ)	೨ ರೂ
ಕರ್ಣೋಪನಿಷತ್ (ಸಂಸ್ಕೃತ ಟೀಕಾಸಹಿತ)	೧ ರೂ
ರೇಣುಕವಿಜಯ ಮಹಾಪುರಾಣ (ಕನ್ನಡ ಭಾಷಾಂತರ ಪದ್ಯ) ...	೧ ರೂ
ಸಿದ್ಧಾಂತಶಿಖಾಮಣಿ (ಸಂಸ್ಕೃತ ಟೀಕಾಸಹಿತ)	೨ ರೂ
ವೀರಶೈವಸಿದ್ಧಾಂತಸುಧಾಕರ	೨ ರೂ
ಶಿವಾನುಭವಗೀತಮಂಜರಿ (ಕನ್ನಡಲಿಪ್ಯಾಸ್ಯಾನ ೧೩೨ಪುಟ)	೪ ರೂ
A brief life sketch of Pandit Sri Kashinatha Shastriji (*English*)	4 As
The Philosophical Aspect of Virasaivism (*English*)	8 As
Speeches by Pandit Shri Kashinatha Shastriji *English*)	12 As
ವೀರಶೈವರತ್ನ (ತೆಲುಗು)	೧ ರೂ
ಪ್ರಮಾಣಾರಾಯಣೀಯನಿಷತ್ (ವೀರಶೈವಭಾಷ್ಯ—ಸಂಸ್ಕೃತ)	೧ ರೂ
ವೀರಶೈವತ್ರಶೇಖರ (ಸಂಸ್ಕೃತ) ..	೧ ರೂ
ನಂದಿಕೇಶ್ವರಕಾರಿಕಾ (ಸಂಸ್ಕೃತ) ...	೨ ಆಣೆ
ಲಿಂಗಧಾರಣಚಂದ್ರಿಕಾ (ಸಂಸ್ಕೃತ) ...	೩ ರೂ

೧ ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವುದಿಲ್ಲ ೫ ರೂ ಗಳಿಗೆ ಮೇಲ್ಪಟ್ಟ ಪುಸ್ತಕಗಳನ್ನು ತರಿಸಿಕೊಳ್ಳುವವರಿಗೂ ಪುಸ್ತಕ ವ್ಯಾಪಾರಿಗಳಿಗೂ ೧೦ ರೂ. ಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವುದು.

ಮ್ಯಾನೇಜರ್—ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು

ಮೈಸೂರು ಸರ್ಕಾರ್ ಆಫೀಸ್ ಗೊಡೌನ್‌ನಲ್ಲಿರುವ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್‌ನಿಲ್ಲಿ ಸಂಪಾದಕರಾದ ನೇಗಿ ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರಿಂದ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED No. M. 2266 ॥ ಶ್ರೀಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು ॥ REGISTERED No M. 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿತರ್ ಪಂಚಾಸ್ಯಪೀಠಾಧಿಪರ್ ! ಪಂಚಕ್ಲೇಶವಿನಾಶಕರ್ ಪರತರಶ್ರೀಸಂಚಲೀಗೋತ್ಪವರ್ ॥
ಪಂಚಾಚಾರನಿಯಾಮಕರ್ ಪರಿಲಸತ್ಪಂಚಾಕ್ಷರೀಮೋಧಕರ್ । ಪಂಚಾಚಾರ್ಯಜಗದ್ಗುರೂತ್ತಮರನರ್ ಪಾಲಿಪ್ಪುದೀಲೋಕಮಂ ॥

ಸ್ಥಳದವರಿಗೆ ೧ ರೂ. ೧೧ ಆಣೆ ಬಿಡಿ ಪ್ರತಿ ೧೫ಕ್ಕೆ ೬ ಸೈ ಪರಸ್ಥಳದವರಿಗೆ ೨ ರೂ. ೮ ಆಣೆ ವಿ ಪಿ. ಚಾರ್ಜು ಪ್ರತ್ಯೇಕ.

ಸಂಪುಟ ೧೪.] ಪಂಚಾಚಾರ್ಯಪ್ರಭಾ, ಸೋಮವಾರ ತಾ॥ ೨೫ ನೇ ನವಂಬರ್ ೧೯೪೦ [ಸಂಚಿಕೆ ೨೯

ಭಾರತ ಸೆಕ್ರೆಟರಿಗಳ ಭಾಷಣ

ಈ ತಿಂಗಳು ೨೦ ನೆಯ ತಾರೀಖಿನ ದಿವಸ ಕಾಮನ್ಸ್ ಸಭೆಯಲ್ಲಿ ಶ್ರೀ ಆಮೇರಿಯವರು ಭಾರತದ ವಿಷಯವಾಗಿ ಭಾಷಣಮಾಡುತ್ತ " ಕಳೆದ ಸಂಗ್ರಾಮದಲ್ಲಿ ಭಾರತವು ಬ್ರಿಟನ್ನಿಗೆ ವಿಶೇಷ ಸಹಾಯ ನೀಡಿತೆಂದೂ, ತಮಗಿನ್ ಯುದ್ಧದಲ್ಲಿ ಸೈನ್ಯಪಡೆಗಳಿಗೆ ಸೇರಿಸಿಕೊಳ್ಳಲು ಭಾರತೀಯರು ವಿಶೇಷವಾಗಿ ಮುಂದೆ ಬರುತ್ತಿದುವರೆಂದೂ, ಅವರೆ ಸಂಯಾದ ಸಲಕರಣೆಗಳನ್ನು ಜೋಡಿಸುವುದು ಕಷ್ಟವಾಗಿರುವುದೆಂದೂ, ಸರಿಯಾದ ಸಲಕರಣೆಗಳು ದೊರೆತರೆ ಭಾರತವಲ್ಲಿ ಸೈನಿಕರನ್ನು ಸೇರಿಸುವುದಕ್ಕೆ ತೊಂದರೆ ವಿನೂ ಇಲ್ಲವೆಂದೂ, ಶಾಂತಿ ಸಮಯದಲ್ಲಿ ಭಾರತದಲ್ಲಿ ೧,೬೦,೦೦೦ ಜನ ಭಾರತೀಯ ಸೈನಿಕರೂ ೫೦, ೦೦೦ ಜನ ಬ್ರಿಟಿಷ್ ಸೈನಿಕರೂ ಇರುತ್ತಿದ್ದರೆಂದೂ, ಈಗ ೫ಲಕ್ಷ ಸೈನಿಕರು ಇರುವರೆಂದೂ, ಸೈನ್ಯ ಸರಬರಾಯಿಗೆ ಬೇಕಾಗುವ ವಾಹನಿಗಳ ಸಂಖ್ಯೆಯು ೫೦೦೦ ದಿಂದ ೨೩,೦೦೦ಕ್ಕೆ ಏರಿದೆ ಯೆಂದೂ, ಈ ಸೈನ್ಯ ಬಲದಲ್ಲಿ ೬೦,೦೦೦ ಜನ ಸೈನಿಕರು ಹೊರಗಡೆ ಕೆಲಸಮಾಡುತ್ತಿರುವರೆಂದೂ, ಭಾರತದ ನೌಕಾಬಲವನ್ನೂ ನಿಮಾನ ಬಲವನ್ನೂ ಹೆಚ್ಚಿಸುತ್ತಿರಲಾಗಿದೆಯೆಂದೂ, ಸಂಗ್ರಾಮಕ್ಕೆ ಬೇಕಾಗುವ ವಸ್ತುಗಳ್ಳಿವೆಯೆಂದೂ, ಭಾರತವು ಇಂದು ಸರಬರಿಯು ಮಾಡುತ್ತಿರುವುದೆಂದೂ, ಬ್ರಿಟನ್ನಿಗೆ ಸೋಲಾಗಿ ಸರ್ವಾಧಿಕಾರಿಗಳಿಗೆ ಜಯವಾದರೆ ಭಾರತಕ್ಕೆ ರಕ್ಷಣೆಯೇ ಇರುವುದಿಲ್ಲವೆಂಬುದು ಭಾರತೀಯರಿಗೆಲ್ಲ ಗೊತ್ತಿರುವುದೆಂದೂ, ಅಕ್ಷೆ ಅಲ್ಲ ಆರೀತಿ ಸರ್ವಾಧಿಕಾರಿಗಳಿಗೆ ಜಯವಾದರೆ ಭಾರತಕ್ಕೆ ರಾಜ್ಯಾಂಗ ವಿಚಾರದಲ್ಲಿ ಮುಂದುವರಿಯುವ ಅವಕಾಶ ಇರುವುದಿಲ್ಲವೆಂಬುದನ್ನು ಭಾರತೀಯ ನಾಯಕರು ಅರಿತಿರುವರೆಂದೂ " ಸೂಚಿಸಿದರು

ಅನಂತರ ಭಾರತದ ರಾಜಕೀಯ ವಿಚಾರವಿತ್ತಿ "ಬ್ರಿಟನ್ನಿನ ಶ್ವೇತಪತ್ರದಲ್ಲಿ ಸೂಚಿತವಾಗಿರುವ ಸಲಹೆಗಳನ್ನು ಅರ್ಧ ಮನಸ್ಸಿನಿಂದ ಬ್ರಿಟಿಷ್ ಸರ್ಕಾರವು ಮಾತಿಲ್ಲವೆಂದೂ, ಭಾರತಕ್ಕೆ ನಾಳೆಯ ದಿನ ಸ್ವಾತಂತ್ರ್ಯ ಕೊಡುವುದಾದರೂ ಇನ್ನೂ ಅನೇಕ ವರ್ಷಗಳ ಕಾಲ ಭಾರತವು ತನ್ನ ರಕ್ಷಣೆಗೆ ಬ್ರಿಟನ್ನಿನ್ನ ಆಶ್ರಯಿಸ ಬೇಕಾಗಿರುವುದೆಂದೂ, ಸಿಪಾಯಿ ಅಧಿಕಾರ ಪ್ರಾಪ್ತಿಯಾಗುವುದೂ ಜವಾಬ್ದಾರಿ ಗಳಿಸುವುದೂ ಕಾಂಗ್ರೆಸ್ ನಿರಾಕರಿಸಿದ್ದಕ್ಕಾಗಿ ವ್ಯಸನವಾಗುವುದೆಂದೂ, ಭಾರತದ ಸೈನ್ಯವಾದ ರಾಜ್ಯಾಂಗ ವ್ಯವಸ್ಥೆಯ ವಿಚಾರವನ್ನು ಈಗಲಾದರೂ ಭಾರತೀಯ ನಾಯಕರು ಪರಿಶೀಲಿಸ ಬೇಕೆಂದೂ, ಭಾರತದ ಒಳಗಿನ ಮತ್ತು ಹೊರಗಿನ ಪರಿಸ್ಥಿತಿಗಳಿಗೆ ಅನುಗುಣವಾಗಿ ಭಾರತದ ರಾಜ್ಯಾಂಗ ವ್ಯವ ಸ್ಥೆಯ ಅಭಿವೃದ್ಧಿಯ ಕಡೆಗೆ ಗಮನ ಕೊಡಬೇಕೆಂಬುದು ನೈಸರಾಯರ ಇಚ್ಛೆಯೆಂದೂ, ಕೆಲವು ಪರತ್ರುಗಳ ಮೇಲೆ ಭಾರತಕ್ಕೆ ಆಡಳಿತ ಜವಾಬ್ದಾರಿಯನ್ನು ಹೊರುವ ಉದ್ದೇಶವು ಬ್ರಿಟಿಷ್ ಸರ್ಕಾರಕ್ಕೆ ಇರುವುದೆಂದೂ, ವೈಸರಾಯರ ಮಂತ್ರಿಮಂಡಲ ವಿಸ್ತಾರ ಸಲಹೆಯನ್ನು ಹಿಂದಕ್ಕೆ ತೆಗೆಸಿಕೊಂಡಿಲ್ಲವೆಂದೂ. ಭಾರತದ ಪಾಮು ಕರು ಈಗಲಾದರೂ ಮುಂದೆ ಬಂದು ಆ ಸಲಹೆಯನ್ನು ಅಂಗೀಕರಿಸಿದರೆ ಬ್ರಿಟಿಷ್ ಸರ್ಕಾರಕ್ಕೆ ನಿಜವಾಗಿಯೂ ಸಂತೋಷವಾಗುವದೆಂದೂ, ಬ್ರಿಟಿಷ್ ಸರ್ಕಾರದವರು ಬೇಕಾದ ಸಹಾಯವೆಲ್ಲವನ್ನೂ ನೀಡುವರೆಂದೂ, ಭಾರತದ ಭಾವೀರಾಜ್ಯಾಂಗ ವ್ಯವಸ್ಥೆಯು ಭಾರತದ ರಾಷ್ಟ್ರ ಜೀವನದ ಪ್ರಮುಖ ಪಕ್ಷಗಳವರ ಒಪ್ಪಿಗೆಯಿಂದ ರೂಪುಗೊಳ್ಳಬೇಕಾಗಿದೆಯೆಂದೂ, ಭಾರತದ ನಾನಾ ಕೋಮುಗಳವರಿಗೆ ಪರಸ್ಪರ ಬಾಂಧವ್ಯವು ಚಿರಸ್ಥಾಯಿಗಿರಬೇಕಾದುದು ಮುಖ್ಯವಾದುದೆಂದೂ " ಸೂಚಿಸಿದರು

ಚಕ್ರವರ್ತಿಗಳ ಭಾಷಣ

ಚಕ್ರವರ್ತಿಗಳು ಲಾರ್ಡ್ಸ್ ಸಭೆಯಲ್ಲಿ ಈಗಿನ ಸಂಗ್ರಾಮ ಪರಿಸ್ಥಿತಿಯನ್ನು ವಿಮರ್ಶಿಸುತ್ತ—

" ಒಂದು ವರ್ಷಕ್ಕೆ ಮಿಗಿಲ ಕಾಲದಿಂದ ನಮ್ಮ ಭೂ, ಜಲ, ವಾಯುಬಲಗಳು ಸ್ವಾತಂತ್ರ್ಯದ ಅದರ್ಶ ಕ್ಕಾಗಿ ಹೊಡೆದಾಡುತ್ತಿವೆ ನಮ್ಮ ಪ್ರಜೆಗಳು ತಮ್ಮ ಗೃಹಗಳ್ಳೂ, ತಮ್ಮ ಉದ್ಯೋಗ ಸ್ಥಾನಗಳ್ಳೂ, ಸಮುದ್ರವಲ್ಲೂ ಕತ್ತಲಿನ ಭಯಂಕರ ಕೃತ್ಯಗಳನ್ನು ಸಹಿಸಿಕೊಂಡು ಎದಿಗೆಡದೆ ಹೊಡೆದಾಡುತ್ತಿದ್ದಾರೆ. ಜರ್ಮನಿಯು ಬಹಳ ಲೆಕ್ಕಾಚಾರಹಾಕಿ ಮೋಸದಿಂದಲೂ ಕ್ರೂರವರ್ತನೆಯಿಂದಲೂ ಅನೇಕ ಜನಾಂಗಗಳನ್ನು ತನ್ನ ಅಧೀನಕ್ಕೆ ಒಳಪಡಿಸಿಕೊಂಡಿವೆ. ಹೀಗೆ ಖಾದಾ ಕ್ರ್ಯಾಮವಾದ ದೇಶಗಳ ಪರಕಾರಗಳು ಇಲ್ಲಿರುವುದಕ್ಕಾಗಿ ನಾನು ಬಹಳ ಸಂತೋಷಪಡುತ್ತೀನೆ. ಆ ದೇಶಗಳ ಸೈನಿಕರು ಧೈರ್ಯವಂತರಾದ ಇತರ ಜನಾಂಗಗಳೊಂದಿಗೆ ನಮಗೆ ಬೆಲಬಲವಾಗಿ ನಿಂತು ಶತ್ರುಗಳನ್ನು ಎದುರಿಸುತ್ತಿರುವುದು ಆನಂದದಾಯಕವಾದ ವಿಚಾರವೇ ಸರಿ!

ಬೇಸಿಗೆಯ ಆರಂಭದಲ್ಲಿ ಫ್ರಾನ್ಸಿನಲ್ಲಿ ಮಿಲಿಟರಿ ವಿಪ್ಲವವುಂಟಾಯಿತು. ಅದರ ಫಲವಾಗಿ ಫ್ರಾನ್ಸು ಜರ್ಮನಿ ಯೊಡನೆ ಸಂಧಾನ ಮಾಡಬೇಕಾಯಿತು. ಫ್ರಾನ್ಸಿನಾದ ದುರದೃಷ್ಟವನ್ನು ಕಂಡ ಇಟಲಿಯು ಇದೇ ಸುಸಮಯವೆಂದರಿತು, ಕ್ರೂರ ಜರ್ಮನಿಯ ಕಡೆ ಸೇರಿ, ಈಗ ಗ್ರೀಸಿನ ಮೇಲೆ ಉದ್ದೇಶಪೂರ್ವಕವಾಗಿ ಮುತ್ತಿಗೆ ಹಾಕಿದೆ. ಕ್ರೂರಕರ್ಮ ನಡೆಸುತ್ತಿರುವವರನ್ನು ಎಮರಿಸಲು ಹೊಡಿಯವ ಈ ಸಂಗ್ರಾಮದಲ್ಲಿ ನಮಗೆ ಹೊಸ ಮಿತ್ರರು ಲಭಿಸಿದಂತಾಯಿತು. ಈ ಮಿತ್ರರಿಗೆ ನನ್ನು ಸಾಮಾನ್ಯವಾಳ ಕೈಲಾದ ಸಹಾಯವನ್ನೆಲ್ಲ ನೀಡುವುದಾಗಿದೆ. ಗ್ರೀಸು ಧೈರ್ಯದಿಂದ ಶತ್ರುಗಳನ್ನೆದುರಿಸುವುದರಾಮೂಲಕ ತನ್ನ ಪುರಾತನ ಕೀರ್ತಿಯನ್ನು ಉಳಿಸಿಕೊಂಡಿದೆ. ಮೆಡಿಟರೇನಿಯರ್ ಸಮುದ್ರದಲ್ಲಿರುವ ನಮ್ಮ ಬಲವು ಯಾವ ಕ್ಷಣದಲ್ಲಿದ್ದರೆ ಆ ಕ್ಷಣ ತನ್ನ ಶಕ್ತಿಯನ್ನು ತೋರಿಸಲು ಸಿದ್ಧವಾಗಿದೆ ಇದಲ್ಲವೆ ಈಜಿಪ್ಟ್ ಮತ್ತು ತುರ್ಕಿಗಳೊಂದಿಗೆ ಬ್ರಿಟಿಷರು ಅಮೂಲ್ಯವಾದ ಒಪ್ಪಂದ ಗಳನ್ನು ಮಾಡಿಕೊಂಡಿದ್ದಾರೆ ಅಮೇರಿಕಾ ಸರಕಾರದ ವರು ತಮ್ಮ ೫೦ ಡಿಸ್ಟ್ರಾಯರುಗಳನ್ನು ನಮ್ಮ ನೌಕಾ ಬಲಕ್ಕೆ ಪರಾಯಿಸಲು ಒಪ್ಪಿದೆಯೆಂಬುದನ್ನು ಕೇಳಿ ನಮಗೆ ಬಹಳ ಆನಂದವಾಯಿತು. ಇದಕ್ಕೆ ಪ್ರತಿಯಾಗಿ ಅಮೇರಿಕಾಕ್ಕೆ ಅಟ್ಲಾಂಟಿಕ್ ಸಾಗರದಲ್ಲಿ ಬಿಟ್ಟುಕೊಡಲಾಗಿರುವ ಕೆಲವು ಸ್ಥಾನಗಳು ಸ್ವತಂತ್ರಮಾನವ ಸಂರಕ್ಷಣೆಗೆಸಹಾಯಕವಾಗುವುದೆಂದು ನಾವು ನಂಬಿದ್ದೇವೆ" ಎಂದು ಹೇಳಿದರು

ಇಟಲಿ ಮಸೂಲಿನಿಯವರ ಭಾಷಣ

ಫಾಸಿಸ್ಟ್ ಪಕ್ಷದ ಸದಸ್ಯರ ಸಭೆಯಲ್ಲಿ ಇಟಲಿಯ ಸರ್ವಾಧಿಕಾರಿಗಳಾಗಿರುವ ಮಸೂಲಿನಿಯವರು ಮಾತನಾಡುತ್ತ " ಸಂಗ್ರಾಮ ಪ್ರಕಟನೆಗಳನ್ನೆಲ್ಲಾ ಸಿದ್ಧಗೊಳಿಸುವವರ ಮೇಲ್ವಿಚಾರಣೆಯನ್ನು ನಾವೇ ಸ್ವತಃ ನೋಡಿಕೊಳ್ಳುತ್ತಿದ್ದೇವೆ ಇಟಲಿಯ ವೀರಪ್ರಜೆಗಳು ನಿಜವನ್ನು ಬಯಸುವರ್ಲ್ಡವೆ ಜಂಭ ಕೊಚ್ಚಿಕೊಳ್ಳುವುದಿಲ್ಲ. ಫ್ರಾನ್ಸಿನಲ್ಲಿ ಜರ್ಮನಿಯು ಅಧಿಕಾರಗಳು ವಶಪಡಿಸಿಕೊಂಡ ಕಾಗದ ಗಳಿಂದ ಮೇ ತಿಂಗಳಿನಲ್ಲಿ ಗ್ರೀಸಿನಲ್ಲಿರುವ ನೌಕಾ ಸ್ಥೈತ್ಯಗಳನ್ನು ಬ್ರಿಟನ್ನಿಗೆ ಬಿಟ್ಟುಕೊಡುವದಾಗಿ ಗ್ರೀಕ್ ಹೈ ಕಮ್ಯಾಂಡರವರು ಸೂಚಿಸಿದ್ದ ಅಂಶವು ಹೊರ ಬಿದ್ದಿತು ಅವನ್ನು ತಡೆಲು ಇಟಲಿಯು ಶಕ್ತ ಸಿದ್ಧ ತೆಗಳನ್ನು ಮಾಡಿಕೊಂಡಿದೆ ಎಪಿರಸ್ ಕ್ಷೇತ್ರದಲ್ಲಿ ಸಂಗ್ರಾಮವಾರಂಭವಾದ ಕೆಲವು ದಿನಗಳಲ್ಲಿ 72 ಇಟಲಿ ಸೈನಿಕರು ಸತ್ತರು. 700 ಜನರಿಗೆ ಗಾಯಗಳಾದವು. 750 ಜನರು ಪತ್ತೆಯಿಲ್ಲದಾಗಿದ್ದಾರೆ. ಮೃತರ ಸೇಡನ್ನು ತೀರಿಸಿಕೊಳ್ಳಲಾಗುವದು ನಾವು ಹೊರಡಿಸುವ ಸಂಗ್ರಾಮ ಪ್ರಕಟನೆಗಳು ನಿಶ್ಚಯಾಂಶಗಳನ್ನು ಬಿಟ್ಟು ಹೋಗಿಲ್ಲ ಇಟಲಿಯ ಸಂಗ್ರಾಮ ನೌಕೆಗಳು ಇಟಲಿಯ ಪ್ರಯಾಣ ಸೌಕರ್ಯ ಮಾರ್ಗಗಳನ್ನು ಬಹಳ ದಕ್ಷತೆಯಿಂದ ರಕ್ಷಿಸುತ್ತವೆ. ಅದನ್ನು ತಡೆಯಲು ಬ್ರಿಟಿಷ್ ಸಂಗ್ರಾಮ ನೌಕೆಗಳಿಗೆ ಸಾಧ್ಯವಾಗಿಲ್ಲ. ಸಂಗ್ರಾಮದ ದೆಸೆಯಿಂದ ಜನರಿಗಾಗಿರುವ ತೊಂದರೆಯ ವಿಷಯದಲ್ಲಿ ಇಲ್ಲಿಯವರೆಗಾಗಿರುವ ತೊಂದರೆಗಳನ್ನು ಸಹಿಸಬಹುದಾಗಿದೆ. ಇನ್ನು ಮುಂದೆ ಇನ್ನೂ ತೊಂದರೆಯು ಹೆಚ್ಚಬಹುದು. ಈಗ ಗ್ರೀಸಿನಿಂತೆ ನಡೆಯು ಕ್ರಿಯವ ಸಂಗ್ರಾಮದಲ್ಲಿ ಎಪಿರ್ ಬೆಟ್ಟ ಪ್ರದೇಶ ಮತ್ತು ಕೊಚ್ಚೈಯಿಂದ ಆಕಡಿದ ಅದರ ಆಚೆಗೆಗಳಲ್ಲಿ ಬಹಳ ತೀವ್ರಗತಿಯಿಂದ ಮುಂದುವರಿಯುವದು ಸಾಧ್ಯ ವಲ್ಲವೆಂಬುದು ಎಲ್ಲರಿಗೂ ತಿಳಿದ ವಿಷಯವಾಗಿದೆ. ಗ್ರೀಸು ನೊಡನೆ ಈಗೀಗ ಯುದ್ಧಾರಂಭವಾಗಿದೆ. ಅಲ್ಬೇನಿಯಾ ಚಕ್ರವರ್ತಿಗಳನ್ನು ಜಯಿಸಿವಂತೆ ಗ್ರೀಸನ್ನೂ ನಾವು ಗೆದ್ದು ಜಯಶೀಲರಾಗಲು ಶಕ್ತರಾಗಿದ್ದೇವೆ 10 ಲಕ್ಷ ಇಟಲಿ ಸೈನಿಕರು ಈಗ ಸಿದ್ಧರಾಗಿದ್ದಾರೆ. ಇನ್ನೂ ಬೇಕಾದರೆ 80 ಲಕ್ಷ ಸೈನಿಕರನ್ನು ಕರೆಯಬಲ್ಲೆವು" ಎಂದು ನುಡಿದರು.

ಹೈಕೋರ್ಟಿನಲ್ಲಿ ಅಪೀಲಾಗಿರುವ ಬೆಂಗಳೂರಿನ ಸೋಷ್ಟಗುಂಡೇರವರ ಕೊಲೆಯ ಕೇಸಿನಲ್ಲಿ ೧ ನೇ ಆಪರಾಧಿ ನಾರಾಯಣರೆಡ್ಡಿಯವರ ಪರವಾಗಿ ಮದ್ರಾಸಿನ ಸುಸ್ಪ್ರಸಿದ್ಧ ವಕೀಲರಾದ

ಶ್ರೀ ನ್ಯೂಜೆಂಟ್‌ಗ್ರಾಂಟ್‌ರವರ ವಾದ

"ಈ ಮೊಖದ್ದಮೆಯಲ್ಲಿ ಮರಣದಂಡನೆಯ ಶಿಕ್ಷೆಗೆ ಒಳಗಾಗಿರುವ ಶ್ರೀ ಕೆ ಂ ನಾರಾಯಣರೆಡ್ಡಿಯವರ ಪರವಾಗಿ ನಾನು ನಾಡಿ ತ್ತೇನೆ ಗನೇ ಆಪರಾಧಿಯು ವಿಚಾರಪಲ್ಲಿ ಕೆಳಗಿನ ಕೋರ್ಟಿನಲ್ಲಿ ಒಂದು ಮಾರ್ಗವನ್ನು ಅನುಸರಿಸಲಾಯಿತು ಇಲ್ಲಿಯೂ ಅದೇ ಮಾರ್ಗವನ್ನು ಅನುಸರಿಸಲಿಚ್ಛಿಸುತ್ತೇನೆ ಮೊಖದ್ದಮೆಗೆ ಸಂಬಂಧಿಸಿದ ಸಾರಾಂಶವನ್ನು ನಾನು ತಿಳಿಸುತ್ತೇನೆ ಶ್ರೀ ವಿ ವಿ ಶ್ರೀನಿವಾಸಯ್ಯಂಗಾರ್ಯರೂ ಪತ್ತ ಸ್ಪೆಷಲ್ ಪಬ್ಲಿಕ್ ಪ್ರಾಸಿಕ್ಯೂಟರವರ ಶ್ರೀ ಕೆ ರಾಮಸ್ವಾಮಿಯವರೂ ವಿವರವಾಗಿ ಎಲ್ಲರನ್ನೂ ವಿವರಿಸಬಹುದು ೧ ನೇ ಆಪರಾಧಿಗಳೂ ಆವರ ತಾಯಿಯ ವಿರೂಧ ಶ್ರೀ ಮುನಿನೇಜಪ್ಪನವರು ಬರೆದ 'ವಿಲ್'ನ ಸಂಬಂಧವಾಗಿ ವ್ಯವಹಾರಗಳು ನಡೆದು ಉಬಯರಿಗೂ ಮನಸ್ತಾಪ ವಂಕುರಿತು ತತ್ಪರಿಣಾಮವಾಗಿ ವ್ಯವಹಾರವೊಂದರ ವೆಚ್ಚದ ಸಂಬಂಧದಲ್ಲಿ ಶ್ರೀ ನಾರಾಯಣರೆಡ್ಡಿಯವರ ಕಾರನ್ನು 'ಅಟ್ಯಾಚ್' ಮಾಡಲು 'ನಾರಂಟ್' ಪಡೆದುದೇ ಈ ಘಕರ ಕೃತ್ಯ ನಡೆಯಲು ಕಾರಣವಾಯಿತು

"ಶ್ರೀ ಮುನಿನೇಜಪ್ಪನವರು ೮ ೧೦ ೩೫ ನೇ ದಿನ ಗತಿಸಿದರು ಆವರು ಗತಿಸುವ ೩ ದಿನ ಮುಂಚಿತವಾಗಿ ೫-೧೦ ೩೫ ರಲ್ಲಿ 'ವಿಲ್' ಒಂದನ್ನು ರಚಿಸಿದರೆಂದು ಹೇಳಲಾಗಿದೆ. ಶ್ರೀ ಮುನಿನೇಜಪ್ಪನವರಿಗೆ ಹೆಣ್ಣು ಮತ್ತು ಗಂಡು ಮಕ್ಕಳಿದ್ದರು. ಆವರ ಮನೆಯಲ್ಲಿ ವಯಸ್ಸಾದ ದೊಡ್ಡ ಗಂಡು ಮಕ್ಕಳು ಶ್ರೀ ನಾರಾಯಣ ರೆಡ್ಡಿಯವರು ಮಾತ್ರ. 'ವಿಲ್'ನ ಸತ್ಯತೆಯ ವಿಚಾರದಲ್ಲಿ ಕೋರ್ಟುಗಳಲ್ಲಿ ವ್ಯವಹಾರವು ೧೯೩೫ ರಲ್ಲಿ ಆರಂಭವಾಯಿತು ಆದರೆ ೧೯೪೦ ಆದರೂ ಇತ್ಯರ್ಥ ವಾಗಿಲ್ಲ ದಗರಡಿ ಮತ್ತು ದಂಡಿನ ಕೋರ್ಟುಗಳಲ್ಲಿ ವ್ಯವಹಾರವು ನಡೆಯುತ್ತಿದ ೧೯೩೫ ರಲ್ಲಿ ೧ನೇ ಆಪರಾಧಿಗು ನಗರದ ಕೋರ್ಟಿನಲ್ಲಿ ಗಾರ್ಡಿಯಷಿಪ್ ವ್ಯವಹಾರವನ್ನು ಹೂಡಿದರು ಬೆಂಗಳೂರು ಬ್ಯಾಂಕಿನ ಲ್ಲಿದ್ದ ೮೫,೦೦೦ ರೂಗಳನ್ನು ಶ್ರೀ ವ ಶ್ರೀನಿವಾಸಪ್ಪನವರು ತಮ್ಮ ಮಗಳು ಮತ್ತು ತಮ್ಮ ಸಹೋದರಿಯ ಹೆಸರಿನಲ್ಲಿ ಇಟ್ಟಿರು ಶ್ರೀ ಮುನಿನೇಜಪ್ಪನವರು ಗತಿಸಿದ ವೇಲೆ ಮೈಸೂರು ಬ್ಯಾಂಕಿನಲ್ಲಿಟ್ಟಿರುವ ೮೫,೦೦೦ ರೂಗಳನ್ನು ತನ್ನ ತಾಯಿಯು ಎಲ್ಲಿ ಪಡೆಯುವನೋ ಎಂಬ ಭಯದಿಂದ ಶ್ರೀ ನಾರಾಯಣರೆಡ್ಡಿಯವರು ಜಲ್ಲಾ ಕೋರ್ಟಿನ ಮುಂದೆ 'ಇಂಜಕ್ಷ' ಆರ್ಜಿ ಸಲ್ಲಿಸಿದರು. ಸ್ವಲ್ಪ ಕಾಲವಾದ ಮೇಲೆ ಆತನ ಸಹೋದರಿಯು 'ಮೇಜರ್' ಆಗಿ ತನ್ನ ಹಣವನ್ನು ಪಡೆಯಲು ಸ್ಯುತ್ಥಿಸಿದಳು ೧ ನೇ ಆಪರಾಧಿಗು ಇದನ್ನು ವಿರೋಧಿಸಿದರು. ಇದರ ಪರಿಣಾಮವಾಗಿ ಉಭ್ಭವಾದುದು ಒ. ಎಸ್. ೧೧೧ನೇ ವ್ಯವಹಾರ. ಜಿಲ್ಲಾ ಕೋರ್ಟು ಇತ್ತ 'ಇಂಜಕ್ಷ' ಆಜ್ಞೆಯನ್ನು ರದ್ದುಗೊಳಿಸಬೇಕೆಂದು ಈ ಕೋರ್ಟಿನ ಮುಂದೆ ಅರ್ಜಿಯೊಂದು ಬಂದು 'ಇಂಜಕ್ಷ' ರದ್ದಾಗಬೇಕೆಂದು ತೀರ್ಮಾನವಾಯಿತು. ಆ ವ್ಯವಹಾರದ ಸಂಬಂಧದಲ್ಲಿಯೇ ಶ್ರೀ ಕೆ. ಎಂ ನಾರಾಯಣರೆಡ್ಡಿಯವರು ಕೋರ್ಟಿಗೆ ಮೆಚ್ಚ ೩೭ ೦ ರೂ.ಗಳನ್ನು ಕೊಡಬೇಕೆಂದು ನಿರ್ಧರವಾದದ್ದು. ಅದು ಹೇಗೋ ೪೫ ರೂ.ಗಳಾಗಿಬಿಟ್ಟಿದೆ. ಆ ಹಣವನ್ನು ಪಡೆಯುವುದಕ್ಕಾಗಿಯೇ ಕಾರನ್ನು 'ಅಟ್ಯಾಚ್' ಮಾಡಲು 'ವಾರಂಟ್' ಪಡೆದದ್ದು. ೧೨-೪-೪೦ ರಲ್ಲಿ ಪಡೆದ ಅಟ್ಯಾಚ್‌ಮೆಂಟ್ ವಾರಂಟೇ ೨೨-೪-೪೦ ರ ಘಕರಕೃತ್ಯಕ್ಕೆ ಕಾರಣವಾಯಿತು. ೨೨-೪-೪೦ನೇ ದಿನ ಶ್ರೀ ನಾರಾಯಣರೆಡ್ಡಿಯವರ "ಕಾರಿನ ಅಟ್ಯಾಚ್‌ಮೆಂಟ್" ನ ವಿಷಯವು ತಿಳಿದುಹೋದಮೇಲೆ ಅವರು ತಮ್ಮ ಅಳುಗರ ಸಹಾಯ ಪಡೆದು ವ್ಯಾಗನ್ನಿನಲ್ಲಿ ಹೊರಟು ಶ್ರೀ ಕೃಷ್ಣಮೂರ್ತಿಯವರನ್ನು ಅಪಹರಿಸಿ ಕೊಂಡು ಹೋಗುವಾಗ ಮರಣ ಸಂಭವಿಸಿತು.

ಆ ಸಮಯದಲ್ಲಿ ದಂಡಿನ ಮತ್ತು ನಗರದ ಕೋರ್ಟುಗಳಲ್ಲಿ 'ಪ್ರೋಬೇಟ್' ವ್ಯವಹಾರಗಳು ನಡೆಯುತ್ತಿದ್ದವು ಎರಡು ಕೋರ್ಟುಗಳಲ್ಲಿಯೂ ಯಾವುದರಲ್ಲಿಯೂ 'ಪ್ರೋಬೇಟ್' ದೊರೆಯಲಿಲ್ಲ ಶ್ರೀ ಕೃಷ್ಣಮೂರ್ತಿಯರು ಶ್ರೀಮತಿ ಲಕ್ಷ್ಮಮ್ಮನವರ ವಕಾಲತ್ತು ವಹಿಸಿದ್ದರು ಶ್ರೀ ನಾರಾಯಣರೆಡ್ಡಿಯವರ ಪರವಾಗಿ ಕೆಲವು ಕಾಲ ಶ್ರೀ ಎಸ್. ಕೆ ವೆಂಕಟರಂಗಯ್ಯಂಗಾರ್ಯರು ವಕಾಲತ್ತು ವಹಿಸಿದ್ದರ ನಗರದ ಕೋರ್ಟಿನಲ್ಲಿ "ವಿಲ್"ನ್ನು ಹಾಜರುಪಡಿಸಲಾಗಿತ್ತು ಆ "ವಿಲ್ಲು" ಪಂಥಿಸ ಕೋರ್ಟಿಗೆ ಸಹ ಬೇಕಾಗಿತ್ತು. ಆ ವಿಲ್ಲು ಸೃಷ್ಟಿಸಲ್ಪಟ್ಟಿತೆಂದು ಹೇಳಲಾಗಿದೆ ಆದರೆ ಅದು ಸೃಷ್ಟಿ ಸಲ್ಪಟ್ಟಿದ್ದರೆ ಆಗುವ ದುಷ್ಪರಿಣಾಮಗಳು ವಿಪರೀತವಾಗಿತ್ತಿದ್ದವು ಶ್ರೀ ಎಸ್ ಕೆ ವೆಂಕಟರಂಗಯ್ಯಂಗಾರ್ಯರು ಆ "ವಿಲ್ಲ"ನ್ನು ಬರೆಸಿದರು ಶ್ರೀ ಮುನಿನೇಜಪ್ಪನವರೆ ಆವರು ಗತಿಸುವ ಕೆಲವು ದಿನಗಳಂದ ಪರಿಸ್ಥಿತಿ ವಿಷಮಿಸಿತ್ತೆಂದು ವ್ಯಕ್ತಪಟ್ಟಿತು

ಈ ಮೊಕದ್ದಮೆಯಲ್ಲಿ ಕೊಲೆಯು ಉದ್ದೇಶವು ನಿಲ್ಲಲ್ಲಿದೆಯೆಂದು ನ್ಯಾಯಾಧೀಶರು ಅಭಿಪ್ರಾಯಪಟ್ಟಿದ್ದು ಈ ಘೀಕರ ಕೃತ್ಯಕ್ಕೆ ಒಬ್ಬೆಯವು "ಅಟ್ಯಾಚ್‌ಮೆಂಟೇ" ಎಂದು ಅಭಿಪ್ರಾಯಪಟ್ಟಿರುವರು ಶ್ರೀ ಕೃಷ್ಣಮೂರ್ತಿಯವನ್ನು ಅಪಹರಿಸಿ ಪ್ರವೇಶಕ್ಕೆ ಕರೆದುಕೊಂಡುಹೋಗಿ ಅವರನ್ನು ಭಯ ಪಡಿಸುವುದೇ ಒಂದನೇ ಆಪರಾಧಿಯ ಉದ್ದೇಶವಾಗಿತ್ತು ಒಂದನೇ ಆಪರಾಧಿಯವೇಲೆ ಹೊರಿಸಲ ಆಪಾದನೆಗಳನ್ನು ಸ್ಥಿರಪಡಿಸಲು ಇರುವ ಮುಖ್ಯ ಸಾಕ್ಷ್ಯ ಸಾಕ್ಷಿಯು ಅಪ್ರೂವರನ ಸಾಕ್ಷ್ಯ ಮತ್ತು ೧ನೇ ಆಪರಾಧಿಯ ಕಛಿಷರ ಇತರ ಸಿಪಯಗಳು ಅಲ್ಪ ವಿಚಾರಗಳು. ಅಪ್ರೂವರನ ಸಾಕ್ಷ್ಯವನ್ನು ೧ನೇ ಆಪರಾಧಿಯ ಲಾಯರ್ ವ್ಯವಹರಿಸುವುದಿಲ್ಲ ದೃಢಪಡಿಸಿದ ಇಬಬ ಕೃತ್ಯದ ಸಹೋದ್ಯೋಗಿಯ ಸಾಕ್ಷ್ಯದ ಮೇಲೆ ಶಿಕ್ಷೆ ವಿಧಿಸಲು ಸಾಧ್ಯವಿಲ್ಲ ಈ ಮೊಕದ್ದಮೆಯಲ್ಲಿ ಅಪ್ರೂವರನ ಸಾಕ್ಷ್ಯವು ಎಲ್ಲಿಯೂ ಸ್ಥಿರಪಟ್ಟಿಲ್ಲ ೧ನೇ ಆಪರಾದಿಯು ೨, ೩ ಮತ್ತು ೪ ನೇ ಆಪರಾಧಿಗಳಿಗೆ ಹೇಳಿರುವ ವಿಷಯವನ್ನು ಗಮನಿಸಿದರ ಆವರ ಮನೋ ಭಾವನೆಯು ಯಾವ ರೀತಿ ಇತ್ತೆಂಬುದು ವ್ಯಕ್ತಪಡುವುದಾಗಿದೆ.

೨೩.೪.೪೦ ರಲ್ಲಿ ಶ್ರೀ ಕೃಷ್ಣಮೂರ್ತಿಯವರನ್ನು ಸ್ಪೆಷಲ್ ಸ್ಪಾಗನ್ನಿನಲ್ಲಿ ಎತ್ತಿಹಾಕಿಕೊಂಡು ಹೋಗುವ ಸಮಯದಲ್ಲಿ ಶ್ರೀ ನಾರಾಯಣರೆಡ್ಡಿಯವರು ವ್ಯಾಗನ್ನನ್ನು ನಡುಮಾಡುತ್ತಿದ್ದರು. ಅವರು ಕಳವಳದಿಂದ ಒಬ್ಬರಿಂದ ಒಬ್ಬರಿಗೆ ಶ್ರೀ ಕೃಷ್ಣಮೂರ್ತಿಯವರನ್ನು ಏನು ಮಾಡುತ್ತಿದ್ದರೋ ಅದು ಅವರಿಗೆ ಕಾಣ ಬಂತೊಲಿಲ್ಲ ಏಕೆಂದರೆ ಅವರು ಕುಳಿತ ೧| ಆಡಿಗಳ ಹಿಂದೆ ಮತ್ತೊಂದು ಸೀಟು ಇದೆ ಆದರ ಹಿಂದೆ ಇರುವುದು ಸಾಕಾಲವಾದ ಸ್ಥಳ. ಅಲ್ಲಿ ಅಳುಗಳು ಈ ಕೃತ್ಯ ನಡೆಸಿದ್ದು. ಈ ಕೃತ್ಯ ನಡೆದಿರುಗ ಶ್ರೀ ಕೃಷ್ಣಮೂರ್ತಿಯವರನ್ನು ಎಡ ಪಾರ್ಶ್ವಕ್ಕೆ ತಿರುಗಿಸಿ ಮಲಗಿಸಲಾಗಿತ್ತು. ಆವು ಹೇಗೆ ಶ್ರೀ ನಾರಾಯಣರೆಡ್ಡಿಯವರಿಗೆ ಕಾಣಬೇಕು? ಶ್ರೀ ಕೃಷ್ಣ ಮೂರ್ತಿಯವರ ಕಾಲುಗಳನ್ನು ಕಟ್ಟಲಾಗಿತ್ತು, ಮತ್ತು ಆವರ ಕತ್ತಿನ ಸುತ್ತ ಹಗ್ಗ ಬಿಗಿಯಲಾಗಿತ್ತು. ಶ್ರೀ ಕೃಷ್ಣಮೂರ್ತಿಯವರನ್ನು ಆ ರೀತಿ ಕೊನೆಗಾಣಿಸಲೇ ಕೆಂಬ ಉದ್ದೇಶವು ಶ್ರೀ ನಾರಾಯಣರೆಡ್ಡಿಯರಿಗಿದ್ದಿದ್ದರೆ ಇಲ್ಲಿ ಮೊಕದ್ದಮೆಯ ವಿಮರ್ಶೆಯೇ ಅನವಶ್ಯಕವಾಗಿತ್ತು ಈ ಕೋರ್ಟಿನ ಕಾಲವನ್ನು ಕಳೆಯಬೇಕಾಗಿರಲಿಲ್ಲ. ಆದರೆ ಪರಿಸ್ಥಿತಿಯೇ ಪ್ರತ್ಯೇಕವಾಗಿರುವುದು. ೨೨-೪-೪೦ ನೇ ದಿನ ಕಾರಿನ ಅಟ್ಯಾಚ್‌ಮೆಂಟಿನ ವಾರಂಟ್ ವಿಷಯು ವಿಜ್ಞಾದಿದ್ದರೆ ಈ ದುರ್ಘಟನೆಯೇ ನಡೆಯುತ್ತಿರಲಿಲ್ಲ. ಆಲ್ಲದೆ ಶ್ರೀ ನಾರಾಯಣರೆಡ್ಡಿಯವರಿಗೆ ಯಾವ ಪಿಧವಾದ ಫಲವು ದೊರೆಯುತೋ ಸನಗಂತೂ ಅರ್ಥವಾಗುವುದಿಲ್ಲ.

೨೨-೪-೪೦ ನೇ ದಿನ ಮಧ್ಯಾಹ್ನ ೨-೩೦ ಘಂಟೆ ಸಮಯದಲ್ಲಿ ಕಾರಿನ ಅಟ್ಯಾಚ್‌ಮೆಂಟ್ ವಿಷಯವು ಅಪ್ರೂವರ್ ಪೊನ್ನಾಬಲಿಯಗೆ ತಿಳಿಯಲು ಆತನು ಕಾರನ್ನು ದಂಡಿನಲ್ಲಿ ಬಿಟ್ಟು ತನ್ನ ಯಜಮಾನರಾದ ೧ನೇ ಆಪರಾಧಿಯ ಬಳಗೆ ಹಂತಿಯಿಗೆ ಹೋಗಿ ಅಟ್ಯಾಚ್ ಮೆಂಟ್ ವಿಷಯವನ್ನು ತಿಳಿಸಿದ ಮೇಲೆ ಅವರು ಕೋಪ ಗೊಂಡು ಅಪ್ರೂವರನನ್ನು ಅಟ್ಟಿಸಿಕಿ ಬಸ್ಸಿನಲ್ಲಿ ದಂಡಿಗೆ ಹಿಂತಿರುಗಿ ಶ್ರೀ ಮಿಸ್ರಿಯವರೆ ವ್ಯಾಗನ್ನನ್ನು ಪಡೆದು ಅಳುಗಳನ್ನೂ, ಅಪ್ರೂವರನನ್ನೂ ಕುಳ್ಳಿರಿಸಿಕೊಂಡು ನೆಗರಕ್ಕೆ ಬಂದು ಸಂಜ್ಯಕ ಕಾಲೇಜಿನ ಬಳಿ ಅಪ್ರೂವರ್ ೨, ೩ ಮತ್ತು ೪ನೆಯ ಆಪರಾಧಿಗಳನ್ನು ಇಳಿಸಿ ತಾವು ದೇಶೀಯ ವಿದ್ಯಾಶಾಲೆಯ ಮೈದಾನದಲ್ಲಿ ಕಾದಿದ್ದು ಶ್ರೀ ಕೃಷ್ಣಮೂರ್ತಿಯವರಿಗೆ ರಿಕ್ತಿ ಹೊಡಿಸಲು ಪ್ರಯತ್ನಿಸಿದರೆಂದೂ ಆ ಸಮಯಕ್ಕೆ ಅಲ್ಲಿಗೆ ಅಪ್ರೂವರ್ ೨, ೩, ಮತ್ತು ೪ನೇ ಆಪರಾಧಿಗಳು ಬಂದಿದ್ದರೆಂದೂ ತಿಳಿಸಿ ಬಂದಿದೆ. ಅಂತಹ ದೊಡ್ಡ ವ್ಯಾಗನ್ನನ್ನು ಶ್ರೀಕೃಷ್ಣ ಮೂರ್ತಿಯವರಿಗೆ ರಿಕ್ತಿ ಹೊಡಿಸುವುದೆಂದರೆ ಆವರನ್ನು ಕೊಲೆಮಾಡುವುದೇ ಆಪರಾಧಿಗಳ ಉದ್ದೇಶವಾಗಿತ್ತೆಂದು ನ್ಯಾಯಾಧೀಶರು ಅಭಿಪ್ರಾಯಪಟ್ಟಿರುವುದು ಸರಿಯಲ್ಲ.

"ಶ್ರೀ ಕೃಷ್ಣಮೂರ್ತಿಯವರನ್ನು ವ್ಯಾಗನ್ನಿನಲ್ಲಿ ಹಾಕಿಕೊಂಡು ಅಪಹರಿಸಿಕೊಂಡು ಹೋಗುವಾಗ ಅವರು ಕೂಗಿಕೊಳ್ಳುವುದನ್ನು ತಪ್ಪಿಸಲು ಅವರ ಬಾಯಿಮುಚ್ಚಿ ಆವರ ಕಾಲಿಗೆ ಹಗ್ಗಕಟ್ಟಿ, ಆವರ ಆಳ-ಗಳು ಕತ್ತಿಗೆ ಹಗ್ಗಕಟ್ಟಿ ಎಳೆದ ಪರಿಣಾಮವಾಗಿ ಕೊಲೆಯಾಹೋಯಿತು. ವ್ಯಾಗನ್ನಿನಲ್ಲಿ ಪಡೆದ ದೈನೊ ಶ್ರೀ ನಾರಾಯಣರೆಡ್ಡಿಯವರಿಗೆ ತಿಳಿಯದು. ಸ್ವಲ್ಪಮೂರ ಹೋದಮೇಲೆ ಆವರಿಗೆ ಶ್ರೀ ಕೃಷ್ಣಮೂರ್ತಿಯವರು ಗತಿಸಿರುವ ವಿಷಯ ತಿಳಿಯಿತು. ಆಗ ಆವರಿಗೆ ದಿಕ್ಕು ತೋಚದಂತಾಯಿತು. ಮುಂದೇನು ಮಾಡಬೇಕೆಂಬುದು ತಿಳಿಯದಾಯಿತು. ಶವವನ್ನು ವ್ಯಾಗನ್ನಿನಲ್ಲಿಟ್ಟುಕೊಂಡು ಕಣಿಂಗ್‌ಹ್ಯಾಂ ರಸ್ತೆಗೆಬಂದು, ಅಲ್ಲಿಂದ ಕೇಂಬ್ರಿಜ್, ಆರ್ ಬಿ. ಎ. ಎಂ. ಎಂ. ಶಾಲೆ ಇತ್ಯಕ್ಕಡೆಯೆಲ್ಲ ತಿರುಗಿದರು. ಯಾರೂಗೂ ತಿಳಿಯದಂತೆ ಕೋಣೇಸ ಅಗ್ರಹಾರದ ತೋಪಿನಲ್ಲಿ ಶವವನ್ನಿಟ್ಟು ತರುವಾಯ ಅದನ್ನು ಬೆಂಗಳೂರು-ದೊಡ್ಡಬಳ್ಳಾಪುರ ರಸ್ತೆಯಲ್ಲಿ ೧೦ ನೇ ಮೈಲಿಯ ಬಳ ಮತ್ತೊಂದು ತೋಪಿನ ಲ್ಲಿಟ್ಟು ಬೆಂಗಳೂರಿಗೆ ಹಿಂದಿರುಗಿ ಅಲ್ಲಿಂದ ಟ್ಯಾಕ್ಸಿಯನ್ನು ಅಪ್ರೂವರಿಗೆ ಕೊಟ್ಟು ಆತನು ೨ ಮತ್ತು ೩ ನೆ ಆಪರಾಧಿಗಳನ್ನು ಕರೆದುಕೊಂಡು ಹೋಗಿ ಶವವನ್ನು ಆ ಸ್ಥಳದಿಂದ ಸಾಗಿಸಿ ಘಾಟ್ ರಸ್ತೆಯ ಪಕ್ಕದಲ್ಲಿ ಬಿಸಾಡಿದ ರೆಂದು ವ್ಯಕ್ತಪಟ್ಟಿದೆ ೧ನೇ ಆಪರಾಧಿಗಳಿಗೆ ಕೆಲಿ ಮಾಡುವ ಉದ್ದೇಶವಿದ್ದರೆ ಶವವನ್ನು ವಿವಿಧ ಕಡೆಗಳಿಗೆ ತೆಗೆದುಕೊಂಡು ಎಲ್ಲೆಲ್ಲಿಯೋ ಇಟ್ಟು ರಸ್ತೆಯ ಪಕ್ಕದಲ್ಲಿ ಬಿಸಾಡುವನೆ? ಶವವನ್ನು ಮುಚ್ಚಿಡುವ ಅಲೋಚನೆ ಮಾಡುವುದಿಲ್ಲವೆ? ಈ ನಾನಾ ಘಟನೆಗಳಿಂದ ೧ನೇ ಆಪರಾಧಿಗೆ ಕೊಲೆಮಾಡುವ ಉದ್ದೇಶವಿತ್ತೆಂದು ನ್ಯಾಯಾಧೀಶರು ಅಭಿಪ್ರಾಯಪಟ್ಟಿರುವುದು ಸಂಯಾದು ದಲ್ಲ. ಶ್ರೀ ಕೃಷ್ಣಮೂರ್ತಿಯವರ ಕೊಲೆಯಾಗುವುದೆಂದು ಅವರು ಲೇವಲೂ ತಿಳಿದಿರಲಿಲ್ಲವೆಂಬುದು ಈ ಘಟನೆಗಳಿಂದ ವ್ಯಕ್ತಪಡುವುದಾಗಿದೆ."

"೧ನೇ ಆಪರಾಧಿಯು ನಗರದ ನ್ಯಾಯಾಧೀಶರ ಮುಂದೆ 'ಕಛಿಷರ' ಹೇಳಿಕೆಯತ್ತಿರುವರು. ಸಾಮಾನ್ಯವಾಗಿ ತಾನು ಪ್ರಕಾರ 'ಕಛಿಷರ' ಹೇಳಿಕೆಯನ್ನು ಪೂರ್ಣವಾಗಿ ನಂಬಬೇಕು. ಇಲ್ಲದಿದ್ದಲ್ಲಿ ಕೃಷಿಪಡೆಯಬೇಕು. ಆದರೆ ಸೆಷನ್ಸ್ ನ್ಯಾಯಾಧೀಶರು ಅಪ್ರೂವರನ ಸಾಕ್ಷ್ಯವನ್ನು ದೃಢಪಡಿಸುವಷ್ಟರ ಮಟ್ಟಿಗೆ 'ಕಛಿಷರ' ಹೇಳಿಕೆಯ ಅಂತವನ್ನು ತೆಗೆದುಕೊಂಡು ಇತರ ಅಂಶಗಳನ್ನು ಬಿಟ್ಟುಬಿಟ್ಟಿರುವರು ಈ ರೀತಿ ಮಾಡಿರುವುದು ಸರಿಯಲ್ಲ ೧ನೇ ಆಪರಾಧಿಯ ಮೇಲೆ ಹೊರಿಸಿರುವ ಆಪಾದನೆಗಳನ್ನು ಸ್ಥಿರಪಡಿಸಲು ಅಪ್ರೂವರನ ಸಾಕ್ಷ್ಯದ ಹೊರತು ಮತ್ತೇನೂ ಇಲ್ಲ. ಶ್ರೀ ನಾರಾಯಣರೆಡ್ಡಿಯವರ 'ಕಛಿಷರ' ಹೇಳಿಕೆಯಮೇಲೆ ಅವರಿಗೆ ಶಿಕ್ಷೆವಿಧಿಸಿದಂತಿದೆ. ಅಪ್ರೂವರನ ಸಾಕ್ಷ್ಯವನ್ನು ಗಮನಿಸದೆ ಶ್ರೀ ನಾರಾಯಣರೆಡ್ಡಿಯವರ 'ಕಛಿಷರ' ಹೇಳಿಕೆಯನ್ನೇ ಗಮನಿಸುವುದಾದರೆ ಅವರಿಗೆ ಕೊಲೆ ಮಾಡಲು ಅಲೋಚನೆಯೇ ಇರಲಿಲ್ಲವೆಂಬುದು" ವ್ಯಕ್ತಪಡುವುದು."

"ಶ್ರೀ ನಾರಾಯಣರೆಡ್ಡಿಯವರನ್ನು ೮-೩-೪೦ ನೇ ದಿನ ಬೆಳಗಿನ ಜಾವದಲ್ಲಿ ಬಂಧಿಸಲಾಯಿತು. ೯-೩-೪೦ ನೇ ಶಾ| ದಿನ ಅವರು ನಗರದ ನ್ಯಾಯಾಧೀಶರ ಮುಂದೆ ಒಂದು 'ಕಛಿಷರ' ಹೇಳಿಕೆಯತ್ತಿರುವರು. ಆ ಹೇಳಿಕೆಯನ್ನು ಅವರು ಕೊಡುವಾಗ ಮಧ್ಯದಲ್ಲಿ ನಗರದ ನ್ಯಾಯಾಧೀಶರು "ಆ ಅಳುಗಳು ಯಾರು?" ಎಂದು ಪ್ರಶ್ನಿಸಲು ಅವರು ಅಳುಗಳ ಹೆಸರುಗಳನ್ನು ಹೇಳಿದರು. ಅವರು ತಮ್ಮ ಹೇಳಿಕೆಯನ್ನು ಮುಂದುವರಿಸಲು ಮತ್ತೆ ನ್ಯಾಯಾಧೀಶರು "ಅಮೇಲೆ" "ಅಮೇಲೆ" ಎಂದು

ದಾಗಿ ಹೇಳಿ ಉತ್ತರಗಳನ್ನು ಸೂಚಿಸಿದುದರಿಂದ ಪ್ರಶ್ನೆಗಳನ್ನು ಕೇಳುವವರಿಗೆ ಮಾತ್ರ ಆಪರಾಧಿಗಳು ೧ ನೇ ಹೇಳಿಕೆಯು ತಮ್ಮಿಚ್ಛೆಯಿಂದ ಕೂಡಿದ ಹೇಳಿಕೆಯೆಂಬ ಅನಂತರ ಇತ್ತ ಹೇಳಿಕೆಯು ತಮ್ಮಿಚ್ಛೆಯಿಂದ ಕೂಡಿಲ್ಲದ ಹೇಳಿಕೆಯೆಂದೂ ನ್ಯಾಯಾಧೀಶರು ಭಾವಿಸಿರುವರು- ೧೯೫೬ ಆಪರಾಧಿಗಳು ೯-೩-೪೦ನೇ ತಾರೀಪಿನ ದಿನ ಯಾವ ಹೇಳಿಕೆಯನ್ನಿತ್ತರೋ ಅದನ್ನೇ ಸೆಷನ್ಸ್ ನ್ಯಾಯಾಸ್ಥಾನದಲ್ಲಿ ಸಮರ್ಥಿಸಿರುವರು. ಇವರಿಂದಲೇ ಅವರ ಮನೋವೈಕೃತ್ಯವು ಯಾವ ರೀತಿಯಿದೆಯೆಂಬುದು ವ್ಯಕ್ತಪಡುವುದಾಗಿದೆ. ಅವರು ಮೊದಲಿಂದಲೂ ಏಕ ರೀತಿಯಾದ ಅಭಿಪ್ರಾಯವನ್ನೇ ವ್ಯಕ್ತಪಡಿಸುತ್ತ ಬಂದಿರುವರು.

[ಈ ಸಂಬಂಧದಲ್ಲಿ ಶ್ರೀ ಸ್ಯೂಜೆಂಟ್ ಗ್ರಾಂಟರ ವಡ ೧೧ ನೆ ಆಪರಾಧಿಗಳು ಸೆಷನ್ಸ್ ನ್ಯಾಯಾಸ್ಥಾನದಲ್ಲಿ ಇತ್ತ ಹೇಳಿಕೆಯನ್ನು ಓದಿದರು]

ಶ್ರೀ. ನ್ಯಾ:—ಶ್ರೀ ಕೃಷ್ಣಮೂರ್ತಿಯವರನ್ನು ಕೊಲೆ ಮಾಡುವ ಉದ್ದೇಶವು ಶ್ರೀ ನಾರಾಯಣರೆಡ್ಡಿಯವರಿಗೆ ಇರಲಿಲ್ಲವೆಂದು ಹೇಳಿದಿ. ಅವರಿಗೆ ಜ್ಞಾಪಕೋದಿದೆ ಯೆಂದು ಆಳುಗಳು ಹೇಳಲು, ಅದು ನಿಜವೆ ? ಅವರಿಗೆ ಅಲ್ಪಸ್ವಲ್ಪ ಉಸಿರಾಡುತ್ತಿದೆಯೆ? ಎಂಬುದನ್ನು ತಿಳಿಯಲು ಶ್ರೀ ನಾರಾಯಣರೆಡ್ಡಿಯವರು ಪ್ರಯತ್ನಿಸಿದರೆ ?

ಶ್ರೀ ಗ್ರಾಂಟ್ :—ಶ್ರೀ ಕೃಷ್ಣಮೂರ್ತಿಯವರು ಸತ್ತುಹೋಗಿರುವ ವಿಷಯವು ಶ್ರೀ ರೆಡ್ಡಿಯವರಿಗೆ ತಿಳಿದೇ ಇರಲಿಲ್ಲ. ಅವರಿಗೆ ಈ ವಿಷಯ ತಿಳಿಸಿದವರು ಅವರ ಆಳುಗಳು. ಇದನ್ನು ಅವರು ಅರಿತಕೂಡಲೆ ಆಳುಗಳು ಈ ಕೃತ್ಯ ನಡೆಸಿದ್ದಕ್ಕೆ ಬಯ್ದರು. ಅವರ ಮರಣದ ಸುದ್ದಿಯು ಶ್ರೀ ರೆಡ್ಡಿಯವರ ತಲೆ ಕೆಡಿಸಿತು. ಮುಂದೇ ನೆಮಾಡಬೇಕೆಂಬುದು ತೋಚದೆ ಹೋಯಿತು. ಇಂತಹ ಪರಿಸ್ಥಿತಿಯಲ್ಲಿ ಶ್ರೀ ಕೃಷ್ಣಮೂರ್ತಿಯವರು ಸತ್ತರೇ ಅಥವಾ ಅಲ್ಪಸ್ವಲ್ಪ ಉಸಿರಾಡುತ್ತಿರುವರೇ ಎಂದು ನೋಡಲು ಅವರಿಗೆ ತೋಚಲಿಲ್ಲ"

ಶ್ರೀ ನ್ಯಾ :—ಅವರು ಕಾರಿನಿಂದ ಸಹ ಇಳಿಯಲಿಲ್ಲ ವಲ್ಲಾ ?

ಶ್ರೀ ಗ್ರಾಂಟ್ :—ಶ್ರೀ ಕೃಷ್ಣಮೂರ್ತಿಯವರು ಗತಿಸಿದ ಸುದ್ದಿಕೇಳಿ ಶ್ರೀ ನಾರಾಯಣರೆಡ್ಡಿಯವರು ಹುಚ್ಚರಂತಾದರು.

ಶ್ರೀ ಸ್ಯೂಜೆಂಟ್‌ರವರು ತಮ್ಮ ವಾದವನ್ನು ಮುಂದುವರಿಸಿ "ನ್ಯಾಯಾಧೀಶರು ಆಭಿಪ್ರಾಯಪಟ್ಟಿರುವಂತೆ ೨,೩, ಮತ್ತು ೪ನೇ ಆಪರಾಧಿಗಳು ಮಾಡಿರುವ ಕೃತ್ಯವು ೧ ನೆ ಆಪರಾಧಿಗಳಿಗೆ ತಿಳಿದಿದ್ದರೆ ಈ ಕೋರ್ಟಿನಲ್ಲಿ ಈಗಿರುವಂತೆ ೧ ನೆಯ ಆಪರಾಧಿಗಳನ್ನು ವಾದಿಸಲು ಅವಕಾಶವೇ ಇರುತ್ತಿರಲಿಲ್ಲ. ೧ ಮತ್ತು ೫ನೇ ಆಪರಾಧಿಗಳು ೨-೩-೪೦ ನೆ ತಾರೀಪಿನ ದಿನ ಭೇಟಿಮಾಡಿ ಮಾತನಾಡಿದ್ದು ಹೊರತು ಸೆಷನ್ಸ್‌ನ್ಯಾಯಾಧೀಶರು ನಂಬಿಲ್ಲ. ಅದಂತೆ ಅವರು ಅಪ್ರಾಮಾಣಿಕ ಸಾಕ್ಷ್ಯಕ್ಕೆ ಮಹತ್ವ ಕೊಡುವುದಿಲ್ಲವೆಂದು ಆರ್ಥವಾಗುವುದಿಲ್ಲವೆ ? ಇದರಿಂದಲೂ ಸಹ ೧ನೇ ಆಪರಾಧಿಗೆ ಕೊಲೆಸಚಿಯುವ ಉದ್ದೇಶ ವಿಲ್ಲವೆಂಬುದು ವ್ಯಕ್ತಪಡುವುದು ಅಪ್ರಾಮಾಣಿಕ ಪೋಲಿಸ್ ನಂತೆ ಶ್ರೀ ನಾರಾಯಣರೆಡ್ಡಿಯವರಿಗೆ ಕೊಲೆ ಉದ್ದೇಶ ವಿದ್ದರೆ ಅವರು ಆ ವಿಷಯವನ್ನು ೨,೩, ಮತ್ತು ೪ ನೆ ಆಪಾದಿಗಳಿಗೆ ಏಕೆ ಹೇಳಲಿಲ್ಲ ?"

ಇದು ಬಹಳ ವಿಚಾರಕರವಾದ ಮೊಖದ್ದಮೆ. ಪ್ರಸಿದ್ಧ ವಕೀಲರಾದ ಶ್ರೀ ಕೃಷ್ಣಮೂರ್ತಿಯವರು ಕೊಲೆಗೊಳಗಾದರು. ೨,೩, ಮತ್ತು ೪ ನೇ ಆಪರಾಧಿಗಳು ಶ್ರೀ ಕೃಷ್ಣಮೂರ್ತಿಯವರು ಕೂಗಿಕೊಳ್ಳದೆ ಅಲುಗಾಡದೆ ಶಾಂತಿಂತಿ ಇವರನ್ನು ಅಮಿಮಹಿದರು ತೋಟಿಗಿದ ಕಾರ್ಯತತ್ಪರತೆಯ ಪರಿಣಾಮವಾಗಿ ಶ್ರೀ ಕೃಷ್ಣಮೂರ್ತಿಯವರು ಗತಿಸಿದರು.

ಶ್ರೀ ಕೆ. ಎಂ. ನಾರಾಯಣರೆಡ್ಡಿಯವರು ಆಪಹಾರ ಮತ್ತು ಆವನ್ನು ಮುಚ್ಚಿಡುವ ಉದ್ದೇಶದಿಂದ ಕೂಡಿದ್ದರು. ಆವರು ಆ ಆಪರಾಧಕ್ಕೆ ತಪ್ಪಿತಸ್ಥರು. ಆವರಿಗೆ ಶ್ರೀ ಕೃಷ್ಣಮೂರ್ತಿಯವರನ್ನು ಕೊಲ್ಲುವ ಉದ್ದೇಶವೇ ಇರಲಿಲ್ಲ." ಎಂದು ನುಡಿದು ತಮ್ಮ ವಾದವನ್ನು ಮುಗಿಸಿದರು.

ಶ್ರೀ ಜಗದ್ಗುರು ದಾರುಕಾಚಾರ್ಯಾವತಂ:
ಇಂದ್ರಿಯ ಸಂಯಮ

ಲೇ—ಆರ್. ಎಂ. ಪಟ್ಟಿಶಾಜುಶಾಸಾಸ್ತ್ರಿ ಬಸವಾಪುರ

ಇಂದ್ರಿಯಗಳನ್ನು ನಿಗ್ರಹಿಸಿದೆ ಮಂಗಳವು ಕಂಗೊಳಿಸ ಸದು. ಮನುಷ್ಯನು ಯಾವ ವಿಷಯದಲ್ಲಿ ಚಿತ್ತಸ್ಥ ವನ್ನು ಪಡೆಯಬೇಕಾದರೂ ಪ್ರಥಮತಃ ಇಂದ್ರಿಯ ಗಳನ್ನು ಜಯಿಸಬೇಕು. ಸತ್ಪುರುಷರೆಂದು ಸಾರಿಸಿ ಕೊಳ್ಳುತ್ತಿರುವ ಮಹಪ್ರಿಯರೆಲ್ಲರೂ ಇಂದ್ರಿಯ ಗಳನ್ನು ನಿಗ್ರಹಿಸಿದವರೇ. ಪರಮಾರ್ಥ ಪದವಿಯನ್ನು ಪಡೆದ ಪೂರ್ವಜರೆಲ್ಲರೂ ಇಂದ್ರಿಯ ಸಂಯಮಿಗಳೇ. ಮುಖ್ಯವಾಗಿ ಇಂದ್ರಿಯಗಳನ್ನು ನಿಗ್ರಹಿಸದೆ ಮನುಷ್ಯನು ಅಪ್ರಯೋಜಕನಾಗುವನು. ಅಂತಹ ನರಕೀಟವು ಹುಟ್ಟುವದೂ, ಹುಟ್ಟದಿರುವದೂ ಎರಡೂ ಒಂದೆ.

ನೇತ್ರ, ಶ್ರೋತ್ರ, ತ್ವಕ್, ಘ್ರಾಣ, ಮನಸ್ಸು ಬುದ್ಧಿ ಮೊದಲಾದವುಗಳು ಶರೀರರಕ್ಷಣಾರ್ಥವಾಗಿ ಭಗವಂತ ನಿಂದ ಮನುಷ್ಯನಿಗೆ ಅನುಗ್ರಹಿಸಲ್ಪಟ್ಟಿರುವವು ಇವು ಸಂಸಾರದಲ್ಲಿ ಸನ್ಮಾರ್ಗ ಪ್ರದರ್ಶಕಗಳಾಗಿರುವವು. ಇವು ಗಳ ಮುಖೇನ ಹಿತಕರವಾದುದನ್ನೂ ಹೊಂದಿ ಅಹಿತಕರ ವಾದುದನ್ನೂ ಕೃಜಿಸಬೇಕು. ಅವಶ್ಯಯುಕ್ತ ಇಂದ್ರಿಯ ಗಳೇ ಜೀವಾತ್ಮನಿಗೆ ಸೈನಿಕರೆಂದು ಹೇಳಬಹುದು. ಸಮರ ಶೂರರಾದ ಸುಭಟರನ್ನು ಹೊಂದಿದ ರಾಜನು ಹೇಗೆ ಶೋಭಿಸುವನೋ, ದುರ್ಗಾಧ್ಯವಾದ ಅವನ ದುರ್ಗವೂ ಸಹ ಹೇಗೆ ಅನಾಯಕವಾಗುವದೋ ಹಾಗೆ ಇಂದ್ರಿಯ ಗಳಲ್ಲಿದ್ದಿದ್ದರೆ ಮನುಷ್ಯನು ಯಾವ ಕಾರ್ಯವನ್ನು ಮಾಡು ವುದಕ್ಕೂ ಅಸಮರ್ಥನಾಗುವನು. ಇದೂ ಅಲ್ಲದೆ ಅಂಧ-ವಿಕಲಾಂಗ-ಮಂದಮತಿ ಎಂಬ ಉಪನಾಮಗಳಿ ಲಿಂದ ಕರೆಯಲ್ಪಡುವವರು ಅದಕಾರಣ ಇಂದ್ರಿಯಗ ಗಳನ್ನು ನಿಗ್ರಹಿಸಿ ಆತ್ಮಸಂಯಮಿಗಳಾಗಬೇಕಾದುದನ ಕ್ಕಿಂತ.

ಸ್ವಾಸ್ಥ್ಯಸುಖವನ್ನು ಹೊಂದದ ಮಾನವನ ಜನ್ಮವು ಅಸಾರ್ಥಕವು. ಇಂದ್ರಿಯೋಪಭೋಗಗಳಲ್ಲಿ ಆಸಕ್ತನಾ ದವನು ಆತ್ಮವಿದ್ಯೆಗೆ ಆಪಾತ್ರನಾಗುವನು. ಬಗ್ಗಡವಾದ ನೀರಿನಲ್ಲಿ ರವಿಬಿಂಬವು ಕಾಣಲಾರದಂತೆ ವಿಷಯಾಸಕ್ತ ರಿಯಂದ ಕಲುಷಿತವಾದ ಚಿತ್ತವೃತ್ತಿಯುಳ್ಳವರಿಗೆ ಭಗವದ ನುಗ್ರಹವು ಉಂಟಾಗದು. ಮತ್ತಮಲ್ಲದೆ ಉತ್ತಮವಾದ ನರಜನ್ಮ ಮತ್ತು ತಕ್ಕ ಇಂದ್ರಿಯ ಶೌಲಭ್ಯಗಳನ್ನು ಪಡೆದಿದ್ದರೂ ಯಾರು ಆತ್ಮ ಸುಖವನ್ನು ತಿಳಿಯುವುದಿ ಲ್ಲವೋ ಅಂತಹವರು ಅತ್ಮಘಾತುಕರೆನಿಸುವರು. ಆದ ಕಾರಣವೇ ಏರೋಗಿಯಾದ ಕತ್ಪಜೀವಿಯು ರೋಗ ಯಾದ ಸಾಮ್ರಾಜ್ಯಾಧಿಪತಿಗಿಂತಲೂ ಸಾವಿರಪಾಲು ಮಿಗಿಲೆಂದು ಅನುಭವಜ್ಞರು ಹೇಳುವರು. ಆದರೆ ಸ್ವಾಸ್ಥ್ಯಸುಖವನ್ನು ಕಳೆದುಕೊಂಡು ನಾವು ರೋಗಗ್ರ ಸ್ತರಾಗುವುದಕ್ಕೆ ಕಾರಣವೇನೆಂದು ವಿಚಾರಮಾಡಿದರೆ ಸಂಯಮದ ನಿಯಮಗಳನ್ನು ಹಾವು ನಿತ್ಯವೂ ಆತಿಕ್ರಮಿ ಸುತ್ತಿರುವುದೇ ಕಾರಣವೆಂದು ಮನವರಿಕೆಯಾಗುವದು ಇದೂ ಅಲ್ಲದೆ ಸಂಯಮೋತ್ಸಾಗಳಿಗೆ ವಿರೋಧವಾಗಿ ನಡೆಯುವುದರಿಂದ ಸುಖವುಂಟಾಗದು ಎಂಬುದೇ ಪ್ರಕೃತಿಯ ಸೂಕ್ಷ್ಮ ಕಾನವು. ಆದಕಾರಣ ಮನುಷ್ಯರು ಸುಖೀವನವನ್ನಪೇಕ್ಷಿಸುವುದಾದರೆ ಇಂದ್ರಿಯ ಸಂಯ ಮದಲ್ಲಿ ಅಭಿವಿಷ್ಟನಾಗಬೇಕಾದುದಾವಶ್ಯಕವು.

" ಯುಕ್ತಿಯಿಂದ ಇಂದ್ರಿಯಗಳನ್ನು ವಶಪಡಿಸಿ ಕೊಂಡು, ಮನಸ್ಸನ್ನು ನಿಗ್ರಹಿಸಿದರೆ ಪುರುಷಾರ್ಥಜತು ಪ್ಪಯವು ಸಿದ್ಧಿಸುವದು. ಇದರಲ್ಲಿ ಸಂದೇಹವಿಲ್ಲ. ಇಂ ದ್ರಿಯಗಳನ್ನು ಸ್ವೇಚ್ಛೆಯಾಗಿ ಬಿಡುವುದರಿಂದ ದುಃಖ ವೂ ನಿರೋಧಿಸುವುದರಿಂದ ಸುಖವೂ ಲಭ್ಯವಾಗುವದು." ಎಂದು ಸ್ವಾಭಿನ ಸ್ವಪ್ರತಿಕಾರನಾದ ಮನುವು ಹೇಳಿರು ವನು. ಮುಖ್ಯತಃ ಇಂದ್ರಿಯಗಳನ್ನು ನಿಗ್ರಹಿಸದಿದ್ದರೆ ಯಾವ ಕಾರ್ಯವೂ ಸಿದ್ಧಿಸದು.

ಪ್ರತಿ ಇಂದ್ರಿಯವೂ ಆವರವರ ಕಾರ್ಯವನ್ನು ಆದು ಮಾಡದಿರಲೆಬೇಕೆಂದೇ ಇಂದ್ರಿಯಸಂಯಮನದ ತಾತ್ಪರ್ಯವಲ್ಲ. ಏಕೆಂದರೆ ಅದು ಕೇವಲ ಅಸಂಭವ, ಈಶ್ವರನ ಅಭಿಮತಕ್ಕೂ ವಿರೋಧ. ಸೃಷ್ಟಿಯ ವೈಚಿತ್ರ್ಯಗಳನ್ನೂ, ಕ್ಷಣಭಂಗುರತೆಯನ್ನೂ ನೋಡಿ, ಅವುಗಳಲ್ಲಿ ನಿರ್ವೇದ ಗೊಂಡು, ನಿತ್ಯಸುಖವನ್ನು ಹುಡುಕಲೆಂದು ಪರಿವಿಡಿನು ನಮಗೆ ನೇತ್ರಗಳನ್ನು ಅನುಗ್ರಹಿಸಿದುವನು. ಅಂತಹ ದಿವ್ಯನೇತ್ರಗಳನ್ನು ವಕ್ರಮಾರ್ಗದಿಂದ ಅಪವ್ಯಯ ಪರಿಚಿಸದೆ ಸತ್ಕಾರ್ಯಕ್ಕೆ ಭಂಗವನ್ನೆಂಟುಮಾಡಿದೆಂತಾ ಗುವುದು. ದಿವ್ಯಜ್ಞಾನಪ್ರಣಯಿಪರಾದ ವಿದ್ವೆಯೂ ಸಹ ಲೋಚನವಿಲ್ಲದೆ ಗೋಚರವಾಗದು. ಹೀಗೆಯೇ ಪ್ರತಿ ಇಂದ್ರಿಯವನ್ನೂ ಒಂದೊಂದು ಸದುದ್ದೇಶದಿಂದಲೇ ಪರನು ಹಿಸ್ಯಿಯಾದ ಪರಿಪನ್ನು ನಮಗೆ ದಯಪಾಲಿಸಿರುವನು ಆದಕಾರಣ ಪ್ರತಿ ಇಂದ್ರಿಯವೂ ಸದ್ವಿಷಯ ದಲ್ಲಿಯೇ ಸಂಸಕ್ತವಾಗುವಂತೆ ಸಾಧಿಸುವದೇ ಸಂಯ ಮದ ನಿಯಮವು

ಆದರೆ ಕ್ಷಣಿಕವಾದ ವಿಷಯಸುಖವನ್ನೇ ಸರ್ವದಾ ಅಪೇಕ್ಷಿಸುವ ಇಂದ್ರಿಯಗಳನ್ನು ನಿಗ್ರಹಿಸಿ, ಅವುಗಳು ಇಹಪರ ಸುಖಸಂಪಾದನೆಗೆ ಸಾಧನವಾದ ಮಾರ್ಗಗ ಳಲ್ಲೇ ಸಂಚರಿಸುವಹಾಗೆ ಮಾಡುವುದು ಹೇಗೆ ? ಮಹ ಮಹರ್ಷಿಗಳು ಇದಕ್ಕೋಸುಗವೇ ಪ್ರಾಣಾಯಾಮಾದಿ ಹಲವು ಉತ್ತಮವಾದ ಉಪಾಯಗಳನ್ನು ಕಂಡುಹಿಡಿ ದಿರುವರು. ಪ್ರಕೃತ ಅವುಗಳಲ್ಲಿ ಸಾಮಾನ್ಯವಾಗಿ ಸರ್ವ ರಿಗೂ ಸುಲಭವಾದುದು ಸತ್ಸಂಗವು. ಆದುದರಿಂದಲೇ ಶ್ರೀಮತ್ಪಂಕರಾಚಾರ್ಯರು " ಸತ್ಸಂಗತ್ವೇ ನಿಸ್ಸಂ ಗತ್ವಂ " ಎಂದು ಅಪ್ಪಣೆ ಕೊಡಿಸಿರುವರು. ಸತ್ಸಂಗ ದಲ್ಲಿರುವಷ್ಟು ಅನುಕೂಲವಾದ ಸೌಲಭ್ಯವು ಮತ್ತೊಂ ದರಲ್ಲಿಲ್ಲ. ವಿದ್ಯಾಭ್ಯಾಸಕ್ಕಾಗಿ ಪಾಠಶಾಲೆಗೆ ಹೋಗು ವಂತೆ ಪಾಮಾರ್ಥಿಕ ವಾದರ್ಶಿಕಾಲಾಭಾಗವಾದ ಸಜ್ಜನ ಗಳ ಸಮಾಜದಲ್ಲಿ ಸಂಚರಿಸುವಂತೆ, ಇಂದ್ರಿಯ ಸಂಯ ಮದ ಅಭ್ಯಾಸವನ್ನು ಎಡಬಿಡದೆ ಮಾಡುತ್ತಿರಬೇಕು. ಆದರೆ ಮೊದಮೊದಲು ಸಜ್ಜನಗಳನ್ನು ಮಾಡುವುದಕ್ಕೆ ಚಿತ್ತವು ತತ್ಪರಗೊಳ್ಳುವುದು. ಅವರೂ ಪ್ರಯತ್ನಿಸ್ಸರೂ ತರ್ಯಾದಿಂದ ಸಂಪಲಾಗುವರು.

ಇಂದ್ರಿಯಗಳನ್ನು ನಿಗ್ರಹಿಸದ ಮನುಷ್ಯನಿಂದ ದೇಶ ಕ್ಕಾಗಲಿ, ಸಮಾಜಕ್ಕಾಗಲಿ, ಯಾವ ವಿಧವಾದ ಪ್ರಯೋಜನವೂ ಆಗಲಾರದು. ಪ್ರಯೋಜನದ ಮಾತು ಹಾಗಿರಲಿ, ಅಂತಹವರಿಂದ ದೇಶಕ್ಕೆ ಹಾನಿಯಾಗುವದು ದ್ರೌಪದಿಯ ಸೀರೆಯು ಸೆಳೆಯಲ್ಪಡುತ್ತಿದ್ದಾಗ ದುರ್ಯೋ ಧನನು ಇಂದ್ರಿಯ ಸಂಯಮವನ್ನು ಪ್ರದರ್ಶಿಸಿದ್ದರೆ ಮಹಾಭಾರತದ ಘೋರವಾದ ಸಂಗ್ರಾಮವಾಗುವ ಸಂಭ ವವಿರುತ್ತಿರಲಿಲ್ಲ. " ಎಲ್ಲೆ, ನೋಡಣಾಂ ! ಬಾ, ನೆನ್ನೆ ತೊಡೆಯಮೇಲೆ ಕುಳಿತುಕೊ " ಎಂಬ ದುರ್ಯೋಧನನ ದುರ್ವಾಕ್ಯವೂ, " ಇವೇ ಕಣ್ಣೆದುರಿಗೆ ನಿನ್ನ ತೊಡೆ ಗಳನ್ನು ತರಿದುಹಾಕುವೆನು." ಎಂಬ ಭೀಮಸೇನನ ಪ್ರತಿಜ್ಞೆಯೂ ಭಾರತದ ಸಮರಾನಲದಲ್ಲಿ ಘೃತಾ ಹುತಿಯನ್ನು ಮಾಡಲಿಲ್ಲವೆ?

ಇಂದ್ರಿಯಗಳನ್ನು ವಶಪಡಿಸಿಕೊಳ್ಳುವುದಕ್ಕೆ ಮೊದ ಲೇ ಸತ್ಸಾಮಿಪೇಪಸನ್ನು ಧರಿಸಿ ಉಪದೇಶರೂಪಿ ಹೊರ ಹುವು ಕೇವಲ ಉದರಂಭರಿಗಳ ಕೆಲಸ ಯಾವುದು ತಾನು ಬೋಧಿಸುವ ತತ್ವವನ್ನು ತಾತ್ಪರ್ಯತ್ಕಿರಮಾಡಿ ಕೊಡಿರುವನೋ ಅಂತಹವನು ಇತರರಿಗೆ ಬೋಧಿಸಲು ಅಧಿಕಾರಿಯಾಗುವನು ನೀರಿನಲ್ಲಿ ಮುಳುಗಿದವನನ್ನು ಈಜುಬಲ್ಲವನು ರಕ್ಷಿಸಬಲ್ಲನೆ ವಿನಾ ಈಜು ಒರವವನು ರಕ್ಷಿಸಬಲ್ಲನೆ? ಆದಕಾರಣ ಪರರಿಗೆ ಉಪದೇಶಿಸುವುದಕ್ಕೆ ಮೊದಲು ಸ್ವಗೃಹದಲ್ಲಿ ಇಂದ್ರಿಯಸಂಯಮ ರೂಪವಾದ ಪಾಠಶಾಲೆಯನ್ನು ಪ್ರಾರಂಭಿಸಬೇಕು. ಸತ್ಸಂಗದಲ್ಲಿ ಸದಾ ಸನ್ನಿಚಾರವನ್ನು ಮಾಡುತ್ತ, ಮಹಾಪುರುಷರ ಜೀವನಚರಿತ್ರೆಗಳನ್ನು ದತ್ತಾವಧಾನದಿಂದೋದುತ್ತ, ಮನೋದಾರ್ಢ್ಯವನ್ನು ಪಡೆಯಬೇಕು. ಇಂದ್ರಿಯನಿಯಂ ಮವು ಬಾಲಸ್ಯವೃದ್ಧವನಿತಾದಿ ಸಕಲರಿಂದಲೂ ಸಂಪಾ ದಿಸಲ್ಪಡಬೇಕಾದ ಸುಯೋಗವಾದ ಸಂಪತ್ತು ಯಾವ ಜನಾಂಗದಲ್ಲಿ ಸಂಯಮಿಗಳ ಸಂಖ್ಯೆಯು ಹೆಚ್ಚಾಗಿರು ವುದೋ ಆ ಜನಾಂಗವು ಉನ್ನತಿಯ ಶಿಖರವನ್ನೇರು ವದು.

ವಿಕಾರಾಧೀನರಾದವರು ವನವಲ್ಲಾದರೂ ಆರಿವರ್ಗ ವಿಂದಭಿಭೂತರಾಗುವರು. ಆದಕಾರಣ ಸ್ವಸ್ಥಚಿತ್ತರೇ ಇದ್ದು ಪಂಚೇಂದ್ರಿಯಗಳನ್ನು ನಿಗ್ರಹಿಸುವದು ಶಕಸ್ಸಿಗೆ ಸಮಾನವಾದುದು. ಯಾರು ಸತ್ಕರ್ಮಗಳಲ್ಲಿ ಪ್ರವೃತ್ತ ರಾಗಿರುವರೋ ಯಾರು ವಿಷಯಾನುರಾಗಗಳಿಂದ ವಿಮು ಖರಾಗುವರೋ ಅಂತಹವರ ಗೃಹವೇ ತಪೋವನವು.

[೬ ನೆಯ ಪುಟವನ್ನು ನೋಡಿ.]

ಪಂಚಾಚಾರ್ಯಪ್ರಭಾ.

೧೯೪೦ ನೆಯ ನವೆಂಬರ್ ತಾ| ೨೫ನೇ ಸೋಮವಾರ

ಶ್ರೀ ಚಂದ್ರಮೌಲೀಶ್ವರ ಲಿಂಗಾನುಗ್ರಹ

ಶ್ರೀಶಂಕರಾಚಾರ್ಯರು ಈಗ್ಗೆ ೨ ಸಾವಿರ ವರ್ಷಗಳ ಪೂರ್ವದಲ್ಲಿ ಆನತರಿಸಿ, ಬೌದ್ಧಾದಿಗಳ ಉಪದ್ರವವನ್ನು ನಾಶಮಾಡಿ ೨ ಸಹಸ್ರವೈದಿಕಧರ್ಮವನ್ನು ಸ್ಥಾಪಿಸಿದರೆಂಬ ವಿಷಯವು ಸು ಸಿದ್ಧವಷ್ಟೆ! ಈ ಮಹಪೀಠವು ಪರಮೇಶ್ವರನನ್ನು ಶಾಶ್ವತವಾಗಿ ಸಿಕೊಳ್ಳಬೇಕಂಬ ಉದ್ದೇಶದಿಂದ ದಕ್ಷಿಣದೇಶದಲ್ಲಿ ವಿರಾಜಿಸುತ್ತಿರುವ ಶ್ರೀಶೈಲ ಕ್ಷೇತ್ರದಲ್ಲಿ ತಪಸ್ಸನ್ನಾರಂಭಿಸಿದರು. ಪರಮೇಶ್ವರನು ಉಗ್ರವಾದ ಇವರ ತಪಸ್ಸಿಗೆ ಮೆಚ್ಚಿ ಎಳ್ಳಿ, ಶಂಕರಾಚಾರ್ಯನೇ! ನಿನ್ನ ತಪಸ್ಸಿಗೆ ಮಚ್ಚಿರುವನು, ಮಲಯಾಚಲದಲ್ಲಿ ವಾಸವಾಗಿರುವ ಶ್ರೀರೇಣು ಕಾಚಾರ್ಯನೆಂಬ ಆಚಾರ್ಯನ ಹತ್ತಿರ ಚಂದ್ರಮೌಲೀಶ್ವರನೆಂಬ ಹೆಸರಿನ ಶಿವಲಿಂಗವಿರುವುದು ನೀನು ಆ ಶಿವಲಿಂಗವನ್ನು ಆ ಆಚಾರ್ಯನಿಂದ ಪಡೆದು ಪೂಜಿಸಿ, ಅಗ್ಗೆ ನಿನ್ನ ಮನೋಭೀಷ್ಟವು ಸಿದ್ಧಿಸುವುದು" ಎಂದು ಅಶರೀರವಾಣಿಯಿಂದ ಸೂಚಿಸಲು, ಶ್ರೀಶಂಕರಾಚಾರ್ಯರು ಈ ಶಿವಮಾಣಿಯನ್ನು ಕರೆಯಿಸಿ ಆನಂದತುಂದಿಲಹೃದಯರಾಗಿ ಕೂಡಲೆ ಮಲಯಾಚಲಕ್ಕೆ ಹೋಗಿ, ಅಲ್ಲಿದ್ದ ಶ್ರೀರೇಣುಕಾಚಾರ್ಯರನ್ನು ಸಂದರ್ಶಿಸಿ, ಅವರ ಅನುಗ್ರಹದಿಂದ ಶ್ರೀಚಂದ್ರಮೌಲೀಶ್ವರಲಿಂಗವನ್ನು ಪಡೆದು ಆ ಲಿಂಗವನ್ನು ಪೂಜಿಸಿ ಶಿವನಾತ್ಮಾತ್ಮಾರವನ್ನು ಹೊಂದಿದರು ಇಂದಿನವರೆಗೂ ಶ್ರೀಶಂಕರಾಚಾರ್ಯರ ಪೀಠದಲ್ಲಿ ಶ್ರೀರೇಣುಕಾಚಾರ್ಯರಿಂದ ಅನುಗ್ರಹಿತವಾದ ಶ್ರೀಚಂದ್ರಮೌಲೀಶ್ವರಲಿಂಗಪೂಜೆಯೇ ಮುಖ್ಯವಾಗಿ ನೆರವೇರುತ್ತಿರುವುದು. ಈ ದಿವ್ಯಲಿಂಗವು ರಂಕಾಚಾರ್ಯರಿಗೆ ಶ್ರೀರೇಣುಕಾಚಾರ್ಯರಿಂದ ಪ್ರಾಪ್ತವಾಯಿತೆಂಬ ಎಷಯವನ್ನು "ರೇಣುಕಮಿಜಯ-ವಿಜಿತತ್ವೋತ್ಸಾಕರ ನೇದಾಂತ ಸಾರವಿಸರ್ಪ್ಪವಚೀತಾಮಣಿ ವಿಜಾಮಹಸಿಂಹ ವಿದ್ಯಾರಣ್ಯಕೃತ" ನೊದಲಾದ ಅನೇಕಗ್ರಂಥಗಳು ಪ್ರತಿಪಾದಿಸುತ್ತಿರುವವು ಅಖಿಲ ಪೂರ್ವಕಾಲದಲ್ಲಿ ಶೃಂಗೇರಿವಿಸರಾಧಿಷ್ಠಿತಗಿರ್ಯ ತಪ್ಪಿಸೀರೆಗಿರ ಪರಾಚರಪರನ್ನ ಕುರಿತ ಬರೆಯಿಸಿರುವ "ಗುರುಪರಂಪರೆ"ಎಂಬ ಗ್ರಂಥದಲ್ಲಿಯೂ ಈ ವಿಷಯವು ಸ್ಪಷ್ಟವಾಗಿ ಪ್ರತಿಪಾದಿಸಲ್ಪಟ್ಟಿರುವುದು ಶ್ರೀರ ಕರಾಚಾರ್ಯ ಶೃಂಗೇರಿಯ ಪದ ಕಾಂಚೀ ಕ್ಷೇತ್ರಕ್ಕೆ ಹೊರಡುವ ಸಮಯದಲ್ಲಿ—

ಶ್ರೀಚಂದ್ರಮೌಲೀಶ್ವರಲಿಂಗ ಮಸ್ಮಿ
ನ್ಪಶ್ಚಾತ್ಸಗಚ್ಛಂ ಗಮನಾಯ ಕಾಂಚೀಂ ।
ಸ ನಿಶ್ಚಿತೋಽಯಂ ಸುಸಿದ್ಧದತ್ತಂ
ವೀತ್ಯಾತ್ಮಗಾಮಿಚ್ಛಸಿ ಕಿಮಿತ್ಯಜೀಗಃ ॥೩೭॥

(ಗುರುಪರಂಪರಾಸ್ತ. ಸರ್ಗ. ೩)

ಶ್ರೀರೇವಣಸಿದ್ಧಮಹಾಯೋಗಿಯಿಂದ ತಮಗೆ ಪ್ರಾಪ್ತವಾಗಿದ್ದ "ಚಂದ್ರಮೌಲೀಶ್ವರಲಿಂಗ ಮತ್ತು ರತ್ನಗರ್ಭಗಣಪತಿ" ಎಂಬ ದೇವಮೂರ್ತಿಗಳನ್ನು ತನ್ನ ಪ್ರಥಮ ಶಿಷ್ಯರಾದ ಸುರೇಶ್ವರಾಚಾರ್ಯರಿಗೆ ಅನುಗ್ರಹಿಸಿ, "ಎಲೈ ಸುರೇಶ್ವರಾಚಾರ್ಯನೇ! ನೀನು ಯಾವಾಗಲೂ ಈ ಮೂರ್ತಿಗಳನ್ನು ಪೂಜಿಸುತ್ತಿರು" ಎಂದು ಅಜ್ಞೆ ಮಾಡಿದರು.

ಈ ಶ್ಲೋಕದಲ್ಲಿರುವ "ಸುಸಿದ್ಧದತ್ತಂ" ಎಂಬ ಪದಕ್ಕೆ "ಸುಸಿದ್ಧೇನ ರೇವಣಸಿದ್ಧಮಹಾಯೋಗಿನಾ ದತ್ತಂ ಶ್ರೀಚಂದ್ರಮೌಲೀಶ್ವರಲಿಂಗಂ" ಎಂದು ಈ ಕಾವ್ಯವನ್ನು ರಚಿಸಿದ ಕವಿಗಳೇ ವ್ಯಾಖ್ಯಾನವನ್ನು ಬರೆದು ರೇಣುಕಾಚಾರ್ಯರ ನಾಮವನ್ನು ಸ್ಪಷ್ಟಪಡಿಸಿದ್ದಾರೆ.

ತಚ್ಚ: ಸ ರೇವಣಸಿದ್ಧಸಂಜ್ಞಯಾ ಪ್ರಸಿದ್ಧಿಮಾಪನ್ನ ।
ಲಂಕಾಧಿಪತ್ಯ ಕರ್ಮಣ್ಯಾ ಸಾರಂಕಾರ್ಯಸ್ಯ ಮಾಗಣಃ ॥
ಸನ್ಯಾಸಿತಮಮಾಶ್ರಿತ್ಯ ವಿಸಯಾನನಿತೀಕ್ಷಿಣಃ ।
ವೃತ್ತಾಂತಮಮಲಂ ತಸ್ಮೈ ಯತಮೇಶ್ವ ಕೃತಜ್ಞತಜ್ಞ ಶಕ್ರ ॥

ಸೇವನಾಸಿದ್ಧಸಂಪ್ರಾಪ್ತಂ ಚಂದ್ರಮೌಲೀಶ್ವರಾಭಿಧಂ ।
ಅಮ್ಮಿಚ್ಛಾನೇನ ಲಿಂಗೇನ ಕಾಮಧೇಷ್ಟಾಪ್ಪಿಪಿರಿಷ್ಯತಿ ॥

(ಶಿವತತ್ತ್ವರತ್ನಾಕರ. ೪—೧೨)

ಶಂಕರಾಚಾರ್ಯಸನ್ಮಾಮಯೋಗೀಂದ್ರಾಯ ನಮೋಜ್ಜ್ವಲಂ ।
ಚಂದ್ರಮೌಲೀಶ್ವರಂ ಲಿಂಗಂ ದತ್ತವಾನಿತಿ ವಿಸ್ತುತಃ ॥
ಶ್ರೀರೇಣುಕಾಚಾರ್ಯೇಭ್ಯಂ ರೇವಣಸಿದ್ಧ ವೇಷಿಕಂ ।
ವೀರೈಕವೀರಾಚಾರ್ಯಂ ವಂದೇಽಮಿತಂ ತಂ ಜಗದ್ಗುರುಂ ॥

(ವೇದಾಂತಸಾರವಿಸರ್ಪಿಣೀಚಾಮಣಿ)

ಭಕ್ತ್ಯಾಽಸ್ಮೈ ಸಂತೋಷಿತಮಾಶಕೋಸ್ಯ
ನುತ್ತರ್ಕಾಕರೇಣ ಯತಿರಾಜಮಜೀಜನೇನ ।
ಶ್ರೀರೇಣುಕಾಚಾರ್ಯ-ವಿಸ್ತರಾಪೀಠಂ
ಲಿಂಗಂ ಮಂತ್ರಾದಿಸಿದ್ಧಿಲಿಲಾರ್ಥದಾನಂ ॥

(ರೇಣುಕವಿಜಯ ೪-೨೬)

ಇವೇ ರೀತಿಯಾಗಿ ಉಕ್ತೇಕಗ್ರಂಥಗಳಲ್ಲಿ ಚಂದ್ರಮೌಲೀಶ್ವರಲಿಂಗವು ಶ್ರೀರೇಣುಕಾಚಾರ್ಯರಿಂದ ಶ್ರೀಶಂಕರಾಚಾರ್ಯರಿಗೆ ಜಸ ಗ್ರಹಿಸಲ್ಪಟ್ಟಿರುವೆಂಬ ವಿಷಯವು ಉಕ್ತವಾಗಿರುವುದು

ಇಂಡಿಯಾ ಗವರ್ನಮೆಂಟಿನ ಪ್ರಾಚೀನ ಶಾಸನ ಶೋಧಕರಾದ ರಾವಬಹದ್ದೂರ್ ಎಚ್ ಕೃಷ್ಣಶಾಸ್ತ್ರಿಯರ್, ಎಂಎಸರು ವಿನತಶ್ಚ್ರೀರತ್ನಿಕರವೆಂಬ ಗ್ರಂಥದಲ್ಲಿ ಬರೆದಿರುವ ವಿಷಯವಯಲ್ಲಿ—

One very interesting point which must be particularly drawn attention to in the story of Vidyaranya as given in the 12th Tarunga of the 4th Kallola is the existence of the Sankaracharya line that initiated one Vidyaranya were then practising at Sringeri. The Jagadguru Vidya which is still worshipped as the chief deity by the Acharyas of Sringeri is also said to have been presented to Vidyaranya by his diver guru Vidyatirtha we know, is a well known Saiva teacher whom the Veerasavas still claim as one of the earliest Acharyas. The Keladi chiefs who were mostly followers of the Veerasiva religion were devout adherents of the Sringeri Sankaracharyas and perhaps also for the same reason viz that the Shankaracharyas were followers of the Renukacharya Sampradaya. This explains perhaps why in the Ashtagrama of Sringeri there is still a greater bias towards Saivism and Saiva worship than towards Vaishnavism and Krishna worship, though the founder the great Shankaracharya was no respector of creeds nor of any distinction between Siva and Vishnu."

"ಅಂದರೆ ಈ ಗ್ರಂಥದ 4ನೆಯ ಕಲ್ಲೋಲದ 12 ನೆಯ ತರಂಗದಲ್ಲಿರುವ ವಿದ್ಯಾರಣ್ಯರ ಚರಿತ್ರೆಯಲ್ಲಿ, ವಿದ್ಯಾರಣ್ಯರಿಗೆ ಸನ್ಯಾಸವನ್ನಿತ್ತ ಶಂಕರಾಚಾರ್ಯರ ಪೀಠಾಧಿಪತಿಗಳಾಗಿದ್ದ ಆಚಾರ್ಯರು ರೇವಣಸಿದ್ಧಸಂಪ್ರದಾಯವನ್ನು ಅನುಸರಿಸುತ್ತಿದ್ದರೆಂಬ ವಿಷಯವು ಸರ್ವರಿಂದಲೂ ಅತ್ಯಾವಶ್ಯಕವಾಗಿ ನೋಡಲ್ಪಡತಕ್ಕದ್ದಾಗಿದೆ ಶೃಂಗೇರಿ ಮಠದಲ್ಲಿ ಇಂದಿನವರೆಗೂ ಒ ಪೀಠದ ಆಚಾರ್ಯರಿಂದ ಮುಖ್ಯೋತ್ಸಾಸ್ಯದೇವರಾಗಿ ಪೂಜಿಸಲ್ಪಡುತ್ತಿರುವ ಶ್ರೀ ಚಂದ್ರಮೌಲೀಶ್ವರಲಿಂಗವು ವಿದ್ಯಾರಣ್ಯರಿಗೆ ಆಪರ ಗುರು ಗಳಿಂದ ಕೊಡಲ್ಪಟ್ಟಿತೆಂದು ಹೇಳಿದೆ ಶ್ರೀರೇವಣಸಿದ್ಧರು ಪ್ರಸಿದ್ಧರಾದ ವೈವಸಿದ್ಧಾಂತಸ್ಥಾಪಕರಾಗಿದ್ದಾರೆ. ಆವರನ್ನು ವೀರಶೈವರು ತಮ್ಮ ಮತದ ಅತ್ಯಂತಪ್ರಾಚೀನಾಚಾರ್ಯರೆಲ್ಲೊಬ್ಬರನ್ನಾಗಿ ಹೇಳುತ್ತಾರೆ. ಶಂಕರಾಚಾರ್ಯರು ರೇವಣಸಿದ್ಧಸಂಪ್ರದಾಯಕ್ಕೆ ಸೇರಿದವರಾದುದುರಿಂದಲೇ ವಿರಶೈವಮತಾಭಿಮಾನಿಗಳಾದ ಕೆಳದಿಅರಸರು ಶೃಂಗೇರಿ ಶಂಕರಾಚಾರ್ಯರ ಮಠಕ್ಕೆ ಭಕ್ತಿಪೂರ್ವಕವಾಗಿ ನಡೆದುಕೊಳ್ಳುತ್ತಿದ್ದರು. ಶಂಕರಾಚಾರ್ಯರು ಶಿವವಿಷ್ಣುದೇವತೆಗಳಲ್ಲಿ ಭೇದವನ್ನೆಣಿಸದೆ ದೈರು, ಇಂದಿಗೂ ಸಹ ಅದ್ವೈತಮತಕ್ಕೆ ಸೇರಿದ ಆ ಮಠದಲ್ಲಿ ವೈಷ್ಣವಮತ, ಕೃಷ್ಣಪೂಜೆ ಇವುಗಳಿಂತ, ವೈಷ್ಣವಮತ, ಶಿವಲಿಂಗಪೂಜೆ ಇವುಗಳಿಗೇ ಹೆಚ್ಚು ಅಧಿಕ್ಯ ವಿರುವರು ಈ ಕಾರಣದಿಂದಲೇ ಎಂದು ಕೆಂಪುಬಣ್ಣ ತ್ತದೆ.' ಈ ರೀತಿಯಾಗಿ ಬರೆದು ತಮ್ಮ ಅಭಿಪ್ರಾಯವನ್ನು ಸ್ಪಷ್ಟಪಡಿಸಿದ್ದಾರೆ. ಇದೇ ರೀತಿಯಾಗಿ ಚಂದ್ರಮೌಲೀಶ್ವರಲಿಂಗವನ್ನು ಶ್ರೀರೇಣುಕಾಚಾರ್ಯರಿಂದ ಆನುಗ್ರಹಿಸಲ್ಪಟ್ಟಿತೆಂದು ಅನೇಕಗ್ರಂಥಗಳಲ್ಲಿ ಉಕ್ತವಾಗಿದೆ.

ಒಳದೇಶದ ವೃತ್ತಾಂತಗಳು

ಕಳೆದ ೧೭ ನೆಯ ತಾರೀಖಿನ ದಿವಸ ರಾತ್ರಿ ಬೆಂಗಳೂರು ದಂಡಿನಬಳಿ ಹೊಸೂರು ರಸ್ತೆಯಲ್ಲಿ ಮಿಲಿಟರಿ ಲಾರಿಯೊಂದು ಮರಕ್ಕೆ ಡಿಕ್ಕಿಹೊಡೆದ ಪರಿಣಾಮವಾಗಿ ನಾಲ್ಕು ಜನ ಸೈನಿಕರು ಮೃತರಾದರು. ಲಾರಿಯಲ್ಲಿದ್ದ ೮ ಜನ ಸೈನಿಕರಿಗೆ ತೀವ್ರ ಗಾಯಗಳಾದವ್ವ. ಲಾರಿಯು ಮುರಿದು ಜೂರಾಯಿತು.

ಬೆಂಗಳೂರು ಮಹಾರಾಣಿ ಕಾಲೇಜಿನ ಪ್ರಿನ್ಸಿಪಾಲರಾದ ಮಿಸ್. ಓವರ್‌ಕರ್ಕ್ ಎಂಬಾಕೆಯನ್ನು ಕೆಲವು ರಾಜಕೀಯ ಕಾರಣಗಳಿಗಾಗಿ ಅಧಿಕಾರದಿಂದ ತಪ್ಪಿಸಿ ಬಂಧಿಸಿರುತ್ತಾರೆ. ಅವರನ್ನು ಇಷ್ಟರಲ್ಲೇ ಅಹಮದ ನಗರಕ್ಕೆ ಕಳುಹಿಸಲಾಗುವವೆಂದು ತಿಳಿದುಬರುತ್ತದೆ. ಅವರ ಸ್ಥಾನಕ್ಕೆ ಆರ್ಧಶಾಸ್ತ್ರ ಪ್ರೊಫೆಸರಾದ ಡಾ|| ಜಾಲ ಕೃಷ್ಣಯ್ಯರವರನ್ನು ಪ್ರಿನ್ಸಿಪಾಲರನ್ನಾಗಿ ನೇಮಿಸಿರುವರೆಂದು ತಿಳಿದುಬರುತ್ತದೆ.

ಕಳೆದ 17 ನೆಯ ತಾರೀಖು ಭಾನುವಾರ ರಾತ್ರಿ ಬೆಂಗಳೂರಿನಿಂದ ಮೈಸೂರಿಗೆ ಹೊರಟ ಗುಜ್ಜಗಾಡಿಯು ಮೈಸೂರಿಗೆ ಸುಮಾರು 4 ಮೈಲು ದೂರದಲ್ಲಿ ನಾಗೇನಹಳ್ಳಿಯ ಬಳಿ ಕಂಬಿ ತಪ್ಪಿ ಹೊರಳಿತು. ಈಗ ಕೆಲವು ದಿವಸಗಳಿಂದ ವಿಪರೀತ ಮಳೆ ಬಿದ್ದುದರಿಂದ ಈ ಘಟನೆ ಯೊದಗಿತೆಂದು ಹೇಳಲಾಗಿದೆ. ಸಾಮಾನು ತುಂಬಿದ್ದ ೨ ವ್ಯಾಗನ್ನುಗಳು ಕಂಬಿ ತಪ್ಪಿ 4 ವ್ಯಾಗನ್ನುಗಳು ಮೊಗಚಿಕೊಂಡಿವೆ. ಆದರೆ ಯಾರಿಗೂ ಅಪಾಯವಾಗಿಲ್ಲ.

ಬೆಂಳೂನಲ್ಲಿ ನಡೆದ ವಕೀಲ ಮಿ|| ಮೋಕ್ಷಗುಂಡಂ ಕೃಷ್ಣಮೂರ್ತಿಯವರ ಕೊಲೆ ಮೊಕದ್ದಮೆಯಲ್ಲಿ ಅಲ್ಲಿಯ ಸೆಷನ್ಸ್ ನ್ಯಾಯಾಧೀಶರು ನಾರಾಯಣರೆಡ್ಡಿ, ಮುನಿಗ ರಾಮು ಎಂಬ ಮೂವರನ್ನು ಮರಣ ದಂಡನೆಗೆ ಗುರಿಪಡಿಸಿ ಮಿ|| ಎಸ್. ಕೆ. ವೆಂಕಟೆರಂಗಯ್ಯಂಗಾರ್, ಮದ್ದೂರ ಇವರನ್ನು ಬಿಡುಗಡೆಮಾಡಿದರು. ಆದರೆ ಮೇಲೆ ನಾರಾಯಣರೆಡ್ಡಿ, ಮುನಿಗ ಮತ್ತು ರಾಮು ಇವರುಗಳು ಹೈಕೋರ್ಟಿನಲ್ಲಿ ಅಪೀಲ್ ಮಾಡಿಕೊಂಡಿದ್ದರು. ಸರ್ಕಾರದವರು ಮಿ|| ರಾ|| ವೆಂಕಟೆರಂಗಯ್ಯಂಗಾರ್ ಮತ್ತು ಮದ್ದೂರ ಇವರನ್ನು ಸೆಷನ್ಸ್ ನ್ಯಾಯಾಧೀಶರು ಬಿಡುಗಡೆಮಾಡಿದ್ದು ಸರಿಯಲ್ಲವೆಂದು ಹೈಕೋರ್ಟಿಗೆ ಅಪೀಲು ಮಾಡಿಕೊಂಡ್ದಿದ್ದರು. ಆ ಅಪೀಲುಗಳ ವಿಚಾರಣೆ ಮಾಡಿ ಮುಖ್ಯ ನ್ಯಾಯಾಧೀಶರು ಮತ್ತು ವಕೀಲರುಗಳ ವಾದವಿವಾದಗಳು ಕಳೆದ 18 ನೆಯ ತಾರೀಖಿನಿಂದ ನಡೆದವು ನಾರಾಯಣರೆಡ್ಡಿಯವರ ಪರವಾಗಿ ಬಿ|| ನ್ಯಮೂರ್ತಿಗುಂಟೂರಾವ್ ಮಿ|| ವೆಂಕಟೆರಂಗಯ್ಯಂಗಾರ್ಯರವರ ಪರವಾಗಿ ಮಿ|| ವಿ. ವಿ. ಶ್ರೀನಿವಾಸಯ್ಯಂಗಾರ್ಯರೂ ವಾದಿಸಲು ಮದರಾಸಿನಿಂದ ಬಂದಿದ್ದರು ಸರ್ಕಾರದ ಪರವಾಗಿ ಪಬ್ಲಿಕ್ ಪ್ರಾಸಿಕ್ಯೂಟರ್ ಮಿ|| ರಾ|| ಕೆ ರಾಮಸ್ವಾಮಿಯವರು ವಾದಿಸಿದರು. ಶ್ರೀಹೈಕೋರ್ಟಿನ ನ್ಯಾಯಾಧೀಶರು ಎರಡು ಅಪೀಲುಗಳನ್ನೂ ವಜಾಮಾಡಿ ನಾರಾಯಣರೆಡ್ಡಿ, ಮುನಿಗ, ರಾಮು ಇವರುಗಳಿಗೆ ಮರಣ ದಂಡನೆಯನ್ನು ವಿಧಿಸಿದರು. ೪ ಮತ್ತು ೫ ನೇ ಆ ರಾಧಿಗಳಾದ ಮದ್ದೂರ ಮತ್ತು ಶ್ರೀ ಎಸ್. ಕೆ. ವೆಂಕಟೆರಂಗಯ್ಯಂಗಾರ್ಯರನ್ನು ಬಿಡುಗಡೆಮಾಡಿದರು.

ಯುದ್ಧವಾರ್ತೆ.

ಇಟಲಿ ಸೈನಿಕರು ಶರಣಾಗತರಾದರು

ಇಟಲಿಯ ಆಡೆ 600 ಮಂದಿ ಸೈನಿಕರು 130 ಕಪ್ಪ ಬಂಡಿಗಳು ಮತ್ತು ಯುದ್ಧಸಾಮಗ್ರಿಗಳಸಹಿತ ಯುದ್ಧ ರಂಗವನ್ನು ತ್ಯಜಿಸಿ ಯುಗೊಸ್ಲೇವಿಯ ಗಡಿಯನ್ನು ದಾಟಿ ಯುಗೊಸ್ಲೇವಿಯ ಸೈನಿಕರಿಗೆ ಶರಣಾಗತರಾದರೆಂದು ತಿಳಿದುಬರುತ್ತದೆ.

ಇಟಲಿ ಸೈನಿಕರು ಓಡಿಹೋಗ ಹತ್ತಿದ್ದಾರೆ

ಗ್ರೀಸನ್ನು ನುಂಗಬೇಕೆಂದು ಆರ್ಭಟಿಸಿದ ಬಂದ ಇಟಲಿ ಸೈನಿಕರು ಗ್ರೀಕರ ಹೊಡೆತವನ್ನು ತಾಳಲಾರದೆ ಗ್ರೀಸಿನಿಂದ ಓಡಿಹೋಗಹತ್ತಿದ್ದಾರೆ. ಈಗ ಗ್ರೀಸ್ ದೇಶದಲ್ಲಿ ಒಟ್ಟು ಇಟಲಿಯೆನಿಕರೂ ಇಲ್ಲ. ಕೊಟ್ಟ ಸುತ್ತಮುತ್ತ ನಡೆದ ಯುದ್ಧದಲ್ಲಿ ಗ್ರೀಕರು ಇಟಲಿಯ ಒಂದು ಸೈನ್ಯಪಡೆಯನ್ನು ಸೆರೆಹಿಡಿದರು. ಇದರಿಂದ ಆಪಾಮ್ಯ ಯುದ್ಧಸಾಮಗ್ರಿಗಳು ಗ್ರೀಕರಿಗೆ ದೊರೆವು.

ಬ್ರಿಟಿಷ್ ಮಹಾಪ್ರಧಾನರ ಭಾಷಣ.

ಮಹಾಪ್ರಧಾನರು ೨೧ ನೇ ತಾರೀಖಿನ ದಿನ ಕಾಮನ್ಸ್ ಸಭೆಯಲ್ಲಿ ಮೆಡಿಟರೇನಿಯನ್ ವಿಚಾರವಾಗಿ ಭಾಷಣ ಮಾಡುತ್ತ "ಅಲ್ಲಿ ಎರಡು ಸಂಗ್ರಾಮಗಳು ನಡೆಯುತ್ತಿವೆಯೆಂದೂ ಆಫ್ರಿಕ್ಯಾ ಮತ್ತು ಕಾಲುವೆರಕ್ಷಣೆಯು ನೆಪಮಲ್ಲನೆಯದೆಂದೂ, ಇದು ಕೆಲವು ತಿಂಗಳುಗಳ ಕೆಳಗೆ ಬಹಳ ಕಷ್ಟದ ಸಮಸ್ಯೆಯಾಗಿತ್ತೆಂದೂ, ಈಗ ನಮಗಿಂತ ಬಲಯುತರಾಗಿರವ ಇಟಲಿಯವರನ್ನು ಎದುರಿಸುವ ನಂಬಿಕೆಯುಂಟೆಂದೂ, ಗ್ರೀಸಿನಲ್ಲಿ ನಡೆಯುತ್ತಿರುವ ಯುದ್ಧವು ಎರಡನೆಯದೆಂದೂ, ಈ ಎರಡು ಯುದ್ಧಗಳನ್ನು ನಾವಿಂದು ವಿಸರ್ಜ ಮಾಡಬೇಕಾಗಿದೆಯೆಂದೂ ಮಾತಾಡಿಕೊಂಡ ಮುಖ್ಯವಾಗಿ ಇಂದು ಕೆಲಸವಾಗಬೇಕಾಗಿದೆಯೆಂದೂ, ಗ್ರೀಸಿಗೆ ಸಹಾಯಮಾಡುವುದಲ್ಲದೆ ನಾವು ನವ್ಯ ಜವಾಬ್ದಾರಿಯನ್ನು ನಿರ್ವಹಿಸುವ ನಂಬಿಕೆಯುಳ್ಳವರಾಗಿದ್ದೇವೆಂದೂ, ಈಜಿಪ್ಟ್ ತನ್ನ ರಕ್ಷಣೆ ಯನ್ನು ಮಾಡಿಕೊಂಡು ಸೂಯೆಜ್ ಕಾಲುವೆಯ ರಕ್ಷಣೆ ಮಾಡುತ್ತಿದೆಯೆಂದೂ ' ಹೇಳಿದರು.

ಆಕ್ಸಿಸ್ ರಾಷ್ಟ್ರಗಳ ಕಾರ್ಯಕ್ರಮ

ಈಗಿನ ಗ್ರೀಸ್ ಪರಿಸ್ಥಿತಿಯನ್ನು ಕುರಿತು ರೋಮ್ ಮತ್ತು ಬರ್ಲಿನ್ ನಗರಗಳಿಂದ ಬಂದಿರುವ ನರ್ತಮಾನಗಳನ್ನೂ ಸರಿಹೀಲಿಸಿ ಜ್ಯೂರಿಚ್‌ನಲ್ಲಿರುವ ಸ್ವೇಸ್ ರಾಜ್ಯ ತೀಯ ಕ್ಷೇತ್ರವರು ಆಕ್ಸಿಸ್ ರಾಷ್ಟ್ರಗಳ ಕಾರ್ಯ ಕ್ರಮಗಳನ್ನು ಮೂರು ವಿಧವಾಗಿ ವಿಂಗಡಿಸಿದ್ದಾರೆ. ಅವು ಗಳಾವುವೆಂದರೆ, 1. ಗ್ರೀಸ್ ಯುದ್ಧದಲ್ಲಿ ಜರ್ಮನಿಯು ಜೀಗನೆ ಪ್ರವೇಶಿಸುವದು. 2 ಜಿಬ್ರಾಲ್ಟರ್‌ನ್ನು ಮತ್ತು ಮೆಡಿಟರೇನಿಯ ಸಮುದ್ರದಲ್ಲಿ ಬಂದೆಕಡೆ ದೈಪ್ಯ ಯನ್ನು ಕೇಂದ್ರೀಕರಿಸುವದನ್ನು ಬೇರೆಕಡೆ ಬದಲಾಯಿ ಸುವಂತೆ ಮಾಡುವದಕ್ಕೆಂತ ಮುಂಚೆ ಇಟಲಿ, ಫ್ರೆಂಚ್ ಮತ್ತು ಸ್ಪೇನ್ ಭಿನ್ನಾಭಿಪ್ರಾಯಗಳನ್ನು ಸರಿಪಡಿಸುವ ಪ್ರಯತ್ನಕ್ಕೆ ಜರ್ಮನಿಯು ಕೈಹಾಕುವದು. 3. ಸ್ಪೇನ್ ಮತ್ತು ಯೂರೋಪಿನ ದಕ್ಷಿಣ ಭಾಗದ ದೇಶಗಳು ಫ್ರೈರಾಷ್ಟ್ರಗಳ ಒಪ್ಪಂದಕ್ಕೆ ಒಪ್ಪಿಕೊಳ್ಳುವಂತೆ ಮಾಡಿ ಯೂರೋಪು ರಾಷ್ಟ್ರಗಳೆಲ್ಲವೂ ಆಕ್ಸಿಸ್ ರಾಷ್ಟ್ರಗಳಿಗೆ ಬೆಂಬಲ ಕೊಡುವಮೆಂಬುದನ್ನು ಪ್ರಪಂಚಕ್ಕೆ ತೋರಿಸಿ ಕೊಡುವದು.

ಇಟಲಿ ಸೇನೆಗಳಿಗೆ ವಿಶೇಷ ನಷ್ಟ !

ಆಫ್ರಿಕೆಯಲ್ಲಿರುವ ಸೂಡಾ ಮತ್ತು ಕಫ್ರಿಮ ಮರ ಳುಗಾಡುಗಳಲ್ಲಿ ಬ್ರಿಟಿಷ್ ಸೇನೆಗಳು ಇಟಲಿ ಪಡೆಗಳಿಗೆ ವಿಶೇಷ ಹಾನಿಯನ್ನುಂಟುಮಾಡಿವೆಮೆಂದು ತಿಳಿಯುತ್ತದೆ. ಆ ಪ್ರದೇಶದಲ್ಲಿ ಬ್ರಿಟಿಷ್ ಕಾವಲುಗಾರರು ಇಟಾಲಿಯರನ್ನು ಎದುರಿಸಿ ವಶಪಡಿಸಿಕೊಂಡುಮಾತಿದರು. ೧೯ ನೇ ತಾರೀಖಿನ ಬ್ರಿಟಿಷ್ ಕರೀಕ್ಷಾಪಡೆಯವರು ೫ ಇಟಲಿ ಟ್ಯಾಂಕು ಗಳನ್ನು ವಶಪಡಿಸಿದರು. ಅನೇಕ ಫಿರಂಗಿಗಳನ್ನೂ ಲಾರಿಗಳನ್ನೂ ಕೆಪ್ತುಕೊಂಡರು.

ಪೂರ್ವ ಲಿಬ್ಯಾದಲ್ಲಿ ೩೦ ನೆಯ ತಾರೀಖಿನ ದಿನ ಇಟಲಿ ವಿಮಾನಗಳೂ ಮತ್ತು ಬ್ರಿಟಿಷ್ ವಿಮಾನಗಳೂ ೪೦ ಸಾರಿ ಹೊಡೆದಾಟವಾಯಿತು. ೧೫ ಬ್ರಿಟಿಷ್ ಫೈಟರುಗಳು ೭೦ ಇಟಲಿ ವಿಮಾನಗಳನ್ನೆದುರಿಸಿ ಹತ್ತನ್ನು ಉರುಳಿಸಿದವು. ಬ್ರಿಟಿಷ್ ವಿಮಾನಗಳಿಗೆ ಏನೂ ನಷ್ಟ ವಾಗಲಿಲ್ಲ. ಬ್ರಿಟಿಷ್ ವಿಮಾನಗಳು ಅಲ್ಬೇನಿಯಾಮೇಲೆ ಮುತ್ತಿಗೆ ನಡೆಸಿದುದರಿಂದ ಟಿರಾನಾ ವಿಮಾನ ನಿಲ್ದಾಣ ದಲ್ಲಿ ಹ್ಯಾಂಗರುಗಳು ಹತ್ತಿಕೊಂಡು ಉರಿಯತೊಡಗಿಸಿ ದವು. ಹುರಾಜೋ ಬಂದರಿಗೆ ನಷ್ಟವುಂಟಾಯಿತು. ಎಡಿಟ್ರಿಯಾದಲ್ಲಿರುವ ಆಸ್ಸಾಜ್ ಬಂದರಿನಮೇಲೆ ಸಹ ಬ್ರಿಟಿಷ್ ವಿಮಾನಗಳು ಎಡಬಿಡದೆ ಮುತ್ತಿಗೆ ನಡೆಸಿ, ವಿಶೇಷ ನಷ್ಟವನ್ನುಂಟುಮಾಡಿದವು.

ಜರ್ಮನಿ ಯುದ್ಧನೌಕೆಯಿಂದ ಬ್ರಿಟಿಷ್ ನೌಕೆಗಳಿಗಾದ ಹಾನಿ !

ಜರ್ಮನರು ಬ್ರಿಟಿಷರ ನೌಕೆಗಳನ್ನು ಇತ್ತೀಚೆಗೆ ಪ್ರಬಲವಾಗಿ ಮುತ್ತಿಗೆ ಹಾಕಲು ಪ್ರಯತ್ನಪಡುತ್ತಿದ್ದಾ ರೆಂಬುದು, ಕಂಡುಬರುತ್ತಲಿದೆ ಈಚೆಗೆ ಜರ್ಮನರ ಸರ್ಬಮೇರಿನ್ ನೌಕೆಗಳ ಬ್ರಿಟಿಷರ ಅನೇಕ ಹಡಗುಗ ಳನ್ನು ಮುಳುಗಿಸಿರುತ್ತವೆ. ಫ್ರಾನ್ಸಿನ ತೀರದಲ್ಲಿ ಜರ್ಮ ನರ ವಿಮಾನಗಳು ತಮ್ಮ ನಿಲ್ದಾಣಗಳಿಂದ ಆಟ್ಲಾಂಟಿಕ್ ಸಾಗರದಲ್ಲಿ 300 ನೈಲಿಗಳವರೆಗೂ ಹಾರಿಹೋಗಿ ಆ ಸಮುದ್ರದಲ್ಲಿ ಬ್ರಿಟಿಷ್ಸಿನ ಕಡೆಗೆ ಬರುತ್ತಿರುವ ಹಡ ಗುಗಳನ್ನು ಮುತ್ತಿಗೆ ಹಾಕಲು ಪ್ರಯತ್ನಿಸುತ್ತಿರುವೆ. ಒಂದು ವಾರದ ಹಿಂದೆ ಆಟ್ಲಾಂಟಿಕ್ ಸಮುದ್ರದಲ್ಲಿ ಆಕೇಕ ಫಿರಂಗಿಗಳಿಂದ ಕೂಡಿದ್ದ ಜರ್ಮನರ ಒಂದು ದೊಡ್ಡ ಯುದ್ಧನೌಕೆಯು ಅಲ್ಲಿ ಪ್ರಯಾಣಮಾಡುತ್ತಿದ್ದ ಬ್ರಿಟಿಷರ 38 ವ್ಯಾಪಾರದ ಹಡಗುಗಳನ್ನು ಮುತ್ತಿಗೆ ಹಾಕಿ ಅವುಗಳಮೇಲೆ ಗುಂಡುಗಳನ್ನು ಹಾರಿಸಿತು. ಇದನ್ನು ಕಂಡಕೂಡಲೆ ಆ ವ್ಯಾಪಾರದ ಹಡಗುಗಳ ಸಂರಕ್ಷಣೆ ಗಾಗಿ ಅವುಗಳ ಜೊತೆಯಲ್ಲೇ ಹೋಗುತ್ತಿದ್ದ ಒಂದು ವ್ಯಾಪಾರದ ಹಡಗು ಕೂಡಲೇ ಮುಂದೆ ನುಗ್ಗಿ ಶತ್ರುಗಳ ನೌಕೆಯನ್ನು ಎದುರಿಸಲು ನಿಂತಿತು ಇದು ಯುದ್ಧ ನೌಕೆಯಾದೆ ವ್ಯಾಪಾರದ ಹಡಗಾಗಿದ್ದಾಗ್ಯೂ ಜರ್ಮನರ ಆ ಭಾರಿ ಸಮರನೌಕೆಯ ಕಡೆಗೆ ಭಯಂಕರವಾಗಿ ಗುಂಡಿನ ಮಳೆಯನ್ನು ಸುರಿಸಿ ಆ ವ್ಯಾಪಾರದ ಹಡಗುಗ ಳೆಲ್ಲವೂ ತಪ್ಪಿಸಿಕೊಂಡು ಹೋಗಲು ಅವಕಾಶವನ್ನು ಕಲ್ಪಿಸಿಕೊಟ್ಟಿತು. ಕೊನೆಗೆ ಜರ್ಮನರ ನೌಕೆಯು ಯುದ್ಧಸಿದ್ಧವಾದ ವ್ಯಾಪಾರದ ಹಡಗಿಗೆ ಬೆಂಕಿಹೊ ತ್ತಿಸಿ ಮುಳುಗಿಸಿಬಿಟ್ಟಿತು. ಆದರೆ ಹಡಗಿನಲ್ಲಿದ್ದ ನಾವಿ ಕರು ತಮ್ಮ ಅವಸಾನಕಾಲದ ವರೆಗೂ ಧೈರ್ಯೋತ್ಸಾಹ ಹೊಗೆಂದ ಹೋರಾಡಿ ತಮ್ಮ ಆಶ್ರಯದಲ್ಲಿದ್ದ 32 ವ್ಯಾಪಾ ರದ ಹಡಗುಗಳು ತಪ್ಪಿಸಿಕೊಂಡು ಹೋಗುವ ಅವಕಾಶ ವನ್ನು ಕಲ್ಪಿಸಿಕೊಟ್ಟರು. ಬ್ರಿಟಿಷರ ವ್ಯಾಪಾರದ ಸರಕು ಗಳನ್ನು ರವಾನಿಸುತ್ತಿದ್ದ ಹಡಗುಗಳ ಪೈಕಿ ಒಂಭತ್ತು ಮಾತ್ರ ಶತ್ರುಗಳ ಗುಂಡಿಗೆ ಸುತ್ತಾಗಿ ಮುಳುಗಿಹೋ ದವು. ಯುದ್ಧ ಸಿದ್ಧನಾಗಿದ್ದ ಬ್ರಿಟಿಷರ ಆ ವ್ಯಾಪಾರದ ಹಡಗು ಈ ಹೋರಾಟದಲ್ಲಿ ತೋರಿಸಿದ ಶೌರ್ಯವು ಪ್ರಪಂಚದಲ್ಲಿ ಎಲ್ಲಿಲ ಪ್ರಶಂಸೆಗೂ ಪಾತ್ರವಾಗಿರುತ್ತದೆ. ಈ ಹಡಗಿನ ಹೆಸರು "ಜಾವಿಸ್ ಬೇ" ಎಂದು. ಈ ಹಡಗಿನಲ್ಲಿದ್ದ ನಾವಿಕರ ಪೈಕಿ 65 ಮಂದಿ ಮಾತ್ರ ಉಳಿದುಕೊಂಡಿರುತ್ತಾರೆ. ಆದರೆ ಇವರ ಧೈರ್ಯ ಸಾಹಸಗಳು ವರ್ಣನೀಯವಾದವು.

ಅಬ್ಸಿನಿಯದ ಮೇಲೆ ಮುತ್ತಿಗೆ

ಕಳೆದ 16 ನೆಯ ತಾರೀಖಿನ ಶನಿವಾರ ರಾತ್ರಿ ಬ್ರಿಟಿಷ್ ವಿಮಾನಗಳು ಬಾರ್ಡಾಯಾ, ಬಾಂಬ್, ಡೋಲ್ಯಾ, ಜೆಫಾಜಿ,ಅಸ್ಮರ, ಮಗ್ಗಾವ ಪ್ರದೇಶಗಳ ಮೇಲೆ ಮುತ್ತಿಗೆಯನ್ನು ನಡೆಯಿಸಿ ವಿಶೇಷನಷ್ಟವ ನ್ನುಂಟು ಮಾಡಿದವು.

ಬ್ರಿಟಿಷ್ ಅಧಿಕಾರಿಯು ಸೆರೆಸಿಕ್ಕಿದರು

ಮಾಲ್ಟಾದ್ವೀಪಕ್ಕೆ ಹೋಗುತ್ತಿದ್ದ ಬ್ರಿಟಿಷ್ ವೆಲ್ಲಿಂಗ್ ಟನ್ ವಿಮಾನವು ವಿಶೇಷ ಆಕಾಶ ಕೂಪಿಂದ ವಿಧಿ ಯಿಲ್ಲದೆ ಸಿಸಿಲಿದ್ವೀಪದಲ್ಲಿ ಇಳಿಯಬೇಕಾಯಿತು. ಆದ ರಲ್ಲಿ ಬ್ರಿಟಿಷ್ ವಿಮಾನಶಾಲೆಯ ವೈಮಾನಿಕರಲ್ಲಿ ಟ್ಯೂಟರ್‌ಬಾರ್‌ರವರೂ ಇನ್ನು ಮೂವರು ಸ್ಟ್ಯಾ ಫಿಕಾರಿಗಳೂ ಇದ್ದರು. ಎಲ್ಲರನ್ನೂ ಸೆರೆಹಿಡಿಯಲಾಗಿದೆ.

ಜರ್ಮನಿಯ ಮೇಲೆ ಬ್ರಿಟಿಷ್ ವಿಮಾನಗಳ ಮುತ್ತಿಗೆ

ಇತ್ತೀಚೆಗೆ ಬ್ರಿಟಿಷ್ ವಿಮಾನದಳದವರು ಜರ್ಮನ್ ಫ್ರಾನ್ಸ್ ಹಾಲೆಂಡ್ ನೊದಲಾದದೇಶಗಳಲ್ಲಿರುವ ಯುದ್ಧೋಪಕರಣಗಳನ್ನು ತಯಾರಿಸುವ ಕಾರ್ಖಾನೆ ಗಳ ಮೇಲೆ ವಿಶೇಷವಾಗಿ ಮುತ್ತಿಗೆ ನಡೆಸುತ್ತಾರೆ. ಜರ್ಮನಿಯ ವಿಮಾನ ದಳದವರು ಬ್ರಿಟನ್ನಿನ ಸಾಮಾನ್ಯ ಪ್ರಜೆಗಳಿಗೆ ಮಾಡುತ್ತಿರುವಷ್ಟು ಹಾನಿಯನ್ನು ಬ್ರಿಟ ನ್ನಿನ ವಿಮಾನ ದಳದವರು ಜರ್ಮನಿಯ ಸಾಮಾನ್ಯ ಪ್ರಜೆಗಳಿಗೆ ಉಂಟುಮಾಡುತ್ತಿರುವುದಿಲ್ಲ ಬ್ರಿಟಿಷ್ಸಿನ ವೈಮಾನಿಕರು ಜರ್ಮನಿಯ ಯುದ್ಧೋಪಕರಣಗಳನ್ನು ತಯಾರಿಸುವ, ಕಾರ್ಖಾನೆಗಳಿಗೂ, ಫ್ಯಾಕ್ಟರಿಗಳಿಗೂ ಯುದ್ಧೋಪಯುಕ್ತವಾದ ಆವರ ಇತರ ವಸ್ತುಗಳಿಗೂ ಉಂಟುಮಾಡಿರುವ ನಷ್ಟವು ಜರ್ಮನಿಯ ವೈಮಾನಿ ಕರು ಬ್ರಿಟನ್ನಿನ ಯುದ್ಧಕಾರ್ಯಗಳಿಗೆ ಉಂಟುಮಾಡಿರು ವ ನಷ್ಟಕ್ಕಿಂತಲೂ 50 ರಷ್ಟು ಹೆಚ್ಚಾಗಿದೆಯೆಂದು ಅಧಿಕಾರಯುತವಾದ ಹೇಳಿಕೆಯು ಹೊರಬಿದ್ದಿದೆ. ಬ್ರಿಟ ನ್ನಿನ ವೈಮಾನಿಕರ ಉದ್ದೇಶವು ಜರ್ಮನಿಯ ಪ್ರೀವು ರುವರನ್ನೂ ಮಳ್ಳಗಳನ್ನೂ ಕೊಲ್ಲುವುದಲ್ಲ; ಯುದ್ಧೋಪ ಯುಕ್ತವಾದ ವಸ್ತುಗಳನ್ನೂ ತಯಾರಿಸಲು ಅವರಿಗಿರುವ ಸಾಮರ್ಥ್ಯವನ್ನು ನಾಶಪಡಿಸುವುದು ಮಾತ್ರ.

ಈ ಕಳೆದ ವಾರ ಬ್ರಿಟಿಷ್ ವೈಮಾನಿಕರು ಡಾನ್ಸ್‌ಗ್ಗಿ ನಲ್ಲಿರುವ ಲೈಲ್ಲ ನಿಲ್ದಾಣಗಳನ್ನೂ, ಲೈಲ್ ಮಾರ್ಗಗ ಳನ್ನೂ ಮುತ್ತಿಗೆಹಾಕಿ ಪಪಡಿಸಿದರೆಲ್ಲವೆ, ಎಣ್ಣೆ ಸರ ಬರಾಜಿನ ಕೇಂದ್ರಗಳನ್ನು, ತಯಾರಿಸುವ ಕಾರಖಾನೆಗ ಳನ್ನೂ, ಬಂದರುಗಳನ್ನೂ, ಹಡಗಿನ ನಿಲ್ದಾಣಗಳನ್ನೂ ಲೈಲ್ಲ ಜಂಕ್ಷನ್ನುಗಳನ್ನೂ ಮುತ್ತಿಗೆ ಹಾಕಿದರು. ಜರ್ಮನಿ, ಫ್ರಾನ್ಸ್ ಮತ್ತು ಹಾಲೆಂಡ್ ಮುಂತಾದ ದೇಶ ಗಳಲ್ಲಿ ಹದಿನಾಲ್ಕು ವಿಮಾನ ನಿಲ್ದಾಣಗಳ ಮೇಲೆ ದಾಳಿ ನಡೆಸಿದರು ಕಳೆದವಾರ ಬ್ರಿಟಿಷ್ ವಿಮಾನ ದಳದವರು ಜರ್ಮನಿಯ ಸುಪ್ರಸಿದ್ಧನಾದ ಹ್ಯಾಂಬರ್ಗ್ ಬಂದರಿಗೆ ಅಸಾಧಾರಣವಾದ ನಷ್ಟವನ್ನುಂಟುಮಾಡಿರುತ್ತಾರೆ. ಆ ಬ್ಲಡ ಅಲ್ಲಿ ಕಟ್ಟಲಾಗುತ್ತಿದ್ದ 26 ಸಬ್ -ಮೇರಿನ್ ನೌಕೆ ಗಳಲ್ಲಿ ಏಡನ್ನು ನಾಶಪಡಿಸಿ ಅಲ್ಲಿ ಯುದ್ಧೋಪಕರಣಗಳ ನ್ನು ತಯಾರಿಸುತ್ತಿದ್ದ ಜರ್ಮನರ ಕಾರಖಾನೆಗಳಿಗೆ ಅಪಾರವಾದ ನಷ್ಟವನ್ನುಂಟುಮಾಡಿರುತ್ತಾರೆ ಈಚೆಗೆ ಜರ್ಮನರು ತಮ್ಮ ಯುದ್ಧ ಸಾಮಗ್ರಿಗಳನ್ನು ತಯಾ ರಿಸುವ ಕಾರ್ಖಾನೆಗಳನ್ನು ಜರ್ಮನಿಯ. ಪೂರ್ವದಿಗ್ಭಾಗ ಗಳಲ್ಲೂ, ಪೋಲೆಂಡಿಗೂ, ರವಾನಿಸುತ್ತಿರುವುದು ಹೆಚ್ಚು ಕ್ಷಲಿದೆ. ಹ್ಯಾಂಬರ್ಗ್‌ನಲ್ಲಿ ಆಗಿರುವ ನಷ್ಟವತ್ತೆ ಜರ್ಮನಿಯ ಆದ್ಯಂತದಲ್ಲೂ, ಅತ್ಯಂತ ಕಳವಳವನ್ನು ಉಂಟುಮಾ ಡಿರುತ್ತದೆ.

ಬಡೋದಾ ಮಹಾರಾಜರ ಸಹಾಯ

ಬ ಡೋ ದಾ ಮ ಹಾ ರಾ ಜ ರು ಸಂಗ್ರಾ ಮ ಕ್ಕಾ ಗಿ ೫೦,೦೦೦ ಪೌಂಡುಗಳನ್ನು ಕೊಟ್ಟಿದ್ದಾರೆ ಈ ಮೊದ ಲು ೫೦,೦೦೦ ಪೌಂಡುಗಳನ್ನು ಕೊಟ್ಟಿದ್ದರು. ಸೈನ್ಯ ಬಲವನ್ನು ಕೂಡ ಕಳುಹಿಸಿಕೊಟ್ಟಿರುತ್ತಾರೆ.

ಹಿಂದೂಮಹಾಸಭೆಯು ಸತ್ಯಾಗ್ರಹ ದಲ್ಲಿ ಭಾಗವಹಿಸಲಾಗದು

ಅಖಿಲಭಾರತ ಹಿಂದೂಮಹಾಸಭೆಯು ವರ್ಕಿಂಗ್ ಸಮಿತಿಯ ವಿಶೇಷ ಸಭೆಯು ಶ್ರೀ ಸರ್ವಾರ್‌ಕರ್‌ರವರ ಅಧ್ಯಕ್ಷತೆಯಲ್ಲಿ ಸೇರಿ ಕಾಂಗ್ರೆಸ್ಸು ನಡೆಸುತ್ತಿರುವ ಸತ್ಯಾ ಗ್ರಹ ಚಳವಳಿಯಿಂದ ದೂರವಾಗಿರಬೇಕೆಂದೂ ಆ ಸಂ ಗತಿಸಿಸಕೂಡದೆಂದೂ ನಿರ್ಣಯಮಾಡಿ

[೩ನೆಯ ಪುಟದಿಂದ ಮುಂದುವರಿದುದು]

ಯಾವ ಸಾಧನದಿಂದ ಇಂದ್ರಿಯಗಳು ವರವರ್ತಿಗಳಾಗುವವೋ ಅಂತಹ ಸಾಧನಗಳನ್ನು ನಾವು ಸರ್ವದಾ ಸಾಧಿಸುತ್ತಿರಬೇಕು ಇಂದ್ರಿಯಗಳು ವಿಷಯ ಸೇವನೆಯಿಂದ ವಿಮುಖವಾಗುವಂತೆ ನಿರಂತರವೂ ನೀರಪ್ಪಯತ್ನವನ್ನೆಸಗುತ್ತಿರಬೇಕು ಆವುಗಳು ನಮ್ಮನ್ನು ವಿಷಯ ಸುಖಕ್ಕೆಳೆಯುವಾಗ, ವಿಷಯಸೇವನೆಯ ಕಾಲದಲ್ಲಾಗಲಿ ಇಲ್ಲವೆ ಆದರ ಪರಿಣಾಮದಲ್ಲಾಗಲಿ ಪ್ರಾಪ್ತವಾಗುವ ಪರಿತಾಪವನ್ನೂ, ಫಲವನ್ನೂ ವಿಚಾರಮಾಡಬೇಕು ವಿಷಯಚಿಂತನೆ ಮತ್ತು ವಿಷಯಭೋಗ ಸಂಬಂಧವಾದ ವಾರ್ತಾಲಾಪಗಳನ್ನು ವಿಷದಂತೆನಿಸಿ ಕು ಸರ್ವದಾ ಪಕ್ಷಂಗದಲ್ಲಿಯೇ ನಮಂಯನ್ನು ನಿಲ್ಲಿಸಬೇಕು ಹೀಗೆ ಎಚ್ಚೆತ್ತಿಕೆಯಿಂದ ಎಡೆಬಿಡದೆ ನಡೆಯುತ್ತಿದ್ದರೆ ಇಂದ್ರಿಯಸಂಯಮವು ಸುಖವು ಕರತಲಾಮಲಕವಾಗುವುದರಲ್ಲಿ ಸಂಶಯವಿಲ್ಲ ತನ್ಮೂಲಕ ಈ ಅಸಾರವಾದ ಸಂಸಾರದಲ್ಲಿ ಸಾರಾರವಾದ ಸುಖವನ್ನು ಸಾಧಿಸಬಹುದಾಗಿದೆ

ಪ್ರಿಯವಾಚಕರೇ, ಯಾರು ನೇದಾಂತ ಗ್ರಂಥಗಳನ್ನು ಓದುವ ಆಯಾಸವನ್ನು ತೆಗೆದುಕೊಂಡಿಲ್ಲವೋ ಯಾರು ಆಪ್ತರಿಮಯಂಡಿತರನ್ನು ಸೇವಿಸುವ ಶ್ರಮವನ್ನು ವಹಿಸಿಲ್ಲವೋ ಯಾರು ವ್ರತ ನೇಮಂಗಳಲಾ ತಪಸ್ಸಿನಿಂದಾಗಲಿ ದೇಹದಂಡನೆಯನ್ನು ಮಾಡಿಲ್ಲವೋ ಅಂತಹವರು ಸಹ ಸತ್ಸಂಗದ ಪ್ರಭಾವಾತಿಶಯ ದಿಂದ ಪರಿಪಾವನ ಅನುಗ್ರಹಕ್ಕೆ ಪಾತ್ರರಾಗುವರು ನಾರದರು ಪೂರ್ವದಲ್ಲಿ ಒಬ್ಬ ದಾಸಿಯ ಪುತ್ರರಾಗಿದ್ದರು ತನ್ನ ತಾಯಿಯು ಪಾಪಿಯಾಗಿದ್ದ ಮನೆಗೆ ಒಬ್ಬ ಸನ್ಯಾಸಿಗಳು ಬಂದು ನಾಲ್ಕು ತಿಂಗಳು ವಾಸವಾಗಿದ್ದರು ದಾಸಿಯ ಪುತ್ರನಿಗೆ ಆ ಸನ್ಯಾಸಿಗಳ ಅನುಗ್ರಹದಿಂದ ಆ ಜನ್ಮದಲ್ಲಿ ಉತ್ಕಟವಾದ ತಪಸ್ಸು ಸಾಗಿ ಮುಂದಿನಜನ್ಮದಲ್ಲಿಯೇ ನಾರದರ ಜನ್ಮ ಬಂಡಿತು. ಸಾಧುಗಳ ಸತ್ಸಾಸರ ಫಲವು ವಿಲಕ್ಷಣವಾದದ್ದು ಈ ವಿಷಯದಲ್ಲಿ ಜ್ಞಾನಸಿಂಧುವೆಂಬ ಗ್ರಂಥದಲ್ಲಿ ಒಂದು ಕವಿ ಬಂದಿದೆ ಆದರ ತಾತ್ಪರ್ಯವೇನೆಂದರೆ—

ಒಂದು ಸಾರಿ ನಾರದರು ಶ್ರೀಕೃಷ್ಣನಬಳಿಗೆ ಹೋಗಿ ಸಾಧುಸಂತರ ದರ್ಶನದ ಫಲವೇನೆಂದು ಕೇಳಿದರು ಶ್ರೀಕೃಷ್ಣನು. ಸ್ವಲ್ಪಹೊತ್ತು ಯೋಚಿಸಿ "ಒಂದುಕಡೆ ಒಂದು ಸಗಣಿಯು ಹುಳುವಿರುವದು, ಅದನ್ನು ಕೇಳು, ತಿಳಿಯುತ್ತದೆ" ಎಂದು ಹೇಳಿದನು ನಾರದರು ಅದರಂತೆ ಹೋಗಿ ಆ ಕೀಟವನ್ನು ಕೇಳುತ್ತಲೇ ಅದು ತನ್ನ ಕಣ್ಣನ್ನು ಅರಳಿಸಿನೋಡಿ ಹಾಗೆಯೇ ಕಣ್ಣು ಮುಚ್ಚಿಬಿಟ್ಟತು ಪುನಃ ಕಣ್ಣು ತೆರೆಯಲೇ ಇಲ್ಲ ನಾರದರು ತಿರುಗಿ ಬಂದು ನಡೆದ ಸಂಗತಿಯನ್ನು ಕೃಷ್ಣನಿಗೆ ಹೇಳಿದರು ಕೃಷ್ಣನು ಇನ್ನು ಕೆಲವು ದಿವಸಗಳ ಮೇಲೆ ಹೇಳುತ್ತೇನೆಂದು ಸುಮ್ಮನಾಗಿ ಕೆಲವು ದಿವಸಗಳು ಗತಿಸಿದನಂತರ ಪುನಃ ನಾರದರು ಬಂದು ಕೇಳಿದಾಗ "ಊರು ಪ್ರಭುಲ್ಲಿರುವ ವಿಷ್ಣುದೇವಾಲಯದ ಶಿಖರದ ಮೇಲೆ ಕುಳಿತಿರುವ ಹಂಸಪಕ್ಷಿಯನ್ನು ಕೇಳು" ಎಂದು ಹೇಳಿದನು ಆ ಸ್ಥಳಕ್ಕೆ ಹೋಗಿ ಆ ಕೂಸನ್ನು ನೋಡಬೇಕೆಂದು ಅಪೇಕ್ಷಿಸಿದರು. ಆಗ ಮನೆಯವರು ದೇವರ್ಷಿಗಳ ದರ್ಶನದಿಂದ ಮಗುವಿಗೆ ಶ್ರೇಯಸ್ಸಾಗಲಿ ಎಂದು ಕೂಸನ್ನು ತಂದು ತೋರಿಸಿದರು ಮಹತೀವೀಣೆಯಿಂದ ವೈದಿಮ ಧ್ವನಿಯಿಂದ ಹೊಗಳುತ್ತಲೇ ತಿರುವ ಆನಂದಪರವಶವಾಗಿ ನಾರದರನ್ನು ಏಕದೃಷ್ಟಿಯಿಂದ ನೋಡಿ ತತ್ಕ್ಷಣವೇ ಶಂಖಚಕ್ರಗದಾಧಾರಿಯಾದ ರೂಪನ್ನು ತಳಿಸಿ "ಸ್ವಾಮಿ, ನಾರದರೇ! ನಾನು ಮೊದಲು ಸಗಣಿಯ ಹುಳುವಾಗಿ ದ್ದೆನು ಆಲ್ಲಿ ತಾವು ದರ್ಶನವನ್ನು ಕೊಟ್ಟದ್ದರಿಂದ ಉತ್ತಮವಾದ ಹಂಸಪಕ್ಷಿಯಾದೆನು, ಪುನಃ ತಮ್ಮ ಸಂದರ್ಶನದಿಂದ ಸಜ್ಜನರ ಮನೆಯ ತಿಪ್ಪೆಯಾದನು; ಇಲ್ಲಿಯೂ ತಮ್ಮ ದರ್ಶನಲಾಭವಾದ್ದರಿಂದ ಮನುಷ್ಯ ಜನ್ಮವನ್ನೂ ಬಿಟ್ಟು ಸಾರೂಪ್ಯ ಮುಕ್ತಿಯನ್ನೇ ಪಡೆದೆನು ಇದೇ ಸಂತರ ಸರ್ಶನಫಲವು" ಎಂದು ವೈಕುಂಠಕ್ಕೆ ತೆರಳಿದೆಂದೂ ಇದನ್ನೆಲ್ಲಾ ನೋಡಿ ನಾರದರು ಆಶ್ಚರ್ಯಭರಿತರಾಗಿ ಜಗನ್ನಾಟಕೀಸೂತ್ರಧಾರ ಮಾಯೆತ್ತ ತೆರಳಿದರೆಂದೂ ಉಲ್ಲಿಖಿತವಾಗಿರುವುದು ಸಹಾಸಗಳಿಗಿಂತ ಸಾಧುಸಾಸಗಳು ಕಷ್ಟವು, ಬೆಲೆಯಿಲ್ಲದು ತಿಳಿವುವುದು ಪಕ್ಕು ಕಷ್ಟವು, ಪರಮಾತ್ಮನ ಕೃಪೆಯಿಂದಲೇ ಇಂತಹ ಸಹವಾಸವು ಸಂಪ್ರಾಪ್ತವಾಗುವುದು ಪರಮಾತ್ಮನಿಗೂ ಸಜ್ಜನರಿಗೂ ಭೇದವಿರುವುದಿಲ್ಲ ಆದುಪರ್ಯ ಕ್ತ ಎಂತಹ ಸಂಪತ್ಪಿಪತ್ತಿಮಯಗಳಲ್ಲಿಯೂ ಸತ್ಸಂಗವನ್ನು ಸಾಧಿಸಬೇಕು ಆಗ ಸಂಸಾರವು ತೃಣಸಮಾನವಾಗಿ ಕಾಣುವುದು ಆಗ ಸಂಸಾರವು ತೃಣಸಮಾನವಾಗಿ ಕಾಣುವುದು ಆಗ ಸಂಸಾರವು ತೃಣಸಮಾನವಾಗಿ ಕಾಣುವುದು

ಮೈಸೂರು ಸರಸ್ವತೀ ಸಂಪ್ರಾಸಾದಿಕೆ ನಾಟಕ ಸಭೆ

ಮೈಸೂರ್‌ಲ್ಲಿರವ ಶ್ರೀಮಾನ್ ಎಂ ವಿ ಶಿವಪ್ಪ ಮತ್ತು ಎ ವಿ ಮಾದಪ್ಪ ಇವರು ಮೇಲ್ಕಂಡ ಕಂಪನಿಯನ್ನು ೧೯೩೫ ರಲ್ಲಿ ಸ್ಥಾಪಿಸಿ ಭಕ್ತಿರಸಪ್ರಧಾನವಾದ ಸಾವಿತ್ರಿ ಮತ್ತು ಮಾತೃಭಕ್ತಿ ಮೊದಲಾದ ನಾಟಕಗಳನ್ನು ಶ್ರೀಮನ್ಮಹಾರಾಜರವರ ಸಮ್ಮುಖದಲ್ಲಿ ಆಡಿ ಶ್ಲಾಘನೆಯನ್ನು ಪಡೆದಿರುತ್ತಾರೆ

ಮೈಸೂರು ಆಕಾಶವಾಣಿ ಪ್ರಾರಂಭವಾದಲಾಗಾಯಿತ ಸುಮಾರು ೩೫ ನಾಟಕಗಳನ್ನು ಕೊಟ್ಟು ಆಡಿಸಿ ಸರ್ವರಿಗೂ ಆನಂದವನ್ನುಂಟುಮಾಡಿರುವರು ಮೈಸೂರು ಆಕಾಶವಾಣಿಯಲ್ಲಿ ತಾ! ೩೦ ೦೦ ರಲ್ಲಿ "ವೀರ ಅಭಿಮನ್ಯು" ಎಂಬ ಆಖಿವನ್ನು ಪ್ರದರ್ಶಿಸಿ ವಿಶೇಷ ಆನಂದವನ್ನು ಉಂಟುಮಾಡಿದರ

ಈ ಸಹೋದರರ ಮಹಾಕಲಿ ವೇಕ್ಷಣಿಯಿಂದ ನಾಟಕವಾದ "ಬಿದೇರೋ ಎಂಬ ನಾಟಕವನ್ನು (ಶೂರ ಸೇನಚರಿತ್ರೆ) ಕನ್ನಡಿವಪ್ಪೆ ಜಯಸಿಂಹ ತಾ ಬ ಹೆಸರನ್ನು ಪಡೆದಿರುವ ವ! ರಾ! ಶಿವಪ್ಪನವರು ಶ್ರೀ ಚಾಮುಂಡೇಶ್ವರೀ ಕಂಪೆನಿಯವರ ಆಶ್ರಯದಿ ದಕ್ಷಿಣ ದೇಶದೆಲ್ಲೆಲ್ಲಾ, ಮೈಸೂರಿನಲ್ಲಿ, ಬೆಂಗಳೂರಿನಲ್ಲಿ, ಜಹಗೀರ್ ಸುತ್ತಾ ಮುತ್ತಾ ಇತ್ತಿ ಪಾತ್ರಗಳನ್ನು ಪಡೆದ The Eminent Actor of the Southern Stage ಎಂಬುದಾಗಿ ಹೆಸರು ಪಡೆದಿರುತ್ತಾರೆ ಇವರು ಕನ್ನಡಕವಿ ಆಸ್ಥಾನವಿದ್ವಾ ಆನಪಟ್ಟಿ ರಾಮರಾಯರಿಂದ ರಚಿತವಾದ "ಮೈಸೂರ ರಾಜ್ಯಾಭ್ಯುದಯ ನಾಟಕ" ವನ್ನೂ ರೇಡಿಯೋದಲ್ಲಿ ಆಡಿಸಿ ಸನ್ಮಾ ಮಹಾಸ್ವಾಮಿಯ ವರಾದ ಶ್ರೀ ಕೃಷ್ಣರಾಜ ಒಡೆಯರವರ ಮನಸ್ಸನ್ನಿಗೆ ಹಿಂದ ತಂದ ಸಂತೋಷವನ್ನುಂಟು ಮಾಡಿದರೆಂದು ಹೇಳುವುದರಲ್ಲಿ ಅತಿಶಯೋಕ್ತಿಯಲ್ಲ

ಮುಖ್ಯವಾಗಿ ನಾಟಕದಲ್ಲಿ ತುಂಬ ಆಭರಣಿಯಳುಳ್ಳ ವರಾಗಿಯೂ ನೈಪಥಾಗಳನ್ನು ಪ್ರದರ್ಶಿಸುವುದರಲ್ಲಿ ಅದ್ವಿತೀಯರಾಗಿಯೂ ತಿರುವುದರಿಂದ ಇವರು ತಮ್ಮ ಕಂಪೆನಿಯಲ್ಲಿ ಪ್ರಸಿದ್ಧ ಕವಿಗಳಿಂದ ರಚಿತವಾದ ನಾಟಕಗಳನ್ನು ಆಡಿ, ನಾಟಕದ ಕಲೆಯನ್ನು ಪೂರ್ತಿದಂತೆ ಉತ್ತಮಗೊಳಿಸುವರೆಂದು ನಂಬಿರುವೆನು ಈಗಾ ನಾಟಕಗಳು ಬರಬರುತ್ತಾ ಹೀನಸ್ಥಿತಿಗೆ ಬಂದಿರುವುದರಿಂದ, ಉತ್ತಮಸ್ಥಿತಿಗೆ ಬರಬೇಕೆಂಬುದೇ ಆಶೆ ಪ್ರಕೃತ ದಲ್ಲಿ ಇವರು ಸ್ಥಾಪಿಸಿರುವ ನಾಟಕ ಕಂಪೆನಿಯಲ್ಲಿ ಭಕ್ತಿರಸಭರಿತ ನಾಟಕಗಳನ್ನು ತೆಗೆದುಕೊಂಡು ಅಭಿನಯಿಸು ತ್ತಾರೆಂದು ಕೇಳಿ ತುಂಬ ಸಂತೋಷವಾಗಿದೆ

ಕನ್ನಡಕವಿ ಆಸ್ಥಾನವಿದ್ವಾ ಆನಪಟ್ಟಿ ರಾಮರಾಯರು.

ಸುತ್ತಗಟ್ಟಿಯ ಮಂಗಲಾರ್ತಿ

ತಾ ೧೨-೧೧-೧೯೪೦ ನೇ ದಿವಸ ಶ್ರೀ ಬಾಲತಪಸ್ವಿ ಶ್ರೀ ಷ ಬ್ರ ಚನ್ನವೀರಶಿವಾಚಾರ್ಯರು ಬೃಹಸ್ಪತಿ ಹೋಟಿಗ ಇವರು ಬೆಳಗಾವಿಯಿಂದ ಸಂಪಗಾವ ತಾಲೂಕ ಕೈಕಿ ಸುತ್ತಗಟ್ಟಿ ಗ್ರಾಮಕ್ಕೆ ದಯಮಾಡಿಸಿದರು. ದೈವಮಂಡಲಿಯವರ ವಿಶೇಷ ಸ್ವಾಗತನೆಯನ್ನು ಶ್ರೀಗಳು ಸ್ವೀಕರಿಸಿದ ಮೇಲೆ ಗ್ರಾಮದಲ್ಲಿ ಮೂರ್ತಮಾಡಿದರು ವಾದ್ಯಗಳ ಮಂಗಲಧ್ವನಿಯೂ ಜಗದಾಚಾರ್ಯರ ಜಯ ಜಯಕಾರಧ್ವನಿಯೂ ಗಗನವನ್ನು ವ್ಯಾಪಿಸಿದವು. ಪದಾಭೋಷಕಂಧಿಗಳ ಸಂಚಾರದಿಂದ ಆಪವಿತ್ರವಾಗಿರುವ ಸುತ್ತಗಟ್ಟಿ ಗ್ರಾಮವು ತಪೋನಿಧಿಗಳಾದ ಹೋಟಿಗ ಶ್ರೀಗಳವರ ಪಾದ ಸ್ಪರ್ಶದಿಂದ ಪವಿತ್ರವಾಯಿತೆಂದೂ, ಇಂದಿಗೆ ತವ್ಮ ಜನ್ಮವು ಸಫಲವಾಯಿತೆಂದೂ ಗ್ರಾಮದ ಜನರು ನುಡಿಯುತ್ತಲಿದ್ದುದನ್ನು ನೋಡಿದವೆ ಯಾರಿಗೆ ತಾನೇ ಸಂತೋಷವಾಗಲಿಕ್ಕಿಲ್ಲ? ಉತ್ಸವಕ್ಕೆ ಹಳ್ಳಿಳ್ಳಿಗಳಿಂದ ಬಹುಜನರು ಆಗಮಿಸಿದ್ದರು. ಗ್ರಾಮಾಧಿಕಾರಿಗಳು ಉತ್ಸವದಲ್ಲಿ ಭಾಗವಹಿಸಿದ್ದರು ಸತ್ಪುಗೇಂ-ಜೀವಶ್ರೀ ಶ್ರೀಗಳವರು ಆಶ್ವಾರೂಢರಾಗಿದ್ದರು ಈ ರೀತಿ ಯಾಗಿ ಉತ್ಸವವು ಸಮಸ್ತ ಭೀದಿಗಳಲ್ಲಿ ಹಾಯ್ದು ರಾತ್ರಿ ೯ ಘಂಟೆಗೆ ಬಸವೇಶ್ವರ ದೇವಾಲಯಕ್ಕೆ ತಲ್ಲಿತು. ಆ ಮೇಲೆ ಸಭೆಯು ಪ್ರಾರಂಭವಾಯಿತು ಮೊದಲು ಹುಣಸೀಕಟ್ಟೆ ಶ್ರೀಗಳು ಶ್ರೀ ಬಾಲತಪಸ್ವಿಗಳ ಪರಿಚಯವನ್ನು ಮಾಡಿಕೊಟ್ಟರು ಬಳಿಕ ಸತ್ಪುಗೇಂ ಶ್ರೀ ಗಳು "ಭಕ್ತಿ" ವಿಷಯವಾಗಿ ಹೃದಯಂಗಮವಾದ ಭಾಷಣ ಮಾಡಿದರು ಅನಂತರ ಹೋಟಿಗಿ ಶ್ರೀಗಳವರು "ಧರ್ಮ" ವಿಷಯವಾಗಿ ೧ ಘಂಟೆಯವರೆಗೆ ಭಾಷಣ ಮಾಡಿದರು ವೀರಶೈವಜನಾಂಗವು ಧಾರ್ಮಿಕ ದೃಷ್ಟಿಯಿಂದ ಹಿಂದುಳಿಯಬೇಕಾದರೆ ಧರ್ಮಗುರುಗಳ ಅಜಾಗರೂಕತೆಯೇ ಮೂಲಕಾರಣವೆಂದೂ, ಧರ್ಮಯುಗವು ವೃದ್ಧಿಯಾಗಬೇಕಾದರೆ ಮೂಲೆಗುಂಪಾಗಿ ತೀರ್ಥೋದ್ಭವಿಸಿರುವ ವಿದ್ಯಾ ರೆಬಿಡರಿಗಿ, ಆಶ್ರಮ ಪರಿಷ್ಕೃತ ವರ್ತನೆಯುಳ್ಳವರಾಗಿ ಶಿವಪೂಜಾ ಕಾರ್ಯರಾಗಿರುವ ಗುರು ಮೂರ್ತಿಗಳು ತಮ್ಮ ತಮ್ಮ ಆಶ್ರಮಕ್ಕನುಗುಣವಾದ ವರ್ತನೆಯಿಂದ ನಡೆಯಬೇಕೆಂದೂ, ಭಕ್ತ ವೃಂದವು ವಂಶಪಾರಂಪರ್ಯದಿಂದ ಬಂದ ತಮ್ಮ ತಮ್ಮ ಒಂದು ಗುಳ್ಳಿ ಅಸಾಧಾರಣ ಭಕ್ತಿಯನ್ನಿಟ್ಟು ಶಾಶ್ವತವಾದ ಸುಖವನ್ನು ಹೊಂದಬೇಕೆಂದೂ ಬೋಧಿಸಿದರು. ಬಳಿಕ ಸಭೆಯು ಮುಗಿಯಿತು. ತಾ! ೧೩-೧೧-೧೯೪೦ ಬುಧವಾರ ದಿವಸ ಮಂ! ರಾ! ಲಿಂಗಪ್ಪ ಜೋಷಾಲಿ ಎಂಬ ಸದ್ಭಕ್ತರು ಸ್ವಾಮಿಗಳನ್ನು ತಮ್ಮ ವ ನೆಗೆ ಬಿಜಯಮಾಡಿಸಿಕೊಂಡರು ಆ ದಿವಸ ಸಕಲ ಸದ್ಭಕ್ತರೂ ಸ್ವಾಮಿಗಳವರ ಪಾದ ಪೂಜೆಗೆ ಬಂದಿದ್ದರು ಆಸ್ಥಾನಕರ್ತಯೆಯು ವಿಶೇಷವಾಗಿ ನಡೆಯಿತು ಸಂಜೆ ೬ ಘಂಟೆಗೆ ಒಷಸೇಶ್ವರ ದೇವಾಲಯದಲ್ಲಿ ಮತ್ತೆ ಸಭೆಸೇರಿತು. ಹುಣಸೀಕಟ್ಟೆ ಶ್ರೀಗಳು "ಗುರುಭಕ್ತಿವಿಷಯವಾಗಿಯೂ, ಜೆವರಿ ಶ್ರೀಗಳು "ಪಾಪ ಪುಣ್ಯಗಳ ವಿಚಾರ ವಿಷಯವಾಗಿಯೂ ಮನೋಜ್ಞವಾಗಿ ಭಾಷಣಮಾಡಿದರು ಬಳಿಕ ಶ್ರೀಗಳು "ಹಳ್ಳಿಗರ ಸುಧಾರಣೆ" ಯನ್ನುಕುರಿತ ಮಾತನಾಡಿದರು ಹಳ್ಳಿಗರು ನೈತಿಕ ಸಾಮಾಜಿಕ ರಾಜಕೀಯ ಮತ್ತು ವಿದ್ಯಾ ವೈಲಾಸದ ದೃಷ್ಟಿಯಿಂದ ಹಿಂದುಳಿದಿರುವರು. ಇವರು ಉನ್ನತಶಾಗಬೇಕಾದರೆ ಧರ್ಮ ಮತ್ತು ಗುರುದೇವರಲ್ಲಿ ಭಕ್ತಿಯನ್ನಿಡಬೇಕೆಂದು ಭಾಷಣ ಮಾಡಿದವಾಗ್ಗೆ ಕರತಾಡನಗಳಿಂದಲೂ ಆರ್ಜಾರ್ಯರ ಜಯ ಜಯ ಕಾರಗಳಿಂದಲೂ ಭಕ್ತರ ಭಕ್ತಿಯು ಹೊರಚಿಮ್ಮುತ್ತಿತ್ತು ಈ ರೀತಿಯಾಗಿ ಶ್ರೀಗಳ ಭಾಷಣವಾದ ನಂತರ ಸುತ್ತಗಟ್ಟಿಯ ಕನ್ನಡ ಶಾಲಾಧ್ಯಾಪಕರಾದ ಶ್ರೀ ನರಹರಿ ಹೋಶಿಯವರು ಆಭಾರ ಮನ್ನಣೆ ಪೂರ್ವಕವಾದ ಭಾಷಣ ಮಾಡಿದರು ಆ ದಿವಸ ಸಭೆಯು ಮುಗಿಯಿತು. ಮರುದಿವಸ ಸುತ್ತಗಟ್ಟಿಯ ಹಿರಿಮಠದಲ್ಲಿ ಶ್ರೀ ಗಳವರು ಶಿವಪೂಜೆಯನ್ನು ತೀರಿಕೊಂಡು ಸಕಲ ಭಕ್ತವೃಂದಕ್ಕೆ ಉಪದೇಶವನ್ನುಮಾಡಿ ಮಧ್ಯಾಹ್ನ ೧೨ ಘಂಟೆಗೆ ಬೆಳಗಾವಿಗೆ ದಯಮಾಡಿಸಿದರು

ಸಿ. ಯಂ. ಪಾಟೀಲ
ಇಂಗ್ಲೀಷ್ ವಿದ್ಯಾರ್ಥಿ ಬೆಳಗಾಂ

॥ ಶ್ರೀ ವಿಶ್ವೇಶ್ವರೋ ಜಯತಿ ॥
॥ ಜಗನ್ಮಥಿವರ್ಧನಾಂ ಯದುಸಂಸಾಪಕ್ಷೀಣ ॥

ತಪೋನುಷ್ಠಾನ ಸಮಾಪ್ತಿ, ಮಂಗಲ ಮಹೋತ್ಸವ.

ಶ್ರೀ ಜಗದ್ಗುರು ರೇಣುಕಾಚಾರ್ಯ ಪರಂಪರಾಗತ ಶ್ರೀಮದ್ವೀರಭದ್ರಾಪುರೀ ಮಹಾ ಸಂಸ್ಥಾನ ಕಾಮಾ ಶ್ರೀಮತ್ಪಿ ಭೂಷಿತುರು ಮಠ, ಕಲ್ಯಾಣಪುರೀ (ಬೆಂಗಳೂರು) ಮಹಾಂತಿನ ಮಹಾಧಿಕ ಶ್ರೀ॥ ಷ॥ ಬ್ರ॥ ಷ॥ ಗೌರಾಧಿಧರ ಶಿವಾಚಾರ್ಯ ಶಿವಯೋಗಿಗಳವರು ಶ್ರೀ ಮದ್ವೀರಮಹಾಕುಂಭಮೇಳದ ಸಕ್ಷಲ್ಯದಿಂದ ಇಹೇ ವಿಶ್ವಮ ಸಂ॥ ಅಕ್ಷಯಾಜ ಬಿದ್ದ ವಿಜಯದಶಮಿಯಾ (ಶಾ॥ ೧೦-೧೦-೧೯೪೦) ನೇ ಗುರುವಾರ ಮೊದಲು ಗೊಂಡು, ಮೈಸೂರು ಧರ್ಮರಾಜ್ಯದ ಕೆ.ಆರ್.ಪೇಟೆ ತಾಲ್ಲೂಕಿನಲ್ಲಿ ರಾಜಾಜಿಸುತ್ತಿರುವ ಸುಪ್ರಸಿದ್ಧ ಕ್ಷೇತ್ರವಾದ ಶ್ರೀ ರೇಣಾಸಿದ್ಧೇಶ್ವರ ಬೆಟ್ಟದಲ್ಲಿ ಶ್ರೀಘವಸ ಗುರು ಶ್ರೀರೇಣಾಸಿದ್ಧೇಶ್ವರಸ್ವಾಮಿಯ ಸನ್ನಿಧಾನದಲ್ಲಿ ತಪೋನುಷ್ಠಾನವನ್ನಾಚರಿಸುತ್ತಿರುವುದು ಸಂಯಕ್ಷೆ! ತಪೋನುಷ್ಠಾನದ ೪೮ ದಿನಗಳ ಅವಧಿಯು ಕಾರ್ತಿಕ ಬಹುಳ ೧೩ ಶಾ॥ ೩೬ ೧೧-೪೦ ನೇ ಮಂಗಳವಾರಕ್ಕೆ ಪೂರ್ತಿಯಾಗುವುದು ಅನುಷ್ಠಾನ ಸಮಾಪ್ತಿಯ ಶಾಂತಿ ಮಂಗಳ ಮಹೋತ್ಸವವು ಕಾರ್ತಿಕ ಬಹುಳ ಅಮಾವಾಸ್ಯೆ ಶಾ॥ ೩೪-೧೧-೪೦ ನೇ ಶುಕ್ರವಾರ ದಿವಸ ಕೆಳಗೆ ಕಾಣಿಸಿರುವ ಕಾರ್ಯಕ್ರಮದ ಪ್ರಕಾರ ನೆರವೇರುವುದು.

ಕಾರ್ಯಕ್ರಮ

ಶಾ॥ 29-11-1940 ಶುಕ್ರವಾರ ಪ್ರಾತಃಕಾಲ ೬ ರಿಂದ ೯ ಘಂಟೆಯವರೆಗೆ ಕ್ಷೇತ್ರನಾಥನಾದ ಶ್ರೀರೇಣಾಸಿದ್ಧೇಶ್ವರಸ್ವಾಮಿಗೆ ಶ್ರೀರುದ್ರಾಭಿಷೇಕ, ಸಹಸ್ರಬಿಲ್ವಾರ್ಚನೆ, ೧೧ ರ ವರೆಗೆ ಶ್ರೀ ಶಿವಯೋಗಿಗಳವರ ಪಾದ ಪೂಜೆ, ೧೨ ರ ವರೆಗೆ ಶ್ರೀರೇಣಾಸಿದ್ಧೇಶ್ವರಸ್ವಾಮಿಗೆ ಮಹಾಮಂಗಳಾರತಿ, ೧೨ ರಿಂದ ಅನ್ನಸಂತರ್ಪಣೆ. ೪ ರಿಂದ ೫॥ ವರೆಗೆ ಸಭೆಯುನೆರೆದಿರುವುದು.

"ಲೋಕ ಕಲ್ಯಾಣ" ವೆಂಬವಿಷಯದಲ್ಲಿ ಶ್ರೀ ಶಿವಯೋಗಿಗಳವರ ಉಪನ್ಯಾಸ,

ಶ್ರೀಮನ್ಮಹಾಪ್ರಭುಗಳವರ ಶ್ರೇಯಃಪ್ರಾರ್ಥನೆ,
ಮಂಳಾಡರಣಂ, ಸಮಾಪ್ತಿ.

ಈ ಪ್ರಕಾರವಾಗಿ ಕಾರ್ಯಗಳು ನೆರವೇರುವುದರಿಂದ ಗುರುಭಕ್ತರು ನಿಮಿತ್ತ ಕಾಲಕ್ಕೆ ಆಗಮಿಸಿ ಸೇವಾ ಭಾಗಿಗಳಾಗಿ, ಶ್ರೀಶಿವಯೋಗಿಗಳವರು ಶ್ರೀಮದ್ಗುರು ವೆಂಕಾಭ್ಯುದಯ ಪಕ್ಷಲ್ಯದಿಂದ ಕೈಕೊಂಡ ಕಾರ್ಯವನ್ನು ಸಾಂಗಗೊಳಿಸಿ ಯಶೋಭಾಜನರಾಗಬೇಕೆಂದು ಹಾರೈಸುತ್ತೇನೆ.

ಶ್ರೀ ರೇಣುಕಗಿರಿ. ಬೆಂಗಳೂರು ದೇಶದ ಶಿಷ್ಯರು,
ತಾ॥ 15-11 1940 ಯಜಮಾನರು.

ಶಿವ್ಯರ ಮನೆಗಳ ರಿಜಿಸ್ಟರ್ ಬುಕ್

ಭರತಖಂಡವಲ್ಲಾದುವ ರತ್ತಿಯೊಂದು ಗುರುವರ್ಗದ ಸುಕ್ಕೆ ಸಾಲರಾದು ಶಿಷ್ಯರ ಮನೆಗಳಿಲ್ಲುತ್ತಿದ್ದು, ಆ ಮಹಾಭಾಗರು ಏನಪಹರ್ಷಕ್ಕೋ ಹತ್ತು ವರ್ಷಕ್ಕೋ ಒಂದುಸಾರಿ ಹೋಗಿ ಶಿಷ್ಯರಿಂದ ಕಾಣಿಕೆಯನ್ನು ತೆಗೆದುಕೊಂಡು ಬರುತ್ತಿರುವರು ಆದರೆ ಇವರು ತಮ್ಮ ಕರ್ತವ್ಯಕ್ಷಯರಿಂದ ಶಿಷ್ಯರ ಜಾತಿಯ ವಿಷಯ ಗಳನ್ನು ಬರೆದುಕೊಳ್ಳದೆ ಕಾಣಿಕೆಯನ್ನು ಮಾತ್ರ ತೆಗೆದುಕೊಂಡು ಹೋಗಿಬಿಡುವರು. ಈ ಅವ್ಯವಸ್ಥೆಯಿಂದ ಅನೇಕ ಮತಪಥರಿಗೆ ತಮ್ಮ ಶಿಷ್ಯರ ಮನೆಗೇ ಗೊತ್ತಿಲ್ಲದೆ ಹೋಗಿವೆ. ಇದನ್ನು ತೊಡಪಾಡುವುದಕ್ಕೆಷ್ಟರ ಮೇಲ್ಪಂಡ ಶ್ರೇಷ್ಠವನ್ನು ಹೊಸ ರಾಗಿ ಪುಸ್ತಕಗೊಳಿಸಿದ್ದೇವೆ. ಇವರಲ್ಲಿ ಬರೆಯುವ ವಿಷಯಗಳ ವಿವರವು ಚೆನ್ನಾಗಿ ತೋಚಲ್ಪಟ್ಟಿದೆ ತದುದಿಂದ ಸದರಿ ಪುಸ್ತಕವನ್ನು ಶಿಷ್ಯರುಗಳ ಪ್ರತಿಯೊಬ್ಬ ಗುರುವರ್ಗದವರೂ ತರಿಸಿಕೊಂಡು ಆದರಲ್ಲಿರುವ ವಿಷಯಗಳನ್ನು ಬರೆಯಲಾರಂಭಿಸಿದಾಗ ಬಂದ ಹಣ್ಣು ಶಿಷ್ಯರನ್ನು ಇಹಪರಕ್ಕೆಳ್ಳಲೇಳಾ. ಇದಕ್ಕಾಗಿ ಎಂದೂ ಕೆಡದಂಥ ಇಗದಗಳನ್ನು ಪಡೆಯಲಿಸಿರುವಷ್ಟಲ್ಲದೆ ಸುಂದರವಾದ ಹುಟ್ಟು ಛಪ್ಪರವಾದ ಬೈಂಡನ್ನು ಇಡಾಗಿಸಿದೆ.

ಬೆಲೆ ೧ ರೂಪಾಯಿ

ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್,
ಮೈಸೂರು.

ವೈದಿಕ ಶಿವಪೂಜಾವಿಧಿ.

ವೀರಶೈವರಿಗೆ ಮುಖ್ಯವಾಗಿ ಬೇಕಾಗಿರುವ ಈ ಮೇಲ್ಕಂಡ ಗ್ರಂಥವು ವೆ॥ ಪಂ॥ ಶ್ರೀಕಾಶೀನಾಥಶಾಸ್ತ್ರಿಗಳವರಿಂದ ವೈದಿಕಸಂಪ್ರದಾಯಾನುಸಾರವಾಗಿ ವಿರಚಿತವಾಗಿದ್ದು, ಶ್ರೀ ಪಂಚಾಚಾರ್ಯ ವಿದ್ಯುನ್ಮುದ್ರಣಾಲಯದಲ್ಲಿ ಬಹು ಮುದ್ದಾಗಿ ಮುದ್ರಿತವಾಗಿದೆ. ಇಲ್ಲಿಯವರೆಗೆ ಅನೇಕ ಕಡೆಗೆ ಶಿವಪೂಜಾವಿಧಿಗಳು ಮುದ್ರಿಸಲ್ಪಟ್ಟಿವೆ. ಆದರೆ ಮುದ್ರಾಪಕರಿಗೆ ವೈದಿಕಸಂಪ್ರದಾಯವು ಗೊತ್ತಿಲ್ಲದಿರುವುದರಿಂದ ಅನೇಕ ಕಡೆಗೆ ಮಂತ್ರಗಳು ಅಶುದ್ಧವಾಗಿ ಬಿದ್ದಿವೆ! ಅನೇಕರು ಆ ಅಶುದ್ಧಮಂತ್ರಗಳನ್ನೇ ಪಠಿಸುತ್ತಿರುವರು. ಇದು ಅತ್ಯಂತ ವ್ಯಸನಕರವಾದ ವಿಷಯವಾಗಿದೆ. ಅಲ್ಲದೆ ವೇದಮಂತ್ರಗಳನ್ನು ವೈದಿಕ ಸ್ವರಸಹಿತವಾಗಿ ಉಚ್ಚರಿಸಬೇಕಲ್ಲದೆ ಸ್ವರಕೂನ್ಯವಾಗಿ ಉಚ್ಚರಿಸಬಾರದಮ್ಮೆ, ಇಲ್ಲಿಯವರೆಗೆ ಮುದ್ರಿತಗಳಾಗಿರುವ ಯಾವ ಶಿವಪೂಜಾವಿಧಿಯಲ್ಲಿಯೂ ವೇದಮಂತ್ರಗಳಾಗಲಿ, ಶ್ರೀರುದ್ರಾಧ್ಯಾಯ-ಚಮಕಾಧ್ಯಾಯ-ಪುರುಷಸೂಕ್ತಗಳಾಗಲಿ ವೈದಿಕಸ್ವರಗಳು ಹಾಕಲ್ಪಟ್ಟಿಲ್ಲ ಮತ್ತು ಪದವಿಭಾಗವೂ ಮಾಡಲ್ಪಟ್ಟಿಲ್ಲ-ಈ ಶಿವಪೂಜಾವಿಧಿಯಲ್ಲಿ ಈ ಕೊರತೆಯು ದೂರಮಾಡಲ್ಪಟ್ಟಿದೆ ಇದಕ್ಕಾಗಿ ಪಂಡಿತರು ಬಹು ಶ್ರಮವನ್ನು ವಹಿಸಿ ಋಗ್ವೇದ-ಯಜುರ್ವೇದಗಳನ್ನೆಲ್ಲ ಕೂಲಂಕಷವಾಗಿ ಸರಿತೀರಿಸಿ ವೀರಶೈವಪ್ರಕಾಶಿಕೆ ಮಹೋಪಕಾರವನ್ನು ಮಾಡಿದ್ದಾರೆ. ಈ ಪೂಜಾವಿಧಿಯಲ್ಲಿರುವ ವೈದಿಕಮಂತ್ರಗಳು ಯಾವ ವೇದದ ಯಾವ ಭಾಗದಲ್ಲಿರುವುದೆಂಬುದನ್ನು ಪಂಡಿತರು ವಿವರವಾಗಿ ತೋರಿಸಿದ್ದಾರೆ. ಪ್ರತ್ಯಕ್ಷವಾಗಿ ನೋಡಿದ ಮೇಲೆ ಈ ಗ್ರಂಥದ ಮಹತ್ವ ತಿಳಿಯಬರುವುದು. ಅಲ್ಲದೆ ಈ ಪೂಜಾವಿಧಿಯ ಅಂತ್ಯದಲ್ಲಿ—ಶಿವಸಹಸ್ರನಾಮಾವಳಿ, ಶಿವಾಷ್ಟೋತ್ತರಶತನಾಮಾವಳಿ, ಶಿವಕವಚ, ಪಾರ್ವತೀದೇವೀನಾಮಾವಳಿ, ವೀರಭದ್ರಶಾಮಾವಳಿ, ಭದ್ರಕಾಳೀದೇವೀನಾಮಾವಳಿ, ಷಣ್ಮುಖಸ್ವಾಮಿನಾಮಾವಳಿ, ಶ್ರೀ ಪಂಚಾಚಾರ್ಯರ ನಾಮಾವಳಿಗಳು, ನಾನಾವಿಧ ಶಿವಸ್ತೋತ್ರಗಳು, ನಾನಾವಿಧ ದೇವೀಸ್ತೋತ್ರಗಳು, ನಾನಾವಿಧ ಗುರುಸ್ತೋತ್ರಗಳು ಮುದ್ರಿಸಲ್ಪಟ್ಟಿವೆ. ಒಟ್ಟಿಗೆ ಈ ಶಿವಪೂಜಾವಿಧಿಯು ಸರ್ವಾಂಗಸುಂದರವಾಗಿದ್ದು ಸರ್ವತೋಮುಖವಾಗಿ ಸ್ತುತ್ಯವಾಗಿದೆ. ಆದುದರಿಂದ ಪ್ರತಿಯೊಬ್ಬ ವೀರಶೈವರೂ ಈ ಪೂಜಾವಿಧಿಯನ್ನು ತರಿಸಿಕೊಂಡು ಇದರಲ್ಲುಕ್ತವಾಗಿರುವಂತೆ ಶಿವಪೂಜೆಯನ್ನು ಮಾಡಿ ಧನ್ಯರಾಗಬೇಕೆಂದು ಕೋರಿಕೆ. ಬೆಲೆ ಗಿಪ ಆಣೆ. ವಿ. ಪಿ. ಚಾರ್ಜು ಪ್ರತ್ಯೇಕ.

ವ್ಯಾನೇಜರ್,
ಪಂಚಾಚಾರ್ಯಪ್ರಭಾ ಆಫೀಸ್, ಮೈಸೂರು.

ಶಿವಾದ್ವೈತಮಂಜರಿ.

ಈ ಗ್ರಂಥವು ವೀರಶೈವಮತಗ್ರಂಥಗಳಲ್ಲೆಲ್ಲ ಶಿಖಾರತ್ನದಂತೊಪ್ಪುತ್ತಿರುವುದು ಎಲ್ಲರಿಗೂ ತಿಳಿದ ವಿಷಯವಾಗಿದೆ ಈ ಗ್ರಂಥವನ್ನು ಕಾಶ್ಮೀರದೇಶದ ಸ್ವಪ್ರಧಾನಿಂದ ಶಿವಾಚಾರ್ಯರೆಂಬ ಪ್ರಾಚೀನಾಚಾರ್ಯರು ರಚಿಸಿದ್ದಾರೆ ಈ ಗ್ರಂಥದಲ್ಲಿ ಶಕ್ತಿವಿಶಿಷ್ಟಾದ್ವೈತಸಿದ್ಧಾಂತದ ರಹಸ್ಯವು ಬಹು ಹೃದಯಂಗಮವಾಗಿ ಪ್ರತಿಪಾದಿಸಲ್ಪಟ್ಟಿದೆ. ಈ ಗ್ರಂಥದ ಸರಣಿಯು ಬಹುಕರಿನವಿದ್ದುದರಿಂದ ಇದರ ರಹಸ್ಯವನ್ನು ತಿಳಿಯಲು ಪಂಡಿತಜನ ಗಳಿಗೂ ಕೂಡ ಅಸಾಧ್ಯವಾಗಿತ್ತು. ಈ ಕೊರತೆಯನ್ನು ದೂರಮಾಡಿ ಇದರ ರಹಸ್ಯವು ಪ್ರತಿಯೊಬ್ಬರಿಗೂ ತಿಳಿಯಲೆಂಬ ಸದುದ್ದೇಶದಿಂದ ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರು ಈ ಗ್ರಂಥಕ್ಕೆ ಬಹು ವಿಶಾಲವಾಗಿ ಕನ್ನಡ ಟೀಕೆಯನ್ನು ಬರೆಯಿಸಿದ್ದಾರೆ. ಈ ಮೂಲ ಗ್ರಂಥವು ಕೇವಲ ೩೮ ಪುಟಗಳಂದ ಕೂಡಿದ್ದರೂ ಇದಕ್ಕೆ ಕನ್ನಡ ಟೀಕೆಯು ೧೩೭೩ ಪುಟಗಳಷ್ಟಾಗಿದೆ ಈ ಮಹಾಗ್ರಂಥಮುದ್ರಣಕ್ಕಾಗಿ ಪಂಡಿತರು ವಿಶೇಷ ದ್ರವ್ಯವನ್ನು ವ್ಯಯಮಾಡಿದ್ದಾರೆ ಇಂಥ ದೊಡ್ಡಸಿದ್ಧಾಂತಗ್ರಂಥವು ಇಂದಿನವರೆಗೆ ಕನ್ನಡಭಾಷೆಯಲ್ಲಿ ಎಲ್ಲಿಯೂ ಮುದ್ರಿತವಾಗಿಲ್ಲವೆಂದು ಘಂಟಾಘೋಷವಾಗಿ ಹೇಳಬಹುದಾಗಿದೆ. ತಮ್ಮನ್ನಾಳಿದ **ಶ್ರೀಮನ್ಮಹಾರಾಜಾಧಿರಾಜ ಶ್ರೀ ಕೃಷ್ಣರಾಜ ಒಡೆಯರ್ ಬಹದ್ದೂರ್ ಮಹಾಪ್ರಭುಗಳವರು** ಈ ಗ್ರಂಥದ ಯೋಗ್ಯತೆಯನ್ನು ಕಂಡು ಡಿಡಿಕೇಷನ್ನಿಗೆ ಅವ್ಯಸೆಯನ್ನಿತ್ತಿರುವರಲ್ಲದೆ, ಈ ಗ್ರಂಥದಲ್ಲಿ ಏಯೋಜಿಸುವುದಕ್ಕೋಸ್ಕರ ತಮ್ಮ ಭವ್ಯವಾದ ಧಾವಚಿತ್ರವನ್ನು ಸಹ ದಯಪಾಲಿಸಿರುವರು. ಇದರಿಂದ ಈ ಗ್ರಂಥದ ಯೋಗ್ಯತೆಯು ಎಷ್ಟರಮಟ್ಟಿಗಿರಬೇಕೆಂಬ ವಿಷಯವನ್ನು ಬೇರೆ ಹೇಳಬೇಕಾಗಿಲ್ಲ. ಇಂಥ ಅಮೂಲ್ಯವಾದ ವೀರಶೈವಸಿದ್ಧಾಂತಗ್ರಂಥವನ್ನು ಪ್ರತಿಯೆಬ್ಬ ವೀರಶೈವರೂ ಅವಶ್ಯವಾಗಿ ತರಿಸಿಕೊಂಡು ಆದರಲ್ಲಿಗಿನ ಸಿದ್ಧಾಂತ ವಿಷಯಗಳನ್ನು ತಿಳಿದುಕೊಂಡು ಧನ್ಯರಾಗ ಬೇಕೆಂದು ಕೋರಿಕೆ. ಒಟ್ಟು ಈ ಮಹಾಗ್ರಂಥವು ೧೩೪೪ ಪುಟಗಳಿಂದ ಕೂಡಿದ್ದು ಒಳ್ಳೆ ಬೆಲೆಯುಳ್ಳ ಕಾಗದದಲ್ಲಿ ಮುದ್ರಿಸಲ್ಪಟ್ಟಿರುವದಲ್ಲದೆ ಬಹುಸುಂದರವಾದ ಬೈಂಡಿನಿಂದೊಡಗೂಡಿದೆ. ಪವಿತ್ರವಾದ ವೀರಶೈವ ಸಿದ್ಧಾಂತದಲ್ಲಿ ವಿಶ್ವಾಸವುಳ್ಳ ಪ್ರತಿಯೊಬ್ಬರೂ ದ್ರುವ್ಯನಕಡೆಗೆ ದೃಷ್ಟಿಯನ್ನಿಡದೆ ಈ ಗ್ರಂಥರತ್ನವನ್ನು ತರಿಸಿ ಕೊಂಡೇ ತೀರಬೇಕು. ಈ ಮಹಾಗ್ರಂಥದ ಬೆಲೆ ಆ ಪೂರ್ತಾಯಿ. ಒಂದುರೂಪಾಯಿಗೆ ನಾಲ್ಕಾಣೆಯಂತೆ ಕಮಿಷನ್ ವಜಾ ಹೋಗಲಾಗಿ ೬ ರೂ. ಗೆ ದೊರೆಯುವುದು. ವಿ. ಪಿ. ಚಾರ್ಜು ೧ ರೂ ೪ ಆಣೆ ಪ್ರತ್ಯೇಕ.

ವ್ಯಾನೇಜರ್—
ಪಂಚಾಚಾರ್ಯಪ್ರಭಾ ಆಫೀಸ್, ಮೈಸೂರು.

ಮನೋಹರವಾದ ಫೋಟೋಗಳು.

ಶ್ರೀ ರೇಣುಕಾರ್ಯರ ಒಂಭತ್ತು ಆವ್ಯತಲೀಲೆಗಳಿಂದ ಕೂಡಿದ ಫೋಟೋ ಸೈಜು ೨೦×೧೪ ಬೆಲೆ ೧ಕ್ಕೆ ೦—೩—೦

ಶ್ರೀ ರೇಣುಕಾದಿ ಪಂಚಾಚಾರ್ಯರು ಲೋಕಮಿಮ್ಮಾತರಾದ ಅಗಸ್ತ್ಯ, ತಥಿಷ್ಟ, ವ್ಯಾಸ, ಸಾತವನ, ಪೂರ್ವಾಸ ಮುನಿಶ್ರೇಷ್ಠರಿಗೆ ಶಿವಸಿದ್ಧಾಂತವನ್ನು ಪಡೆಸಿರುವ ಫೋಟೋ ಸೈಜು ೧೦×೧೪ ಬೆಲೆ ೦—೧—೬

ಸೂಚನೆ: ಪೀಠಾರೋಹಣವಾದಿಂದಿತ್ತಿಚೆ ಇವರು ಆಚಾರ್ಯರು ಒಂದಕ್ಕಿಂತಲೂ ಇವರ ಫೋಟೋ ಸೈಜು ೧೪×೧೦ ಬೆಲೆ ೧ಕ್ಕೆ ೦—೨—೬

ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೪×೧೦ ಬೆಲೆ ೧ಕ್ಕೆ ೦—೨—೬

ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೦×೮ ಬೆಲೆ ೧ಕ್ಕೆ ೦—೧—೬

ಶ್ರೀ ಜಗದ್ಗುರು ರುದ್ರಮುಖೀಶ್ವರ ಶಿವಾಚಾರ್ಯರು ಭೂಗರ್ಭದಿಂದ ಅವತರಿಸಿದ ಫೋಟೋ ೦—೦—೬

ಶ್ರೀ ರೇಣುಕಾಚಾರ್ಯರು ರುದ್ರಮುಖೀಶ್ವರ ಶಿವಾಚಾರ್ಯರಿಗೆ ಶಿಷ್ಟಾಧಿಕೇ ನೀಡುವ ಫೋಟೋ ೦—೦—೬

ಶ್ರೀ ರೇಣುಕಾಚಾರ್ಯರು ವಿಧೇಷಣಾ ಸ್ಯಾ ನಾನುಸಾರವಾಗಿ ಏಕಕಾಲಬಲ್ಲಿಯೇ ಮೂರುಕೋಟಿ ಗಿರಿಯೊಡೆಯನ್ನು ಧಾರಣೆಮಾಡಿ ಮೂರುಕೋಟಿ ಶಿವರ ಗಳನ್ನು ಪ್ರತಿಷ್ಠಿಸಿರುವ ಫೋಟೋ ೧ಕ್ಕೆ ೦—೦—೬

ಶ್ರೀ ರೇಣುಕಾಚಾರ್ಯರು ಶ್ರೀ ಶಂಕರಾಚಾರ್ಯರಿಗೆ ಚಂದ್ರಮೌಳೀಶ್ವರ ಲಿಂಗವನ್ನು ಅನುಗ್ರಹಿಸಿರುವ ಫೋಟೊ ೦—೦—೬

ಶ್ರೀಕಾಶೀಕ್ಷೇತ್ರವಿರಾಜಮಾನ ಶ್ರೀ ಜಗದ್ಗುರು ವಿಶ್ವಾರಾಧ್ಯರ ಮೂಲಲಿಂಗಸೀಗೆ ಪೋಟೋ ೦—೦—೬

ಶ್ರೀ ಇಕ್ಕೇರಿ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಪಂಚಾಕ್ಷರ ಶಿವಾಚಾರ್ಯರ ಫೋಟೋ ೦—೦—೬

ಶ್ರೀ ಜಗದ್ಗುರು ಪಂಚಾಚಾರ್ಯರ ಜನ್ಮಮಠ ಶಿವಾನಂದಶಿವಾಚಾರ್ಯ ಮಹಾಸ್ವಾಮಿಗಳವರ ಫೋಟೋ ೦—೦—೬

ಶ್ರೀ ಮುಮುಕ್ಷುಯೋಗಿ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀ ಕಾಶೀನಾಥಶಾಸ್ತ್ರಿಗಳವರು ಕುಳಿತ ಕೂ ರಿರುವ ಫೋಟೋ ೦—೦—೬

ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಫೋಟೋ ಬೆಲೆ ೧ಕ್ಕೆ ೦—೦—೬

ಶ್ರೀ ಜಗದ್ಗುರು ಉಜ್ಜಯಿನೀ ಸೀನಿನ ಮಹಾಪೀಠದ ಆತ್ಮಕ ಸುಂದರವಾದ ಫೋಟೋ ೧ಕ್ಕೆ ೦—೦—೬

ಶ್ರೀ ಜಗದ್ಗುರು ಉಜ್ಜಯಿನೀ ಸೀಠದ ಆತ್ಮಕ ಪ್ರಾಚೀನ ಕಟ್ಟಡದ ಸುಂದರ ಫೋಟೋ ೧ಕ್ಕೆ ೦—೦—೬

ಶ್ರೀ ಜಗದ್ಗುರು ಕೇದಾರಸಿಂಹಾಸನದ ಆತ್ಮಕ ಸುಂದರವಾದ ಗೋಪುರದ ಫೋಟೊ ೦—೦—೬

ಹಿಮುತರ್ವದ ಮಧ್ಯಪ್ರದೇಶದಲ್ಲಿರುವ ಶ್ರೀ ಕೇದಾರನಾಥಲಿಂಗವು ಮಾನವರ ಸುಂದರ ಫೋಟೋ ೦—೦—೬

ಶ್ರೀರಂಭಾಪುರೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀಮನ್ಮಹಾರಾಜರವರು ವಿರಾಜಿಸುತ್ತಿರುವ ಫೋಟೋ ೦—೦—೬

ಬೆಂಗಳೂರು ಕಂಟೋನ್ಮೆಂಟಿನಲ್ಲಿ ನೆನೆಸಲಿರುವ ರಂಭಾಪುರೀ ಜಗದ್ಗುರುಗಳ ಅದ್ಭುತವಾದ ಫೋಟೋ ೦—೦—೬

ಸೂಚನೆ—ಒಂಬು ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವುದಿಲ್ಲ. ೫ ರೂಪಾಯಿಗಳ ಮೇಲೆ ತಗಿಸಿಕೊಳ್ಳುವವರಿಗೂ, ಫೋಟೋ ವ್ಯಾಪಾರಿಗಳಿಗೂ ೧೦ ರೂಪಾಯಿಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವುದು.

ಮ್ಯಾನೇಜರ್—ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಡಾಕ್ಟರ್ ಜಿ. ಬಿ. ಯವರ

ಸುಗಂಧ ನಶ್ಯದಪುಡಿ

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದಪುಡಿಯು ಕಂಡುಹಿಡಿಯಲ್ಪಟ್ಟು, ಸಾರ್ವಭೌಮರುಗಳು ಇವನ್ನು ಉಪಯೋಗಿಸಿ ಸಾರ್ವಭೌಮಗಳಾಗಿ, ಯೋಗ್ಯತಾಪತ್ರಗಳನ್ನು ಕೊಟ್ಟಿರುವ ರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ:—ಪೀನಸ, ಒಂಟೆ ತಲೆನೋವು. ತಲೆಯ ಪ್ಲೀಯ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವವ್ಯಾಧಿಗಳು, ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವವಲ್ಲದೆ ಕಂಠಕ್ಕೆ ಮೇಲ್ಪಟ್ಟು ೯೩ ವ್ಯಾಧಿಗಳನ್ನು ಸ್ವಸ್ಥಪಡಿಸಿ ಜ್ಞಾಪಕಶಕ್ತಿಯನ್ನೂ ಸಹ ಹೆಚ್ಚು ಮಾಡುತ್ತದೆ. ಮೂರುಬಿಟ್ಟಿನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದಪುಡಿಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಮಾಡಿದರೆ ಎಲ್ಲವೂ ಪರಿಮಳವಾಗುವುದು. ಇದನ್ನು ಅನೇಕಶ್ರಭುಗಳು ಉಪಯೋಗಿಸುತ್ತಾರೆ ಮಾದರಿ ಸೀಸೆ ಫ್ರೀ. ಬುದ್ಧಿ ಒಂದಕ್ಕೆ ೪ ಆಣೆ. ಡಜನ್ ಒಂದಕ್ಕೆ ಕ್ರಯ ರೂ. ೨-೮-೦. ವಿ.ಪಿ. ೮ ಆಣೆ ನಿಮ್ಮ ಅಪ್ರೇಸ್ಸನ್ನು ತಿಳಿಯಂತೆ ಒರೆಯಿರಿ.

(Registered Trade Mark)



ಗುರುಬಸವ ಅಂಡ್ ಕಂಪೆನಿ ಲಿಮಿಟೆಡ್.

[29] ಫೋ. ಬಾ. ನಂ೧೦, ಮದರಾಸು.

ಸರ್ವೋತ್ತಮವಾದ ಮತಗ್ರಂಥಗಳು

ಸೋತ್ರಸೂತ್ರಸಟ್ಟು (೩ನೆಯ ಆವೃತ್ತಿ)	....	..	೧ ಆಣೆ
ಸಚ್ಯಾಶಾಸ್ತ್ರಮವಿಮರ್ಶ (೩ನೆಯ ಆವೃತ್ತಿ ಸಂಸ್ಕೃತ)	..		೧ ಆಣೆ
ಕಂಚಮಂಕಿತ ಪ್ರತ್ಯಕ್ಷಕಾಶ (೩ನೆಯ ಆವೃತ್ತಿ)	...		೧ ಆಣೆ
ಶ್ರೀಪಂಚಾಚಾರ್ಯ ಮಂಗಳಸ್ತೋತ್ರಾವಳಿ (೯ನೆಯ ಆವೃತ್ತಿ)	.		೧ ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ (೩ನೆಯ ಆವೃತ್ತಿ)			೧ ಆಣೆ
ಶ್ರೀಜಗದ್ಗುರು ಪಂಚಾಚಾರ್ಯರ ನಾಮಾವಳಿ (೩ನೆಯ ಆವೃತ್ತಿ)	..		೩ ಆಣೆ
ಭಸವಾದಿವಿಷಿತತ್ವದರ್ಪಣ (೪ನೆಯ ಆವೃತ್ತಿ)	....		೩ ಆಣೆ
ಶ್ರೀರೇಣುಕಾಚಾರ್ಯರಶತಕ (೩ನೆಯ ಆವೃತ್ತಿ)	....		೩ ಆಣೆ
ಪಂಚಾಚಾರ್ಯಪ್ರಭಾಧಾರ	....		೩ ಆಣೆ
ಶ್ರೀಗುರುತತ್ತ್ವಪದಗಳು	....	..	೩ ಆಣೆ
ಶ್ರೀರುದ್ರಮುಖಿಶಿವಾಚಾರ್ಯಶತಕ	.	....	೩ ಆಣೆ
ವೀರಶೈವಮತಮಿಮಾಂಸಾ	....	....	೩ ಆಣೆ
ವೀರಶೈವಾಚಾರವಿಧಿ (೩ ನೆಯ ಆವೃತ್ತಿ)	....	....	೩ ಆಣೆ
ಲಿಂಗಧಾರಣವಿಧಿ	....	....	೪ ಆಣೆ
ವಿವಾಹವಿಧಿ (೩ನೆಯ ಆವೃತ್ತಿ)	....	..	೪ ಆಣೆ
ಶ್ರೀಪತಿಪಂಡಿತಾರಾಧ್ಯರ ಕಾಲನಿರ್ಣಯ	....	....	೪ ಆಣೆ
ಸಚ್ಯಾಶಾಸ್ತ್ರಮವಿಮರ್ಶತತ್ತ್ವಸ್ಥಿರೀಕರಣ (೩ನೆಯ ಆವೃತ್ತಿ)		....	೬ ಆಣೆ
ಸಿದ್ಧಾಂತ ಶಿಖಾಮಣಿ (ಮೂಲಮಾತ್ರ. ಬಕ್ಕಸೈಜು)		....	೬ ಆಣೆ
ವೀರಶೈವಮಹಾತ್ಮರು	....	....	೮ ಆಣೆ
ಭಸವಧ್ಯಾನತದಿವಾಕರ (೩ನೆಯ ಆವೃತ್ತಿ)	....	....	೮ ಆಣೆ
ಶಿವಾದ್ವೈತಪರಭಾಷಾ (ಗದ್ಯಕೃತ)	..	....	೮ ಆಣೆ
ಪಂಡಿತ ಶ್ರೀನಾಶೀನಾಥಶಾಸ್ತ್ರುಲವಾರಿ ಧಾಪಜಸು (ತೆಲುಗು)			೮ ಆಣೆ
ಪಮ್ಯೋಧರಶ್ಯತ್ಯಾವಳಿ	....	....	೮ ಆಣೆ
ವೈದಿಕಶಿವಪೂಜಾವಿಧಿ (ವೈದಿಕಸ್ವರಯುಕ್ತವಾದ ಅತ್ಯಂತ ಸುಂದರಮುದ್ರಣ)			೧೨ ಆಣೆ
ಸಿದ್ಧಾಂತಸಾರಾವಳಿ (ಶ್ರೀಮೋಜನತಿವಾಚಾರ್ಯಕೃತ)		....	೧೩ ಆಣೆ
ಶ್ರೀಜಗದ್ಗುರು ಪಂಚಾಚಾರ್ಯ ಸ್ತೋತ್ರರತ್ನಾಕರ	....	....	೧೩ ಆಣೆ
ಮಾಹೇಶ್ವರ ದೀಕ್ಷಾವಿಧಿ (೩ನೆಯ ಆವೃತ್ತಿ)	...	...	೧೨ ಆಣೆ
ಶಿವಾಸೂತ್ರಸಿದ್ಧಾಂತದರ್ಪಣ	....	....	೧೩ ಆಣೆ
ಶ್ರೀಕರಭಾಷ್ಯಂ (ಚುಟುಕ್ಷ್ಯಾಕ್ಷ್ಯ)	...	....	೧ ರೂ.
ಸಚಿತ್ರ ರೇಣುಕವಿಜಯ (೩ನೆಯ ಆವೃತ್ತಿ)	..	....	೧ ರೂ
ವೀರಶೈವರತ್ನ (೩ನೆಯ ಆವೃತ್ತಿ, ೪೦ಮಹತ್ವವಪೂರ್ಣ ಪೋಟೋಗಳುಪೇತ)		...	೧೫ ರೂ.
ಸಿದ್ಧಾಂತತತ್ತಿಯೋಪನಿಷತ್ (ಸಂಸ್ಕೃತ ಟೀಕಾಸಹಿತ)		..	೧ ರೂ.
ತೇನೋಪನಿಷತ್ (ಸಂಸ್ಕೃತ ಟೀಕಾಸಹಿತ)	..	....	೧ ರೂ.
ರೇಣುಕವಿಜಯ ಮಹಾಪುರಾಣ (ಸಂಸ್ಕೃತ ಭಾಷಾಂತರಸಹಿತ)		....	೧ ರೂ.
ಸಿದ್ಧಾ ಕಶಿಖಾಮಣಿ (ಸಂಸ್ಕೃತ ಟೀಕಾಸಹಿತ)	..	...	೨ ರೂ.
ವೀರಶೈವಸಿದ್ಧಾಂತಸುಧಾಕರ	....	....	೨ ರೂ.
ಶಿವಾದ್ವೈತಮಂಜರಿ (ಕನ್ನಡವ್ಯಾಖ್ಯಾನ ೧೩೮೪ ಪುಟ)	....	....	೮ ರೂ.
A brief life sketch of Pandit Sri Kashinatha Shastriji (*English*)			**4 As.**
The Philosophical Aspect of Virasaivism (*English*)	...		**8 As.**
Speeches by Pandit Sbri Kashinatha Shastriji *Englisb*)			**12 As.**
ವೀರಶೈವರತ್ನ (ಮರಾಠಿ)	..	...	**೧ ರೂ.**
ಮಹಾನಾರಾಯಣೋಪನಿಷತ್ (ಸೀರಿಕಾಖ್ಯಾ-ಸಂಸ್ಕೃತ)		..	**೧ ರೂ.**
ವೀರಶೈವೇಶ್ವರೋಶ್ವರ (ಸಂಸ್ಕೃತ)	..	...	**೧ ರೂ.**
ನಂದಿಕೇಶ್ವರಕಾರಿಕಾ (ಸಂಸ್ಕೃತ)		...	**೨ ಆಣೆ.**
ಲಿಂಗಧಾರಣಚಂದ್ರಿಕಾ (ಸಂಸ್ಕೃತ)	...	...	**೩ ರೂ.**

೧ ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವುದಿಲ್ಲ. ೫ ರೂ. ಗಳಿಗೆ ಮೇಲ್ಪಟ್ಟು ಪುಸ್ತಕಗಳನ್ನು ತರಿಸಿಕೊಳ್ಳುವವರಿಗೂ ಪುಸ್ತಕ ವ್ಯಾಪಾರಿಗಳಿಗೂ ೧೦ ರೂ. ಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವುದು.

ಮ್ಯಾನೇಜರ್—ಶ್ರೀಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಮೈಸೂರು ಸಯ್ಯಾಜಿರಾವ್ ರೋಡಿನಲ್ಲಿರುವ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಸಂಪಾದಕರಾದ ವೇದ ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರಿಂದ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED No. M. 2266 ॥ ಶ್ರೀಜಗದ್ಗುರು ಪಂಚಾಚಾರ್ಯಾಭ್ಯಾಂ ಪ್ರಸೀದಂತು ॥ REGISTERED No. M. 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿತರ್ ಪಂಚಾಸ್ಯಪೀಠಾಧಿಪರ್ । ಪಂಚಕ್ಲೇಶವಿನಾಶಕರ್ ಪರತರಶ್ರೀಪಂಚಲಿಂಗೋದ್ಭವರ್ ॥
ಪಂಚಾಚಾರಪರಾಯಣಾಮಕರ್ ಪರಿಲಸತ್ಪಂಚಾಕ್ಷರೀಮೋಧಕರ್ । ಪಂಚಾಚಾರ್ಯಜಗನ್ಮರೂತ್ಪುಮರವರ್ ಪಾಲಿಪ್ಪುದೀಲೋಕಮಂ ॥

ಶ್ಯಳದವರಿಗೆ ೧ ರೂ. ೧೧ ಆಣೆ. ಬಿಡಿ ಪ್ರತಿ ೧೯ಕ್ಕೆ ೬ ಪೈ. ಪರಸ್ಯಳದವರಿಗೆ ೨ ರೂ. ೮ ಆಣೆ. ವಿ. ಪಿ. ಚಾರ್ಜು ಪ್ರತ್ಯೇಕ.

ಸಂಪುಟ ೧೪.] ಪಂಚಾಚಾರ್ಯಪ್ರಭಾ, ಸೋಮವಾರ ತಾ॥ ೨೧ನೇ ಡಿಸೆಂಬರ್ ೧೯೪೦ [ಸಂಚಿಕೆ ೩೦

ಶ್ರೀಸುದ್ರಂಥಾಪುರೀ ಜಗದ್ಗುರುಗಳವರ ಸಂಚಾರ

ಶ್ರೀಮದ್ರಂಭಾಪುರೀ ವೀರಸಿಂಹಾಸನಾಧೀಶ್ವರ ಶ್ರೀ ೧೦೮ ಜಗದ್ಗುರು ಶಿವಾನಂದರಾಜೇಂದ್ರ ಶಿವಾಚಾರ್ಯ ಮಹಾಸ್ವಾಮಿಗಳವರು ಕೊಳ್ಳೇಗಾಲ ತಾಲ್ಲೂಕು ತಿಂಗಳ್ಳೂರು ಗ್ರಾಮದ ವೀರಶೈವ ಮಂಡಳಿಯವರು ಪ್ರಾರ್ಥಿಸಿಕೊಂಡ ಮೇರೆಗೆ ಅಲ್ಲಿಗೆ ದಯಮಾಡಿಸಿದರು ತಾ॥ ೧೧-೧೧-೪೦ ನೇ ಭಾನುವಾರ ಪ್ರಾತಃಕಾಲ ೧೦ ಘಂಟೆಗೆ ಪಂಚಕಲಶಸಿಂಹಲಲಾಟ ಸಹಿತ ಸುವರ್ಣ ರಜತಮಯ ತಿರ್ಯಗ್ಗಾಂಬೋಲಿಕಾ (ಅಡ್ಡಪಲ್ಲಕ್ಕಿ) ಮಹೋತ್ಸವವು ಅತಿ ವಿಜೃಂಭಣೆಯಿಂದ ಜರುಗಿತು. ನಾಲ್ಕಾರು ಸಾವಿರ ಜನಗಳು ನೆರೆದಿದ್ದರು. ಅಜ್ಜಿಪುರ, ಹನೂರು, ಬಂಡಳ್ಳಿ, ಕಾಮಗೆರೆ, ಮಂಗಲ, ಕಣ್ಣೂರು, ಅನಪುರ ಮೊದಲಾದ ೧೦-೨೦ ಗ್ರಾಮಗಳಿಂದ ಜನರು ತಂಡತಂಡವಾಗಿ ಬಂದಿದ್ದರು. ಮಿ॥ ಶೆಟ್ಟಿ ಚೆನ್ನಬಸಪ್ಪ ನವರು ಮಿ॥ ದೊಡ್ಡಮಹಂತಪ್ಪನವರು ಊದಲಾದವರ ಮನೆಗಳಲ್ಲಿ ಪಾದಪೂಜಾದಿಗಳು ನೆರವೇರಿದವು. ಭಕ್ತಾದಿಗಳು ಕಾಣಿಕೆಗಳನ್ನು ಭಕ್ತಿಪೂರ್ವಕವಾಗಿ ಒಪ್ಪಿಸಿದರು.

೧೩ ನೆಯ ತಾರೀಖಿನ ದಿವಸ ಹನೂರು ಗ್ರಾಮಕ್ಕೆ ದಯಮಾಡಿಸಿದರು. ಅಶ್ವಪಲ್ಲಕ್ಕಿ ಮಹೋತ್ಸವವು ವೈಭವದಿಂದ ನೆರವೇರಿತು. ನಾಲ್ಕಾರು ಸಾವಿರ ಜನರು ನೆರೆದಿದ್ದರು. ವೈಶ್ಯರು, ವೀರಶೈವರು, ಮಹನೀಯರು, ಹಾಲುಮತದವರು ಮೊದಲಾದವರು ಕಪ್ಪು ಕಾಣಿಕೆಗಳನ್ನು ಒಪ್ಪಿಸಿದರು. ತಾ॥ ೧೩-೧೧-೪೦ ರಲ್ಲಿ ಅಜ್ಜಿಪುರಕ್ಕೆ ದಯಮಾಡಿಸಿದರು ಮಹೋತ್ಸವಕ್ಕೆ ನಾಲ್ಕಾರು ಸಾವಿರ ಜನರು ಬಂದಿದ್ದರು. ಸಾಹುಕಾರ್ ನಂಜಪ್ಪನರು, ಸುಬ್ಬಣ್ಣನವರು, ಪುಟ್ಟಸ್ವಾಮಪ್ಪನವರು, ರುದ್ರಪ್ಪನವರು, ಗುರುಬಸಪ್ಪನವರು ಮೊದಲಾದ ಯವರು ಬಹಳ ಭಕ್ತಿಯಿಂದ ಬಿಜಯಮಾಡಿಸಿಕೊಂಡು ಹೋಗಿ ಪೂಜಾದಿಗಳನ್ನು ಮಾಡಿದರು

ತಾ॥ ೨೫-೧೧-೪೦ ರಲ್ಲಿ ಕಾಮಗೆರೆಗೆ ವಿಶೇಷ ವೈಭವದೊಡನೆ ದಯಮಾಡಿಸಿದರು. ಅಲ್ಲಿಯ ಭಕ್ತಾದಿಗಳು ವಿಶೇಷ ಭಕ್ತಿಯಿಂದ ಕಾಣಿಕಾದಿಗಳನ್ನು ಸಮರ್ಪಿಸಿದರು. ಶ್ರೀಜಗದ್ಗುರುಗಳವರು ಇನ್ನೂ ಕೆಲವು ದಿವಸ ಇದೇ ವ್ಯಾಂತ್ಯನಲ್ಲಿಯೇ ಶಿಷ್ಯೋದ್ಧಾರಕ್ಕಾಗಿ ಸಂಚರಿಸುವವರಾಗಿದ್ದಾರೆ.

ಬಿ. ಮಹಾದೇವಪ್ರಸಾದ

ಶ್ರೀಜಗದ್ಗುರು ಪಂಚಾಚಾರ್ಯೇಭ್ಯೋ ನಮಃ

ಹಂಪಿಹರಪ್ಪನಹಳ್ಳಿಯ ವರ್ತಮಾನ

ಮಹಿಪಾಲಪ್ಪ ಭಾಗದಲ್ಲಿಲ್ಲಾ ಗುರುವರ್ಯಸಿಂಹಕಂದು ಅತ್ಯಂತ ಮ್ಯಾತಿಯನ್ನು ಪಡೆದಿರುವ ಪೂ॥ ಬ್ರ॥ ೧೦೮ ಜಗದ್ಗುರುಗಳಿವಾಚಾರ್ಯ ಪರಂಪರೆಗೆ ಇವರ ಪಟ್ಟ ಕ್ಕೆ ಸ್ವೀಕೃತರಾಗಿ ತಾ॥ ೨೪-೧೧-೪೦ ನೇ ದಿವಸ ಪೂ॥ ಪೂ॥ ಬ್ರ॥ ಚೆನ್ನವೀರಶಿವಾಚಾರ್ಯರು ಬೃಹನ್ಮಠಾ ಧ್ಯಕ್ಷ ಹೋಗಿ ಇವರ ಅಧ್ಯಕ್ಷತೆಯಲ್ಲಿ ಸಭೆಸೇರಿ, ಭಾದಲೆ ವಕೀಲರು ಮಾನಪತ್ರವನ್ನು ಓದಿ ಅಧ್ಯಕ್ಷರ ಹಸ್ತದಿಂದ ಆರ್ಪಿಸಿದರು. ಕಾರ್ಯಧುರಂಧರ ಶ್ರೀ ಶಂಕರರಾವ ಕಟೋಪ ಇವರು ಪರಂಡಕರ ಶ್ರೀಗಳವರ ಚರಿತ್ರವನ್ನು ಚೆನ್ನಾಗಿ ಹೇಳಿದರು ಆಭಿನವಕಾಳಿದಾ, ವ್ಯಾಖ್ಯಾನಕೇಸರಿ ಇತ್ಯಾದಿ ಪದವೀವಿಭೂಷಿತೆಯ ರಾದ ಸೌ॥ ಭಾಗೀರಥೀದೇವಿ ಕಟೋಪ ಸೊಲ್ಲಾಪುರ ಈ ಮಾತೃಶ್ರೀಯವರು, ಬುಂಬರಕರಶಾಸ್ತ್ರಿ, ಗಂಡಾಳೆ ಶಾಸ್ತ್ರಿ, ಕೃಣಾಳಕರವಕೀಲ, ಮುಧೋಳಕರ್‌ವಕೀಲ, ಮುಂತಾದವರು ಭಾಷಣಗಳಾಗಿ ಅಧ್ಯಕ್ಷರ ಭಾಷಣವು ನೆರವೇರಿ ಆತ್ಯಾನಂದದಿಂದ ಕಾರ್ಯಕ್ರಮವು ಪೂರ್ತಿಗೊಂಡಿತು

ಮಾರನೇ ದಿವಸ ವರ್ಷಾಶ್ರಮಸಂಘ ಶಾಖಾ ಪಂಢರಪುರ ಇವರ ಆಗ್ರಹದ ಮೇರೆಗೆ, ಸೌ॥ ಭಾಗೀರಥೀ ದೇವಿ ಕಟೋಪ, ಶ್ರೀ॥ ಪೂ॥ ಬ್ರ॥ ಜೈನಾಪುರ ಶ್ರೀಗಳೂ, ಪರಾಂಡಕರ ಶ್ರೀಗಳೂ, ಹೋಟಗಿ ಶ್ರೀಗಳೂ, "ಧಾರ್ಮಿಕೈಕ್ಯತಿ ವಿಷಯಕ್ಕೆ ಅತ್ಯುತ್ತಮ ಭಾಷಣಗಳನ್ನು ಮಾಡಿದರು ಶಂಕರರಾವ ಕಟೋಪ, ಕಲ್ಲಯ್ಯ ಸ್ವಾಮಿ ಇವರು ಸರ್ವರ ಪರಿಚಯ ಮಾಡಿಕೊಟ್ಟರು. ಸಭೆಗೆ ಕೇವಲ ಪಂಡಿತಮಂಡಲಿಯೇ ಆಗಮಿಸಿತ್ತಿಂದರೆ ಅತ್ಯುತ್ತಿಯಲ್ಲ ಸೌ॥ ಭಾಗೀರಥೀದೇವಿಯವರ ಭಾಷಣವು ಎಂತಹ ಸುಧಾರಕನನ್ನಾದರೂ ಸನಾತನಿಯನ್ನಾಗಿ ಮಾಡದೇಬಿಡುವುದಿಲ್ಲೆಂಬ ಉದ್ಗಾರವು ಆ ವೈಷ್ಣವ, ಸ್ಮಾರ್ತ ಪಂಡಿತರ ಮುಖದಿಂದ ಹೊರಡದೇ ಉಳಿಯಲಿಲ್ಲ. ಇದಲ್ಲವೇ ಗುರುಭಕ್ತಿಯ ಪ್ರಭಾವ!

ಕಲ್ಲಯ್ಯಸ್ವಾಮಿ, ಕಾಸೇಗಾಂವಕರ್,
ಪಂಢರಪುರ

ಪರಾಂಡಕರ್ ಸ್ವಾಮಿಗಳವರಿಗೆ ಸಮ್ಮಾನ ಸಮಾರಂಭ.

ಸೊಲ್ಲಾಪುರ ತಿ॥ ಬಾರ್ಸಿ ಟವ್ನಿನಲ್ಲಿರುವ ವೀರ ಶೈವಸರ್ವನ ಪತ್ರಿಕೆಯ ಸಂಪಾದಕರಾದ ಶ್ರೀ ರಾಜಲಿಂಗಸ್ವಾಮಿಗಳು ಪರಾಂಡಕರ್‌ಮಠ ಈ ಮಹಕ್ಷೇಯ ರಿಗೆ 60 ವರ್ಷಗಳು ಪೂರ್ತಿಯಾದ ಸಂತೋಷಕ್ಕಾಗಿ ಇಲ್ಲಿಯ ಸುಪ್ರಸಿದ್ಧ ಮುಂಡಾಳುಗಳೂ ಮುನಿಸಿಪಾಲಿಟಿಯ ಉಪಾಧ್ಯಕ್ಷರೂ ಆದ ಶ್ರೀಮಾನ್ ಶಿವಬಾಳಪ್ಪ ದೇಶಮುಖ ಇವರ ಅಧ್ಯಕ್ಷತೆಯಲ್ಲಿ ಮಲ್ಲಿಕಾರ್ಜುನ ದೇವಸ್ಥಾನದೊಳಗೆ ಕಳೆದ ತಿಂಗಳು 22 ನೆಯ ತಾರೀ ಖಿನ ದಿವಸ ಸಭೆ ಸೇರಿತು. ಶ್ರೀಮಾನ್ ಜುಂಝು ವಕೀಲರು ಮಾನಪತ್ರವನ್ನೋದಿ ಸರ್ವರ ವತಿಯಿಂದ ಸಮರ್ಪಿಸಿದರು. 108 ರೂಪಾಯಿಗಳ ಕಾಣಿಕೆಯೂ ಸಹ ಸಮರ್ಪಿಸಲ್ಪಟ್ಟಿತು.

ಶ್ರೀಚೆನ್ನವೀರಶಿವಾಚಾರ್ಯಸ್ವಾಮಿಗಳು ಹೋಟಗಿ, ಶ್ರೀ ಧರ್ಮಾನಂದೀಶರು ಸೋಲಾಪುರ ಡಿಸ್ಟ್ರಿಕ್ಟ್ ಸ್ಕೂಲ್ ಬೋರ್ಡ್ ಚೇರ್ಮನ್, ಶ್ರೀಶಂಕರ ಬಾಬೂರಾವ್ ಕಟೋಪ ಫಂಢರಪುರ, ಪಂಡಿತ ಶ್ರೀ ಜಗದೀಶ ಶಾಸ್ತ್ರಿಗಳು, ಪಂಡಿತ ಶ್ರೀ ಮಲ್ಲಿಕಾರ್ಜುನಶಾಸ್ತ್ರಿಗಳು, ಸೌ॥ ಭಾಗೀರಥೀಬಾಯಿ ಕಟೋಪ್, ಶ್ರೀಮತಿ ಗುರವ್ವ ಬಾಯಿ ಮೊದಲಾದವರು ಭಾಷಣ ಮೂಲಕ ವಾಗಿ ಶ್ರೀ ಸ್ವಾಮಿಗಳವರ ಗುಣಗಾನ ಮಾಡಿದರು. ಪರಾಂಡಕರ್ ಶ್ರೀಗಳವರ ಭಾಷಣದಾನಂತರ ಜಗದಾಚಾರ್ಯರ ಜಯಘೋಷದೊಡನೆ ಕಾರ್ಯಕ್ರಮವು ಪೂರ್ತಿಗೊಂಡಿತು.

ಪ್ರತ್ಯಕ್ಷದರ್ಶಿ.

ಸ್ವೀಕಾರ.

ನಿಜಾಂಸ್ಟೇಟಿನಲ್ಲಿ ಅತ್ಯಂತಪ್ರಸಿದ್ಧವಾಗಿರುವ ಮಾನೂರು ಸಂಸ್ಥಾನವುದಕ್ಕೆ ಪಟ್ಟಾಧಿಕಾರವಾದ ಸಮಯದಲ್ಲಿ ಪ್ರಭಾಪೂಷಪಣಕ್ಕಾಗಿಸ್ಥರ ತೆಗೆಯಿಸಿದ 5 ರೂಪಾಯಿಗಳು ಬಾಸಿಲ ಪರಾಂಡಕರ್‌ಮಠದ ಶ್ರೀಪಟ್ಟದ ಸ್ವಾಮಿಗಳವರ ದ್ವಾರಾ ತಲ್ಪಿರುತ್ತವೆ

ನಿಜಾಪುರ ತಿ॥ ಜೈನಾಪುರ ಗ್ರಾಮವಲ್ಲಿರುವ ಸು॥ ರಾ॥ ನಿಲ್ಲಯಾಪ್ಪ ಶಿವಪ್ಪ ದೇಸಾಯಿಯವರ ಗೃಹದಲ್ಲಿ ಗೌರೀಮಹೋತ್ಸವವು ನೆರವೇರಿದ ಸಮಯ ದಲ್ಲಿ ಸದರಿಯವರು ಸ್ವತ್ಯ ಗುರುಗಳ ಅಜ್ಜಿಯಮೇರೆಗೆ ಪ್ರಭಾಪೂಷಣಕ್ಕೋಸ್ಕರ 1 ರೂ. ಯನ್ನು ತೆಗೆಯಿಸಿ ಕಳುಹಿಸಿರುತ್ತಾರೆ.

ಈ ಸೀಲ್ಡಂಡ ಮಹಾಶಯರಿಗೆಲ್ಲಾ ಶ್ರೀ ಜಗದ್ಗುರು ಪಂಚಾಚಾರ್ಯರು ಸಿತ್ಯಮಂಗಲವನ್ನೀಯಲೆಂದು ಹಾರೈಸುತ್ತೇನೆ.

ನಾರ್ವೆಯಲ್ಲಿ ಜರ್ಮನರಿಗೆ ತೊಂದರೆ.

ಪಶ್ಚಿಮನಾರ್ವೆಯಲ್ಲಿ ಸ್ವದೇಭೀಕಾಭಿಮಾನದಿಂದ ಕೂಡಿದ ನಾರ್ವಿಜಿಯನ್ನರು ಜರ್ಮನರಿಗೆ ತಮ್ಮ ಸ್ವೆಲಾದಮಟ್ಟಿಗೆ ತೊಂದರೆಗಳನ್ನು ಕೊಡಹತ್ತಿದ್ದಾರೆ. ಕಳೆದವಾರ ರಾತ್ರಿ ವಾರ್ತಾಸಂಕಗಳಲ್ಲಾ ಶತ್ರು ರಿಗೆ ಹಾಕಿದ್ದರು. ಎಲ್ಲಿಹೆಯೂ ಸೈನಿಕರು ಕಾದುಕುಳಿತಿರಬೇಕಾಗಿದೆ. ಓಸ್ಲೋದಿಂದ ಇದಕ್ಕಾಗಿ ಹೆಚ್ಚು ಸೈನಿಕರನ್ನು ಕಳುಹಿಸಿಕೊಡಬೇಕಾಗಿದೆ. ಓಸ್ಲೊ-ಬರ್ಗೆನ್ ರೈಲ್ವೆ ಲೈನು ಹೆತ್ತು ಕಡೆಗಳಲ್ಲಿ ನಾತಮಾಡಲ್ಪಟ್ಟಿದೆ.

ಕ್ರಿಸ್‌ಮಸ್ ಕಾಲದಲ್ಲಿ ಯುದ್ಧ ನಿಲ್ಲುವದಿಲ್ಲ

ಕ್ರಿಸ್‌ಮಸ್ ಹಬ್ಬದ ಕಾಲದಲ್ಲಿ ಯುದ್ಧವನ್ನು ನಿಲ್ಲಿಸಬೇಕೆಂದು ಬರುವ ಸೂಚನೆಗಳಿಗೆ ಬ್ರಿಟಿಷ್ ಸರ್ಕಾರವು ಒಪ್ಪುವದಿಲ್ಲವೆಂದು ಬ್ರಿಟಿಷ್ ಮಹಾಪ್ರಧಾನರು ತಿಳುಹಿಸಿದ್ದಾರೆ ಕ್ರಿಸ್‌ಮಸ್ ಕಾಲದಲ್ಲಿ 48 ಘಂಟೆಗಳ ಕಾಲ ಯುದ್ಧವನ್ನು ನಿಲ್ಲಿಸಬೇಕೆಂದು ಪೋಪರಮೂಲಕ ಸಲಹೆಬಂದಾಗ್ಯೂ ಅದನ್ನು ಸಹ ತಿರಸ್ಕರಿಸಲಾಗಿದೆ ಕಾಮನ್ಸ್‌ಸಭೆಯಲ್ಲಿ ತಿಳಿಸಲಾಯಿತು.

"ವೀರಶೈವ ವಾಙ್ಮಯಾವತಾರವನ್ನು" ಕುರಿತು

ಲೇಖಕರು—ವಿದ್ವಾನ್‌ವಿ ಜಿದರಿಮಠದ ಪಂಡಿತ
ವೀರಭದ್ರಶಾಸ್ತ್ರಿಗಳು ಸಿಕಂದರಾಬಾದ್.

"ಶ್ರುತಿಬ್ರಹ್ಮಕರ್ನಾಟಕ'ದ ಗತಸಂಚಿಕೆಯಲ್ಲಿ ಶ್ರೀಮಾನ್ ಸಿ ನಾರಾಯಣರಾಯ, ಎಂ. ಎ, ಪಿ ಎಚ್‌ಡಿ ಅವರ "ವೀರಶೈವ ವಾಙ್ಮಯಾವತಾರ" ವೆಂಬ ಭಾಷಣವನ್ನು ಪ್ರಕಟಿಸಲಾಗಿದೆ. ಅವರಲ್ಲಿರುವ ಆನೇಕ ವಿಧಾನಗಳು ತರ್ಕಶುದ್ಧವಾಗಿಲ್ಲದುದರಿಂದ ಅವುಗಳ ಬಗ್ಗೆ ನನ್ನ ಅಭಿಪ್ರಾಯವನ್ನು ಪ್ರಕಟಿಸುತ್ತಿರುವೆನು

".... ...ವೀರಶೈವ ಮತಕ್ಕೆ ಪ್ರಮಾಣವೆಂದು ಹೇಳಲ್ಬಡುವ 'ಶೈವಸಿದ್ಧಾಂತ ಶಿಖಾಮಣಿ' ಎಂಬ ಗ್ರಂಥದಲ್ಲಿ ಬರೆಯಲ್ಪಟ್ಟಿದೆ. ಈ ಗ್ರಂಥವು ಈಚೆಗೆ ಬಂದಿರುವ ವೀರಶಾಂಧಿಕ್ಯನ ಪೌತ್ರನೂ ಸಿದ್ಧೇಶ್ವರ ಪುತ್ರನೂ ಆದ ರೇವಣಾರಾಧ್ಯನೆಂಬನು ರಣಂಕಕ್ಕೆತ್ತರಿಧಿಕ್ಕೆ ಟೀಕಾರೂಪವಾಗಿ ರಚಿಸಿದ್ದಾನೆ' ಎಂಬುದು ರಾಯರ ಮೊದಲಿನ ವಿಧಾನವಾಗಿದೆ ಇದು ತುಂಬಾ ಪ್ರಾಮಾಣಿಕವಾಗಿದೆ ವೀರಶೈವವನ್ನು ಶೈವವೆಂದು ಸಾಮಾನ್ಯವಾಗಿ ಹೇಳಲಾಗುವುದಾದರೂ ಉದ್ದೇಶಪೂರ್ವಕವಾಗಿ ಶೈವವೆನ್ನಲಾಗದು ತೆಲುಗು ದೇಶದ 'ಆರಾಧ್ಯರು' ತಮ್ಮನ್ನು ಕೆಲವು ವೀರಶೈವ ಗ್ರಂಥಗಳನ್ನು 'ಶೈವ' ಶಬ್ದದಿಂದ ವ್ಯವಹರಿಸಿರುವುದು ಇದನ್ನು ನಿರೂಪಿಸಿದೆ ಆದರು ಪ್ರಕಟಿಸಿದ ಹಾಗೆ 'ಶೈವಸಿದ್ಧಾಂತ ಶಿಖಾಮಣಿ' ಎಂದು ಬರೆದಿದ್ದಾರೆ ಇದರ ರೂಢಿಗನುವು 'ಸಿದ್ಧಾಂತಶಿಖಾಮಣಿ'ಯೇ ಆಗಿದೆ ಗ್ರಂಥ ಕರ್ತನೇ ಪುಸ್ತಕದ ಅಂತ್ಯದಲ್ಲಿ "ಶ್ರೀವೇದಾಗಸವೀರ ಶೈವಪಂಡಿಂ. ಶ್ರೀಸಿದ್ಧಾಂತಶಿಖಾಮಣಿಂ" ಎಂಬ ಶ್ಲೋಕದಿಂದ ವೀರಶೈವಸಿದ್ಧಾಂತಶಿಖಾಮಣಿಯನ್ನು ಗಿಯೇ ಸ್ಪಷ್ಟಪಡಿಸಿದ್ದಾನೆ, ಶೈವವಲ್ಲ ಈ ಗ್ರಂಥವನ್ನು ಸಿದ್ಧಯ್ಯನ ನುಗಾದ ರೇವಣನು ರಚಿಸಿದ್ದಾನೆಂದು ಶ್ರೀ ನಾರಾಯಣರಾವ್ ಅವರಂತಹ ವಿದ್ವಾಂಸರು ಬರೆದಿದ್ದಾರೆಂಬುದು ನ್ಯಸನಕರವಾದ ವಿಷಯ ಗ್ರಂಥಾದಿಯ

"ಆಸೀದ್ ಶಿವಯೋಗೀತಿ ವಿದ್ಯುತಃ ।೧೩॥
ತಸ್ಯ ಪಾರೇ ಮಹತ್ತೇಜಃ ಭಿಧಾಸ್ಯಾಮಿ ।೧೪॥
ತಸ್ಯೈಸಿದ್ಧಂದನಃ ಸಿದ್ಧನಾಮಧೇಯ' ।೧೫॥
ತಸ್ಯ ನಂದನಃ ಆಭವಚ್ಛಿವಯೋಗೀತ ।೧೬॥

ನಾಮ್ನಾ ಪ್ರತೀಯತೇ ಲೋಕೇ ಯುಕ್ತ್ಯಾಕ್ತಿಜ್ಞಾಮಣಿ।೨೦॥

ಈ ಶ್ಲೋಕಗಳಿಂದ ಶಿವಯೋಗಿಯು ಪ್ರಪೌತ್ರನೂ ಮುದ್ದ ದೇವನ ಪೌತ್ರನೂ ಸಿದ್ಧನಾಥನ ಪುತ್ರನೂ ಆದ ಶಿವಯೋಗಿಶಿವಾಚಾರ್ಯನೇ **ಸಿದ್ಧಾಂತಶಿಖಾಮಣಿ** ಯನ್ನು ವಿರಚಿಸಿದ್ದಾನೆಂಬುದು ನಿರ್ವಿವಾದವಾಗಿದೆ ರಾಯರ ಪ್ರಮಾದಕ್ಕೆ ಕಾರಣನೇನೆಂದರೆ—ಯೇಲೂರಿನ ಶ್ರೀಮಲ್ಲಿಮಠದಲ್ಲಿ ಮಲ್ಲಿಕಾರ್ಜುನಶಾಸ್ತ್ರಿಗಳು ೧೮೯೭ ರಲ್ಲಿ ತೆಲುಗಕ್ಷರಗಳಿಂದ ಸಿದ್ಧಾಂತಶಿಖಾಮಣಿಯೊಂದನ್ನು ಮುದ್ರಿಸಿದ್ದಾರೆ ಅವರು ಸೋಸಲೆ ರೇವಣಾರಾಧ್ಯನ ಕನ್ನಡಟೀಕೆಯಿಂದ ಕೂಡಿದ ಸಂಸ್ಕೃತ ಪ್ರತಿಯನ್ನು ಆಧಾರವಾಗಿರಿಸಿಕೊಂಡು ತೆಲುಗುಪ್ರತಿಯನ್ನು ಸಿದ್ಧಗೊಳಿಸುವಾಗ ಕನ್ನಡ ಟೀಕೆಯನ್ನು ಬಿಟ್ಟುರೂ, ಸೊಸಲೆ ರೇವಣಾರಾಧ್ಯನ ಟೀಕೆಯು ಅದಿಯಲ್ಲಿರುವ ಕೆಲವು ಶ್ಲೋಕಗಳನ್ನು ಪ್ರಮಾದದಿಂದ ಮೂಲಸಿದ್ಧಾಂತಶಿಖಾಮಣಿಯು ಅದಿಯಲ್ಲಿ ಸೇರಿಸಿ ಮುದ್ರಿಸಿರುವರು. ಆದರೂ ಸಿದ್ಧಾಂತಶಿಖಾಮಣಿಗೆ ಟೀಕೆಯನ್ನು ರಚಿಸುತ್ತೇನೆಂತಲೇ ಆತನು ಹೇಳಿದನೆಲೇ ಹೊರತು ಸಿದ್ಧಾಂತಶಿಖಾಮಣಿಯನ್ನು ಆತನೇ ರಚಿಸಿರಬಹುದೆಂಬ ಭ್ರಮೆಗೆ ಅವಕಾಶವಿಲ್ಲ ಸಿದ್ಧಾಂತಶಿಖಾಮಣಿಗೆ ಸೊಟ್ಟಿಮೆಡಲು ಪ್ರಕಟಿಸಿದ ಕೈ. ವಾ. ವೀರನಂಗಪ್ಪನವರ ಪ್ರತಿಯನ್ನಾಗಲಿ, ವಾಡವರ ಪ್ರತಿಯನ್ನಾಗಲಿ, ಆಮೇಲೆ ಮುದ್ರಿತವಾದ ತಾಳೆಮೋಲೆಯ ಪ್ರತಿಗಳನ್ನಾಗಲಿ, ಪ್ರಾಚೀನವಾದ ತಾಳೆಮೋಲೆಯ ಪ್ರತಿಗಳನ್ನಾಗಲಿ ನೋಡಿದರೆ ಈ ಭ್ರಮೆಗೆ ಅವಕಾಶವಿಲ್ಲ. ತಮ್ಮ ಪ್ರತಿಯನ್ನಾದರೂ ರಾಯರು ಸರಿಯಾಗಿ ನೋಡಬಹುದಾಗಿದ್ದಿತು. "ಶ್ರೀಲೋಕ್ಯಸಂಪದಲೇಖ್ಯ" ಎಂಬ ಶ್ಲೋಕದಿಂದ ಸಿದ್ಧಾಂತಶಿಖಾಮಣಿಯ ಆರಂಭ. ಮಲ್ಲಿಕಾರ್ಜುನಶಾಸ್ತ್ರಿಗಳು ಮುದ್ರಿಸಿದ "ಯಸ್ಮಿನ್ಸಮೇಶ್ವರಲಿಂಗ—" ದಿಂದ "ಮಯಾ ಟೀಕಾ ಕಾರಯತೇ ಶ್ರೀಸಿದ್ಧಾಂತಶಿಖಾಮಣೇಃ ಎಂಬವರೆಗಿರುವ ಶ್ಲೋಕಗಳು ಸೋಸಲೆ ರೇವಣಾರಾಧ್ಯನವೆಂಬ ದನ್ನು ಸುಲಭವಾಗಿ ತಿಳಿಯಬಹುದು

ಈ ಗ್ರಂಥವು ಈಚೆಯದೆಂಬ ಮಾತ್ಯವಲ್ಲಿ ರಾಯರ ಅಬಿಪ್ರಾಯವು ಸ್ಪಷ್ಟವಾಗಿ ತಿಳಿಯದಿದ್ದರೂ ಸೋಸಲೆ ರೇವಣಾರಾಧ್ಯನ ಸಮಕಾಲಿಕ ಗ್ರಂಥ (೧೬ ನೆಯ ಶತಮಾನದಲ್ಲಿ ಹುಟ್ಟಿರುವುದು.) ವನ್ನಾಗಿ ಅನುಮಾನಿಸಿರುವಂತೆ ತೋಚುತ್ತದೆ ಇದೂ ಸಮಂಜಸವಲ್ಲ ಮಲ್ಲಿಕಾರ್ಜುನ ಪಂಡಿತಾರಾಧ್ಯನಿಗಿಂತಲೂ ಪೂರ್ವದಲ್ಲಿ ಶ್ರೀ ೧೧ ನೆಂ ಶತಮಾನದಲ್ಲಿ ಪ್ರಸಿದ್ಧನಾಗಿದ್ದ ಶ್ರೀಪತಿ ಪಂಡಿತಾ ಧ್ಯಯ ವಿರಚಿಸಿದ ಶ್ರೀಕರಭಾಷ್ಯದಲ್ಲಿ ಆನೇಕ ಸಲ ಈ ಸಿದ್ಧಾಂತಶಿಖಾಮಣಿಯ ಸಂಗತಿಯು ಅಡಾಕ್ಷ್ಯ ಸ್ವಾಗಿರುವುದರಿಂದ ಶ್ರೀಪತಿಪಂಡಿತನಿಗಿಂತಲೂ ಆ ಗ್ರಂಥವು ಪ್ರಾಚೀನವೆಂದು ನಿಸ್ಸಂದೇಹವಾಗಿ ಸ್ವೀಕರಿಸಬಹುದು ಶ್ರೀಕರಭಾಷ್ಯವನ್ನು ಸಂಪಾದಿಸಿ ಮಾಡಿದ ಶ್ರೀ ಸಿ ಹಯವದನರಾಯರು ಆ ಭಾಷ್ಯದ ಕಾಲವನ್ನು ೧೪ ನೆಯ ಶತಮಾನವೆಂದರೆ ಬಲುತ್ತಾರವಾಗಿ ಎಳಿಸಿಬಿಸಿರುವರೆ ಹೊರತು ಅದರಲ್ಲಿ ತರ್ಕಾಂಶವೇನೂ ಇಲ್ಲ ಯಾರಿಂದಲೇ ಆಕ್ಷೇಪಿಸಲ್ಪಡುವ ಇತ್ತಿಚೆಗೆ ನೀಡಿಸಲ್ಪಟ್ಟ ಮದ್ದಲಿಪತ್ರವನ್ನು ಒಕ್ಕೊವಿ ನೆಂಬಿಕೊಂಡು ಶ್ರೀಕಂಠಾರ್ಯ, ಬ್ರಹ್ಮದಾರ್ಯರ ಕಾಲವನ್ನೂ ಇವರ ಜನವಿ ನಿರ್ಣಯಿಸಿ ಶ್ರೀಕರಭಾಷ್ಯದ ಶ್ರೀಪತಿಪಂಡಿತನ ಸಮಯವನ್ನೂ ಕಳಕ್ಕೆ ತಳ್ಳಲಾದ ಪಾಯವನ್ನೂ ಯೇ ಶ್ರೀಕಠಭಾಷ್ಯದ ಪ್ರತಿಗೆ ಮೂಲವಾದ ವೇಣಿತಿ ಜಮಿನಿದಾರ್ ಶ್ರೀಕಂದುಕೂರು ಲಕ್ಷ್ಮಣ ಯಶ್ರಸಾದ ಮಹಾರಾಜರ ಪ್ರಾಚೀನಗ್ರಂಥಾಲಯದಲ್ಲಿ ಸಿಂಪಡ್ಯಾಲಿನ ಪ್ರತಿಗಳ ಬರಹದ ಪ್ರತಿಯಲ್ಲಾಲಿ ಸುಧ್ಯರ್ಶಿಂದಲಿ ಶ್ರೀಕಂಠಾಚಾರ್ಯನ ಕಾಲವಾದರೂ ಮಧ್ಯಸಮಾನಿಸಿರುವೆಯ [illegible] of Sreekanthi (ಶ್ರೀಕಂಠನ ಶಿಷ್ಯಪ್ರಶ್ನೆತ) ಎಂಬ ಪುಸ್ತಕದಲ್ಲಿ ಹತ್ತನೆಯ ಶತಮಾನವೆಂದು ನಿರ್ಣೀತವಾಗಿದೆ ಹಯವದನರಾಯರು ಮಾಡಿದ ಕಾಲಸಾಧನೆಗೆ ಳೆಲ್ಲವೂ **ಶ್ರೀಪತಿ ಪಂಡಿತಾರಾಧ್ಯರ ಕಾಲನಿರ್ಣಯ**" ನೆಂಬ ಪುಸ್ತಕದಲ್ಲಿ ಸಪ್ರಮಾಣವಾಗಿ ನಿರಾಕರಿಸಲ್ಪಟ್ಟಿವೆ ಇವರ ಇಂಗ್ಲೀಸುನೀರಿಕೆಯನ್ನು ನೋಡಿ ಸಿದ್ಧಾಂತಶಿಖಾಮಣಿಗೆ ಸೋಸಲೆ ರೇವಣ ರಾದ್ಯನು ಕರ್ತನೆಂಬುದನ್ನು ನ ರಾಯಣರಾ ಯರ ಪಂಬರಿಬಹುದು ಹಯವದನರಂ ರಣ್ಣಗೆ ಪತ್ರವು ಓರಿಯಂಟಲ್ ಲೈಬ್ರರಿಯ ಕ್ಯಾಟಲಾಗನ್ನು ನೋಡಿ ಕರ್ತೃನಿರ್ಣಯ ಮಾಡಿಕೊಂಡಿರುವರು ಮೂಲಗ್ರಂಥವನ್ನೂ ನೋಡದೆ ಪರಪ್ರತ್ಯಯನಾಮಿಯೆ ಇದಕ್ಕೂ ಹೆಚ್ಚಿನ ಪಲವಾಗಲಾ ರದೆಂಬುದು ಸಯಿಗೇ! ಶ್ರೀಕಂಠಶಿವಾಚಾರ್ಯನು ತನ್ನ ಬ್ರಹ್ಮಸೂತ್ರಭಾಷ್ಯದ ಚತುರ್ಥಾಧ್ಯಾಯ ೪ ನೆಯ ಪಾದದ **"ಅವಿಭಾಗೇನ ದೃಷ್ಟತ್ವಾತ್"** ಎಂಬ ಸೂತ್ರವ್ಯಾಖ್ಯಾನದಲ್ಲಿ ಸಿದ್ಧಾಂತಶಿಖಾಮಣಿಯ(೯ ೧೪) **"ಮುತ್ತೇ ಶಿವಸಮೋ ಭವೇತ್"** ಎಂಬ ಪ್ರಮಾಣವನ್ನು ವಾಡಿರಿಸಿದ್ದಾನೆ ಇದರಿಂದ ಸಿದ್ಧಾಂತಶಿಖಾಮಣಿಯು ಹತ್ತನೆಯ ಶತಮಾನದಲ್ಲಿ ಪ್ರಸಿದ್ಧವಾಗಿದ್ದಿತೆಂಬುದು ಸ್ಪಷ್ಟವಾಗುತ್ತದೆ ಆದರ ರಚನೆ ಪ್ರತಿಪಾದನೆ ಮೊದಲಾದವುಗಳು ಕೂಡ ಆದರ ಪ್ರಾಚೀನತ್ವವನ್ನು ಸೂಚಿಸಲು ಸವರ್ಥವಾಗಿವೆ

ಶ್ರೀ ಸಿ ನಾರಾಯಣರಾಯರೇ ಇತ್ತೀಚೆಗೆ ಪ್ರಕಟಿಸಿದ ತೆಲುಗು ಪಂಡಿತಾರಾಧ್ಯ ಚರಿತ್ರೆಯ ಪೀಠಿಕೆಯಲ್ಲಿಯೂ ಪ್ರಬುದ್ಧಕರ್ನಾಟಕವ ದೀಪವಲ್ಲಿಮಾಲೆ ಮತ್ತು ವದನರಾಯರ ಶ್ರೀಕರಭಾಷ್ಯ ಶ್ರೀಪತಿಪಂಡಿತ ಕಾಲ ನಿರ್ಣಯವನ್ನು ಸಭಿಯಾದುದಲ್ಲವೆಂದು ಹೇಳಿ ಶ್ರೀಪತಿ ಪಂಡಿತನು ೧೧ ನೆಯ ಶತಮಾನದಲ್ಲಿದ್ದನೆಂಬುದನ್ನು ಸ್ವೀಕರಿಸಿದ್ದಾರೆ ಅವನು ರಚಿಸಿದ ಭಾಷ್ಯದಲ್ಲಿಯೇ ಸಂಗೆರವನಾ ಉದ್ಧರಿಸಲ್ಪಟ್ಟು ಸಿದ್ಧಾಂತಶಿಖಾಮಣಿಯ ವಿಷಯವಾಗಿ "ಈ ಗ್ರಂಥವು ಈಚೆಯದು" ಎಂದು ಹೇಳುವುದಾದರೆ ಪಂಡಿತರಾಯರಿಂದ ಪೀಠಿಕೆಯ ಹೊರತು ಶ್ರೀಕರ ಭಾಷ್ಯವನ್ನಾಗಲಿ ಸಿದ್ಧಾಂತಶಿಖಾಮಣಿಯನ್ನಾಗಲಿ ತಾರಾಯಣರಾಯರು ಅವಲೋಕನೆ ಮಾಡಿಲ್ಲವೆಂಬಲೇ ಭಾವಿಸಬೇಕಾಗುವುದು

ಶ್ರೀತೋಟಂಬೆದಾರ್ಯರು ಸಿದ್ಧಾಂತಶಿಖಾಮಣಿಗೆ ತತ್ತ್ವವೀಪಿಕೆಯೆಂಬ ಸಂಸ್ಕೃತಟೀಕೆಯನ್ನು" ರಚಿಸಿ ದ್ದಾರೆ ಅವರು ೧೩ ನೆಯ ಶತಮಾನದವರು ಅಂದರೆ ಬಹಳ ಆಧುನಿಕರಾದುದರಿಂದ ಸಿದ್ಧಾಂತಶಿಖಾಮಣಿಯ ಲ್ಲಿರುವ "ಮದ್ದದೇವ" ಎಂಬ ಶಬ್ದವನ್ನು ನೋಡಿ ತಮ್ಮ ಕರ್ನಾಟಕದ ಸೋಲಾಪುರದ ಮದ್ದನ ಗೌಡ ನಂಬು ಭ್ರಮಿಸಿ "ಸಿದ್ಧನಾಥ" ನೆಂಬ ಹೆಸರಿಗೆ ಸಿದ್ಧರಾಮನೆಂಬ ವಿಪರೀತಾರ್ಥವನ್ನು ಬರೆದಿದ್ದಾರೆ, ಇದು ಸಹಜವಾಗಿ ಜರುಗಿದ ಸಂಡಿತಪ್ರಮಾದವಾಗಿದೆ ಇದನ್ನೇ ಪರಮಾರ್ಥವೆಂದು ನಂಬಿ ಸಿದ್ಧಾಂತಶಿಖಾಮಣಿಯ ಕಾಲವನ್ನು ೧೩ನೆಯ ಶತಾಬ್ದವೆಂದು ತೀರ್ಮಾನಿಸಿರುವುದು ಕೆಲವು ಕೆಲವರೂಂಬು ಇದರಲ್ಲಿ ಎಷ್ಟೂ ಸತ್ಯಾಂಶವಿಲ್ಲ-ತೆಲುಗುದೇಶದ ಕೊಲನುಪಾಕೆ (ಕುಲುಪಾಕ)ಯಲ್ಲಿ ಆವತಿರುವ ರೇಣುಕನ ಮಹಿಮಾವಿಶೇಷಗಳನ್ನು ಪರಂಪರೆಯಾಗಿ ತನ್ನ ಆಜಾರ್ಯ ವಂಶಪುರುಷರಿಂದ ತಿಳಿದ ಆಂಧ್ರದೇಶದವನೇ ಆದ ಶಿವಯೋಗಿಶಿವಾಚಾರ್ಯನು ಸಿದ್ಧಾಂತಶಿಖಾಮಣಿಯನ್ನು ರಚಿಸಿರುವನು ಸಿದ್ಧಾಂತ ಶಿಖಾಮಣಿಯ ಶ್ಲೋಕಗಳಲ್ಲಿ ಅನೇಕಕಡೆ ಆಂಧ್ರಭಾಷೆಯ ಸಂಪ್ರದಾಯದಂತೆ ಯತಿಸ್ಥಾನವನ್ನು ಸಮಾಕ್ಷರ ಪ್ರೌಢಿಯಿಂದ ರಚಿಸಿದ ಪಾದಗಳಲ್ಲಿರುವುದರಿಂದ ಆತನು ಆಂಧ್ರದೇಶದ ಕವಿಯೆಂದು ಸುಲಭವಾಗಿ ತಿಳಿಯಬಹುದು ಯತಿಸ್ಥಾನವಲ್ಲಿ ಅಕ್ಷರವೈಚಿತ್ರ್ಯ!ಪದ್ಧತಿಯು ಕನ್ನಡ ಭಾಷೆಯವಲ್ಲಿ ಇದರ ವಿಸ್ತಾರವು ಮತ್ತೊಮ್ಮೆ ಪ್ರಕಟಿಸಲ್ಪಡುವುದು ಸಿದ್ಧರಾಮನಿಗೆ ಶಿವಯೋಗಿಯೆಂಬ ಮಗನಿದ್ದಂತೆಯೂ ಪೌರಾಣಿಕಪ್ರತೀತಿಯಿಲ್ಲ. ಸಿದ್ಧಾಂತಶಿಖಾಮಣಿಯಲ್ಲಿಯು ಸಿದ್ಧನಾಥನು ಸೊನ್ನಲಿಗೆಯ ಸಿದ್ಧರಾಮನೆಂದಿಗೂ ಆಪ ಪ್ರಪಂಚದಲ್ಲಿ ಆ ಹೆ ೨ನ್ನು ಸ್ಪಷ್ಟವಾಗಿ ಬರಯಲು ಛಂದೋ ಬಂಗಾಡಿ ಯಾವ ಪ್ರತಿಬಂಧಕವೂ ಇರಲಿಲ್ಲ ಮುದ್ದ ದೇವನು ಮುದ್ದಸಗೌಡನೂ ಆಗಲಾರ ಸೊನ್ನಲಿಗೆಯ ಮುದ್ದಸಗೌಡನು ಲಿಂಗಾಂಗಿಯಲ್ಲ. ಸಿದ್ಧಾಂತಶಿಖಾಮಣಿಯ ಮುದ್ದ ದೇವನು ಅನೂಡಾನವಾಗಿ ಬಂದ ವೀರ ಶೈವಾಚಾರ್ಯಕುಲದಲ್ಲಿ ಹುಟ್ಟಿದವನೆಂತಲೂ ಇವರೆಲ್ಲರೂ ವೇದಾಗಮವಿಶಾರದರೂ ತಪಸ್ಸಂಪನ್ನರೂ ಆಗಿ ಧ್ಯರೆಂತಲೂ ಗ್ರಂಥಕರ್ತೃವಂಶಪರಿಚಯದಿಂದ ಸುಲಭವಾಗಿ ತಿಳಿಯತಕ್ಕ ಮಾತಾಗಿದೆ. ಶಿವಯೋಗಿಯ ಮುದ್ದಯ್ಯ ಸಿದ್ಧನಾಥಯ್ಯ ಎಂಬ ಹೆಸರುಗಳು ಕುಲ ಪ ಕ್ಕದ ಪ್ರಾಚೀನ ಮಾಹೇಶ್ವರರಲ್ಲಿ ಹೆಚ್ಚಾಗಿಯೂ ಈಗ ಸ್ಪಷ್ಟವಾಗಿಯೂ ಇವೆ ರೇಣುಕರಿಗೆ ಸಿದ್ಧವಾದ ನೆಂಬ ವಿಶೇಷಣವಿದ್ದಂತೆಯೂ (೨೧ ೪೦) ಉಳ್ಳವಾಕ ವೆಂಬ ಕ್ಷತ್ರಿಯರು ರೇಣುಕರಿಗೆ ಸ್ವಸ್ಥಲವಾಗಿದ್ದಂತೆಯೂ (೨೧ ೬೯) ಸಿದ್ಧಾಂತಶಿಖಾಮಣಿಯಂದು ಸ್ಪಷ್ಟವಾಗಿ ತಿಳಿಯುತ್ತಿರುವುದರಿಂದ ಈ ಗ್ರಂಥವು ಆಂಧ್ರದೇಶದಿಂದ ಆವತರಿಸಿತೆಂದು ನಿರ್ಣಯಿಸುವುದೇ ಸಮಂಜಸವಾಗಿದೆ ಇದು ಸ್ವಲ್ಪ ಸೂಕ್ಷ್ಮಾವಲೋಕನದಿಂದಲೂ ಆಳಸಿಕರಾದ ಪೌರಾಣಿಕರೂ ಕಲುಪಿಕರ್ನಾಟಕ ಲೇಖಕರೂ **ರೇಣುಕ-ರೇವಣಸಿದ್ಧ** ಎಂಬ ಹೆಸರುಗಳುಳ್ಳವರು ಅನೇಕ ವೃತ್ತಿಗಳಿದ್ದಾರೆಂಬುದನ್ನು ತಿಳಿಯದೆ **ತಪ್ಪೆ ವಾಡಿಯೆ ರೇವಣಸಿದ್ಧನಿಗೆ** ಗಂಟುಹಾಕಿಕೊಂಡು ರೇಣುಕಾಚಾರ್ಯರ ಕಾಲವನ್ನೂ ೧೩ನೆಯ ಶತಾಬ್ದವೆಂದು ಬರೆದುಕೊಳ್ಳುತ್ತಿದ್ದಾರೆಯೇ ಹೊರತು ಇದು ವತಿಹಾಸಿಕವಲ್ಲ ರೇಣುಕನಿಗೆ ಉಪದೇಶರೂಪವಾಗಿ ಶಿವಯೋಗಿಶಾಚಾರ್ಯನಿಂದ ರಚಿತವಾದ ಸಿದ್ಧಾಂತಶಿಖಾಮಣಿಯು ೧೧ನೆಯ ಶತಾಬ್ದವಲ್ಲದೇ ಪ್ರಸಿದ್ಧವಾಗಿದ್ದಿ ದ್ದಿದಾದರವನ್ನು ಪಡೆದಿದ್ದಿತೆಂಬುದಕ್ಕೆ ಶ್ರೀಕರ ಭಾಷ್ಯ ಶ್ರೀಕರಭಾಷ್ಯಗಳೇ ಸಾಕ್ಷಿಯಾಗಿವೆ

ಶ್ರೀಕರಭಾಷ್ಯದಲ್ಲಿಯು ಸಿದ್ಧಾಂತಶಿಖಾಮಣಿಯ "ಬಸವನ ಆನಂತರದಲ್ಲಿ ವಿಸ್ತರಿಸಿದ ವೀರಶೈವಸಿದ್ಧಾಂತದಿಂದ ಭೇದಿಸಿತ್ತದೆ" ಎಂಬ ವಿಚಿತ್ರಘೋರತೆಯನ್ನು ಅವರು ಬೈಲಿಗೆ ಹಾಕಿದ್ದಾರೆ ಶ್ರೀಮಾನ್ ನಾರಾಯಣರಾಯರು ಯಥಮಾ ಮಿಂ ಮೂಲಗ್ರಂಥಗಳಲಾದ ಶಿವಾಗಮ ಸಿದ್ಧಾಂತಶಿಖಾಮಣಿಗಳನ್ನೂ ಶ್ರೀಕರಭಾಷ್ಯವನ್ನೂ ಸ್ವತಃ ನೋಡಿ ಉಭಯಸಿದ್ಧಾಂತಗಳಲ್ಲಿ ಇರುವ ವಿರೋಧವನ್ನು ಆಯಾ ಗ್ರಂಥಗಳ ಸ್ಥಲಪರ್ವೇಕ್ಷಣೆಯಿಂದ ಪ್ರತಿಪಾದಿಸುವೆದಾದರೆ ತಕ್ಕ ಸಮಾಧಾನವನ್ನು ಬರೆಯಿಸಬಹುದು ಹಯವದನರಾಯರ ಉಭೋದ್ಯಾತವನ್ನೇ ಆನುಸರಿಸಿ ಬರೆಯುತ್ತಾ ಹೋದರೆ ಪ್ರಯೋಜನವಾಗಲಾರದು ಶ್ರೀಕರಭಾಷ್ಯದಲ್ಲಿ ಜೀವಲ್ಲಿಚ್ಛೆ ಸೃಷ್ಟಿ, ಸ್ಥಿತಿ, ಲಯ ವಾಚಿಕ, ಕಾಯಿಕ, ಮಾನಸಿಕ ಅಂಬ ಪಕ್ಷಗಳಲ್ಲಿ

ವೀರಶೈವ ಗ್ರಂಥಗಳಲ್ಲಿ ದೊರೆಯದೆ ' ಭಕ್ತ, ಮಾಹೇಶ್ವರ, ಪ್ರಸಾದಿ, ಪ್ರಾಣಲಿಂಗಿ, ಶರಣ, ಐಕ್ಯ ' ಎಂಬ ಷಟ್‌ಸ್ಥಲಗಳು ಹೇಳಲ್ಪಟ್ಟಿರುವುದರಿಂದ ಪ್ರಾಚೀನವೀರಶೈವಮತಕ್ಕೆಂತಲೂ ಆರ್ವಾಚೀನವೀರಶೈವಮತವು ದೀರಿ ಇದೆಯೆಂದು ಸಾಧನಾಧಾರಯು ಬರೆದಿದ್ದಾರೆ. ಇದು ಆತ್ಯದ್ಭುತವಾದ ಪೂರ್ವಪಕ್ಷವೆಂದು ಅವರು ನಂಬಿರಬಹುದು. ಧಾಸ್ಯದಲ್ಲಿ ನಿರೂಪಿಸತಕ್ಕ ವಿಷಯಗಳಾವುವೆಂಬುದು ಅವರಿಗೆ ಚೆನ್ನಾಗಿಲ್ಲ. ತಾವು ಕೇಳಿದ ಪ್ರಶ್ನೆಗಳಿಗೆ ಧಾಸ್ಯದಲ್ಲಿ ಉತ್ತರ ದೊರಿತರೆ ಅದನ್ನು ವೀರಶೈವ ಗ್ರಂಥವಲ್ಲವೆಂಗಿ ಸ್ವೀಕರಿಸಲು ಸಂಸಿದ್ಧರಾಗಿರುವರು. ಇದು ಸಾಮಾನ್ಯವಾದ ಉಪಕಾರವಲ್ಲ ಮನುಸ್ಮೃತಿಯಲ್ಲಿರುವ ಸ್ಮಾರ್ತಪ್ರತ್ಯಕ್ಷಗಳಲ್ಲಿ ರಾಮಾನುಜಧಾಸ್ಯದಲ್ಲಿಯೂ ಪ್ರತಿಪಾದಿಸಲ್ಪಟ್ಟಿವೆ ಎಂಬ ನಂಬಿಕೆಯಿಂದ ಶಿವಾಗಮದ ಪ್ರತ್ಯೇಯಗಳಾದ ವಿಕೋತ್ತರ ಶತಸ್ಥಲಗಳೂ ಲಿಂಗಧಾರಣವಿಧಾನವೂ ಪಾದಪೂಜಾಪದ್ಧತಿಯೂ ಸಮಾಧಿಮಾಡುವ ಸಲಕರಣಗಳೂ ಶ್ರೀಕರಧಾಸ್ಯದಲ್ಲಿ ವಿವರಿಸಲ್ಪಡದಿರುವದರಿಂದಲೂ ಆರ್ವಾಚೀನ ವೀರಶೈವರ ಗ್ರಂಥವೆಂದು ನಿರ್ಣಯಿಸತಕ್ಕ ಮಹಾಪುರುಷರಿಗೆ ಹೇಳತಕ್ಕುದಿಲ್ಲ. ಶ್ರೀಕರಧಾಸ್ಯವು ಶಿವತತ್ತ್ವ, ಭೇದಾಭೇದ (ಶಕ್ತಿವಿಶಿಷ್ಟಾದ್ವೈತ), ಲಿಂಗಧಾರಣ, ಶಿವಜಗತ್ಕಾರಣತ್ವ, ಶಿವಾಗಮ ಪ್ರಾಮಾಣ್ಯಗಳೆಂಬ ಮುಖ್ಯವಾದ ವಿಷಯಗಳನ್ನು ನಿರ್ದ್ವಂತಗೊಳಿಸಲು ಹುಟ್ಟಿರುವದೇ ಹೊರತು ವೀರಶೈವದ ಎಲ್ಲ ವಿಷಯಗಳನ್ನೂ ಸಂಗ್ರಹಿಸುವುದಕ್ಕಲ್ಲ. ಶಿವಪರಬ್ರಹ್ಮದ ಸವಿೀಪಸತ್ಪ್ರವನ್ನೂ ಸರ್ವಕರ್ತೃತ್ವವನ್ನೂ ನಿರ್ದ್ವಂತಗೊಳಿಸುವ ಪ್ರಸಂಗದಲ್ಲಿ ಶಿವನಿಗೆ ಸೃಷ್ಟಿಸ್ಥಿತಿಲಯ-ತಿರೋಧಾನ ಅನುಗ್ರಹಗಳೆಂಬ ಪಂಚಕೃತ್ಯಗಳು (ಇಚ್ಛಾ ಶಕ್ತಿಯಾಜ್ಞೆ)ನಿಗಳೆಂಬ ಷಟ್‌ಸ್ಥಲಗಳು ಹೇಳಲ್ಪಟ್ಟಿವೆ ಅಂದರೆ ಶಿವನ ವಿವಿಧ ಶಕ್ತಿಗಳೇ ಜಗತ್ತಿಗೆ ಉಪಾದಾನ ಕಾರಣವೆಂಬುದು ನಿರೂಪಿಸಲಾಗಿದೆ. ಇವು ಆರೂ ಶಿವನ ಶಕ್ತಿಗಳೇ ಹೊರತು ಬೇರಲ್ಲ. ಇವು ಸಹಜವಾಗಿ ಸೃಷ್ಟಿ ಸ್ಥಿತಿಲಯ ತಿರೋಧಾನ ಅನುಗ್ರಹಗಳೆಂಬ ಶಿವಾಗಮಗಳ ಪಂಚಕೃತ್ಯಗಳಲ್ಲಿ ಅಂತರ್ಗತವಾಗಿವೆ ಇವನ್ನೇ ಶ್ರೀಕರ ಧಾಸ್ಯಕಾರನು ಸ್ಥಲಗಳೆಂದು ಹೇಳಿದ್ದಾನೆ. ಇದು ಆತನಿಗೆ ಬಹಳ ಇಷ್ಟವಾದ ವಿಷಯವಾದುದರಿಂದ ಶಿವನಿಗೆ " ಅದ್ವಿತೀಯ ಷಟ್‌ಸ್ಥಲ ಪರಶಿವ ಬ್ರಹ್ಮ " ಎಂಬ ವಿಶೇಷಣವನ್ನು ಅನೇಕಸಲ ಉಪಯೋಗಿಸಿದ್ದಾನೆ ಈ ವಿಶೇಷಣವು ಶಿವನ ಹೊರತು ಮತ್ತಾರಿಗೂ ಸಲ್ಲತಕ್ಕುದಲ್ಲವೆಂಬ ಅಭಿಪ್ರಾಯವನ್ನು " ಅದ್ವಿತೀಯ " ಶಬ್ದದಿಂದ ಶ್ರೀಕರಧಾಸ್ಯಕಾರನು ಸಾರಿದ್ದಾನೆ ಈ ಪ್ರಸಂಗದಲ್ಲಿ ಜೀವನು ಭಕ್ತ್ಯಾದಿ ಷಟ್‌ಸ್ಥಲ ಕ್ರಮವನ್ನು ಅನುಸರಿಸಿ ದೇವತ್ವವನ್ನು ಸಂಪಾದಿಸುವ ಪದ್ಧತಿಯು ಶ್ರೀಕರಧಾಸ್ಯಕಾರನಿಂದ ನಿರೂಪಿತವಾಗಿಲ್ಲ ಆದರೆ ಧಾಸ್ಯಕಾರನು ಈ ವಿಷಯವನ್ನೇ ಹೇಳಿಲ್ಲವೆಂಬುದು ಆಸಂಬದ್ಧವಿಧಾನವಾದ ಶ್ರೀಕರಧಾಸ್ಯದ ಪ್ರಥಸೂಧಾಧ್ಯಾಯ ದ್ವಿತೀಯ ಸೂತ್ರದ ಕಡೆಯ ಧಾಸ್ಯದಲ್ಲಿ—

" ಯಜ್ಪಶ್ಚಸ್ಥಮಿತ್ಯಾದಿಶ್ರುತ್ಯರ್ಜ್ಜಾತ್ವಮುಚ್ಯತೇ ।
ಯಸ್ಮಾಜ್ಜೀವಸ್ಯರೇ ನಾಮ ಶಾ ಶ್ವತ್ಪಮುಮಾ ಶಾಂಕರಿ ॥
ಯಶ್ಚೈಷಾಪ್ರಭಥಂ ನಾಮ ತದ್ವೈಷ್ಣವೇ ಮೇ ಪರಿಂಕಿತಃ ।
ಯಶ್ಚಾಸೌಲಿಂಗಕಂ ನಾಮ ತತ್ಪಾಶ್ಚತ್ರೈವಮಾದಿಶತಂ ॥
ಯದಸ್ತ್ರ ಶರಣಂ ನಾಮ ಹೃದಾಸ್ತ್ರ ಶಕ್ತಿರುಚ್ಯತೇ ।
ಯಶ್ಚೈಕೃತ್ವ ಜಲಾಭಿಖ್ಯಸ್ಥಂ ಹೃದಂಗ ಶಕ್ತಿರುಚ್ಯತೇ ॥ "

(ಇತಿ ಜನ್ಮಾದ್ಯಧಿಕರಣಾಂತೀ)

ಎಂದು ಭಕ್ತ, ಮಾಹೇಶ್ವರ, ಪ್ರಸಾದಿ, ಪ್ರಾಣಲಿಂಗಿ, ಶರಣ, ಐಕ್ಯ, ಸ್ಥಳಗಳನ್ನು ಭೇದಾಭೇದಸಿದ್ಧಾಂತದಿಂದ ಹೇಳಿರುವುದು ಪುನರುಕ್ತಿಯೆಂದೆನಿಸಿದವರಿಗೆ ಗೋಚರವಾಗುವುದಿಲ್ಲ ವಷ್ಟೆ! ವೀರಶೈವರಿಗೆ ಆರು ಸ್ಥಲಗಳೇ ಅಲ್ಲ, ತದಂತರ್ಗತಗಳಾದ ನೂರೊಂದು ಸ್ಥಲಗಳಿವೆ. ಇವೆಲ್ಲವೂ ಶಿವಾಗಮಗಳಲ್ಲಿಯೂ ಸಿದ್ಧಾಂತಶಿಖಾಮಣಿಯಲ್ಲಿಯೂ ಹೇಳಲ್ಪಟ್ಟಿವೆಯಲ್ಲಾ ತಿಳಿಯದೆ " ಈ ವಿಷಯಗಳು ಸಿದ್ಧಾಂತ ಶಿಖಾಮಣಿಯಲ್ಲಿ ಎಂದಿ ನಿಂದ ಬರುತ್ತಿದೆಯೋ ಹೇಳಲಿಕ್ಕೆ ಆಧಾರಗಳಿಲ್ಲ "ವೆಂದು ನಾರಾಯಣಾಧಾರು ಚಿಂತಿಸುತ್ತಿದ್ದಾರೆ. ಅವರ ಈ ಬರಹವು ಕೇವಲ ನಿರಾಧಾರವಾಗಿದೆ. ವೀರಶೈವಮತದ ಗ್ರಂಥಗಳನ್ನು ಅವಲೋಕಿಸದೆ ಕೇವಲ ಊಹೆಗಳಿಂದಲೇ ಮಹಚರಿತ್ರೆಯನ್ನೂ ತತ್ತ್ವಗಳನ್ನೂ ನಿರೂಪಿಸುವುದು ಸುಲಭವಲ್ಲ.

ಶಿವತತ್ತ್ವಸಾರವನ್ನು ಮಲ್ಲಿಕಾರ್ಜುನ ಪಂಡಿತಾರಾಧ್ಯನು ರಚಿಸಿರುವುದು ಆಂಧ್ರದೇಶದಲ್ಲಿ ಸುಪ್ರಸಿದ್ಧವಾದ ವಿಷಯ. ಅವನ್ನು ಸ್ವಕಟಿಸಿದ ಆಂಧ್ರಸಾಹಿತ್ಯಕಾರಸತ್ತ ನವರೂ ಶ್ರೀ ಕೊಟಿ ಲಕ್ಷ್ಮಣರಾಯರಂತಹ ಉದ್ದಾಮ ಪಂಡಿತರೂ ಶ್ರೀಕರಧಾರ್ಯರೂ ಕೃತಿಯೆಂದೇ ನಿರ್ಣಯಿಸಿದ್ದಾರೆ. ಆ ಗ್ರಂಥದಲ್ಲಿ ಸ್ವತಃ ಮಲ್ಲಿಕಾರ್ಜುನ ಪಂಡಿತನೇ—

ಒಂಡೇಸು ಮಲ್ಲಿಕಾರ್ಜುನ
ಪಂಡಿತುಡನ ನುಂಡುಂಟೆ ಪ್ರಮಥುಲಲೋ ನಿ
ನ್ನೆಂಡಕೆಲಿ ನೀ ಯಾಡ್ಡೊಣ್ಣಕ್ಕ ನಿ
ನುಂಡು ಗಾವು ನಿನು ಕೊಲುಚುಂಡುನು ರಿನ್ನಿ

ಎಂಬ ಪದ್ಯದಿಂದ ತಾನೇ ಈ ಶಿವತತ್ತ್ವಸಾರವನ್ನು ರಚಿಸಿದ್ದಾನೆಂಬುದನ್ನು ಸ್ಪಷ್ಟಪಡಿಸಿದ್ದಾನೆ ಆತನ ಅನಂತರದಲ್ಲಿನ್ನ ಇಲ್ಲಂಡರಿಕೆ ಸೋಮನಾಥನು ತನ್ನ ಪಂಡಿತಾರಾಧ್ಯ ಚರಿತ್ರೆಯ ದೀರ್ಘಪ್ರಕರಣದಲ್ಲಿ—

ಅಂತ ಬಾಡಿತಮಲ್ಲಿಕಾರ್ಜುನಸ್ಪಭುವು
ಶಿವತತ್ತ್ವಸಾರ ಸಂಚಿತ ಮಹಾಮಹಿಮ
' ಶಿವತತ್ತ್ವಸಾರ ' ರ್ಮ ಶಿವಕೃತಿ ಬೊಗಬು

ಎಂಬ ಅಂಶದಿಂದಲೂ ಚತುರ್ದೇದಸಾರದಲ್ಲಿಯೆ ಮತ್ತೊಂದು ಪದ್ಯದಿಂದಲೂ ಮಲ್ಲಿಕಾರ್ಜುನ ಪಂಡಿತಾರಾಧ್ಯನೇ ಈ ಗ್ರಂಥವನ್ನು ರಚಿಸಿದ್ದಾನೆಂದು ಹೇಳಿದ್ದಾನೆಂದು ಆಂಧ್ರಲೋಕವೆಲ್ಲವೂ ಇದನ್ನೇ ನಿಜವೆಂದು ತಿಳಿದಿದೆ ಇದೇ ಡಾ|| ನಾರಾಯಣರಾಯರೂ ಇತ್ತೀಚೆಗೆ ತಾವು ಪರಿಷ್ಕರಿಸಿದ ಆಂಧ್ರ ಕವಿತಾಪಿತಾಮಹರ ಚರಿತ್ರೆಯ ಪೀಠಿಕೆಯಲ್ಲಿ (ಪುಟ ೬೯) ಶಿವತತ್ತ್ವಸಾರವನ್ನು ಪಂಡಿತಾರಾಧ್ಯನ ಕೃತಿಯೆಂತಲೇ ಬರೆದಿದ್ದಾರೆ. ಆದರೆ ಪ್ರಸಿದ್ಧ ಕರ್ನಾಟಕದ ಗತ ಲೇಖಪಲ್ಲಿ " ಮಲ್ಲಿಕಾರ್ಜುನ ಪಂಡಿತಾರಾಧ್ಯನು ಶಿವತತ್ತ್ವಸಾರವನ್ನು ಬರೆಯಲಿಲ್ಲವೆಂದೇ ನನ್ನ ಅಭಿಪ್ರಾಯ " ವೆಂದು ಸಾರಿದ್ದಾರೆ ೧೨ ನೆಯ ಶತಾಬ್ದದ ಇಮ್ಮ ಸುಪ್ರಸಿದ್ಧನಾದ ಗ್ರಂಥವನ್ನು ೧೪ ನೆಯ ಶತಮಾನದ ವರೆಗೆ ಎಳೆಯುವುದಕ್ಕಾಗಿ ಅವರು ತೋರಿಸಿದ ಯುಕ್ತಿಯು ಹೀಗಿದೆ—" ಸೋಮನಾಥನ ಪಂಡಿತಾರಾಧ್ಯ ಚರಿತ್ರವಲ್ಲಿ ಶಿವತತ್ತ್ವಸಾರ ವೆಲ್ಲಾ ಪ್ರತ್ಯಕ್ಷರವೂ ಸೇರಿದೆ ಸೋಮನಾಧನಂತಹ ಮಹಾತ್ಮರಿಗೆ ಗ್ರಂಥಕರ್ತೃವನ್ನು ಅಪಾದಿಸುವದು ನ್ಯಾಯವಲ್ಲ ... ತಾನೇ ತನ್ನ ಗ್ರಂಥದಿಂದ ಕೆಲವು ಭಾಗ ಗಳನ್ನು ತೆಗೆದು ಪಂಡಿತಾರಾಧ್ಯನೆ ಹೆಸರಿನಿಂದ ಪ್ರಕಟಿಸಿರಬಹುದೆಂದು ನನಗೆ ತೋರುತ್ತದೆ".

ಸೋಮನಾಥನಂತಹ ಮಹಾತ್ಮನು ಗ್ರಂಥಚೌರ್ಯ ಮಾಡುವುದು ಅನುಚಿತವಾಗಿದ್ದರೆ, ತಾನು ಸೃಷ್ಟಿಸಿದ ಗ್ರಂಥವನ್ನು ಸುಪ್ರಸಿದ್ಧ ಪಂಡಿತಶಿರೋಮಣಿಯಾದ ಮಲ್ಲಿಕಾರ್ಜುನ ಪಂಡಿತನ ಹೆಸರಿನಿಂದ ಪ್ರಕಟಿಸಿದನೆಂಬುದು, " ಮಮ್ಮಹಾನಮಾಡಿಲ್ಲ, ಮಾಂಸಭಕ್ಷಣ ಮಾಡಿದ್ದಾನೆ" ಎಂಬ ಹಾಗಿದೆ. ಅಖಂಡ ಪಂಡಿತನಾದ ಮಲ್ಲಿಕಾರ್ಜುನ ಪಂಡಿತಾರಾಧ್ಯನಿಂದ ಅನೇಕ ಗ್ರಂಥಗಳು ರಚಿಸಲ್ಪಟ್ಟಿದ್ದರೂ ಸೌಭಾಗ್ಯವತಿಯಾದ ಶಿವತತ್ತ್ವಸಾರ ವೊಂದು ಮಾತ್ರ ಲಭಿಸಿದೆ. ಅದು ಲೆಖಿಯಲ್ಲಿಯೂ ವಿಷಯನಿರೂಪಣ ಪದ್ಧತಿಯಲ್ಲಿಯೂ ಪ್ರತ್ಯೇಕತೆಯುಳ್ಳ ದ್ದಾಗಿ ಸೋಮನಾಥನ ಕವಿತೆಗಿಂತಲೂ ಭಿನ್ನತೆಯನ್ನು ಸ್ಪಷ್ಟಗೊಳಿಸಲು ಸಮರ್ಥವಾಗಿದೆ. ಆದನ್ನು ಸೋಮನಾಥನು ರಚಿಸಿರುವನೆಂಬುದು ಕೇವಲ ಸಾಹಸದ ಮಾತು ಅದನ್ನು ನೋಡಿಯೇ ಸೋಮನಾಥನು ಅನುಭವಸಾರವನ್ನೂ ಕಾಶಕೃಷ್ಣ ಗಣಪತಿದೇವನು ಶಿವರೋಗಸಾರವನ್ನೂ ರಚಿಸಿದ್ದಾರೆ. ಅನುಭವಸಾರ ವೆಂಬ ಕೃತಿಯಲ್ಲಿಯೇ ಶಿವತತ್ತ್ವಗಳನ್ನು ಸೋಮನಾಥನು ನಿರೂಪಿಸಿರುವಾಗ ಮತ್ತೊಂದು " ಶಿವತತ್ತ್ವಸಾರ" ವನ್ನು ಬರೆದು ಪಿಷ್ಟಪೇಷಣಮಾಡುವ ಅವಶ್ಯಕತೆಯೇ ಇಲ್ಲ ಸೋಮನಾಥನು ಅಂಧ್ರಧಾಸಾ ಪಾರಂಗತನೂ ವೇದವೇದಾಂಗಾಧಿಷ್ಟಾನವೂ ಆದ ಶ್ರೌತಸ್ಮಾರ್ತವಯಾಗಿದ್ದಾನೆ. ಅವನು ವೇದೋಪಬೃಹ್ಮಣಾದಿಗಳನ್ನು ಹೇಳುವಾಗ ತನ್ನ ಕವಿತೆಯಲ್ಲಿ ಅಯಾ ವೇದವಾಕ್ಯಗಳನ್ನೇ ಹೊಂದಿಸಿದ್ದಾನೆ. ಇಂತಹ ಪ್ರಜ್ಞಂಡ ಪ್ರತಿಭೆಯುಂಟೆ ಆತನ ದ್ವಿಪದಿ ಕಾವ್ಯವು ತುಂಬಿತುಳುಕುತ್ತಿದೆ ಅವರಂತಿಯೇ ತನ್ನ ಪಂಡಿತಾರಾಧ್ಯ ಚರಿತ್ರೆಯಲ್ಲಿ ಶ್ರೀ ಮಲ್ಲಿಕಾರ್ಜುನ ಪಂಡಿತಾರಾಧ್ಯನ ಉಪದೇಶ ವೀಕ್ಷಣಗಳನ್ನು ತಿಳಿಸುವದ ಕ್ಕಾಗಿ ಆತನ ಶಿವತತ್ತ್ವಸಾರವನ್ನೇ ಆಯಾ ವಾಕ್ಯಗಳಲ್ಲಿ ಸಂಗ್ರಹಿಸಿ ಸೋಮನಾಥನು ನಿರೂಪಿಸುತ್ತ ಗ್ರಂಥರಚನೆ ಮಾಡಿರುವುದು ಸಾಮಂಜಸ್ಯವಾಗಿಯೂ ಸಂಪ್ರದಾಯ ಶುದ್ಧವಾಗಿಯೂ ಇದೆ. ಪಂಡಿತಾರಾಧ್ಯತ ನಿರ್ದ್ವಾಂತವನ್ನು ಪಂಡಿತಾರಾಧ್ಯನ ವಾಕ್ಯಗಳಂದಲೇ ಹೇಳಿರುವ ಪದ್ಧತಿಯು ಪ್ರಶಂಸನೀಯವಾದುದಲ್ಲವೆ? ಇದನ್ನೇ ಗ್ರಂಥಚೌರ್ಯವೆಂದು ಹೇಳವದಾದರೆ ಸುಪ್ರಸಿದ್ಧ ಆಱಾರ್ಯ ಗ್ರಂಥಗಳೆನ್ನಿಲ್ಲ ಆಧುನಿಕಕಲ್ಪಿತಗಳೆನ್ನಬಹುದು. ವಿದ್ಯಾರಣ್ಯರ ಪಂಚದತ್ಕೃತಿ ಗ್ರಂಥಗಳಲ್ಲಿ ತಾಂಕರ ಧಾಸ್ಯದ ಅನೇಕ ಸಿದ್ಧಾಂತವಾಕ್ಯಗಳು ಕುಂಬರುವದರಿಂದ ವಿದ್ಯಾರಣ್ಯರೇ ಪಂಕರಧಾಸ್ಯವನ್ನು ಹುಟ್ಟಿಸಿರಬಹುದಲ್ಲವೆ! ಅಪ್ಪಯ್ಯದೀಕ್ಷಿತರ ರತ್ನತ್ರಯ-ಪರಿಕ್ಷೆ, ಶಿವಾದ್ವೈತನಿರ್ಣಯ, ಶಿವಾರ್ಕಮಣಿದೀಪಿಕಾ ಮೊದಲಾದ ಗ್ರಂಥಗಳಲ್ಲಿ ಶ್ರೀಕಂಠಶಿವಾಚಾರ್ಯನ ಧಾಸ್ಯಪಂಕ್ತಿಗಳೂ ಸಿದ್ಧಾಂತವೂ ತುಂಬುರುವದರಿಂದ ಶ್ರೀಕಂಠಧಾಸ್ಯವನ್ನು ಅಪ್ಪಯ್ಯದೀಕ್ಷಿತರೇ ಹುಟ್ಟಿಸಿರಬಹುದು ಹೀಗೆಯೇ ಅನೇಕ ಗ್ರಂಥಗಳನ್ನು ತಲೆಕೆಳಗೆ ಮಾಡಬಹುದು.

ಶಿವತತ್ತ್ವಸಾರದ ಆಘಿಪತಿಕತ್ವವನ್ನು ಹೇಳುವುದ ರಲ್ಲಿ ಒಂದು ರಹಸ್ಯವಿದೆ ಆ ಗ್ರಂಥದಲ್ಲಿ ಗುರುಜಂಗಮ ನಾಮಗಳೂ ಶ್ರೀಪತಿ ಪಂಡಿತ ನಾಮವೂ ಬಂದಿವೆ ಇವು ಶ್ರೀಪತಿ ಪಂಡಿತನ ಮತ್ತು ವೀರಶೈವನವತದ ಕಾಲವನ್ನು ೧೧ ನೆಯ ಶತಮಾನಕ್ಕಿಂತಲೂ ಹಿಂದೆ ಎಂದು ನಿರ್ಣಯಿಸಲು ಮುಖ್ಯ ಸಹಾಯಕಾರಿಗಳಾಗಿವೆ. ಇದು ರಾಯರಿಗೆ ಇಷ್ಟವಿಲ್ಲ ಹೊರಗೆ ನೋಡುವದಕ್ಕೆ ಹಯುವೆನರಾಯರು ನಿರ್ಣಯಿಸಿದ ಶ್ರೀಕರಧಾಸ್ಯದ ಕಾಲವನ್ನು ಖಂಡಿಸಿದ ಹಾಗೆ ನಡೆಸಿ ಶಿವತತ್ತ್ವಸಾರವು ೧೪ ನೆಯ ಶತಮಾನವಲ್ಲಿ ಹುಟ್ಟಿದಂತೆ ಹೊರಟಿರಿಸಿ ಶ್ರೀಕರಧಾಸ್ಯ ಶ್ರೀಪಂಡಿತರ ಕಾಲವೂ ಸಂಕಯಕಲ್ಪೋ ಒಮಾಗವದಲ್ಲ! ನಾರಾಯಣರಾಯರ ಈ ವೈಪರೀಯ ಚೇಷ್ಟೆ ಪರಿಷೀಲಧನೆಯಲ್ಲಿ ಎಷ್ಟುದೂಷ್ಟಗೆ ಸಹಾಯಕ ವಾಗುವುದೆಂಬುದನ್ನು ಸಹೃಹಿಲರಾಲೋಚಿಸಲಿ!

ಶಿವತತ್ತ್ವಸಾರದ ಕನ್ನಡ ಅನುವಾದದ ಪ್ರತಿಯೂ ಇತ್ತೀಚೆಗೆ ದೊರೆತಿದೆ ಆದರ ಬಗ್ಗೆ ಶ್ರೀ|| ವೆಗಿ ಪುಭಾಕರ ಶಾಸ್ತ್ರಿಗಳ ಲೇಖವನ್ನು ನವ್ಯ ವಿಭಾಗಿ ವರ್ಷ ೨ ಸಂಚಿಕೆ ೪ರಲ್ಲಿ ನೋಡಬಹುದು ನಾನು ಹಿಂದೆ ಉದಾಹರಿಸಿದ ಮಲ್ಲಿಕಾರ್ಜುನ ಪಂಡಿತಾರಾಧ್ಯನ ಶಿವತತ್ತ್ವ ಸಾರದ ತೆಲುಗುಪದ್ಯಕ್ಕೆ—

ಫರಮೆಳಿಗೆ ಮಲ್ಲಿಕಾರ್ಜುನ
ವರಪಂಡಿತಕವಿತುಡುನುಂಡಾ ನಿನ್ನಾಜ್ಞಾ !
ಫರಮೆಶಿಯಂ ಪ್ರಮಥಲೊಗಾ
ಪರಲೆಂದಿಲ್ಲಕುಷ ನಿನ್ನು ಬಮುಕಪೆಸಾಜ ॥

ಎಂಬ ಕನ್ನಡ ಪದ್ಯವು ಕನ್ನಡ ಶಿವತತ್ತ್ವಸಾರದಲ್ಲಿಯೂ ಇರುವದರಿಂದ ಆಧ್ರ ಶಿವತತ್ತ್ವಸಾರವನ್ನು ಮಲ್ಲಿಕಾರ್ಜುನ ಪಂಡಿತಾರಾಧ್ಯನೇ ವಿರಚಿಸಿದ್ದಾನೆಂಬುದು ನಿರ್ದ್ವಂತವೇ ಸರಿ ಕನ್ನಡ ಶಿವತತ್ತ್ವಸಾರವೆ ಕರ್ತೃತ್ವದ ವಿಷಯದಲ್ಲಿ ಇನ್ನೂ ವೃಪ್ತಿನಿರ್ಣಯವಾಗಿಲ್ಲ. ಪಾರಾಯಣರಾಯರಿಗೂ ಈ ವಿಷಯ ತಿಳಿಯವದಕ್ಕಾಗಿ ' ವಿಭೂತಿ ' ಸಂಚಿಕೆ ಕಳುಹಿಸಲಾಗಿದೆ

" ಬಸವನಿಗೆ ಪೂರ್ವದಲ್ಲಿ ಈ ಆರ್ವಾಚೀನರೂಪದಿಂದ ವೀರತ್ವಿವತ್ತೆಯುವಕ್ಕೆ ಯಾವ ಆಧಾರವೂ ಇಲ್ಲ " ಎಂದು ಬರೆಯುವ ರಾಯರಿಗೆ ಮತ್ತೊಮ್ಮೆ ವೀರತ್ವಿವ ಮತಗ್ರಂಥಗಳನ್ನು ಸಂಯಾಗಿ ಪರಿಶೀಲಿಸಿ ತಮ್ಮ ಊಹೆಗಳನ್ನು ಸರಪಡಿಸಿಕೊಳ್ಳಬೇಕೆಂದು ನಿವೇದಿಸುತ್ತೇನೆ.

" ವೀರಶೈವಾಚಾರ್ಯ ಪಂಚಕದಲ್ಲಿ ಕೆಲವರು ಬಸವನಿಗೆ ಪೂರ್ವಿಕರು, ಕೆಲವರು ಸಮಕಾಲೀಕರು, ಕೆಲವರು ಈಚೆಯವರು," ಎಂದು ರಾಯರು ಹೇಳಬಟ್ಟಿದ್ದಾರೆ. ಇದು ಕನ್ನಡ ಕವಿಚರಿತೆಯ ಸಂಗ್ರಹಾನುವಾದವೆಂತಲೂ ಹೇಳಬಹುದು.

ಶ್ರೀಕರಧಾಸ್ಯದ ಆದಿಯಲ್ಲಿ ಪ್ರಸಿದ್ಧನಾದ ರೇಣುಕಾಚಾರ್ಯನನ್ನೂ ತನ್ನ ಗುರುವಾದ ವಿಶ್ವೇಶ್ವರಾಚಾರ್ಯನನ್ನೂ ಶ್ರೀಪಂಡಿತನು ಸ್ತುತಿಸಿದ್ದಾನೆ. ದ್ವಿತೀಯಾಧ್ಯಾಯ ಕೃತೀಯಪಾದದ " ಸಮಾಧ್ಯಧ್ಯಾಯಾಶ್ಚ ॥ ೩೬ ॥ " ಎಂಬ ಸೂತ್ರದ ಧಾಸ್ಯದಲ್ಲಿ ಮರುಬಲಿದ್ದ

[೭ ನೆಯ ಪುಟವನ್ನು ನೋಡಿ.

ಪಂಚಾಚಾರ್ಯಪ್ರಭಾ

೧೯೪೦ ನೆಯ ಡಿಸೆಂಬರ್ ತಾ॥ ೨೦ನೇ ಸೋಮವಾರ

ಶ್ರೀಕರಭಾಷ್ಯವೂ ಷಟ್‌ಸ್ಥಲಗಳೂ

ನವಿಮ್ಯಾವಾರದ ಸಪ್ತತಿಯಲ್ಲಿ ಸಿಕಂದರ ಬಾದ ನಿವಾಸಿಗಳಾದ ವೀ॥ ಸಂ॥ ನಿದ್ಯಾನಿಧಿ ವಿದ್ಯಾರತ್ನ ಚಿದರೆ ಮರದ ವೀರಭದ್ರಶಾಸ್ತ್ರಿಗಳವರು ವ॥ ರಾ॥ ಸಿ ನಾರಾಯಣಾಯರ ಲೇಖವನ್ನು ಪ್ರಲಖಿಂಡನ ಕ್ಯಕವಾಗಿ ಬರೆದಿರುವ ಲೇಖದ ಕೆಲವು ಸಾರು ಕ್ಷುಧ ಗಳನ್ನು ಪ್ರಕಟಿಸಿದ್ದೇವೆ ಶ್ರೀವೀರ ವ್ರಶ ಸ್ತ್ರಿಗಳವರು ವ॥ ೦॥ ನಾರಾಯಣರಾಯರವರ ಅಸಂಬದ್ಧಪ್ರಲಾಪಗಳನ್ನು ಸಪ್ರಮಾಣವಾಗಿ ಖಂಡಿಸಿದ್ದಕ್ಕೆ ಒಚಿಕರು ತವರ ಲೇಖವನ್ನು ವಿಚಾರಕ್ಕಜ್ಜಿಯ ದ ಪರಿಲೇಖಿಬೇಕೆಂದಾ ಶಿಸ್ತೇವ ವ॥ ೦॥ ನಾರಾಯಣರಾಯರು ಒಂದು ಕೆಲವು ವಿಷಯಗಳಲ್ಲಿ ತಪ್ಪುದಿ ವಿಸ್ಸು ಹಿಡಿದಿರುವುದಕ್ಕೆ ವ॥ ೦॥ ಹಯಗವದನರು ಎಂದರೆ ಶ್ರೀಕರ ಹೃದಯ ಮೆಲೆ ಇಂಗ್ಲೀಷ್ ಬರಂಜಿ ರಂಜನೆಯಿಂ ಬರಿದಿರುವ ಇಂಟ್ರಡಕ್ಷನ್ ಬರಹವನ್ನು ಗಮನಿಸಿದ ಇಂಗ್ಲೀಷ್ ಭಾಷೆಯನ್ನು ಅಮ್ಯಸಮಾಡಿರವ ಜನರು ಸಂಸ್ಕೃತಪಲ್ಲಿರವ ವಾಕ್ಯಾರ್ಥಗಳನ್ನು ಸರಿಯಾಗಿ ನೋಡದೆ ಇ ಪ್ರೀಸಲ್ಲ ನವಿಲ್ಲವೆಂದು ಬರೆದಿರ ಪಪುಳಾಸ್ಪೈ ನಂಬಿ ಬಾಸ್ಸುಗಾರಿಕೆಯನ್ನು ಒರಿಯ ಜನತೆಯಲ್ಲಿ ಜ್ವಾಲೆಯ ಬ್ಬಿಟ್ಟು ಪಾಡಹತ್ತಿದ್ದಾರೆ ಇವರೀವಿಧವ ಪತನವನ್ನು ಎಷ್ಟು ಖಂಡಿಸಿದರೂ ತೀರದಾಗಿದೆ

ಕಣ್ಣಪಚ್ಚೆಯಿಂದು ಇಂಗ್ಲೀಷ್ನಲ್ಲಿ ಯಿ ದ್ಯಾತ್ಮವನ್ನು ಒದರಿರುವ ಶ್ರೀಕರಭಾಷ್ಯವನ್ನು ಕೆಲವು ಜನ ಇಂಗ್ಲೀಷ್ ಕಲಿತ ಲಿಂಗಧಾರಿಗಳು ಅವರ ಬಾಷೆಯನ್ನು ನೆಂಬಿ ಅವರಂತೆಯೇ ಒರಲಿಹತ್ತಿದ್ದಾರೆ ಈ ಜನರಿಗೆ ಸಸ್ಕೃತದ ಗಂಧವೇ ಗಾಳಿಯಿಲ್ಲವೆಂದು ಪ್ರಪಂಚ ಗ್ರಂಥಗಳನ್ನು ಸೋಪ ವುದಿಲ್ಲ ಸೋಪಿದ್ದರೂ ಆ ಪಾಂಡಿತ್ಯವು ಅವರಿಗೆ ಆ ಗ್ರಂಥದಲ್ಲಿ ಹುಗಿ ಬಂದಿಪ್ಪ ಸತ್ಯ ಅರ್ಥವನ್ನು ಸೋಡಿದರೆ ಸ್ವಸನಿವಸಿಸುತ್ತಿರುವುದನ್ನು ನೋಡಿದರೆ ಧರ್ಮದ ಪ್ರಜೆ ಮವಸ್ಸನ್ನು ಎಷ್ಟು ತೀಳಿಯಿದ್ದರೂ ಈ ಲಿಂಗಧಾರಿಯೆಯಂದಿದ ಬರುವ ಪ್ರಿರವಿಇವಸನ ಹೆಸರವ ವರ್ಣನೀಯವಲ್ಲವೆಂದೂ ಹೇಳಲ್ಲಾಗಿದೆ ಕನ್ನಡದೇಶದ ಲಿಂಗಧಾರಿಗಳಲ್ಲಿ ಇತ್ತೀಚೆಗೆ ಈ ನಿವಸನ ಜನರು ಹೆಚ್ಚಾಗಿಹತ್ತಿದ್ದಾರೆ ಇದು ಈ ಮತದ ದೌರ್ಭಾಗ್ಯವೆಂದೇ ಹೇಳಬೇಕಾಗುತ್ತದೆ ಅಸ್ತು!

ವೀರಶೈವಮತಕ್ಕೆ ಷಟ್‌ಸ್ಥಲಸಿದ್ಧಾಂತವು ಮೂಲ ಭೂತವಾದುದು ಈ ಸಿದ್ಧಾಂತವನ್ನು ಶಿವಾಗಮಗಳು ಘಂಟಾಘೋಷವಾ ಗಿ ಸಾರುತ್ತಿರುವವು ಪ್ರಸಮರ್ಹರ್ಷಿಗಳು ಸಹ ಲಿಂಗಪುರಾಣದ ಉತ್ತರಭಾಗದ ೨೧ ನೆಯ ಅಧ್ಯಾಯದಲ್ಲಿ ಷಟ್‌ಸ್ಥಲಸ್ವರೂಪವನ್ನು ಚೆನ್ನಾಗಿ ವಿವರಿಸಿರುವರು ಬಹು ಪುರಾತನ ಗ್ರಂಥವಾದ ಸಿದ್ಧಾಂತ ಶಿಖಾಮಣಿಯು ಕೇವಲ ಷಟ್‌ಸ್ಥಲಸ್ವರೂಪವನ್ನೇ ಸ್ಫುಟವಾಗಿ ವಿವರಿಸುತ್ತಿರುವುದು ಅಂಥಾದಿಸಿದ್ಧವಾದ ಈ ಷಟ್‌ಸ್ಥಲವಿಷಯವನ್ನೇ ಶ್ರೀಪತಿಪಂಡಿತಾರಾಧ್ಯರು ತಮ್ಮ ಭಾಷ್ಯದಲ್ಲಿ ಅನೇಕ ಕಡೆಗೆ ಉಲ್ಲೇಖವಿಸಿರುವರು ಮಿ ರಿ ನಾರಾಯಣರಾಯರು ಮೂಲಭಾಷ್ಯವನ್ನು ಕಣ್ಣಿರೆದು ನೋಡದೆ ಶ್ರೀಕರಭಾಷ್ಯವನ್ನು "ಭಕ್ತ ಮಾಹೇಶ ಪ್ರಸಾದಿ ಸ್ಥಾಣಲಿಂಗಿ ಶರಣ ನಿಸ್ಥ" ಎಂಬ ಷಟ್‌ಸ್ಥಲಗಳು ಉಕ್ತವಾಗಿಲ್ಲವೆಂದೂ, "ಸೃಷ್ಟಿ ಸ್ಥಿತಿ ಲಯ-ಕಾಯಿಕ ವಾಚಿಕ ಮಾನಸಿಕ" ಎಂಬ ಪಟ್ಟಿಯಿಂದ ಷಟ್‌ಸ್ಥಲಗಳು ಉಕ್ತವಾಗಿರುವುದೆಂದೂ, ಭಕ್ತಾದಿ ಷಟ್‌ಸ್ಥಲಗಳ ಹೆಸರುಗಳು ಈಚಿನವೆಂದೂ ಹೇಳಿರ ತ್ತಾರೆ ಈ ರಾಂಕರ ಮಾತುಗಳನ್ನೇ ನಂಬಿ ಧರ್ಮಶಾಸ್ತ್ರದ ಮರ್ಮವನ್ನರಿಯದ ಕೆಲವರು ಲಿಂಗಧಾರಿಗಳು ಹಾಗೆಯೇ ಬರೆದಿರುತ್ತಾರೆ ಇದು ಅತ್ಯಂತ ತಪ್ಪಾದ ವಿಷಯವಾಗಿರುತ್ತದೆ ಶ್ರೀಕರಭಾಷ್ಯದಲ್ಲಿ "ಸೃಷ್ಟ್ಯಿ ಸ್ಥಿತಿ" ಇತ್ಯಾದಿಗಳಿಗೆ ಷಟ್‌ಸ್ಥಲಗಳೆಂದು ವಿಲ್ಲಿಯೂ ಪ್ರಯೋಗಿಸಿಲ್ಲ ಹಾಗೆ ಪ್ರಯೋಗಿಸಲಿಕ್ಕೆ ಸಲಂಭವೂ ಇಲ್ಲ ಈ ಅಸಂಬದ್ಧ ವಿಷಯವನ್ನು ಯಾವ ಮಹಾನುಭಾವರು ಮೊದಲು ಪ್ರಕಟಿಸಿದವೋ ತಿಳಿಯದಾಗಿದೆ ಶ್ರೀಕರ ಭಾಷ್ಯದ ೧೩ನೆಯ ಅಧ್ಯಾಯ ೧೩ನೆಯ ಪಾದ "ಜನ್ಮಾದ್ಯಸ್ಯ ಯತಃ" ಎಂಬ ದ್ವಿತೀಯಸೂತ್ರದ ಭಾಷ್ಯದಲ್ಲಿ— "ಯದ್ಯಕ್ತ್ಸ್ಥಲಮಿತ್ಯಾದಿಸ್ತತ್ಸರ್ವಜ್ಞತ್ವೆ ಪ ಚ್ಯತೆ ಇತ್ಯಾದಿ ಶ್ಲೋಕಗಳಿಂದ ಭಕ್ತಾದಿಷಟ್‌ಸ್ಥಲಗಳು ವಿನಲ್ಲಿ ಸರ್ವಜ್ಞತ್ವಾದಿಷಡ್ವಿಧಪ್ರಕಾರಗಳಿಂದು ಹೇಳಲ್ಪಟ್ಟಿವೆ ಅಲ್ಲದೆ ಇದೇ ಭಾಷ್ಯದ ೩ನೆಯ ಅಧ್ಯಾಯ, ೩ನೆಯ ಪಾದ ೧೫ನೆಯ ಅಧಿಕರಣದ "ವೇಷಯೋಗಾದ್ವಾ ಸೋಕಿಸಿ" ಎಂಬ ಸೂತ್ರದ ಒಳ್ಯದಲ್ಲಿಯೂ ಸಹ ಷಟ್‌ಸ್ಥಲವಿಷಯವು ಚೆನ್ನಾಗಿ ಪ್ರತಿಪಾದಿಸಲ್ಪಟ್ಟಿರುವುದು ಶ್ರೀಕರಭಾಷ್ಯದಲ್ಲಿರುವ ಆ ವಾಕ್ಯಗಳನ್ನು ಇಲ್ಲಿ ಕೆಳಗೆ ಉದಾಹರಿಸಲ್ಪಟ್ಟಿರುವುವು

ಕ್ಷಿಪ್ತೋತ್ಪನ್ನ ತಿಸ್ಸನು ವರ್ಸೀನಿನ ಕ್ಕುತ್ಪೈಕೃತ ಸ್ತಲೇಸ ಗಾಧಿ । ಪಕಪಕಪ ವಾದಿಪರಮಪಸ್ಯಕಾಶನಾ ಮಾನಾಭೀಷು ಲದಿ ಕಾ ತ್ರಸ್ಯಗಾಪ ನಸಿ ಸಿದಿಷ್ಯಾಸನು ಕ್ಷಲಿಕಾಷಾ ವಕ್ಷಸ್ಥಾ ಮಿದ್ಧಿಸ್ಥಿ ಸ್ಥಿತ್ಯಾ ಲ್ಯಾಗರಿತಿ ಲಿಂಗಾ ಧಾರಿಣಾ ವೀರಭದ್ರಾ ಖ್ಯಸ್ಯ ಭಕ್ತ ಸ್ಥಲೇ ಲಿಂಗಾ ಧಾರಿಣಾ ದ್ವಾರಾ ಲಿಂಗಾ ಧಾರಿಣೀ ಮಾಹೇಶ್ವರ ಸ್ಥಲೇ ಲಿಂಗಾ ಧಾರಿಣೀ ಪ್ರಸಾದಿ ಸ್ಥಲೇ ಲಿಂಗಾ ಧಾರಿಣೀ ಪ್ರಾಣಲಿಂಗಿ ಸ್ಥಲೇ ಲಿಂಗಾ ಧಾರಿಣೀ ಶರಣಸ್ಥಲೇ ಲಿಂಗಾ ಧಾರಿಣೀ ಐಕ್ಯಸ್ಥಲೇ ಲಿಂಗಾ ಧಾರಿಣೀ ಪ್ರಾಣಲಿಂಗಿನಿಸ್ಥಲೇ ಕಾಂಕ್ಷಾ ಲಿಂಗಾ ಧಾರಿಣೀ ಸರ್ವಜ್ಞತ್ವಾದಿ ಷಡ್ವಿಧ ಪ್ರಕಾರ ಲಿಂಗಾ ಧಾರಿಣೀ ಸಂಬಂಧಾ

ಹೊಸಚಾರ್ಲ್ಸ ನುಂಡಲನೇರ್ಪ ಡುವದೇ ?

ಬಾಲ್ಕನ್ ಕ್ಷೇತ್ರದಲ್ಲಿ ಹೊಸಗುಂಪೊಂದು ರೂಪುಗೊಳ್ಳುವ ಸೂಚನೆಗಳು ಕಾಣಬರುತ್ತಿವೆ. ಯುಗೊಸ್ಲೋವಿಯಾ, ಟರ್ಕಿ ಮತ್ತು ಗ್ರೀಸ್‌ಗಳು ಒಂದಾಗಿ ಬಹುದು ಈಚೆಗೆ ಅಂಕಾರ, ಬೆಲ್‌ಗ್ರೇಡ್ ಮತ್ತು ಸೋಫಿಯಾಗಳ ಸಂಬಂಧವು ನಿಕಟವಾಗುತ್ತಿದೆ ಯುಗೊಸ್ಲೋವಿಯದ ಸ್ವಾತಂತ್ರ್ಯಕ್ಕೆ ಚ್ಯುತಿ ಬಂದರೆ ಮತ್ತು ಬಲ್ಗೇರಿಯವನ್ನು ಬಲವಂತ ಪಡಿಸಿದವರಾದರೆ ಬಾಲ್ಕನ್ ಕ್ಷೇತ್ರದಲ್ಲಿ ಬೆಂಕಿಹತ್ತಿಕೊಳ್ಳುವದೆಂದು 'ಆಸ್ಟ್ರ' ಎಂಬ ಟರ್ಕಿ ಪತ್ರಿಕೆಯು ಎಚ್ಚರಿಕೆ ಕೊಟ್ಟಿದೆ.

ಬಲ್ಗೇರಿಯದ ನಿರ್ಧಾರ

ಬಲ್ಗೇರಿಯದ ದೊರೆಗಳಾದ ಬೋರಿಸ್‌ರವರು ಜರ್ಮನಿಗೆ ಹೋಗಿ ಹಿಟ್ಲರರೊಡನೆ ಮಾತಾ-ಕತೆ ನಡೆಸಿ ಹಿಂದಿರುಗಿ ಬಂದಮೇಲೆ ಆಕ್ಸಿಸ್ ರಾಷ್ಟ್ರಗಳ ಗುಂಪಿಗೆ ಸೇರಲು ಬಲ್ಗೇರಿಯವು ಇಷ್ಟಪಡುವದಿಲ್ಲವೆಂದು ತಿಳಿಸಿದ್ದಾರೆ ಮತ್ತು ರಷ್ಯದೊಡನೆ ತನ್ನ ಸಂಬಂಧವನ್ನು ವೃದ್ಧಪಡಿಸಿಕೊಳ್ಳಲು ಅದರ ಅಧಿಕಾರಿಗಳೊಂದಿಗೆ ಚರ್ಚೆ ನಡೆಸಿರುತ್ತಾರೆ ಬಲ್ಗೇರಿಯವು ಗ್ರೀಸ್ ಮತ್ತು ಟರ್ಕಿಗಳ ವಿಷಯದಲ್ಲಿ ಸಹಾನುಭೂತಿಯುಳ್ಳವಾಗಿದೆ ಇಟಲಿ ಗ್ರೀಸ್ ಯುದ್ಧದಲ್ಲಿ ಪ್ರವೇಶ ಮಾಡಲು ಅದು ಹೆಸ್ಸಪಡುವದಿಲ್ಲ

ಇಟಲಿಯ ಯೋಧರು ಶರಣಾಗತರಾದರು

ಇಟಲಿಯ ಹೊಸ ಸೈನ್ಯ ವ್ಯೂಹಗಳನ್ನು ಎಲ್ಲಕ್ಕಿಂತ ಹೆಸ್ಸಯೂ ಗ್ರೀಕರು ನಿರೋಧಿಸಿದ್ದಾರೆ ಎಲ್ಲಾ ಬರ್ಸ್ಟಾ ಹೆತ್ತರ ಇಟಲಿ ಸೈನಿಗಳು ದೇಗೆ ಎದ್ದಿವೆಯೆಂದು, ಅಥೆನ್ಸ್ ರೇಡಿಯೊ ತಿಳುಹಿಸಿರುತ್ತದೆ ಗ್ರೀಕರು ಆಲ್ಬೇನಿಯ ದೊಳ್ಕೆ ಬಹದೂರ ನುಗ್ಗಿ ಇಟಲಿಯವರಲ್ಲಿ ಅವ್ಯವಸ್ಥೆಯುಂಟುಮಾಡಿದ್ದಾರೆ ಬೇಬಾರ ಗಡಿಪ್ರದೇಶದಲ್ಲಿ ಈಗ ಕೆಲವು ದಿನಗಳಿಂದೀಚೆಗೆ 1400 ಇಟಾಲಿಯ ಸೈನಿಕರು ಮತ್ತು ಆಲ್ಬೇನಿಯಸ್ಥರೂ ಯುಗೊಸ್ಲೊವಿಯ ಅಧಿಕಾರಿಗಳಿಗೆ ಶರಣಾಗತರಾಗಿದ್ದಾರೆ

ಆಟ್ಲಿಯವರ ಭಾಷಣ

' ಇಂಗ್ಲೆಂಡಿಗೂ ಯೂರೋಪಿಗೂ ಇತರ ದೇಶಗಳಿಗೂ ಸ್ವಾತಂತ್ರ್ಯವು ಬೇಕೆಂದು ಜಪೇತ್ಸಿಸುವವರು ಅದಕ್ಕೆ ತಕ್ಕ ಬೆಲೆಯನ್ನು ಕೊಡಬೇಕು ಕುರಿಯ ಮಂದೆಯಲ್ಲಿ ಒಂತಿ ನೆಲಬೇಕಾದರೆ ಮೊದಲು ತೋಳವನ್ನು ದೂರ ಪಾಗಿಡಲು ಪ್ರಯತ್ನಿಸಬೇಕು ಹಟ್ಟಿಗರ ಶಾಂತಿಯ ಮಾತುಗಳನ್ನು ನಂಬಿ ಬೆಡಗಾಗಿ ಆನೆಕಬೇಕಗಳು ಈಗ ಟಶ್ಚಾತ್ಯಾಪಪಡಹತ್ತಿವೆ ಡೆನ್ಮಾರ್ಕ್, ನಾರ್ವೆ, ಹಾಲೆಂಡ್ ಮತ್ತು ಬೆಲ್ಜಿಯಂ ಈ ದೇಶಗಳ ಗತಿಯನ್ನು ಉದಾಹರಣೆಗಾಗಿ ಸೂಚಿಸುತ್ತೇನೆ " ಎಂಬುದಾಗಿ ಶ್ರೀ ಆಟ್ಲಿಯವರು ಕ ಮನ್ಸ್‌ಸಭೆಯಲ್ಲಿ ತಿಳುಹಿಸಿದರು

ಅಮೆರಿಕೆಯ ಜಾರ್ಸ ಶಾಸನವನ್ನು ರದ್ದುಪಡಿಸುವ ವಿಚಾರ

ಬ್ರಿಟನ್ನಿಗೆ ಅಮೆರಿಕೆಯು ಹಣಕಾಸಿನ ಸಹಾಯ ನೀಡಲು ಅಡ್ಡಿಯಾಗಿರುವ ಜಾರ್ಸ ಶಾಸನವನ್ನು ರದ್ದುಗೊಳಿಸುವ ವಿಚಾರವಾಗಿ ಈಸಲದ ಶಾಸನಸಭಾಧಿವೇಶನದಲ್ಲಿ ಯಾವ ಕಾರ್ಯಕ್ರಮವನ್ನೂ ಕೈಗೊಳ್ಳುವದಿಲ್ಲ ವೆಂದು ವಿದೇಶಾಂಗ ವ್ಯವಹಾರ ಸಚಿವನಾದ ಆಡ್ಲೈ ರಾದ ಸನ್ಲೇಟರ್ ಜಾರ್ಜ್‌ರವರು ವೃತ್ತಪತ್ರಿಕಾ ಪ್ರತಿನಿಧಿಗಳಿಗೆ ತಿಳುಹಿಸಿದರು. ಮತ್ತು ಈ ಬಗೆಲಾವಣೆ ಸಂಬಂಧದಲ್ಲಿ ಅಮೆರಿಕೆಯಲ್ಲಿ ಬ್ರಿಟನ್ನಿನ ಆಸ್ತಿಪಾಸ್ತಿಗಳು ಎಸ್ಟಿನೆ ಎಂಬುದನ್ನು ಪರಿಶೀಲಿಸಬೇಕೆಂದು ಬಂದಿರುವ ಸಲಹೆಯನ್ನು ಈಗಲೇ ಪರಿಶೀಲಿಸುವುದಾಗಿಯೂ ಆ ವಿಷಯಗಳನ್ನು ಉಪಸಮಿತಿಗೆ ಒಪ್ಪಿಸಲಾಗುವದೆಂದೂ ಹೇಳಿದರು

ಇಟಲಿಯ ವಿಮಾನಗಳು ಗ್ರೀಕರ ಕೈಸೇರಿದವು

ಆಲ್ಬೇನಿಯದಲ್ಲಿ ಗ್ರೀಕರು ಮುಂದುವರೆಯುತ್ತಿದ್ದಾರೆ ಇಟಲಿ ಸೈನಿಕರು ಬಿಟ್ಟು ಓಡಿಹೋದ ಅಲ್ಬೇನಿಯನ್ನರು ಗ್ರೀಕರಿಗೆ ಸಹಾಯವನ್ನು ಗ್ರೀಕರನ್ನು ಹಿಮ್ಮೆಟ್ಟಿಸಲು ಇಟಲಿಯು ಮಾಡುತ್ತಿರುವ ಪ್ರಯತ್ನವೆಲ್ಲವೂ ವಿಫಲವಾಗಿದೆ.

ಫ್ರಾನ್ಸಿನಲ್ಲಿ ಬ್ರಿಟನ್ನಿನ ಮೇಲೆ ಪ್ರೀತಿ

ಫ್ರಾನ್ಸಿನಲ್ಲಿ ಬ್ರಿಟನ್ನಿನ ಪಕ್ಷಾಭಿಮಾನವು ಜನರಲ್ಲಿ ದಿನೆದಿನೆಕ್ಕೂ ಹೆಚ್ಚುತ್ತಲಿದೆ. ಅನೇಕ ಮಂದಿ ಫ್ರೆಂಚ್ ತರುಣರು ಬ್ರಿಟನ್ನಿನ ಅಥವಾ ಜನರಲ್ ಡಿಗಾಲ್‌ರವರ ಸೈನ್ಯವನ್ನು ಸೇರಿಕೊಳ್ಳಲು ಫ್ರಾನ್ಸಿನಿಂದ ತಪ್ಪಿಸಿಕೊಂಡು ಬರುವ ಪ್ರಯತ್ನದಲ್ಲಿ ನಿರತರಾಗಿದ್ದಾರೆ

ರಷ್ಯದ ನಿರ್ಧಾರ!

ಅಮೆರಿಕೆಯಲ್ಲಿರುವ ರಷ್ಯದ ರಾಯಭಾರಿಗಳಿಗೂ ಮತ್ತು ಅಮೆರಿಕೆಯ ವಿದೇಶಕಾರ್ಯಯ ಉಸಕಾರ್ಯದರ್ಶಿಗಳಾದ ಶ್ರೀ ಸಮ್ನರ್‌ವೆಲ್ಲ್‌ರವರಿಗೂ ನಡೆಯುತ್ತಿರುವ ಮಾತುಕುಗಳು ಎಂ ಮಾಲಟೋವ್‌ರ ಬರ್ಲಿನ್ ಯಾತ್ರೆಯಕಾಲಕ್ಕೆ ಎಲ್ಲಾಸಲ್ಪಟ್ಟಿದ್ದವು ಅದನ್ನು ಈಗ ಮುಂದೆ ನಡಿಸಲಾಗಿದೆ ಇದರಿಂದ ರಷ್ಯವು ಆಕ್ಸಿಸ್ ರಾಷ್ಟ್ರಗಳಕಡೆ ಸೇರಿದ ಮನೋವೃತ್ತಿಯೆಂದೆ ಕೂಡಿಲ್ಲ ನೆಂಬುದು ಸ್ಪಷ್ಟಪಡುವುದು

ವೈಸರಾಯರ ಭಾಷಣ

ವೈಸರಾಯರವರು ಕೇಂದ್ರ ನ್ಯಾಯ ವಿಧಾಯಕ ಸಚೆಯಲ್ಲಿ ಭಾಷಣಮಾಡುತ್ತಾ " ಇಂಡಿಯಾದಿಂದ ಹೋಗಿರುವ ಸೈನಿಕರು ರಣರಂಗದಲ್ಲಿ ತಮಗೆಗೂ ಮಾಡಿರುವ ಇಸ್ಸೂ ನೂಡುತ್ತಿರುವ ಶ್ಲಾಘನೀಯ ವಾದ ಕಾರ್ಯಗಳನ್ನಾಗಲಿ ಮತ್ತು ಬ್ರಿಟಿಷ್ ಇಂಡಿಯಾದವರೂ ಇಂಡಿಯಾದಲ್ಲಿರುವ ಸಂಸ್ಥಾನಗಳವರೂ ಜನ ಸಾಹಾಯನನ್ನೂ ಪ್ರಬ್ಯ ಸಹಾಯವನ್ನೂ ಸಾವ ಗ್ರಿಗಳ ಸಹಾಯವನ್ನೂ ಒಡಗಿಸಿಕೊಡುತ್ತಾ ಒಂದಿರುವುದನ್ನಾಗಲಿ ಎಸ್ಟ ಸ್ತೋತ್ರಮಾಡಿದರೂ ಸಾಲದು' ಎಂದು ನುಡಿದರ

ಯುದ್ಧದ ಖರ್ಚುಬಾಬುಗಳನ್ನ ಕುರಿತು ಯ ದ್ಧ ಸನ್ನಾಹಗಳಿಗೂ ಯುದ್ಧಕಾರ್ಯಗಳಿಗೂ ಸಂಬಂಧಪಟ್ಟ ಒಹಳ ಹೆಚ್ಚಾದ ಭಾರವು ಇಂಡಿಯಾ ಸರ್ಕಾರದ ಮೇಲೆ ಬಿದ್ದಿರುವ ಕಾರಣ ಸಿಟ್ಟುಬಿಟ್ಟಿಗೆ ಹೆಚ್ಚುಬಲೆಬೇಕಾಗಿ ಬಂದಿತು ಮತ್ತು ಹೆಚ್ಚಿನ ಖರ್ಚುಬಾಬುಗಳಿಗೂ ತಲೆಬೊಪ್ಪಲೆಬೇಕಾಗಿ ಬಂದಿತ ಅದರೂ ಈ ಸಂದರ್ಭದಲ್ಲಿ ನಾನು ಹೇಳಲಬೇಕ್ಷಿಸುವ ಒಂದು ಮಾತೆಂದರೆ—ರಾಜ್ಯಾಡಳಿತದಲ್ಲಿ ಏಷ್ಟವೆ ಯಾವ ಮುಖ್ಯವೆಂಬುದನ್ನ ನಾನು ಸಂಪೂರ್ಣವಾಗಿ ತಿಳಿದಿರುತ್ತೇನೆ ಈಗ ನಾವು ದೇಶಸಂರಕ್ಷಣೆಗಾಗಿ ಬಹಳ ಹಣವನ್ನು ಖರ್ಚುಮಾಡಿಬಿಟ್ಟು ಸರ್ಕಾರದ ಹೆಬ್ಬುವಳಿಯಲ್ಲಿ ಸಾಲದೆ ಬರವ ಹಣವನ್ನು ಹೊಸ ತೆರಿಗೆಯ ರೂಪದಲ್ಲಿ ಬರಮಾಡಿಕೊಳ್ಳಬೇಕು ಇದನ್ನು ಬಿಟ್ಟು ಸುಮಗೆ ಬೇರೆ ಮಾರ್ಗವೇ ಇಲ್ಲ "

ತಮ್ಮ ಭಾಷಣದ ಅಂತ್ಯದಲ್ಲಿ " ಕಳೆದ ಆಗಸ್ಟ್ ತಾ 8 ರಲ್ಲಿ ನಾನು ಸಾರ್ವಭೌಮ ಸರ್ಕಾರದ ಪರವಾಗಿ ಒಂದು ಹೇಳಿಕೆಯನ್ನು ಪ್ರಕಟಿಸಿದೆನಷ್ಟೆ! ಆ ಹೇಳಿಕೆಯು ಬ್ರಿಟಿಷ್ ರಾಜ್ಯಾಡಳಿತವಲ್ಲಿ ಭರತಖಂಡವು ಸ್ವಾತಂತ್ರ್ಯವನ್ನೂ ಸಮಭಾಗವನ್ನೂ ಪಡೆದುಕೊಳ್ಳುತ್ತದೆಂಬುದನ್ನು ಪುನಃ ದೃಢಪಡಿಸುವುದಾಗಿದ್ದಿತು ಭರತಖಂಡವು ಈ ಗುರಿಗೆ ಮುಟ್ಟಬೇಕೆಂಬುದೇ ಸಾರ್ವಭೌನರ ಮತ್ತು ಬ್ರಿಟಿಷ್ ಪಾರ್ಲಿಮೆಂಟ್ ಸಭೆಯ ಆಶಯ ಇದನ್ನು ಪ್ರಕಟಿಸಿ ಇವತ್ತಿಗೆ ಒಪ್ಪತಿಂಗಳಾಯಿತು ಮುಂದೆ ಇಂಡಿಯಾದಲ್ಲಿ ಸ್ವರಾಜ್ಯ ಸ್ಥಾಪನೆಗೆ ಬೇಕಾದ ಕಟ್ಟಳೆ ಕಾನೂನುಗಳನ್ನು ವಿರ್ಪಡಿಸುವ ಜವಾಬುದಾರಿಕೆಯು ಪ್ರತಿನಿಧಿಗಳಿಂದ ಕೂಡಿರುವ ಕೇಂದ್ರ ಶಾಸನಸಭೆಗೆ ಇರಬೇಕೆಂಬ ಕೋರಿಕೆಗೆ ಆ ಹೇಳಿಕೆಯು ಸಾರ್ವಭೌಮ ಸರ್ಕಾರದವರ ಸಮ್ಮತವನ್ನು ವ್ಯಕ್ತಪಡಿಸಿತು. ಹೀಗಿದ್ದರೂ ಆ ವಿಚಾರಣೆಯು ಮಾಡುವಲ್ಲಿ ಅಲ್ಪಸಂಖ್ಯಾತರಾದ ಕೋಮುಗಳವರ ಅಭಿಪ್ರಾಯಗಳಿಗೆ ಪೂರ್ಣ ಲಕ್ಷ್ಯಕೊಡಬೇಕೆಂಬುದು ಸಾರ್ವಭೌಮ ಸರ್ಕಾರದವರ ಆಶಯವೆಂದು ಅಮ ಒತ್ತಿ ಹೇಳುವುದಾಗಿತ್ತು ಈ ಉದ್ದೇಶಗಳನ್ನು ಯಾವ ಕ್ರಮವನ್ನನುಸರಿಸಿ ಸಿದ್ಧಿಗೆ ತರಬೇಕೆಂದರೆ ಸ್ನೇಹಭಾವದ ಒಪ್ಪಂದಗಳ ಆಧಾರದ ಮೇಲೆ ಮುಖ್ಯವಸ್ತುವಾದ ಪಕಲ ಪಕ್ಷಗಳ ಪ್ರತಿನಿಧಿಗಳಿಂದ ಕೂಡಿರುವ ಒಂದು ಮಂಡಲಿಯನ್ನು ನೂತನ ರಾಜ್ಯಾಂಗ ರಚನೆಯನ್ನು ಕಲ್ಪಿಸುವುದಕ್ಕೆ ವಿರ್ಪಡಿಸಬೇಕು ಯುದ್ಧವು ಮುಗಿದ ಕೂಡಲೆ ಇಂಥ ಮಂಡಲಿಯು ವಿರ್ಪಾಡಾಗಬೇಕು.

" ಈ ಪಥ್ಯೆ ನನ್ನ ಕಾರ್ಯಕಾರಿ ಮಂತ್ರಾಲೋಚನಾ ಸಭೆಗೆ (Executive Council) ಸೇರಿರುವ ಭಾರತೀಯರಾದ ರಾಜಕೀಯ ನಾಯಕರನ್ನು ಕರೆಯಿಸಿಕೊಳ್ಳುವುದಕ್ಕೂ ಇಂಡಿಯಾವಿನ ಸಂಸ್ಥಾನಗಳ ಮತ್ತು ಇತರ ಭಾಗಗಳ ಪ್ರತಿನಿಧಿಗಳಿಂದ ಕೂಡಿರುವ ಯುದ್ಧ ಸಂಬಂಧವಾದ ವಿಚಾರವನ್ನು ಹೇಳುವ ಮಂತ್ರಾಲೋಚನಾ ಸಭೆಯನ್ನು (War Advisory Council) ವಿರ್ಪಡಿಸಿಕೊಳ್ಳುವುದಕ್ಕೂ ನನಗೆ ಅಧಿಕಾರವನ್ನು ಕೊಡಲ್ಪಟ್ಟಿರುವುದಾಗಿ ಈ ಸಲಹೆಗಳಿಗೆ ಇಂಡಿಯಾದಲ್ಲಿಯೂ ಕೂಡ ಅನೇಕರ ಆಭಿಪ್ರಾಯಗಳು ಬೆಂಬಲವಾಗಿದ್ದವು ಅದರೆ ನನ್ನ ಕಾರ್ಯಕಾರಿ ಮಂತ್ರಾಲೋಚನ ಸಭೆಯನ್ನು ವಿಸ್ತರಿಸುವ ವಿಷಯದಲ್ಲಿ ಇಂಡಿಯಾದಲ್ಲಿರುವ ರಾಜಕೀಯ ನಾಯಕರಿಂದ ನಿರೀಕ್ಷಿಸಲಾಗಿದ್ದಷ್ಟು ಸಹಾಯವು ನನಗೆ ಒದಗಿರುವುದಿಲ್ಲ ಇಂಡಿಯಾದಲ್ಲಿರುವ ಮುಖ್ಯವಾದ ರಾಜಕೀಯ ಪಕ್ಷಗಳವರು ಈಗಿನ ಸಂದರ್ಭದಲ್ಲಿ ತಮಗೆ ದೊರೆತಿರುವ ಸುಯೋಗವನ್ನು ಉಪಯೋಗಿಸಿಕೊಳ್ಳುವುದಕ್ಕೆ ಸಿದ್ಧರಾಗಿಲ್ಲ

ಸಾರ್ವಭೌಮ ಸರ್ಕಾರದವರು ಆಗಸ್ಟ್ ತಾ 8 ರಲ್ಲಿ ಮಾಡಿದ ಆ ಸಲಹೆಗಳನ್ನು ಹಿಂದಕ್ಕೆ ತೆಗೆದುಕೊಳ್ಳುವುದನ್ನು ತೀರ್ಮಾನಿಸಿರುವುದಿಲ್ಲ ಆ ಸಲಹೆಗಳಿಗೆ ಸಾಕಾದಷ್ಟು ಪರಿಮಾಣವಲ್ಲಿ ಬೆಂಬಲವು ದೊರೆಯುತ್ತಾ ಇವೆಯೆಂಬುದು ಮಂತಟ್ಟಾದ ಕೂಡಲೆ ಅವುಗಳನ್ನು ಕಾರ್ಯರೂಪಕ್ಕೆ ತರಲು ಈಗಲೂ ಸಿದ್ಧರಾಗಿಯೇ ಇರುತ್ತಾರೆ. ಆದರೆ ಅಷ್ಟರ ಮಟ್ಟಿನ ಬೆಂಬಲವು ಇನ್ನೂ ದೊರೆತಿಲ್ಲ ನೆಂಬುದು ಸ್ಪಷ್ಟವಾಗಿಯೇ ಇರುವ ಕಾರಣ ನಾನು ಕಾರ್ಯಕಾರಿ ಮಂತ್ರಾಲೋಚನಾ ಸಭೆಯನ್ನು ವಿಸ್ತರಿಸುವುದಕ್ಕೆ ತೊಡಗುವುದಾಗಲಿ ಯುದ್ಧ ಸಂಬಂಧವಾದ ವಿಚಾರವನ್ನು ಹೇಳುವ ಮಂತ್ರಾಲೋಚನಾಸಭೆಯನ್ನು ಸ್ಥಾಪಿಸುವುದಾಗಲಿ ನ್ಯಾಯವಾಗಿರಲಾರದೆಂದು ಸಾರ್ವಭೌಮ ಸರ್ಕಾರದವರು ತೀರ್ಮಾನಿಸಿರುತ್ತಾರೆ " ಎಂದು ಹೇಳಿದರು

ಇಂಡಿಯದ ಗೋಣಿಚೀಲಗಳಿಗೆ ಆರ್ಡರ್

ಇಂಡಿಯಾ ಸರ್ಕಾರವು ಕಲ್ಕತ್ತೆಯ ಸಣಬು ಗಿರಣಿ ಸಂಘಕ್ಕೆ 600ಲಕ್ಷ ಗೋಣಿಚೀಲಗಳಿಗೆ ಆರ್ಡರ್ ಕೊಟ್ಟಿದೆ ಆ ಚೀಲಗಳನ್ನು 1941 ನೇ ಜನವರಿಯಿಂದ ತಿಕಂಬರ್ ಒಳಗೆ ಒದಗಿಸಬೇಕಾಗಿದೆ

ಮೈಸೂರು ಸರ್ಕಾರದವರು ಹುಲ್ಲುಬನ್ನಿಯನ್ನು ಮಲಾಲು ಮಾಡುತ್ತಿದ್ದುದರಿಂದ ಸರ್ಕಾರಕ್ಕೆ 70 ಸಾವಿರ ರೂ ಪಾಯಿಗಳ ವರಮಾನ ಬರುತ್ತಿತ್ತು ಇದನ್ನು ಮೊಲಾಲು ಮಾಡುವುದರಿಂದ ವೃತ್ತಿಗರಿಗೆ ಹೊಂದೆಯೊಗುವುದೆಂದು ಪ್ರಜಾಪ್ರತಿನಿಧಿಸಭೆಯಲ್ಲಿಯೂ ನ್ಯಾಯವಿಧಾಯಕಸಭೆಗಳಲ್ಲಿಯೂ ಸದಸ್ಯರು ಪದೇಪದೇ ಆರಿಕಮಾಡಿರೋಡಿದ್ದರಿಂದಲೇ ಕಳೆದ ಪ್ರಜಾಪ್ರತಿನಿಧಿಸಭೆಯಲ್ಲಿ ಅದನ್ನು ವಜಾಮಾಡಬೇಕೆಂಬ ನಿರ್ಣಯವು ಅನುಮೋದಿಸಲ್ಪಟ್ಟಿತು ಆವರಂತೆ ವೈಸೂರು ರ್ಕಾದವರು ಹುಲ್ಲುಬನ್ನಿ ತೆರಿಗೆಯನ್ನು ಸಂಪೂರ್ಣವಾಗಿ ವಜಾಮಾಡಿ ಒಂದು ಆಜ್ಞೆಯನ್ನು ಹೊರಡಿಸಿರುತ್ತಾರೆ

[೩ ನೆಯ ಪುಟದಿಂದ ಮುಂದುವರಿಯುದು]

(ದಾರುಕಾಚಾರ್ಯ) ನನ್ನೂ ಹೇಳಿದ್ದಾನೆ ರೇಪಣ ಮರುಳ - ವಿಕೋಣಾಮರ ಹೆಸರುಗಳು ಭಾಷ್ಯದಲ್ಲಿ ನಾಲ್ಕಾರುಸಲ ಬಂದಿರುವದರಿಂದ ಇವರು ಶ್ರೀಪತಿ ಗಿಂತಲೂ ಪೂರ್ವಿಕರೆಂಬಲೆಗೆ ಸಹಜವಾಗಿ ಗ್ರಹಿಸಬಹುದು ಪಂಚಾಚಾರ್ಯ ಪಂಚಮೋತ್ಪತ್ತಿ - ಶಂಕರಸಂಹಿತಾ ವೀರಲ್ಕಿಂಗೋತ್ಪತ್ತಿವಿಷಯ ನಾರಾಯಣೋತ್ಪತ್ತಿವಿಷಯಗಳಲ್ಲಿ ವೀರಶೈವಾಚಾರ್ಯರಾದ ಪಂಡಿತಾರಾಧ್ಯ ವಿಶ್ವಾರಾಧ್ಯರ ನಾಮಗಳೂ ಬಂದಿವೆ ತೆಲುಗು ವೇದದ ಮಲ್ಲಿಕಾರ್ಜುನ ಪಂಡಿತಾರಾಧ್ಯರು ವೀರಶೈವಾಚಾರ್ಯ ಪಂಡಿತಾರಾಧ್ಯ ನಿಗಿಂತಲೂ ಬೇರೆಂಬುದನ್ನು ತಿಳಿಯದೆ ಆನೇಕರು ಭ್ರಮೆಗೆರ್ಗಾಗಿದ್ದಾರೆ ಪುಲ್ಲಿಕಾರ್ಜುನ ಪಂಡಿತನು ಗೃಹಸ್ಥಾನಾಗಿದ್ದು ಆತನ ಸಂಶಪರಂಪರೆಯೂ ಈಗ ಇದೆ ವಿರಕ್ತಮಾಚಾರ್ಯ ಪಂಡಿತಾರಾಧ್ಯನೂ ಆತನ ಶಿಷ್ಯ ಚಂದ್ರಗುಂಡ ಶಿವಾಚಾರ್ಯನೂ ಶ್ರೀ ಶೈಲ ಗುರುಪೀಠಾಧಿಕಾರಿಗಳಾಗಿದ್ದ ವೀರಚೇನರೆಂತಲೂ ಆ ವೀರವೀರಗಲೂ ಪರಂಪರೆಯಾಗಿ ವೀರಶೈವಾದೀನವಾಗಿ(ಗುಂತಕಲ್ಲಿನಲ್ಲಿ)ಇದೆಯೆಂತಲೂ ಅನೇಕ ಐತಿಹಾಸಿಕ ಆಧಾರಗಳನ್ನು "ಆಚಾರ್ಯ ಪಂಡಿತ ನೆಂಬ ಲೇಖದಲ್ಲಿ (ವಿಭೂತಿ ೧೧೩ ೩೧) ಪ್ರಕಟಿಸಲಾಗಿದೆ ಶಿವ ಪಂಚಸ್ವತ್ಯಕ್ಕೆ ಟೀಕೆಯನ್ನು ಬರೆದಿರುವ ಆಧುನಿಕ ವಿಶ್ವಾರಾಧ್ಯನನ್ನು ಕಲವರು ಪಂಚಾಚಾರ್ಯರಲ್ಲಿ ಒಬ್ಬನನ್ನಾಗಿಯೂ ಭಾವಿಸಿದ್ದಾರೆ ಚಿತ-ರಾಚಾರ್ಯ ವ್ಯಮಶಾರವೂಇರುವದಂದರೆ ವಿಶ್ವರಾಧ್ಯನು ಆಧುನಿಕನಾಗಿರಬಹುದೆಂಬ ಮತ್ತೆ ಕಲವರು ಊಹಿಸುತ್ತಿರುವರು. ಇದು ಸರಿಯಲ್ಲ ಪಂಚಕಲಶಾರ್ಚನೆಯಲ್ಲಿ ಸಾಲ್ಕರನ್ನು ಮತ್ತಿಪ್ಪರನ್ನಾಗಿಯೂ ಒಬ್ಬ ನೆನ್ನು ಗುರುವನ್ನಾಗಿಯೂ ವಿನಿಯೋಗಿಸುವಾಗ ಸಾಮಾನ್ಯವಾಗಿ ಚ ಗುರಾಚಾರ್ಯ ವ್ಯವಹಾರವನ್ನು ಮಾಡಿದರೂ ಇಲ್ಲಿ ಗುರು ಶಬ್ದದಿಂದ ವಿಶ್ವಾರಾಧ್ಯನೇ ಸೂಚಿತನಾಗುತ್ತಿದ್ದಾನೆಂಬುದನ್ನು ಸಂಪ್ರದಾಯಜ್ಞರಿಗೆ ಹೇಳಬೇಕಾಗಿಲ್ಲ "ಕಾಶೀನಿರಾಚೀ ಪ್ರಾಚೀನಸ್ತ್ವ ಎಂಬ ನೆನ್ನ ಮಂಜರಿ ಪುಸ್ತಕದಲ್ಲಿ ಈ ವಿಷಯವು ವಿಸ್ತಲವಾಗಿ ನಿರೂಪಿಸಲ್ಪಟ್ಟಿದೆ ಶಿವಾಗಮ ತುಕರ ಸಂಪ್ರದಾಯಿಗಳಲ್ಲಿ ಹೇಳಲ್ಪಡುತೆಯೂ, ಪರಂಪರೆಯಾಗಿ ಬಂದ ಪ್ರಕಾರವಾಗಿಯೂ ಪಂಚಾಚಾರ್ಯರು ಬಸವಾದಿಗಳಿಗಿಂತಲೂ ಪೂರ್ವಿಕರೇ ಹೊರತು ಯಾವ ದಾದರೂ ಒಂದು ನಾಮಾಖ್ಯಾವ್ಯ ಕಂಡಕೂಡದೆ ಆವರನ್ನು ಆಚಾರ್ಯ ಪಂಚಕದಲ್ಲಿ ಸೇರಿಸುವುದು ಸಯುಕ್ತಿಕವಲ್ಲ

(ಸಲೆಪ)

ಶ್ರೀ ಮಜ್ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು
ಗೌರೀಮಹೋತ್ಸವನ ಜೈನಾಪುರ

ಸಿದ್ಧರಾಮಪ್ಪ ಶಿವಪ್ಪ ಜೈನಾಪುರ ಸಂಸ್ಥಾನ ದೇಶಾಯಿ ಇವರು ತಮ್ಮ ಮನೆಯಲ್ಲಿ ಪ್ರತಿವರ್ಷದ ಪದ್ಧತಿಯಂತೆ ನವೆಯುತ್ತಿರುವ ಗೌರೀಮಹೋತ್ಸವವನ್ನು ಈ ವರ್ಷವಾದರೂ ಅತ್ಯಂತ ವೈಭವದಿಂದ ನಡೆಯಿಸಿದರು ಈ ವರ್ಷದ ಉತ್ಸವಕ್ಕೆ ಸೊಲ್ಲಾಪುರ ವೀರಶೈವ ಸದಾಚಾರ ಪ್ರೇರ ಸಮಾಜದ ಕಾರ್ಯದರ್ಶಿಸಿ ಯವರೂ, ಸ್ಯಾಜ್ಞಾನಿಕೇಸರಿಣಿ, ಆಲಂಪುರ ಶಾಖಮಠ ಇತ್ಯಾದಿ ಬಿರುದಾಂಕಿತೆಯರೂ ಆದ ಸೌ॥ ಭಾಗೀರಥಿ ದೇವಿ ಕಟಾಪ ಇವರನ್ನೂ ಮತ್ತು ತಪಸ್ವಿಗಳಾದ ಶ್ರೀಗಿ ಪ್ರಾ ಗುರುಸಿದ್ಧ ಶಿವಾಚಾರ್ಯ ಬಾಗಸೂರು ಇವರನ್ನೂ ವೇಗಿ ಗಂಗಾಧರಸ್ವಾಮಿ ವಾಂಗೀಮಠರ ಸೊಲ್ಲಾಪುರ ಇವರ ಅಭಿಪ್ರಾಯದಂತೆ ಬರಮಾಡಿ ಕೊಂಡು ೨ ದಿವಸಗಳವರೆಗೆ ಗೌರೀಮಹೋತ್ಸವವನ್ನು ಬಹು ವಿಜೃಂಬಣೆಯಿಂದ ವರೆಗೆರಿಸಿದರು ಈ ಗ್ರಾಮದ ಸಂಸ್ಥಾನ ಮಠಾಧ್ಯಕ್ಷರಾದ ಶ್ರೀಗಿ ಪ್ರಾ ಗುರುಸ್ವಾಮಿಗಳವರ ಅಧ್ಯಕ್ಷತೆಯಲ್ಲಿ ಸಭೆಯ ಕಾರ್ಯಕ್ರಮಗಳು ಸಾಂಗವಾಗಿ ನೆರವೇರಿದವು. 14 11-40 ನೇ ಬುಧವಾರ ದಿವಸ ನಡೆದ ಸಭೆಯಲ್ಲಿ ಮೊದಲು ವೇಗಿ ಚಿದ್ರಶೇಖರ ಕಯ್ಯ ದ್ಯಾವಪ್ಪರು, ದುಂಡಪ್ಪ ಕಮ್ಮಾರ ಇವರು ಬಹು ಮನೋಹರವಾಗಿ ಸ್ತೋತ್ರಮಾಡಿದನಂತರ ಸೌ॥ ಸುಗ್ಗಲಾದೇವಿಗಂಡಿಗಿ ಇವರು ಶ್ರೀ ಜಗದ್ಗುರು ರೇಣುಕಾಚಾರ್ಯರ ಕೀರ್ತನವನ್ನು ಮಾಡಿದರು. ಬಳಿಕ ಶ್ರೀ॥ ಪ್ರಾ ಬ್ರ॥ "ಸದ್ಯೋಧ" ವಿಷಯದಲ್ಲಿಯೂ ಸೌ॥ ಭಾಗೀರಥೀದೇವಿ ಕಟಾಪ ಇವರು "ರೇಣುಕಾಚಾರ್ಯರ ಮಹತ್ವ" ದ ಬಗ್ಗೆಯೂ ಮನೋಹರವಾದ ಭಾಷಣ ಮಾಡಿದರು 1-11 40 ನೇ ದಿವಸ ಸೌ॥ ಸುಗ್ಗಲಾದೇವಿ ಇವರು "ರುದ್ರಪಶುಪತಿ" ಕೀರ್ತನನಮಾಡಿದರು. ಆನೆಲೆ ಸೌ॥ ಭಾಗೀರಥೀದೇವಿ ಕಟಾಪ ಇವರು "ಸದಾಚಾರ" ವಿಷಯದಲ್ಲಿ ಭಾಷಣಮಾಡಿದರು ಬಳಿಕ ಖಲ್ಲಿಯ ಸ್ಕೂಲ್ ಆಸಿಸ್ಟೆಟ್ ಮಾಸ್ಟರಾದ ಗಿರಧರ ಇವರು ಮಾತೃಶ್ರೀಯವರು ನಾಳೆ "ಧರ್ಮ" ವಿಷಯದಲ್ಲಿ ಭಾಷಣಮಾಡಿ ಸರ್ವರಿಗೂ ಸಂತೋಷವನ್ನುಂಟುಮಾಡ ಬೇಕೆಂದು ಹೇಳಿದರು ಇವಕ್ಕೆ ಮಾತೃಶ್ರೀಯವರು ಸಂತೋಷದಿಂದ ಒಪ್ಪಿಕೊಂಡರು 16 11 40 ನೇ ದಿವಸ ಬೆಳಿಗ್ಗೆ ಸಿದ್ಧರಾಮಪ್ಪ ಶಿವಪ್ಪದೇಸಾಯಿ ಇವರು ತನ್ನ ಗುರುಗಳಾದ ಶ್ರೀಗಿ ಪ್ರಾ ಬ್ರ॥ ಗುರುಸ್ವಾಮಿಗಳನ್ನೂ ಶ್ರೀಗಿ ಪ್ರಾ ಬ್ರ॥ ಒಸನೂರು ಶ್ರೀಗಳನ್ನೂ ಭಕ್ತಿಪ್ರಾಮರ ಮಾನ್ಯವೈಭವದೊಡನೆ ತಮ್ಮ ಗೃಹಕ್ಕೆ ಕರೆದೊಯ್ದು ಪಾದಪೂಜೆಯನ್ನುಮಾಡಿ ಗ್ರಾಮದಲ್ಲಿ ರುವ ಬತಬ್ಬಗ್ಗರಿಗೆಲ್ಲ ಅನ್ನಸಂತರ್ಪಣೆಯನ್ನು ಮಾಡಿದರು ಸಾಯಂಕಾಲ ಸಭೆಯು ನೇರಿತು ಈ ದಿನದ ಸಭೆಗೆ ಸ್ವಯಪ್ರಭವರಲ್ಲದೆ ಸ್ಯಾಕ್ಷ ವೈಕ್ಷವ ಸ್ತ್ರೀಪುರುಷರ ನೇಕರು ಸೇರಿದ್ದರು ಪ್ರದಮದಲ್ಲಿ ಸೌ॥ ಸುಗ್ಗಲಾದೇವಿ ಗಂಡಿಗೆ ಇವರು ವಿದ್ಯಾ ವಿಷಯದಲ್ಲಿ ಭಾಷಣಮಾಡಿದರು ಬಳಿಕ ಸೌ॥ ಭಾಗೀರಥೀದೇವಿ ಕಟಾಪ ಇವರು "ದರ್ಮ" ವಿಷಯದಲ್ಲಿ ಇಂಗ್ಲೀಷು, ಹಿಂದಿ, ಮರಾಠಿ ಇತ್ಯಾದಿನೇಕಭಾಷೆಗಳಲ್ಲಿ ಆತ್ಯಂತ ಸ್ಫೂರ್ತಿದಾಯಕ ಗಂಟೆಪ ಉದಾಹರಣೆಗಳನ್ನು ಕೊಟ್ಟು ಭಾಷಣಮಾಡಿದರು ಇನ್ನು ಈ ವಿದ್ವತ್ಪೂರ್ಣವಾದ ಭಾಷಣವನ್ನು ಕೇಳಿ ಹರಮತೀಯರು ತಲೆದೂಗಿದರು. ಆನಂತರ ಶ್ರೀಗಿ ಪ್ರಾ ಬ್ರ॥ ಗುರುಸಿದ್ಧ ಶಿವಾಚಾರ್ಯ ಭೂಸನೂರು ಇವರು. ದೀಕ್ಷಾಸಂಸ್ಕಾರ ವಿಷಯದಲ್ಲಿ ಭಾಷಣಮಾಡಿದರು ಆನೆಲೆ ಇಲ್ಲಿಯ ಸ್ಕೂಲ್ ಹೆಡ್ ಮಾಸ್ಟರರಾದ ಕೃಷ್ಣಾಜಿಯ ವಸಪ್ಪ, ನಾವು ಇಲ್ಲಿಯವರೆಗೆ ದೇಸಾಯಿಯವರ ಮನಸಿಲ್ಲಿ ೧೦ರಿಂಯ ಮೂರ್ತಿಯನ್ನುಮಾಡಿ ಉತ್ಸವಮಾಡುತ್ತಿದ್ದುದನ್ನು ನೋಡುತ್ತಿದ್ದೆವು ಆದರೆ ಈ ವರ್ಷ ಪ್ರತ್ಯಕ್ಷ ಗೌರಿಯೇ ಬಂದು ನವ ಗ್ರಹಗಳಿಲ್ಲ ಸರ್ವೈಶ್ವರ್ಯವನ್ನು ಮಾಡುತ್ತಿರುವುದಾಗಿ ಭಾಸವಾಗುತ್ತದೆ ನನ್ನ ಗ್ರಾಮದ ಸೌಭಾಗ್ಯವನ್ನು ಕೃಷ್ಣಾನದಿಯು ೩೦ ವರ್ಷಕ್ಕೊಮ್ಮೆ ಭಾಗೀರಥಿಯ ರೂಪದಿಂದ ಹರಿಯುವಳೆಂದು; ಅವರಲ್ಲಿ ಸರ್ವರೂ ಸ್ನಾನಮಾಡಿ ಪುನೀತರಾಗಬೇಕೆಂದೂ ಪೂರ್ವಜರು ಹೇಳುವ ಪಂತ ಕವೆಯನ್ನು ಕೇಳುತ್ತಿದ್ದವು ಆದರೆ ಈಗ ಪ್ರತ್ಯಕ್ಷ ಭಾಗೀರಥೀದರಾಮದಿಂದ ಶರೀರಧಾರಿಣಿಯಾಗಿ ಈ ಮಾತೃಗಳು ನಮ್ಮನ್ನು ಪುನೀತರನ್ನಾಗಿ ಮಾಡಿದರು ಇವರಲ್ಲಿರುವ ವಿದ್ವತ್ತೆಯನ್ನು ನೆನ್ನಿಂದ ವರ್ಣಿಸಲಾಗುವುದಿಲ್ಲ. ಈ ಪ್ರಕಾರ ಭಾಷಣಮಾಡುವರನ್ನು ಶ್ರೀ ಯರಲ್ಲಿ ಎಲ್ಲಿಯೂ ನೋಡಿಲ್ಲ ಇತ್ಯಾದಿಯಾಗಿ ಮಾತೃಶ್ರೀಯವರ ವರ್ಣನಮಾಡಿದರು ಈ ಮಂಗಲೋತ್ಸವದಲ್ಲಿ ರಂಗನಗೌಡ ಶಿನ್ನೂರ್ಣ ಬಟಕರ್ಕಿ, ಸಿದ್ಧಪ್ಪ ಕೋಲಾರ, ಲಚ್ಚಪ್ಪ ಕೋಲಾರ ಇವರು ಅತ್ಯಂತ ಶ್ರದ್ಧೆಯಿಂದ ಕೆಲಸಮಾಡುವರಂದರಲ್ಲೂ ಮತ್ತು ಸಿದ್ಧಾಮಪ್ಪ ಶಿವಪ್ಪದೇಶಾಯಿ ಇವರು ಗುರುಗಳಲ್ಲಿ ಅತ್ಯಂತ ಭಕ್ತಿಯುಳ್ಳವರಾಗಿ ಸಮಾಜದ ಸರ್ವಾರಣೆಯ ಬಗ್ಗೆ ಆತ್ಯಂತ ಕಳಕಳಿಯಿಂದ ಕಾರ್ಯಮಾಡುತ್ತಿರುವ ದರಿಂದಲೂ ಇವರೆಲ್ಲರಿಗೂ ಜಗದ್ಗುರುಗಳು ಆಯು ರಾರೋಗ್ಯಭಾಗ್ಯಾದಿಗಳಕ್ಷಿನ್ನೀಯಲೆಂದು ಹಾರೈಸುತ್ತೇನೆ ಈ ಸಮಯದಲ್ಲಿ ಶ್ರೀಗಿ ಪ್ರಾ ಬ್ರ॥ ಗುರುಸ್ವಾಮಿಗಳು ಸಂಸ್ಥಾನ ಮಠ ಜೈನಾಪುರ ಇವರ ಅಪ್ಪಣೆಯು ಮೇರೆಗೆ ಪ್ರಭಾಪೋಷಣಕೈಮ್ಮಾಸ್ಟರ ೧ ರೂ ಯ ಸಮರ್ಪಿಸಲ್ಪಟ್ಟಿತು. ಶಿವಗೊಂಡಪ್ಪ ಗುಮಾಸ್ತ, ಜೈನಾಪುರ

ಶ್ರೀಜಗದ್ಗುರು ಪಂಡಾಚಾರ್ಯ ಭಜನ ಸಂಘ ಸ್ಥಾಪನೆ ಮತ್ತು ದೀಕ್ಷಾಸಮಾರಂಭ, ಹೋಣಾಗಾಪುರ.

ನಿಜಾಮುಸಿಲಾಪ ವಿರಕ್ತಜಿಲ್ಲಾ ಹೋಣಾಗಾಪುರದಲ್ಲಿ ಶ್ರೀಕಟ್ಟಿಮನೆ ಮೇಹಕರ ಇವರ ಒಂದು ಪ್ರಾರ್ಥನಮಂದಿರ ವಿಶೇಷ ವೀರಶೈವ ಜನಸಂಖ್ಯೆಯು ಇರುತ್ತದೆ ಸದರಿ ಕಟ್ಟಿಮನೆ ಸಂಸ್ಥಾನದ ಆಧಿಕಾರಿಗಳಾಗಿರುವ ಶ್ರೀಗಿ ಪ್ರಾ ಬ್ರ॥ ರಾಜೋಪಾಧಿವಾಚಾರ್ಯರು ಸುಶಿಕ್ಷಿತರೂ, ಧರ್ಮಕಾರ್ಯ ತತ್ಪರರೂ, ಉತ್ಸಾಹಿಗಳೂ, ಸದಾಚಾರಿಗಳೂ, ಶ್ರೀಕಾಲಲಿಂಗಾನುಷ್ಠಾನ ತತ್ಪರರೂ ಆಗಿರುತ್ತಾರೆ ಇವರ ಅತ್ಯುತ್ಸಮ ಧರ್ಮಬೋಧೆಯಿಂದ ಇಲ್ಲಿಯ ಭಕ್ತಮಂಡಲಿಯಲ್ಲಿ ಒಳ್ಳೇ ಧರ್ಮ ಜಾಗೃತಿಯಾಗಿ ಈಕಳಿದ ವಿಜಯದಶಮಿಯ ದಿವಸ ಶ್ರೀ ಜಗದ್ಗುರುಪಂಡಾಚಾರ್ಯರಹೆಸರಿನಿಂದ ಭಜನಸಂಘವುಸ್ಥಾಪಿಸಲ್ಪಟ್ಟಿತು. ತದಲ್ಲದೆ ಸದರಿ ಶ್ರೀಗಳವರು ದೀಕ್ಷೆಯುಳ್ಳವರು ವೀರಶೈವರೆಂದು ಹೇಳಿಸಿಕೊಳ್ಳಲು ಯೋಗ್ಯರಲ್ಲವೆಂದು ಬೋಧಿಸಿದ್ದರಿಂದ ಕಾರ್ತಿಕ ಶು॥ ೪-೫-೬ ದಿವಸ ೨೧ಜ ಜನರು ಶಿವದೀಕ್ಷೆಯನ್ನು ಹೊಂದಿದರು. ದೀಕ್ಷಾಸಮಾರಂಭವು ಸಂಭ್ರಮದಿಂದ ನೆರವೇರಿತು. ಜಗದ್ಗುರುಪಂಡಾಚಾರ್ಯರ ಜಯಘೋಷವು ಭೂಮಂಡಲವನ್ನು ವ್ಯಾಪಿಸಿತ್ತು. ಈ ಸಮಾರಂಭ ಕಾರ್ಯವು ಸುಪ್ರಸಿದ್ಧ ಧರ್ಮಬೋಧಕ ಶ್ರೀ ಸಿದ್ಧವೀರಪ್ಪಾಯ ಬನ್ನಟ್ಟಿಕರ ಇವರ ವೃವಸ್ಥೆಯ ಕೆಳಗೆ ನಡೆಯುದರಿಂದ ವಿಶೇಷ ಮಹತ್ವವನ್ನಿತ್ತು. ಗುರುಗಳು ಚಿಕ್ಕವಯಸ್ಸಿನಲ್ಲಿ ಈ ವಿಧವಾದ ಧರ್ಮಬೋಧನೆಯನ್ನು ಮಾಡಿ ಜನರನ್ನು ಸದಾಚಾರಿಗಳನ್ನಾಗಿ ಮಾಡುತ್ತಿರುವುದನ್ನು ಕಂಡು ಬಹುಸಂತೋಷವಾಗಿದೆ ಪ್ರತಿ ಗುರುಮಾರ್ತಿಗಳು ನಿಸ್ವಾರ್ಥಬುದ್ಧಿಯಿಂದ ಕೆಲಸ ಮಾಡಿದರೆ ಧರ್ಮವು ಸ್ಥಲ್ಪದಿವಸಗಳಲ್ಲಿಯೇ ಉನ್ನತಿ ಪಥವನ್ನೇರುವುದಿದರಲ್ಲಿ ಸಂಶಯವಿಲ್ಲ

ಗುರುಭಕ್ತ ಬಂಡೆಪ್ಪ, ತವಡೆ.

ಪ್ಲೇಗುವ್ಯಾಧಿ
ಆರೋಗ್ಯ ಶಾಖೆಯ ಪ್ರಕಟಣೆ

ಪ್ಲೇಗು ರೋಗವು ಮನುಷ್ಯರಿಗೆ ಇಲಿಗಳ ಮೇಲಿರುವ ಚಿಗಟುಗಳ ನೆಂಬಲಕ ತರುವದರಿಂದ 'ಪ್ಲೇನೋಗ್ಯಾನ್' ಮೂಲಕ ಮನೆಗಳಲ್ಲಿರುವ ಇಲಿಗಳನ್ನೆಲ್ಲಾ ಸುಲಭವಾಗಿ ನಾಶಪಡಿಸಬಹುದೆಂಬುದಾಗಿ ಪ್ರಚುರ ಪಡಿಸಲಾಗಿದೆ ನಮ್ಮ ದೇಶದ ಇಲಿಗಲ್ಲಿ ಮುಖ್ಯವಾದ ಜಾತಿಗಳು ಎರಡು ಒಂದು ಹೆಗ್ಗಣ, ಇದು ಸಾಧಾರಣವಾಗಿ ಮನೆಯ ಹೊರಗಡೆ ಅಂದರೆ ಹತ್ತಲುಗಳಲ್ಲೂ ಚರಂಡಿಗಳಲ್ಲೂ ವಾಸಮಾಡುತ್ತದೆ ಇನ್ನೊಂದು ನವ್ವ ಮನೆಗಳಲ್ಲಿ ಬಿಲಗಳನ್ನು ಮಾಡಿ ಕೊಂಡು ವಾಸಮಾಡುವ ಇಲಿಗಳು ಇವು ಎರಡೂ ನಮ್ಮದೇಶದಲ್ಲಿ ಪ್ಲೇಗು ಹರಡುವದಕ್ಕೆ ಕಾರಣ ಒಂದು ಊರಿನಲ್ಲಿರುವ ಹೆಗ್ಗಣಗಳ, ಆ ಊರಿನಲ್ಲಿ ಪ್ರತಿವರ್ಷವೂ ಪ್ಲೇಗು ಹುರುವಾಗುವುದಕ್ಕೆ ಕಾರಣಗಳೆಂದೂ ಈ ಮನೆಯ ಇಲಿಗಳು ಅವನ್ನು ಆ ಊರಿನಲ್ಲಿಯೂ, ಮತ್ತು ಊರಿಂದ ಊರಿಗೂ ಹರಿಯುವದಕ್ಕೆ ಕಾರಣಭೂತವಾದವುಗಳೆಂದೂ ಶಾಸ್ತ್ರಜ್ಞರು ಕಂಡುಹಿಡಿದ್ದಾರೆ ಅದು ಹೇಗೆಂದರೆ, ಈ ಇಲಿಗಳೇ ಒಂದೂರಿಂದ ಇನ್ನೊಂದೂರಿಗೆ ಮಂಡಿಗೆಟ್ಟಿ ಸಾಗಿಸುವ ಧಾನ್ಯಗಳ ಜೊತೆಯಲ್ಲಿ ಸೇರಿಕೊಂಡು ಬಂದು ಇಳಿಯುತ್ತವೆ ಇವುಗಳು ಒಂದು ಸಂತೆಯಿಂದ ಇನ್ನೊಂದು ಸಂತೆಗೆ ಸಾಗಿಸುವ ಮಂಡಿಗೆಗಳ ಗಾಡಿಗಳಲ್ಲಿಯೂ ಹೋಗಬಹುದು, ಇಲ್ಲವೆ ಊರಿಂದ ಊರಿಗೆ ಸಾಗಿಸುವ ಆಲಿಗಳಲ್ಲಿಯೂ ಪ್ರಯಾಣ ಮಾಡಬಹುದು. ಇಲ್ಲವೆ ರೈಲ್ವೇ ವ್ಯಾಗನ್ನುಗಳಲ್ಲಿ ದೂರ ದೂರ ಪ್ರದೇಶಗಳಿಗೆ ಸಾಗಿಸಲ್ಪಡಬಹುದಾದ ಹಡಗುಗಳಲ್ಲಿ ಸೇರಿಕೊಂಡು ಸಮುದ್ರವನ್ನೇ ದಾಟಿಕೊಂಡು ದೇಶದಿಂದ ದೇಶಕ್ಕೆ ಹೋಗಬಹುದು ಹೀಗೆ ಇಲಿಗಳು ಮತ್ತು ಅವುಗಳ ಮೇಲಿರುವ ಚಿಗಟುಗಳು ಒಂದು ಪ್ರದೇಶದಿಂದ ಇನ್ನೊಂದು ಪ್ರದೇಶಕ್ಕೆ ಸಾಗಿಸಲ್ಪಡಬಹುದು. ಅಥವಾ ಇಲಿಗಳಲ್ಲದೇ ಬರೀ ಚಿಗಟುಗಳೇ ಮಂಡಿಗೆಗಳಲ್ಲಿದ್ದು ಸಾಗಿಸಲ್ಪಡಬಹುದು ಅಪರೂಪವಾಗಿ ಮನುಷ್ಯರ ಬಟ್ಟೆಗಳಲ್ಲೂ, ಅವರ ಗಂಟುಮೂಟೆ ಹಾಸಿಗೆಗಳಲ್ಲೂ ಸಾಗಿಸಲ್ಪಡಬಹುದು ಆದ್ದರಿಂದ ಈ ಹಿಂದೆ ತಿಳಿಸಿದಂತೆ ಮನೆಗಳಲ್ಲಿ "ಸೈನೋಗ್ಯಾಸ್" ನಿಂದ ಇಲಿಗಳನ್ನೂ ಚಿಗಟುಗಳನ್ನೂ ಕೊಲ್ಲುವುದಲ್ಲದೆ ಇವುಗಳು ಇರುವ ಕಡೆಗಳಲ್ಲೆಲ್ಲಾ "ಸೈನೋಗ್ಯಾಸ್" ಉಪಯೋಗಿಸಿ ನಾಶಪಡಿಸಬಹುದು. ಧಾನ್ಯವನ್ನು ಶೇಖರಿಸಿಡುವ ಮಳಿಗೆಗಳಲ್ಲೂ ಉಗ್ರಾಣಗಳಲ್ಲೂ, ಅಂಗಡಿಗಳಲ್ಲೂ ಇವನ್ನು ಉಪಯೋಗಿಸಿ ಇಲಿಗಳನ್ನು ಕೊಲ್ಲಬಹುದು.

ಶಿಷ್ಯರ ಮನೆಗಳ ರಿಜಿಸ್ಟರ್ ಬುಕ್

ಭರತಖಂಡದಲ್ಲಿರುವ ಪ್ರತಿಯೊಂದು ಗುರುವರ್ಯರ ಮತ್ತಿಲ್ಲಿ ಜನಿಸಿರುವ ಶಿಷ್ಯರ ಮನೆಗಳಿರುತ್ತವೆ. ಆ ಮಹಾಧಿಕಾರಿಗಳು ಯಾವಯಾವಕಾಲಕ್ಕೆ ಯಾವ ಯಾವ ಸ್ಥಳಗಳಿಗೆ ಹೋಗಿ ಶಿಷ್ಯರಿಂದ ಇಷ್ಟಾರ್ಥಗಳನ್ನು ತಿಳಿದುಕೊಂಡು ಬರುತ್ತಿರುವರು. ಅದರಿಂದ ಇವರು ಕಷ್ಟಕಾಲಕ್ಕೆ ಸಹಾಯ ಶಿಷ್ಯರ ಯಾವೆಲ್ಲ ವಿಷಯಗಳನ್ನು ಬರೆದುಕೊಳ್ಳಬೇಕಾಗಿಯೂ ಇಲ್ಲವೆಂಬುದನ್ನು ಮಾತ್ರ ತಿಳಿದುಕೊಂಡು ಹೋಗಿದ್ದರೂ ಸಾಕು. ಈ ಅನ್ವಯಕ್ಕೆ ಯಾವ ಅನೇಕ ಮನೆಯವರಿಗೆ ಕಷ್ಟ ಶಿಷ್ಯರ ಮನೆಗೇ ಗೊತ್ತಿಲ್ಲದೆ ಹೋಗಿದೆ. ಇದನ್ನು ದೂರವಾಗುವುದಕ್ಕೋಸ್ಕರ ಮೇಲ್ಕಂಡ ಪುಸ್ತಕವನ್ನು ಹೊಸ ರೀತಿಯಾಗಿ ಮುದ್ರಣಗೊಳಿಸಿದ್ದೇವೆ. ಇದರಲ್ಲಿ ಬರೆಯುವ ವಿಷಯಗಳ ವಿವರವು ಹಸ್ತಾಕ್ಷರವಿಲ್ಲದೆ ಅಮುದ್ರಿಸಿದ ಸದರಿ ಪುಸ್ತಕ ಪುಸ್ತಕವನ್ನು ಶಿಷ್ಯರುಗಳಿಗೆ ಪ್ರತಿಯೊಬ್ಬ ಗುರುವರ್ಯರವರೂ ತಪ್ಪಿಲ್ಲದಂತೆ ಅದರಲ್ಲಿರುವ ವಿಷಯಗಳನ್ನೆಲ್ಲಾ ಬರೆಸಿ ಮಂತ್ರಾಕ್ಷತೆಯನ್ನು ಕೊಡಬೇಕಾಗಿರುತ್ತದೆ.. ಇದರಿಂದ ಶಿಷ್ಯರಿಗೂ ಗುರುವರ್ಯರಿಗೂ ಬಹಳ ಅನುಕೂಲವಾಗಿರುತ್ತದೆ. ಆದುದರಿಂದ ಪ್ರತಿಯೊಬ್ಬ ಗುರುವರ್ಯರವರೂ ಈ ಪುಸ್ತಕವನ್ನು ತರಿಸಿಕೊಂಡು ಉಪಯೋಗಿಸಿಕೊಳ್ಳಬೇಕಾಗಿ ಪ್ರಾರ್ಥಿಸುತ್ತೇವೆ.

ಬೆಲೆ ೧ ರೂಪಾಯಿ

ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್,
ಮೈಸೂರು.

ಶಾಸ್ತ್ರೋಕ್ತ ದಿವ್ಯೌಷಧಗಳು.

ಶ್ರೀ ಜಗದ್ಗುರು ಕೇದಾರಪಂಸ್ಥಾನದ ರಸಾಯನ ಶಾಲೆಯಲ್ಲಿ ತಯಾರಾಗುತ್ತಿರುವ ರಸಾಯನ ಔಷಧಿಗಳು ಅತಿ ಸುಲಭಕ್ರಯದಲ್ಲಿ ದೊರೆಯುವವು

ಔಷಧಿ ಹೆಸರು	ತೋಲ	ಮೂಲ್ಯ
ಸ್ವರ್ಣಮಕರಧ್ವಜ	೧	೩೧—೦—೦
ಸ್ವರ್ಣಚಂದ್ರೋದಯ	೧	೧೦—೦—೦
,, ಸಿನೇ ನಂಬರ್	೧	೪—೦—೦
ರಸಸಿಂಧೂರ	೧	೫—೦—೦
ಮಲ್ಲಸಿಂಧೂರ	೧	೪—೦—೦
ತಾಲಸಿಂಧೂರ	೧	೪—೦—೦
ಶಿಲಾಸಿಂಧೂರ	೧	೪—೦—೦
ಸ್ವರ್ಣವಂಗ	೧	೩—೦—೦
ತ್ರಿವಂಗ	೧	೧—೦—೦

ಭಸ್ಮಗಳು

ಸ್ವರ್ಣಭಸ್ಮ	೧	೪೦—೦—೦
ರಜತಭಸ್ಮ	೧	೪—೦—೦
ತಾಮ್ರಭಸ್ಮ	೧	೦—೮—೦
ಲೋಹಭಸ್ಮ	೧	೦—೧೫—೦
ವಂಗಭಸ್ಮ	೧	೦—೬—೦
ನಾಗಭಸ್ಮ	೧	೦—೮—೦
ಮುಕ್ತಾಭಸ್ಮ	೧	೪೦—೦—೦
ಅಭ್ರಕಭಸ್ಮ	೧	೩—೦—೦
ಹಿತ್ತಾಳೆಭಸ್ಮ	೧	೦—೮—೦
ಕಂಚಿನಭಸ್ಮ	೧	೦—೮—೦
ಜಪ್ತಭಸ್ಮ	೧	೦—೮—೦
ಮಂಡೂರಭಸ್ಮ	೧	೦—೮—೦
ಸ್ವರ್ಣಮಾಕ್ಷಿಕಭಸ್ಮ	೧	೦—೧೫—೦
ಮುಕ್ತಾಭಸ್ಮ	೧	೪೦—೦—೦
ಪ್ರವಾಲಭಸ್ಮ	೧	೦—೮—೦
ಕಸ್ತೂರಿಪಿನೆ ಭಸ್ಮ	೧	೦—೮—೦
ಸಾರಂಗದ ಕೊಡಿನ ಭಸ್ಮ	೧	೦—೮—೦
ಸೋದರಂಶಿಹರಿತಾಲಭಸ್ಮ	೧	೦—೮—೦
ಕಸ್ತೂರಿ (ನಂಬೇ ನಂಬರ್)	೧	೫೦—೦—೦
ತಿಲಾಜಿತ ಸೌರ್ಯಪುಟ	೧	೧—೦—೦
ತಿಲಾಜಿತ ಅಗ್ನಿಪುಟ	೧	೦—೮—೦

ನೋಟ್—ಈ ಔಷಧಾಲಯದಲ್ಲಿ ಸರ್ವಪ್ರಕಾರದ ಲೇಹ, ಚೂರ್ಣ, ಗುಟಿಕಾ, ತೈಲ, ಘೃತ, ಗುಗ್ಗುಳಾದಿ ಔಷಧಿಗಳು ಸರ್ವರೋಗಗಳಿಗೆ ದೊರೆಯುವುವು.

ವಿಳಾಸ—ಮ್ಯಾನೇಜರರು,
ಆಯುರ್ವೇದ ರಸಾಯನಶಾಲಾ,
ಪೋಸ್ಟ್ ಓಮಿಮಕ, ಜಿಲ್ಲಾ ಗಢವಾಲ್ ಯು.ಪಿ.

ವೈದಿಕ ಶಿವಪೂಜಾವಿಧಿ.

ವೀರಶೈವರಿಗೆ ಮುಖ್ಯವಾಗಿ ಬೇಕಾಗಿರುವ ಈ ಮೇಲ್ಕಂಡ ಗ್ರಂಥವು ನೇಪಾಳ ಪಂಚ ಶ್ರೀಕಾಶೀಪೀಠಾಧಿಷ್ಠಾಪ್ತಿಗಳವರಿಂದ ವೈದಿಕಸಂಪ್ರದಾಯಾನುಸಾರವಾಗಿ ವಿರಚಿತವಾಗಿದ್ದು, ಶ್ರೀ ಪಂಚಾಚಾರ್ಯ ವಿದ್ಯಾಸ್ಪ್ರಕಾಶಲಯದಲ್ಲಿ ಬಹು ಮುದ್ದಾಗಿ ಮುದ್ರಿತವಾಗಿದೆ. ಇಲ್ಲಿಯವರೆಗೆ ಅನೇಕ ಕಡೆಗೆ ಶಿವಪೂಜಾವಿಧಿಗಳು ಮುದ್ರಿಸಲ್ಪಟ್ಟಿವೆ. ಆದರೆ ಮುದ್ರಾಪಕರಿಗೆ ವೈದಿಕಸಂಪ್ರದಾಯವು ಗೊತ್ತಿಲ್ಲದಿರುವುದರಿಂದ ಅನೇಕ ಕಡೆಗೆ ಮಂತ್ರಗಳು ಅಶುದ್ಧವಾಗಿ ಬಿದ್ದಿವೆ! ಅನೇಕರು ಆ ಅಶುದ್ಧಮಂತ್ರಗಳನ್ನೇ ಪಠಿಸುತ್ತಿರುವರು. ಇದು ಅತ್ಯಂತ ವ್ಯಸನಕರವಾದ ವಿಷಯವಾಗಿದೆ. ಅಲ್ಲದೆ ವೇದಮಂತ್ರಗಳನ್ನು ವೈದಿಕ ಸ್ವರಸಹಿತವಾಗಿ ಉಚ್ಚರಿಸಬೇಕಲ್ಲದೆ ಸ್ವರಕೂನ್ಯವಾಗಿ ಉಚ್ಚರಿಸಬಾರದಲ್ಲೆ, ಇಲ್ಲಿಯವರೆಗೆ ಮುದ್ರಿತಗಳಾಗಿರುವ ಯಾವ ಶಿವಪೂಜಾವಿಧಿಯಲ್ಲಿಯೂ ವೇದಮಂತ್ರಗಳಾಗಲಿ, ಶ್ರೀರುದ್ರಾಧ್ಯಾಯ-ಚಮಕಾಧ್ಯಾಯ-ಪುರುಷಸೂಕ್ತಗಳಾಗಲಿ ವೈದಿಕಸ್ವರಗಳು ಹಾಕಲ್ಪಟ್ಟಿಲ್ಲ ಮತ್ತು ಪದವಿಭಾಗವೂ ಮಾಡಲ್ಪಟ್ಟಿಲ್ಲ. ಈ ಶಿವಪೂಜಾವಿಧಿಯಲ್ಲಿ ಈ ಕೊರತೆಯು ದೂರಮಾಡಲ್ಪಟ್ಟಿದೆ ಇದಕ್ಕಾಗಿ ಪಂಡಿತರು ಬಹು ಶ್ರಮವನ್ನು ವಹಿಸಿ ಮಸ್ಮೈದ-ಯಜುರ್ವೇದಗಳನ್ನೆಲ್ಲ ಕೂಲಂಕಷವಾಗಿ ಪರಿಶೀಲಿಸಿ ವೀರಶೈವಪ್ರಪಂಚಕ್ಕೆ ಮಹೋಪಕಾರವನ್ನು ಮಾಡಿದ್ದಾರೆ. ಈ ಪೂಜಾವಿಧಿಯಲ್ಲಿರುವ ವೈದಿಕಮಂತ್ರಗಳು ಯಾವ ವೇದದ ಯಾವ ಭಾಗದಲ್ಲಿರುವುದೆಂಬುದನ್ನು ಪಂಡಿತರು ವಿವರವಾಗಿ ತೋರಿಸಿದ್ದಾರೆ ಪ್ರತ್ಯಕ್ಷವಾಗಿ ನೋಡಿದ ಮೇಲೆ ಈ ಗ್ರಂಥದ ಮಹತ್ವವು ಕಂಡುಬರುವುದು. ಅಲ್ಲದೆ ಈ ಪೂಜಾವಿಧಿಯ ಅಂತ್ಯದಲ್ಲಿ—ಶಿವಸಹಸ್ರನಾಮಾವಳಿ, ಶಿವಾಷ್ಟೋತ್ತರಶತ ಶತನಾಮಾವಳಿ, ಶಿವಕವಚ, ಪಾರ್ವತೀದೇವೀನಾಮಾವಳಿ, ವೀರಭದ್ರಾವತಾರಾವಳಿ, ಭದ್ರಕಾಳೀದೇವೀನಾಮಾವಳಿ, ಷಣ್ಮುಖಸ್ವಾಮಿನಾಮಾವಳಿ, ಶ್ರೀ ಪಂಚಾಚಾರ್ಯರ ನಾಮಾವಳಿಗಳು, ನಾನಾವಿಧ ಶಿವಸ್ತೋತ್ರಗಳು, ನಾನಾವಿಧ ದೇವೀಸ್ತೋತ್ರಗಳು, ನಾನಾವಿಧ ಗುರುಸ್ತೋತ್ರಗಳು ಮುದ್ರಿಸಲ್ಪಟ್ಟಿವೆ ಒಟ್ಟಿಗೆ ಈ ಶಿವಪೂಜಾವಿಧಿಯು ಸರ್ವಾಂಗಸುಂದರವಾಗಿದ್ದು ಸರ್ವತೋಮುಖವಾಗಿ ಸ್ತುತ್ಯವಾಗಿದೆ. ಆದುದರಿಂದ ಪ್ರತಿಯೊಬ್ಬ ವೀರಶೈವರೂ ಈ ಪೂಜಾವಿಧಿಯನ್ನು ತರಿಸಿಕೊಂಡು ಇದರಲ್ಲುಕ್ತವಾಗಿರುವಂತೆ ಶಿವಪೂಜೆಯನ್ನು ಮಾಡಿ ಧನ್ಯರಾಗಬೇಕೆಂದು ಕೋರಿಕೆ. **ಬೆಲೆ ೧೫ ಆಣೆ** ವಿ ಪಿ. ಚಾರ್ಜು ಪ್ರತ್ಯೇಕ.

ಮ್ಯಾನೇಜರ್,
ಪಂಚಾಚಾರ್ಯಪ್ರಭಾ ಆಫೀಸ್, ಮೈಸೂರು.

ಶಿವಾದ್ವೈತಮಂಜರಿ.

ಈ ಗ್ರಂಥವು ವೀರಶೈವಮತಗ್ರಂಥಗಳಲ್ಲೆಲ್ಲ ಶಿಖಾರತ್ನವಂತೆಯೂ ಪ್ರಜ್ವಲಿಸುತ್ತಿರುವುದು ಎಲ್ಲರಿಗೂ ತಿಳಿದ ವಿಷಯವಾಗಿದೆ ಈ ಗ್ರಂಥವನ್ನು ಕಾಶ್ಮೀರದೇಶದ ಸ್ವಪ್ರಭಾನಂದ ಶಿವಾಚಾರ್ಯರೆಂಬ ಪ್ರಾಚೀನಾಚಾರ್ಯರು ರಚಿಸಿದ್ದಾರೆ ಈ ಗ್ರಂಥದಲ್ಲಿ ಶಕ್ತಿವಿಶಿಷ್ಟಾದ್ವೈತಸಿದ್ಧಾಂತವು ರಹಸ್ಯವು ಬಹು ಹೃದಯಂಗಮವಾಗಿ ಪ್ರತಿಪಾದಿಸಲ್ಪಟ್ಟಿದೆ ಈ ಗ್ರಂಥದ ಸರಣಿಯು ಬಹುಕಠಿನವಿದ್ದುದರಿಂದ ಇದರ ರಹಸ್ಯವನ್ನು ತಿಳಿಯಲು ಪಂಡಿತಜನ ಗಳಿಗೂ ಕೂಡ ಅಸಾಧ್ಯವಾಗಿತ್ತು. ಈ ಕೊರತೆಯನ್ನು ದೂರಮಾಡಿ ಇದರ ರಹಸ್ಯವು ಪ್ರತಿಯೊಬ್ಬರಿಗೂ ತಿಳಿಯಲೆಂಬ ಸಮದ್ದೇಶದಿಂದ ಪಂಡಿತ ಶ್ರೀ ಕಾಶೀಪೀಠಾಧಿಷ್ಠಾಪ್ತಿಗಳವರು ಈ ಗ್ರಂಥಕ್ಕೆ ಬಹು ವಿಶಾಲವಾಗಿ ಕನ್ನಡ ಟೀಕೆಯನ್ನು ಬರೆಯಿಸಿದ್ದಾರೆ ಈ ಮೂಲ ಗ್ರಂಥವು ಕೇವಲ ೩೮ ಪುಟಗಳಿಂದ ಕೂಡಿದ್ದರೂ ಇದಕ್ಕೆ ಕನ್ನಡ ಟೀಕೆಯು ೧೩೨೩ ಪುಟಗಳಷ್ಟಾಗಿದೆ ಈ ಮಹಾಗ್ರಂಥಮುದ್ರಣಕ್ಕಾಗಿ ಪಂಡಿತರು ವಿಶೇಷ ದ್ರವ್ಯವನ್ನು ವ್ಯಯಮಾಡಿದ್ದಾರೆ ಇಂಥ ದೊಡ್ಡಸಿದ್ಧಾಂತಗ್ರಂಥವು ಇಂದಿನವರೆಗೆ ಕನ್ನಡಭಾಷೆಯಲ್ಲಿ ಎಲ್ಲಿಯೂ ಮುದ್ರಿತವಾಗಿಲ್ಲವೆಂದು ಘಂಟಾಘೋಷವಾಗಿ ಹೇಳಬಹುದಾಗಿದೆ. ಸನ್ಮಸ್ಕಾರಗಳೆಂದ **ಶ್ರೀಮಜ್ಜಗದ್ಗುರು ಸಾರ್ವಭೌಮಾಧಿರಾಜ ಶ್ರೀ ಕೃಷ್ಣರಾಜ ಒಡೆಯರ್ ಬಹದ್ದೂರ್ ಮಹಾಪ್ರಭುಗಳವರು** ಈ ಗ್ರಂಥದ ಯೋಗ್ಯತೆಯನ್ನು ಕಂಡು ಪಡಿಕೇಷನ್ನಿಗೆ ಅಪ್ಪಣೆಯನ್ನಿತ್ತಿರುವರಲ್ಲದೆ, ಈ ಗ್ರಂಥದಲ್ಲಿ ನಿಯೋಜಿಸುವುದಕ್ಕೋಸ್ಕರ ತಮ್ಮ ಭವ್ಯವಾದ ಭಾವಚಿತ್ರವನ್ನು ಸಹ ದಯಪಾಲಿಸಿರುವರು. ಇದರಿಂದ ಈ ಗ್ರಂಥದ ಯೋಗ್ಯತೆಯು ಎಷ್ಟರಮಟ್ಟಿಗಿರಬೇಕೆಂಬ ವಿಷಯವನ್ನು ಬೇರೆ ಹೇಳಬೇಕಾಗಿಲ್ಲ. ಇಂಥ ಅಮೂಲ್ಯವಾದ ವೀರಶೈವಸಿದ್ಧಾಂತಗ್ರಂಥವನ್ನು ಪ್ರತಿಯೊಬ್ಬ ವೀರಶೈವರೂ ಅವಶ್ಯವಾಗಿ ತರಿಸಿಕೊಂಡು ಅದರಲ್ಲಿರುವ ಸಿದ್ಧಾಂತ ವಿಷಯಗಳನ್ನು ತಿಳಿದುಕೊಂಡು ಧನ್ಯರಾಗಬೇಕೆಂದು ಕೋರಿಕೆ. ಒಟ್ಟು ಈ ಮಹಾಗ್ರಂಥವು ೧೩೪೪ ಪುಟಗಳಿಂದ ಕೂಡಿದ್ದು ಒಳ್ಳೆ ಬೆಲೆಯುಳ್ಳ ಕಾಗದ ದಲ್ಲಿ ಮುದ್ರಿಸಲ್ಪಟ್ಟಿರುವದಲ್ಲದೆ ಬಹುಸುಂದರವಾದ ಬೈಂಡಿನಿಂದೊಡಗೂಡಿದೆ. ಪವಿತ್ರವಾದ ವೀರಶೈವ ಸಿದ್ಧಾಂತದಲ್ಲಿ ವಿಶ್ವಾಸವುಳ್ಳ ಪ್ರತಿಯೊಬ್ಬರೂ ದ್ರವ್ಯಸಂಕಟಿಗೆ ದೃಷ್ಟಿಯನ್ನಿಡದೆ ಈ ಗ್ರಂಥರತ್ನವನ್ನು ತರಿಸಿ ಕೊಂಡೇ ತೀರಬೇಕು. ಈ ಮಹಾಗ್ರಂಥದ ಬೆಲೆ ೮ ರೂಪಾಯಿ. ಒಂದುರೂಪಾಯಿಗೆ ನಾಲ್ಕಾಣೆಯಂತೆ ಕಮೀಷನ್ ವಜಾ ಹೋಗಲಾಗಿ ೬ ರೂ ಗೆ ದೊರೆಯುವುದು. ವಿ. ಪಿ. ಚಾರ್ಜು ೧ ರೂ. ೫ ಆಣೆ ಪ್ರತ್ಯೇಕ.

ಮ್ಯಾನೇಜರ್—
ಪಂಚಾಚಾರ್ಯಪ್ರಭಾ ಆಫೀಸ್, ಮೈಸೂರು.

ಮನೋಹರವಾದ ಫೋಟೋಗಳು.

ಶ್ರೀ ರೇಣುಕಾಚಾರ್ಯರ ಬಂಧಿತ್ತು ಅಮೃತಲಿಂಗೇಶ್ವರ ಕೂಡಿದ ಫೋಟೋ ಸೈಜು ೨೦×೧೪ ಬೆಲೆ ೧೫ಕ್ಕೆ ೦—೩—೦

ಶ್ರೀ ರೇಣುಕಾಚಾರ್ಯರು ಲೋಕಕಲ್ಯಾಣಾರ್ಥ ಅಗಸ್ತ್ಯ ಮಹರ್ಷಿಗಳಿಗೆ ನೀಡಿದ ಸ್ವಸ್ತಿಕ ಸಹಿತ ಮಹಾಮಂತ್ರೋಪದೇಶ ಮಹರ್ಷಿಗಳಿಗೆ ಶಿವಸಿದ್ಧಾಂತವನ್ನು ಪಡೆಸಿರುವ ಫೋಟೋ ಸೈಜು ೧೮×೧೪ ಬೆಲೆ ೦—೨—೬

ಸತ್ಯೇ ಸೀತಾವೀರಭದ್ರಮಾನಿರವಕ್ಕ ಜಯರು ಆಚಾರ್ಯರು ಕುಂದರಗುಡಿಯ ಇವರ ಫೋಟೋ ಸೈಜು ೧೪×೧೧ ಬೆಲೆ ೦—೧—೬

ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವಾರದ ಫೋಟೋ ಸೈಜು ೧೪×೧೧ ಬೆಲೆ ೦—೧—೬

ಶ್ರೀ ಜಗದ್ಗುರು ಪಂಚಾಚಾರ್ಯರ ೨೮ ಲಿಂಗಾವತಾರ ಫೋಟೋ ಸೈಜು ೧೮×೧೪ ಬೆಲೆ ೦—೦—೯

ಶ್ರೀ ಜಗದ್ಗುರು ರುದ್ರಮುನೀಶ್ವರ ಶಿವಾಚಾರ್ಯರು ಭೂಗರ್ಭದಿಂದ ಅವತರಿಸಿದವರ ಫೋಟೋ ೦—೦—೯

ಶ್ರೀ ರೇಣುಕಾಚಾರ್ಯರು ರುದ್ರಮುನೀಶ್ವರ ಶಿವಾಚಾರ್ಯರಿಗೆ ಪಟ್ಟಾಭಿಷೇಕ ಮಾಡಿಸಿದ ಫೋಟೋ ೦—೦—೯

ಶ್ರೀ ರೇಣುಕಾಚಾರ್ಯರು ವಿಭೂತಿಧಾರಣ ಸ್ಪರ್ಧಾನುಸಾರವಾಗಿ ವಿಕಲಾಂಗರಿಗೆ ಮಾಡಿ ಕೊಟ್ಟ ಸುರುಳಿಪಟ್ಟಿಯನ್ನು ಧರಿಸಿರುವ ಫೋಟೋ ೦—೦—೯

ಶ್ರೀ ರೇಣುಕಾಚಾರ್ಯರು ಶ್ರೀ ಉಮಾಮಹೇಶ್ವರ ಪಟ್ಟಾಭಿಷೇಕ ಮಾಡಿ ಕೊಟ್ಟ ಸುರುಳಿಪಟ್ಟಿಯನ್ನು ಧರಿಸಿರುವ ಫೋಟೋ ೦—೦—೯

ಶ್ರೀ ರೇಣುಕಾಚಾರ್ಯರು ಶ್ರೀ ಕುಕ್ಕರಹಾಳ ಸಿದ್ಧಲಿಂಗೇಶ್ವರ ಪಟ್ಟಾಭಿಷೇಕ ಮಾಡಿ ಕೊಟ್ಟ ಸುರುಳಿಪಟ್ಟಿಯನ್ನು ಧರಿಸಿರುವ ಫೋಟೋ ೦—೦—೯

ಶ್ರೀ ಕಾಶೀಕ್ಷೇತ್ರಸ್ಥವಿರಾಜಮಾನ ಶ್ರೀ ಜಗದ್ಗುರು ವಿಶ್ವಾರಾಧ್ಯರ ಸುಂದರಮೂರ್ತಿಯ ಫೋಟೋ ೦—೦—೯

ಶ್ರೀ ಕಾಶೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಪಂಚಾಕ್ಷರ ಶಿವಾಚಾರ್ಯರ ಫೋಟೋ ೦—೦—೯

ಶ್ರೀಮದುಜ್ಜಯಿನೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯರ ಫೋಟೋ ೦—೦—೯

ಶ್ರೀಮದ್ರಂಭಾಪುರೀ ಸಿಂಹಾಸನಾಧೀಶ್ವರ ಜಗದ್ಗುರು ವೀರಸಂಪದಿಂಹಾಚಾರ್ಯ ಮಹಾಸ್ವಾಮಿಗಳವರ ಫೋಟೋ ೦—೦—೯

ಶ್ರೀಮನ್ಮುಕ್ತಿಯೂರೀ ಜಗದ್ಗುರುಗಳವರ ಸ್ವರ್ಗಾರೋಹಣ ಶ್ರೀ ಕಾಶೀನಾಥಶಾಸ್ತ್ರಿಗಳವರು ಕೈಲಾಸಗಮನವಾದ ಫೋಟೋ ೦—೦—೯

ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಫೋಟೋ ಬೆಲೆ ೧೫ಕ್ಕೆ ೦—೧—೯

ಶ್ರೀ ಜಗದ್ಗುರು ಉಜ್ಜಯಿನೀ ಸಿಂಹಾಸನಾಧೀಶ್ವರ ಜಗದ್ಗುರು ಸಿದ್ಧಲಿಂಗಶಿವಾಚಾರ್ಯರ ಪ್ರಾಣಲಿಂಗ ೧೫ಕ್ಕೆ ೦—೦—೯

ಶ್ರೀ ಜಗದ್ಗುರು ಉಜ್ಜಯಿನೀ ಸಿಂಹಾಸನಾಧೀಶ್ವರ ಜಗದ್ಗುರು ಸಿದ್ಧಲಿಂಗಶಿವಾಚಾರ್ಯರ ಅತಿ ಸುಂದರವಾದ ಫೋಟೋ ೧೫ಕ್ಕೆ ೦—೦—೯

ಶ್ರೀ ಜಗದ್ಗುರು ಕೇದಾರಸಿಂಹ ಸಮಯ ಆತ್ಮಲಿಂಗ ಸಮರ್ಪಣಾದಿ ಸಮಯದ ಫೋಟೋ ೨೫ಕ್ಕೆ ೧—೦—೯

ಹಿಮಾವೃತ ಪರ್ವತದ ಸ್ವರ್ಗಿಯ ರಮಣೀಯ ಕೈಲಾಸನಾಥಸ್ವಾಮಿಯ ಮಂದಿರದ ಸುಂದರ ಫೋಟೋ ೮—೦—೯

ಶ್ರೀರಂಭಾಪುರೀ ಜಗದ್ಗುರು ಗಂಗಾಧರಶಿವಾಚಾರ್ಯರವರು ವಿರಾಜಿಸಿರುವ ಫೋಟೋ ೦—೦—೯

ಬೆಂಗಳೂರು ಕಂಟೋನ್ಮೆಂಟ್ ರೈಲ್ವೆ ಸ್ಟೇಷನ್ ಬಳಿಯ ಶ್ರೀ ಪಂಚಾಚಾರ್ಯರ ಮಠದ ಮುಂಭಾಗದ ಫೋಟೋ ೦—೦—೯

ಸೂಚನೆ—ಮೇಲೆ ಕಂಡ ಫೋಟೋಗಳಲ್ಲಿ ಯಾವುದಾದರೂ ಒಂದರ ಬೆಲೆಯನ್ನು ಕಳುಹಿಸಿದಲ್ಲಿ ಅಂಚೆ ಖರ್ಚಿನಲ್ಲಿ ಫೋಟೋವನ್ನು ಕಳುಹಿಸಲಾಗುವುದು.

ಮೇಲಿನ ಫೋಟೋಗಳನ್ನು ಕೊಳ್ಳುವವರು ಸ್ಟಾಂಪ್ ಬದಲಾಗಿ ಅಷ್ಟು ರೂಪಾಯಿಗೆ ೪ ಆಣೆಯಂತೆ ಕಮಿಷನ್ ಕಳುಹಿಸಲಾಗುವುದು

ಮ್ಯಾನೇಜರ್—ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು

ಜಿ. ಬಿ. ಡಾಕ್ಟರ್‌ರವರ

ಸುಗಂಧ ನಶ್ಯದಪುಡಿ

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದಪುಡಿಯು ಕಂಡುಹಿಡಿಯಲ್ಪಟ್ಟಿದ್ದು, ಸಾವಿರಾರುಮಂದಿಗಳು ಇದನ್ನು ಉಪಯೋಗಿಸಿ ಸಾವಿರಾರುಜನಗಳಿಗೆ ಸರ್ಟಿಫಿಕೇಟುಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ—ಪೀನಸಿ, ಒಂಟಿ ತಲೆನೋವು, ತಲೆಯ ಜ್ಞಿಯ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವವ್ಯಾಧಿಗಳು, ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವವರ್ಗೆ ಕಂಬಕ್ಕೆ ಮೇಲ್ಬಟ್ಟ ೯೬ ವ್ಯಾಧಿಗಳನ್ನು ಸ್ವಸ್ಥಪಡಿಸಿ ಜ್ಞಾಪಕಶಕ್ತಿಯನ್ನೂ ಸಹ ಹೆಚ್ಚುಮಾಡುತ್ತದೆ ಮೂರುಬಿಟ್ಟಿನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದಪುಡಿಯಲ್ಲಿ ಒಂದು ಚಿಟಿಕೆಯನ್ನು ನಿಶ್ಯಮಾಡಿದರೆ ಎಲ್ಲವೂ ಪರಿಮಳವಾಗುವುದು ಇದನ್ನು ಅನೇಕಪ್ರಭುಗಳು ಉಪಯೋಗಿಸುತ್ತಾರೆ ಮಾದರಿ ಸೀಸೆ ಫ್ರೀ ಬುಡ್ಡಿ ಒಂದಕ್ಕೆ ೪ ಆಣೆ. ಡಜನ್ ಒಂದಕ್ಕೆ ಕ್ರಯ ರೂ ೨ ೮-೦ ವಿಸಿ ೮ ಆಣೆ


(Registered Trade Mark)

ನಿಮ್ಮ ಅಡ್ರೆಸ್ಸನ್ನು ೨೯೦ಯಂತೆ ಬರೆಯಿರಿ.

ಗುರುಬಸವ ಅಂಡ್ ಕಂಪೆನಿ ಲಿಮಿಟೆಡ್.

[30] ಪೋ ಬಾ ೫೧೦, ಮದರಾಸು

ಸರ್ವೋತ್ಕೃಷ್ಟವಾದ ಮತಗ್ರಂಥಗಳು

ಸೋತ್ರಸೂತ್ರಪಟಿ (ಜನಯ ಆವೃತ್ತಿ)	೧ ಆಣೆ
ಸಚ್ಯಾಶಾಸ್ತ್ರಮವಿಮರ್ಶ (೩ನೆಯ ಆವೃತ್ತಿ ೯ ಸ್ಕೃತ)	೧ ಆಣೆ
ಪಂಚವಿಂಶತಿ ಶ್ರುತ್ಯಪ್ರಕಾಶ (೩ನೆಯ ಆವೃತ್ತಿ)	೧ ಆಣೆ
ಶ್ರೀಪಂಚಾಚಾರ್ಯ ಮಂಗಳಸ್ತೋತ್ರಾವಳಿ (೯ನೆಯ ಆವೃತ್ತಿ)	೧ ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ (೩ನೆಯ ಆವೃತ್ತಿ)	೧ ಆಣೆ
ಶ್ರೀಜಗದ್ಗುರು ಪಂಚಾಚಾರ್ಯರ ನಾಮಾವಳಿ (೩ನೆಯ ಆವೃತ್ತಿ)	೨ ಆಣೆ
ಬಸವಾದಿಶಿಜಶತ್ಪವರ್ಷಣ (೪ನೆಯ ಆವೃತ್ತಿ)	೩ ಆಣೆ
ಶ್ರೀರೇಣುಕಾಚಾರ್ಯಶತಕ (೩ನೆಯ ಆವೃತ್ತಿ) ..	೩ ಆಣೆ
ಪಂಚಾಚಾರ್ಯಪ್ರಭಾಕರ ..	೩ ಆಣೆ
ಶ್ರೀಗುರುಸ್ತುತ್ಯಷ್ಟಪದಗಳು	೩ ಆಣೆ
ಶ್ರೀರುದ್ರಮುನಿಶಿವಾಚಾರ್ಯಶತಕ	೩ ಆಣೆ
ವೀರಶೈವಮತಮಿಮಾಂಸಾ . .	೩ ಆಣೆ
ವೀರಶೈವಾಚಾರವಿಧಿ (೩ನೆಯ ಆವೃತ್ತಿ)	೩ ಆಣೆ
ಲಿಂಗಧಾರಣವಿಧಿ	೪ ಆಣೆ
ವಿವಾಹವಿಧಿ (೩ನೆಯ ಆವೃತ್ತಿ) ...	೪ ಆಣೆ
ಶ್ರೀಪತಿಪಂಡಿತಾರಾಧ್ಯರ ಕಾಲನಿರ್ಣಯ	೪ ಆಣೆ
ಸಚ್ಯಾಶಾಸ್ತ್ರಮವಿಮರ್ಶತತ್ವ ಸ್ಪಿರೀಕರಣ (೩ನೆಯ ಆವೃತ್ತಿ) ...	೬ ಆಣೆ
ಸಿದ್ಧಾಂತ ಶಿಖಾಮಣಿ (ಸೂಲಮಾತ್ರ ಚಕ್ಕಸ್ಕೆಜು)	೬ ಆಣೆ
ವೀರಶೈವಮಹಾತ್ಮರು	೮ ಆಣೆ
ಬಸವಧ್ಯಾಯತಿವಿವಾಕರ (೩ನೆಯ ಆವೃತ್ತಿ)	೮ ಆಣೆ
ತಿವಾದ್ವೈತಪರಿಭಾಷಾ (ಸಂಸ್ಕೃತ)	೮ ಆಣೆ
ಪಂಡಿತ ಶ್ರೀಕಾಶೀನಾಥಶಾಸ್ತ್ರುಲವರಿ ಭಾಷಣಮು(ತೆಲುಗು)	೮ ಆಣೆ
ಸದ್ಯೋಧರಶ್ಯಾವಳಿ	೮ ಆಣೆ
ವೈದಿಕಶಿವಪೂಜಾವಿಧಿ (ವೈದಿಕಸ್ವರಯುಕ್ತವಾದ ಆಶ್ವಂತ ಸುಂದರಮುದ್ರಣ)	೧೨ ಆಣೆ
ಸಿದ್ಧಾಂತಸಾರಾವಳಿ (ತ್ರಿಲೋಚನಶಿವಾಚಾರ್ಯಕೃತ)	೧೨ ಆಣೆ
ಶ್ರೀಜಗದ್ಗುರು ಪಂಚಾಚಾರ್ಯ ಸ್ತೋತ್ರರತ್ನಾಕರ .	೧೨ ಆಣೆ
ಮಾಹೇಶ್ವರ ದೀಕ್ಷಾವಿಧಿ (೩ನೆಯ ಆವೃತ್ತಿ)	೧೨ ಆಣೆ
ಶಿವಾಗಮಪ್ರತಿಷ್ಠಾಂಜಪರ್ಣ ...	೧೨ ಆಣೆ
ಶ್ರೀಕರಭಾಷ್ಯಂ (ಚತುಷ್ಟ್ರಿ)	೧ ರೂ
ಸಚಿತ್ರ ರೇಣುಕವಿಜಯ (೩ನೆಯ ಆವೃತ್ತಿ) ..	೧ ರೂ
ವೀರಶೈವರತ್ನ (೩ನೆಯ ಆವೃತ್ತಿ, ೩೦ಮಹತ್ವದಶೋಭನಪಟ) ..	೧೫ ರೂ
ಸಿದ್ಧಾಂತತಿಖಾಮೋಪನಿಷತ್ (ಸಂಸ್ಕೃತ ಟೀಕಾಸಹಿತ)	೧ ರೂ
ಕೇನೋಪನಿಷತ್ (ಸಂಸ್ಕೃತ ಟೀಕಾಸಹಿತ)	೧ ರೂ
ರೇಣುಕವಿಜಯ ಮಹಾಪುರಾಣ (ಸಂಸ್ಕೃತ ಭಾಮಿಸಹಿತ) ...	೧ ರೂ
ಸಿದ್ಧಾಂತತಿಖಾಮಣಿ (ಸಂಸ್ಕೃತ ಟೀಕಾಸಹಿತ)	೨ ರೂ
ವೀರಶೈವಸಿದ್ಧಾಂತಸುಧಾಕರ	೨ ರೂ
ತಿವಾದ್ವೈತಮಂಜರಿ (ಸಂಸ್ಕೃತವ್ಯಾಖ್ಯಾನ ೧೩೨೩ ಪುಟ)	೪ ರೂ
A brief life sketch of Pandit Sri Kashinatha Shastriji (*English*)	4 As
The Philosophical Aspect of Virasaivism (*English*) .	8 As
Speeches by Pandit Shri Kashinatha Shastriji *English*)	12 As
ವೀರಶೈವರತ್ನ (ಆರತಿ)	೧ ರೂ.
ಮಹಾನಿರ್ಣಯಗಣಲಿಯತ್ (ವೀರಶೈವಭಾಷ್ಯ-ಸಂಸ್ಕೃತ)	೨ ರೂ
ವೀರಶೈವತ್ವಶೋಭಾ (ಸಂಸ್ಕೃತ) . ..	೨ ರೂ
ನಂದಿಕೇಶ್ವರಕಾರಿಕಾ (ಸಂಸ್ಕೃತ) \ ..	೩ ಆಣೆ
ಲಿಂಗಧಾರಣವಚ್ಚಿಕಾ (ಸಂಸ್ಕೃತ) ...	೩ ರೂ

೧ ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ ಕಳುಹಿಸುವುದಿಲ್ಲ ೫ ರೂ ಗಳಿಗೆ ಮೇಲ್ಪಟ್ಟು ಪುಸ್ತಕಗಳನ್ನು ತರಿಸಿಕೊಳ್ಳುವವರಿಗೂ ಪುಸ್ತಕ ವ್ಯಾಪಾರಿಗಳಿಗೂ ೧ ರೂ. ಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವುದು

ಮ್ಯಾನೇಜರ್—ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು

ಮೈಸೂರು ಸಯ್ಯಾಜಿರಾವ್ ರೋಡಿನಲ್ಲಿರುವ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಸಂಸ್ಥಾದಕರಾದ ವೇ॥ ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರಿಂದ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED No. M. 2266 ॥ ಶ್ರೀಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು ॥ REGISTERED No. M. 226

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತತಜನಿತರ ಪಂಚಾಸ್ಯಪೀಠಾಧಿಪರ । ಪಂಚಕ್ಲೇಶವಿನಾಶಕರ ಪರತರಶ್ರೀಪಂಚಲಿಂಗೇಶ್ವರ ॥
ಪಂಚಾಚಾರಪಥಿಯಾಮಕರ ಪರಿಲಸತ್ಪಂಚಾಕ್ಷರೀಮೋದಕರ । ಪಂಚಾಚಾರ್ಯಜಗದ್ಗುರೂತ್ತಮವರ ಪ್ರಾಲಿಪ್ಪುದೀ ಲೋಕಮಂ ॥

ಸ್ಥಳವರಿಗೆ ೧ ರೂ. ೧೧ ಆಣೆ. ಪ್ರತಿ ಪ್ರತಿ ಒಕ್ಕೆಕ್ಕೆ ೬ ಸೈ. ಪರಸ್ಥಳವರಿಗೆ ೨ ರೂ ೮ ಆಣೆ ವಿ ಪಿ ಚಾರ್ಜು ಪ್ರತ್ಯೇಕ.

ಸಂಪುಟ ೧೪.] ಪಂಚಾಚಾರ್ಯಪ್ರಭಾ, ಸೋಮವಾರ ತಾ॥ ೯ನೇ ಡಿಸೆಂಬರ್ ೧೯೪೦ [ಸಂಚಿಕೆ ೩೧

॥ ಶ್ರೀ ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು ॥

ಧರ್ಮಿಕಸಭೆ, ಎಳ್ಳಂಬಿ.

ಬೆಳಗಾಂ ಡಿ॥ ಚಿಕ್ಕೋಡಿ ತಾ॥ ಎಳ್ಳಂಬಿಗ್ರಾಮಕ್ಕೆ ಬಾಲತಪಸ್ವಿ ಶ್ರೀ॥ ಷ॥ ಬ್ರ॥ ಜಿನ್ನವೀರಿನಾಚಾರ್ಯರು ಬ್ರಹ್ಮಕ್ಷೇತ್ರಕ್ಕೆ ಹೋಟಿಗಿ ಸ್ವಾಮಿಗಳು ತಾ॥ ೧೬ ೧೧ ೧೯೪೦ ನೇ ದಿವಸ ಶ್ರೀಯುತ ಬಾಬಣ್ಣಾ ರಾಯಬಾಗಪ್ಪ ಹುಕ್ಕೇರಿ ಇವರ ಸ್ವಾರ್ಥಸೇರು ಮೀಸೆಗೆ ಬೆಳಗಾಂವಿಯಿಂದ ದಯಮಾಡಿಸಿದರು ಆ ದಿವಸ ಸಾಯಂಕಾಲ ಪುರವಸರು ವಾದ್ಯ ವೈಭವದಿಂದೊಡಗೂಡಿ ಉತ್ಸವವ ದೊಡನೆ ಸ್ವಾಮಿಗಳವರನ್ನು ಬಿಜಯಾಡಿಸಿಕೊಂಡರು ಉತ್ಸವವು ಪುರದ ಮುಖ್ಯಮುಖ್ಯ ಬೀದಿಗಳಲ್ಲಿ ಹಾಯ್ದು ಶ್ರೀಮಂತ ಬಾಬ್ಣಾಗ ರು ಸಾವಕಪ್ಪ ಹುಕ್ಕೇರಿ ಇವರ ಪ ನೆ ಒಂದು. ಅನ ತರ ಸಭೆಯ ಪ್ರಾರಂಭವಾಯಿತು ಶ್ರೀಗಳು ಧರ್ಮದ ಬಗ್ಗೆ ಸವ್ತಾ ವ್ಯಪೂರ್ಣವಾದ ಭಾಷಣಮಾಡಿದರು.

ತಾ॥ ೧೯-೧೧-೧೯೪೦ ಮಂಗಳವಾರದಿವಸ ಸಂಜೆಯ ೮ ಘಂಟೆಗೆ ನಿತ್ಯಮಠದಲ್ಲಿ ಶ್ರೀಗಳವರ ಆತ್ಮಕ್ಷೇಮವೆಲ್ಲಿ ಸಭೆಯು ಪ್ರಾರಂಭವಾಯಿತು. ಮೊದಲು ಸತ್ತಿಗೇರಿ ಶ್ರೀಗಳವರು "ಸ್ವಧರ್ಮ" ವಿಷಯವಾಗಿ ಭಾಷಣಮಾಡಿದರು ಆಮೇಲೆ ಹೋಟಗೇ ಶ್ರೀಗಳವರು "ಸುಖ" ವಿಷಯವಾಗಿ ಭಾಷಣ ಮಾಡುತ್ತ "ಮನುಷ್ಯನು ನಿಜವಾದ ಸುಖವನ್ನು ಹೊಂದ ಬೇಕಾದರೆ ಸರಮಾತ್ಮನಲ್ಲಿ ಆತ್ಯರ್ಪಣ ಭಾವನೆಯಿಂದ ಮಾಡಿದ ಭಕ್ತಿಯೇ ಮೂಲಕಾರಣವಾಗುತ್ತದೆ ಅಲ್ಲದೆ ಸ್ಪುರುಷನ ಸದುಪಚೇಷದ ಪ್ರಭಾವದಿಂದ ನಿಜವಾದ ಸುಖವು ಹೊರೆಯುವದು ಮತ್ತು ತಮ್ಮ ಶಕ್ತಿ ಧರ್ಮದಿಂ ನಡೆಯುವದು ಮನುಷ್ಯನ ಮೊದಲನೆಯ ಕರ್ತವ್ಯವಾಗಿದೆ ರೈತನು ತೋಟವ ಗುಣವೇ ವಾದ ಕಾಲಿ ಮಣಿಯನ್ನು ನೋಡಿ ಮೋಸಹೋಗುವಂತೆ ಗುರು ವೇಷಧಾರಿಗಳಾದ ಗುರುಜಿದ್ರೆ ಅನರ್ಹರಾದ ಅಧಾಪ ಗುರುಗಳ ಆಶ್ರಯದಿಂದ ಮನುಷ್ಯನಿಗೆ ಸುಖದ ಬದಲಾಗಿ ಮಹಾನೆ ಪ್ರಾಪ್ತವಾಗುವದು ಎಷ್ಟು ದುಃಖಗಳು ಬಂದರೂ ಅವುಗಳನ್ನು ತಾ ಸ್ವಧರ್ಮದ ಪರಿಪಾಲನೆ ಮಾಡಿದವನಿಗೆ ನಿಜವಾದ ಸುಖವು ತೊನೆಗೆ ಸಿಗುವದು ಪರ್ಯಾಂತನನ್ನು ಮಾಡಿದವನಿಗೆ ಸುಖವು ಸಿಗುವದು ದುರ್ಲಭವಾಗುವದು ಆದಪ್ಪರಿವಾದ ಜಗತ್ತಿನಲ್ಲಿದ್ದು ಮುಕ್ತಿಪಥಕ ಮೇಟ್ಟಿ ಶ್ರೇಷ್ಠನನ್ನು ದೇವರಿಮೇಲಿಟ್ಟಿರೆ ನಿಜವಾಗಿ ಮನುಷ್ಯನು ಸುಖಿಯಾಗುವನು. ಸಲ ಮಿಕಿಯರೂ ತಮ್ಮ ತಮ್ಮ ಸುಪತ ತತ್ವಗಳನ್ನು ತಿಳುಕೊಂಡು ಅವರಂತೆ ಆಚರಿಸಿ ಸುವಿಗಳಾಗುತ್ತಿರುವರು. ವೀರಶೈವರು ಮಾತ್ರ ಧರ್ಮವೀನರವಂತೆ ಸುಖವೀನರಾಗಿರುವರು ಮತದ ಮೂಲಸಂಸ್ಥಾಪಕರಾದ ದೀಕ್ಷೆಯನ್ನು ಹೊಂದದಿರುವರೇ ಇದಕ್ಕೆ ಕಾರಣ. ಅವರಿಂದಿಂದ ಶ್ರುತಿಯೆಲ್ಲರೂ ದೀಕ್ಷೆಯನ್ನು ಅವಶ್ಯವಾಗಿ ಹೊಂದಬೇಕೆಂದು" ಅವೇಶಪೂರ್ಣವಾದ ವಾಣಿಯಿಂದ ೨ ಘಂಟೆಗಳವರೆಗೆ ಭಾಷಣಮಾಡಿದರು ೩ ಸಾವಿರ ಜನಕ್ಕಿಂತಲೂ ಅಧಿಕವಾದ ಸಭೆಯು ಶ್ರೀಗಳವರ ಭಾಷಣದ ಜುಲಿಕ್ಕೆಗೆ ಗೊಂಬೆಯಂತೆ ಏಕ್ಕಚಿತ್ತವಾಗಿ ಕುಳಿತಿತ್ತು ನಡುನಡುವೆ ಆಚಾರ್ಯರ ಜಯಘೋಷವು ನಭವೆಲ್ಲಾ ತುಂಬಿ ಇತ್ತು. ಇತ್ತಲಿವರೆಗೆ ನಮ್ಮ ಎಳ್ಳಂಬಿ ಗ್ರಾಮಕ್ಕೆ ಈರೀತಿ ಉಚ ದೇವತಾಸ್ವರೂಪ ಸ್ವಾಮಿಗಳು ಯಾರೂ ಬಂದಿದ್ದಿಲ್ಲ ಈ ಪುಣ್ಯ ತ್ಮರ ಸೋಲಲಸವಂದಂತು ಸಭೆಕರು ನುಡಿದಾಡುತ್ತಿದ್ದರು. ಆಮೇಲೆ ಶ್ರೀಮಂತರೂ ಎಂಗೀವೃದ್ಧರೂ ಜ್ಞಾನವೃದ್ಧರೂ ಆದ ವಿಶಪ್ಪಣ್ಣ ರಿಂದ ಇವರು ಶ್ರೀಗಳವರ ತಪಸ್ಸಿನ ಬಗ್ಗೆಯೂ ಮಾಡಿ ಇಂತಹ ಗುರುಗಳು ನಮಗೆ ಸಿಕ್ಕರೆ ನಮ್ಮ ಭಾಗ್ಯಕ್ಕೆ ಎಣೆಯೇ ಇಲ್ಲವೆಂದೂ ಶ್ರೀಗಳವರು ಉಪದೇಶದಿಂದ ಪರಮ ಧನ್ಯರಾದೆವೆಂದೂ ಭಾಷಣಮಾಡಿದರು. ಮತ್ತಾಲಿಕ ಪುರಾಕರುರು ಭಾಷಣಮಾಡಿದವಾಗಿ ಕರತಾಡನಗಳ ಶಬ್ದ-ಜಯಜಯಕಾರವು ಮತ್ತು ಅನಂಡಾಶ್ಚರ್ಯ ಉಗಮ ಇವುಗಳಿಂದ ಕೂಡಿದ ಸಭೆಯು ನೋಡುವವರಿಗೆ ಅತ್ಯರ್ಯವನ್ನುಂಟುಮಾಡುತ್ತಿತ್ತು ಬಳಿಕ ಸಭೆಯು ಮಂಗಲವಿಜಿಸಿತು. ಮರುದಿವಸ ೬ ಘಂಟೆಗೆ ವಿಶಕ್ತ ಮಠದಲ್ಲಿ ಸಭೆಯು ಪ್ರಾರಂಭವಾಯಿತು ಸಭೆಗೆ ಜನರು ಮೊದಲಿಗಿಂತಲೂ ಹೆಚ್ಚಾಗಿ ಬಂದಿದ್ದರು ಮೊದಲು ಸತ್ತಿಗೇರಿ ಶ್ರೀಗಳು "ಗುರುತ್ವ" ದ ಬಗ್ಗೆ ಹೇಳಿದರು ಸ॥ಗಚ್ಚೆ ಶ್ರೀಗಳು "ದೀಕ್ಷೆ" ವಿಷಯದ ಬಗ್ಗೆ ಹೇಳಿದರು ಬೆಳಿ ಶಂಕರಾನಂದ ಪಾಪ್ತಿಗಳು ಸೇವಲಿಗಿ ಇಳರು "ಏಕೆಲ್ಲಂ ಏಕೆ?" ಯ ಬಗ್ಗೆ ಹೇಳಿದರು. ಅಮೇಲೆ ಹೋಟಗಿ ಶ್ರೀಗಳು "ಮಾನವ ಧರ್ಮ" ದ ಮೇಲೆ ೨ ಘ ಗಿಂತಲೂ ಭಾಷಣ ಮಾಡಿ ಸಕಲ ಸಭಿಕರನ್ನು ಸಂತೋಷಪಡಿಸಿದರು ಈರೀತಿ ಸದಾ ಧರ್ಮೈಣ್ಣಾರ ಇದ್ದವಲ್ಲಿ ಕಂಕಣಬದ್ಧರಾದ ಬಾಲತಪಸ್ವಿ ಹೋಟಗಿ ಶ್ರೀಗಳವರ ಪವಿತ್ರಮುಖಾರ್ಯ ದರ್ಶನಸ್ಪರ್ಶನಗಳ ಸದ ಭಾಷಣಗಳಿಂದ ಅತ್ಯಾನಂದವು ನಿಶಬ್ದವಾಗಿಯೂ ಉತ್ಸಾಹದಾಯಕ ವಾದವಿ ಎಷ್ಟೂ ಸಂತೃಪ್ತಿಯಿಲ್ಲ. ಗುರುವರ್ಯರ ಪಟ್ಟಿ ಚೆರಂಟಿಗಾನಿಗಳೇ! ತಾವೆಲ್ಲರೂ ಭಕ್ತಿಶ್ರದ್ಧಾದರ ಕಾರ್ಯದಲ್ಲಿ ಸದಾ ನಿರತರಾಗಿ ಶಿವಭಕ್ತಜನರಂಯಾಗಿರಿ ಹೋಟಗೇ ಶ್ರೀಗಳವರ ಪಾರ್ಥನೆಯನ್ನು ಸಲ್ಲಿಸಿದರು ತಮ್ಮ ಮತ್ತು ವೀರಶೈವಸಮಾಜಕ್ಕೂ ಪರಮ ಕಲ್ಯಾಣವಾಗಬೇಕು ಮತ್ತು ವೀರಶೈವಸಮಾಜಕ್ಕೂ ಪರಮ ಪೂಜ್ಯ ತಪೋನಿಧಿ ಪ್ರಾತಃಸ್ಮರಣೀಯ ಪೂಜ್ಯಶ್ರೀಮದ್ವೀರಭದ್ರ ದಂಯಮಣಿ ಡಿಸಿಕೊಂಡು ಸಲಿಂದನ್ನು ಪೂರಾಕರ್ತನ್ನಾಗಿ ಮಾಡುವದರ ಮೂಲಕ ತಾವು ಪೂಜ್ಯಾಗಿಗಳಂತೆ ಶ್ರೀಮಂತ ಭಾಗ್ಯ ಶುಕ್ಲೆಗಿ ಇವರೇ ಪದರು ಧನ್ಯರು! ಈ ಮಹಾಕಾರುರು ಚಿಕ್ಕಮಯಿಸ್ಸನ್ನಾಗಿದ್ದರೂ ಪಾಪಾ ಕಾಲಾತ್ಮಭಾಗಳಾ, ಪರಮ ಗುರುಭಕ್ತರೂ, ವಿಜಾತ ಶಿಲರೂ, ದಯಾಪ್ರಯರೂ ಆಗಿರುವರು. ಈ ಗುರುಭಕ್ತ ಶಿರೋಮಣಿಗಳಿಗೆ ಸಕಲ ಗುರುಭಕ್ತರೂ ಆಯುರಾರೋಗ್ಯ ಭಾಗ್ಯಾದಿಗಳನ್ನು ಅನುಗ್ರಹಿಸಲೆಂದು ಪರಮೇಶ್ವರನನ್ನು ಪ್ರಾರ್ಥಿಸುವೆ.

ಎಸ್. ಸಿ. ವಾಲಿ, ಇಂಜಿ ಅಸ್ಟ್ರ,
ಲಿಂಗಂ.ಜಾಲಕೇಜ, ಬೆಳಗಾಂವ

॥ ಶ್ರೀ ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು ॥

ಶ್ರೀಸಿದ್ಧವಿನಾಯಕ ದೇವಾಲಯ ಪ್ರವೇಶ ಮಹೋತ್ಸವ

ಶಿವಮೊಗ್ಗಾ ಡಿ॥ ಹಾರನಹಳ್ಳಿ ನಿವಾಸಿಗಳಾದ ಶ್ರೀಯುತ ಶೆಟ್ಟಿಪ್ಪಳರುದ್ರಪ್ಪನವರು ತೀರ್ಥಹಳ್ಳಿ ತಾ॥ ಆಸ್ಯಕಾಲದ ಹೊಲಿ ಹಲವನಹಳ್ಳಿಗ್ರಾಮದ ಸಮಾಸ ದಲ್ಲಿ ನೆಲೆಸಿರುವ ಶ್ರೀನಿವಾಯಕನ್ನಾಮಿಗೆ ಕೆಲವು ವರ್ಷ ಗಳ ಹಿಂದೆ ಸೇವಾರೂಪವಾಗಿ ಯೆಭಾಕಟ್ಟೆ ಗರ್ಭಾಂಕಣ ವನ್ನು ಮಾತ್ರ ನಿರ್ಮಾಣಮಾಡಿಸಿದ್ದರು ಇತ್ತೀಚೆಗೆ ಸುಂದರವಾಗಿ ದೇವಮಂದಿರವನ್ನೂ ಪಾಪಿಯನ್ನೂ ಕಟ್ಟಿ ಸಿದರು ಇದೇ ವಿಶ್ವಾವಸುನಾಮ ಸಂ॥ ಕಾರ್ತಿಕ ಬ॥ ಏ (೨೦ ೧೧-೧೯೪೦) ಬುಧವಾರ ದಿವಸ ಕೂಪ ಶುದ್ಧಿಯೂ, ನೂತನ ಗಣಪತಿದೇವಾಲಯ ಪ್ರವೇಶವೂ ಮಾಹೇಶ್ವರ ವೆಟುಗಳಿಗೆ ಶಿವದೀಕ್ಷಾ ಸಂಸ್ಕಾರವೂ ಸಶ ಮಳಲಿ, ಕವಲೇದುರ್ಗ, ಕುಂಕೋವು ಸ್ಥಳಗಳಿಂದ ದಯಮಾಡಿಸಿದ ಶ್ರೀಗುರುಚರಪಟ್ಟಾಧ್ಯಕ್ಷರುಗಳ ನೇತೃತ್ವದಲ್ಲಿ ನ್ಯಾಮತಿ ವೇ॥ ವೀರಾರಾಧ್ಯರವರಿಂದ ವಿಧ್ಯುಕ್ತವಾಗಿ ನೆರವೇರಿತು ಪ ಧ್ಯಾಹ್ನ ಸಹಸ್ರಾರು ಜನರಿಗೆ ಸಂತರ್ಪಣೆಯು ನೆರೆಯಿತು ಸಾಯಂಕಾಲ ೬ ಘಂಟೆಯಿಂದ ಶ್ರೀಗುರುತ್ರಯರ ಸನ್ನಿಧಿಯಲ್ಲಿ ನೆರೆದ ಬೃಹತ್ಸಭೆಯಲ್ಲಿ ಕೇರ್ತನಕೇಸರಿ ಕವಿಭೂಷಣೇತ್ಯಾದಿ ಬಿರುದಾಂಕಿತರಾದ ವೇ॥ ಗುಬ್ಬಿ ಶಿವರುದ್ರಶಾಸ್ತ್ರಿಗಳವರು "ಮಾನವಧರ್ಮ" ವಿಷಯದಲ್ಲಿಯೂ, ಶ್ರೀಯುತ ರಾದ ದೇಶಭಕ್ತ ಶಿವಮೊಗ್ಗಾ ಭೂಷಿಯಂ ಚಿಂದ್ರಶೇಖರ ರಯ್ಯನವರು "ಹಿಂದೂಧರ್ಮತತ್ವ" ನಿಶಾರದಲ್ಲಿಯೂ ಸಮಸ್ತ ಜನರ ಮನಸ್ಸಿನೊಲ್ಲಿ ಪರಿಣಾಮವಾಗುವ ಹಾಗೆ ಸರಸವಾದ ಭಾಷಣಗಳನ್ನು ಮಾಡಿದರು

ತರುವಾಯ ವೇ॥ ಶಾಸ್ತ್ರಿಗಳವರು ಪಂಜುಳಮಾವ್ಯಗ ಕೊಡನೆ ಭಕ್ತಿರಸಪ್ರಧಾನವಾಗಿಯೂ, ನೀತಿಬೋಧಪ್ರದವಾಗಿಯೂ ಇರುವ "ಗರಾಕರಣಾವ್ರಭಾವ" ವೆಂಬ ಶಿವಸಂಕೀರ್ತನೆಯನ್ನು ಸುಶ್ರಾವ್ಯವಾಗಿ ಅನುವಾದಿಸಿ ಸರ್ವರನ್ನೂ ಸಂತೋಷ ಸಾಗರದಲ್ಲಿ ಮುಳಿಗಿಸಿದರು. ಬಳಿಕ ವೇ॥ ವೀರಾರಾಧ್ಯರವರು ಶಾಸ್ತ್ರಿಗಳವರ ಕೇರ್ತನ ಸಂವಿಧಾನವನ್ನು ಕುರಿತು ಶ್ಲಾಘಿಸಿ ಶ್ರೀಯುತರಾದ ಶೆಟ್ಟಿಪ್ಪಳರುದ್ರಪ್ಪನವರ ಸತ್ಕಾರ್ಯವನ್ನು ಪ್ರಶಂಸಿಸಿ "ಶಿವಿರಲ್ತಾ"ವಿಷಯಕವಾಗಿ ಸ್ವಾರಸ್ಯವಾದ ಭಾಷಣಮಾಡಿದರು ಎಲ್ಲಿ ನೋಡಿದರೂ ಜೀರೂರು ಗುರುಸೇವಾಧಜ ನೆಮಂಡಲಿಯವರ ಇಂತಾದ ಶಿವಗುರುಭಜನೆಯ ಆನಂದವೇ ಆನಂದವು! ಎತ್ತ ನೋಡಿದರತ್ತ ಶ್ರೀಜಗದ್ಗುರು ಪಂಚಾಚಾರ್ಯರ ಜಯಘೋಷವೇ ಘೋಷವಾಗಿತ್ತು. ಈ ಸಮಾರಂಭದಲ್ಲಿ ಶಿವಮೊಗ್ಗಾ, ಸ್ತ್ಯಾಮತಿ, ಹಾರನಹಳ್ಳಿ, ಜೀರೂರು, ಹೊಳೆಹೊನ್ನೂರು, ದೊಡ್ಡೆತ್ತಿನಹಳ್ಳಿ, ಚಾಮೇನಹಳ್ಳಿ, ತಮ್ಮುಡಿಹಳ್ಳಿ, ಆಯನೂರು, ತೀರ್ಥಹಳ್ಳಿ, ಕಿತ್ತೂರು, ಉದ್ದೇಲೇವರಮಹ, ಆಡಗದ ಮಕ, ಭಾಂಡ್ಯ, ಕೋಟೆಗದ್ದೆ, ಹುಲವನಹಳ್ಳಿ, ಜಳ ಬೈಲು, ಮುಂತಾದ ಸ್ಥಳಗಳಿಂದ ಸುಮಾರು ೩-೪ ಸಹಸ್ರ ಜನರು ಭಾಗಿಗಳಾಗಿದ್ದರು. ಇದೊಂದು ನಮೀನ ಜಾತ್ರೆಯೋ, ಮಹಾಯಾತ್ರೆಯೋ, ಎಂಬಂತಿದ್ದು ನೋಡುವವರ ಕಣ್ಣಿಗೆ ಮಲೆನಾಡಿನ ಈ ಕ್ಷೇತ್ರವು ಶಿವನಾಡಾಗಿ ಕಾಣುತ್ತಿತ್ತು ಮೂರು ದಿನಗಳವರೆಗೂ ಸಹ ಸ್ರಾರು ಜನರು ನೇರಿದ್ದರೂ, ಯಾವ ಗಲಭೆಗೂ ಅವ್ಯವಸ್ಥೆಗೂ ದಕ್ಷತೆಯಿಂದ ತಮ್ಮತಮ್ಮ ಕರ್ತವ್ಯವನ್ನು ಪಾಲಿಸಿದ ಶ್ರೀಯುತರುಗಳಾದ ಕೋಟೆಗದ್ದೆ ಸಾಗಪ್ಪ ಗೌಡರು, ಹುಲವನಹಳ್ಳಿ ಬಸವಣ್ಣಪ್ಪಗೌಡರು, ಜಳ ಬೈಲು ಮಲ್ಲಪ್ಪಗೌಡರು, ಜೀರೂರು ಗುರುನಂಜಪ್ಪ ನವರು ಮುಂತಾದವರು ಅಭಿನಂದನಾರ್ಹರೇ ಸರಿ!

ಕಾರ್ಯಕರ್ತೃಗಳಾದ ಶ್ರೀಯುತ ಶೆಟ್ಟಿಪ್ಪಳ ರುದ್ರಪ್ಪನವರಿಗೂ ಇವರಿಂದಿನೆ ಸಹಕರಿಸಿದ ಬಂಧುವಿತ್ರರಿಗೂ ನಳಲ ಸೌಖ್ಯವನ್ನೂ, ಜೀರೂರು ಗುರುನಂಜಪ್ಪನವರು ಮಂಗಾವನರು ಅಪೇಕ್ಷಾಭಾವದಿಂದ ಪ್ರಾರ್ಥಿಸುವ.

/ಓರ್ವ ಉತ ಮವಾಗಿ

ಕಣ್ಣು ಮತ್ತು ಅದರ ರಕ್ಷಣೆ

ಪೂರೆ

ಸುಮಾರು ೫೦ ವರ್ಷ ತುಂಬಿದನರು ಕಣ್ಣಿಗೆ ಪೊರೆ ಬಂದು ದೃಷ್ಟಿ ಕುಗ್ಗಿದರೆಯೆಂದು ಹೇಳಿಕೊಳ್ಳುವುದುಂಟು ವಯಸ್ಸಾದಮೇಲೆ ಕೆಲವರಿಗೆ ಕಣ್ಣಿನಿಂ ಪಾರದರ್ಶಕತ್ವಕ್ಕೆ ಅವಿಧಿತ ಕಾರಣಗಳಿಂದ ಕಂದುಬಣ್ಣವಾಗಿ ಕ್ರಮೆಣ ಕಣ್ಣು ಕಾಣದಂತಾಗುತ್ತವೆ ಹೀಗೆ ಪಾರದರ್ಶಕತ್ವವನ್ನು ಕಳೆದುಕೊಂಡ ಕಣ್ಮಣಿಯನ್ನೇ ಪೊರೆ ಎಂದು ಕರೆಯುವರು ಹಿಂದೂಸ್ಥಾನಿಯಲ್ಲಿ ಇದಕ್ಕೆ ಸರಣಾ ಎನ್ನುತ್ತಾರೆ ಇದು ಬೆಳಕನ್ನು ಜಾಲಪಟಲದಮೇಲೆ ಬೀಳದಂತೆ ತಡೆಯುವುದರಿಂದ ಈ ಹೆಸರುಗಳು ಬಂದಿವೆ

ಚಿಹ್ನೆಗಳು—ಪ್ರಾಥಮಿಕ ಇದಿರಿನಲ್ಲಿ ಕರಿಯ ಚುಕ್ಕಿಗಳಿದ್ದ ತೆ ಕಾಣುವುದು ಒಂದೂ ವಿಷಯವಾಗಿ ಎರಡೆರಡಾಗಿ ಮೂರು ಮೂರಾಗಿ ಕಾಣುವುದು ಬರಬರುತ್ತಾ ದೃಷ್ಟಿ ಕುಗ್ಗಿ ಕಲವು ಅಡಿಗಳ ದೂರದಲ್ಲಿ ಹಿಡಿದ ಬೆರಳುಗಳನ್ನು ಎಣಿಸಲು ಕೂಡ ಶಕ್ತಿ ಇಲ್ಲದಂತಾಗುವುದು ಕೈ ಚಲನವನ್ನು ಮಾತ್ರ ಅಥವಾ ಬೆಳಕನ್ನು ಮಾತ್ರ ಗ್ರಹಿಸಲಾಗದ ಪ ಶಕ್ತಿಯುಳಿಯುತ್ತದೆ ಒಂದು ಗ್ಲೌಕೋಮ ಪ ಯೇ ಇನ್ನೊಂದು ಕಣ್ಣಿನಲ್ಲಿ ಪೂರೆ ಬೆಳೆಯುವುದು

ಚಿಕಿತ್ಸೆ—ಔಷಧಿಯಿಂದಲಿ ಇನ್ನಾವರ್ತ ಹೊಗಿಸಾಧಾರದಿಂದಾಗಲಿ ಪೊರೆ ಕರ ವುಪ್ಪಿಲ್ಲ ಇಗಿರುವ ಶಾಸ್ತ್ರೀಯ ಚಿಕ್ಕತ್ಸೆಯಿಲ್ಲವಾಗಿ, ಇದನ್ನು ತಡೆಯ ಉಪಾಯವೂ ಕಂಡುಬಂದಿಲ್ಲ ಶಸ್ತ್ರಚಿಕಿತ್ಸೆಯ ದಲ್ಲಿ ಇದು ನಿವಾರಣೆಯಾಗಬೇಕಾದುದು ಸ ಪಾಣವಾಗಿ ಈ ಚಿಕಿತ್ಸೆಯನ್ನು ಪೊರೆ ಒಲಿತಮೇಲೆಯೇ ಮಾಡುತ್ತಾರೆ ಪೊರೆ ಎಳಸಾಗಿರುವ ಗ ಛಾಯಾಕಣ್ಣಕಗಳನ್ನು ಉಪಯೋಗಿಸುವುದು ದೃಷ್ಟಿಗೆ ಸಹಕಾರಿಯಾಗುವುದು ಪೊರೆಯುಳ್ಳವರು ಸೂಕ್ತ ಕಡಿತ ತಡೆಯಿಲ್ಲದೆ ಕನ್ನಡಕಗಳನ್ನು ಉಪಯೋಗಿಸಿದಲ್ಲಿ ಪೊರೆ ಪೂರ್ತಿ ಬಲಿಯುವವರೆಗೂ ನಿರಕ್ಷಿಸಿ ಸುಸ್ಥಿತಿ ವರು ಸಲ್ಲ ದೃಷ್ಟಿ ಮಂಜಾದ ಕೂಡಲೆ ನೈದ್ಯರ ಪರೀಕ್ಷೆ ಮಾಡಿಸಿಕೊಂಡು ಸಲಹೆ ಪಡೆಯುವುದು ಉತ್ತಮ ಏಕೆಂದರೆ ಹೊದಲು ಹೊದಲಲ್ಲಿ ಇದರ ಚಿಹ್ನೆಗಳು ದೀರ್ಘದೃಷ್ಟಿಯಾದಾಗ ಗ್ಲಾಕೋವ (Glaucoma) ಎಂಬ ದೃಷ್ಟಿ ಹಾನಿಕರವಾದ ರೋಗವನ್ನು ಹೊಲಿಸುತ್ತವೆ ಗ್ಲಾಕೋಮ ಯೇ ಆವ ಪಕ್ಷವಲ್ಲಿ ಸರಿಯಾದ ಚಿಕಿತ್ಸೆಯಿಂದನ್ನು ತಕ್ಷಣ ಕೈಕೊಳ್ಳಬೇಕಾಗಿರುತ್ತದೆ ಹಾಗಲ್ಲದ ಪೊರೆಯಾದಲ್ಲಿ ಅದು ಬಲಿಯುವವರೆಗೂ ಕಾಯಬೇಕು

ಪೊರೆ ತೆಗೆಸಿಕೊಳ್ಳುವುದಕ್ಕೆ ಚಿಕಿತ್ಸಕನನ್ನು ಆರಿಸಿಕೊಳ್ಳುವುದರಲ್ಲಿ ನಾವು ಬಹಳ ಜಾಗರೂಕರಾಗಿರಬೇಕು ಪೊರೆ ತೆಗೆಯುತ್ತೇವೆಂದು ಬೀದಿಗಳಲ್ಲಿಯೂ, ಅಂಗಡಿಗಳ ಮುಂಬಾಗಿಲಿಯಲ್ಲಿಯೂ ಕುಳಿತುಕೊಂಡಿರುವ ವೈದ್ಯ ವೇಷಧಾರಿಗಳನ್ನು ವಿಷದಂತೆ ತ್ಯಜಿಸಬೇಕು ಇವರು ಪೊರೆಯ ವಿಚಾರವಾಗಿ ಶಾಸ್ತ್ರೀಯವಾದ ತಿಳಿವಳಿಕೆ ಇಲ್ಲದೆ, ತಮ್ಮ ವಾಗಾಡಂಬರದಿಂದ ಜನಗಳನ್ನು ಮರುಳುಗೊಳಿಸಿ, ತಮ್ಮ ಚಿಕಿತ್ಸೆಯಿಂದ ಜನರ ಕಣ್ಣುಗಳನ್ನು ಹಾಳುಮಾಡುವರು ಇಂಥವರಲ್ಲಿ ಚಿಕಿತ್ಸೆ ಹೊಂದಿದ ಬಹಳ ಜನಗಳು ಕಣ್ಣನ್ನು ಕಳೆದುಕೊಂಡ ದ್ದಲ್ಲದೆ ಬಹುಕಾಲದವರೆಗೂ ಕಣ್ಣಿನ ಬಾಧೆಯಿಂದಲೂ ನರಳಿದ್ದಾರೆ ಕೆಲವು "ಈ ಚಿಕಿತ್ಸೆಯಿಂದಲೂ ಎಷ್ಟೋ ಜನರಿಗೆ ಗುಣವಾಗಿದೆಯಲ್ಲ" ಎಂದುಕೇಳಬಹುದು ಇದು ಅಕಸ್ಮಾತ್ತಾಗಿ ದೇವರ ಕೃಪೆಯಿಂದ ಆದ ಸೂಜಿಗ ವೈದ್ಯನ ಚಿಕಿತ್ಸಾಚಾತುರ್ಯದಿಂದಾದ ಗುಣವಲ್ಲ ಶಾಸ್ತ್ರೀಯವಾಗಿ ಶಸ್ತ್ರ ವೈದ್ಯರು ಹೇಗೆ ಪೊರೆಯನ್ನು ತೆಗೆಯುತ್ತಾರೆ ಮತ್ತು ಅಶಾಸ್ತ್ರೀಯವಾದ ರೀತಿಯಲ್ಲಿ ಚಿಕಿತ್ಸೆಮಾಡುವರು ಹೇಗೆ ಮಾಡುತ್ತಾರೆಂಬ ವಿಷಯವನ್ನು ಗಮನಿಸಿದರೆ ಯಾವ ಚಿಕಿತ್ಸೆ ನಿರಪಾಯವಾದ ದ್ದು, ಯಾವುದಲ್ಲ ಎಂಬುದು ಸ್ಪಷ್ಟವಾಗುತ್ತದೆ.

ಶಾಸ್ತ್ರೀಯವಾಗಿ ಚಿಕಿತ್ಸೆ ನಡೆಸುವವರು ಶಸ್ತ್ರವನ್ನು ಪ ಯೋಗಿಸುವುದಕ್ಕೆ ಮುಂಚೆ ಗುಡ್ಡೆ ಮತ್ತು ಉವಾಂಗಗಳನ್ನು ಚೆನ್ನಾಗಿ ಶುಚಿಮಾಡಿ ಪೊರೆ ಸುಗ್ಗುವುದಕ್ಕೆ ಎಷ್ಟು ಅಗಲ ಬೇಕೋ ಅಷ್ಟುಮಾತ್ರ ಸೀಳಿ ಪೊರೆಯನ್ನೊತ್ತಿ, ಕೈಚಿಡಕದಿಂದ ಪೂರೆಯು ಹೊರಗೆ ಬರುವಂತೆ ಮಾಡುತ್ತಾರೆ ಬೆಳಕಿಗೆ ಅಡ್ಡವಾಗಿನ್ನ ಪೊರೆಯನ್ನು ಹೊರಗೆ ತೆಗೆದುಹಾಕಿದ ಜಾಗವನ್ನು

ಅಶಾಸ್ತ್ರೀಯವಾಗಿ ಮಾಡುವ ಚಿಕಿತ್ಸೆಯನ್ನು "ಕೂಚಿಂಗ್" (Couching) ಎಂದು ಕರೆಯುತ್ತಾರೆ ಇದರಲ್ಲಿ ಪೊರೆಯನ್ನು ಹೊರಗೆ ತೆಗೆದುಹಾಕುವುದರ ಬದಲು, ಅದನ್ನು ಒಂದು ದಪ್ಪಸೂಜಿಯಿಂದ ಒಳಕ್ಕೆ ನೂಕಿಬಿಡುವರು ಅದು ಗಡ್ಡೆಯಲ್ಲಿ ಒಂದು ಪಕ್ಕಕ್ಕೆ ಬೀಳುವುದು ಕೂಚಿಂಗ್ ಆದ ಕೂಡಲೇ ಕಣ್ಣು ಚೆನ್ನಾಗಿ ಕಾಣುವುದಾದರೂ ಕೆಲವು ದಿನಗಳಲ್ಲಿಯೇ ನಾನಾ ವಿಧದ ನೇತ್ರವ್ಯಾಧಿಗಳು ಹುಟ್ಟುವುವು ಶಾಸ್ತ್ರೀಯ ಪದ್ಧತಿಯಲ್ಲಿ ಗಾಯಕ್ಕೆ ವಿಷಶೋಧನೆಯು ಸರವಹಿಸಿ ಎಲ್ಲಾ ವಿಧವಾದ ವಿಷಶೋಧನೆಯನ್ನು ತೆಗೆದುಕೊಳ್ಳುತ್ತಾರೆ ಕೂಚಿಂಗ್ ಚಿಕಿತ್ಸೆ ನಡೆಸುವವರು ಕಣ್ಣನ್ನು ತೊಳೆಯುವುದಿಲ್ಲ ಶಸ್ತ್ರವನ್ನು ರುಚಿಪಾಡುವುದಿಲ್ಲ ಸೂಜಿಯ ಮೂಲಕ ವಿಷಕ್ರಿಮಿಗಳು ಕಣ್ಣಿಗೆ ಸರಿ ಗುಡ್ಡೆಯೊಳಗೂ ಪ್ರವೇಶಿಸಿ ಅನ ಹುತವನ್ನುಂಟುಮಾಡುವುವು ಶಾಸ್ತ್ರೀಯ ಪದ್ಧತಿಯಲ್ಲಿ ಪಾರದರ್ಶಕವಾದ ಕಣ್ಮಣಿಯನ್ನು ಹೊರಗೆ ತೆಗೆದು ಹಾಕತ್ತಾರೆ ಆವರಿಂದ ಇನ್ನೇನೂ ಅಪಾಯ ಸಂಭವಿಸುವಂತಿಲ್ಲ ಕೂಚಿಂಗಿನಲ್ಲಿ ಕಣ್ಮಣಿಯನ್ನು ಗುಡ್ಡೆಯೊಳಗೇ ತಳ್ಳಿಬಿಡುವುದರಿಂದ ಕೆಲವು ಕಣ್ಣುಗ್ಯಾದಿಗಳಿಗೆ ಅಸ್ಪದವಾಗಬಹುದು ಪೊರೆ ತೆಗೆಯು ವಿವ ನಂತರ ಡಾಕ್ಟರರ ಸಲಹೆಯಂತೆ ಕನ್ನಡಕವನ್ನುಪ ಯೋಗಿಸಬೇಕ

ದೃಷ್ಟಿನ್ಯೂನತೆಗಳು

ಈ ಕಾಲದಲ್ಲಿ ತರುಣತರುಣಿಯರು ಹೆಚ್ಚುಹೆಚ್ಚಾಗಿ ಕನ್ನಡಕಗಳನ್ನು ನಾಗರಿಕ ಶೃಷ್ಟಿಗಾಗಿ ಅಥವಾ ನಾರ್ಮಲ್ಯದರ್ಶನಕ್ಕಾಗಿ ಹಾಕಿಕೊಳ್ಳುತ್ತಾರೆಂದು ಜನಗಳು ಆಡಿಕೊಳ್ಳುವುಂಟು. "ಪೂರ್ವಕಾಲದಲ್ಲಿ ನ್ಯಾದರ್ಶಕಗಳನ್ನು ಉಪಯೋಗಿಸುತ್ತಿರಲಿಲ್ಲ ಈಗೀಕೆ ಇನ್ನು ಹೆಚ್ಚಾಗಿ ಉಪಯೋಗಿಸಬೇಕು ?" ಎಂಬ ಆಕ್ಷೇಪಣೆಯೂ ಕಟ್ಟಿದೆ ಇವೆಕ್ಕೆ ಸಮಜಸವಾದ ಉತ್ತರವನ್ನು ಕೊಡುವ ಸ್ವಯಂ ಜನಾಂಗದಲ್ಲಿ ಶಾಸ್ತ್ರೀಯ ರೀತಿಂ ವಿಶ್ಲೇಷಕರಾದ ಡಾಕ್ಟರುಗಳು ಈಗೀಗ ಹೆಚ್ಚು ತ್ತಿರುವುದಂ ಮತ್ತು ಆರೋಗ್ಯವಿಚಾರವಾಗಿ ಜನಗಳಲ್ಲಿ ಹೆಚ್ಚು ತಿಳಿವಳಿಕೆಯುಂಟಾಗಿರುವುದರಿಂದ ಹೆಚ್ಚು ಜನರು ತಮ್ಮ ಕಣ್ಣಿನ ಊಸಗೆಸನ್ನು ಕನ್ನಡಕಗಳ ಪ ಸಹಾಯದಿಂದ ಸರಿಪಡಿಸಿಕೊಳ್ಳಲು ಸಾಧ್ಯವಾಗಿದೆ ಅವರು ಕನ್ನಡಕಗಳ್ಳನ್ನುಪಯೋಗಿಸುವುದು ತಮ್ಮ ದೃಷ್ಟಿಯನ್ನು ಉತ್ತಮಪಡಿಸಿಕೊಳ್ಳುವುದಕ್ಕಾಗಿ, ಪೂರ್ಣವಾಗಿ ಕಣ್ಣಿನ ಆರೋಗ್ಯವನ್ನು ಕಾಪಾಡಿಕೊಳ್ಳುವುದಕ್ಕಾಗಿ ವಿಡಂಬನಕ್ಕೋಸ್ಕರವಲ್ಲ ಆದುದರಿಂದ ಅಧುನಿಕರಲ್ಲಿ ಕನ್ನಡಕದ ಉಪಯೋಗ ಹೆಚ್ಚಿರುವುದು ಸಂತೋಷಪಡಬೇಕೆಂದ ವಿಷಯವೇ ಹೊರತು ಆಕ್ಷೇಪಣೆಗೆ ಗುರಿಯಾಗತಕ್ಕದ್ದಲ್ಲ

ವಸ್ತು ಚೆನ್ನಾಗಿ ಕಾಣಬೇಕಾದರೆ ಕರಿಯಗುಡ್ಡೆಗೂ ಜಾಲಪಟಲಕ್ಕೂ ಒಂದು ನಿಸ್ಪೃಷ್ಟವಾದ ಅಂತರ (೪ ಸೂರು ಒಂದು ಅಂಗುಲ) ವಿರಬೇಕು. ಈ ಅಂತರವು ನೃತ್ಯಾನುಮಾದರೆ ದೃಷ್ಟಿನ್ಯೂನತೆಗಳುಂಟಾಗುವುವು ಇದಿಂದ ವಸ್ತುವಿನ ಶ್ರತಿಬಿಂಬವು ಜಾಲಪಟಲಕ್ಕಿಂತ ಸ್ವಲ್ಪ ಮುಂಭಾಗದಲ್ಲಿರುವುದೋ ಅಥವಾ ಸ್ವಲ್ಪ ಹಿಂಭಾಗದಲ್ಲಿರುವುದೋ ಬಿದ್ದು ಪದಾರ್ಥವು ವಿಪದವಾಗಿ ಕಾಣಿಸುವುದಿಲ್ಲ

ಈ ದೃಷ್ಟಿನ್ಯೂನತೆಗಳು ಮೂರು ವಿಧವಾಗಿನೆ. (1) "ಸಮೀಪದೃಷ್ಟಿ (Myopia)(2) "ದೂರದೃಷ್ಟಿ (Hypermetropia) (3) ಬೆಂದುರಾಹಿತ್ಯನ್ಯೂನತೆ (Astigmatism)

"ಸಮೀಪದೃಷ್ಟಿ"—ಈ ನ್ಯೂನತೆಯಲ್ಲಿ ಸಮಾನಾಂತರ ಕಿರಣಗಳು ಜಾಲಪಟಲದ ಮುಂಭಾಗದಲ್ಲಿ ಸಂಗಮ ಬಿಂದುವಿಗೆ ಬರುವುವು ಇದಕ್ಕೆ ಕಣ್ಣುಗುಡ್ಡೆ ಸ್ವಾಭಾವಿಕವಾಗಿರ ವುದಕ್ಕಿಂತ ಉದ್ದವಾಗಿರುವುದೇ ಕಾರಣ. ಈ ದೃಷ್ಟಿನ್ಯೂನತೆ ಇರುವವರಿಗೆ ದೂರದ ವಸ್ತುಗಳು ಸರಿಯಾಗಿ ಕಾಣುವುದಿಲ್ಲ ಸಮೀಪದ ವಸ್ತುಗಳು ಚೆನ್ನಾಗಿ ಕಾಣುತ್ತವೆ ಇದು ಒಂದೇ ಇದರ ಚಿಹ್ನೆ ಯಾಗಿರಬಹುದು. ಇದರ ಜೊತೆಗೆ ಕೆಲವರಲ್ಲಿ ಸಮಾನ ಪದ ಕೆಲಸಮಾಡಿದಮೇಲೆ ಕಣ್ಣಿಗೆ ಸ್ವಲ್ಪ ಕಸಿದಿಸಿಯಾಗಿ, ಬೆಳಕಿಗೆ ಕಣ್ಣನ್ನು ಬಿಡಲು ಸಾಧ್ಯವಾಗುವುದಿಲ್ಲ ಕಣ್ಣಿಗೆ ಕಯಿ ಮಬ್ಬಿಗಳು ಮತ್ತು ಮಿಂಚುಗಳು ಹೊಳೆದಹಾಗೆ ಕಾಣುವುವು

"ಸಮೀಪದೃಷ್ಟಿ" ನಾಗರಿಕತೆಯ ಫಲವಾಗಿದೆ. ಇದು ಆಜನ್ಮಸಿದ್ಧವಾಗಿರುವುದು ಅಪರೂಪ. ಬಹುಶಃ ಬಳಕುಗುಡ್ಡೆಯ ಕಮಚುವ ದುರ್ಬಲವಾಗಿರುವುದು ಒಹುದು ಓದುವುದು, ಒರೆಯುವುದು, ಹೊಲಿಯುವುದು ಮುಂತಾದ ಸಮೀಪ ಕೆಲಸಗಳಿಗೆ ಕಣ್ಣನ್ನು ಹೆಚ್ಚಾಗಿ ಉಪಯೋಗಿಸುವುದರಿಂದ ಈ ನ್ಯೂನತೆ ಬಲಿಯುತ್ತಾ ಹೋಗುತ್ತದೆ. ಸಮೀಪ ಕೆಲಸಗಳಲ್ಲಿ ಕಣ್ಣುಗುಡ್ಡೆಯನ್ನು ಉದ್ದವಾಗಿ ಮಾಡಿ, ಕರಿಯಗುಡ್ಡೆಗೂ ಜಾಲಪಟಲಕ್ಕೂ ಇರುವ ದೂರವನ್ನು ಹೆಚ್ಚಿಸುತ್ತದ

ಚಿಕಿತ್ಸೆ—ಸರಿಯಾದ ಕನ್ನಡಕಗಳನ್ನು ಹಾಕಿಕೊಳ್ಳುವುದೇ ಇದಕ್ಕೆ ತಕ್ಕ ಚಿಕಿತ್ಸೆ ಪೂರ್ಣ ದೃಷ್ಟಿಯನ್ನು ಹೊಂದಬೇಕಾದರೆ ಕನ್ನಡಕವನ್ನುಪಯೋಗಿಸಿದ ಹೊರತು ಬೇರ ಮಾರ್ಗವಿಲ್ಲ. ಕನ್ನಡಕಗಳು ವಸ್ತುವಿನ ಪ್ರತಿಬಿಂಬವನ್ನು ಜಾಲಪಟಲದ ಮೇಲೆ ಸರಿಯಾಗಿ ಬೀಳುವಂತೆ ಮಾಡುತ್ತವೆ. ಈ ನ್ಯೂನತೆಗೆ ನಿಮ್ಮ ಮಸೂರದ(Concave lens) ಕನ್ನಡಕವನ್ನು ವಿಧಿಸುತ್ತಾರೆ ಬಾಲ್ಯದಲ್ಲಿಯೇ ಈ ನ್ಯೂನತೆಯುಂಟಾದರೆ ಮಕ್ಕಳು ದೂರದ ವಸ್ತುವನ್ನು ಚೆನ್ನಾಗಿ ನೋಡಲಾರದೆ ಬಾ�ళ್ಯಪ್ರಯೋಗದಲ್ಲಿ ಉತ್ಸಾಹವಿರುವುದಿಲ್ಲ ಅವರ ಮಾನಸಿಕ ಆವರಣವು ಸಂಕುಚಿಸುತ್ತದೆ; ಅವರು ಅಂತರ್ಮುಖಿಗಳಾಗುವರು ಓದು ಬರಹ ಮುಂತಾದ ಸಮೀಪ ಕೆಲಸಗಳಲ್ಲೇ ಹೆಚ್ಚು ಆಸಕ್ತಿ ತೋರಿಸುವರು ಹೀಗೆಯೇ ಬಾಲ್ಯದಲ್ಲಿ ಶಿಕ್ಷೆಯಲು ಬಿಟ್ಟುಬಿಟ್ಟರೆ ಮುಂದೆ ಚಿಕಿತ್ಸೆಗಾಗಿ ಕೂಡ ಇಂತಹ ಸಮೀಪ ಕೆಲಸಗಳನ್ನು ಬಿಡಿಸುವುದು ಕಷ್ಟಕರವಾಗುತ್ತದೆ ಆದ್ದರಿಂದ ಮಕ್ಕಳ "ಸಮೀಪ ದೃಷ್ಟಿ" ನ್ಯೂನತೆಯನ್ನು ಆಲಕ್ಷ್ಯಮಾಡದೆ ಅವರು ಸುಲೋಚನಗಳನ್ನು ಹಾಕಿಕೊಳ್ಳುವಂತೆ ಮಾಡಬೇಕು ಅಲ್ಲದೆ ಚಿಕ್ಕವರು ಈ ಕೆಳಗೆ ಕಂಡ ಕಣ್ಣಿನ ಆರೋಗ್ಯ ನಿಯಮಗಳನ್ನು ಆವುರಿಸಬೇಕು ಹತ್ತಿರ ಕೆಲಸವನ್ನು ಸಾಧ್ಯವಾದಷ್ಟು ಕಡಿಮೆ ಮಾಡಬೇಕು (ಮತ್ತು ಕೆಲಸವಷ್ಟು ಕಣ್ಣಿಗೆ ಸಾಧ್ಯವಾದಷ್ಟು ದೂರದಲ್ಲಿ ಹಿಡಿದುಕೊಳ್ಳಬೇಕು) ಒಂದೇ ಸಮನಾಗಿ ಹೆಚ್ಚುಹೊತ್ತು ಕೆಲಸ ಮಾಡದೆ ಆಗಾಗ ಕೆಲಸ ನಿಲ್ಲಿಸಿ ಕಣ್ಣಿಗೆ ವಿಶ್ರಾಂತಿ ಕೊಡಬೇಕು ಕೆಲಸ ಮಾಡುವ ಸ್ಥಳವಲ್ಲಿ ಬೆಳಕು ಚೆನ್ನಾಗಿರಬೇಕು ಬೆಳಕು ಕೆಲಸ ಮಾಡುವವನ ತಲೆಯ ಹಿಂದುಗಡೆ ಮತ್ತು ಪಕ್ಕದಿಂದ ಬೀಳುವಂತಿರಬೇಕು ಮಲಗಿಕೊಂಡು ಓದುವುದಾಗಲಿ, ಕೆಲಸ ಮಾಡುವಾಗ ಹೆಚ್ಚಾಗಿ ಬಗ್ಗುವುದನ್ನೂ ನಿರೋಧಿಸಬೇಕು "ಸಮೀಪ ದೃಷ್ಟಿ" ಹೆಚ್ಚುತ್ತಿದ್ದರೆ ಅಥವಾ ಕಣ್ಣು ಆಗಾಗ್ಗೆ ಕೆರುತ್ತಿದ್ದರೆ ಕಣ್ಣಿಗೆ ದೀರ್ಘಕಾಲ ವಿರಾಮಕೊಡಬೇಕ. ಒಳ್ಳೆಯ ವ್ಯಾಯಾಮವನ್ನೂ ರಸಾಯನ (Tonic) ಗಳನ್ನೂ ಕೊಡಬೇಕು ಪಟ್ಟಿ ಣಗಳನ್ನು ಬಿಟ್ಟು ಹಳ್ಳಿಗಳಿಗೆ ಹೊವಾ ಬದಲಾವಣೆಗೆ ಹೋಗುವುದುತ್ತಮ.

"ದೂರದೃಷ್ಟಿ"—ವಸ್ತುಗಳಿಂದ ಪ್ರತಿಫಲಿಸಿ ಬರುವ ಸಮಾನಾಂತರ ಕಿರಣಗಳು ಜಾಲಪಟಲದ ಹಿಂಭಾಗದಲ್ಲಿ ಸಂಗಮವಾಗುವುದರಿಂದ ಅವು ಸರಿಯಾಗಿ ಕಾಣಿಸುವುದಿಲ್ಲ ಕಣ್ಣಿನ ಗುಡ್ಡೆ ಚಿಕ್ಕದಾಗುವುದು ಅಥವಾ ಕರಿಯ ಗುಡ್ಡೆ, ಜಲಧಾತು, ಕಣ್ಮಣಿ, ಕಾಚಧಾತು ಇವುಗಳಲ್ಲಿ ವ್ಯತ್ಯಾಸವಾಗುವುದು—ಇವು ಈ ನ್ಯೂನತೆಯು ಮುಖ್ಯವಾದ ಕಾರಣಗಳು

"ಸಮೀಪ ದೃಷ್ಟಿ"ಯಲ್ಲಿ ಕಣ್ಣುಗುಡ್ಡೆ ಉದ್ದವಾಗಿರುವುದು

"ದೂರದೃಷ್ಟಿ"ಯಲ್ಲಿ ಅದು ಚಿಕ್ಕದಾಗಿರುವುದು.

ಆರೋಗ್ಯವಾಗಿದ್ದಾಗ ಚಿಕ್ಕವರಲ್ಲಿ ಈ ನ್ಯೂನತೆಯ ಚಿಹ್ನೆಗಳಿಗೆ ಆಶ್ಚದವಿಲ್ಲದಿರಬಹುದು ಆದರೆ ಅವರು ಮರ್ಬಲರಾದಾಗ, ಅಥವಾ ಹೆಚ್ಚಾಗಿ ಹತ್ತಿರದ ಕೆಲಸ ಮಾಡಿದಾಗ ಈ ಚಿಹ್ನೆಗಳು ತಲೆದೋರುವುವು ಇವನ್ನು 'ಕಣ್ಣಿನ ಅಲಸಿಕೆ' ಎಂದು ಕರೆಯಬಹುದು. ಕಣ್ಣುಗಳು ಉರಿಯುವುದು ಪ್ರವಾಹಿತವಾಗಿರುವುದು, ಅಥವಾ

ಕಣ್ಣೀರು ಹೆಚ್ಚಾಗಿಸುವಿಯುವುದು, ಅರಿಯೂ ರೆಪ್ಪೆಗಳ ಅಂಚೂ ಕೆಂಪಾಗಿರುವುದು, ರೆಪ್ಪೆಗಳ ವಿಷಬು, ಇತ್ಯಾದಿಗಳು ಅಲಸಿಕೆಯುಳ್ಳವು. ಚಿಕ್ಕೆಗಳು, ಬಿಡುವುದು, ಬರೆಯುವುದು, ಮುಂತಾದ ಹತ್ತರಕೆಲಸಗಳನ್ನು ಅದರಲ್ಲೂ ದೀಪದ ಬೆಳಕಿನಲ್ಲಿ ಮಾಡಿದನಂತರ ಇವು ಗೋಚರವಾಗುತ್ತವೆ. ಹೆಚ್ಚು ಹತ್ತರ ಕೆಲಸ ಮಾಡಿದರೆ ತಲೆನೋವು ಕಾಣಿಸಿಕೊಳ್ಳುವುದು. ಕೆಲವರಲ್ಲಿ ಈ ಯಾವ ಚಿಹ್ನೆಗಳೂ ಕಾಣದೆ ಹತ್ತರದ ಕೆಲಸವನ್ನು ದೂರ ದೂರ ಹಿಡಿದು ಕೊಳ್ಳಬೇಕಾಗುವುದೇ ಇದರ ಮೊದಲನೆಯ ಚಿಹ್ನೆ. ವಯಸ್ಸಾದವರಲ್ಲಿ 'ದೂರದೃಷ್ಟಿ' ಗ್ಲಾಕೋಮ ರೋಗಕ್ಕೆ ಸಹಕಾರಿ ಕಾರಣವಾಗಬಹುದು.

ಚಿಕಿತ್ಸೆ—ಇದಕ್ಕೂ ಸಹ ಕನ್ನಡಕವನ್ನುಪಯೋಗಿಸುವುದೇ ಸರಿಯಾದ ಚಿಕಿತ್ಸೆ. ಡಾಕ್ಟರುಗಳು ಹುಡುಗ ಹುಡುಗಿಯರನ್ನು ಪಾಠಶಾಲೆಗಳಲ್ಲಿ ಪರೀಕ್ಷಿಸುವಾಗ ಈ ನ್ಯೂನತೆಯು ಇರುವಂತೆ ಕಂಡೂಡನೆ, ಅದರ ನಿರ್ದಿಷ್ಟವಾದ ಚಿಹ್ನೆಗಳಲ್ಲಿದ್ದರೆ ಕನ್ನಡಕವನ್ನುಪಯೋಗಿಸಬೇಕೆಂದು ಒತ್ತಾಯಮಾಡುವುದಿಲ್ಲ, ಚಿಹ್ನೆಗಳಿದ್ದರೆ ಕೂಡಲೇ ಪುಲೋಚನಗಳನ್ನು, ಧರಿಸಬೇಕು ಈ ನ್ಯೂನತೆಯಲ್ಲಿ ಪೀನಮಸೂರ(Convex lens) ಕನ್ನಡಕವನ್ನು ವಿಧಿಸುತ್ತಾರೆ. "ದೂರದೃಷ್ಟಿ"ಯಲ್ಲಿ ಕನ್ನಡಕವನ್ನು ಆಗಾಗ್ಗೆ ಬದಲಾಯಿ ಸಬೇಕಾದ್ದರಿಂದ ಡಾಕ್ಟರುಗಳ ಸಲಹೆಯಂತೆ ನಡೆದುಕೊಳ್ಳಬೇಕು.

"ಬಿಂದುರಾಹಿತ್ಯ/ನ್ಯೂನತೆ" (Astigmatism)

ಈ ನ್ಯೂನತೆಯಲ್ಲಿ ಅಡ್ಡಲಾಗಿರುವ ಗೀಟುಗಳು ಸರಿಯಾಗಿ ಕಂಡರೆ ಅದೇ ಸ್ಪಷ್ಟದಲ್ಲಿ ನೆಟ್ಟಗಿರುವ ಗೀಟುಗಳು ಸರಿಯಾಗಿ ಕಾಣುವುದಿಲ್ಲ ಅಥವಾ ನೆಟ್ಟಗಿರುವ ಗೀಟುಗಳು ಸರಿಯಾಗಿ ಕಂಡರೆ ಅಡ್ಡಲಾಗಿರುವುವು ಸರಿಯಾಗಿ ಕಾಣುವುದಿಲ್ಲ. ಈ ನ್ಯೂನತೆ ಇರುವವರ ಕರಿಯ ಗುಡ್ಡೆ ಕಣ್ಣಾಗಿ ಇತ್ಯಾದಿಗಳು ಗೋಳಾಕಾರವಾಗಿರುವ ದಿಲ್ಲಾನಾದ್ದರಿಂದ ಇವುಗಳ ಮೂಲಕ ಬಂದ ಬೆಳಕಿನ ಕಿರಣಗಳು ಒಂದು ಜಂಗಮಬಿಂದುವನ್ನು ಸೇರುವುದಿಲ್ಲ ಈ ಕೊರತೆಯು ಸಾಧಾರಣವಾಗಿ ಕರಿಯ ಗುಡ್ಡೆಯಲ್ಲಿ ರುತ್ತದೆ ಇದು ಬಹುಶಃ ಅಜನ್ಮಸಿದ್ಧವಾದದ್ದು

ಈ ನ್ಯೂನತೆಯು ಹಚ್ಚಾಗಿದ್ದರೆ ಹತ್ತಿರದ ವಸ್ತುಗಳಾಗಲಿ ದೂರದ ವಸ್ತುಗಳಾಗಲಿ ಸರಿಯಾಗಿ ಕಾಣಿಸುವುದಿಲ್ಲ ಇಂಥವರು ತಲೆನೋವಿನಿಂದ ಆಗಾಗ್ಗೆ ನರಳುತ್ತಾರೆ ಅರಿತಲೆನೋವು ಕಾಣಬಹುದು. ಇದರಲ್ಲಿ 'ಸಶ್ಯಮ' 'ಅಶ್ಯಮ' ಎಂದು ಎರಡು ವಿಧವಾದ ನ್ಯೂನತೆಗಳಿವೆ (Simple and Mixed Astigmatism) ಮೊದಲನೆಯದನ್ನು ಕನ್ನಡಕದಿಂದ ಪೂರ್ತಿಯಾಗಿ ತಿದ್ದಬಹುದಾದ್ದರಿಂದ ಅದನ್ನು ಮಾತ್ರ ಇಲ್ಲಿ ವಿವರಿಸಿದೆ

ಚಿಕಿತ್ಸೆ—ಇದಕ್ಕೆ ಸ್ತ್ರಂಭಾಕೃತಿಯ (Cylindrical) ಗಾಜಿನ ಕನ್ನಡಕವನ್ನು ಡಾಕ್ಟರುಗಳು ಸೂಚಿಸುತ್ತಾರೆ ಇದಿಂದ ಬೆಳಕಿನ ಕಿರಣಗಳು ಒಂದೇ ಸಂಗಮ ಬಿಂದು-ವಿನಲ್ಲಿ ಬಂದು ಸೇರಿ ಪದಾರ್ಥಗಳು ಸರಿಯಾಗಿ ಕಾಣುವಂತಾಗುವುದು.

"ಜಾಳೀಸ" (Presbyopia)—ಇದು ದೃಷ್ಟಿ ನ್ಯೂನತೆಯಲ್ಲ ಇದು ಕಣ್ಣಿನ ಸಂಧಾನ ಸಾಮರ್ಥ್ಯವು ಕಡಿಮೆ ಯಾಗುವುದರ ಪರಿಣಾಮ. ಇದು ಕ್ರಿಶವದಿಂದಲೇ ಕಣ್ಣಿನೆಯಲ್ಲಿ ಸಿದ್ಧವಾಗಿ ಮತ್ತು ಸ್ವಾಭಾವಿಕವಾಗಿ ಆಗುವ ಬದಲಾವಣೆಯ ಪರಿಣಾಮ ಜಾಳೀಸ್ ಎಂದರೆ 40 ವಿಂದರ್ಥ 40 ವರ್ಷಗಳಾದಮೇಲೆ ಗೋಚರವಾಗುವುದರಿಂದ ಇದಕ್ಕೆ ಈ ಹೆಸರು ವಯಸ್ಸಾದ ಹಾಗೆಲ್ಲಾ ಕಣ್ಣಾಯೆಯ ಸ್ಥಿತಿ ಸ್ಥಾಪಕತ್ವ ಕಡಮೆಯಾಗುತ್ತ ಬಂದು ಸಂಧಾನವಾಗಿ ಬೇಕಾದಾಗ ಅದು ಸಾಕಾದಷ್ಟು ಉಬ್ಬಿಕೊಳ್ಳುವುದಿಲ್ಲ ಈ ಪರಿಸ್ಥಿತಿಗೆ ಪಾಶ್ಚಿಕ್ಯ ಸ್ನಾಯುವಿನ ಶಕ್ತಿ ಕುಗ್ಗುವುದೇ ಕಾರಣ ಪಾಶ್ಚಿಕ್ಯ ಸ್ನಾಯುವಿನ ಸಂಕೋಚಾದಿಗಳು ಕಣ್ಣಾಯೆಯು ಉಬ್ಬುವಿಳಕಗಳಿಗೆ ಒಂದು ಕಾರಣವೆಂದು ಈ ಮೊದಲೇ ಸೂಚಿಸಿದೆಯಷ್ಟೆ ಅದನ್ನು ಜ್ಞಾಪಕಕ್ಕೆ ತಂದುಕೊಂಡರೆ ಈ ವಿಷಯವು ಸ್ಪಷ್ಟವಾಗುವುದು

ಜಾಳೀಸದಿಂದ ಓದುವುದು, ಬರೆಯುವುದು, ಹೊಲಿಯುವುದು. ಇಂಥ ಕೆಲಸಗಳು ಬರುಬರುತ್ತಾ ಕಷ್ಟವಾಗಿ, ಕೆಲಸವನ್ನು ಕಣ್ಣಿನಿಂದ ದೂರ ದೂರ ಹಿಡಿದುಕೊಳ್ಳ ಬೇಕಾಗುತ್ತದೆ.

"ಜಾಳೀಸ" ಸಾಧಾರಣ ದೃಷ್ಟಿಯುಳ್ಳವರಿಗೂ "ದೂರದೃಷ್ಟಿ"ಯ ನ್ಯೂನತೆ ಇರುವವರಿಗೂ ಸಮಾನವಾಗಿ ಮುಂಚಿಯೇ ಪ್ರಾಪ್ತವಾಗಬಹುದು "ಸಮಿಪದೃಷ್ಟಿ" ಗಳಿಗೆ ಹೆಚ್ಚು ವಯಸ್ಸಾದ ಮೇಲೆ ಬರುತ್ತದೆ. "ಸಮಿಪದೃಷ್ಟಿ" ಬಹಳವಾದಲ್ಲಿ ಜಾಳೀಸ್ ಬರದಿರಬಹುದು.

ಚಿಕಿತ್ಸೆ—ಕನ್ನಡಕವನ್ನು ಪಯೋಗಿಸುವುದೇ ಇದಕ್ಕೂ ಪ್ರತಿಕ್ರಿಯೆ ಜಾಳೀಸ್ ವಯಸ್ಸಿನೊಡನೆ ಹೆಚ್ಚುವುದರಿಂದ ೫-೪ ವರ್ಷಗಳಿಗೊಂದಾವರ್ತಿ ಕಣ್ಣನ್ನು ಪರೀಕ್ಷೆಮಾಡಿಸಿಕೊಂಡು ಅವಶ್ಯವಿದ್ದಲ್ಲಿ ಕನ್ನಡಕವನ್ನು ಬದಲಾಯಿಸುತ್ತಿರಬೇಕು

ಕನ್ನಡಕಗಳನ್ನು ತೆಗೆದುಕೊಳ್ಳುವುದರಲ್ಲಿ ಸ್ವಲ್ಪ ವಿವೇಚನೆ ಇರಬೇಕು, ನಮ್ಮಲ್ಲಿ ಕೆಲವರಿಗೆ ಕಣ್ಣನ್ನು ಪರೀಕ್ಷೆ ಮಾಡಿಸಿಕೊಂಡು ಕನ್ನಡಕವನ್ನು ತೆಗೆದುಕೊಳ್ಳುವ ಬೇರೆಲ್ಲ ವಿಲವಿಕೆ ಇಲ್ಲ "ಎಂತಹದೋ ಬೆನ್ನಾಗಿ ಕಂಡರೆ ಸಾಕು" ಎಂಬ ಭಾವನೆಯು ಏಳಿ ಪ್ರಪರೀಕ್ಷೆಯಿಂದಲೇ ಗುಜರಿಯಲ್ಲಿಯೋ ಮನೆಯ ಬಳಿ ಮಾರಾಟಕ್ಕೆ ಬಂದವರಲ್ಲಿಯೋ ಕನ್ನಡಕವನ್ನು ಕೊಂಡುಕೊಳ್ಳುತ್ತಾರೆ. ಇನ್ನೂ ಕೆಲವರು ಹಿರಿಯರು ಬಿಟ್ಟುಹೋದ ಕನ್ನಡಕವನ್ನು ಪ್ರೀತಿಯಿಂದ ಧರಿಸುತ್ತಾರೆ ಇದು ಯಾವುದೂ ಸರಿಯಾದುದಲ್ಲ ಕಣ್ಣನ್ನು ಶಾಸ್ತ್ರೀಯವಾಗಿ ಪರೀಕ್ಷಿಸಿದ ಹೊರತು ಯಾವ ರೀತಿಯ ಮಸೂರವನ್ನು ಪಯೋಗಿಸಬೇಕು ಎಷ್ಟು ಶಕ್ತಿಯದನ್ನು ಪಯೋಗಿಸಬೇಕು ಎಂಬುದು ಗೊತ್ತಾಗುವುದಿಲ್ಲ ದೃಷ್ಟಿನ್ಯೂನತೆಗಳಲ್ಲಿ ಜಾಳೀಸನ್ನು ಪೂರ್ತಿಯಾಗಿ ತಿದ್ದಲು ಯಾವ ಶಕ್ತಿಯ ಕನ್ನಡಕಗಳು ಬೇಕೇಕೇ, ಅವುಗಳಿಗಿಂತ ಸ್ವಲ್ಪ ಹೆಚ್ಚು ಕಡಿಮೆ ಶಕ್ತಿ ಯುಳ್ಳ ಮಸೂರುಗಳನ್ನು ಸಯೋಗಿಸಿದರೂ ಜಾಳೀಸ ಬಂದಿರುವವರಿಗೆ ಅವುಗಳಿಂದ ಉಪಯೋಗವಾಗುತ್ತುಂ ಆದರೆ ಕನ್ನಡಕದ ಪೂರ್ಣ ಫಲವನ್ನು ಹೊಂದದಿರುವಾಗಾಗುವುದಿಲ್ಲ ಜದೂ ಅಲ್ಲದೆ ನ್ಯೂನತೆಗಳು ಮಿಶ್ರವಾಗಿರಬಹುದು "ಬಿಂದುರಾಹಿತ್ಯ" ದ ಜೊತೆಗೆ ದೂರದೃಷ್ಟಿಯಾಗಲಿ ಸಮೀಪದೃಷ್ಟಿಯಾಗಲಿ ಸೇರಿಕೊಂಡಿರಬಹುದು ಇಂಥ ಸನ್ನಿವೇಶಗಳಲ್ಲಿ ವಿದುವುದಕ್ಕೆ ಸರಿಯಾದ ಕನ್ನಡಕವು ಇತರ ಎಲ್ಲಾ ಕಾರ್ಯಗಳಿಗೂ ಸರಿಹೋಗುತ್ತೆಂದು ಹೇಳಲಾಗುವುದಿಲ್ಲ ಅಲ್ಲದೆ ಮಸೂರವನ್ನು ಕಣ್ಣಿನಿಂದ ಎಷ್ಟು ದೂರದಲ್ಲಿರಿಸ ಬೇಕು ಇತ್ಯಾದಿ ಸೂಕ್ಷ್ಮವಿಷಯಗಳು ಗುಜರಿಯಿಲ್ಲಿ ಸ್ವಸ ರೀಕ್ಷೆಯಿಂದ ನಿರ್ಧರವಾಗುತ್ತವೆಯೆ? ಕೆಲವು ಗುಜ್ಜು ನ್ಯೂನತೆಗಳು ಪರೀಕ್ಷೆಯಿಲ್ಲದೆ, ಹೊರಬೀಳುವುದಿಲ್ಲ

ಆದ್ದರಿಂದ "ಅಗ್ಗದ ಆಸೆಗೆ ಮುಗ್ಗಿದ ಜೋಳ" ಎಂಬ ಗಾದೆಯನ್ನು ನೆನಪಿನಲ್ಲಿಟ್ಟು ಕಣ್ಣನ್ನು ಶಾಸ್ತ್ರೀಯವಾಗಿ ಪರೀಕ್ಷಿಸುವಿಕೊಂಡೇ ತದನುಸಾರ ಕನ್ನಡಕಗಳನ್ನು ಕೊಂಡುಕೊಳ್ಳುವುದು ಒಟ್ಟಿನಲ್ಲಿ ಶಗ್ಗವೂ ಮತ್ತು ನಿರ್ದಾರಕವೂ ಆಗಿದೆ

ಛಾಯಾ ಕನ್ನಡಕಗಳು

ಇವನ್ನು ಜನಗಳುಪಯೋಗಿಸುವುದು ಹೆಚ್ಚಾಗುತ್ತಿದೆ ವಿಪರೀತ ಪ್ರಭೆಯಲ್ಲಿ ಅಥವಾ ಧೂಳಿರುವ ಕಡೆ ಕೆಲಸಮಾಡುವಾಗ ಇವನ್ನು ಹಾಕಿಕೊಳ್ಳುವುದು ಯುಕ್ತ ವಾಗಿದೆ ಇವುಂದೆ ಹೆಚ್ಚು ಬೆಳಕಿನಿಂದಾಗಲಿ ಧೂಳ ನಿಂದಾಗಲಿ ಕಣ್ಣಿಗಾಗಬಹುದಾದ ಅಪಾಯವನ್ನು ತಡೆಯಬಹುದು ಕನ್ನಡಕದ ಗಾಜುಗಳು ಮಸೂರುಗಳಾಗಿರದೆ ಚಪ್ಪಟೆಯಾದ ಗಾಜುಗಳಾಗಿರಬೇಕು ಮಸೂರಗಳು ಶಕ್ತಿಯುಳ್ಳವಾದ್ದರಿಂದ ದೃಷ್ಟಿ ನ್ಯೂನತೆಗಳ ಪೂರ್ತಿಮಾಡಬಹುದು ಛಾಯಾ ಕನ್ನಡಕಗಳನ್ನು ಕೂಡ ಪರೀಕ್ಷೆ ಮಾಡಿ ಅವುಗಳನ್ನು ಮಸೂರಗಳಲ್ಲಿ ವೆಂದು ನಿರ್ಧರವಾಡಿಕೊಂಡು ತೆಗೆದುಕೊಳ್ಳಬೇಕು ('ಒಂದೂವರಾನೆಮೇ' 'ಎರಡುವರಾನೆಮೇ' ಅಂಗಡಿಗಳಲ್ಲಿ ಮಾರುವ ಛಾಯಾ ಕನ್ನಡಕವನ್ನು ತೆಗೆದುಕೊಳ್ಳುವುದು ಹಾನಿಕರ) ಈ ಛಾಯಾ ಕನ್ನಡಕಗಳನ್ನು ಬೆಳಕಿಗೆ ಕಣ್ಣನ್ನು ಬಿತಿಲಾರದ ಕೆಲವು ವ್ಯಾಧಿಗಳಲ್ಲಿ ಉಪಯೋಗಿಸಬಹುದು

ಇತರ ವ್ಯಾಧಿಗಳು

ರೆಪ್ಪೆಗಳ ವ್ಯಾಧಿಗಳು—ರೆಪ್ಪೆಗಳ ವ್ಯಾಧಿಗಳು ಅನೇಕವಾಗಿದ್ದರೂ, ಮನೆಯಲ್ಲಿಯೇ ಚಿಕಿತ್ಸೆ ನಡೆಸ ಬಹುದಾದ ಕೆಲವನ್ನು ಮಾತ್ರ ಇಲ್ಲಿ ವಿವರಿಸಿದೆ

ಅತಿಸಾಮನ್ಯವಾದುದ್ದು ಕಣ್ಣುಕುಟಿಕೆ ಇದು ರೆಪ್ಪೆಯ ಕೂದಲಿನ ಬೇರಿನಲ್ಲಿ ಉಂಟಾಗುವ ಕುರು. ಇದು ಗಟ್ಟಿಯಾದ ಜಾವನಿಂತೆ ಪ್ರಾರಂಭವಾಗಿ ಕೆಲವು ದಿನಗಳಲ್ಲಿಯೇ ಕೀವು ತುಂಬಿ ಒಡೆಯುತ್ತದೆ ಪ್ರಥಮ ದಲ್ಲಿ ನೋವು ಬಹಳವಾಗಿರುತ್ತದೆ ಕಣ್ಣುಕುಟಿಕೆಗಳು ಒಂದಾದಮೇಲೊಂದು ಪರಂಪರೆಯಾಗಿ ಬರುವುವು. ಇದಕ್ಕೆ ಬಹುಶಃ ಶರೀರಪ್ರಕೃತಿಯ (Constitution) ವೈಕಲ್ಯಾನವೇ ಕಾರಣ

ಚಿಕಿತ್ಸೆ—ಬಿಸಿಬಿಸಿಯಾಗಿ ಶಾಖಕೊಡುವುದರಿಂದ ನೋವು ಕಡಿಮೆಯಾಗುತ್ತದೆ ಶಾಖದಿಂದಲೇ ಅಣ್ಣುಕುಟಿಕೆ ಇಂಗಿಹೋಗಬಹುದು, ಇಲ್ಲವೇ ಬೇಗ ಪಕ್ವವಾಗುವುದು ಪಕ್ವವಾದಮೇಲೆ ತಾನಾಗಿಯೇ ಒಡೆಯದಿದ್ದರೆ ಶಸ್ತ್ರಚಿಕಿತ್ಸೆಯನ್ನು ಮಾಡಿಸಬೇಕು ಕುಟಿಕೆಗಳು ಒಂದಾದಮೇಲೊಂದೆಳುತ್ತಿದ್ದರೆ ದೇಹದ ಆರೋಗ್ಯದ ಕಡೆಗೆ ದೃಷ್ಟಿ ಕೊಡಬೇಕು ಬೇಕಾ ಔಷಧಿಯನ್ನು ತೆಗೆದುಕೊಳ್ಳಬೇಕು ಮತ್ತು ರಸಾಯನಗಳನ್ನು ಸೇವಿಸ ಬೇಕು

ರೆಪ್ಪೆಯ ವಿಷಬು—ಇದು ರೆಪ್ಪೆಯ ಅಂಚುಗಳಿಗೆ ಬರುವ ವಿಷಬು ರೆಪ್ಪೆಯ ಕೂದಲುಗಳ ಬೇರಿನಲ್ಲಿ ಸಣ್ಣ ಸಣ್ಣ ಕೀವು ಗುಳ್ಳೆಗಳೆದ್ದು ಹುಣ್ಣಾಗಿ ಮೇಲೆ ಹೊಳ್ಳು ಕಟ್ಟುತ್ತವೆ ಈ ಹೊಳ್ಳನ್ನು ತೆಗೆದರೆ ಇದರ ಜೊತೆಯಲ್ಲಿ ಕೂದಲು ಕಿತ್ತು ಬರುವುದು ಹುಣ್ಣಿನಿಂದ ಕೂದಲಿನ ಬೇರುಗಳು ಸಾಧಾರಣವಾಗಿ ಉಳ್ಳಿ ಮುಸುಕಿ ಕೂದಲು ಬೆಳೆಯುವುದಿಲ್ಲ ಈ ವ್ಯಾಧಿಯು ಕಣ್ಣಾರೋಗದ ಜೊತೆಯಲ್ಲಿಯೇ ಇರಬಹುದು ಒಂದಕ್ಕೊಂದು ಕಾರಣವಾಗಿಯೂ ಪರಿಣಾಮವಾಗಿಯೂ ಬರಬಹುದು

ಚಿಕಿತ್ಸೆ—ಇದನ್ನು ಉಪೇಕ್ಷಮಾಡದೆ ಚಿಕಿತ್ಸೆಮಾಡಿಸಬೇಕು ಪ್ರತಿನಿತ್ಯವೂ ಬೆಳಿಗ್ಗೆ ಬಿಸಿನೀರಿನಿಂದಾಗಲಿ ಸೋಡಾ ಬೀಕಾರ್ಬೊನೇಟ್ (Soda bicarb lotion) ಪೆಪ್ಪೆಯಂಚಿನ್ನು ನೆನೆಯಿಸಿ ಹೊಳ್ಳನ್ನು ಬಿಡಿಸಿ ತೆಗೆಯಬೇಕ ಅನಂತರ ಒಣಿಸಿ ಹೆಲಿದು ಮಲಾಮನ್ನು ರೆಪ್ಪೆಯಂಚಿಗೆ ಜೆನ್ನಾಗಿ ಹಚ್ಚಬೇಕು

ಕಣ್ಣೀರು ಜೇಲದ ವ್ಯಾಧಿ

ಈ ಗ್ರಂಥವು ವೀರಶೈವಮತಗ್ರಂಥಗಳಲ್ಲೆಲ್ಲ ಶಿಖಾರತ್ನದಂತೊಪ್ಪುತ್ತಿರುವುದು ಎಲ್ಲರಿಗೂ ತಿಳಿದ ವಿಷಯವಾಗಿದೆ. ಈ ಗ್ರಂಥವನ್ನು ಕಾಶ್ಮೀರದೇಶದ ಸ್ವಪ್ರಧಾನಂದ ಶಿವಾಚಾರ್ಯರೆಂಬ ಪ್ರಾಚೀನಾಚಾರ್ಯರು ರಚಿಸಿದ್ದಾರೆ ಈ ಗ್ರಂಥದಲ್ಲಿ ಶಕ್ತಿವಿಶಿಷ್ಟಾದ್ವೈತಸಿದ್ಧಾಂತದ ರಹಸ್ಯವು ಬಹು ಸ್ಪಷ್ಟಯಂಗುಮವಾಗಿ ಸ್ಪಷ್ಟಿಕಾಡಿ ಸಲ್ಪಟ್ಟಿದೆ. ಈ ಗ್ರಂಥದ ಸರಣಿಯು ಬಹುಕಠಿನವಿದ್ದುದರಿಂದ ಇದರ ರಹಸ್ಯವನ್ನು ತಿಳಿಯಲು ಪಂಡಿತಜನರಿಗೆಗೂ ಕೂಡ ಅಸಾಧ್ಯವಾಗಿತ್ತು. ಈ ಕೊರತೆಯನ್ನು ದೂರಮಾಡಿ ಇದರ ರಹಸ್ಯವು ಪ್ರತಿಯೊಬ್ಬರಿಗೂ ತಿಳಿಯುಲೆಂಬ ಸದುದ್ದೇಶದಿಂದ ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರು ಈ ಗ್ರಂಥಕ್ಕೆ ಬಹು ವಿಶಾಲವಾಗಿ ಕನ್ನಡ ಟೀಕೆಯನ್ನು ಬರೆಯಿಸಿದ್ದಾರೆ. ಈ ಮೂಲ ಗ್ರಂಥವು ಕೇವಲ ೩೮ ಪುಟಗಳಿಂದ ಕೂಡಿದ್ದರೂ ಇದಕೆ ಕನ್ನಡ ಟೀಕೆಯು ೧೩೨೩ ಪುಟಗಳನ್ನಾಗಿದೆ. ಈ ಮಹಾಗ್ರಂಥಮುದ್ರಣಕ್ಕಾಗಿ ಪಂಡಿತರು ವಿಶೇಷ ದ್ರವ್ಯವನ್ನು ವ್ಯಯಮಾಡಿದ್ದಾರೆ. ಇಂಥ ದೊಡ್ಡಸಿದ್ಧಾಂತಗ್ರಂಥವು ಇಂದಿನವರೆಗೆ ಕನ್ನಡಭಾಷೆಯಲ್ಲಿ ಎಲ್ಲಿಯೂ ಮುದ್ರಿತವಾಗಿಲ್ಲವೆಂದು ಘಂಟಾಘೋಷವಾಗಿ ಹೇಳಬಹುದಾಗಿದೆ. ನಮ್ಮನ್ನಾಳಿದ **ಶ್ರೀಮನ್ಮಹಾರಾಜಾಧಿರಾಜ ಶ್ರೀ ಕೃಷ್ಣರಾಜ ಒಡೆಯರ್ ಬಹದ್ದೂರ್ ಮಹಾಪ್ರಭುಗಳವರು** ಈ ಗ್ರಂಥದ ಯೋಗ್ಯತೆಯನ್ನು ಕಂಡು ಪಿಡಿಕೇಷನ್ಸಿಗೆ ಅಪ್ಪಣೆಯನ್ನಿತ್ತಿರುವಲ್ಲದೆ, ಈ ಗ್ರಂಥದಲ್ಲಿ ನಿಯೋಜಿಸುವುದಕ್ಕೋಸ್ಕರ ತಮ್ಮ ಭವ್ಯಮಾಡಿ ಭಾವಚಿತ್ರವನ್ನು ಸಹಿ ದಯಪಾಲಿಸಿರುವರು. ಇದರಿಂದ ಈ ಗ್ರಂಥದ ಯೋಗ್ಯತೆಯು ಎಷ್ಟರಮಟ್ಟಿಗಿರದೇಕೆಂಬ ವಿಷಯವನ್ನು ಬೇರೆ ಹೇಳಬೇಕಾಗಿಲ್ಲ. ಇಂಥ ಅಮೂಲ್ಯವಾದ ವೀರಶೈವಸಿದ್ಧಾಂತಗ್ರಂಥವನ್ನು ಪ್ರತಿಯೊಬ್ಬ ವೀರಶೈವರೂ ಅವಶ್ಯವಾಗಿ ತರಿಸಿಕೊಂಡು ಆದರಪೂರ್ವಕವಾಗಿ ಸಿದ್ಧಾಂತ ವಿಷಯಗಳನ್ನು ತಿಳಿಸಿಕೊಂಡು ಧನ್ಯರಾಗಬೇಕೆಂದು ಕೋರಿಕೆ. ಒಟ್ಟು ಈ ಮಹಾಗ್ರಂಥವು ೧೩೪೪ ಪುಟಗಳಿಂದ ಕೂಡಿದ್ದು ಒಳ್ಳೆ ಬೆಲೆಯುಳ್ಳ ಕಾಗದದಲ್ಲಿ ಮುದ್ರಿಸಲ್ಪಟ್ಟಿರುವದಲ್ಲದೆ ಬಹುಸುಂದರವಾದ ಬೈಂಡಿನಿಂದೊಡಗೂಡಿದೆ. ಪವಿತ್ರವಾದ ವೀರಶೈವ ಸಿದ್ಧಾಂತದಲ್ಲಿ ವಿಶ್ವಾಸವುಳ್ಳ ಪ್ರತಿಯೊಬ್ಬರೂ ಮತ್ತಿನ್ನಕಡೆಗೆ ದೃಷ್ಟಿಯನ್ನಿಡದೆ ಈ ಗ್ರಂಥರತ್ನವನ್ನು ತರಿಸಿಕೊಂಡೇ ತೀರಬೇಕು. ಈ ಮಹಾಗ್ರಂಥದ ಬೆಲೆ ಆ ಕೂಪಾಯಿ. ಇಂದುರೂಪಾಯಿಗೆ ನಾಲ್ಕಾಣೆಯಂತೆ ಕಮಿಷನ್ ವಜಾ ಹೋಗಲಾಗಿ ೬ ರೂ. ಗೆ ದೊರೆಯುವುದು. ವಿ. ಪಿ. ಚಾರ್ಜು ೧ ರೂ ೫ ಆಣೆ ಪ್ರತ್ಯೇಕ-

ಮ್ಯಾನೇಜರ್—
ಪಂಚಾಚಾರ್ಯಪ್ರಶಾಲಾಫೀಸ್, ಮೈಸೂರು

ಮನೋಹರವಾದ ಫೋಟೋಗಳು.

ಶ್ರೀ ರೇಣುಕಾಚಾರ್ಯರ ಒಂಭತ್ತು ಅಮೃತಲಿಂಗಗಳಿಂದ ಸೂಡಿದ ಫೋಟೋ ಸೈಜು ೨೦×೧೪ ಬೆಲೆ ೧೫ಕ್ಕೆ ೦—೪—೦

ಶ್ರೀ ರೇಣುಕಾದಿ ಪಂಚಾಚಾರ್ಯರು ಲೋಕಕಲ್ಯಾಣಾರ್ಥವಾಗಿ ಆ ಸ್ಥಳದಲ್ಲಿ ಪ್ರತಿಷ್ಠೆ ಮಾಡಿದ ಶ್ರೀ ಸಾನಂದ ದೇವರ ಮತಸ್ಥಿರಗಳಿಗೆ ಶಿವಸಿದ್ಧಾಂತವನ್ನು ಸಾರಿಹೇಳುವ ಫೋಟೋ ಸೈಜು ೧೦×೧೪ ಬೆಲೆ ೦—೧—೬

ಸದ್ಧರ್ಮ ಪ್ರಚಾರೋತ್ಸವಾರ್ಥವಾಗಿ ಬಳಗದ ಆಚಾರ್ಯರು ಒಂದಲ್ಲದೆಯೇ ಇರುವ ಫೋಟೋ ಸೈಜು ೧೪×೧೦ ಬೆಲೆ ೦—೧—೬

ಶ್ರೀ ಜಗದ್ಗುರು ಪಂಚಾಚಾರ್ಯ ಲಿಂಗಾವತಾರದ ಫೋಟೋ ಸೈಜು ೧೪×೧೦ ಬೆಲೆ ೦—೧—೬

ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೊ ಸೈಜು ೧೦×೮ ಬೆಲೆ ೦—೦—೯

ಶ್ರೀ ಜಗದ್ಗುರು ರುದ್ರಮುನಿಲಕ್ಷ್ಮಣ ಶಿವಾಚಾರ್ಯರು ಭೂಗರ್ಭದಿಂದ ಅವತರಿಸಿದಾಗ ಫೋ ಟೋ ೦—೦—೯

ಶ್ರೀ ರೇಣುಕಾಚಾರ್ಯರು ಮಂತ್ರಮುನಿ ಶ್ವರ ಶಿವ ಚಾರ್ಯರಿಗೆ ಸಚ್ಚಾಭಿಷೇಕ ಮಾಡುವ ಫೋಟೊ ೦—೦—೯

ಶ್ರೀ ರೇಣುಕಾಚಾರ್ಯರು ವಿಘ್ನೇಶ್ವರನಾಗಿ ಪ್ರಾರ್ಥನಾನುಸಾರವಾಗಿ ವಕ್ರತುಂಡರಲ್ಲಿಗೆ ಮಾಗಿಯಲ್ಲಿ ಗುರುಪೂಜೆಯನ್ನು ಧಾರಣಮಾಡಿ ಮೂರುಕೋಟಿ ಶಿವಲಿಂಗಗಳನ್ನು ಪ್ರತಿಷ್ಠಿಸುವ ಫೋಟೋ ಗಳಿಗೆ ೦—೦—೯

ಶ್ರೀ ರೇಣುಕಾಚಾರ್ಯರು ಶ್ರೀ ಲಂಕಾಚಾರ್ಯರಿಗೆ ಚಿಂತಾಮಣಿಲಿಂಗವನ್ನು ಆಶೀರ್ವದಿಸುವ ಫೋಟೊ ೦—೦—೯

ಶ್ರೀ ಸಾಕ್ಷೇತ್ರವಾಸಜಮಾನ ಶ್ರೀ ಜಗದ್ಗುರು ವಿರಕ್ತ ಪೀಠಾಧಿಪತಿಗಳಾದ ಶ್ರೀ ಮಲೆಯನ ಪಟ್ಟದ ಫೋಟೊ ೦—೦—೯

ಶ್ರೀ ಆದೀ ಸಿಂಹಾಸನಾಧೀಶ್ವರಶ್ರೀ ಜಗದ್ಗುರು ಪಂಚಾಕ್ಷ ಶಿವಾಚಾರ್ಯರ ಫೋಟೊ ೦—೦—೯

ಶ್ರೀಮದ್ಜಗದ್ಗುರು ಸಿಂಹಾಸನಾಧಿಪತಿ ಶ್ರೀ ಜಗದ್ಗುರು ಸಿದಲಿಂಗ ಶಿವಾಚಾರ್ಯರ ಫೋಟೋ ೦—೦—೯

ಶ್ರೀಮದ್ರಂಭಾಪುರೀ ಪೀಠಾಧಿಪತಿಗಳಾದ ಶ್ರೀ ಜಗದ್ಗುರು ಸಿದ್ಧಲಿಂಗ ರಾಜದೇಶಿಕೇಂದ್ರ ಮಹಾಸ್ವಾಮಿಗಳವರ ಫೋಟೋ ೦—೦—೯

ಶ್ರೀಮದ್ಗುಡ್ಡಾಪುರ ಜಗದ್ಗುರು ಲಘು ಸಿದ್ಧಾಂತಾಗಮ ಪಂಚಾಕ್ಷರಿ ಶ್ರೀ ಕಾಶೀನಾಥಶಾಸ್ತ್ರಿಗಳವರು ಕಳಿಸಿಕೊಟ್ಟ ಫೋಟೋ ೦—೦—೯

ಪಂಡಿತ ಶ್ರೀ ಕಾಶೀನಾಥಶಾಸ್ತ್ರಿ ಳವ ಫೊ ಟೊ ಬೆಲೆ ೨ಕ್ಕೆ ೦—೦—೯

ಶ್ರೀ ಜಗದ್ಗುರು ಸಿದ್ಧಲಿಂಗ ಸಿದ್ಧಾಂತಾಗಮ ಅತ್ಯಂತ ಸುಂದರವಾದ ಫೋಟೊ ೦—೦—೯

ಶ್ರೀ ಜಗದ್ಗುರು ಉಮಾಮಹೇಶ್ವರ ಅತ್ಯಂತ ಪ್ರಾಚೀನವಾದ ಅಪ್ಪಟವಾದ ಸುಂದರ ಫೋಟೊ ೦—೦—೯

ಶ್ರೀ ಜಗದ್ಗುರು ಕೇದಾರ ಸಿಂಹಾಸನ ಅತ್ಯಂತ ಸುಂದರವಾದ ಗೋಪುರ ಪೂಜೆ ೦—೦—೯

ಹಿಮವತ್ಕೇದಾರದ ಮುಖ್ಯದ್ವಾರ ಪೂಜಾ ಸಿದ್ಧಪೀಠ ಶ್ರೀ ಕೇದಾರನಾಥಸ್ವಾಮಿಯ ಜಂಗಮ ಲಿಂಗ ಸಂದರ ಫೋಟೊ ೦—೦—೯

ಶ್ರೀ ಶಂಭುಲಿಂಗ ಸ್ವಾಮಿಗಳವರು ಶಿವಾಚಾರ್ಯರಾಗಿ ಪಟ್ಟಾಭಿಷಿಕ್ತರಾದ ಸಮಯದಲ್ಲಿ ತೆಗೆದ ಫೋಟೋ ೦—೦—೯

ಶ್ರೀ ಕಾಶೀ ಪಂಚಾಕ್ಷರಿ ಶ್ರೀ ಕಾಶೀನಾಥಶಾಸ್ತ್ರಿಗಳವರು ಕಳಿಸಿಕೊಟ್ಟ ಫೋಟೊ ೦—೦—೯

ಸೂಚನೆ—ಪೂರ್ಣಪಾವತಿಯಾದ ಕೂಡಲೆ ಫೋಟೊಗಳು ಬಿಳಿಯ ಪೋಸ್ಟ್ ಪೆಟ್ಟಿಗೆಯಲ್ಲಿ ಸುರಕ್ಷಿತವಾಗಿ ಮೇಲೆ ತಿಳಿಸಿರುವವರಿಗೆ ರವಾನೆಯಾಗುವುದು. ಆಗಬೇಕಾದ ಕರ್ತವ್ಯ ಮೊದಲಾಗುವದರ

ಮಾರಾಟ —ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ ಮೈಸೂರು

ಡಾಕ್ಟರ್ ಜಿ. ಬಿ. ಯವರ

ಸುಗಂಧ ನಶ್ಯದಪುಡಿ

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯವಪುಡಿಯು ಕಂಡುಹಿಡಿಯಲ್ಪಟ್ಟು, ಸಾವಿರಾರುಮಂದಿಗಳು ಇದನ್ನು ಉಪಯೋಗಿಸಿ ಸಾವಿರಾರುಗಳಾಗಿ, ಯೋಗ್ಯತಾಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯವು ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ —ಪೀನಸ, ಒಂಟಿ ತಲೆನೋವು, ತಲೆಯ ಭಾರ, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವವ್ಯಾಧಿಗಳು, ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವವಲ್ಲದೆ ಕಂಠಕ್ಕೆ ಮೇಲ್ಪಟ್ಟ ೯೬ ವ್ಯಾಧಿಗಳನ್ನು ಸ್ಪರ್ಶಪಡಿಸಿ ಹೃದಯಕಕ್ಕೆ ಯನ್ನೂ ಸಹ ಹೆಚ್ಚುಮಾಡುತ್ತದೆ ಮೂರುಬೆಟ್ಟಿನ ಸಾಧಾರಣ ನಶ್ಯದ ಸಂಗತ ಈ ಸುಗಂಧ ನಶ್ಯದಪುಡಿಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಮಾಡಿದರೆ ಎಲ್ಲವೂ ಪರಿಮಳವಾಗುವುದು ಇದನ್ನು ಅನೇಕಪ್ರಭುಗಳು ಉಪಯೋಗಿಸುತ್ತಾರೆ ಮಾವರಿ ಸೀಸೆ ಫ್ರೀ ಪೋಸ್ಟಿಂಗ್ ಒಂದಕ್ಕೆ ೪ ಆಣೆ ತರ್ಜ ಒಂದಕ್ಕೆ ಕ್ರಯ ರೂ ೨ ೮ ೦ ಮಿ ೮ ಆಣೆ

(Registered Trade Mark)

ನಿಮ್ಮ ಅಜ್ಞೆಸ್ಸನ್ನು ತಿಳಿಯುವಂತೆ ಬರೆಯಿರಿ

ಗುರುಬಸವ ಅಂಡ್ ಕಂಪೆನಿ ಲಿಮಿಟೆಡ್

[೪೧] ಫೋ ಬಾ ೫೧೦ ಮದರಾಸು

ಸರ್ವೋತ್ಕೃಷ್ಟವಾದ ಮತಗ್ರಂಥಗಳು

ಗೋತ್ರಸೂತ್ರಪಟ (೫೦೦ ಅನ್ವಯ)	೧ ಆಣೆ
ಸದ್ಯಾಶಾಸ್ತ್ರಮಮಿಮರ್ಶ (೨೦೦ ಅನ್ವಯ)	೧ ಆಣೆ
ಪಂಚಶಿಂಶತಿ ಪ್ರಸ್ಥಪ್ರಕರಣ (೨೦೦ ಅನ್ವಯ)	೧ ಆಣೆ
ಶ್ರೀಸಂಜಾಚಾರ್ಯ ಮಂಗಳಸ್ತೋತ್ರಾವಳಿ (೧೦೦ ಅನ್ವಯ)	೧ ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ (೬೦೦ ಅನ್ವಯ)	೧ ಆಣೆ
ಶ್ರೀಜಗದ್ಗುರು ಸಚ್ಚಾಚಾರ್ಯ ರತ್ನಮಾಲಾ (೩೦೦ ಅನ್ವಯ)	೨ ಆಣೆ
ಉಪವಾದಿನಿರ್ಜಿತತತ್ವದರ್ಪಣ (೪೦೦ ಅನ್ವಯ)	೩ ಆಣೆ
ಶ್ರೀರೇಣುಕಾಚಾರ್ಯ ಶತಕ (೨೦೦ ಅನ್ವಯ)	೨ ಆಣೆ
ಪಂಚಾಚಾರ್ಯ ಪ್ರಭಾಕರ	೨ ಆಣೆ
ಶ್ರೀಗುರುತತ್ವ ಪ್ರಪದಗಳು	೨ ಆಣೆ
ಶ್ರೀರುದ್ರಮುನಿಶಿವಾಚಾರ್ಯ ಶತಕ	೨ ಆಣೆ
ವೀರಶೈವಮತಮಿಮಾಂಸಾ	೩ ಆಣೆ
ವೀರಶೈವಾಚಾರವಿಧಿ (೨೦೦ ಅನ್ವಯ)	೩ ಆಣೆ
ಲಿಂಗಧಾರಣವಿಧಿ	೪ ಆಣೆ
ವಿವಾಹವಿಧಿ (೩೦೦ ಅನ್ವಯ)	೪ ಆಣೆ
ಶ್ರೀಸಚಿದಂಡಾಚಾರಾಧಿಷ್ಠಿರ ಕಾಲನಿರ್ಣಯ	೪ ಆಣೆ
ಸದ್ಯಾಶಾಸ್ತ್ರಮವಿಮರ್ಶತತ್ವಸ್ವೀಕರಣ (೨೦೦ ಅನ್ವಯ)	೬ ಆಣೆ
ಸಿದ್ಧಾಂತ ಶಿಖಾಮಣಿ (ಮೂಲಮಾತ್ರ ಚಕ್ಕಸ್ಕೆಯು)	೬ ಆಣೆ
ವೀರಶೈವಮಹಾತ್ಮರು	೮ ಆಣೆ
ಚಿಸವಧ್ವಾಂತನಿವಾರಕ (೨೦೦ ಅನ್ವಯ)	೮ ಆಣೆ
ತಿವಾದ್ವೈತಪರಿಭಾಷಾ (ಸಂಸ್ಕೃತ)	೮ ಆಣೆ
ಪಂಡಿತ ಶ್ರೀಜಾತೀವನಾಥತಾಸ್ತ್ರುಲವಾರಿ ಧಾರಣಮು (ತೆಲುಗು)	೮ ಆಣೆ
ಸದ್ಭೋಧರತ್ನಾವಳಿ	೮ ಆಣೆ
ವೈದಿಕತಿವಪೂಜಾವಿಧಿ (ವೈದಿಕಶ್ರಮಸ್ಕಾರವಾದ ಅತ್ಯಂತ ಸುಂದರಮುದ್ರಣ)	೧೨ ಆಣೆ
ಸಿದ್ಧಾಂತಸಾರಾವಳಿ (ಶ್ರೀಯೋಜನತಿವಾಚಾರ್ಯಕೃತ)	೧೨ ಆಣೆ
ಶ್ರೀಜಗದ್ಗುರು ಪಂಚಾಚಾರ್ಯ ಸ್ತೋತ್ರರತ್ನಾಕರ	೧೨ ಆಣೆ
ವಾಹೇಶ್ವರ ದೀಕ್ಷಾವಿಧಿ (೩೦೦ ಅನ್ವಯ)	೧೨ ಆಣೆ
ತಿಯಸೂತ್ರಸಿದ್ಧಾಂತದರ್ಪಣ	೧೨ ಆಣೆ
ಶ್ರೀಕರಭಾಷ್ಯಂ (ಚಿಕಾಸ್ಪಾಶ್ರೀ)	೧ ರೂ
ಸಚಿತ್ರ ರೇಣುಕವಿಜಯ (೩೦೦ ಅನ್ವಯ)	೧ ರೂ
ವೀರಶೈವನರತ್ನ (೩೦೦ ಅನ್ವಯ, ೪೦ಮಚಿತ್ರದ ಪೆಟ್ಟೋಗ್ರಾಫ್ ಸಹಿತ)	೧೫ ರೂ
ಸಿದ್ಧಾಂತಶಿಖಾಮಣಿ (ಸಚಿತ್ರ ಟೀಕಾಸಹಿತ)	೧ ರೂ
ಕೇನೋಪನಿಷತ್ (ಕನ್ನಡ ಟೀಕಾಸಹಿತ)	೧ ರೂ
ರೇಣುಕವಿಜಯ ಮಹಾಪುರಾಣ (ಕನ್ನಡ ಭಾವಾರ್ಥಸಹಿತ)	೧ ರೂ
ಸಿದ್ಧಾಂತಶಿಖಾಮಣಿ (ಸಚಿತ್ರ ಟೀಕಾಸಹಿತ)	೩ ರೂ
ವೀರಶೈವಸಿದ್ಧಾಂತಸುಧಾಕರ	೨ ರೂ
ಶಿವಾದ್ವೈತಮಂಜರಿ (ಕನ್ನಡನ್ಯಾಖ್ಯಾನ ೧೩೨೩ ಪುಟ)	೪ ರೂ
A brief life sketch of Pandit Sri Kashinatha Shastriyi (*English*)	4 As
The Philosophical Aspect of Virasaivism (*English*)	8 As
Speeches by Pandit Shri Kashinatha Shastriyi (*English*)	12 As
ವೀರಶೈವರತ್ನ (ಮರಾಠಿ)	೧ ರೂ
ಸಹಜನಾರಾಯಣೋಪನಿಷತ್ (ವೀರಶೈವಭಾಷ್ಯ-ಸಂಸ್ಕೃತ)	೧ ರೂ
ವೀರಶೈವೇತಿಹಾಸ (ಸಂಸ್ಕೃತ)	೧ ರೂ
ನಂದಿಕೇಶ್ವರಕಾರಿಕಾ (ಸಂಸ್ಕೃತ)	೨ ಆಣೆ
ಲಿಂಗಧಾರಣಚಂದ್ರಿಕಾ (ಸಂಸ್ಕೃತ)	೩ ರೂ

೧ ರೂಪಾಯಿಗಿಂತಲೂ ಹೆಚ್ಚಿನ ಆರ್ಡರುಗಳಿಗೆ ವಿ ಪಿ ಕಳುಹಿಸುವುದಿಲ್ಲ ೫ ರೂ ಗಳಿಗೆ ಮೇಲ್ಪಟ್ಟು ಪುಸ್ತಕಗಳನ್ನು ತರಿಸಿಕೊಳ್ಳುವವರಿಗೂ ಪುಸ್ತಕ ವ್ಯಾಪಾರಿಗಳಿಗೂ ೧ ರೂ ಗೆ ೮ ಆಣೆಯಂತೆ ಕಮಿಷನ್ ಕೊಡಲಾಗುವುದು.

ಮಾರಾಟ—ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು

ಮೈಸೂರು ಸಂಸ್ಥಾನದ ರೋಡಿಸ್ಟ್ರಿಕ್ಟ್ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್‌ನಲ್ಲಿ ಸಂಪಾದಕರಾದ ವೀರ ಪಂಡಿತ ಶ್ರೀ ಜಾತೀವನಾಥಶಾಸ್ತ್ರಿಗಳವರಿಂದ ಮುದ್ರಿಸಿ ಪ್ರಕಟಿಸಲ್ಪಟ್ಟಿತು

REGISTERED No M 2266 ॥ ಶ್ರೀಜಗನ್ಮೋಹನ ಪಂಚಾಚಾರ್ಯಾಯನಮಃ ॥ REGISTERED No M 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾಸನಪಂಕಜಾಜನಿತರ್ ಪಂಚಾಸ್ಯಪೀಠಾಧಿಪರ್ | ಪಂಚಕ್ಲೇಶವಿನಾಶಕರ್ ಪರತರಶ್ರೀಪಂಚಲಿಂಗೋದ್ಭವರ್ ॥
ಪಂಚಾಚಾರ್ಯಪಯೂಮಕರ್ ಪರಿಲಸತ್ಪಂಚಾಕ್ಷರೀದೀಕ್ಷಿತರ್ | ಪಂಚಾಚಾರ್ಯಜಗನ್ಮರೂತ್ತಮರವರ್ ಪಾಂಚಾಲಿಪ್ರಿಯದೀಕ್ಷಕಮಂ ॥

ಸ್ಥಳವರಿಗೆ ೧ ರೂ ೧೧ ಆಣೆ | ಬಿಡಿ ಪ್ರತಿ ೧೫ ಪೈ | ಪರಸ್ಥಳವರಿಗೆ ೩ ರೂ ೮ ಆಣೆ ವಿ ಪಿ ಚಾರ್ಜು ಪ್ರತ್ಯೇಕ

ಸಂಪುಟ ೧೪.] ಪಂಚಾಚಾರ್ಯಪ್ರಭಾ, ಸೋಮವಾರ ತಾ॥ ೨೩ನೇ ಡಿಸೆಂಬರ್ ೧೯೪೦ [ಸಂಚಿಕೆ ೩೩

ಕಾಮನ್ಸ್ ಸಭೆಯಲ್ಲಿ ಬ್ರಿಟಿಷ್ ಮಹಾಪ್ರಧಾನರ ಭಾಷಣ.

ಈ ತಿಂಗಳು ೧೯ ನೆಯ ತಾರೀಖಿನವರೆಗೆ ಬ್ರಿಟಿಷ್ ಮಹಾಪ್ರಧಾನರು ಕಾಮನ್ಸ್ ಸಭೆಯಲ್ಲಿ ದೀರ್ಘವಾದ ಭಾಷಣ ಮಾಡಿದರು —

ಮೊದಲು ಆರ್ಡ್ ಲೋಥಿಯನ್ನರ ನಿಧನ ಕ್ಕಾಗಿ ಮಹೋನ್ನತಸಂತಾಪವನ್ನು ವ್ಯಕ್ತಪಡಿಸಿ, ಇಂದಿನ ವಿಷಮ ಪರಿಸ್ಥಿತಿ ಯಲ್ಲಿ ಲಾರ್ಡ್ ಲೋಥಿಯನ್ನರ ಅಮೂಲ್ಯವಾದ ಸಹಾಯವು ದೊರೆಯದೆ ಹೋದದುದಂದ ವೈಕ್ತಿಕ ಆಪಾರ ನಷ್ಟವಾಗಿರುವುದೆಂದು ವಿವರಿಸಿದರು

ಲಿಬಿಯಾ ಯುದ್ಧದ ವಿಚಾರವಾಗಿ 'ಅಲ್ಲಿಯ ಯುದ್ಧವು ಅನುಕೂಲವಾಗಿಯೇ ನಡೆಯುತ್ತಿರುವುದೆಂದೂ ೩೨,೦೦೦ ಜನ ಇಟಲಿ ಸೈನಿಕರು ಒಂದಿಸಲ್ಪಟ್ಟಿರುವರೆಂದೂ, ೧೦೦ ಗನ್'ಗಳನ್ನೂ, ೫೦ ಟ್ಯಾಂಕ್ ಗಳನ್ನೂ, ಬಹಳ ಆಯುಧ ಸಾಮಗ್ರಿಗಳನ್ನೂ, ಬ್ರಿಟಿಷರು ವಶಪಡಿಸಿಕೊಂಡಿದ್ದಾರೆಂದೂ, ಡಿಸೆಂಬರ್ ೧೬ ನೇ ತಾರೀಖಿನವರೆಗೆ ಬ್ರಿಟಿಷ್ ಸೈನ್ಯದ ಕಡೆ ಪಶ್ಚಿಮ ಮರುಭೂಮಿಯಲ್ಲಿ ೭೫ ಮಂದಿ ಸತ್ತರೆಂದೂ, ೩೩೮ ಜನರಿಗೆ ಗಾಯಗಳಾಗಿವೆಯೆಂದೂ, ಸೂಚಿಸಿದರು

ತಮ್ಮ ಭಾಷಣವನ್ನು ಮುಂದುವರಿಸಿ— ಕಳೆದ ಮಂಗಳವಾರ ಆಸ್ಟ್ರೇಲಿಯಾ ಸೈನಿಕರು ಪಶ್ಚಿಮ ಮರುಭೂಮಿಯಲ್ಲಿರುವ ಜಾರಬುಬ್ ಎಂಬ ನಗರವನ್ನು ಮುತ್ತಿದರೆಂದೂ, ಇಟಲಿ ಸೈನಿಕರು ಅಗ್ಗಿ ಹೆಚ್ಚು ಪ್ರತಿರೋಧವನ್ನು ತೋರಿಸಲಿಲ್ಲವೆಂದೂ, ಇವರು ಅದ್ಭುತ ಸಾಹಸವನ್ನು ತೋರಿಸಿರುವ ಆನೇಕ ಪ್ರಸಂಗಳು ಇತಿಹಾಸದಲ್ಲಿ ಉಲ್ಲಿಖಿತವಾಗಿದ್ದರೂ ಈ ಸಾರಿ ಅವರಲ್ಲಿ ಉತ್ಸಾಹವಿಲ್ಲದೆ ಹೋದಹೆದೆಂದೂ, ಇಟಲಿಯ ಒಂದು ವಿಭಾಜನ ಪಡೆಯು ಯುದ್ಧಮಾಡದೆ ಕೀಳ್ತರಗತಿಯ ಬ್ರಿಟಿಷ್ ಸೈನ್ಯ ಪಡೆಗೆ ಶರಣಾಗತವಾಯಿತೆಂದೂ, ಮರುಭೂಮಿಯಲ್ಲಿಲಂ ನೈರಿಗಳ ದೂರ ನಡೆದು ಯುದ್ಧವಾಡುವುದು ಸಾಮಾನ್ಯವಾದ ಕೆಲಸವಲ್ಲವೆಂದೂ, ಅಲ್ಲಿ ಪೆಟ್ರೋಲ್ ಮತ್ತು ನೀರು ಒಹಳ ಮಿತವಾಗಿ ದೊಯುತ್ತಿದ್ದುದರಿಂದ ಬಹಳ ಯೋಚನೆಯಾಗಿತ್ತೆಂದೂ, ಗುಡ್‌ಹೋಪ್ ಭೂಶಿರವನ್ನು ಸುತ್ತಿಕೊಂಡುಹೋಗುವ ಹಡಗುಗಳಲ್ಲಿ ಬ್ರಿಟನ್ನಿನಿಂದ ಕಸ್ತ್ರಾಸ್ತ್ರಗಳನ್ನೂ ಮದ್ದುಗುಂಡುಗಳನ್ನೂ ಫಿರಂಗಿಗಳನ್ನೂ ಮೊದಲು ಅತ್ಯರ್ಥಪ್ರಸಕ್ತಿಗಾಗಿ ಕಳುಹಿಸಿ ಅನಂತರ ಅಕ್ಷಪಣ ಕಾರ್ಯವನ್ನು ನಡೆಸುವುದಕ್ಕೆ ಅವಕಾಶಕೊಡುವುದು ಸಲಭದ ಮಾತಲ್ಲವೆಂದೂ, ತಾವೂ ಮತ್ತು ಎಡನ್ನರೂ ಈ ವಿಚಾರವಾಗಿ ಬಹಳ ಆಲೋಚನೆ ನೂಡಿದವರೆಂದೂ, ಈ ಯುದ್ಧದಲ್ಲಿ ಬ್ರಿಟನ್ನಿನ ಬಲವು ತಪ್ಪು ಅನ್ಯತ ಸಾಮರ್ಥ್ಯವನ್ನು ತೋರಿಸುವುದರಿಂದ ಜರ್ಮನ್ ಯುದ್ಧದಲ್ಲಿ ಬ್ರಿಟನ್ನಿನ ಸೈನ್ಯವೆ ಜರ್ಮನಿ ಸೈನ್ಯದೊಡನೆ ಸಮವಾಗಿ ನಿಂತು ಹೋರಾಡಬಲ್ಲದೆಂಬುದನ್ನು ತೋರಿಸಿಕೊಡಲಾಯಿತೆಂದೂ, ಲಿಬಿಯದಲ್ಲಿ ಬ್ರಿಟನ್ನಿನ ಅಧಿಕಾರಿಗಳ ಅಸಾಧಾರಣ ಯೋಗ್ಯತೆಯು ಗೊತ್ತಾಯಿತೆಂದೂ, ಬ್ರಿಟನ್ನಿನ ಅಧಿಕಾರಿಳು ಬುದ್ಧಿವಂತಿಕೆಯಿಂದಲೂ ಧೈರ್ಯದಿಂದಲೂ ವರ್ತಿಸಿ, ಗೆಲ್ಲಬಲ್ಲಂಬ ನನ್ನ ತೋರಿಸಿಕೂಟ್ಟರೆ ವರೆಗೂ ಬ್ರಿಟನ್ನಿಗೆ ಸುವ್ಯವಸ್ಥಿತವಾದ ದೊಡ್ಡ ಸೈನ್ಯಬಲವಿರಬೇಕೆಂದೂ, ಎಲ್ಲಾ ಒಗೆಯ ರಣರಂಗಗಳಲ್ಲೂ ಯುದ್ಧಮಾಡುವ ಶಕ್ತಿಯನ್ನು ಆ ಸೈನಿಕರು ಪಡೆದಿರಬೇಕೆಂದೂ, ಸಂಗ್ರಾಮದ ದೃಷ್ಟಿಯಿಂದ ಕೈಗಾರಿಕೆಗಳನ್ನು ದೇಶದಲ್ಲಿ ಅಭಿವೃದ್ಧಿಗೊಳಿಸ ಬೇಕೆಂದೂ ೩ ೪ ವರ್ಷಗಳು ಬೇಕಾಗುವುದೆಂದೂ, ಜರ್ಮನಿಯು ಶಸ್ತ್ರಾಸ್ತ್ರಗಳಿಂದ ಸುಸಜ್ಜಿತವಾದಾಗ ಬ್ರಿಟನ್ನಿನಲ್ಲಿ ಸಂಗ್ರಾಮ ಸಲಕರಣೆಗಳನ್ನು ಹೋಡಿಸಿಕೊಳ್ಳುವ ಕೆಲಸವು ಆರಂಭವಾಯಿತೆಂದೂ, ಆದರೆ ಅಮೆರಿಕಾ ಮತ್ತು ಬ್ರಿಟಿಷ್ ಸಾಮ್ರಾಜ್ಯ ದೇಶಗಳು ಸಹಾಯದಿಂದ ೧೯೪೧ನೇ ವರ್ಷದಲ್ಲಿ ಬ್ರಿಟನ್ನು ಸಂಪೂರ್ಣ ಸಿದ್ಧತೆಗಳನ್ನು ಮಾಡಿಕೊಳ್ಳಬಹುದೆಂದೂ, ಯಾವಾಗಲೂ ಕೈಪ್ಪಿಟ್ಟಿಕೊಂಡು ಸುಮ್ಮನೆ ಕುಳಿತಿರ ಕೂಡದೆಂದೂ, ಶಸ್ತ್ರಾಸ್ತ್ರಗಳ ಉತ್ಪತ್ತಿಯೊಡನೆ ಆಹಾರ ಸಾಮಗ್ರಿಗಳ ಉತ್ಪತ್ತಿಯ ಕಡೆಗೂ ಗಮನಕೊಡಬೇಕೆಂದೂ" ಹೇಳಿದರು

೧೯೪೩ ಬಳಿಕ ವರೆಗೂ ಸಂಗ್ರಾಮವು ನಡೆಯಬಹುದೆಂದು ತಾವು ನಂಬಿಕೆಯುಳ್ಳವರಾಗಿದ್ದರೂ ವ್ಯವಸಾಯ, ಹಡಗುಗಳ ನಿರ್ಮಾಣ ಇತ್ಯಾದಿ ವಿಚಾರಗಳನ್ನು ಪರಿತೀಲಿಸುವಾಗ ಭವಿಷ್ಯದ ಕಡೆ ಗಮನಿಸಬೇಕೆಂದೂ, ಸಂಗ್ರಾಮವು ಆಷ್ಟುದೂರ ಎಳೆದರೆ, ಆಹಾರ ಸಾಮಾಗ್ರಿಗಳ ಕಡೆಗೆ ವಿಶೇಷ ಗಮನವನ್ನು ಕೊಡಬೇಕೆಂದೂ, ಮತ್ತು ಸನ್ನಿಹಿತವಾಗುತ್ತಿದ್ದ ಸಮಯವು ಕಳೆದುಹೋಯಿತೆಂದು ಭಾವಿಸುವುದು ಶುದ್ಧ ಮೂರ್ಖತನವೆಂದೂ, ಅಪಾಯದಿಂದ ತಾವಿನ್ನೂ ಪಾರಾಗಿಲ್ಲವೆಂದೂ, ಇನ್ನೂ ವಿಕ್ಕಟ್ಟಿನ ಪ್ರಸಂಗಗಳು ಉಂಟಾಗಬಹುದಾದ ಸನ್ನಿವೇಶಗಳು ಬಂದೊದಗಲಿವೆ ಯೆಂದೂ, ಆಲ್ಲದೆ ತರ್ತ್ಕಣವೇ ವಿಪತ್ತು ಸಂಭವಿಸುವ ಸೂಚನೆಗಳು ಕೂಡ ಇರುವವೆಂದೂ, ಶರತ್ಕಾಲದಲ್ಲಿ ಬ್ರಿಟನ್ನನ್ನು ಮುತ್ತುವುದಕ್ಕೆ ಕೆಲವು ಅನುಕೂಲಗಳು ವೆಯೆಂದೂ, ನಾವು ಎಚ್ಚರಿಕೆಯಿಂದ ಇಲ್ಲದೆ ಹೋಗುವುದಾದರೆ ಮಹಾ ಪಾಪಕೃತ್ಯವನ್ನು ಮಾಡಿದಂತಾಗುವುದೆಂದೂ, ತೀರ ಸ್ವಲ್ಪ ದೂರದಲ್ಲಿ ಕಾಮು ಕುಳಿತಿರುವ ಭೀತಿಯನ್ನು ನಿವಾರಿಸಿಕೊಳ್ಳಲು ನಾವು ಳೆಂಟೆ ಳೆಂಟೆ ಗೂ ಎಚ್ಚರಿಕೆಯಿಂದ ಕೂಡಿರಬೇಕೆಂದೂ, ಸ್ಕಾಟ್ಲೆಂಡಿನ ಉತ್ತರ ಭಾಗದಿಂದ ಐರ್ಲೆಂಡಿನವರೆಗೂ ಸಮುದ್ರ ತೀರದಲ್ಲಿ ಒಲಯುತವಾದ ಫಿರಂಗಿಗಳನ್ನು ನಿಲ್ಲಿಸಿ, ರಕ್ಷಣೆಯ ಪ್ರಯತ್ನಗಳನ್ನು ಹುಗಿಸಲಾಗಿದೆಯೆಂದೂ, ರಕ್ಷಣಾ ಪ್ರದೇಶಗಳನ್ನು ಬಲವಾಗಿ ಕಾಯುತ್ತಿರಲಾಗಿದೆ ಯೆಂದೂ 'ಮ್ಯಾಜಿನೊ ಲೈನ್' ಒಂದಿದ್ದರೆ ಇನ್ನೇನೂ ಬೇಕಾಗಿಲ್ಲವೆಂದು ಫ್ರೆಂಚ್ ಜನರಲ್ ರವರು ತಪ್ಪು ಭಾವಿಸಿದಂತೆ ನಾವು ಭಾವಿಸ ವುದಿಲ್ಲವೆಂದೂ, ಬೇಗ ಬೇಗನೆ ಚಲಿಸುವ ದೊಡ್ಡ ದೊಡ್ಡ ಸೈನ್ಯಪಡೆಗಳು ಕಾಮುಸಿದ್ಧವಾಗಿವೆಯೆಂದೂ ಒಂದು ವೇಳೆ ಶತ್ರುಗಳು ನವ್ಯ ಜನ್ಮಭೂಮಿಯಿಂದ ಮೇಲೆ ಆಂಡ ವುದಾದರೆ, ಅವರನ್ನು ಪ್ರತಿಬಂಧಿಸುವುದಕ್ಕೆ ನಮಗೆ ತಕ್ಕ ವ್ಯವಸ್ಥೆ ಯಾಗಿದೆಯೆಂದೂ, ಒಟ್ಟಿನ ಬಳಿ ಆಸಾಧ್ಯ ಒಲವಿದೆಯೆಂಬುದನ್ನು ಮಾತ್ರ ಗಮನಿಸದವಲ್ಲದಿದೆಯೆಂದೂ, ಹಿಟ್ಲರನು ಈಗ ಏಷ್ಟಾದರೊಂದು ಕೆಲಸವನ್ನು ಮಾಡಬೇಕಾಗಿದೆಯೆಂದೂ ವಿಸಾನ ಮಾತ್ರಗೆಯು ಹಿವೆಯು ಪ್ರತಿಕೂಲವಾಗಿರ ವುದರಿ ದ ಕಡಿವ ಯಾಗಿದೆಯೆಂದೂ, ಆದರೆ ಬೇರೆಂದು ಒ ಯ ಉಗ್ರ ಕಂ ರ್ಕಮವನ್ನು ಕೈಗೊಳ್ಳ ವ ಬುದ್ಧಿಶಕ್ತಿಯಿದ ಅದನ್ನು ಕಡಿಮೆ ಮಾಡಿದ್ದರೂ ಮಾಡಿರಬಹುದೆಂದೂ, ಮುತ್ತಿಗೆಗೆಂದಾಗುವ ಆನರ್ಥ ಪರಂಪರೆಗಳನ್ನು ನಿವಾರಿಸುವುದಕ್ಕೆ ತಕ್ಕ ಪ್ರಯತ್ನಗಳನ್ನು ಮಾಡಿದ್ದೇವೆಂದೂ, ಇನ್ನೂ ಹಲವು ಪ್ರಯತ್ನಗಳನ್ನು ಕೈಗೂಳ್ಳಬೇಕಾಗಿದೆಯೆಂದೂ, ಅಟ್ಲಾಂಟಿಕ್ ಸಾಗರದಲ್ಲಿ, ಶತ್ರುಗಳು ಹಡಗುಗಳನ್ನು ಮುಳುಗಿಸುತ್ತಿರುವದು ಕಳವಳಕ್ಕೆ ಕಾರಣವಾಗಿರುವುದೆಂದೂ ಈ ವಿಚಾರದ ಕಡೆಗೆ ಹೆಚ್ಚು ಗಮನವನ್ನು ಕೊಡುತ್ತಿರಲಾಗಿದೆಯೆಂದೂ" ನುಡಿದರು

ಜರ್ಮನಿಯಮೇಲೆ ಮುತ್ತಿಗೆ

ಪಶ್ಚಿಮ ಜರ್ಮನಿ ಬೆಲ್ಜಿಯಮ್ಮಿನಲ್ಲಿರುವ ಎಜ್ಲೆ ಕಾರ್ಖಾನೆಗಳ ಮೇಲೆಯೂ, ರೈಲ್ವೆ ಜಂಕ್ಷನ್‌ಗಳ ಮೇಲೆಯೂ ೧೯ ನೇ ತಾರೀಖಿನ ದಿನ ರಾತ್ರಿ ಬ್ರಿಟಿಷ್ ವಿಮಾನಗಳು ಮುತ್ತಿಗೆ ನಡೆಸಿ, ಹಿಂದಿರುಗಿದವೆಂದು ವಿಮಾನ ಖಾತೆಯ ಪ್ರಕಟಿಸಿದ್ದಾರೆ ರ್ಹೂಸ್‌ಬರ್ಗ್ ಕ್ಷೇತ್ರದಲ್ಲಿಯೂ ಕಲೋನ್ ಎಜ್ಲೆ ಕ್ಷೇತ್ರಗಳಲ್ಲಿಯೂ ಬೆಂಕಿ ಹತ್ತಿಕೊಂಡಿತು ಡೂಸಲ್‌ಡಾರ್ಫ್ ಕ್ಷೇತ್ರದಲ್ಲಿರುವ ವಿಮಾನ ಕ್ಷೇತ್ರಗಳ ಮೇಲೆ ಬೆಂಕಿ ಬಿದ್ದು ಅನೇಕ ಕಡೆ ಬೆಂಕಿ ಹತ್ತಿಕೊಂಡಿತು

ಇಟಲಿಯಲ್ಲಿ ದುರವಸ್ಥೆ

ಇಟಲಿಯಲ್ಲಿ ೩೪ ರೈಲುಗಳನ್ನು ನಿಲ್ಲಿಸಿಬಿಡಲಾಗಿದೆ ಕಲ್ಲಿದ್ದಿಲು ಕಡಿಮೆಯಾಗಿರುವುದೇ ಇದಕ್ಕೆ ಕಾರಣವೆಂದು ಹೇಳಲಾಗಿದೆ ಕೆಲಜನ ಜರ್ಮನ್ ಅಧಿಕಾರಿಗಳು ಇತ್ತೀಚೆಗೆ ರೋಂನಗರಕ್ಕೆ ಹೋಗಿದ್ದಾರೆಂದು ಗೊತ್ತಾಗುತ್ತದೆ ಈ ಪರಿಸ್ಥಿತಿಲ್ಲಿ ಹೇಡಿಯಾದ ಇಟಲಿಯು ಜರ್ಮನಿಯ ಮಿತ್ರರಾಷ್ಟ್ರವೆನಿಸುವ ಬದಲು ಅಧೀನರಾಷ್ಟ್ರವೆನಿಸುವ ಸ್ಥಿತಿಗೆ ಒರೆಯಹುದಾದೆ

॥ ಶ್ರೀಜಗದ್ಗುರು ದಾರುಕಾಚಾರ್ಯಾಯನಮಃ ॥

ಮೋಕ್ಷಸಾಧನೆ

(ಲೇ—ಆರ್ ಎಂ. ಮಲ್ಲಿಕಾರ್ಜುನಶಾಸ್ತ್ರಿ ಕಿಪಟೂರು)

ಮುಮುಕ್ಷುಗಳೇ! ನನ್ನ ಸಾತ್ಪರ್ಯವು ಸ್ತ್ರೀಲಿಂಗ ಚರಾಚರವಸ್ತುಗಳೆಲ್ಲವೂ ಎಲ್ಲಿಂದ ಬಂದವು ? ಜೀವಿಗಳು ಮರಣಾನಂತರ ಎಲ್ಲಿಗೆ ಹೋಗುವುವು ? ಲಕ್ಷೋಪಲಕ್ಷ ಜನನಮರಣಗಳು ಪ್ರತಿದಿನವೂ ಸಂಭವಿಸುವವಲ್ಲಾ! ಇವೆಲ್ಲಾ ಹೇಗೆ ಸಂಭವಿಸುವವು ? ಯಾರ ಇಚ್ಛೆಕ್ಕಾಗಬಹುದು ? ಈ ವಿಷಯಗಳನ್ನೂ ಸಾವಧಾನದಿಂದ ವಿಚಾರಿಸಿ ಮನಸ್ಸಿನಲ್ಲಿ ತಿಳಿಸಿಕೊಳ್ಳಬೇಕು. ಸಂಶಯವಿಲ್ಲದಂತೆ ಮಾಡಿಕೊಳ್ಳುವುದೇ ಪ ನುಸ್ಯ ಜನ್ಮದ ಮುಖ್ಯೋದ್ದೇಶವಾಗಿದೆ ಸ್ವಜನೇ ?

ಯಾವ ಮನುಷ್ಯರು ಜನಸಾಮಾನ್ಯರಿಗೆ ಅಗತ್ಯವಾದ ಶಾಸ್ತ್ರಗಳನ್ನು ಕಲಿತು ಅವುಗಳಲ್ಲಿಯೂ, ಶಬ್ದ ಯೋಗ್ಯವಾದ ಕಾವ್ಯ ಇತ್ಯಾದಿಗಳಲ್ಲಿಯೂ, ಪರಿಣತಿಯನ್ನು ಕಲಿತು ಬಿದ್ದ ಸರ್ಗ ಅವನ ಜನ್ಮವು ಸಾರ್ಥಕವಾಯಿತು ಎಂದು ಹೇಳಬಹುದು. ಅಷ್ಟೇ ಅಲ್ಲದೆ ಭೋಜನ, ಉಚ್ಚಾವಚ ವಸ್ತ್ರಾಲಂಕಾರ ಇವೇ ಮೊದಲಾದ ವುಗಳಿಂದ ತಮ್ಮ ಮನಸ್ಸನ್ನು ಸಂತೃಪ್ತಗೊಳಿಸಿಕೊಳ್ಳುವುದಕ್ಕಾಗಿ ಗಾಡು ಪುಟಾರಗಳ ನಿರ್ಮಾಣಮಾಡುವುಗಳನ್ನು ಕ್ರಿಯೆಯಿಂದಲೇ ಕಲ್ಪಿಸಿಕೊಳ್ಳಬಲ್ಲವು ಮನುಷ್ಯಂ ಅವರೀತಿಯಾಗಿ ಮಾಡಿಸುವುದಕ್ಕೆ ತಮ್ಮ ಯೋಗ್ಯತಾನುಸಾರ ಗುಡಿಸಲು, ಹೆಂಚಿನಮನೆ, ಜಪಸಾಮಾನ ಹಸುಗಳನ್ನು ಕಟ್ಟಿಕೊಂಡು ನ್ಯಾಯಮಿರ್ಗಳಿಂದ ಆಸ್ಯಾಬಿಂದಲೋ ಜೋಗಾಸಾನುಗಳನ್ನು ಸಂಪಾದಿಸಿಕೊಳ್ಳವರ ವ್ಯಾಪಾರಗಳು ಸ್ವೇಚ್ಛೆಯಿಂದ ಪಕಾರ ಪಕ್ಷ ತನ್ನಷ್ಟಕ್ಕೆ ಮನುಷ್ಯರು ಸಹ ಲೌಕಿಕ ಸಾಮಾನ್ಯಾಭಿಪ್ರಾಯಕ್ಕೆ ಒಳಪಟ್ಟಿರುವ ಸರ್ವ ಜೀವಿಗಳೂ ಸ್ವಭಾವತಃ ಮರಣವು ಸರ್ವ ಜೀವಿಗಳಿಗೂ ಸಮಾನವಾಗಿ ಇರುವ ಸಾಮಾನ್ಯ ಸ್ಥಿತಿಯು. ಇಂಥವುಲ್ಲಿ ಸಾಮಾನ್ಯ ಮನುಷ್ಯರಿಗೂ ಪಶುಗಳಿಗೂ ಏನು ವ್ಯತ್ಯಾಸವಿದೆಯೆಂದು ಹೇಳಾಣ! ಮಾನವ ಜನ್ಮಸ್ಯ ಸಫಲ್ಯ ಜನ್ಮಗಳಿಗಿಂತ ಉತ್ತಮವಾದುದಂಬಂತವನ್ನು ಹೇಗೆ ನಿರ್ಧರಿಸಬೇಕು ? ಮನುಷ್ಯನಿಗೆ ಇರುವ ಬುದ್ಧಿಯ ಇತರ ಜೀವಿಗಳಲ್ಲಿ ಎದ್ದಿಗಿತಲೂ ಅಸೇಕಪಾಲು ತಿರಿಕೆವಂಬುದಿಷ್ಟೇನೋ ಒಪ್ಪಿಕಾರ್ಯೋಗ! ಆದುಗೂ ಕೇವಲ ಬುದ್ಧಿಶಕ್ತಿಯ ಬಲದಿಂದಲೇ ಮನುಷ್ಯರು ಉತ್ತಮರೆಂದು ಹೇಳಲಾಗುವುದಿಲ್ಲ ಪ್ರತಿಯೊಬ್ಬನೂ ಎಷ್ಟೆಷ್ಟುಮಟ್ಟಿಗೆ ಬುದ್ಧಿಶಕ್ತಿಯನ್ನೂ ಹೆಚ್ಚಿಸಿ ಪಶು ಕರ್ತವ್ಯಗಳನ್ನು ಕಡಿಮೆಮಾಡಿ ಮಾನವಧರ್ಮವಾದ ಕಾರ್ಯಗಳನ್ನು ಮಾಡುತ್ತಾನೆಯೋ, ಅಷ್ಟಷ್ಟು ಉತ್ತಮನೆಂದು ಹೇಳಬಹುದು ಮನುಷ್ಯ ಜನ್ಮದ ಮುಖ್ಯೋದ್ದೇಶವು ಮೊದಲೇ ಸಂಕ್ಷೇಪಿಸಿದೆ ಯಷ್ಟೆ. ಇನ್ನು ಅದನ್ನು ವಿವರಿಸೋಣ— ಮನುಷ್ಯರು ತಮಗಿರತಕ್ಕ ಬಲದಿಂದ ಇತರ ಯಾವ ಪ್ರಾಣಿಗೂ ಸಾಧ್ಯವಲ್ಲದ ಕಾರ್ಯಗಳನ್ನು ಸಾಧಿಸಲು ಶಕ್ತರಾಗಿರುವರು ಇಂಥಹ ಅತ್ಯತ್ತಮವಾದ ಶಕ್ತಿಯನ್ನು ಅನ್ಯಾಯಮಾರ್ಗವು ಭೂಷಣವಲ್ಲ ಅತ್ಯುತ್ತಮವೆಂಬಿಷ್ಟು ಸಮಸ್ತ ಅನುಕೂಲತಾವಿಶಿಷ್ಟವಾಗಿರುವ ಈ ಮಾನುಷ ಜನ್ಮವನ್ನು ಸಾರ್ಥಕಮಾಡಬೇಕಾದದ್ದು ಸರ್ವ ಸ್ತ್ರೀ ಪುರುಷರ ಅದ್ಯಕರ್ತವ್ಯವಾಗಿದೆ ಸಾರ್ಥಕಮಾಡುವುದು ಹೇಗೆ ? ಬುದ್ಧಿಶಕ್ತಿಯನ್ನೆಲ್ಲಾ ಉಳಿಯೋಗಿಸಿ ಯುದ್ಧದ ಹಡಗು, ಆಕಾಶವಿಮಾನ, ಫಿರಂಗಿ ಮುಂತಾದುವುಗಳನ್ನು ನಿರ್ಮಿಸಿ, ಒಬ್ಬರನ್ನೊಬ್ಬರು ಬಡಿದು ಕಡಿದು ಮಡಿದರೆ ಇಲ್ಲವೇ ನೋಸ, ಕಳ್ಳತನ ಕುತಂತ್ರಗಳಿಂದ ಅಪರಿಮಿತವಾದ ಹಣವನ್ನು ಗಳಿಸಿದರೆ ಇಲ್ಲವೇ ಬೇಕಾದಷ್ಟು ಹೆಣ ಖರ್ಚುಮಾಡಿ ಸುಂದರ ಸ್ತ್ರೀಯರನ್ನು ರಮಿಸಿದರೆ ಮನುಷ್ಯ ಜನ್ಮವನ್ನು ಸಾರ್ಥಕಮಾಡಿದಿ ಹಾಗಾಯಿತೇ ? ಭೋಗಾದಿಗಳಿಗೆ ಅನುಕೂಲಿಸುವಂತೆ ಪ್ರಕೃತಿಯಲ್ಲಡಗಿರುವ ವಿದ್ಯುಶ್ಶಕ್ತಿಯೇ ಮೊದಲಾದುವುಗಳನ್ನು ಕಂಡುಹಿಡಿಯುವುದರಲ್ಲಿಯೇ ಜೀವ ಮಾತ್ರವನ್ನು ಸಂಪೂರ್ಣವಾಗಿ ಕಳೆದುಬಿಟ್ಟರೆ ಮನುಷ್ಯರು ಅತ್ಯುತ್ತಮರೆನಿಸಿಕೊಳ್ಳುವರೆ ? ಪಾಶ್ಚಾತ್ಯರು ತಮ್ಮ ಬುದ್ಧಿಶಕ್ತಿಯನ್ನೆಲ್ಲಾ ಭೌತಿಕಶಾಸ್ತ್ರಪರಿಶೋಧನೆಯಲ್ಲಿ ಉಪಯೋಗಿಸಿ ಅನೇಕ ಸೌಕರ್ಯಗಳನ್ನು ಪ್ರಪಂಚದ ಜನಗಳಿಗೆ ಉಂಟು ಮಾಡಿದ್ದಾರ್ಯೂ ಮನುಷ್ಯ ಜನ್ಮವನ್ನು ಸಾರ್ಥಕಪಡಿಸಿಕೊಳ್ಳುವುದಕ್ಕೆ ಯಾವ ಸೌಕರ್ಯಗಳೂ ಕಲ್ಪಿಸಿರುವುದಿಲ್ಲ ಬುದ್ಧಿಶಕ್ತಿ ಯನ್ನು ಹೆಚ್ಚಿಸುವುದು ಸರ್ವರ ಕರ್ತವ್ಯವಾದರೂ, ಅದನ್ನು ನರಜನ್ಮ ಸಾರ್ಥಕತೆಗೆ ಸಹಕಾರಿಯಾಗುವಂತೆ ಅಧಿಕಪಡಿಸಿದರೆ ಪ್ರಯೋಜನವೇ ಹೊರತು ಉಗಿನ ಕಲ ಸಾಧಾರಣ ಬುದ್ಧಿವಂತರಾದ ವಿದ್ಯಾವಂತರ ವಿದ್ಯೆಯು ನಿಜವಾದ ವಿದ್ಯೆಯೆನಿಸಿಕೊಳ್ಳುವುದಿಲ್ಲ ಈಗಿನ ಕಾಲದಲ್ಲಿ ಉದರಂಭರಣಕ್ಕೂ ಇತರ ಅನೇಕ ವಿಧಕ ಸೌಕರ್ಯಗಳಿಗೂ ಅನುಕೂಲಿಸುವ ದೆಕ್ಕೆ ತಕ್ಕ ಬುದ್ಧಿ ನಿರ್ಮಿಸಿಕೊಳ್ಳುವುದೇ ಕಾರ್ಯತಃ ಸಖ ಸಂತೋಷವನ್ನು ಅನುಭವಿಸುವುದಕ್ಕೆ ಅನುಕೂಲಿಸುವ ವಿದ್ಯೆಯು ನಿಜವಾದ ವಿದ್ಯೆಯಾಗಲಾರದ ಅವಿದ್ಯಾನಾಶಕವಾದ ವಿದ್ಯೆಯನ್ನು ಸಂಪಾದಿಸಿ ಅವಿದ್ಯಾ ನಿವಾರಣೆಗೆ ಸ್ಪಲ್ಪವೂ ಪ್ರಯತ್ನಪಡದೆ ಇದ್ದಲ್ಲಿ ಅವರ ವಿದ್ಯೆಯನ್ನು ಕಲಿತವರಾದಾಗ್ಯೂ ಅದನ್ನು ಸರಿಯಾಗಿ ಉಪಯೋಗಿಸಿ ಸುಖಿಸಲಾರದೆ ಅನೇಕ ಕಷ್ಟನಷ್ಟಗಳಿಗೆ ಗುರಿಯಾಗಿ ಅಸಮಾಧಾನಪಡುತ್ತಾರೆ. ಹಾಗಿರುವುದಿಲ್ಲ ಸಾಧಾರಣ ಬುದ್ಧಿವಂತರಾದ ಪಶುಗಳ ಸಮಾನರೆಂದು ಹೇಳಬೇಕು ಕೆಸಲ ಲೌಕಿಕವಿದ್ಯೆಯಲ್ಲಿ ಪಾರಂಗತರಾಗಿ ನಾವು ವಿದ್ಯಾನಂಕರೆಂದು ಗರ್ವಿಸಿದರು ಅವರಿಗಿಂತಲೂ ಸುಖಿಸಿಕೊಳ್ಳುವುದರಲ್ಲಿ ಪಶುಗಳೇ ಮೇಲು ಹಾಗೆಂದರೆ ಪಶುಗಳಿಗೆ ಯಾವ ವಿದ್ಯೆಯೂ ಇಲ್ಲವೆಂದು ಸಂತೋಷಪಡುವ ಮೆಚ್ಚಿದ ಜಸರು ಬುಡಿಗೆಯ ಉಡಿಗೆ ತೊಡಿಗೆಗಳನ್ನು ಧರಿಸಿಕೊಂಡು ಶ್ರೀಸಂತರಲ್ಲಿ ಬೆರೆತು ಸಂತೋಷ ಪಟ್ಟುಕೊಂತಾಗುವರು ಅತ್ಯಂತ ವಿದ್ಯಾವಂತರು ತಾವು ಕಲಿತ ವಿದ್ಯೆಯಿಂದ ಜನನ ಮರಣ ಪ್ರವಾಹರೂಪ ಸಂಸಾರ ಚಕ್ರದ ಸುಳಿಯಿಂದ ನಿರ್ಮೋಚನೆಯನ್ನು ಹೊಂದಲು ಸಾಧನಗಳನ್ನೂ ತಾವು ಮಾಡಿಕೊಳ್ಳಬೇಕ ಬ್ಲದೆ, ಅಜ್ಞರಾದ ಇತರರಿಗೂ ಅನರವರ ಹೋಗ್ಯ ತಾವು-ಸಾಧ ಸತ್ಸಾರ್ಗವಲಂಬನೆಗೆ ತಕ್ಕ ಪಡ್ಡೋಧೆ ಯನ್ನು ಬೋಧಿಸ್ತಿರಬೇಕು ನಾವು ವಿದ್ಯಾವಂತರಾಗಿ ನವ್ಯ ಜೀವನವನ್ನೂ ಸಂಪಾದಿಸಿ ಇತರರನ್ನು ವಿದ್ಯಾವಂತರನ್ನಾಗಿಯೂ ಜ್ಞಾನವಂತರನ್ನಾಗಿಯೂ ಮಾಡಿದರೆ ನನ್ನ ವಿದ್ಯೆಯು ಸಾರ್ಥಕವಾಗ ವದು ಇಲ್ಲದಿದ್ದರೆ ಅತಿ ಶ್ರಮದಿಂದ ಧನವನ್ನು ಸಂಪಾದಿಸಿ ಮರಣಾವಧಿ ಭೂಮಿಯಲ್ಲಿ ಗೋಸ್ಯವಾಗಿ ಹೂಳಿಟ್ಟಿದ್ದು ಒಬ್ಬರಿಗೂ ಆ ಧನವಿರುವ ಸ್ಥಳವನ್ನು ತೋರಿಸದೆ ಪ್ರಾಣಬಿಟ್ಟವನಂತಾಗುವದು ಈಗಿನ ಕಾಲದ ಸಂಡಿತರು ತಮ್ಮ ವಿದ್ಯೆಯನ್ನು ಇತರರಿಗೆ ಬೋಧಿಸುವದಂತಾ ಅಪೂರ್ವ ತಾವಾದರೂ ಅದರಿಂದ ಪ್ರಯೋಜನ ಹೊಂದುತ್ತಾರೆಯೇ ? ಅದೂ ಇಲ್ಲ. ಉದರಂಭರಣ ಯೋಚನೆಯಲ್ಲಿ ಉದ್ಯೋಗಸ್ಥರ ಆಶ್ರಯ, ಕೌರೋಹಿತ್ಯ, ಜನರ ದಾಕ್ಷಿಣ್ಯ ಇತ್ಯಾದಿಗಳಲ್ಲಿ ಕಾಲವನ್ನು ಕಳೆಯಬೆಯವರು. ಮತ್ತೆಲೆಂದರು ತಮ್ಮ ವಿದ್ಯಾ ಶಕ್ತಿಯನ್ನು ಕೇವಲ ವಾದಕ್ಕೂ ಪರರ ಅಹಿತಕಕ್ಕೂ ಉಪಯೋಗಿಸುವರು. ಆದ್ದರಿಂದ ಪಂಡಿತರಾದವರು ಹೆಚ್ಚು ಹೆಳಿಸಿಕೊಳ್ಳದೆ ಸ್ವಾರ್ಥತೆಯನ್ನೂ ನಾವಾವಿಗಳನ್ನೂ ಬಿಟ್ಟು ಕಾಮರಹಿತ್ಯವನ್ನು ಉದ್ದಾರಮಾಡಿ, ತಾವೂ ಮೋಕ್ಷವನ್ನು ಪಡೆಯುವದೇ ಆವರ ಧರ್ಮವೆಂದು ತಿಳಿಯಬೇಕು.

ಪ್ರಪಂಚದಲ್ಲಿರುವ ಸಕಲೂ ಭೋಗ್ಯಾದಿಕಾರಿಗಳು. ಮೋಕ್ಷನೆಂದರೇನು? ಮೋಕ್ಷವನ್ನು ಹೊಂದುವದು ಹೇಗೆ ?

ಜನನಮರಣಾದಿಗಳಿಂದ ಕೂಡಿದ ಸಂಸಾರವೆಂಬ ಘೋರಶಕ್ತದ ಸುಳಿಗೆ ಸಿಕ್ಕದಂತಾಗುವದೇ ಮೋಕ್ಷವು. ಶ್ರವಣ, ಮನನ, ನಿದಿಧ್ಯಾಸನಾದಿಗಳಿಂದಲೂ, ವಿವೇಕ, ವೈರಾಗ್ಯ, ಷಟ್‌ಸಂಪತ್ತಿ ಮೊದಲಾದುವುಗಳಿಂದಲೂ ಸಹಜನಾಗಿರುವವನಿಗೆ ಬ್ರಹ್ಮನಿತ್ಯನಾದ ಸದ್ಗುರುವಿನ ಅನುಗ್ರಹದಿಂದ ಮೋಕ್ಷಸಾಧನವಾಗುವದಲ್ಲದೆ ಮತ್ತು ವರೀತಿಯಿಂದಲೂ ಆಗಲಾರದು.

ವಾಚಕಮಹಾಶಯರೇ, ಗ್ರಂಥಗಳ ಸಹಾಯದಿಂದಲೂ ಉಕಪತ್ತವಾದ ಜ್ಞಾನದಿಂದಲೂ ತತ್ತ್ವಜ್ಞಾನವನ್ನು ಪಡೆದು ಕೃತಾರ್ಥರಾದೆವೆಂದು ಯಾರಾದರೂ ಹೇಳುವುದಾದರೆ ತನ್ನ ಜುಟ್ಟನ್ನು ತಾನೇ ಹಿಡಿದು ಆಕಾಶಕ್ಕೆ ನೆಗೆದವನನ್ನು ಕಣ್ಣಾರೆ ಕಂಡೆವೆಂದು ಏಕೆ ಹೇಳಬಾರದು? ಇವೆರಡೂ ಅಸಂಗತವು. ಗುರುವೆಂದರೆ ಶಿವನ ಹೃದಯಾಕಾಶವನ್ನು ವ್ಯಾಪಿಸಿದ್ದ ಅಜ್ಞಾನ ರೂಪವಾದ ಕತ್ತಲೆಯನ್ನು ನಾಶಮಾಡಿ ಸುಜ್ಞಾನ ಸೂರ್ಯಪ್ರಭೆಯನ್ನು ಬೆಳಗಿಸತಕ್ಕ ಯಾವ ಜ್ಞಾನ ಮೂರ್ತಿಯೋ ಅಂತಹ ಜ್ಞಾನವಳ್ಳುವನೇ ಗುರುವು. ಜಗತ್ತಿನಲ್ಲಿ ಶಕ್ತಜ್ಞಾನವನ್ನು ಬೋಧಿಸತಕ್ಕ ಗ್ರಂಥಗಳು ಅನೇಕವಿದ್ದರೂ ಮತ್ತು ಮನುಷ್ಯನಿಗೆ ಸ್ವಾಭಾವಿಕವಾದ ಈಶದತ್ತವಾದ ಜ್ಞಾನವಿದ್ದರೂ, ಇವುಗಳ ಸಹಾಯದಿಂದ ಶಕ್ತಜ್ಞಾನವು ಆಗಲಾರದು. ಜ್ಞಾನಬೋಧಕ ಗ್ರಂಥಗಳು ಅನೇಕವಿರುವದೂ ಸಹಜ. ಆದರೆ ಆ ಗ್ರಂಥಗಳ ಯಥಾರ್ಥವಾದ ಸಾರವನ್ನು ಗ್ರಹಣ ಮಾಡುವ ಒಂದಾನೊಂದು ವಿಲಕ್ಷಣ ಶಕ್ತಿಯು ಒಬೆ ಬೇಕಾದರೆ ಆನು ಗುರುವಿಂದಲೇ ಸಾಧ್ಯವು. ಏಕೆಂದರೆ—ಪಾರಮಾರ್ಥಿಕ ಮಾರ್ಗವನ್ನು ಸದ್ಗುರುವಿನ ಹೊರತಾಗಿ ಆರೂ ಆರಿಯರು ಜನ್ಮಾಂಧನಿಗೆ ನಸ್ತು ಸ್ವರೂಪಜ್ಞಾನವು ಹೇಗೆ ಆಗುವದಿಲ್ಲವೋ ಮತ್ತು ಕಣ್ಣಿದ್ದರೂ ಅಂಜನ ಸಹಾಯವಿಲ್ಲದೆ ನಿಧಿಯು ಹೇಗೆ ಕಾಣುವದಿಲ್ಲವೋ ಕದ್ದಷ್ ಗುರೂಪದೇಶವಿಲ್ಲದವನಿಗೆ ಕಲ್ಪ ಕಲ್ಪಾಂತರದಲ್ಲಿಯೂ ಸಹ ತತ್ತ್ವಜ್ಞಾನವಾಗುವದಿಲ್ಲ ಮರೆಯೋಗಿ ಅಗ್ನಿಯಿದ್ದರೂ ಅದನ್ನು ಘರ್ಷಿಸಿ ತೆಗೆಯುವವರೆಲ್ಲಿದ್ದಾರೆ ಕನ್ನಿಂದ ತಾನೇ ಹೇಗೆ ವೃತ್ತವಾಗುವದಿಲ್ಲವೋ ಹಾಗೆಯೇ ಕನ್ನಲ್ಲಿದ್ದ ಶಿವಕಲೆಯು ಗುರುವಿಲ್ಲದೆ ವೃತ್ತವಾಗದು ಅದರಂತೆ ಸದ್ಗುರುವಿನ ಅನ ಗ್ರಹದಿಂದ ಶಕ್ತಜ್ಞಾನವನ್ನು ಪಡೆದುಕೊಳ್ಳಬೇಕು. ಶುಕಾದಿಗಳಿಗು ಸರ್ವಸಾಮಾನ್ಯರೆ? ಅವರು, ವೇದಾರ್ಥವನ್ನು ಜಗತ್ತಿನಲ್ಲಿ ಪ್ರಚಾರಪಡಿಸಿದ ವ್ಯಾಸಮಹರ್ಷಿಗಳ ಮಕ್ಕಳಾಗಿದ್ದು ಅನೇಕ ಶಾಸ್ತ್ರಾಧ್ಯಯನವನ್ನು ಮಾಡಿದ ನೈರಾಗ್ಯಶಿಖಾಮಣಿಗಳು. ಆದರೂ ಮುಂದೆ ತತ್ತ್ವ ಜ್ಞಾನಪ್ರಾಪ್ತಿಗಾಗಿ ಜ್ಞಾನವುಂಗವರಾದ ಜನಕಮಹಾರಾಜ ಜನಬಳಿಗೆ ಹೋಗಬೇಕಾಯಿತು ಅದುಕಾರಣವೇ "ಗುರು ವಿಲ್ಲದ ವಿದ್ಯೆ ಬರಿದು, ಗುರುವೆ ಅರಿವು" ಎಂದು ಜ್ಞಾನಿಗಳು ಸಾರಿರುವರು. ಅಲ್ಲದೆ ಕ್ರುತಿದೇವಿಯೂ ಸಹ "ನಗುರೋರಧಿಕಂ" "ನಾಸ್ತಿತತ್ತ್ವಂ ಗುರೋಃಪರಂ" ಇತ್ಯಾದಿ ವಾಕ್ಯಗಳಂದ ಗುರುವಿನ ಸರ್ವೋತ್ಕೃಷ್ಟತೆಯನ್ನು ಸಾರಿದ್ದಾಳೆ ಅಲ್ಲದೆ ಶ್ರೀ ಗುರುವಿನ ವಿಷಯವಾಗಿ ಶಿವರಹಸ್ಯದಲ್ಲಿ —ಅಪ್ರತ್ಯಕ್ಷೋಪ ಮಹಾದೇವಃ ಸರ್ವೇಷಾಮಾತ್ಮಮಾಯಯಾ ಪ್ರತ್ಯಕ್ಷೋಪ ಗುರುಃ ದೇಣವರ್ಷತೇ ಭಕ್ತಿ ಸಿದ್ಧಯೇ!! ಎಂದು ಹೇಳಿರುವದು ಅದುಕಾರಣ ತನ್ನ ಪುರೋಭಿವೃದ್ಧಿಯನ್ನು ಬಯಸತಕ್ಕ ವನು ಇಂತಹ ಗುರುಮೂರ್ತಿಯನ್ನು ಆಶ್ರಯಿಸಬೇಕು.

ಯಾವಕ್ಷಣಂತ ನಾವು ಮೋಹಮದಾದಿಗಳಲ್ಲಿಯೇ ನಮ್ಮ ಮನಸ್ಸನ್ನು ಪ್ರವೃತ್ತಿಗೊಳಿಸುತ್ತಿರುವೆವೋ ಆಕ್ಷಣಂತ ಮೋಕ್ಷವೆಂಬುದು ನಮಗೆ ಬಹು ದೂರದಲ್ಲಿರುವದು. ಮೋಕ್ಷವು ಸಾಧಾರಣಾಗಿ ಆಸಾಧ್ಯವೆಂದು ತಿಳಿದು ಆಜ್ಞರಾದೇಕೆಯು ಆ ಭೃಯತ್ನವನ್ನೇ ಬಿಟ್ಟು ಕೇವಲ ಪ್ರಾಪಂಚಿಕ ಸುಖವೇ ಅತ್ಯತ್ತಮವಾದ ಸುಖವೆಂದು ತಿಳಿದಿರುವರು. ಇಂತಹವರು ಮುಸ್ತ ವಿವೇಕ ಹೀನರು ಪ್ರಾಪಂಚಿಕ ಸುಖವ ಕೋಲ್ಮಿಂಚಿನಂತೆ ಕ್ಷಣಿಕವಾದುದು. ಒಂದು ಮಹೋ ತ್ಕರವಾದುದೂ ಯಾವ ಮನುಷ್ಯನೇ ಆಗಲಿ ನಿಶ್ಚಿಂತನಾಗಿ ಕುಳಿತು ಸುಖವನ್ನನುಭವಿಸಲಾರದು. ಅಥವಾ ಅನುಭವಿಸಿಗಲ್ಲಿ ಒಂದು ಗಳಿಗೆಗೆ ಉದ್ವೇಕಿತವಾದ ಸುಖ ಶಯ್ಯೆಯಲ್ಲಿದ್ದು ಉತ್ತರಕ್ಷಣದಲ್ಲಿಯೇ ದುಃಖಯೋಗವನು ಇದು ಕಠತಲಾಮಲಕದಂತೆ ಸರ್ವರ ಅನುಭವದಲ್ಲೂ ಇದ್ದೇ ಇರುವದು. ಹೀಗೆ ಸುಖದುಃಖಮಯವಾಗಿರುವ ಸಂಸಾರದಲ್ಲಿ ಜನರೆಲ್ಲರೂ ಬಹುಕಷ್ಟಪಡುತ್ತಿದ್ದಾಗ್ಯೂ ಕಷ್ಟನಿವಾರಣೆಗೆ ಪ್ರಯತ್ನವನ್ನೇ ಮಾಡದೆ ಮಂದಮತಿಗಳಾಗಿರುವದರ ವಿಷಯವಾಗಿ ಎಷ್ಟು ಪತ್ರಾಶ್ಚಾಸಪಟ್ಟರೂ ತೀರದಾಗಿದೆ ಧನ-ವಿದ್ಯೆ-ಆರೋಗ್ಯ ಮೊದಲಾದುವುಗಳಿಂದ ಸುಖವಿರಬೇಕೆಂದು ಸುಳ್ಳುಜ್ಞಾನಗಳಂ ಸಹ ಸ್ವಾರ್ಥಪರತೆಯೇ ಮೊದಲಾದ ದುರ್ಗುಣಗಳಂ ಸಹ ಕೂಡಿ ಮಡಿಧರ ಜೊತೆಯಲ್ಲಿ ತಾವೂ ಬಿದ್ದು ಮಿಥರಾಗಿರುತ್ತಿದ್ದರೂ. ಆಗುತ್ತಿರುವುದನ್ನೂ ನೋಡಿದರೆ ಯಾರಿಗೆ ತಾನೆ ವೈಸನಾಗಾಲಾರದು ?

॥ ಪ್ರಪಂಚವು ಯಾವಾಗ ನಿರ್ವಿತವಾಯಿತು ವಕ್ಕೆ ನಿರ್ವಿಷವಾಯಿತು ? ಎಂಬುದು ಸಕಲ ಳಲ್ಲಾ ಗುಣನಿಧಿಯಾದ ಅದಿಪುರುಷನಾದ ಪರತಿಪಾಗಿ ತಿಳಿದು ವೆದೇ ಹೊರತು ಮಿಕ್ಕವರದಕ್ಕೆ ಯಲಾಕ್ಕಾಗ

ಪ್ರತಿಯೊಬ್ಬ ಮನುಷ್ಯನೂ ಅಹಂಕಾರವಶನಾಗಿ " ನಾನು ಮಾಡುತ್ತೇನೆ." ಎಂಬುದಾಗಿ ತಿಳಿದಿರುವನು. ವಾಸ್ತವವಾಗಿ ಪ್ರಾಣಿಗಳೆಲ್ಲವೂ, ಪರಮಿವನ ಅಂಗಗಳಾದ್ದರಿಂದ ಪರಮಿವನೇ ನಾನು ಮಾಡುವ, ಅನುಭವಿಸುವ ಸಮಸ್ತ ವಿಷಿತ್ರ ವ್ಯಾಪಾರಗಳೂ ಕಾರಣಸಾಗಿದ್ದಾನೆ ಪರಮಿವನ ಕ್ರಿಯಾಶಕ್ತಿಯಿಂದ ಹುಟ್ಟಿದ ಪಂಚಭೂತಗಳು ಪರಮಿವನ ಇಚ್ಛಾಕ್ರಿಯಾ ಸಹಾಯದಿಂದ ಪ್ರಪಂಚವೆನ್ನಿಸಿಕೊಂಡಿಯುವುದು ಪ್ರಕೃತಿ ಪುರುಷರ ಸಂಯೋಜನೆಗೆ ಪ್ರಪಂಚವಾಗಿರುವುದು. ಪುರುಷನ ಸಹಾಯವು ಇಲ್ಲದೇ ಇದ್ದಲ್ಲಿ ಪ್ರಕೃತಿಯು ಜಡವಾದ್ದರಿಂದ ತಾನು ತನ್ನನ್ನು ತಿಳಿಯಲಾರದು. ಬ್ರಹ್ಮಾಂಡದ ಸೃಷ್ಟಿಸ್ಥಿತಿಗಳು ಅವಿ ಪುರುಷನ ಇಚ್ಛಾ, ಕ್ರಿಯಾ, ಜ್ಞಾನ ಈ ಮೂರು ಶಕ್ತಿಗಳ ಅಧೀನವಾಗಿವೆ. ಆದ್ದರಿಂದ ಈ ಪ್ರಪಂಚದಲ್ಲಿ ನಡೆಯುತ್ತಿರುವ ವಿಚಿತ್ರ ವ್ಯಾಪಾರವೆಲ್ಲವೂ, ಅವನ ಅಧೀನವಾಗಿದೆ. ಭಗವದ್ಭಾವೈಕಾರವೇ ಸಮಸ್ತ ಪ್ರಪಂಚಗಳ ವ್ಯಾಪಾರಕ್ಕೆ ಕಾರಣವೆಂದೂ, ಸಮಸ್ತ ಪ್ರಪಂಚಗಳೂ, ಅಕಾಶ್ಯತವಾದುವೆಂದೂ ತಿಳಿಯಬೇಕು. ನಮ್ಮ ಆರ್ಯಾವರ್ತದಲ್ಲಿದ್ದ ಮಹರ್ಷಿಗಳು ನಮಗೆ ತತ್ತ್ವಶಾಸ್ತ್ರವನ್ನು ಕರುಣಿಯಿಂದ ದಯಪಾಲಿಸಿರುವರು ಇಂತಹ ಮಹಾಶಾಸ್ತ್ರದ ಶ್ರವಣಮನನ ವಿಧಿಪ್ರಸಾರಕ್ಕಾಗಿ ಉಟ್ಟಾಗತ್ಕ ಜ್ಞಾನವೇ ಜ್ಞಾನವು ಇದರಿಂದ ಹೊರಬಹುದಾದ ಸುಖವೇ ಸಹಜಸುಖವು

ಎಲೈ ಗುಣೈಕ ಪಕ್ಷಪಾತಿಯಾದ ಸಾಂಬಮೂರ್ತಿಯೆ! ನಿನ್ನ ಧ್ಯಾನವು ಚಂಚಲಚಿತ್ತರಾದ ನಮ್ಮಲ್ಲಿ ಅಚಲವಾಗಿ ನಿಲ್ಲುವಂತೆ ಮಾಡು! ನಿನ್ನ ಧ್ಯಾನದಲ್ಲಿ ಅಸಕ್ತರಾಗಿ ವಿಷಯಾಸಕ್ತಿಯನ್ನು ದೂರೀಕರಿಸುವಹಾಗೆ ವೈರಾಗ್ಯಸಂಪತ್ತನ್ನು ಕರುಣಿಸು' ನಿನ್ನ ಧ್ಯಾನದಲ್ಲಿ ಲೀನಚಿತ್ತರಾಗಿ, " ನಾನು, ನನ್ನದು " ಇತ್ಯಾಕಾರಕ ಜ್ಞಾನವನ್ನು ಮರೆಯುವಹಾಗೆ ದಿವ್ಯನೇತ್ರವನ್ನು ದಯಪಾಲಿಸು' ಈರ್ಷ್ಯಾಸೂಯೆ, ಅಹಂಕಾರ ಮೊದಲಾದ ದುರ್ಗುಣಗಳು ನಮ್ಮನ್ನು ಸ್ಪರ್ಶಿಸದಹಾಗೆ ವರವನ್ನು ಅನುಗ್ರಹಿಸು! ಎಲೈ ಭುವಮಯನೆ! ನಿನ್ನ ಭಾವನೇ ನಮ್ಮ ಹೃದಯದಲ್ಲಿ ಸರ್ವದಾ ಬೆಳಗುತ್ತಿರಲಿ ಎಂಬ ವರ ಪ್ರದಾನ ಮಾಡು! ಇದೇ ನನ್ನ ಪ್ರಾರ್ಥನೆ

ಬೆಳಗಾಂವ ಅಯುರ್ವೇದಕಾಲೇಜಿನಲ್ಲಿ ಪಂಡಿತ ಯಲ್ಲಪ್ಪನವರ ಭಾಷಣ

ಬೆಳಗಾಂವನಗರದಲ್ಲಿ ಶ್ರೀಮಾನ್ ಕಂಕಣವಾಡಿ ಬಸಪ್ಪನವರಿಂದ ಸ್ಥಾಪಿಸಲ್ಪಟ್ಟಿರುವ ಆಯುರ್ವೇದಕಾಲೇಜಿಗೆ ಜೀನೇಂದ್ರಾಬಿಟಿಯಲ್ಲಿರುವ ಅಬಲಭಾರತ ಆಸಂಬ ಶೀಯ ಆಹಿಂಸಾಯುರ್ವೇದ ಮಹಾಸಂಘದ ಅಧ್ಯಕ್ಷರಾದ ಸ್ವಾದ್ವಾದಭಿಷಜ್ಞಾಣಿ ಪಂಡಿತ ಯಂ ಯಲ್ಲಪ್ಪನವರು ಭೆಟ್ಟಿಕೊಟ್ಟರು ಆಗ್ಗೆ ಕಹಾಪೂರದೊಳಗಿನ ಪ್ರಸಿದ್ಧ ವೈದ್ಯರಾದ ಶ್ರೀಮಾನ್ ತವನಪ್ಪ ಅಣ್ಣಾ ಲೇಗಡೆ ಇವರ ಅಧ್ಯಕ್ಷತೆಯಲ್ಲಿ ಸಭೆಯೊಂದು ಆಗ್ಗೆ ೧೦ ಯಲ್ಲಪ್ಪನವರು ಭಾಷಣಮಾಡಿದರು ಅವರು ತಮ್ಮ ಭಾಷಣದಲ್ಲಿ ಆಯುರ್ವೇದವು ಭಾರತದೇಶದಲ್ಲಿ ಅತಿ ಪ್ರಾಚೀನಕಾಲದಿಂದ ಬಂದಿರುವುದೆಂದು ಹೇಳುತ್ತ ಕರ್ನಾಟಕಪ್ರಾಂತ ದೊಳಗಿನ ಕೆಲಜನ ಹಿಂದಿನ ವೈದ್ಯರುಜರ ಗುರ್ತುಗಳನ್ನು ಹೇಳಿದರಲ್ಲದೆ, ಇನ್ನೂ ಪ್ರಚಾರದಲ್ಲಿರದ ಎಷ್ಟೋ ಪ್ರಾಚೀನ ಗ್ರಂಥಗಳ ವಿಷಯಗಳನ್ನು ವಿವರಿಸಿದರು. ಶ್ರೀ ಮಹಾವಾದಿ ಸಮಂತ್ರ ಭದ್ರಾಚಾರ್ಯವಿರಚಿತವಾದ 'ಸಿದ್ಧಾಂತರಸಾಯನಕಲ್ಪ" ವೆಂಬ ರಸವಾದಗ್ರಂಥದ ಸಂಸ್ಕೃತವನ್ನು ವಿವರಿಸುತ್ತ ಈ ಗ್ರಂಥವು ಪುಷ್ಪಾಯುರ್ವೇದವೆಂದೂ, ವೃಕ್ಷಾಯುರ್ವೇದದಲ್ಲಿ ಮೂಲಿಕೆಗಳು ಸರ್ವನಾಶವಾಗುವದರಿಂದ ಹಸಿನೆಂಟುಸಾವಿರ ಜಾತಿಯ ಹೂವುಗಳಿಂದಲೇ ರಸಾದಿಘಾಕುಗಳನ್ನು ಅತ್ಯಂತಿಕರಣ ಮಾಡಿ ಮಹಾರೋಗಗಳನ್ನು ನಾಶಮಾಡಬಹುದೆಂದೂ, ಈ ಗ್ರಂಥದಲ್ಲಿ ಬದ್ಧರಸಪ್ರಯೋಗವಿರುವದೆಂದೂ, ಇದು ಜೈನಾಗಮ ಪರಿಭಾಷೆಯಿಂದ ಅಲಂಕೃತವಾಗಿದೆಯೆಂದೂ ಮೊದಲಾದ ವಿಷಯಗಳನ್ನು ವಿವರಿಸುತ ಇದೇರೀತಿ ಅತಿ ಮಹತ್ವಪೂರ್ಣವೂ ಅತ್ಯಂತ ಪ್ರಾಚೀನವೂ ಆದ ಶ್ರೀಜಗದ್ಗುರುದೇವಣಸಿದ್ಧವಿರಚಿತವಾದ "ಸಿದ್ಧಾಂತರಾಮೃತ" ಗ್ರಂಥದ ವಿವರಣೆಯನ್ನು ಮಾಡುತ್ತ ಆ ಗ್ರಂಥದಲ್ಲಿ " ಸಿದ್ಧಾಂತರಾಮೃತಂಗ್ರಂಥಂ ರೇಷಣಾಸಿದ್ಧಧಾಷಿತಂ " ಎಂದು ಉಲ್ಲೇಖಿಸಿರುವ ದನ್ನು ಹೇಳಿದರು ಆಗ್ಗೆ ಆವರು ಈ ಗ್ರಂಥವು ಬಹು ಜೀರ್ಣವಾಗಿರುವುದೆಂದೂ, ಓಲೆಗಳನ್ನು ತೆಗೆಯಬೇಕಾದರೆ ಹರಿದೀತೆಂಬ ಭಯವು ಒಡುವದೆಂದೂ, ಆದುದರಿಂದ ಇದನ್ನು ಓದುವದೇ ಬಹು ಕಷ್ಟವಾಗಿದೆಯೆಂದೂ, ಇದು ಮೂಲಸಂಸ್ಕೃತಪ್ರತಿದ್ದು ಇದಕ್ಕೆ ಕನ್ನಡದಲ್ಲಿ ನಿಘಂಟಾಕರಿಂಬವರು ಟೀಕೆಯನ್ನು ಬರೆದಿರುವರೆಂದೂ ಈ ಎರಡು ಅಮೂಲ್ಯಗ್ರಂಥಗಳು ಎಲ್ಲಿಯೂ ಸಿಗದೆ ತಮ್ಮಲ್ಲಿಯೇ ಇರುವದೆಂದೂ ಹೇಳಿದರು ಬಳಿಕ ಕನ್ನಡದೇಶದಲ್ಲಿ ಜನ್ಮನೆತ್ತಿದ ವೈದ್ಯರಾಜರ ಹೆಸರುಗಳನ್ನೂ ಅವರು ರಚಿಸಿರುವ ಗ್ರಂಥಗಳ ಹೆಸರುಗಳನ್ನೂ ವಿವರಿಸಿದರು. ಅವೆಲ್ಲ ತಮ್ಮ ವೈದ್ಯಶಾಲೆಯಲ್ಲಿ ಸಿದ್ಧವಾಗಿರುವ ಕೆಲವು ಔಷಧಿಗಳ ವಿಷಯಗಳನ್ನು ವಿವರಿಸಿ ತಮ್ಮ ಅಮೂಲ್ಯಭಾಷಣವನ್ನು ಸಮಾಪ್ತಿಗೊಳಿಸಿದರು. ಒಳಕ ಕಾಲೇಜಿನ ಪ್ರಿನ್ಸಿಪಾಲರಾದ ಶ್ರೀವರ್ಮಾ ಎ ವ್ಹಿ. ಗಳು ತಮಗೆ ಭಾಷಣಕಾರರ ಆಧಾರ ಮನ್ನಿಸುತ್ತ ಶ್ರೀಮಾನ್ ಎಂ. ಯಲ್ಲಪ್ಪವೈದ್ಯರು ಇದುವರೆಗೂ ಪ್ರಯಾಸಪಟ್ಟು ಗ್ರಂಥಗಳನ್ನು ಸಂಶೋಧನೆಮಾಡಿರುವದು ಕೇವಲ ಕರ್ನಾಟಕಕ್ಕೆ ಅಷ್ಟೇ ಅಲ್ಲದೆ ಇಡೀ ಜಗತ್ತಿಗೇ ಹಿತಕರವೆಂದೂ, ಪ್ರಮ ಭಾಷಣದಲ್ಲಿ ಹೇಳಿದ ಹಳೇಗ್ರಂಥಗಳನ್ನು ಶೀಘ್ರಪ್ರಕಾರದಲ್ಲಿ ತಂದರೆ ಲೋಕೋಪಕಾರವಾಗುವದೆಂದೂ ನುಡಿದರು ಆನಂತರ ಸಭೆಯು ಸಮಾಪ್ತಿಗೊಂಡಿತು.

ಮಲ್ಲಿಕಾರ್ಜುನಾರಾಧ್ಯ, ಹಡಗಲಿ ಹಿರೇಮಠ,
ಆಯುರ್ವೇದಕಾಲೇಜು, ಬೆಳಗಾಂವ

॥ ಶ್ರೀಜಗದ್ಗುರು ವಿಶ್ವಾರಾಧ್ಯೋ ವಿಜಯತೇ ॥

ವೀರಶೈವ ಮಹಿಳಾಮಣಿ

(ಶೀ—ಗುಣಪತ್ನಿಪತಿ ಬಾಲಬೃಹಸ್ಪತಿ)

ನವಿಮ್ಮಾಭರತಮಾತೆಯು ಪ್ರತಿತೆ ರತ್ನಗಳಿಗೆ ಆಗರವಾಗಿದ್ದಾಳೆ ಬ್ರಿಟಿಷ್ ಸಾರ್ವಭೌಮರ ಕಿರೀಟ ತಟದಲ್ಲಿ ಪ್ರಕ್ಷಲಿಸುತ್ತಿರುವ ಜಗದ್ವಿಖ್ಯಾತವಾದ ಕೋಹಿನೂರ ರತ್ನವೆನ್ನಿಸಿದ್ದವು ನಮ್ಮ ಭಾರತಮಾತೆಯ ಉದರದಲ್ಲಿ ಜನಿಸಿದವಾಗಿದೆ ಭಾರತವಾತೆಯು ಕೇವಲ ನಿಜೀವದಕ್ಷಗಳಿಗಷ್ಟೇ ಅಲ್ಲ, ಸಜೀವ ರತ್ನಗಳಿಗೂ ಸಹ ಆಲಯವೆನ್ನಿಸಿರುವುದರಿಂದಲೇ ನಮ್ಮ ಹೆಮ್ಮೆಯ ಭಾರತ ಪಾತಿಗೆ ಏಶ್ವದಲ್ಲೊಂದು ಅಪರೂಪವಾದ ಗೌರವ ಪ್ರಾಪ್ತವಿದೆ ಈ ನಿಷಯವನ್ನು ಪರದೇಶೀಯರೂ ಕೂಡ ಪ್ರೇಮಪೂರಸ್ಸರವಾಗಿ ಒಪ್ಪಿಕೊಳ್ಳುತ್ತಾರೆ. ಈ ರತ್ನಗಳು ತಮ್ಮ ಕಾಂತಿಸಂವಿಸ್ಫೂರ್ತಿದಿಂದ ವಿಶ್ವದ ಕಣ್ಣು ಕುಕ್ಕಿ ವಿರಾಜಿಸಿವೆ, ವಿರಾಜಿಸುತ್ತಲಿವೆ ಇವೆಲ್ಲವುಗಳಲ್ಲಿ ಮಹಿಳಾಮಣಿಗಳ ಮಹಿಮೆಯಂತೂ ವಿಶ್ವದ ಜ್ಞಾನಾ ಮೂಲೆ ಗಳಲ್ಲಿ ಹುಟ್ಟಿಬೆಳೆದಿರುವ ಚಂದಿರನ ಬೆಳದಿಂಗಳಂತೆ ಪಸರಿಸಿದೆ ಇಂಥಾಸಿಯ ಮಹಾರಾಣಿ ಲಕ್ಷ್ಮೀಬಾಯಿಯ ವೀರವರಾಕ್ರಮವನ್ನು ಕೇಳಿ ಚಕಿತರಾಗದೆ ಮಾನವರಿಲ್ಲ ಧೀರ ಶಿರೋಮಣಿಯಾದ ಛತ್ರಪತಿ ಶಿವಾಜಿಗೆ ಕನ್ನಡ ನಾಡಿನ ಕಡುಗಲಿತನದ ತೇಜವನ್ನು ತೋರಿಸಿದ ಬೆಳವಡಿ ಮಲ್ಲಮ್ಮನನ್ನು ಜಜ್ಜಿಸದೆ ಬಂಟಿಸಾರು ? ಮಾರವಾಡದ ಮಿರಾಬಾಯಿಯು ಭಕ್ತಿ ಸೌಷ್ಠವದ ಮುಂದೆ ತಲೆಬಾಗದ ವ್ಯಕ್ತಿಗಳಾರು? ಹೀಗೆ ಸರ್ವರ ಹೆಸರುಗಳನ್ನು ಬರೆಯುತ್ತ ಹೋದರೆ ಶಿವಾಧ್ವೈತಮಂಜರಿಯೆಂಥ ಉದ್ಗ್ರಂಥವೇ ಆಗಬಹುದು ಮಹಶೈಯರೇ ಈಗಲೂ ಈ ತೆರನಾದ ಅನೇಕ ರತ್ನಗಳು ರಾಜಿಸಿ ರಂಜಿಸುತ್ತಿರುವದು ನಿಮ್ಮೆಲ್ಲರ ಸುಪ್ತಿವದ ಸಂಗತಿಯಾಗಿದೆ ಓದುಗರೇ ಪರಮ ಪವಿತ್ರವಾದ ಮಮ್ಮತೆಯ ವೀರಕ್ಷೆವಮತವಲ್ಲಿ ಈಗೊಂದು ಮನಾಮಣಿಯ ಪ್ರಾದುರ್ಭಾವವು ಆಗಿದೆಯೆಂದು ಬರೆಯಲು ಲೇಖನಿಯು ಧಾವಿಸುತ್ತದೆ. ಅದು ತನ್ನ ಮಂಜುಲಾದ ಕಾಂತಿಪುಂಜದಿಂದ ಎಲ್ಲ ಕಡೆಯಲ್ಲಿಯೂ ಪರಿಚಿತವಾಗಿದೆ, ಪ್ರಸಿದ್ಧವಾಗಿದೆ. ಮಾತೃಶ್ರೀಯವಕರಾದ ಸೌಗಿ ಭಾಗೀರಥೀಬಾಯಿ ಕಟಾಪರೇ ಆ ಮಹಿಳಾಮಣಿಯು. ವಿಜ್ಞಮಾಪೇಯಿಯು ವಾತ್ಸಲ್ಯಭಕ್ತಿಗೊಳಗಾಗಿ ಶ್ರೀ ಶಿವಲಿಂಗಮೂರ್ತಿಯು ತಿಂಗಳ್ಳವನ್ನು ಪಡೆಸಿದಂತೆ ಇವರ ಪುಟಿರವಾತ್ಸಲ್ಯಭಕ್ತಿಪ್ರಭಾವಕ್ಕೆ ಗುರುವರ್ಗವು ತಿಂಗಳ್ಳವನ್ನು ಕೊಡಿಸಿದುದೆಂದು ಬರೆಯಲು ಬಲು ಉತ್ಸಾಹವೆನಿಸುತ್ತದೆ ಆಸುಮ ವಾತ್ಸಲ್ಯಭಕ್ತಿಯ ಬಲವೇ ಅಂತಹುದು ತಾಯಿಯು ಮೊರೆಹಾಲನ್ನು ಕೂಸಿಗುಣಿಸಿ ನಲವಿಂದ ಮುದ್ದಾಡಿ ನಲ್ಮೆಯಿಂದೆತ್ತಿ ಪೊರೆದಂತೆ ಈ ಭಕ್ತಮಾತೆಯು ಗುರುವರ್ಗಾಲಾಪನವನ್ನು ಲಾಲಿಸಿ ಮುದ್ದಿಸಿ ಪಾಲಿಸಲು ಸಮರ್ಥಳಾದ್ದಾಳೆ. ಏಷ್ಟೇನ ಛಿದ್ದಾಳೆ. ಅಪ್ರತಿತವಾದ ಪಾತಿವ್ರತ್ಯ, ಆಸಾಧಾರಣ ಸೌಜನ್ಯ, ಅಸಾಮಾನ್ಯವಾದ ವಿವೇಕ, ವಿನಯಾದಿ ಸುಗುಣಗಳ ಸಮ್ಮೇಳನ, ಆತ್ಯುಜ್ವಲವಾದ ಧರ್ಮಾನಿಷ್ಠೆ, ಅತ್ಯುತ್ಕಟವಾದ ಗುರುಭಕ್ತಿ ಇವೆಲ್ಲವುಗಳು ಆ ಮಾನ್ಯ ಮಾತೃವಿನಲ್ಲಿ ಹೊಸಿನಲ್ಲಿ ಇಣಿಗಂಪಿನಂತೆ ಸಹಜವಾಗಿದ್ದು ತಮ್ಮ ತಮ್ಮ ಪ್ರಕಾಶವನ್ನು ಕೋರಿ ಬೀರಿ ರಾಜಿಸಿ ಕೋಭಿಸುತ್ತಲಿವೆ. ಅವರ ಕವಿತಾಪ್ರತಿಭೆ ಲೇಖನಿಕಲೆಗಳು ಸರ್ವರಿಗೂ ತಿಳಿದಿನೆ ಅಪ್ಪಾಲವ್ಯದೃರಿಗೆ ತಿಳಿಯುವ ಸುಲಭ್ಯಲಿಯು ಭಾಷಣ ಸರಣಿಯಂತೂ ವಿಶಿಷ್ಟಣವಾಗಿವೆ ಅವರಲ್ಲಿಯ ನೈಜಜವಾದ ಸಾತ್ವಿಕಪ್ರಭೆಯು ಎಂಥ ಸುಸಂಸ್ಕೃತಜ್ಞಾದರೂ ಮುಗ್ಧನೆನ್ನಾಗಿ ಮಾಡದೆ ಬಿಡದು. ಸತ್ಯಂ.ಕರ ಓಜವೇ ಇಂತಹುದಲ್ಲವೇ? ಸಾಂಪ್ರತ ನಾವಾವರಣದಲ್ಲಿ ಈ ವಿಧವಾದ ವಿರಳೆವ ಮಹಿಳಾ ಮಣಿಯು ಸಿಕ್ಕಿರುವದು ವೀರಶೈವರಿಗೆ ಹಿಪ್ಪಾಗಿಯೂ ಅಭಿಮಾನಾಸ್ಪದವಾಗಿದೆ. ಇದರಲ್ಲಿ ಕೆಂಚಿತ್ತಾದರೂ ವರ್ಣನೆಯ ಬಣ್ಣಾವಿಲ್ಲವೆಂಬುದನ್ನು ಬೇರೆ ಹೇಳಬೇಕಾಗಿಲ್ಲ ಈ ಮಾತೆಯು ನಮ್ಮ ಸಮಾಜದಲ್ಲಿ ಹುಟ್ಟಿಸಿದ ಜನಜಾಗೃತಿಯು ಪ್ರಚಂಡವಾಗಿದೆ ಗುರುವರ್ಗಕೈಕಾಗದ ಸೇವೆಯು ಏಕಾರವಾಗಿದೆ ಈ ಮಾತೆಯ ನಡೆನುಡಿಯ ಫಲವೇ "ಶ್ರೀನಿತಿ, ಭಕ್ತಿಯೋಗ" ಮುಂತಾದ ಗ್ರಂಥರೂಪಗಳಾಗಿ ಭುವನವನ್ನೇ ಕಾಂತಿಯು ಮಾರ್ಗಕ್ಕೆ ಎಳೆಯುತ್ತಲಿದೆ ಇದು ಮುಕ್ತಿಮಂದಿರವನ್ನು ಹೊಂದಿಸುವ ಮಾಹನವಾಗಿದೆ ನಿಜತತ್ವಾನ್ವಿಧಿಗಳೇ ಹೀಗೆಯೇ ಈ ಮಾತೆಯ ಗುಣಾನವನ್ನು ಮಾಡುವದು ಗಗನದಲ್ಲಿಯ ತಾರೆಗಳನ್ನು ಎಣಿಸಹೋದ ವ ಸಾಧನಂತೆ ಹಾಸ್ಯಾಸ್ಪದವೇ ಸರಿ! ಧರ್ಮಬಾಧವರೇ! ಹೀಗೆಯೇ ನಮ್ಮ ಮತ ದಲ್ಲಿ ಅನೇಕ ರತ್ನಗಳು ಉದಯಿಸುವವೆಂತಾಗಲೆಂದು ಜಗದ್ಗುರು ವಂಚಿಕವನ್ನು ಪ್ರಾರ್ಥಿಸಿ ಜಗದೀಶನಿಗೆ ಮೊರೆಹೋಗುವಾ ಬನ್ನಿ ! ತಡಮಾಡದೆ ಬನ್ನಿ !!

ಮಾಹೇಶ್ವರ ದೀಕ್ಷಾ ಸಮಾರಂಭ, ರೇಪೂರು

ಶ್ರೀ ವೇ॥ ನಿರಂಜನಸ್ವಾಮಿಗಳವರು ನಿಂಬಾಳ ಇವರಿಂದ ನಾಗಣಸೂರ ಮಠದಲ್ಲಿ ನಡೆದ ಪುರಾಣ ಸಮಾಪ್ತಿಯ ಮಂಗಲ ಸಮಾರಂಭವಲ್ಲಿ ಇಳಿಯ ಸದ್ಭಕ್ತರ ಅಪೇಕ್ಷೆಯಂತೆ ಮಾಹೇಶ್ವರ ದೀಕ್ಷಾ ಕಾರ್ಯಕ್ರಮವಾಗಿ ಶ್ರೀ ಹಾ॥ ಬ್ರ॥ ಗುರುತಿಂತ ಸ್ವಾಮಿಗಳವರು ಹೇವರಿಗಿಯವರು, ಕೇರ್ತನ ಕಂರೀರವ ವೀರಯ್ಯನವರು ಸೂರಕೇರಾಡ ಮತ್ತು ಬಾಲ ಬೃಹಸ್ಪತಿ ಗಂಗಾಧರ ಶಿವಾಚಾರ್ಯರು ಮರಬ ವಿನೋದರತ್ನ ಯಿದ್ಧಮುನಿ ಕಾಶ್ಞಿ ಸಾಲೋಟಗಿ ಇವರೊಂದಿಗೆ ಆಗಮಿಸಿದರು ಇದೇ ತಿಂಗಳ ೯ ನೇ ತಾರೀಖಿನ ದಿವಸ ಮರಬದ ಶ್ರೀಗಳ ವೈದಿಕಕ್ಷೇತ್ರದಲ್ಲಿ ೯ ಜನ ಮಾಹೇಶ್ವರ ವಟುಗಳಿಗೆ ಶಿವದೀಕ್ಷೆಯು ಬಾಲ ಯೋಗಿಗಳಿಂದ ಅನುಗ್ರಹಿಸಲ್ಪಟ್ಟಿತು. ತಾಯಂಕಾಲ ಲ ರಿಂದ ಕೇರ್ತನ ಕಂರೀರವಂದ ಮಲಯರಾಜನ ಕೇರ್ತನೆಯು ಬಹು ಸ್ವಾರಸ್ಯವಾಗಿ ಮಾಡಲ್ಪಟ್ಟಿತು ಅದೇ ವಿಷಯವನ್ನೇ ಬಾಲಬೃಹಸ್ಪತಿಗಳು ವಿಶ್ಲೇಷ ವಾಗಿ ಅಚ್ಚಿಕ್ಕುವಂತೆ ಪ್ರತಿವಾದಿಸಿದ ಮೇಲೆ ಅಂದಿನ ಕಾರ್ಯವು ಸಮಾಪ್ತಿಗೊಂಡಿತು. ಮರುದಿವಸ ಬಹು ಜನರ ಆಗ್ರಹದ ಮೇರೆಗೆ ವೀರಶೈವಾಚಾರದ ಶ್ರೀ ಜಗದ್ಗುರು ರೇಣುಕ ಭಗವತ್ಪಾದರ ಲೀಲಾವಳಿಯಲ್ಲಿಯ ಗೋರಕ್ಷ ಗರ್ವಹರಣ ಎಂಬ ಕೇರ್ತನೆಯು ರಮ್ಯವಾಗಿ ಜರುಗಿದ ಮೇಲೆ ವಿನೋದರತ್ನರೇ ಮುಂತಾದವರ ಭಾಷಣಗಳಾದವು ಬಳಿಕ ಧ್ವಯಿ ಜನದಾಚಾರ್ಯರ ಜಯಘೋಷಮಾಡಿಸಿ ಸಭೆಯು ಸಮಾಪ್ತಿಗೊಂಡಿತು.

ಶಿವಂಠಾ ಸಿದ್ಧರಾಮಪ್ಪ ಹಾಟೀಲ,
ಜಹಗೀರ್ ಹೇವರಿ.

ಪಂಚಾಚಾರ್ಯಪ್ರಭಾ.

೧೯೪೦ ನೆಯ ಡಿಸೆಂಬರ್ ತಾ|| ೨೩ನೇ ಸೋಮವಾರ

ಇಟಲಿಗೆ ಅಸಾಧ್ಯ ಅಪಜಯ.

ಇಟಲಿಯು ಜರ್ಮನಿಯ ಪ್ರೇರಣೆಗೊಳಗಾಗಿ ಈಗಿನ ಘೋರಸಂಗ್ರಾಮದಲ್ಲಿ ಪ್ರವೇಶಮಾಡಿರುವ ವಿಷಯವು ಸರ್ವರಿಗೂ ನೇರ್ಪುವೇ ಆಯ ಬ್ರಿಟಿಷರ ಪರವಶಲಿರುವ ಮೆಡಿಟರೇನಿಯನ್ ಸಮುದ್ರವನ್ನು ಕಸ್ಸ ಸ್ವಾಧೀನಕ್ಕೆ ತೆಗೆದುಕೊಳ್ಳಬೇಕೆಂಬುದೇ ಇಟಲಿಯ ಮುಖ ಮರಾ ಕೆಯು. ಈ ದುರಾಶೆಯಿಂದ ಇಟಲಿಯು ಆಸಿ ಇಾಬಿಡ ದಲ್ಲಿ ಬ್ರಿಟಿಷರ ಮೇಲೆ ಯುದ್ಧವನ್ನು ಷಡಿತ. ಇಪ್ಪತ್ತೈ ಸುಮ್ಮನೆ ಕುಳತಿರಲಾರದೆ ಪಕ್ಕದಲ್ಲಿರುವ ಗ್ರೀಸ ನೆಮೇಲೆಯೂ ಬಹು ಬಲಾತ್ಕಾರವಾಗಿ ಬಿದ್ದಳು ಗ್ರೀಸ್ ದೇಶವು ಚಿಕ್ಕದಾದರೂ ಎಲ್ಲಿರುವ ಜನರು ಮಹಾಶೂರರು! ಅವರು ಇಟಲಿಯವರಂತೆ ಹೇಡಿಗಳಲ್ಲ, ತನ್ನ ದೇಶ ಕ್ಕಾಗಿ ಪ್ರಾಣವನ್ನರ್ಪಿಸುವ ಧೀರರು! ಆಸಂಖ್ಯಾತ ರಾದ ಇಟಲಿಸೈನಿಕರು ಸ್ವನಾಶಮೋಹಾದಿಯಲ್ಲಿ ತಮ್ಮ ದೇಶದಮೇಲೆ ಏಕಾಏಕಿ ಬಿದ್ದರೂ ಗ್ರೀಕರು ಹೆದರದೆ ಇಟಾಲಿಯನ್ನರನ್ನು ಸದೆಬಡಿದು ಹಿಂದಕ್ಕಟ್ಟಿದರಲ್ಲದೆ. ಇಟಲಿಯ ವಶವಲ್ಲಿದ್ದ ಅಲ್ಬೇನಿಯಾದೇಶವನ್ನು ಆಕ್ರಮಿಸಿಕೊಳ್ಳಲು ಹತ್ತಿ ಅರ್ಧದಷ್ಟು ದೇಶವನ್ನು ತಮ್ಮ ಸ್ವಾಧೀನಪಡಿಸಿಕೊಂಡಿರುವರು ಹೇಡಿಗಳಾದ ಇಟಲಿ ಸೈನಿಕರು ಗ್ರೀಕರ ವಿಟನ್ನು ಸಹಿಸದೆ ದಿಕ್ಕಾಪಾಲಾಗಿ ಓಡಹತ್ತಿದ್ದಾರೆ ಇದೆಂದ ಗ್ರೀಕರು ಅಲ್ಬೇನಿಯಾದಲ್ಲಿ ಮುಂದೆ ಮುಂದೆ ನುಗ್ಗಹತ್ತಿದ್ದಾರೆ ಗ್ರೀಕರಿಗೆ ದಿನೇ ದಿನೇ ಈ ವಿಧವಾದ ಅದ್ಭುತ ವಿಜಯವು ದೊರೆಯತ್ತಿರುವುದಕ್ಕೆ ಈಶ್ವರಾನುಗ್ರಹವೇ ಕಾರಣವೆಂದು ಹೇಳ ಬೇಕಾಗಿದೆ

ಇದಾಲಿಯಸ್ಸನಿಗೆ ಅಲ್ಬೇನಿಯಾದಲ್ಲಿ ಅಪಜಯ ವಾಗಹತ್ತಿರುವಂತೆ ಆಫ್ರಿಕ ದಲ್ಲಿ ಬ್ರಿ ಜಾಡುವದ ಮೇಲೆ ಅಪಜಯ ವಾಗಹತ್ತಿದೆ ಈಪಲ ಪರಿಣಾಮದಿಂದ ಸಿದ ಆಫ್ರಿಕೆಯಲ್ಲಿ ಬ್ರಿಟಿಷ್‌ಸೈನಿಕರು ವಿಠಾಪೇಕ ವಿಂದೊಡಗೂಡಿ ಇಟ-ಲಿಯನ್ನರನ್ನು ಸದೆಬಡಿಯಹತ್ತಿದ್ದಾರೆ ೩೭ ಸಾವಿರಜನ ಇಟಲಿ ಸೈನಿಕರನ್ನೂ, ೧೬೦೦ ಜನ ಸೈನ್ಯಾಧಿಕಾರಿಗಳನ್ನೂ ಸೆರೆಹಿಡಿದಿದ್ದಾರೆ ಲಿಬಿಯಾದೇಶವನ್ನಾಕ್ರಮಿಸಿ ಸಿದಿಬಾನಿ ಮೊದಲಾದ ಇಟಲಿಯ ಮುಖ್ಯ ಮುಖ್ಯ ಬಂದರುಗಳನ್ನು ಹಿಡಿದು ಕೊಂಡಿದ್ದಾರೆ ಬ್ರಿಟಿಷರಿಂಬಿಗಿರುವ ಈ ಅದ್ಭುತ ವಿಜಯವನ್ನು ಕಂಡು ಇಡೀ ಜಗತ್ತೇ ಸಂತೋಷಪಡ ಹತ್ತಿದೆ

ಇಟಲಿಯ ಮಸಲೋನಿಯು ಆಸ್ಟ್ರಿಕಾಖಂಡದಲ್ಲಿ ಬ್ರಿಟಿಷರನ್ನು ಸೋಲಿಸಿ ಈಜಿಪ್ಟನ್ನು ನುಂಗಬೇಕೆಂದು ಹೊಂಚುಹಾಕಿದ್ದನು ಆದರೆ ಅವನ ಹಂಚಿಕೆಯೆಲ್ಲವೂ ಮಣ್ಣುಗೂಡಿದಂತಾಗಿ ಆಸಾ ವ್ಯಸನಕ್ಕೊಳಗಾಗಿದ್ದಾನೆ ಈ ವಿಧವಾದ ಭಯಂಕರ ಅಪಜಯದಿಂದ ಅವನಿಗೆ ದಿಕ್ಕೇತೋಚದಂತಾಗಿದೆ ಈ ಅಪಜಯದಿಂದ ಇಟಾಲಿಯನ್ನರಲ್ಲಿ ನಿರಾಶೆಯು ತಲೆದೋರತ್ತಿದೆ ಇಟಲಿಗೆ ಈ ರೀತಿಯಾಗಿ ಮೇಲಿಂದಮೇಲೆ ಅಪಜಯವಾಗುತ್ತಿದ್ದರೂ ಜರ್ಮನಿಯ ಹಿಟ್ಲರನು ಮೌನದಿಂದಿರುವುದು ಅತ್ಯರ್ಥಕರವಾಗಿದೆ ಹಿಟ್ಲರನ ಅಭಿಪ್ರಾಯವಿಲ್ಲದೆ ಮಸಲೋನಿಯು ಗ್ರೀಸಿನ ಮೇಲೆ ಯುದ್ಧಕ್ಕೆ ಹೋಗು ದರಿಂದ ಆವಘಗೆ ಸರಿಯಾಗಿ ಬುದ್ಧಿಗಲಿಸಬೇಕೆಂಬ ಕೋಪದಿಂದ ಹಿಟ್ಲರನು ಇಟ್ಟಲಿಯರಿಗೆ ಮೌನವನ್ನು ತಾಳಿದ್ದಾನೆಂದು ಕೆಲವು ಪತ್ರಿಕೆಗಳಲ್ಲಿ ಪ್ರಕಟವಾಗಿದೆ ಇದು ಎಷ್ಟರಮಟ್ಟಿಗೆ ನಿಜವಿರಬಹುದೆಂಬುದನ್ನು ನಿಶ್ಚಯವಾಗಿ ಹೇಳಲು ಬರುವದಿಲ್ಲ. ಇಟಲಿಯು ಸಂಪೂರ್ಣವಾಗಿ ಸೋತು ಬ್ರಿಟಿಷರ ವಶವಾದರೆ, ಆಗ್ಗೆ ಹಿಟ್ಲರನ ಆಟಗೇ ನಿಂತುಹೋಗುವುದು ಆವುದರಿಂದ ಈ ವಿಷಮಸಮಯದಲ್ಲಿ ಹಿಟ್ಲರನು ಮೊದಲಿನಂತೆ ಸಮ್ಮ ನಿರದೆ ಇಟಲಿಯ ಸಹಾಯಕ್ಕಾಗಿ ಈಗ ಅಪಾರಸೈನ್ಯವನ್ನು ಭೂಮಾರ್ಗವಾಗಿ ಕಳುಹಿಸಹತ್ತಿರುವನೆಂದು ಪ್ರಕಟನಾ ಗಿದೆ ಜರ್ಮನ್ ಸೈನ್ಯವು ಇಟಲಿಯ ಸಹಾಯಕ್ಕೆ ಬಂದು ಮು ನಿಜವಾದರೆ ಇನ್ನು ಮುಂದೆ ಯುದ್ಧದ ಸ್ವರೂಪವು ಘೋರವಾಗಿ ಪರಿಣಮಿಸುವುದರಲ್ಲಿ ಸಂಡೇಹವಿಲ್ಲ ಈಶ್ವ ರೇಚ್ಛೆಯು ಹೇಗಿರುವೋ ಯಾರಿಗೂ ತಿಳಿಯದು

ಇತ್ತ ಹಿಟ್ಲರನು ಮುಂಬೆರುವ ಪೆಬ್ರವರಿ ತಿಂಗ ಳಲ್ಲಿ ಬ್ರಿಟನ್ನಿನಮೇಲೆ ಉಗ್ರಮುತ್ತಿಗೆಯನ್ನು ಹಾಕಲು ಆಸಾಧ್ಯ ಸಿದ್ಧತೆಗಳನ್ನು ಮಾಡಿಕೊಳ್ಳುತ್ತಿದ್ದಾನೆಂದು ಅಮೆರಿಕಾ ಪತ್ರಿಕೆಗಳು ಪ್ರಕಟಿಸಿವೆ ಇದೇ ಆಭಿಪ್ರಾಯ ವನ್ನು ಬ್ರಿಟಿಷ್ ಮಹಾಪ್ರಧಾನರು ತಮ್ಮ ಭಾಷಣದಲ್ಲಿ ಸ್ಪಷ್ಟವಾಗಿ ಆಡಿತೋರಿಸಿದ್ದಾರೆ ಪ್ರಿಟನ್ ಮಹಾ ಪ್ರಧಾನರ ಭಾಷಣವನ್ನು ವಿನ ರೀಸಿ ನೋಡಿದ್ದಾದರೆ ಮುಂದೆ ಇನ್ನೂ ಘೋರಯುದ್ಧವಾಗುವ ಸಂಭವವಿರು ವುದೆಂದೂ. ಈಗಿನ ಮಹಾಯುದ್ಧವು ೧೯೪೩ ಳಿಗರ ವರೆಗೆ ನಡೆಯಬಹುದೆಂದೂ ತೋರಿಬರುತ್ತದೆ ಈ ಮಹಾಯುದ್ಧವು ಎಷ್ಟು ದಿವಸಗಳವರೆಗೆ ನಡೆದರೂ ಅಂತ್ಯದಲ್ಲಿ ಬ್ರಿಟಿಷರಿಗೆ ಜಯವೆಲ್ಲುರು ಸಿದ್ಧವು ಜರ್ಮನಿಯು ಬ್ರಿಟನ್ನನ್ನು ಗೆಲ್ಲುವಂತಿದ್ದರೆ ಇಪ್ಪರ ಬ್ಲಿಯೇ ಗೆಲ್ಲಬೇಕಾಗಿತ್ತು ದಿನೇ ದಿನೇ ಅಮೆರಿಕೆಯ ಅಭಾರವಾದ ಸಹಾಯದಿಂದ ಅಸಾಧ್ಯ ಯುದ್ಧಸಾಮಗ್ರಿ ಗಳನ್ನು ಸಿದ್ಧಮಾಡಿಕೊಳ್ಳುತ್ತಿರುವ ಬ್ರಿಟಿಷರನ್ನು ಇನ್ನು ಮುಂದೆ ಸೋಲಿಸುವ ಜರ್ಮನಿಗೆ ಸಾಧ್ಯವಿಲ್ಲವೆಂ ಬುಮ ಜಗತ್ತಿಗೆಲ್ಲಾ ತಿಳಿದುಹೋಗಿದೆ ಕಳೆದ ವಾರ ಮಾಡಿದ ಪ್ರಟ್ಲರನ ಭಾಷಣದಿಂದಲಾ ಸಹ ಈ ವಿಷಯವು ಸ್ಪಷ್ಟವಾಗುತ್ತದೆ ಹೀಗಿದ್ದರೂ ಹಿಟ್ಲರನು ಪ್ರಪಂಚವ್ಯಾಪ್ತ ಜಗತ್ಪಿಗೆ ತೊಂದರೆಯನ್ನುಂಟುಮಾಡತ್ತಿರುವುದು ಮಾತ್ರ ತನಗೆಮಂದೇ ಹೇಳಬೇಕಾಗಿದೆ ಅನ್ಯರನು-ಭೋಗ್ಯವ್ಯಂ ಕೃತಂ ಕರ್ಮ ಶುಭಾಶುಭಂ ' ಎಂಬ ಹಿರಿಯರ ವಾಕ್ಯದಂತೆ ಕರ್ಮಫಲವನ್ನು ಜನ ಭವಿಸಲೇಬೇಕು

ಯುದ್ಧವಾರ್ತೆ.

ಎಲ್‌ವಾಕ್ ನಾಶವಾಗಿದೆ

ಸಹಾರಾಲಿ ಲ್ಯಾಂಡಿನಲ್ಲಿರುವ ಎಲ್‌ವಾಕ್ ಎಂಬ ಊರನ್ನು ಬ್ರಿಟಿಷರ ಆಡಿರೆಂಬ. ಕೋಪದಿಂದ ಇಟಾ ಲಿಯನ್ನರ ಆಲ್ಲಿಯ ಮುಖ್ಯಭವನಗಳನ್ನೆಲ್ಲಾ ಸುಟ್ಟು ಹಾಕಿದ್ದಾರ

ಬ್ರಿಟನ್ನಿಗೆ ಅಮೇರಿಕೆಯ ಹಡಗುಗಳು

ಅಮೇರಿಕೆಯಲ್ಲಿರುವ ೩೭ ಡೆನ್ಮಾರ್ಕ್ ಹಡಗುಗ ಳನ್ನೂ ಇತರ ದೇಶಗಳಿಗೆ ಸೇರಿದ ೧೦೦ ಹಡಗು ಗಳನ್ನೂ ಬ್ರಿಟನ್ನಿಗೆ ಕೊಡುವ ವಿಚಾರವನ್ನು ಅಮೇ ರಿಕಾ ಸರ್ಕಾರವು ಪರಿತೀಲಿಸುತ್ತಿರುವುದೆಂದು ಗೊತ್ತಾ ಗುತ್ತಿದೆ

ಇಟಲಿ ಹಡಗುಗಳು ಮುಳುಗಿದವು

ಬ್ರಿಟನ್ನಿನ ನೌಕಾಬಲವು ಇಟಲಿ ನೌಕಾಬಲಕ್ಕೆ ವಿಶೇಷ ನಷ್ಟವನ್ನುಂಟುಮಾಡಹತ್ತಿದೆ ಟ್ರುಯೆಂಟ್ ಎಂಬ ಬ್ರಿಟನ್ನಿನ ಸಬ್ ಮೆರಿನ್ನು ಸ್ಪಾನಿನೆಂಬೊ ಭೂತಿರದಾಚೆ ಸಾವಾಸು ಹಡಗುಗಳ ಮೇಲೆ ಮುತ್ತಿಗೆ ನಡೆಸಿ ಒಂದು ಹಡಗನ್ನು ಮುಳುಗಿಸಿತು. ಇನ್ನೊಂದು ಹಡಗು ಕೂಡ ಮುಳುಗಿಬಹುಹೆಂದು ಅಂದಾಜು ಮಾಡಲಾಗಿದೆ ಕೆರೋಬರ್ಯ ಸಮುದ್ರತೀರದಾಚೆ ಆದೇ ಸಬ್‌ಮೆರಿನ್ನು ಇಟಲಿಯ ಎಣ್ಣೆಯ ಹಡಗನ್ನು ಮುಳುಗಿಸಿತು

ಜರ್ಮನ್ ಸೈನ್ಯಗಳ ಚಲನ, ಇಟಲಿಯಲ್ಲಿ ಅಶಾಂತಿ

ಪ್ರೆಸ್ಸರ್ ಕಣನಿಮಿತ್ತಮೂಲಕ ಜರ್ಮನ್ ಸೈನಿಕರು ಇಟಲಿಗೆ ಪ್ರವಾಹದೋಪಾದಿಯಲ್ಲಿ ಬರುತ್ತಿದ್ದಾರೆ. ಈಗ ಇಟಲಿಯಲ್ಲಿ 50 ಸಾವಿರಕ್ಕಿಂತ ಹೆಚ್ಚು ಜರ್ಮನ್ ಸೈನಿಕರು ಬಂದು ಸೇರಿರುವರಂತೆ! ಜರ್ಮನರ ಪ್ರಚಂಡ ಮಿಲಿಟರಿ ಬಲವು ದಕ್ಷಿಣ ಮುಖವಾಗಿ ತಲಿಸುತ್ತಿರು ವುದು ಕಾಣಬರುತ್ತಿದೆ. ಜರ್ಮನರ ತಲವಪನ್ನು ಕಂಡು ಆದು ಇಪ್ಪರಲ್ಲೇ ಇಟಲಿಯನ್ನು ಅಕ್ರಮಿಸಿ ಬಿಡಬಹು ಹುದೆಂದು ತುರ್ಕಿಯ ಪತ್ರಿಕೆಯೊಂದು ಬೀರಿಸಿದೆ. ಜರ್ಮನಿಯ ಗುಪ್ತಚಾರಪಡೆಯ ಅಧಿಕಾರಿಗಳೂ, ಸೈನ್ಯಾಧಿಕಾರಿಗಳೂ ಅಧಿಕ ಸಂಖ್ಯೆಯಲ್ಲಿ ಇಟಲಿಗೆ ಹೊರಟಿರುವದರಿಂದ ಇನ್ನು ಇಟಲಿಯ ಆಸೆ ಮುಗಿದಂತಿ ಯೇ ಸರಿ, ಎಂಬುದು ಲಂಡನ್ ಮತ್ತು ಅಮೆರಿಕಾ ಪತ್ರಿಕೆ ಗಳ ಅಭಿಪ್ರಾಯವಾಗಿದೆ ಇದರಿಂದ ಉತ್ಸಾಹ ಇಟಲಿಯ ಕೈಗಾರಿಕೆ ಕೂಲಿಕಾರರಲ್ಲಿ ಆತ್ಯಂತ ಹರಡಿದೆ ಇಟಲಿ ಗಡಿಯಲ್ಲಿ ಜರ್ಮನರು ಹೆಚ್ಚು ಸಂಖ್ಯೆಯಲ್ಲಿ ಬಂದು ಕುಳಿತಿದ್ದಾರೆ

ಅಬ್ಬಿನಿಯಾದಲ್ಲಿ ಅಶಾಂತಿ

ಅಬ್ಬಿನಿಯದ ಈಗಿನ ನಿಜವಾದ ಪರಿಸ್ಥಿತಿಯನ್ನು ತಿಳಿದು ಹೇಳುವದು ಕಸ್ಟವಾಗಿದೆಯೆಂದೂ, ಎಲ್ಲಿನೋಡಿ ದರೂ ಆತಾಂತಿಯು ಹರಡಿರುವಂತಿದೆಯೆಂದೂ, ಶತ್ರುಗ ಳೊಡನೆ ಹೊಡೆದಾಡಲು ಸಿದ್ಧವಾಗಿರುವ ಅಬ್ಬಿನಿಯನ್ನು ರಿಗೆಲ್ಲ ಬ್ರಿಟಿಷರು ಸಹಾಯನಿಡಲು ಸಿದ್ಧವಾಗಿದ್ದಾ ರೆಂದೂ, ಬಟ್ಲರ್‌ರವರು ಕಾಮನ್ಸ್ ಸಭೆಯಲ್ಲಿ ಹೇಳಿ ದರ

ಇಟಲಿಯಲ್ಲಿ ಜರ್ಮನ್ ಸೈನಿಕರು

ಇಟಲಿಯ ನೇಪಲ್ಸ್ ಮತ್ತು ಬಾರಿಪ್ರದೇಶಗಳಲ್ಲಿ ಸುಮಾರು 50000 ಜರ್ಮನ್ ಯೋಧರು ಆಕಾರ ಸಂಗ್ರಾಮಸಾಮಗ್ರಿಗಳಿಡನೆ ಒಟ್ಟುಗೂಡಿರುವರೆಂದು ತಿಳಿದುಬರುತ್ತದೆ ಈ ಸೈನಿಕರನ್ನು ಗ್ರೀಕರ ಮೇಲೆ ಬೀಳಲು ಅಲ್ಬೇನಿಯಾಕ್ಕೆ ಕಳುಹುವರೋ ಅಥವಾ ಬ್ರಿಟಿ ಷರ ಮೇಲೆ ಬೀಳಲು ಲಿಬ್ಯಾಕ್ಕೆ ಕಳುಹುವರೋ ಎಂಬುದು ತಿಳಿದುಬಂದಿಲ್ಲ

ಜರ್ಮನಿಗೆ ರುಮೇನಿಯದ ಎಣ್ಣೆ ಬರದಂತಾಗಿದೆ

ಡಾನ್ಯೂಬ್ ನದಿಯು ವೀಸ್ತ ಮಂಜುಗಡ್ಡೆಗಳಿಂದ ಕೂಡಿ ಹಡಗುಗಳ ಸಂಚಾರವು ಸಂಪೂರ್ಣ ನಿಂತು ಹೋಗಿರುವದರಿಂದ ಜರ್ಮನಿಗೆ ರುಮೇನಿಯದ ಎಣ್ಣೆಬರುವದು ಪೂರ್ಣವಾಗಿ ಕಟ್ಟುಗಿದೆ. ಇನ್ನೂ ನಾಲ್ಕು ತಿಂಗಳಕಾಲ ಡಾನ್ಯೂಬ್ ನದಿಯು ಇದೇ ರೀತಿ ಗಡ್ಡೆ ಕಟ್ಟರುವುದರಿಂದ ರುಮೇನಿಯದ ಎಣ್ಣೆಯು ಅವರಿಗೆ ದೊರೆಯುವದು ಅಸಾಧ್ಯವಾಗಿದೆ

ಜರ್ಮನಿನೌಕೆಯ ಜಲಸಮಾಧಿ

ಬೆಲ್ಜಿಯಂ ತೀರದೀಪಾಚೆ ಸುಮಾರು 6 7ಸಾವಿರ ಟನ್ ತೂಕದ ಜರ್ಮನ್ ನೌಕೆಯೊಂದನ್ನು ಬ್ರಿಟಿಷ್ ಟಾರ್ಪೆಡೋ ಬೋಟ್ ಮುಳುಗಿಸಿತೆಂದು ನೌಕಾ ಶಾಖೆ ಯು ಪ್ರಕಟಿಸಿದೆ ಬ್ರಿಟಿಷ್ ಕಡೆಯವರಾರಿಗೂ ಅಪಾಯ ವಾಗಿಲ್ಲಿ ಶತ್ರು ನೌಕೆಯು ಎರಡಾಗಿ ಸಿಡಿದು ಜಲ ಸಮಾಧಿ ಹೊಂದಿತು. ಕಾವಲಿಗೆ ಬಂದಿದ್ದ ಶತ್ರುಗಳ ಇನ್ನೊಂದು ನೌಕೆಯುಮೇಲೆ ಬ್ರಿಟಿಷ್ ನೌಕೆಯು ಗುಂಡು ಹಾರಿಸಿತು.

೩೫ಸಾವಿರ ಇಟಲಿಸೈನಿಕರ ಬಂಧನ

ಆಫ್ರಿಕೆಯಲ್ಲಿರುವ ಬಾರ್ಡಿಯ ಕ್ಷೇತ್ರದಲ್ಲಿ ಬ್ರಿಟಿಷರು ೩೫ ಸಾವಿರಕ್ಕಿಂತ ಹೆಚ್ಚು ಜನ ಇಟಲಿಯವರನ್ನು ಸೆರೆಹಿಡಿದಿದ್ದಾರೆ ಡಿಸೆಂಬರ್ ೧೬ನೇ ತಾರೀಖಿನಿಂದ ಹೆಚ್ಚಾ ಗಿ ಇಟಲಿ ಅಧಿಕಾರಿಗಳೆದ್ದಾರೆ ಬಾರ್ಡಿಯಾ ದಲ್ಲಿರುವ ಎರಡು ಇಟಲಿ ಸೈನ್ಯಪಡೆಗಳು ವಿಶಾಕರವಾದ ಪರಿ ಸ್ಥಿತಿಯಲ್ಲಿ ಸಿಕ್ಕಿಕೊಂಡಿವೆಯೆಂದು ಗೊತ್ತಾಗುತ್ತದೆ ಬ್ರಿಟಿಷ್ ಮುಂಗಾವಲು ಪಡೆಗಳು ಈಗ ಸಮುದ್ರ ತೀರದಲ್ಲಿ ಟೋಬ್ರಾಕ್ ಕಡೆಗೆ ತೆರಳುತ್ತಿವೆ ಮಂಗ ಳವಾರ ದಿವಸ ಬ್ರಿಟಿಷ್ ವಿಮಾನಗಳು ಬೇನಾ ಸಿ ವಿಮಾನ ನಿಲ್ದಾಣದ ಮೇಲೆ ಮುತ್ತಿಗೆಹಾಕಿ ೧೪ ವಿಮಾ ನಗಳನ್ನು ನಾಶಮಾಡಿದವು.

ರೋಂಪಗರದಲ್ಲಿ ಕಳವಳ

ಫ್ರಾನ್ಸ್-ಜರ್ಮನಿ ಸಹಕಾರ ವಿಷಯವು ರೋಂ ನಗರದಲ್ಲಿ ಕಳವಳವನ್ನುಂಟುಮಾಡಿದೆ ಜರ್ಮನರು ಮಾರ್ಷಲ್ ಪೆಟೇರವರನ್ನು ಒತ್ತಾಯಪಡಿಸಿ ತಮ್ಮ ಬೇಡಿಕೆಗಳನ್ನು ಒಪ್ಪಿಕೊಳ್ಳಬೇಕೆಂದು ಪ್ರೇರಿಪಿಸುತ್ತಿದ್ದಾರೆ. ತಾವು ಆಕ್ರಮಿಸಿಕೊಂಡ ಪ್ರದೇಶಗಳ ಮತ್ತು ಆಕ್ರಮಿಸಿಕೊಳ್ಳದೆ ಇರುವ ಪ್ರದೇಶಗಳ ಮಧ್ಯದಲ್ಲಿರುವ ಗಡಿಯನ್ನು ಜರ್ಮನರು ಮುಚ್ಚುಬಿಟ್ಟಿದ್ದಾರೆ ಸಶಸ್ತ್ರಾಡಿಕೊಳ್ಳದೆ ಇರುವ ಫ್ರಾನ್ಸ್ ಪ್ರದೇಶದಲ್ಲಿ ಜರ್ಮನಿಯ ಗೂಢಚಾರರು ವಿಶೇಷವಾಗಿದ್ದಾರೆಂದು ತಿಳಿಯಬಹುದೆ.

ಜರ್ಮನ್ ಸಹಾಯದಿಂದ ಪರಿಸ್ಥಿತಿ ಬದಲಾವಣೆಯಾಗುವುದಿಲ್ಲ.

ನೇಪಲ್ಸ್ ಮತ್ತು ಬಾರಿ ಪ್ರದೇಶದಲ್ಲಿ ಜರ್ಮನ್ ಸೈನಿಕರು ಬಂದು ಸೇರಿರುವರೆಂಬುದು ನಿಜವಾದರೂ ಅದರಿಂದ ಆಲ್ಬೇನಿಯದಲ್ಲಿ ಹೊಡೆದಾಡುತ್ತಿರುವ ಇಟಲಿಯವರಿಗೆ ವಿಶೇಷ ಸಹಾಯವಾಗುವಂತಿಲ್ಲ ಜರ್ಮನರು ಸಂಪೂರ್ಣ ಯುದ್ಧ ಸಲಕರಣೆಗಳಿಂದ ಕೂಡಿದ್ದರೆ ಮಾತ್ರ ಅಲ್ಬೇನಿಯದಲ್ಲಿ ಇಟಲಿ ಸೈನಿಕರಿಗೆ ಸ್ವಲ್ಪ ಸಹಾಯ ಸಾಧಿಸಬಹುದು. ನೇಪೋಲಿ ಮತ್ತು ಹುರಾಜೋ ಬಂದರುಗಳು ಬ್ರಿಟಿಷರ ವಿಮಾನ ದಾಳಿಗೆ ಸಿಕ್ಕಿ ಹಾಳಾಗಿರುವುದರಿಂದ ಬಹುಮಟ್ಟಿಗೆ ಅವುಗಳಿಂದ ಉಪಯೋಗವಾಗುವಂತಿಲ್ಲ ಸಣ್ಣ ಹಡಗುಗಳ ಮೂಲಕ ಅಲ್ಲಿಗೆ ಜರ್ಮನರು ಬಂದಿಳಿದರೆ ಯಾವ ಪ್ರಯೋಜನವೂ ಆಗುವುದಿಲ್ಲವೆಂದೂ, ಇದರಿಂದ ಆಲ್ಬೇನಿಯದ ಯುದ್ಧನೀತಿಯನ್ನು ಬದಲಾಯಿಸಲು ಸಾಧ್ಯವಾಗುವುದಿಲ್ಲವೆಂದೂ ವಿಮರ್ಶಕರು ಅಭಿಪ್ರಾಯಪಡುತ್ತಾರೆ

ಅಪಾಯಕ್ಕೊಳಗಾದವರಿಗೆ ಪರಿಹಾರ ಯೋಜನೆ

ಬ್ರಿಟನ್ನಿನಲ್ಲಿ ಶತ್ರುಗಳ ಕಾರ್ಯಕ್ರಮದಿಂದ ಗಾಯಗೊಳ್ಳುವವರಿಗೂ ವ್ಯತಕ್ಕುವವರ ಮನೆಯವರಿಗೂ ಒಂದು ವಿಧವಾಗಿ ಪರಿಹಾರವನ್ನು ನೀಡುವ ವ್ಯವಸ್ಥೆಯನ್ನು ಸಿದ್ಧಪಡಿಸಿದ್ದಾರೆ ಗಾಯಗೊಂಡ ಮನುಷ್ಯನ ಯೋಗ್ಯತೆಯನ್ನನುಸರಿಸಿ ವಾರಕ್ಕೆ 3 ಪೌಂಗುಗಳಿಂದ ೫ ಪೌಂಗುಗಳವರೆಗೆ ಪರಿಹಾರವನ್ನು ಕೊಡಲಾಗುವುದು ಈಗಿನ ಯುದ್ಧದಲ್ಲಿ ಈ ರೀತಿ ಗಾಯಗೊಂಡ ಪರಿಗೆ ಸಹಾಯ ನೀಡುವ ವ್ಯವಸ್ಥೆಯನ್ನು ಇನ್ನಿತರ ರೀತಿಯಲ್ಲೂ ಮಾಡಿಲ್ಲವೆಂದು ಹೇಳಲಾಗಿದೆ. ಸಂಪೂರ್ಣ ಅಂಗವಿಕಲರಾದವರಿಗೆ ವಿಶಾಮವೇತನ ಕೊಡಲಾಗುತ್ತದೆ. ಶತ್ರುಗಳ ವಿಷಕ್ಕೆ ಸಿಕ್ಕಿ ಮೃತರಾಗುವ ಸಿವಿಲ್ ಪ್ರಜೆಯ ಸಂಸಾರಕ್ಕೆ ಮೊದಲು 10 ವಾರಗಳವರೆಗೆ ಪ್ರತಿವಾರ 50 ಷಿಲಿಂಗ್ ಕೊಡಲಾಗುವದು ಈ ವ್ಯವಸ್ಥೆಯು ಡಿಸೆಂಬರ್ 24 ನೆಯ ತಾರೀಖಿನಿಂದ ಆರಂಭವಾಗುತ್ತದೆ.

ಲವಾಲರನ್ನು ಪುನಃ ಮಂತ್ರಿ ಪದವಿಗೇರಿಸುವ ಪ್ರಯತ್ನ

ಫ್ರಾನ್ಸಿನ ಪೆಟೇ ಸಂಸ್ಥಾದಿಂದ ಬಂಧನಕ್ಕೊಳಗಾಗಿ ಜರ್ಮನರ ಒತ್ತಾಯದಿಂದ ಬಿಡುಗಡೆಮಾಡಲ್ಪಟ್ಟ ಎಂ. ಲವಾಲರು ಬಿಡುಗಡೆಯಾದಕೂಡಲೆ ಮಾರ್ಷಲ್ ಪೆಟೇರವರನ್ನು ಕಂಡು ತಮ್ಮನ್ನು ಮತ್ತೆ ಮಂತ್ರಿಪದವಿಯಲ್ಲಿ ರಿಸುವ ವಿಚಾರವನ್ನು ಕುರಿತು ಚರ್ಚಿಸಿದರು ಲವಾಲರನ್ನು ಪುನಃ ಮಂತ್ರಿಪದವಿಗೇರಿಸಬೇಕೆಂದೂ, ಅವರು ಆರಂಭಿಸಿದ ನಾಜಿಪರವಾದ ನೀತಿಯನ್ನು ಮುಂದುವರಿಸಿಕೊಂಡು ಬರಬೇಕೆಂದೂ ಹಿರ್ ಹಿಟ್ಲರರು ಪೆಟೇರವರನ್ನು ಒತ್ತಾಯಪಡಿಸುತ್ತಿದ್ದಾರಂತೆ ! ಅದಕ್ಕೆ ಪೆಟೇರವರು ಒಪ್ಪದಿದ್ದರೆ, ಜರ್ಮನರು ಫ್ರಾನ್ಸ್‌ನ್ನೆಲ್ಲ ಆಕ್ರಮಿಸಬಹುದೆಂದು ಭೀತಿಯುಂಟಾಗಿದೆ ಲವಾಲರ ಸ್ಥಾನದಲ್ಲಿ ನಿಯಾಮಕರಾಗಿರುವ ಎಂ ಫ್ಲಾಂಡಿರವರ ವಿಷಯದಲ್ಲಿ ಜರ್ಮನಿಗೆ ಕೃಪ್ತಿಯಾಗಿಲ್ಲ ಇಷ್ಟರಲ್ಲಿಯೇ ಜರ್ಮನಿಯು ಲಯನ್ಸ್‌ನಗರವನ್ನು ಆಕ್ರಮಿಸಬಹುದೆಂದು ಯೋಚಿಸಲಾಗಿದೆ.

ಬ್ರಿಟನ್ನಿನ ಉಗ್ರಮುತ್ತಿಗೆ

ಜರ್ಮನರು ೨೧ ನೆಯ ತಾರೀಖಿನ ದಿವಸ ಬ್ರಿಟನ್ನಿನ ಮೇಲೆ ಉಗ್ರಮುತ್ತಿಗೆಯತ್ನಾರಂಭಿಸಿದರು. ಕೆಲವು ಪ್ರಾಂತಗಳ ಮೇಲೆ ಉಗ್ರಮುತ್ತಿಗೆಯಾಯಿತು. ಮನೆಗಳಿಗೆ ಆಕಾರ ನಷ್ಟವಾಗಿರುವುದೆಂದು ತಿಳಿಯಬರುತ್ತದೆ.

ಫ್ರೆಂಚ್ ನೌಕೆಗಳನ್ನೆಲ್ಲ ಜರ್ಮನಿಗೆ ಕೊಡಬೇಕಂತೆ!

೨೧ ನೆಯ ತಾರೀಖಿನ ದಿವಸ ವಿಚಿ ಪರ್ಲಿಮೆಂಟರವು ಎರಡು ಸಾರೆ ಸಭೆ ಸೇರಿತು. ಆಡ್ಮಿರಲ್ ಡಾರ್ಲಾನ್ ರವರು ಅಧ್ಯಕ್ಷತೆ ವಹಿಸಿದ್ದರು. ಮಾರ್ಷಲ್ ಪೆಟೇರವರು ಬಂದಿರಲಿಲ್ಲ ಈಗ ಫ್ರೆಂಚರ ಅಧಿನದಲ್ಲಿರುವ ಎಲ್ಲಾ ನೌಕೆಗಳನ್ನು ಜರ್ಮನಿಗೆ ಬಿಟ್ಟುಕೊಡಬೇಕೆಂದೂ, ಫ್ರಾನ್ಸಿನಲ್ಲಿ ಜರ್ಮನರು ಆಕ್ರಮಿಸಿದೆ ಇರುವಂತಹ ಪ್ರದೇಶಗಳ ಮೂಲಕ ಜರ್ಮನಿ ಸೇನೆಗಳು ಇಟಲಿಯ ಸಹಾಯಕ್ಕೆ ಹೋಗಲು ಅವಕಾಶ ಕೊಡಬೇಕೆಂದೂ ಜರ್ಮನ್ ಸರ್ಕಾರದವರು ಒತ್ತಾಯಮಾಡುತ್ತಾರೆಂದು ಗೊತ್ತಾಗುತ್ತದೆ

ಜರ್ಮನಿಯು ಆಕ್ರಮಿಸಿರುವ ಪ್ರದೇಶಕ್ಕೂ ಮತ್ತು ಆಕ್ರಮಿಸದಿರುವ ಪ್ರದೇಶಕ್ಕೂ ನಡುವೆ ಇರುವ ಗಡಿಯನ್ನು ಜರ್ಮನರು ಮುಚ್ಚಿಬಿಟ್ಟಿದ್ದಾರೆ. ಈ ಸಂಬಂಧವಾಗಿ ಫ್ರೆಂಚ್ " ಸ್ವತಂತ್ರ ಸೇನಾನಾಯಕರಾದ ಡೀಗಾಲ್ " ರವರು ಪೀಡಿಯೋ ಮೂಲಕ ಭಾಷಣ ಮಾಡುತ್ತಾ " ಫ್ರಾನ್ಸಿನ ನೌಕೆಗಳನ್ನೂ ವಿಮಾನ ಮೂಲಗಳನ್ನೂ ಇತರ ಸೌಕರ್ಯಗಳನ್ನೂ ಜರ್ಮನಿಯು ಬ್ರಿಟನ್ನಿನ ಮೇಲೆ ಯುದ್ಧಕ್ಕಾಗಿ ಉಪಯೋಗಿಸುವುದೆಂದೂ, ಈಗ ಸೋಲುತ್ತಿರುವ ಇಟಲಿ ಸ್ಥಾನದಲ್ಲಿ ಫ್ರಾನ್ಸನ್ನು ಉಪಯೋಗಿಸಿಕೊಳ್ಳಬೇಕೆಂಬುದೇ ಇದರ ಉದ್ದೇಶವೆಂದೂ, ಇದಕ್ಕಾಗಿ ಅವಿರತಿಯನ್ನು ಎದುರಿಸಲು ಪಶ್ಚಿಮ ಆಫ್ರಿಕೆಯ ಬಂದರುಗಳನ್ನೂ ಉಪಯೋಗಿಸಿಕೊಳ್ಳುವ ಯೋಜನೆಯು ಜರ್ಮನಿಗಿದೆ ಯೆಂದೂ " ಹೇಳಿದರು.

ಲಂಡನ್ನಿನ ನೆಲದಡಿಯಲ್ಲಿರುವ ಉಕ್ಕಿನಕೋಟೆಯಲ್ಲಿ ಅಮೂಲ್ಯ ವಸ್ತುಗಳ ರಕ್ಷಣೆ

ಲಂಡನ್ ನಗರದ ಪ್ರಮುಖ ಪ್ರದೇಶದ ನೆಲದಡಿಯಲ್ಲಿ ನಿರ್ಮಿತವಾಗಿರುವ ಅಭೇದ್ಯವಾದ ಉಕ್ಕಿನ ಕೋಟೆಯೊಳಗೆ, ಸುಮಾರು ೪೦ ಕೋಟಿ ಪೌಂಡು ಬೆಲೆಯ ಬಂಗಾರ, ವಜ್ರ, ಮುತ್ತುರತ್ನಾದಿಗಳು, ಅಮೂಲ್ಯ ಕಲಾವಸ್ತುಗಳು, ಆಕ್ಷಂತ ಭದ್ರವಾಗಿ ಇರಿಸಲ್ಪಟ್ಟಿವೆ

ಜಗತ್ತಿನ ಜ್ಞಾನಾಭಾಗಗಳಿಂದ ಲಂಡನ್ನಿನಲ್ಲಿ ಕೂಡಿ ಹಾಕಲ್ಪಟ್ಟ ಅಮೂಲ್ಯ ರತ್ನಾಭರಣಗಳು, ಈ ನೆಲ ಮಾಳಿಗೆಯಲ್ಲಿ ತುಂಬಿಡಲ್ಪಟ್ಟಿವೆ.

ಲಂಡನ್ನಿನ ವಿವಿಧ ವಜ್ರ, ರತ್ನ, ಮುತ್ತುಗಳ ವ್ಯಾಪಾರಿಗಳು ತಮ್ಮ ಸಾಮಗ್ರಿಗಳನ್ನೆಲ್ಲ ಇಲ್ಲಿಯೇ ಇಟ್ಟು ರಕ್ಷಿಸಿಕೊಂಡಿದ್ದಾರೆ.

ಈ ಕೋಟೆಗೆ ೩೦ ಟನ್ ತೂಕದ ಬಲವಾದ ಬಾಗಿಲವಿದ್ದು, ಒಳಗೆ ಸೂರಾರು ಕೋಣೆಗಳಿರುವವು.

ಬ್ರಟನ್ನಿನ ಈ ಅಭೇದ್ಯ ಕೋಟೆಯ ಬಾಗಿಲುಗಳು ವಿದ್ಯುಚ್ಛಕ್ತಿಯ ಸಹಾಯದಿಂದಲೂ, ಗಡಿಯಾರದ ನಿರ್ದಿಷ್ಟಸಿಯಮದಿಂದಲೂ ತೆರೆಯಲ್ಪಡುತ್ತಿರುವವು. ಮತ್ತು ಮುಚ್ಚಲ್ಪಡುತ್ತಿರುವವು. ಈ ಭಂಡಾರದ ಬಾಗಿಲವನ್ನು ತೆರೆಯಲು ಹಾಗೂ ಮುಚ್ಚಲು ಗಡಿಯಾರ, ವಿದ್ಯುಚ್ಛಕ್ತಿ, ಬೀಗಗಳು ಒಟ್ಟಾಗಿ ಕೆಲಸಮಾಡಬೇಕು.

ಇದರಲ್ಲಿರುವ ಒಂದು ಕೋಣೆಯು ಕ್ವೀನ ಮೇರಿಯವರಿಗೆ ಸೇರಿರುವದು. ಅವರು ತಮ್ಮ ಅಮೂಲ್ಯ ವಸ್ತುಗಳನ್ನಿಲ್ಲಿ ಇರಿಸಿದ್ದಾರೆ.

ಇಂಗ್ಲೆಂಡಿನ ಪ್ರಮುಖ ಬ್ಯಾಂಕುಗಳ ಮತ್ತು ವಿಮಾಕಂಪೆನಿಗಳ ಹಾಗೂ ರಿಕಾರ್ಡುಗಳ ಚಿತ್ರಗಳನ್ನೊಳಗೊಂಡ ಸುಮಾರು ೫೦೦ ಮೈಲುದ್ದದ ಫಿಲ್ಮ್ ಒಂದೆಡೆ ಅಚ್ಚುಳಿಯದಂತೆ ಇರಿಸಲ್ಪಟ್ಟಿದೆ. ಈ ಕಂಪೆನಿಗಳಿಗೆ ವಿಪತ್ತಿದೂ ಆಗಿಹೋದರೆ ಈ ಫಿಲ್ಮಿನ ಪ್ರಯೋಜನವು ಎಷ್ಟೆಂಬುದನ್ನು ಬೇರೆ ಹೇಳಬೇಕಾಗಿಲ್ಲ.

ಇನ್ನೊಂದೆಡೆಯಲ್ಲಿ ರತ್ನಾದಿಗಳಿಂದ ಕೂಡಿದ ಕೋಣೆಯು ಕಬ್ಬಿಣಮಯವಾಗಿದೆ. ಇಲ್ಲಿ, ' ಗಾರ್ಡ್ ' ಎಂಬ ವ್ಯಾಪಾರಿಯೊಬ್ಬನು, ನಿಕ್ಷೇಪ ಕೋಟೆಪ್ರದಾರದ ಗಿರಾಕಿಗಳೊಡನೆ ವ್ಯಾಪಾರಮಾಡುತ್ತಾನೆ.

ಈ ರೀತಿಯಿಂದ ಕೂಡಿರುವ, ಲಂಡನ್ನಿನ ನೆಲಮಾಳಿಗೆಯಲ್ಲಿರುವ ಅಮೂಲ್ಯ ವಸ್ತುಗಳಲ್ಲಿ ಕೆಲವು, ವಿಚಿತ್ರ ರೀತಿಯವು ಇವೆ. ಇತ್ತೀಗಳಲ್ಲಿ ನೋಟಾರಿನ ' ಟಯರ್ ' ಒಂದು ಮೂನಿಜ್ ಒಪ್ಪಂದವಾದೊಡನೆ, ಮಧ್ಯ ಯುರೋಪಿನಿಂದೊಂದು ಸುಂದರವಾದ ನೋಟಾರ್ ಕಾರು ಲಂಡನ್ನಿಗೆ ಬಂದಿತು. ನೋಟದಲ್ಲಿ ಇದು ಅಮೇರಿಕೆಯ ಕಾರುಗಳಂಕೆ ಇದ್ದಿತಾದರೂ, ಇದರ ಟಯರು ನೋಳಗೆ ಬಂಗಾರದ ನಾಣ್ಯಗಳೂ, ಅಮೂಲ್ಯ ಆಭರಣಗಳೂ ತುಂಬಿದ್ದುವು. ಆದುದರಿಂದ ಇದು ಒಂಡನ್ನಿನ ನೆಲಮಾಳಿಗೆಯಲ್ಲಿ ಭದ್ರವಾಗಿಟ್ಟಲ್ಪಟ್ಟಿದೆ.

ಇದೇರೀತಿಯ ಇನ್ನೊಂದು ವಿಚಿತ್ರ ವಸ್ತುವೆಂದರೆ " ಡ್ರೈವರ್ ". ಇದರೊಳಗೆ ನೋಟುಗಳು ತುಂಬಿಡಲ್ಪಟ್ಟಿದ್ದು, ಎರಡು ಬೀಗದಕ್ಕೆಗಳ ಬೀಗದಿಂದ ಭದ್ರಪಡಿಸಲ್ಪಟ್ಟಿದೆ ಇವುಗಳಲ್ಲಿ ಒಂದೇ ಬೀಗದ ಕೈಯಿಂದ ಇದರ ಬೀಗವನ್ನು ತೆಗೆಯುವುದೇ ಸಾಧ್ಯವಿಲ್ಲ, ಎರಡೂ ಬೇಕು

ಲಂಡನ್ನಿನ ಭೂಗರ್ಭದಲ್ಲಿ ಇಷ್ಟು ಅಮೂಲ್ಯ ವಸ್ತುಗಳಿದ್ದರೂ, ಅದಾವ ಕಳ್ಳರೂ ಈ ಕಡೆ ತಮ್ಮ ಕಣ್ಣು ತಿರುಗಿಸಿಲ್ಲ, ಕದಿಯುವ ಸಾಹಸಕ್ಕೆ ಮುಂದಾಗಿಲ್ಲ. ಏಕೆಂದರೆ ಆ ಕಾರ್ಯವು ಸಾಗದೆಂಬುದು ಅವರಿಗೆ ಚೆನ್ನಾಗಿ ಗೊತ್ತು.

ನೆಲಮಾಳಿಗೆಯ ಈ ಭಂಡಾರದ ಕಬ್ಬಿಣಗಳೊಳಗೆ, ಎಲ್ಲೆಲ್ಲೂ ಕನ್ನಡಿಗಳನ್ನು ಜೋಡಿಸಿರುವುದರಿಂದ ಒಂದು ಮೂಲೆಯಲ್ಲಿ ನಿಂತ ಕಾವಲಿಗನು, ತನ್ನ ವಿರುದ್ಧ ರುವ ಕನ್ನಡಿಯಲ್ಲಿ, ಯಾರು ಯಾವ ಮೂಲೆಯಲ್ಲಿ ಸುಳಿದರೂ ಗುರುತು ಹಚ್ಚಬಲ್ಲವನಾಗಿದ್ದಾನೆ. ಈ " ಹೋಲ್ " ನೊಳಗೆ ಯಾವುದಾದರೂ ಮೂಲೆಯ ಗೋಡೆಯು ತೂತಿನಿಂದ ನೋಡಿದರೂ, ಕನ್ನಡಿಗಳ ಮೂಲಕ ವ್ಯಕ್ತಿಗಳ ಚಲನವಲನಗಳನ್ನು ಕಾಣಬಹುದಾಗಿದೆ. ಹಗಲಷ್ಟು ನಾಚಿಸುವ ದೀಪದ ಬೆಳಕು ಎಲ್ಲೆಲ್ಲೂ ಹರಡಿರುವುದರಿಂದ, ಮತ್ತೆತ್ತಿಬ್ಬನಿಗೆ ತಿಳಿಯದಂತೆ ಒಬ್ಬನು ಚಲಿಸುವ ದೆಂದರೆ ಅಗದಮಾತು ! ಛೇದರ ಕಣ್ಣು ತಪ್ಪಿಸಿದಂತೆ, ಅಸಾಧ್ಯ !

ಹಾಲೆಂಡಿನ ವಿವಿಧ ಕಲಾವಸ್ತುಗಳ ತೊಗೆಗೆ, ಒಂದೆಡೆ ಭದ್ರವಾದ ಕಬ್ಬಿಣವ ಪರುಕುಗಳ ಗೂಡಿದಲ್ಲಿ, ಒಂದು ಪೆಟ್ಟಿಗೆಯು ಇರಿಸಲ್ಪಟ್ಟಿದೆ. ಇದರ ಕಾವಲು ಅತ್ಯಧಿಕ ಶ್ರದ್ಧೆಯಿಂದ ನಡೆಯುತ್ತಿದೆ ಜರ್ಮನ್ ವಿಜ್ಞಾನಿಯೊಬ್ಬನ ಅದ್ಭುತ ಶೋಧವೊಂದು ಆ ಪೆಟ್ಟಿಗೆಯಲ್ಲಿದೆ ನಾಜಿ ನೀತಿಯನ್ನು ವಿರೋಧಿಸುವ ಈ ವಿಜ್ಞಾನಿಯು ಅತ್ಯಂತ ಕಷ್ಟದಿಂದ, ಈ ಶೋಧವೊಡನೆ ಯುದ್ಧಾರಂಭದಲ್ಲೇ, ಜರ್ಮನಿಯಿಂದ ಪರಾರಿಯಾಗಿ ಲಂಡನ್ ಸೇರಿರುವನೆಂತೆ ! ಈ ಪೆಟ್ಟಿಗೆಯಲ್ಲಿ ಮಹತ್ವದ ಶಸ್ತ್ರಾಸ್ತ್ರಗಳ ತಯಾರಿಯ ಶೋಧವು ಇರಿಸಲ್ಪಟ್ಟಿದೆಯೆಂದೂ, ಇದನ್ನವನು ಬ್ರಿಟಿಷ್ ಅಧಿಕಾರಿಗಳಿಗೆ ಒಪ್ಪಿಸಿರುವನೆಂದೂ ತಿಳಿಯಬರುತ್ತದೆ.

ಇಲ್ಲಿ ಲಂಡನ್ ಹಾಗೂ ಯೂರೋಪಿನ ಇತರ ರಾಜ್ಯಗಳಲ್ಲಿರುವ ಕೋಟೆಕಾಶ್ವರರ ವಿವಿಧ ಸಾಮಗ್ರಿಗಳು, ಯಾವಾಗ ಬೇಕಿದ್ದರೂ, ಅವರಿಗೆ ದೊರೆಯುವಂತೆ ಇರಿಸಲ್ಪಟ್ಟಿವೆ.

ಸ್ವೀಕಾರ.

ಗದಗ ಶಹರ ನಿವಾಸಿಗಳಾದ ಮಿ॥ ರಾ॥ ನಲವಡಿ ಸಂಗಪ್ಪನವರು ಇನೇ ತಿಂಗಳು ೧೬ ನೆಯ ತಾರೀಖಿನ ದಿವಸ ಶಿವಾಧೀನರಾದ ಸಮಯದಲ್ಲಿ ಪ್ರಭಾಪೋಷಣ ಕೈಗೊಳ್ಳುವ ಕೆಲಸಕ್ಕಾಗಿ ೫ ರೂ. ಯ. ಮಿ॥ ರಾ॥ ಪರಪ್ಪ ಮಳಲಿಪ್ಪಿ ಇವರ ದ್ವಾರಾ ಕಳ್ಸಿರುತ್ತಾರೆ

ಈ ಮೇಲ್ಕಂಡ ಮಹಾತಯರಿಗೆ ಶ್ರೀ ಜಗದ್ಗುರು ಪಂಚಾಚಾರ್ಯರು ನಿತ್ಯಮಂಗಲವನ್ನೀಯಲೆಂದು ಹಾರ್ದಿಕ ಹಿತೈಷಿಗಳು.

॥ ಶ್ರೀ ಜಗದ್ಗುರು ವಿಶ್ವಾರಾಧ್ಯೋ ವಿಜಯತೇ ॥

ಶ್ರೀಗುರುಜಗದೀಶಸ್ತವನಂ

॥ ಕಂದ ॥

ಪಿಂಗದ ಕರುಣಾತೋಯಂ ।
ಮಂಗಲತಿವಲಿಂಗಸಕ್ತಚಿತ್ತಂ ನಿತ್ಯಂ ॥
ಭಂಗಿತಖಲಜನವಚನಂ ।
ಶೃಂಗಂ ಜಗದೀಶನಾಮಬುಧಕುಲತಿಲಕಂ ॥೧॥

ಪೃವಿಮಲಸುಯಶೋಭೂಭಿತನೆ ।
ಭವದೀಯಕೃಪಾಸುಧಾತರಂಗಿಣಿಯಿಂದಂ
ಭುವಿಯಲ್ಲಿ ನಾಡೆ ಮೆರೆವುದು ।
ಶಿವಕರವರವೀರಶೈವಧರ್ಮವಿರಿಂಗಳ್ ॥೨॥

॥ ಶಾರ್ದೂಲವಿಕ್ರೀಡಿತ ॥

ಅವಾತಂ ವರವೀರಶೈವಮತವ ನಾನಾಪ್ರಯತ್ನಂಗಳಿಂ । ಭೂವಿಖ್ಯಾತವನಾಗಿಸಲ್ ಸವಿಪದಿ ತನ್ನಾಯುವಂ ನೆಚ್ಚಿಯಂ ॥ ಅವಾತ. ಗುರುವರ್ಯ ಪ್ರೌಢ ತನವಂ ಸಾಹಿತ್ಯಸಂದೀಪಕಂ ಶ್ರೀವಿದ್ಯಾವ್ರತರತ್ನ ಕಕ್ಷಿಸಲಿ ನಮ್ಮಂ ನಿಚ್ಚಮೆ ರಕ್ಷಿಸಲ್ ॥೩॥

॥ ಕಂದ ॥

ನಿನ್ನಯ ವಿನಯವಿರಾಜಿತ
ಸನ್ನುತವೃತ್ತಿಪ್ರಯುಕ್ತವಿದ್ವತ್ಪ್ರೇಮ.
ನಿನ್ನಿಂ ಕಣಾದಿ ಜಾಜಾ
ಬಜ್ಜೆಹರರಿದೆಂಯಗಣ್ಯಗುಣಪ್ರಕರಿ ॥೪॥

ದಿನಮಣಿತೇಜನೆ ಪೂತನೆ
ವಿನುತಾಗಮತತ್ತ್ವವಿದನೆ ನುಹಿಮಾಪ್ತವನೆ
ನಿನಗಂ ವಸಿಷ್ಠನಾಮಕ ।
ಮುನಿಯೆಂದುಲಿದರ್ ಜನರ್ಕಳಂದೀ ಜಗದೊ ॥೫॥

ಸೋಮೇಶಾದಿಚಿದಾತ್ಮಲಿಂಗಜನಿತರ್ಮಕ್ಷೇತ್ರಸಂಪತ್ಪದ
ಕಾಮಧ್ವಾಂತದಿನಾಕರಸ್ಮರತರುರ್ಮೋಕ್ಷಾಂಗನಾಸಂಗಕಾ
ನಾಯಕರ್ ॥ ಶ್ರೀಸದ್ಭಿಣುಕರಾದ ಕಾದಿ ಗುರುಗಳ್ ನಿನ್ನಂ ದಯಾರೂಪ್ಯಿಯಿಂ । ಪ್ರೇಮಂ ಕೈಮಿಗೆ ಭೂರಿಭಾಗ್ಯಬಲಮಂ ತಾವಿತ್ತು ಸಂಪಾಲಿಕೆ ॥೬॥

॥ ಕಂದ ॥

ಗುರುವರಸಹ ಜಗದೀಶನ ।
ಚರಣಸರೋಜಾತಕೆಲ್ಲು ನೊಸಬದ ಗಂಗಾ ॥
ಧರಣೆಂಬ ಭಾತ್ರನಿಗಳ್ ।
ಧರಿಸಿದನೀ ಹೃದ್ಯಸರವನವನೇಂ ಧನ್ಯಂ ॥೭॥

ಕವಿ-ಬಾಲಬೃಹಸ್ಪತಿ

ಅಕ್ಕಿ

ಸಂಸ್ಥಾನದಲ್ಲಿ ಅದರ ಬೆಳೆ ಮತ್ತು ಉಪಯೋಗ

ನನ್ನ ನೈಸೂರು ಸಂಸ್ಥಾನದಲ್ಲಿ ಪ್ರತಿವರ್ಷವೂ ಸುಮಾರು ಏಳುವರೆ ಲಕ್ಷ ಎಕರೆ ಜಮೀನುಗಳಲ್ಲಿ ಭತ್ತವನ್ನು ಬೆಳೆಯುತ್ತಾರೆ. ನದಿಗಳ ನಾಲೆಗಳ ಕೆಳಗೆ ಇರುವ ಜಮೀನುಗಳಲ್ಲಿಯೂ, ಹೇರಳವಾಗಿ ಮಳೆಯ ನೀರಿನ ವಸತಿಯುಳ್ಳ ಮಲೆನಾಡಿನ ಜಮೀನುಗಳಲ್ಲಿಯೂ, ಭತ್ತವನ್ನು ಬೆಳೆಯುತ್ತಾಗೆ

ಸಾಮಾನ್ಯವಾಗಿ ಕೆರೆಗಳ ಆಶ್ರಯದಲ್ಲಿರುವ ಜಮೀನುಗಳಲ್ಲಿಯೂ, ಮಲೆನಾಡು ಪ್ರಾಂತ್ಯದಲ್ಲಿಯೂ ದಪ್ಪ ಭತ್ತವನ್ನು ಬೆಳೆಯುತ್ತಾರೆ. ಈ ಭತ್ತವನ್ನು ಕುಸುಬಲಕ್ಕಿ ತಯಾರುಮಾಡಲು ಉಪಯೋಗಿಸುತ್ತಾರೆ. ಕಾಲುವೆಗಳ ಕೆಳಗೆ ಇರುವ ಜಮೀನುಗಳಲ್ಲಿ ಬೆಳೆಯುವ ಭತ್ತಗಳಲ್ಲಿ ಕಡ್ಡಿ, ಕೇಬೂತ, ಪಟ್ಟಿನೋಮನಹಳ್ಳಿ ಸಣ್ಣ, ಕೊಯಮತ್ತೂರು ಸಣ್ಣ—ಎಂಬ ಈ ತಳಿಗಳು ಮುಖ್ಯವಾದುವುಗಳು. ಮಲೆನಾಡು ಪ್ರಾಂತ್ಯ ಬೆಳೆಯುವ ಜಾತಿಗಳಲ್ಲಿ ಕುಸಬಿ, ಜಡ್ಡು, ವ್ಯಾತಗಣಣ ಮತ್ತು ದಬ್ಬಣ ಸಾಲೆ—ಎಂಬುವು ಮುಖ್ಯವಾದುವು ಕೆರೆಗಳ ಆಸರೆಯ ಅಚ್ಚುಕಟ್ಟು ಜಮೀನುಗಳಲ್ಲಿ ಪೂರಳು ಕಾಂತಿ, ಬೋಳು ನುಲ್ಲಿಗೆ, ಆಲೂರುಸಣ್ಣ—ಎಂಬ ಕೆಲವು ಜಾತಿಯ ಭತ್ತವನ್ನು ಬೆಳೆಯುತ್ತಾರೆ ಎಲ್ಲಾ ವಿಧವಾದ ಭತ್ತಗಳಿಗಿಂತಲೂ ತೂಕದಲ್ಲಿ ಹೆಚ್ಚು ಆರೋಗ್ಯವಾಗಿ ಬೆಳೆದವು. ಬೇಟೆಯಲ್ಲಿ ಮಾರುವ ಮಿಲ್ಲಿನಲ್ಲಿ ಪಾಲಿಷ್‌ಮಾಡಿದ ಅಕ್ಕಿಯಿಂದ ಸಾಕಿದ ಪಾರಿವಾಳಗಳು ಮೊದಲಿಗಿಂತಲೂ ತೂಕದಲ್ಲಿ ಕಮ್ಮಿಯಾಗಿ 'ಬೆರಿ ಬೆರಿ' ಎಂಬ ಖಾಯಿಲೆ ಪ್ರಾಪ್ತವಾಗಿ ಸಾಯುವ ಚಿಹ್ನೆಗಳು ಕಂಡುಬಂದುವು.

ಕೈ ಕೊಟ್ಟಿನ ಅಕ್ಕಿಯಿಂದ ಸಾಕಿದ ಪಾರಿವಾಳಗಳಲ್ಲಿಯೂ ಮತ್ತು ಸಾಮಾನ್ಯವಾದ ಕೊಯಮತ್ತೂರು ಸಣ್ಣದ ತಳಿಯಲ್ಲಿ ವಿವಿಧ ದರ್ಜೆ ಪಾಲಿಷ್‌ಮಾಡಿದ ಅಕ್ಕಿಯಿಂದ ಸಾಕಿದ ಪಾರಿವಾಳಗಳಲ್ಲಿಯೂ ಈ ಕೆಳಗೆ ಸೂಚಿಸಿರುವಂತೆ ಫಲಿತಾಂಶಗಳು ಕಂಡುಬಂದುವು:—

(ಅ) ಕೈ ಕೊಟ್ಟಿನದ ಅಕ್ಕಿಯಿಂದ ಸಾಕಿದ ಪಾರಿವಾಳಗಳು ತೂಕ ಹೆಚ್ಚುವುದರಲ್ಲಿ ಬಹು ಸಮರ್ಪಕವಾಗಿದ್ದವು (ಆ) ಮಿಲ್ಲಿನಲ್ಲಿ ಪಾಲಿಷ್‌ಮಾಡಿದ ಹೊಟ್ಟು ಮಾತ್ರ ತೆಗೆದ ಅಕ್ಕಿಯಿಂದ ಸಾಕಿದ ಪಾರಿವಾಳಗಳು, ತೂಕ ಹೆಚ್ಚುವುದರಲ್ಲಿ ಸಮರ್ಪಕವಾಗಿದ್ದವು (ಇ) ಮಿಲ್ಲಿನಲ್ಲಿ ಶೇಕಡ ೨೫ರಷ್ಟು ಮಾತ್ರ ಪಾಲಿಷ್ ಮಾಡಿದ ಅಕ್ಕಿಯಿಂದ ಸಾಕಿದ ಪಾರಿವಾಳಗಳು, ತೂಕದಲ್ಲಿ ಹೆಚ್ಚಿ ಒಂದು ಮಾತ್ರ ಏನೇ ವಾರದ ಆಖೈರಿನಲ್ಲಿ ಸತ್ತುಹೋಯಿತು. (ಈ) ಮಿಲ್ಲಿನಲ್ಲಿ ಶೇಕಡ ೫೦ರಷ್ಟು ಪಾಲಿಷ್ ಮಾಡಿದ ಅಕ್ಕಿಯಿಂದ ಸಾಕಿದ ಪಾರಿವಾಳಗಳು, ತೂಕದಲ್ಲಿ ಹೆಚ್ಚಿದವು. ಆದರೆ ಎರಡು ಪಾರಿವಾಳಗಳು ೨೦ನೇ ಮತ್ತು ೨೧ನೇ ವಾರಗಳಲ್ಲಿ ಸತ್ತುಹೋದವು (ಉ) ಮಿಲ್ಲಿನಲ್ಲಿ ೧೦೦ಕ್ಕೆ ೧೦೦ ರಷ್ಟು ಪಾಲಿಷ್‌ಮಾಡಿದ ಅಕ್ಕಿಯಿಂದ ಸಾಕಿದ ಪಾರಿವಾಳಗಳು, ಎಲ್ಲವೂ ಆದಿಯಿಂದಲೂ ಕ್ರಮೇಣ ತೂಕದಲ್ಲಿ ಕಮ್ಮಿಯಾಗಿ 'ಬೆರಿ ಬೆರಿ' ಖಾಯಿಲೆಯಿಂದ ೨೦ನೇ ಮತ್ತು ೨೫ನೇ ವಾರಗಳಲ್ಲಿ ಸತ್ತುಹೋದವು

ಪೇಟೆಯಲ್ಲಿ ಮಾರಲ್ಪಡುತ್ತಿರುವ ಬೆಸ್ಟಗಿರುವ ಅಕ್ಕಿ ೧೦೦ ಕ್ಕೆ ೧೦೦ ರಷ್ಟು ಪಾಲಿಷ್ ಮಾಡಿದ್ದಾಗಿರುತ್ತದೆ

ಹೀಗಿರುವಾಗ ನಾವೆಲ್ಲರೂ ಏತಕ್ಕಾಗಿ ಮೇಲ್ಕುಂಡ ಖಾಯಿಲೆಗೀಡಾದ ನರಳುವುದಿಲ್ಲ ಎಂಬ ಪ್ರಶ್ನೆಯು ಬರಬಹುದು ಆದರ ಇದಕ್ಕೆ ಉತ್ತರ ನಾವೆಲ್ಲರೂ ಕೇವಲ ಅಕ್ಕಿಯೊಂದನ್ನೇ ಉಪಯೋಗಿಸದೆ ಜೊತೆಗೆ ಬೇಳೆ, ಹಾಲು, ಮೊಸರು, ತರಕಾರಿಗಳನ್ನೂ ಮತ್ತು ಮಾಂಸಾಹಾರಿಗಳು ಮಾರಕ್ಕೆ ಒಂದಾವರ್ತಿ ಅಥವಾ ಎಳಾವರ್ತಿ ಮಾಂಸ ಮುಂತಾದುವುಗಳನ್ನೂ ಉಪಯೋಗಿಸುತ್ತಿರುತ್ತೇವೆ ಕೋಚಮಬ್ಬಿಗೆ ಈ ಪದಾರ್ಥಗಳಲ್ಲಿ ಖಾಯಿಲೆಗಳನ್ನು ತಡೆಯುವ ಅಥವಾ ಖಾಯಿಲೆಗ ಉಲ್ಬಣವನ್ನೇ ಕಮ್ಮಿ ಮಾಡುವ ವಸ್ತುವಿಶೇಷಗಳು ಇರುತ್ತವೆ

ಅಡಿಗೆಮಾಡುವ ವಿಧಾನ—ಸಾಮಾನ್ಯವಾಗಿ ಜನರಿಗೆ ಅಡಿಗೆಮಾಡಿದ ಮೇಲೆ ಅನ್ನವು ಬೆಳ್ಳಗೆ ಶುಭ್ರವಾಗಿಯೂ, ಸಣ್ಣ ಅಕ್ಕಿಯ ಅನ್ನವಾಗಿಯೂ, ರುಚಿಯಾಗಿಯೂ ಇದ್ದಲ್ಲಿ ಹರುಷವಾಗಿರುತ್ತದೆ. ಅಕ್ಕಿಯನ್ನು ಅನೇಕಸಾರಿ ಜೆಕ್ಕಾಗಿ ತೊಳೆದು ಕಲಗಚ್ಚನ್ನು ಚಲ್ಲಿ ಅನ್ನಮಾಡುವುದು ವಾಡಿಕೆಯಾಗಿರುತ್ತದೆ. ಅಲ್ಲದೆ ಅನ್ನ ವಾದಮೇಲೆ ಗಂಜಿಯನ್ನು ಸಹ ಬಸಿಯುವ ವಾಡಿಕೆಯುಂಟು. ಹೀಗೆ ಮಾಡುವುದರಿಂದ ಅಲ್ಪ ಸ್ವಲ್ಪ ಇರತಕ್ಕ ಅನ್ನಾಂಗಗಳೂ ಪೋಲಾಗುವುವು. ಅನ್ನವು ಮಾತ್ರ ಕಣ್ಣಿಗೆ ಅಂದವಾಗಿರುವುದೇ ವಿನಾ ಸತ್ವಯುಕ್ತವಾಗಿರುವುದಿಲ್ಲ. ಕುಮಸಲ ಅಕ್ಕಿಯನ್ನು ತೊಳೆಯುವುದಿಂದಾಗಲೀ ಗಂಜಿಯನ್ನೇ ಬಸಿದುದರಿಂದಾಗಲೀ ಹೋಗುವಂಥ ಅನ್ನಾಂಗವು ನಾಶವಾಗುವುದಿಲ್ಲ ಅನ್ನವು ಮಾತ್ರ ಕಣ್ಣಿಗೆ ಅಂದವಾಗಿರುವುದಿಲ್ಲ. ಅಲ್ಲದೆ ಈ ಅಕ್ಕಿಯ ಅನ್ನವು ಒಗ್ಗಿ ರವರಿಗೆ ಮಾತ್ರ ರುಚಿಸುವುದು.

ಕೈ ಕೊಟ್ಟಿನ ಅಕ್ಕಿಯೂ, ಕುಸಬಲ ಅಕ್ಕಿಯೂ ಮತ್ತು ಹೊಟ್ಟುಮಾತ್ರ ತೆಗೆದ ಅಕ್ಕಿಯೂ ದೇಹಾರೋಗ್ಯಕ್ಕೆ ಉತ್ಕೃಷ್ಟವಾದುವುಗಳು ಮಿಲ್ಲಿನಲ್ಲಿ ಹೆಚ್ಚಾಗಿ ಪಾಲಿಷ್ ಮಾಡಿದ ಅಕ್ಕಿಗಿಂತಲೂ ಸುಮಾರಾಗಿ ಪಾಲಿಷ್ ಮಾಡಿದ ಅಕ್ಕಿಯೇ ಉತ್ತಮವಾದುದು ಅದುದರಿಂದ ಜನರು ಕಣ್ಣಿಗೆ ಅಂದವಾಗಿ ಶೋಭಿಸುವ ನವೀನ ವಾಡಿಕೆಗಳಿಗೆ ಬೆರಗಾಗದೆ ದೇಹಾರೋಗ್ಯಕ್ಕೆ

ಸಹಕಾರಿಯಾದ ಮಾರ್ಗವನ್ನವಲಂಬಿಸಿ, ಸಂಸಾರದ ಉಪಯೋಗಕ್ಕಾಗಿ ಕೈ ಕೊಟ್ಟೆದ ಅಕ್ಕಿಯನ್ನಾಗಲಿ, ಕುದುಪಲ ಅಕ್ಕಿಯನ್ನಾಗಲಿ, ಮಿಲ್ಲಿನಲ್ಲಿ ಪಾಲಿಷ್ ಮಾಡದೇ ಇರುವ ಅಕ್ಕಿಯನ್ನಾಗಲಿ ಒದಗಿಸಿಕೊಳ್ಳ ಬೇಕು. ಮಿಲ್ಲಿನಲ್ಲಿ ಪಾಲಿಷ್ ಮಾಡಿದ ಅಕ್ಕಿಯನ್ನು ತ್ಯಜಿಸಬೇಕು.

ಒಕ್ಕೆಯ ಸತ್ವವನ್ನು ಅಪಾಕರಿಸ್ಯಾಗಿ ಈ ಕೆಳಗೆ ಕಂಡ ಅಕ್ಕಿಗಳಲ್ಲಿ ಯಾವುದನ್ನಾದರೂ ಉಪಯೋಗಿಸಿ :—

ಕುದುಪಲ ಅಕ್ಕಿ ಅನ್ನವನ್ನು ಊಟಮಾಡುವ ಅಧ್ಯಾಸವು ಒಗ್ಗಿಹೋಗಿದ್ದರೆ ಅದನ್ನೇ ಉಪಯೋಗಿಸು ಬಹುದು. ಸಾಧಾರಣ ಅಕ್ಕಿಯನ್ನು ಉಪಯೋಗಿಸು ವವರು ಈ ಕೆಳಗೆ ವಿವರಿಸುವ ಅಕ್ಕಿಯನ್ನು ಉಪಯೋ ಗಿಸಬೇಕು— ೧. ಕೊಟ್ಟಿದೀಜಾಗಲಿ, ವಿತದೀಜಾಗ ಗಲಿ, ಬೀಸುವ ಮರದಿಂದಾಗಲಿ, ಮಾಡಿದ ಅಕ್ಕಿಯ ನ್ನು ಉಪಯೋಗಿಸಬಹುದು. ೨. ಮೇಲ್ಕಂಡ ರೀತಿ ಯಿಂದ ಮಾಡಿದ ಅಕ್ಕಿ ಬೊರೆಯದೆ ಹೋದಲ್ಲಿ ಹೊಟ್ಟು ಮಾತ್ರ ತೆಗೆದ ಅಕ್ಕಿಯನ್ನು ಕೊಂಡುಕೊಂಡು ಮನೆ ಯಲ್ಲಿ ಬಣ್ಣ ಹೋಗದಂತೆ ಸ್ವಲ್ಪ ಕುಟ್ಟಿ ಉಪಯೋಗಿ ಸಬಹುದು. ಹೀಗೆ ಮನೆಯಲ್ಲಿ ಕುಟ್ಟಿದ ಅಕ್ಕಿಯ ಅ ನ್ನವು ಮುದ್ದೆ ಯಾಗದೆ, ನೋಡಲು ಚೆನ್ನಾಗಿರುವುದು. ೩. ಅನ್ನಮಾಡುವುದಕ್ಕೆ ಮುಂಚೆ ಅಕ್ಕಿಯನ್ನು ತೊಳೆ ಯುವಾಗ ನಾಜೂಕಾಗಿ ಮೂರುಬಾರಿಗೆ ವಿಸಾರದಂತೆ ತೊಳೆಯುವುದೂ, ಗಂಜಿ ಬಸಿಯದೆ ಅನ್ನಮಾಡುವುದೂ ಉತ್ತಮ. ವಿನೇಗರಿಲಿ, ಪೇಟೆಯಲ್ಲಿ ಸಿಕ್ಕುವ ಬೆಳ್ಳಗಿ ರುವ ಹೆಚ್ಚಾಗಿ ಪಾಲಿಷ್‌ಮಾಡಿದ, ನೋಟಕ್ಕೆ ಸೊಗ ಸಾದ ಅಕ್ಕಿಯನ್ನು ಮಾತ್ರ ಊಟಕ್ಕೆ ಉಪಯೋಗಿ ಸಬಾರದು.

"ಮೈಸೂರು ಆರೋಗ್ಯ".

ಲಾವಲ್‌ರವರ ಬಂಧ ವಿಮೋಚನ

ಫ್ರಾನ್ಸಿನ ಈಗಿನ ಸರ್ವಾಧಿಕಾರದ ವಿಷಯದಲ್ಲಿ ದ್ವೋಹ ವನ್ನೆಣಿಸಿದರೆಂದು ವಿಚೇರಾಂಗ ಸಚಿವರಾಗಿದ್ದ ಮಿಃ ಲಾವಲ್‌ರವರನ್ನು ಬಂಧಿಸಲಾಗಿತ್ತು. ಆದರೆ ಜರ್ಮನ್ ಸರ್ವಾಧಿಕಾರವರು ಅವರನ್ನು ಕೂಡಲೆ ಬಿಡುಗಡೆ ಮಾಡಲೇ ಕೆಂದು ಆಜ್ಞಾಪಿಸಿದ್ದರಿಂದ ಅವರ ಬಿಡುಗಡೆಯಾಯಿತು. ಲಾವೆಲ್‌ರವರು ಜರ್ಮನಿ ಪಕ್ಷಪಾತಿಗಳಾಗಿರುವರು. ಸೈಂಬರು ಜರ್ಮನಿಗೆ ಶರಣಾಗತರಾಗಲು ಇವರ ಪ್ರೇರ ಣೆಯೇ ಕಾರಣವಂತೆ ! ಕಳೆದ 14 ನೆಯ ತಾರೀಖಿನ ದಿವಸ ಮಾರ್ಷಲ್ ಪೆಟೇರವರು ತಾವು ಲಾವೆಲ್‌ರವ ರನ್ನು ಅವರ ಅಧಿಕೃಗದಿಂದ ವಜಾಮಾಡಿರುವುದಾ ಗಿಯೂ, ಫ್ರಾನ್ಸಿನ ಶ್ರೇಯೋಭಿವೃದ್ಧಿಗಾಗಿ ತಾವು ಈ ಕಾರ್ಯವನ್ನು ಮಾಡಿರುವುದಾಗಿಯೂ ಪ್ರಕಟಿಸಿ ಅವರಿಗೆ ಬದಲಾಗಿ ಹಿಂದೆ ಫ್ರಾನ್ಸಿನಲ್ಲಿ ಪ್ರಧಾನಿ ಸಚಿವರಾಗಿದ್ದ ಮಿಃ ಫ್ಲಾಂಡಿನ್‌ರವರನ್ನು ನೇಮಕ ಮಾಡಿರು ವುದಾಗಿ ತಿಳಿಸಿದ್ದಾರೆ. ಶ್ರೀ ಲವಾಲರವರು ಮಾಡಿದ ದ್ರೋಹಕೆಂತ ಯೇನೆಂಬುದು ಪ್ರಕಟವಾಗಿಲ್ಲ. ಈಗ ನಿಯಮಿತ ರಾಗಿರುವ ಮಿಃ ಫ್ಲಾಂಡಿನ್‌ರವರೂ ಜರ್ಮನಿ ಮಿತ್ರ ರಾಗಿಯೇ ಇದ್ದಾರೆ. ಒಟ್ಟಿಗೆ ಫ್ರಾನ್ಸು ಜರ್ಮನಿಯು ಕೇಳಿದಂತೆ ಕೇಳಬೇಕಾಗಿಬಂದಿದೆ.

ವಿಮಾನದಲ್ಲಿ ಧಿರಂಗಿಗಳು.

ಬ್ರಿಟಿಷರ ಯುದ್ಧ ವಿಮಾನಗಳಿಗಿಲ್ಲಿ ಮಿಷ ಇಂದು ಗಳನ್ನು ವಿರಿಸಿ ಯುದ್ಧಕ್ಕೆ ಕಳುಹಿಸುವದು ಪದ್ಧತಿ ಯಾಗಿತ್ತು. ಈಗ ಮಿಷ ಬಂದೂಕುಗಳ ಸ್ಥಳದಲ್ಲಿ ಇಲಿಯುತ ಧಿರಂಗಿಗಳನ್ನಿಡಲು ಪ್ರಾರಂಭವಾಗಿದ್ದಾರೆ. ಇದರಿಂದ ಬ್ರಿಟಿಷರ ವಿಮಾನ ಯುದ್ಧ ಶಕ್ತಿಯು ಬಹಳ ಹೆಚ್ಚಿದಂತಾಗಿದೆಯೆಂದು ಸ್ಪಷ್ಟವಾಗುತ್ತದೆ.

ಕೋಲಾರದ ಛಾಂಪಿಯನ್ ರೀಫ್ಸ್ ಚಿನ್ನದ ಗಣಿಯಲ್ಲಿ ನೆಲ 11 ನೆಯ ತಾರೀಖಿನ ದಿವಸ ಭೂಗರ್ಭದಲ್ಲಿ ಲ್ಲಿ ಸಿಕ್ಕಿದು 4 ಜನರು ಮೃತರಾದರು. 25 ಜನರು ಯಗೊಂಡರು. 5 ಜನರು ಮಣ್ಣಿನಲ್ಲಿ ಹೂತುಹೋ ರೆಂದು ತಿಳಿದುಬರುತ್ತದೆ.

ವೈದಿಕ ಶಿವಪೂಜಾವಿಧಿ.

ವೀರಶೈವರಿಗೆ ಮುಖ್ಯವಾಗಿ ಬೇಕಾಗಿರುವ ಈ ಮೇಲ್ಕಂಡ ಗ್ರಂಥವು ವೇದಿ ಪಂ|| ಶ್ರೀ ಕಾಶೀನಾಥಶಾಸ್ತ್ರಿಗಳವರಿಂದ ವೈದಿಕಸಂಪ್ರದಾಯಾನುಸಾರವಾಗಿ ವಿರಚಿತವಾಗಿದ್ದು, ಶ್ರೀ ಪಂಚಾಚಾರ್ಯ ವಿದ್ಯಾಸ್ಮಪ್ರಕಾಶಯಂತ್ರದಲ್ಲಿ ಬಹು ಮುದ್ದಾಗಿ ಮುದ್ರಿತವಾಗಿದೆ. ಇಲ್ಲಿಯವರೆಗೆ ಅನೇಕ ಕಡೆಗೆ ಶಿವಪೂಜಾವಿಧಿಗಳು ಮುದ್ರಿಸಲ್ಪಟ್ಟಿವೆ. ಆದರೆ ಮುದ್ರಾಪಕರಿಗೆ ವೈದಿಕಸಂಪ್ರದಾಯವು ಗೊತ್ತಿಲ್ಲದಿರುವುದರಿಂದ ಅನೇಕ ಕಡೆಗೆ ಮಂತ್ರಗಳು ಅಶುದ್ಧವಾಗಿ ಬಿದ್ದಿವೆ! ಅನೇಕರು ಆ ಅಶುದ್ಧಮಂತ್ರಗಳನ್ನೇ ಪಠಿಸುತ್ತಿರುವರು. ಇದು ಅತ್ಯಂತ ವ್ಯಸನಕರವಾದ ವಿಷಯವಾಗಿದೆ. ಅಲ್ಲದೆ ವೇದಮಂತ್ರಗಳನ್ನು ವೈದಿಕ ಸ್ವರಸಹಿತವಾಗಿ ಉಚ್ಚರಿಸಬೇಕಲ್ಲದೆ ಸ್ವರಕೂನ್ಯವಾಗಿ ಉಚ್ಚರಿಸಬಾರದಷ್ಟೆ, ಇಲ್ಲಿಯವರೆಗೆ ಮುದ್ರಿತಗಳಾಗಿರುವ ಯಾವ ಶಿವಪೂಜಾವಿಧಿಯಲ್ಲಿಯೂ ವೇದದಮಂತ್ರಗಳಿಗಾಗಲಿ, ಶ್ರೀರುದ್ರಾಧ್ಯಾಯ-ಚಮಕಾಧ್ಯಾಯ-ಪುರುಷಸೂಕ್ತಗಳಿಗಾಗಲಿ ವೈದಿಕಸ್ವರಗಳು ಹಾಕಲ್ಪಟ್ಟಿಲ್ಲ ಮತ್ತು ಪದವಿಭಾಗವೂ ಮಾಡಲ್ಪಟ್ಟಿಲ್ಲ. ಈ ಶಿವಪೂಜಾವಿಧಿಯಲ್ಲಿ ಈ ಕೊರತೆಯು ದೂರವಾಗಿರುವುದೆ ಇದಕ್ಕಾಗಿ ಪಂಡಿತರು ಬಹು ಶ್ರಮವನ್ನು ವಹಿಸಿ ಋಗ್ವೇದ-ಯಜುರ್ವೇದಗಳನ್ನೆಲ್ಲ ಕೂಲಂಕಷವಾಗಿ ಪರಿಶೀಲಿಸಿ ವೀರಶೈವಪ್ರಪಂಚಕ್ಕೆ ಮಹೋಪಕಾರವನ್ನು ಮಾಡಿದ್ದಾರೆ. ಈ ಪೂಜಾವಿಧಿಯಲ್ಲಿರುವ ವೈದಿಕಮಂತ್ರಗಳು ಯಾವ ವೇದದ ಯಾವ ಭಾಗದಲ್ಲಿರುವುದೆಂಬುದನ್ನು ಪಂಡಿತರು ವಿವರವಾಗಿ ತೋರಿಸಿದ್ದಾರೆ. ಪ್ರತ್ಯಕ್ಷವಾಗಿ ನೋಡಿದ ಮೇಲೆ ಈ ಗ್ರಂಥದ ಮಹತ್ವವು ಕಂಡುಬರುವುದು. ಅಲ್ಲದೆ ಈ ಪೂಜಾವಿಧಿಯ ಅಂತ್ಯದಲ್ಲಿ—ಶಿವಸಹಸ್ರನಾಮಾವಳಿ, ಶಿವಾಷ್ಟೋತ್ತರಗೆ ಶತನಾಮಾವಳಿ, ಶಿವಕವಚ, ಸಾರ್ವತೀದೇವಿನಾಮಾವಳಿ, ವೀರಭದ್ರನಾಮಾವಳಿ, ಭದ್ರಕಾಳೀದೇವಿನಾಮಾವಳಿ, ಷಣ್ಮುಖಸ್ವಾಮಿನಾಮಾವಳಿ, ಶ್ರೀ ಪಂಚಾಚಾರ್ಯರ ನಾಮಾವಳಿಗಳು, ನಾನಾವಿಧ ಶಿವಸ್ತೋತ್ರಗಳು, ನಾನಾವಿಧ ದೇವೀಸ್ತೋತ್ರಗಳು, ನಾನಾವಿಧ ಗುರುಸ್ತೋತ್ರಗಳು ಮುದ್ರಿಸಲ್ಪಟ್ಟಿವೆ. ಒಟ್ಟಿಗೆ ಈ ಶಿವಪೂಜಾವಿಧಿಯು ಸರ್ವಾಂಗಸುಂದರವಾಗಿದ್ದು ಸರ್ವತೋಮುಖವಾಗಿ ಸ್ತುತ್ಯವಾಗಿದೆ. ಆದುದರಿಂದ ಪ್ರತಿಯೊಬ್ಬ ವೀರಶೈವರೂ ಈ ಪೂಜಾವಿಧಿಯನ್ನು ತರಿಸಿಕೊಂಡು ಇದರಲ್ಲುಕ್ತವಾಗಿರುವಂತೆ ಶಿವಪೂಜೆಯನ್ನು ಮಾಡಿ ಧನ್ಯರಾಗಬೇಕೆಂದು ಕೋರಿಕೆ **ಬೆಲೆ ೧೨ ಆಣೆ.** ವಿ. ಪಿ. ಖರ್ಚು ಪ್ರತ್ಯೇಕ.

ಮ್ಯಾನೇಜರ್,
ಪಂಚಾಚಾರ್ಯಪ್ರಭಾ ಆಫೀಸ್, ಮೈಸೂರು.

ಶಿವಾದ್ವೈತಮಂಜರಿ.

ಈ ಗ್ರಂಥವು ವೀರಶೈವಮತಶಾಸ್ತ್ರಗಳಲ್ಲೆಲ್ಲ ಶಿರೋರತ್ನದಂತೊಪ್ಪುತ್ತಿರುವುದು ಎಲ್ಲರಿಗೂ ತಿಳಿದ ವಿಷಯವಾಗಿದೆ. ಈ ಗ್ರಂಥವನ್ನು ಕಾಶ್ಮೀರದೇಶದ ಸ್ವಪ್ರಧಾನಂದ ಶಿವಾಚಾರ್ಯರೆಂಬ ಪ್ರಾಚೀನಾಚಾರ್ಯರು ರಚಿಸಿದ್ದಾರೆ. ಈ ಗ್ರಂಥದಲ್ಲಿ ಶಕ್ತಿವಿಶಿಷ್ಟಾದ್ವೈತಸಿದ್ಧಾಂತದ ರಹಸ್ಯವು ಬಹು ಹೃದಯಂಗಮವಾಗಿ ಪ್ರತಿಪಾದಿ ಸಲ್ಪಟ್ಟಿದೆ ಈ ಗ್ರಂಥದ ಪರಣೆಯು ಬಹುಕಠಿನವಾದ್ದರಿಂದ ಇದರ ರಹಸ್ಯವನ್ನು ತಿಳಿಯಲು ಪಂಡಿತಜನ ಗಳಿಗೂ ಕೂಡ ಅಸಾಧ್ಯವಾಗಿತ್ತು. ಈ ಕೊರತೆಯನ್ನು ದೂರಮಾಡಿ ಇದರ ರಹಸ್ಯವ ಪ್ರತಿಯೊಬ್ಬರಿಗೂ ತಿಳಿಯಲೆಂಬ ಸದುದ್ದೇಶದಿಂದ ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರು ಈ ಗ್ರಂಥಕ್ಕೆ ಬಹು ವಿಶಾಲವಾಗಿ ಕನ್ನಡ ಟೀಕೆಯನ್ನು ಬರೆಯಿಸಿದ್ದಾರೆ ಈ ಮೂಲ ಗ್ರಂಥವು ಕೇವಲ ೩೮ ಪುಟಗಳಿಂದ ತೊಡಿದ್ದರೂ ಇದಕ್ಕೆ ಕನ್ನಡ ಟೀಕೆಯು ೧೩೩ ಪುಟಗಳಷ್ಟಾಗಿದೆ. ಈ ಮಹಾಗ್ರಂಥಮುದ್ರಣಕ್ಕಾಗಿ ಪಂಡಿತರು ವಿಶೇಷ ದ್ರವ್ಯವನ್ನು ವ್ಯಯಮಾಡಿದ್ದಾರೆ. ಇಂಥ ದೊಡ್ಡಸಿದ್ಧಾಂತಗ್ರಂಥವು ಇಂದಿನವರೆಗೆ ಕನ್ನಡಭಾಷೆಯಲ್ಲಿ ಎಲ್ಲಿಯೂ ಮುದ್ರಿತವಾಗಿಲ್ಲವೆಂದು ಘಂಟಾಘೋಷವಾಗಿ ಹೇಳಬಹುದಾಗಿದೆ. ನಮ್ಮಸ್ವಾಮಿಯ ಶ್ರೀಮನ್ಮಹಾರಾಜಾಧಿರಾಜ ಶ್ರೀ ಕೃಷ್ಣರಾಜ ಒಡೆಯರ್ ಬಹದ್ದೂರ್ ಮಹಾಪ್ರಭುಗಳವರು ಈ ಗ್ರಂಥದ ಯೋಗ್ಯತೆಯನ್ನು ಕಂಡು ಡಿಕೇಷಪ್ಪನಿಗೆ ಅಪ್ಪಣೆಯನ್ನಿತ್ತಿರುವರಲ್ಲದೆ, ಈ ಗ್ರಂಥದಲ್ಲಿ ನಿಯೋಜಿಸುವುದಕ್ಕೋಸ್ಕರ ತಮ್ಮ ಭವ್ಯಮಾಡ ಭಾವಚಿತ್ರವನ್ನು ಸಹ ದಯಪಾಲಿಸಿರುವರು. ಇದರಿಂದ ಈ ಗ್ರಂಥದ ಯೋಗ್ಯತೆಯು ಎಷ್ಟರಮಟ್ಟಿಗಿರಬೇಕೆಂ ವಿಷಯವನ್ನು ಬೇರೆ ಹೇಳಬೇಕಾಗಿಲ್ಲ. ಇಂಥ ಅಮೂಲ್ಯವಾದ ವೀರಶೈವಸಿದ್ಧಾಂತಗ್ರಂಥವನ್ನು ಪ್ರತಿಯೋ ವೀರಶೈವರೂ ಅವಶ್ಯವಾಗಿ ತರಿಸಿಕೊಂಡು ಅದರಲ್ಲಿರುವ ಸಿದ್ಧಾಂತ ವಿಷಯಗಳನ್ನು ತಿಳಿದುಕೊಂಡು ಧನ್ಯರಾ ಬೇಕೆಂದು ಕೋರಿಕೆ. ಒಟ್ಟು ಈ ಮಹಾಗ್ರಂಥವು ೧೩೪೪ ಪುಟಗಳಿಂದ ಕೂಡಿದ್ದು ಒಳ್ಳೆ ಬೆಲೆಯುಳ್ಳ ಕಾಗ ದದಲ್ಲಿ ಮುದ್ರಿಸಲ್ಪಟ್ಟಿರುವದಲ್ಲದೆ ಬಹುಸುಂದರವಾದ ಲೈಂಥಿನಿಂದೊತ್ತಗೂಡಿದೆ. ಪವಿತ್ರವಾದ ವೀರಶೈ ಸಿದ್ಧಾಂತದಲ್ಲಿ ವಿಶ್ವಾಸವುಳ್ಳ ಪ್ರತಿಯೊಬ್ಬರೂ ದುಡ್ಡಿನಕಡೆಗೆ ದೃಷ್ಟಿಯನ್ನಿಡದೆ ಈ ಗ್ರಂಥವನ್ನು ತರಿ ಕೊಂಡೇ ತೀರಬೇಕು. ಈ ಮಹಾಗ್ರಂಥದ ಬೆಲೆ ೪ ರೂಪಾಯಿ. ಒಂದುರೂಪಾಯಿಗೆ ನಾಲ್ಕಾಣೆಯಂ ಕಮೀಷನ್ ವಜಾ ಹೋಗಲಾಗಿ ೩ ರೂ. ಗೆ ದೊರೆಯುವುದು. ವಿ. ಪಿ. ಖರ್ಚು ೧ ರೂ. ೫ ಆಣೆ ಪ್ರತ್ಯೇಕ

ಮ್ಯಾನೇಜರ್—
ಪಂಚಾಚಾರ್ಯಪ್ರಭಾ ಆಫೀಸ್, ಮೈಸೂರು

ಮನೋಹರವಾದ ಫೋಟೋಗಳು.

ಶ್ರೀ ರೇಣುಕಾರ್ಯರ ಒಂಭತ್ತು ಅವತಾರಲೀಲೆಗಳಿಂದ ಕೂಡಿದ ಫೋಟೋ ಸೈಜು ೨೦×೧೫ ಬೆಲೆ ೧೫ ರೂ. ೦—೩—೦

ಶ್ರೀ ರೇಣುಕಾದಿ ಪಂಚಾಚಾರ್ಯರು ಲೋಕವಿಖ್ಯಾತರಾದ ಅಸ್ತ್ರ ವಧೀಕಿ ವ್ಯಾಕ ಕಾರಾರ ಮೊನಾನ
ಮಹರ್ಷಿಗಳಿಗೆ ಶಿವಸಾಕ್ಷಾತ್ಕಾರವನ್ನು ಪಡಿಸಿಕೊಡುವ ಫೋಟೋ ಸೈಜು ೧೦×೮ ಬೆಲೆ ೦—೧—೬

ಸದ್ಯ: ಖಿಷ್ಕಾಮೋತ್ಪಾದಾಚಾರ್ಯರ ಅಂಗಾರಕಸಿದ್ಧಿಯೇ ಇವರು ಅವತಾರವೆತ್ತಿದ್ದಕ್ಕೆ ಮುಖ್ಯ ಕಾರಣವೆಂದು ಹೇಳಿ ಅವರಿಗೆ ಅಭಯವನ್ನು ಕೊಡುತ್ತಿರುವ ಫೋಟೋ ೨೦×೧೫ ಬೆಲೆ ೦—೧—೬

ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರವನ್ನು ಪೋಷಿಸುವ ಫೋಟೋ ಸೈಜು ೧೦×೮ ಬೆಲೆ ೦—೧—೬

ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರವನ್ನು ಪೋಷಿಸುವ ಫೋಟೋ ಸೈಜು ೧೦×೮ ಬೆಲೆ ೦—೧—೬

ಶ್ರೀ ಜಗದ್ಗುರು ರುದ್ರಮುನಿ ತ್ತರ ಶಿಕಾರ್ಯರು ಭೂಕೈಲಾಸದ ಅವತಾರವನ್ನು ತಾಳಿರುವ ಫೋಟೋ ೦—೦—೭

ಶ್ರೀ ರೇಣುಕಾಚಾರ್ಯರು ರುದ್ರಮುನೀಶ್ವರ ಶಿಕಾಚಾರ್ಯರಿಗೆ ಪಟ್ಟವನ್ನು ಕಟ್ಟಿಸಿದ್ದಕ್ಕೆ ಮಾತಾಪಿತರ ಫೋಟೋ ೦—೦—೭

ಶ್ರೀ ರೇಣುಕಾಚಾರ್ಯರು ವಿಭೂತಿಧಾರಣ ಪ್ರಾಶಸ್ತ್ಯವನ್ನು ಪ್ರತಿಪಾದಿಸಿದ್ದಕ್ಕೆ ಮುಖ್ಯ ಕಾರಣರಾದ ಮಾಹೇಶ್ವರರಿಂದ ಗುರುಪೂಜೆಯನ್ನು
ಧಾರಣಮಾಡಿ ಮೂರುಲೋಕದಿ ವಿಜಯಗಳಿಸಿ ಕೈಲಾಸಕ್ಕೆ ಪ್ರತಿಷ್ಠಿಸುವ ಫೋಟೋ ಸೈಜು ೦—೦—೭

ಶ್ರೀ ರೇಣುಕಾಚಾರ್ಯರು ಶ್ರೀ ಶಂಕರಾಚಾರ್ಯರಿಗೆ ಚಿಂತಾಮಣಿಲಿಂಗವನ್ನು ಅನುಗ್ರಹಿಸುವ ಫೋಟೊ ೦—೦—೭

ಶ್ರೀಕಾಶೀಕ್ಷೇತ್ರವಿರಾಜಮಾನ ಶ್ರೀ ಜಗದ್ಗುರು ನಿಷ್ಕಳಂಕ ಸೂಲಪಾಣೀಶ್ವರ ಫೋಟೋ ೦—೦—೭

ಶ್ರೀ ಕಾಶೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಪಂಚಾಕ್ಷರಿ ವಿಶ್ವಾರಾಧ್ಯ ಫೋಟೋ ೦—೦—೭

ಶ್ರೀಮದುಜ್ಜಯಿನೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಪ್ರಸನ್ನಲಿಂಗಾಚಾರ್ಯರ ಫೋಟೋ ೦—೦—೭

ಶ್ರೀಮದ್ರಂಭಾಪುರೀ ಸೀತಾಫಲ ವನ ಜಗದ್ಗುರು ವಿಶ್ವಾರಾಧ್ಯಾಚಾರ್ಯ ಮಹಾಸ್ವಾಮಿಗಳವರ ಫೋಟೋ ೦—೦—೭

ಶ್ರೀಮದುಜ್ಜಯಿನೀ ಜಗದ್ಗುರು ಸಿಂಹಾಸನಾಧೀಶ್ವರ ಶ್ರೀ ಕಾಶೀಪ್ರಭೃತಿ ಪಂಚಪೀಠಗಳಿಗೆ ಸಂಬಂಧಪಟ್ಟ ಪಂಚಾಚಾರ್ಯರುಗಳ ಫೋಟೋ ೦—೦—೭

ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಫೋಟೋ ೦—೦—೭

ಶ್ರೀ ಜಗದ್ಗುರು ಉಜ್ಜಯಿನೀ ಸಿಂಹಾಸನಾಧೀಶ್ವರ ಶ್ರೀ ಪ್ರಸನ್ನಲಿಂಗಾಚಾರ್ಯರ ಫೋಟೋ ೦—೦—೭

ಶ್ರೀ ಜಗದ್ಗುರು ಉಜ್ಜಯಿನೀ ಸಿಂಹಾಸನಾಧೀಶ್ವರ ಶ್ರೀ ಪ್ರಸನ್ನಲಿಂಗಾಚಾರ್ಯರ ಕೈಲಾಸಾರೋಹಣ